ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

web: www.eesanje.com email: eesanje@gmail.com

ಭಾನುವಾರ
18-12-2011
ನಗರ | ಪುಟ 8
₹ 3.00

EE SANJE CPMG/KA/BGW NO. 309/2009-11 R.N. 45488/87 ಸಂಪುಟ 20 | ಸಂಚಿಕೆ 323 | ಬೆಂಗಳೂರು

■ ಘಟನೆಯಿಂದ ರೊಚ್ಚಿಗೆದ್ದ ನಾಗರಿಕರು ದಿಢೀರ್ ಪ್ರತಿಭಟನೆ ಮಾಡಿ ವಾಹನಗಳಿಗೆ ಬೆಂಕಿ ಹಚ್ಚಿ ಕಲ್ಲು ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ಸುಮೋಗೆ ಬೆಂಕಿ.. ಬಸ್‌ಗೆ ಕಲ್ಲು..

ಆನೇಕಲ್ ಬಳಿ ರಕ್ತದೋಕುಳಿ

ಗುಂಡಿಕ್ಕಿ ಹತ್ಯೆ

ಆರೋಪಿ
ಕೋತಿ ಕೃಷ್ಣ

ಆನೇಕಲ್, ಡಿ.18- ರಾಜಧಾನಿಗೆ ಹೊಂದಿಕೊಂಡಿರುವ ಆನೇಕಲ್‌ನಲ್ಲಿ ಮತ್ತೆ ರಕ್ತದೋಕುಳಿ ಹರಿದಿದೆ. ಅಂಬೇಡ್ಕರ್ ಭವನ ನಿರ್ಮಾಣ ಕುರಿತಂತೆ ಎರಡು ಗುಂಪುಗಳ ನಡುವೆ ನಡೆದ ಮಾರಾಮಾರಿ ಯಲ್ಲಿ ಓರ್ವ ವ್ಯಕ್ತಿಯನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ತಾಲ್ಲೂಕಿನ ಮರಸೂರು ಗೇಟ್ ಬಳಿ ನಡೆದಿದೆ.

ಹತ್ಯೆಗೀಡಾದ ವ್ಯಕ್ತಿಯನ್ನು ಜೆಡಿಎಸ್ ಮುಖಂಡ ಹಾಗೂ ರೆಡ್ಡಿ ಜನಸಂಘದ ತಾಲ್ಲೂಕು ಅಧ್ಯಕ್ಷ ರಮೇಶ್‌ಬಾಬು(30) ಎಂದು ಗುರುತಿಸಲಾಗಿದೆ. ಹತ್ಯೆ ಮಾಡಿದ ಆರೋಪಿಯನ್ನು ದಲಿತ ಸಂಘಟನೆಯ ಮುಖಂಡ ಹಾಗೂ ಮಾಜಿ ರೌಡಿ ಶೀಟರ್ ಕೃಷ್ಣಪ್ಪ ಅಲಿಯಾಸ್ ಕೋತಿಕೃಷ್ಣ ಎಂದು ಹೇಳಲಾಗಿದೆ. ...ಪುಟ 2

ಆನೇಕಲ್ ಸುತ್ತ ಮುತ್ತ ರಕ್ತದ ಓಕುಳಿ..

ಒಂದೇ ವರ್ಷ ನೂರಾರು ಕೊಲೆ

ಆನೇಕಲ್, ಡಿ.18- ರಾಜಧಾನಿ ಬೆಂಗಳೂರಿಗೆ ಹೊಂದಿಕೊಂಡಂತಿರುವ ಆನೇಕಲ್ ಭೂ ವಿವಾದ ಸಂಬಂಧಿತ ಕೊಲೆ ಪ್ರಕರಣಗಳ ನಗರವಾಗಿ ಪರಿವರ್ತನೆಯಾಗುತ್ತಿದೆಯೇ? ಕಳೆದ ಒಂದು ವರ್ಷದಲ್ಲಿ ಈ ಪ್ರದೇಶದ ಸುತ್ತಮುತ್ತ ನಡೆದಿರುವ ಕೊಲೆ, ಕೊಲೆ ಯತ್ನ ಪ್ರಕರಣಗಳನ್ನು ಗಮನಿಸಿದರೆ ಈ ಮಾತು ಅಕ್ಷರಶಃ ನಿಜ ಎನಿಸುತ್ತದೆ. ...ಪುಟ 2

ವೋಲ್ವೋ ಬಸ್ ಡಿಕ್ಕಿ

ವಿದ್ಯಾರ್ಥಿಗಳ

ಸಾವು

ನಂದಗಿರಿ
ಮೋಜಿನ
ತಾಣವೇ.!?

ಯಲಹಂಕ, ಡಿ.18- ಸೂರ್ಯ ಉದಯಿಸುವ ದೃಶ್ಯ ನೋಡಲು ಮುಂಜಾವಿನಲ್ಲಿ ಚಿಕ್ಕಬಳ್ಳಾಪುರದಿಂದ ತೆರಳುತ್ತಿದ್ದ ವಿದ್ಯಾರ್ಥಿಗಳಿಬ್ಬರಿಗೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ಸ್ಥಳದಲ್ಲೇ ದುರ್ಮರಣಕ್ಕೀಡಾದ ಘಟನೆ ಯಲಹಂಕ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ...ಪುಟ 2

■ ಪಾಕ್‌ನಲ್ಲೇ ಇದ್ದಾಳೆ

ವೀಣಾ ಮ'ಲ್ಲಿ'ಕ್

ಲಾಹೋರ್, ಡಿ.18- ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದ ಪಾಕಿಸ್ತಾನದ ವಿವಾದಾತ್ಮಕ ನಟಿ ವೀಣಾ ಮಲ್ಲಿಕ್ ಕೊನೆಗೂ ತವರಿನಲ್ಲಿ ಪತ್ತೆಯಾಗಿದ್ದಾರೆ.
.... ವಿವರ ಪೇಜ್ 3

ಪ್ರಮುಖ ಸುದ್ದಿಗಳು

ಉಪ ಸಭಾಧ್ಯಕ್ಷ ಯೋಗೀಶ್ ಭಟ್

ಕಾರು ಪಲ್ಟಿ

ಮಂಗಳೂರು, ಡಿ.18- ...ಪುಟ 2

ಬಡವರ ಯೋಜನೆಗೆ ಆಸಕ್ತಿ

ವಹಿಸಿ

...ಪುಟ 2

ನುಡಿ ನಮನ... ಕರ್ನಾಟಕ ಜಾನಪದ ಪರಿಷತ್ ನಗರದಲ್ಲಿ ಹಮ್ಮಿಕೊಂಡಿದ್ದ ದಿ.ಡಾ. ಜಿ. ನಾರಾಯಣ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಆದಿ ಚುಂಚನಗಿರಿ ಮಠಾಧೀಶರಾದ ಡಾ. ಬಾಲಗಂಗಾಧರನಾಥ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಮೇಲ್ಮನೆ ಸದಸ್ಯ ಎಂ.ವಿ. ರಾಜಶೇಖರನ್, ಜಾನಪದ ಪರಿಷತ್ ಸದಸ್ಯ ತಿಮ್ಮೇಗೌಡ ಮತ್ತಿತರರು ಹಾಜರಿದ್ದರು.

■ ರಾಜ್ಯಾಧ್ಯಕ್ಷ

ಸ್ಥಾನ ಬೇಡ

ವಿವರ ಪುಟ..6

ರಾಜ್ಯದಲ್ಲಿ ಬರ

ಹಾನಿ ತೀವ್ರ

.... ವಿವರ ಪುಟ 6 ....

ಪಿಎಂಸಿ ಬ್ಯಾಂಕ್ (ಸ್ಥಾಪನೆ: 1984)

Main Highlights of the Bank
* 7 Days Banking
* 8 a.m. to 8 p.m. banking*
* 85000+ATMs across the country
* Sunday and Holiday Banking
* All types of Forex Services
* Free SMS, Internet & Tele Banking Services
* Free personalised cheque books*
* RTGS / NEFT Services

ದಿನಾಂಕ: 13-12-2011 ರಿಂದ ನಮ್ಮ ಬೆಂಗಳೂರು ನಗರದ ಎರಡು ಸ್ಥಳಗಳಲ್ಲಿ ಪ್ರಾರಂಭಗೊಂಡಿದೆ.

* ನಿಮ್ಮ ಸೇವೆಯಲ್ಲಿ ನಮಗೆ ಆನಂದ

PMC BANK
Operating from 55 locations
PUNJAB AND MAHARASHTRA CO-OPERATIVE BANK LIMITED
ಪಂಜಾಬ್ ಅಂಡ್ ಮಹಾರಾಷ್ಟ್ರ ಕೋ-ಆಪರೇಟಿವ್ ಬ್ಯಾಂಕ್ ಲಿ.

RAJAJINAGAR BRANCH:- M.G.Complex, No.579, Ground Floor, 2nd Main, 2nd Block, Rajajinagar, Bangalore-560 010.
MAHALAKSHMI LAYOUT BRANCH:- No.149, 60 Feet Road, Shankar Nagar, Mahalakshmi Layout, Bangalore-560 096.
www.pmcbank.com TOLL FREE NUMBER : 1800-223-993 We enjoy to serve

Happy Birthday
ಡಾ॥ ವಿಜಯ್‌ಮಲ್ಯಜೀರವರಿಗೆ ಹುಟ್ಟುಹಬ್ಬದ ಶುಭಾಶಯಗಳು

Wish you Happy birthday to
Dr. vijay mallyaji
Member of Parliament, karnataka india

SHASHANK BANDAPPA
KUDUR KUMAR
KGF LOHIT
MALUR VIJAY
MANDYA NAGARAJ
VELLORE MURGAN
ABDUL , ZIA, RAVI
RAJVEE G T PALLI

Gowinithimmehalli Santosh kumar
YPR BLORE-22

Dr. VIJAY MALLYAJI FANS ASSOCIATION Of INDIA 18-12-2011

ಚಿನ್ನ (ಗ್ರಾಂ) 2,754 (ಅಪರಂಜಿ) ಆಭರಣ ಚಿನ್ನ (ಗ್ರಾಂ) 2,575 ▼ / ಬೆಳ್ಳಿ (ಕೆ.ಜಿ) 53,170 ▼ / ಮುಂಬೈ ಷೇರು ಪೇಟೆ: (ಬಿಎಸ್‌ಇ) 15,491 ▲

ಭೂ ಮಾಲೀಕರಿಗೆ ಪರಿಹಾರ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ

ಬೆಂಗಳೂರು, ಜುಲೈ 31– ಕುಂದಾನಗರಿ ಬೆಳಗಾವಿಯಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಭೂಮಿ ನೀಡಿರುವ ಭೂಮಾಲೀಕರಿಗೆ ಪರಿಹಾರವನ್ನು ಹೆಚ್ಚಳ ಮಾಡುವ ನಿರ್ಧಾರ ಕೈಗೊಳ್ಳುವ ವಿಚಾರವನ್ನು ಸಚಿವ ಸಂಪುಟದಲ್ಲಿ ಚರ್ಚಿಸಲು ಮೂವರು ಸಚಿವರು ನಡೆಸಿದ ಸಭೆಯಲ್ಲಿ ನಿರ್ಧರಿಸಲಾಗಿದೆ.

ವಿಧಾನಸೌಧದಲ್ಲಿ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಮಹಿಳಾ & ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಉಪಸ್ಥಿತಿಯಲ್ಲಿ ನಗರಾಭಿವೃದ್ಧಿ, ಆರ್ಥಿಕ ಮತ್ತು ನಗರ ನೀರು ಸರಬರಾಜು ಇಲಾಖೆ ಉನ್ನತಾಧಿಕಾರಿಗಳ ಸಭೆ ನಡೆಯಿತು.

ಬೆಳಗಾವಿ ನಗರದಲ್ಲಿ 70 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕಾಗಿ ಹಲಗಾ ಗ್ರಾಮದ 17 ಎಕರೆ 37 ಗುಂಟೆ ಮತ್ತು ಬೆಳಗಾವಿಯ 1 ಎಕರೆ ಮತ್ತು 12 ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲಾಗಿತ್ತು. ಹತ್ತು ವರ್ಷಗಳ ಹಿಂದೆ ಒಟ್ಟು 19 ಎಕರೆ 9 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದ–ಕ್ಕೆ ಪರಿಹಾರವನ್ನೂ ಘೋಷಣೆ ಮಾಡಲಾಗಿತ್ತು.ಆದರೆ,ಅಂದು ಸರ್ಕಾರ ಘೋಷಣೆ ಮಾಡಿದ್ದ ಪರಿಹಾರವನ್ನು ಭೂಮಾಲೀಕರು ಒಪ್ಪದ ಕಾರಣ ನ್ಯಾಯಾಲಯದಲ್ಲಿ ಪರಿಹಾರದ ಮೊತ್ತವನ್ನು ಜಮಾ ಮಾಡಲಾಗಿತ್ತು. ಅಲ್ಲದೇ, ಸರ್ಕಾರದ ಭೂಸ್ವಾಧೀನ ಪ್ರಕ್ರಿಯೆ ಕ್ರಮಬದ್ಧವಾಗಿದೆ ಎಂದು ರಾಜ್ಯ ಹೈಕೋರ್ಟ್ ಸರ್ಕಾರದ ಪರವಾಗಿ ತೀರ್ಪು ನೀಡಿತ್ತು.

ಪರಿಹಾರ ಮೊತ್ತ ಹೆಚ್ಚಳ ಮಾಡಬೇಕೆಂದು ಒತ್ತಾಯಗಳು ಕೇಳಿ ಬಂದ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಸಚಿವ ಸುರೇಶ್ ಅವರು ಬೆಳಗಾವಿ ಜಿಲ್ಲೆಯ ಇಬ್ಬರು ಸಚಿವರೊಂದಿಗೆ ಸಭೆ ನಡೆಸಿದರು.

ಜರ್ಮನ್ ಅಥ್ಲೀಟ್ ಲಾರಾ ಪಾಕ್‌ನಲ್ಲಿ ನಿಧನ

ಪೇಶಾವರ,ಜು.31–ಜರ್ಮನಿಯ ಪ್ರಸಿದ್ಧ ಬಯಾಥ್ಲಾನ್ ಆಟಗಾರ್ತಿ ಮತ್ತು ಒಲಿಂಪಿಕ್ ಚಿನ್ನದ ಪದಕ ವಿಜೇತೆ ಲಾರಾ ಡಹ್ಲ್ಮೇಯರ್ ಉತ್ತರ ಪಾಕಿಸ್ತಾನದಲ್ಲಿ ಪರ್ವತಾರೋಹಣ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಲಾರಾ ಅವರ ಮೃತದೇಹವನ್ನು ಹೊರತೆಗೆಯಲು ಪ್ರಯತ್ನಗಳು ನಡೆಯುತ್ತಿವೆ ಎಂದು ಸ್ಥಳೀಯ ಸರ್ಕಾರದ ವಕ್ತಾರರು ತಿಳಿಸಿದ್ದಾರೆ.

ಒಲಿಂಪಿಕ್ ಚಿನ್ನದ ಪದಕ ವಿಜೇತೆ ಡಹ್ಲ್ಮೇಯರ್ ಸೋಮವಾರ ಕರಕೋರಂ ಶ್ರೇಣಿಯಲ್ಲಿರುವ ಲೈಲಾ ಶಿಖರವನ್ನು ಹತ್ತುತ್ತಿದ್ದಾಗ ಬಂಡೆಗಳ ಮೇಲಿಂದ ಜಾರಿಬಿದ್ದು ಸಾವನ್ನಪ್ಪಿದ್ದಾರೆ. ಗಿಲ್ಗಿಟ್–ಬಾಲ್ಟಿಸ್ತಾನ್ ಪ್ರಾದೇಶಿಕ ಸರ್ಕಾರದ ವಕ್ತಾರ ಫೈಜುಲ್ಲಾ ಫರಾಕ್, ರಕ್ಷಣಾ ಕಾರ್ಯಕರ್ತರು ಬುಧವಾರ ಪರ್ವತದ ಮೇಲೆ ಡಹ್ಲ್ಮೇಯರ್ ಅವರ ಸಾವನ್ನು ದೃಢಪಡಿಸಿದ್ದಾರೆ.

ರಕ್ಷಣಾ ಕಾರ್ಯಕರ್ತರು ಮೃತದೇಹ ಹೊರತೆಗೆದ ನಂತರ ಸ್ಕಾರ್ಡು ನಗರಕ್ಕೆ ತರಲಾಗುವುದು ಎಂದು ಫರಾಕ್ ಹೇಳಿದ್ದಾರೆ .ಮಿಲಿಟರಿ ಹೆಲಿಕಾಪ್ಟರ್‌ಗಳು ಸಹಾಯಕ್ಕಾಗಿ ಸಿದ್ಧವಾಗಿವೆ ಆದರೆ ಪ್ರತಿಕೂಲ ಹವಾಮಾನದಿಂದಾಗಿ ಹಾರಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದ್ದಾರೆ. ಜರ್ಮನಿಯಲ್ಲಿರುವ ಡಹ್ಲ್ಮೇಯರ್ ಅವರ ನಿರ್ವಹಣಾ ತಂಡದ ಪ್ರಕಾರ, ಸೋಮವಾರ ಮಧ್ಯಾಹ್ನ ಸುಮಾರು 5,700 ಮೀಟರ್ ಎತ್ತರದಲ್ಲಿ ಡಹ್ಲ್ಮೇಯರ್ ಅಪಘಾತಕ್ಕೀಡಾಗಿದ್ದಾರೆ ಎಂದು ಹೇಳಿದೆ.

ಅಪಘಾತದ ಸಮಯದಲ್ಲಿ, ಡಹ್ಲ್ಮೇಯರ್ ಅವರೊಂದಿಗೆ ಮತ್ತೊಬ್ಬ ಪರ್ವತಾರೋಹಿ ಮರೀನಾ ಇವಾ ಇದ್ದರು, ನಂತರ ಅವರು ಸುರಕ್ಷಿತವಾಗಿ ಬೇಸ್ ಕ್ಯಾಂಪ್‌ಗೆ ಮರಳಿದ್ದಾರೆ ಮತ್ತು ತುರ್ತು ಸಂಕೇತವನ್ನು ಕಳುಹಿಸಿದವರು ಅವರೇ ಎನ್ನಲಾಗಿದೆ.

ಲಾರಾ ಡಹ್ಲ್ಮೇಯರ್ ಬಯಾಥ್ಲಾನ್ ಕ್ರೀಡೆಯಲ್ಲಿ ವಿಶ್ವಾದ್ಯಂತ ಖ್ಯಾತಿಯನ್ನು ಗಳಿಸಿದ್ದಾರೆ .2017 ರಲ್ಲಿ, ಅವರು ಮಹಿಳಾ ಬಯಾಥ್ಲಾನ್ ವಿಶ್ವಕಪ್ ಗೆದ್ದಿದ್ದಾರೆ ಮತ್ತು ಅವರ ವೃತ್ತಿಜೀವನದಲ್ಲಿ ಅನೇಕ ಅಂತರರಾಷ್ಟ್ರೀಯ ಪದಕಗಳನ್ನು ಪಡೆದಿದ್ದಾರೆ. ಬಯಾಥ್ಲಾನ್ ಒಂದು ರೋಮಾಂಚಕಾರಿ ಚಳಿಗಾಲದ ಕ್ರೀಡೆ–ಯಾಗಿದ್ದು, ಇದರಲ್ಲಿ ಕ್ರೀಡಾಪಟುಗಳು ಕ್ರಾಸ್–ಕಂಟ್ರಿ ಸ್ಕೀಯಿಂಗ್ ಮತ್ತು ರೈಫಲ್ ಶೂಟಿಂಗ್ ಎರಡರಲ್ಲೂ ಭಾಗವಹಿಸುತ್ತಾರೆ. ಇದರಲ್ಲಿ, ಆಟಗಾರರು ಹಿಮದಿಂದ ಆವೃತವಾದ ಮೈದಾನಗಳಲ್ಲಿ ಸ್ಕೀಯಿಂಗ್ ಮಾಡುತ್ತಾರೆ ಮತ್ತು ನಡುವೆ ಗುರಿಗಳ ಮೇಲೆ ಗುಂಡು ಹಾರಿಸುತ್ತಾರೆ.

ಭಾರತಕ್ಕೆ ಶೇ.25 ಸುಂಕ ನಾಳೆಯಿಂದ ಜಾರಿ

ವಾಷಿಂಗ್ಟನ್,ಜು.31–ಭಾರತದ ಮೇಲೆ ಶೇಕಡಾ 25 ರಷ್ಟು ವ್ಯಾಪಾರ ಸುಂಕ ವಿಧಿಸುವುದಾಗಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದು ಹೊಸ ಸುಂಕ ನಾಳೆಯಿಂದಲೇ ಜಾರಿಗೆ ಬರಲಿದೆ.

ವ್ಯಾಪಾರ ಒಪ್ಪಂದ ಸಂಬಂಧ, ಅಮೆರಿಕಾ ಸದ್ಯ ಭಾರತದೊಂದಿಗೆ ಮಾತುಕತೆ ನಡೆಯುತ್ತಿದೆ ಅಮೆರಿಕಾದ ಉತ್ಪನ್ನಗಳ ಮೇಲೆ ವಿಶ್ವದ ಅತಿ ಹೆಚ್ಚು ಸುಂಕ ವಿಧಿಸುವ ದೇಶಗಳಲ್ಲಿ ಭಾರತ ಒಂದಾಗಿದೆ. ಈ ಹಿನ್ನೆಲೆಯಲ್ಲಿ ಭಾರತದ ಮೇಲೆ ಶೇಕಡಾ 25 ರಷ್ಟು ಸುಂಕ ವಿಧಿಸಿರುವುದಾಗಿ ತಿಳಿಸಿದ್ದಾರೆ

ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹೊಸ ಸುಂಕ ಏರಿಕೆ ವಿಷಯದಲ್ಲಿ ಭಾರತದೊಂದಿಗೆ ಮಾತುಕತೆಗೆ ಅಮೆರಿಕ ಮುಕ್ತವಾಗಿದೆ.. ಭಾರತ ಬ್ರಿಕ್ಸ್ ಸದಸ್ಯ ರಾಷ್ಟ್ರವಾಗಿದೆ. ಬ್ರಿಕ್ಸ್, ಮೂಲತಃ ಅಮೆರಿಕ ವಿರೋಧಿ ರಾಷ್ಟ್ರಗಳ ಗುಂಪಾಗಿದೆ. ಈ ಹಿನ್ನೆಲೆಯಲ್ಲಿ ಬ್ರಿಕ್ಸ್ ದೇಶಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗಿದೆ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಅಮೆರಿಕಾ ಆರೋಗ್ಯಕರ ಬಾಂಧವ್ಯ ಹೊಂದಿದೆ. ಆದರೆ ವ್ಯಾಪಾರ ವಿಷಯದಲ್ಲಿ ಅಮೆರಿಕಾ ಇತರೆ ದೇಶಗಳ ಮೇಲೆ ವಿಧಿಸಿದ ಸುಂಕವನ್ನು ಭಾರತದ ಮೇಲೆ ವಿಧಿಸಿದ್ದೇವೆ. ಉತ್ತಮ ಬಾಂಧವ್ಯಕ್ಕೂ ತೆರಿಗೆ ಏರಿಕೆಗೂ ಸಂಬಂಧವಿಲ್ಲ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನನ್ನ ಸ್ನೇಹಿತ, ಆದರೆ ಅವರು ವ್ಯವಹಾರದ ವಿಷಯದಲ್ಲಿ ಸ್ನೇಹ ಮುಖ್ಯವಾಗುವುದಿಲ್ಲ. ಸ್ನೇಹವೇ ಬೇರೆ ವ್ಯಾಪಾರವೇ ಬೇರೆ. ದೇಶದ ಹಿತಿ ಮುಖ್ಯ ಎಂದು ತಿಳಿಸಿದ್ದಾರೆ

MCF
ಮಂಗಳೂರು ಕೆಮಿಕಲ್ಸ್ & ಫರ್ಟಿಲೈಜರ್ಸ್ ಲಿಮಿಟೆಡ್

ನೋಂದಾಯಿತ ಕಛೇರಿ: ಹಂತ 11, UB ಟವರ್, UB ಸಿಟಿ, 24, ವಿಟ್ಟಲ್ ಮಲ್ಯ ರಸ್ತೆ, ಬೆಂಗಳೂರು - 560 001.
ದೂರವಾಣಿ: 080-45855599, ಫ್ಯಾಕ್ಸ್: 080-45855588
CIN: L24123KA1966PLC002036
ಇಮೇಲ್: shares.mcfl@adventz.com,
ವೆಬ್‌ಸೈಟ್: www.mangalorechemicals.com

58ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಈ ಮೂಲಕ ಮಂಗಳೂರು ಕೆಮಿಕಲ್ಸ್ & ಫರ್ಟಿಲೈಜರ್ಸ್ ಲಿಮಿಟೆಡ್ ಕಂಪನಿಯ ಸದಸ್ಯರಿಗೆ ಸೂಚನೆ ನೀಡುವುದೇನೆಂದರೆ 58ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಯು ಆಗಸ್ಟ್ 21, 2025 ರಂದು ಗುರುವಾರ ಮಧ್ಯಾಹ್ನ 2.30 ಕ್ಕೆ ವೀಡಿಯೊ ಕಾನ್ಫರೆನ್ಸಿಂಗ್ ("ವಿಸಿ") / ಇತರ ಆಡಿಯೋ ವಿಷುಯಲ್ ಮೀನ್ಸ್ ("ಓವಿಎಂ") ಮೂಲಕ ನಡೆಯಲಿದೆ. ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವ ಸೂಚನಾಪತ್ರದಲ್ಲಿ ಸೂಚಿಸಿದಂತೆ ವ್ಯವಹಾರಗಳನ್ನು ನಡೆಸುವುದು ಇದರ ಉದ್ದೇಶವಾಗಿದೆ. ಕಂಪನಿಗಳ ಕಾಯಿದೆ, 2013 ಮತ್ತು SEBI (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) (LODR) ನಿಯಮಗಳು, 2015, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (MCA) ದಿನಾಂಕ 08.04.2020, 13.04.2020, 05.05.2020, 13.01.2021, 05.05.2022, 28.12.2022, 25.09.2023 ಮತ್ತು 19.09.2024 ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆಗಳ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಜುಲೈ 25, 2025 ರಂದು ಕಂಪನಿ / ಡಿಪಾಸಿಟರಿ ಪಾರ್ಟಿಸಿಪೆಂಟ್ (DPಗಳ) ಜೊತೆ ಇಮೇಲ್ ವಿಳಾಸವನ್ನು ನೋಂದಾಯಿಸಿರುವ ಕಂಪನಿಯ ಸದಸ್ಯರಿಗೆ ವಿದ್ಯುನ್ಮಾನ ರೂಪದಲ್ಲಿ ನೋಟಿಸ್ ಕಳುಹಿಸಲಾಗಿದೆ.

ಕಂಪನಿ ಅಥವಾ ಡಿಪಾಸಿಟಾರಿಗಳೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ 2024-25 ನೇ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ಪಡೆದುಕೊಳ್ಳಲು ವೆಬ್ ಲಿಂಕ್ ಅನ್ನು ಒದಗಿಸುವ ಪತ್ರವನ್ನು ಕಳುಹಿಸಲಾಗಿದೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 10 ರೊಂದಿಗೆ ಓದಿದ ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 91 ರ ಅಡಿಯಲ್ಲಿ, ತಿದ್ದುಪಡಿ ಮಾಡಿದಂತೆ ಮತ್ತು LODR ರೆಗ್ಯುಲೇಷನ್ಸ್, ರೆಗ್ಯುಲೇಷನ್ 42 ರ ಅಡಿಯಲ್ಲಿ 2024-25ರ ಹಣಕಾಸು ವರ್ಷಕ್ಕೆ ಡಿವಿಡೆಂಡ್ ಅನ್ನು ಘೋಷಿಸಿದ್ದಲ್ಲಿ, ಅದನ್ನು ಪಡೆಯಲು ಅರ್ಹರಾದ ಸದಸ್ಯರನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಕಂಪನಿಯ ಸದಸ್ಯರ ನೋಂದಣಿ ಮತ್ತು ಷೇರುದಾರರ ವರ್ಗಾವಣೆ ಪುಸ್ತಕವನ್ನು ಆಗಸ್ಟ್ 15, 2025 ರಿಂದ ಆಗಸ್ಟ್ 21, 2025 ರವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಲಾಗುತ್ತದೆ ಮತ್ತು ಅಧಿಕೃತ ದಿನಾಂಕವು ಆಗಸ್ಟ್ 14, 2025 ಆಗಿರುತ್ತದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಪ್ರಕಾರ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ರೊಂದಿಗೆ ತಿದ್ದುಪಡಿ ಮಾಡಿದಂತೆ ಮತ್ತು SEBI ಯ ನಿಯಮ 44 (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ಪ್ರಕಾರ ಸದಸ್ಯರಿಗೆ AGM ಸಮಯದಲ್ಲಿ ವಿದ್ಯುನ್ಮಾನ ವಿಧಾನದ ಮೂಲಕ (ರಿಮೋಟ್ ಇ-ವೋಟಿಂಗ್) ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸಲಾಗಿದೆ. ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಸೆಂಟ್ರಲ್ ಡಿಪಾಸಿಟರಿಸ್ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ಅನ್ನು ನೇಮಿಸಿಕೊಂಡಿದೆ.

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

a) 58ನೇ AGM ನ ಸೂಚನೆಯಲ್ಲಿ ಸೂಚಿಸಿರುವ ಎಲ್ಲಾ ವ್ಯವಹಾರಗಳನ್ನು ವಿದ್ಯುನ್ಮಾನ ಮತದಾನದ ಮೂಲಕ ನಿರ್ಧರಿಸಲಾಗುವುದು.
b) ರಿಮೋಟ್ ಇ-ಮತದಾನವು ಆಗಸ್ಟ್ 18, 2025 ರಂದು ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭವಾಗುತ್ತದೆ.
c) ರಿಮೋಟ್ ಇ-ವೋಟಿಂಗ್ ಆಗಸ್ಟ್ 20, 2025 ರಂದು ಸಂಜೆ 5.00 ಗಂಟೆಗೆ ಕೊನೆಗೊಳ್ಳುತ್ತದೆ.
d) ರಿಮೋಟ್ ಇ-ವೋಟಿಂಗ್ ಕಟ್ ಆಫ್ ದಿನಾಂಕ ಆಗಸ್ಟ್ 14, 2025.
e) ನೋಟಿಸ್ ಕಳುಹಿಸಿದ ನಂತರ ಷೇರುಗಳನ್ನು ಸ್ವಾಧೀನಪಡಿಸಿಕೊಂಡು ಕಂಪನಿಯ ಸದಸ್ಯರಾಗುವ ಮತ್ತು ಕಟ್ ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಕಂಪನಿಗೆ ಲಿಖಿತವಾಗಿ ವಿನಂತಿಯನ್ನು ಕಳುಹಿಸುವ ಮೂಲಕ ಅಥವಾ shares.mcfl@adventz.com ಗೆ ಇಮೇಲ್ ಕಳುಹಿಸುವ ಮೂಲಕ ನೋಟಿಸ್ ಮತ್ತು ವಾರ್ಷಿಕ ವರದಿಯ ಪ್ರತಿಯನ್ನು ಪಡೆಯಬಹುದು ಅಥವಾ ಅದನ್ನು ಕಂಪನಿಯ ವೆಬ್‌ಸೈಟ್ www.mangalorechemicals.com ನಿಂದ ಡೌನ್ಲೋಡ್ ಮಾಡಬಹುದು.
f) ಸದಸ್ಯರಿಗೆ ಮತ್ತಷ್ಟು ತಿಳಿಸುವುದೇನೆಂದರೆ:
(i) ಆಗಸ್ಟ್ 20, 2025 ರಂದು ಸಂಜೆ 5.00 ಗಂಟೆಯ ನಂತರ ರಿಮೋಟ್ ಇ-ವೋಟಿಂಗ್ ಗೆ ಅವಕಾಶವಿರುವುದಿಲ್ಲ.
(ii) ವಿಸಿ / ಓವಿವಿಎಂ ಸೌಲಭ್ಯದ ಮೂಲಕ ಎಜಿಎಂ ನಲ್ಲಿ ಉಪಸ್ಥಿತರಿರುವ ಮತ್ತು ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ತಮ್ಮ ಮತವನ್ನು ಚಲಾಯಿಸದಿರುವ ಷೇರುದಾರರು ಅಥವಾ ಹಾಗೆ ಮಾಡುವುದನ್ನು ನಿರ್ಬಂಧಿಸದೇ ಇರುವಂತಹ ಷೇರುದಾರರು ಮಾತ್ರ ಎಜಿಎಂ ಸಮಯದಲ್ಲಿ ಲಭ್ಯವಿರುವ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
(iii) ರಿಮೋಟ್ ಇ-ವೋಟಿಂಗ್ ಮೂಲಕ ಮತದಾನದ ಹಕ್ಕನ್ನು ಚಲಾಯಿಸಿದ ನಂತರವೂ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬಹುದು ಆದರೆ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅವಕಾಶವಿರುವುದಿಲ್ಲ.
(iv) ಸದಸ್ಯರ ರಿಜಿಸ್ಟರ್ ನಲ್ಲಿ ಅಥವಾ ಡಿಪಾಸಿಟರಿಗಳು ನಿರ್ವಹಿಸುವ ಅಂತಿಮ ಮಾಲೀಕರ ರಿಜಿಸ್ಟರ್ ನಲ್ಲಿ ಕಟ್-ಆಫ್ ದಿನಾಂಕವಾದ ಆಗಸ್ಟ್ 14, 2025 ರಂತೆ ಯಾರ ಹೆಸರನ್ನು ದಾಖಲಿಸಲಾಗಿದೆಯೋ ಅಂತಹ ವ್ಯಕ್ತಿಯು ಮಾತ್ರ ರಿಮೋಟ್ ಇ-ಮತದಾನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
g) 58ನೇ ಎಜಿಎಂ ನ ಸೂಚನೆಯು ಕಂಪನಿಯ ವೆಬ್‌ಸೈಟ್ www.mangalorechemicals.com ಮತ್ತು CDSL ನ ವೆಬ್‌ಸೈಟ್ www.evotingindia.com ನಲ್ಲಿ ಲಭ್ಯವಿದೆ.
h) ಇ-ಮತದಾನಕ್ಕೆ ಸಂಬಂಧಿಸಿದಂತೆ ನಿಮಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಅಥವಾ ಸಮಸ್ಯೆಗಳನ್ನು ಹೊಂದಿದ್ದರೆ, ನೀವು "ಸಹಾಯ" ವಿಭಾಗದ ಅಡಿಯಲ್ಲಿ www.evotingindia.com ನಲ್ಲಿ ಲಭ್ಯವಿರುವ ಪದೇ ಪದೇ ಕೇಳಲಾಗುವ ಪ್ರಶ್ನೆಗಳು ("FAQs") ಮತ್ತು ಇ-ಮತದಾನ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ ಇ-ಮತದಾನ ಸಹಾಯವಾಣಿ helpdesk.evoting@cdslindia.com ಗೆ ಇ-ಮೇಲ್ ಮಾಡಬಹುದು, ಅಥವಾ ಶ್ರೀ ರಾಕೇಶ್ ದಳ್ವಿ, ಸೀನಿಯರ್ ಮ್ಯಾನೇಜರ್, ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್, A ವಿಂಗ್, 25 ನೇ ಮಹಡಿ, ಮ್ಯಾರಥಾನ್ ಫ್ಯೂಚರ್‌ಎಕ್ಸ್, ಮಫತಲಾಲ್ ಮಿಲ್ ಕಾಂಪೌಂಡ್ಸ್, ಎನ್. ಎಂ. ಜೋಷಿ ಮಾರ್ಗ್, ಲೋವರ್ ಪರೇಲ್ (ಪೂರ್ವ), ಮುಂಬೈ - 400013 ಅಥವಾ 1800 21 09911 ಗೆ ಕರೆ ಮಾಡಬಹುದು.

ಮಂಗಳೂರು ಕೆಮಿಕಲ್ಸ್ & ಫರ್ಟಿಲೈಜರ್ಸ್ ಲಿಮಿಟೆಡ್
ಸಹಿ/-
ವಿಘ್ನೇಶ್ವರ ಜಿ ಭಟ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 30, 2025

ವ್ಯಸನಮುಕ್ತ ಸಮಾಜಕ್ಕೆ ಡಾ. ಮಹಾಂತ ಶಿವಯೋಗಿಗಳ ಜೋಳಿಗೆ ಯೋಜನೆ ನಾಂದಿ

ಅರಿವೆಯ ಚೀಲವನ್ನು ಹಿಡಿದು ಮನೆಯಿಂದ ಮನೆಗೆ ಹೋಗಿ ಕುಟುಂಬ–ಸಮಾಜ– ದೇಶವನ್ನೇ ಹಾಳು ಮಾಡುವ ದುರ್ವ್ಯಸನ ಹಾಗೂ ದುಶ್ಚಟಗಳ ದಾಸ್ಯದಿಂದ ಜನಸಾಮಾನ್ಯರನ್ನು ಹೊರತರಲು ಜನರ ಎಲ್ಲಾ ದುಶ್ಚಟಗಳ ವಸ್ತುಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡು, ಇನ್ನೆಂದೂ ಅವುಗಳನ್ನು ಬಳಸುವುದಿಲ್ಲ ಎಂದು ಪ್ರಮಾಣ ಮಾಡಿಸಿದವರು ಡಾ. ಮಹಾಂತ ಶಿವಯೋಗಿ ಅವರು. ಹಲವಾರು ಸಮಾಜ ಸುಧಾರಣೆ ಕಾರ್ಯಗಳೊಂದಿಗೆ ವ್ಯಸನಮುಕ್ತ ಸಮಾಜ ನಿರ್ಮಾಣದಲ್ಲಿಯೂ ತಮ್ಮನ್ನು ಸುಮಾರು 45 ವರ್ಷಗಳಿಗೂ ಹೆಚ್ಚು ಕಾಲ ತೊಡಗಿಸಿಕೊಂಡಿದ್ದ ಮಹಾಂತ ಸ್ವಾಮಿಗಳು ಸಮಾಜ ಸುಧಾರಣೆಯ ಮೊದಲ ಹಾಗೂ ಅತಿಮುಖ್ಯ ಹೆಜ್ಜೆ ಮನಃಪರಿವರ್ತನೆ ಎಂಬುದನ್ನು ಅರಿತಿ–ದ್ದರು. ಅಜ್ಞಾನ, ಅನಾರೋಗ್ಯ, ಅಪರಾಧ, ಅಸಮಾನತೆಯಂತಹ ಸಾಮಾಜಿಕ ಪಿಡುಗುಗಳಿಂದ ಮುಕ್ತರಾಗಲು ಮೊದಲು ಮನಸ್ಸನ್ನು ಈ ಪಿಡುಗುಗಳಿಂದ ಮುಕ್ತಗೊಳಿಸಬೇಕು ಎಂದು ಅವರು ನಂಬಿದ್ದರು.

ವಿಜಯಪುರ ಜಿಲ್ಲೆಯ (ಇಂದಿನ ಬಾಗಲಕೋಟೆ ಜಿಲ್ಲೆ) ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಆಗಸ್ಟ್ 1, 1930 ರಲ್ಲಿ ಜನಿಸಿದ ಡಾ.ಮಹಾಂತ ಶಿವಯೋಗಿಗಳು ತಮ್ಮ 10ನೇ ವಯಸ್ಸಿಗೆ ಸವದಿಯ ವಿರಕ್ತಮಠದ ಕಿರಿಯ ಸ್ವಾಮೀಜಿಗಳಾದರು. ಪೂಜ್ಯರ ಬಾಲ್ಯದ ಹೆಸರು ಮಹಾಂತಯ್ಯ. ಮುಧೋಳ ಗವಿಮಠದಲ್ಲಿ ಸಂಸ್ಕೃತ ಪಾಠಶಾಲೆಗೆ ಸೇರಿದ ಮಹಾಂತಯ್ಯ ಅವರು ಅಲ್ಲಿ ಮೂರು ವರ್ಷಗಳ ಕಾಲ ಅಧ್ಯಯನ ಮಾಡಿ ನಂತರ 1944 ರಲ್ಲಿ ಶಿವಯೋಗ ಮಂದಿರದಲ್ಲಿ ಆರು ವರ್ಷಗಳ ಕಾಲ ಸಂಸ್ಕೃತ–ಕನ್ನಡ ವಿದ್ಯಾಭ್ಯಾಸ ಮಾಡಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಬನಾರಸ ಅಂದರೆ ಕಾಶಿಗೆ ತೆರಳಿ ಅಲ್ಲಿ ಜಂಗಮವಾಡಿ ಮಠದಲ್ಲಿದ್ದು, ಸಂಸ್ಕೃತ, ಹಿಂದಿ, ಯೋಗ, ಶಾಸ್ತ್ರೀಯ ಸಂಗೀತದಲ್ಲಿ ವಿಶೇಷ ಪರಿಣಿತಿ ಸಾಧಿಸಿದರು.



ನಿರಂತರ ಅನ್ನದಾಸೋಹ, ವಚನ ಮಾಂಗಲ್ಯ, ದೇವದಾಸಿ ವಿಮೋಚನಾ ಸಂಸ್ಥೆ, ದೇವದಾಸಿಯರ ಮಕ್ಕಳಿಗೆ ಟ್ರಸ್ಟ್ ಸ್ಥಾಪನೆ, ನಿರುದ್ಯೋಗಿಗಳಿಗೆ ಮತ್ತು ವಿಧವೆಯರಿಗೆ ಕಾಯಕ ಸಂಜೀವಿನಿ ಸಂಸ್ಥೆ, ನಿಸರ್ಗ ಚಿಕಿತ್ಸೆ–ಯೋಗ ಕೇಂದ್ರ ಸ್ಥಾಪಿಸಿದ ಜೊತೆಗೆ ಶಾಖಾ ಮಠಗಳಿಗೆ ಪ.ಜಾತಿ ಮತ್ತು ಪಂಗಡಗಳ ಯುವಕರಿಗೆ ಧರ್ಮ ಸಂಸ್ಕಾರ ನೀಡಿ ಪಟ್ಟಾಭಿಷೇಕ ಮಾಡಿದ್ದು, ಮಹಿಳಾ ಸಾಧಕಿಯರಿಗೆ ಜಂಗಮ ದೀಕ್ಷೆ ನೀಡಿ ಮಠಾಧಿಕಾರಿಯನ್ನಾಗಿ ಮಾಡಿದ್ದು, ಮಠದ ನೂರಾರು ಎಕರೆ ಭೂಮಿಯನ್ನು ಆಯಾ ಗ್ರಾಮಗಳ ರೈತರಿಗೆ ಕೃಷಿ ಮಾಡಿ ಬದುಕಲು ನೀಡಿದ್ದು ಮುಂತಾದ ಹಲವು ಸಮಾಜಮುಖಿ ಕಾರ್ಯಗಳನ್ನು ಮಾಡಿದರು.

ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ ಭೀಕರ ಬರಗಾಲ ಉಂಟಾಗಿ ಮಳೆ ಬೆಳೆ ಇಲ್ಲದೆ ಹಳ್ಳಿಯ ಜನರು, ದನ–ಕರುಗಳು ಆಹಾರ–ನೀರು ಇಲ್ಲದೇ ಸಂಕಷ್ಟಕ್ಕೆ ಒಳಗಾಗಿರುವುದನ್ನು ತಿಳಿದು ಕಾಶಿಯಿಂದ ಹಿಂದಿರುಗಿದ ಅವರು ನೂರಾರು ಗ್ರಾಮಗಳಲ್ಲಿ ಗಂಜಿ ಕೇಂದ್ರ ಆರಂಭಿಸಿ ದಾಸೋಹ ಮಾಡಿದ್ದು ಮಾತ್ರವಲ್ಲದೇ ಗೋಶಾಲೆಗಳನ್ನು ಆರಂಭಿಸಿ ಮೇವು ಮತ್ತು ನೀರಿನ ವ್ಯವಸ್ಥೆ ಮಾಡಿದರು.

ಈ ಎಲ್ಲ ಸೇವೆಗಳಿಗಿಂತ ಹೆಚ್ಚಾಗಿ ಮತ್ತೊಂದು ಮಹತ್ತರ ಸಮಾಜ ಸುಧಾರಕ ಸೇವೆ ಅವರ ಹೆಸರನ್ನು ಸರ್ಕಾರ ಗುರುತಿಸುವಂತೆ ಮಾಡಿದೆ. ಅದೇ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಪ್ರಾರಂಭಿಸಿದ ಮಹಾಂತ ಜೋಳಿಗೆ ಯೋಜನೆ.

ಮನಸ್ಸು, ದೇಹ, ಕುಟುಂಬ ಹಾಗೂ ದೇಶದ ಸ್ವಾಸ್ಥ್ಯ ಹಾಳು ಮಾಡುವ ವ್ಯಸನ ದಾಸ್ಯವೂ ಸಾಮಾಜಿಕ ಪಿಡುಗುಗಳಲ್ಲಿ ಒಂದು. ಕುಡಿತದ ಚಟದಿಂದ ಪ.ಜಾತಿಯ ಯುವಕನೊಬ್ಬ ಜೀವ ಕಳೆದುಕೊಂಡ ಸುದ್ದಿ ಕೇಳಿ ಅವನ ಕೇರಿಗೆ ಸಾಂತ್ವನ ಹೇಳಲು ತೆರಳಿದ್ದ ಮಹಾಂತ ಶಿವಯೋಗಿ ಸ್ವಾಮಿಗಳಿಗೆ ಆತನ ಪತ್ನಿ ಮತ್ತು ಮಕ್ಕಳು ಉಪವಾಸದಿಂದ ದುಃಖಿಸುವುದನ್ನು ಕಂಡು ಇಂತಹ ಸಾವಿರಾರು ಕುಟುಂಬಗಳ ಕುಡಿತ ಮತ್ತು ಇತರೇ ದುಶ್ಚಟಗಳಿಂದ ಹಾಳಾಗಿರುವುದನ್ನು ಅರಿತರು. ಇಂತಹ ದುಶ್ಚಟಗಳಿಗೆ ಒಳಗಾಗಿರುವವರನ್ನು ವ್ಯಸನ ಮುಕ್ತಗೊಳಿಸುವ ಉದ್ದೇಶದಿಂದ ಮಹಾಂತ ಜೋಳಿಗೆ ಯೋಜನೆಯನ್ನು 1975 ರಿಂದ ಆರಂಭಿಸಿ ಯಶಸ್ವಿಯಾದರು.

ದಾವಣಗೆರೆಯಲ್ಲಿ ಫ್ಯಾಬ್ಇಂಡಿಯಾ ಮಳಿಗೆ ಆರಂಭ

ದಾವಣಗೆರೆ,ಜು.31–ಭಾರತದ ಅತ್ಯಂತ ಪ್ರೀತಿಪಾತ್ರ ಜೀವನಶೈಲಿ ಬ್ರಾಂಡ್ ಫ್ಯಾಬ್ ಇಂಡಿಯಾ ತನ್ನ ವ್ಯಾಪ್ತಿಯಲ್ಲಿ ಹೊಸ ಬ್ರಾಂಡ್ "ಫ್ಯಾಬ್ಯೂ"ಬಿಡುಗಡೆ ಮಾಡಿದೆ. ಇದು ಕೈಗೆಟುಕುವ ಬೆಲೆಗಳಲ್ಲಿ ಸಮಕಾಲೀನ ಶ್ರೇಣಿಯನ್ನು ಒದಗಿಸುತ್ತಿದ್ದು ಸಮಯರಹಿತ ನೋಟ ಮತ್ತು ವಿಶ್ವಾಸಾರ್ಹ ಗುಣಮಟ್ಟ ಹೊಂದಿದೆ. ವಿನ್ಯಾಸ ತತ್ವ ಮತ್ತು ಸೌಂದರ್ಯಪ್ರಜ್ಞೆಗೆ ಬ್ರಾಂಡ್ ಬದ್ಧತೆಗೆ ಅನುಗುಣವಾಗಿ ಫ್ಯಾಬ್ಯೂ ಪುರುಷರು ಹಾಗೂ ಮಹಿಳೆಯರಿಗೆ ವೆಸ್ಟರ್ನ್ ವೇರ್, ಇಂಡಿಯನ್ ವೇರ್, ಪಾದರಕ್ಷೆಗಳಲ್ಲಿ ಆಧುನಿಕ ಸ್ಟೈಲ್ ಗಳನ್ನು ತರುತ್ತಿದ್ದು ಅದರೊಂದಿಗೆ ಮಹಿಳೆಯರ ಆಭರಣಗಳು ಹೊಂದಿದ್ದು ಪ್ರತಿನಿತ್ಯದ ಬಳಕೆ, ವರ್ಕ್ ವೇರ್ ಮತ್ತು ಹಬ್ಬದ ಉಡುಗೆಗಳಿವೆ.

ಎಥ್ನಿಕ್ ಮತ್ತು ವೆಸ್ಟ್ರನ್ ವೇರ್ ಎರಡೂ ಒಳಗೊಂಡ, ಮಹಿಳೆಯರಿಗೆ ಆಭರಣ ಒಳಗೊಂಡ ಫ್ಯಾಬ್ಯೂ ನಮಗೆ ನಮ್ಮ ಗ್ರಾಹಕರೊಂದಿಗೆ ಹೆಚ್ಚು ಆಳವಾಗಿ ಸಂಪರ್ಕ ಹೊಂದಲು, ನಾವು ನಂಬಿರುವುದಕ್ಕೆ ಬದ್ಧವಾಗಿ ಮಹತ್ತರ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡುತ್ತದೆ" ಎಂದು ಫ್ಯಾಬ್ ಇಂಡಿಯಾ ವಕ್ತಾರರು ತಿಳಿಸಿದರು.

ಮಂಡ್ಯದ ನಾಗಮಂಗಲದ ಆದಿಚುಂಚನಗಿರಿ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ನಲ್ಲಿ ಪಿಹೆಚ್‌ಡಿ ಪದವಿ ಪಡೆದಿರುವ ಚೇತನ ಜಿ.ಸಿ. ಅವರು ಚಾನ್ಸಲರ್ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಂದ ಸ್ವೀಕರಿಸಿದರು. ಸಚಿವ ಎನ್. ಚಲುವರಾಯಸ್ವಾಮಿ, ಇಸ್ರೋದ ಮಾಜಿ ಅಧ್ಯಕ್ಷ ಎಸ್. ಸೋಮನಾಥ್, ಪ್ರೊ. ಮಂಜುನಾಥ್ ಎಸ್.ಹೆಚ್., ಪ್ರೊ. ಡಾ. ಗಿರೀಶ್ ಕೆ.ಬಿ. ಮತ್ತಿತರರು ಇದ್ದಾರೆ.

IN THE COURT OF THE HON'BLE ADDITIONAL DISTRICT MUNSIFF AT DENKANIKOTTAI
O.S.NO.124/2023

PLAINTIFF
Mrs.KUMARI
/Vs/
DEFENDANTS
Mrs. Chandramma, w/o. Sakrinayak @ Sakriyappa
Mr.MUNIRAJ, S/o. Sakirinayak@ Sakriyappa
Mr.ANAND, S/o. Sakrinayak@ Sakriyappa.
All are residing at No. 114, Mahalingeswara Layout, Bangalore South, Adugodi, Bangalore-560030.

SUMMON

Please take notice that the above plaintiff has filed a suit against you for Permanent Injunction. The said suit is posted to 11.08.2025 for your appearance. That you are hereby directed to appear on 11.08.2025 at 10.30 am before the Hon'ble Additional District Munsif, at Denkani kottai, Krishnagiri District, Tamilnadu either in person or through a pleader and state objections if any; failing which the Hon'ble Court will be pleased to pass exparte orders against you.

//BY ORDER OF THE COURT//
T.SHANKAR, B.A., LL.B
V.JHANSI RANI, B.A., LL.B Advocates,
No 2, 1st floor, Next to Police Quarters,
Anna Nagar, HOSUR-635109
Phone : 9865490056.

ಜಾನಪದ ತಜ್ಞ ಎಸ್.ಕೆ. ಕರೀಂಖಾನ್‌ರನ್ನು ಮರೆಯುವಂತಿಲ್ಲ

ಬೆಂಗಳೂರು,ಜು.31–ಜಾನಪದ ಕಲೆ, ಸಾಹಿತ್ಯದ ಉಳಿವಿಗಾಗಿ ಶ್ರಮಿಸಿದ ಜಾನಪದ ತಜ್ಞ ಎಸ್.ಕೆ. ಕರೀಂಖಾನ್ ಅವರನ್ನು ಕನ್ನಡ ನಾಡು ಎಂದಿಗೂ ಮರೆಯುವಂತಿಲ್ಲ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಡಾ.ಮನು ಬಳಿಗಾರ್ ಹೇಳಿದ್ದಾರೆ.

ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ ಜಂಟಿ–ಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ' ಸರಣಿ ಕಾರ್ಯಕ್ರಮದಲ್ಲಿ ಕರೀಂಖಾನ್ ಅವರ ಬಗ್ಗೆ ಉಪನ್ಯಾಸ ನೀಡಿದರು.

ಎಲ್ಲ ಸಾಹಿತ್ಯಕ್ಕೆ ಮೂಲ ಬೇರು ಜಾನಪದ ಸಾಹಿತ್ಯ. ಜಾನಪದ ಸಾಹಿತ್ಯ ಮತ್ತು ಕಲೆಗೆ ಕರೀಂಖಾನ್ ಗೌರವ ತಂದುಕೊಟ್ಟಿದ್ದಾರೆ. ಸಾಗರ ತಾಲ್ಲೂಕಿನಲ್ಲಿ 5 ಸಾವಿರ ಅಡಿ ಎತ್ತರದಲ್ಲಿ–ರುವ ಮೇಘಾನೆ ಎಂಬ ಗ್ರಾಮದಲ್ಲಿ ಕ್ಷೇತ್ರ ಕಾರ್ಯ ಮಾಡಿ, ಅಲ್ಲಿನ ಸಂಸ್ಕೃತಿಯ ಬಗ್ಗೆ ಚಿತ್ರೀಕರಣ ಮಾಡಿದ್ದಾರೆ.

ಅವರು ಈ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಜಾನಪದ ಕಲೆಯನ್ನು ರಕ್ಷಣೆ ಮಾಡಿರುವ ಅವರ ಹೆಸರಿನಲ್ಲಿ ಸರ್ಕಾರವು ಪ್ರಶಸ್ತಿ ಸ್ಥಾಪಿಸಿ, ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಶ್ರಮಿಸಿದವರಿಗೆ ಆ ಪ್ರಶಸ್ತಿ ನೀಡಬೇಕು. ಈ ಬಗ್ಗೆ ಸರ್ಕಾರಕ್ಕೆ ಆಗ್ರಹಿಸಲು ಸಾಹಿತಿಗಳ ನಿಯೋಗವನ್ನು ಮುಖ್ಯಮಂತ್ರಿ ಅವರ ಬಳಿ ಕರೆದೊಯ್ಯಬೇಕು ಎಂದರು.

ಕರ್ನಾಟಕ ವಿಕಾಸ ರಂಗದ ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ, 'ಅಪಾರ ಪ್ರತಿಭೆ ಹೊಂದಿದ್ದ ಕರೀಂಖಾನ್ ಅವರಿಗೆ ಸೂಕ್ತ ಗೌರವ, ಸ್ಥಾನಮಾನಗಳು ಸಿಗಲಿಲ್ಲ. ಅಜ್ಞಾತ ಕವಿಗಳ ಹಾಡುಗಳು ನಾಶವಾಗಬಾರದೆಂದು ಅವುಗಳನ್ನು ಸಂಗ್ರಹಿಸಿ, ಪ್ರಕಟಿಸಿದ್ದಾರೆ ಎಂದು ಹೇಳಿದರು.

ಅಧ್ಯಕ್ಷ ವ.ಚ.ಚನ್ನೇಗೌಡ, ಉರ್ದು ಮನೆ ಮಾತಾಗಿದ್ದರೂ ಕನ್ನಡ ಮತ್ತು ಸಂಸ್ಕೃತವನ್ನು ಕರೀಂಖಾನ್ ಅವರು ಅಧ್ಯಯನ ಮಾಡಿದ್ದರು. ಹೆಚ್ಚು ವಿದ್ಯಾಭ್ಯಾಸ ಮಾಡದಿದ್ದರೂ, ಜಾನಪದ ಪ್ರಕಾರ, ಭಗವದ್ಗೀತೆ, ಭಾಗವತ, ಶಿವಪುರಾಣಗಳ ಚಾರಿತ್ರಿಕ ಸಂಗತಿಗಳನ್ನು ನಿಂತಲ್ಲಿಯೇ ಹೇಳುವಷ್ಟು ಪ್ರತಿಭಾವಂತರಾಗಿದ್ದರು ಎಂದು ಸ್ಮರಿಸಿಕೊಂಡರು. ಕನ್ನಡ ಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಹಾಗೂ ಕರೀಂಖಾನ್ ಕುಟುಂಬಸ್ಥರು ಉಪಸ್ಥಿತರಿದ್ದರು.

ಸಾನ್ವಿ ನವೀನ್ ರಂಗ ಪ್ರವೇಶ

ಬೆಂಗಳೂರು:ಜು.31–ಕುವೈಟ್‌ನ ದೆಹಲಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಸಾನ್ವಿ ನವೀನ್ ಇದೇ ಆಗಸ್ಟ್ 3ರಂದು ಬೆಂಗಳೂರು ನಗರದ ಖಿಂಚ ಆಡಿಯೋಟೋರಿಯಂನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ರಂಗಪ್ರವೇಶ ಮಾಡಲಿದ್ದಾಳೆ.

ತಂದೆ ತಾಯಿಯ ಆಶೀರ್ವಾದ ಮತ್ತು ನಾಟ್ಯ ದೇವತೆಯಿಂದ ಆಶೀರ್ವದಿಸಲ್ಪಟ್ಟ 15 ವರ್ಷದ ಸಾನ್ವಿ ನವೀನ್, ಭರತನಾಟ್ಯದ ಪವಿತ್ರ ಪರಂಪರೆಯನ್ನು ಭಕ್ತಿ ಮತ್ತು ಶ್ರದ್ಧೆಯಿಂದ ಮುಂದಕ್ಕೆ ಸಾಗಿಸಲು ರಂಗಪ್ರವೇಶಕ್ಕಾಗಿ ಕಾಯುತ್ತಿದ್ದಾಳೆ.

ಸಾನ್ವಿ ತನ್ನ ಶ್ರೇಷ್ಠ ನೃತ್ಯ ಶೈಲಿಯ ಪ್ರಾಥಮಿಕ ಪಾಠಗಳನ್ನು 'ಉಪಾಸನಾ' ಸಂಸ್ಥೆಯಿಂದ ಕಲಿತ ಬಳಿಕ ಅವಳು ಬಾಲ್ಯದ ಆರನೇ ವಯಸ್ಸಿನಲ್ಲಿ ಭರತನಾಟ್ಯದ ಆಳವಾದ ಅಧ್ಯಯನವನ್ನು ಆರಂಭಿಸಿ, ಪುಷ್ಕರ ನೃತ್ಯಾನಿಕೇತನ ಕುವೈಟ್ ಗುರುಗಳಾದ ನೃತ್ಯ ವಿದೂಷಿ ಶ್ರೀಮತಿ ಶಾಂತಲಾ ಸತೀಶ್ ಆಚಾರ್ಯ ಅವರ ಮಾರ್ಗದರ್ಶನದಲ್ಲಿ, ಶಿಸ್ತಿನಿಂದಲೂ ಸಮರ್ಪಣೆಯಿಂದಲೂ ನೃತ್ಯವನ್ನು ಅಭ್ಯಾಸ ಮಾಡುತ್ತಾ, ತಾನು ಶಿಸ್ತಿನ ನೃತ್ಯಾಂಗಿಯಾಗಿ ರೂಪುಗೊಂಡಿದ್ದಾಳೆ



ನಾಗ್ಪೂರಿನ ಅಖಿಲ ನಟರಾಜಂ ಅಂತರ ಸಾಂಸ್ಕೃತಿಕ ಸಂಘದ ಆಯೋಜನೆಯಲ್ಲಿ ಸಾನ್ವಿಗೆ ಮೂರನೇ ಸ್ಥಾನ ದೊರಕಿತು. ಭಾರತೀಯ ರಾಯಭಾರಿ ಕಚೇರಿ, ಕುವೈಟ್‌ನ ವಿವಿಧ ಸಂಘಟನೆಗಳು ಆಯೋಜಿಸಿದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವಳು ತನ್ನ ನೃತ್ಯಕಲೆಯಿಂದ ಪ್ರೇಕ್ಷಕರಿಂದ ಪ್ರಶಂಸೆಗಳಿಸಿದ್ದಾಳೆ.

CHANGE OF NAME
I, **BABITHA,** R/at No.26, 5th Cross, Near Indira Canteen Thyagaraja Nagar, Bangalore-560070. have changed my name to **BABITHA RAJATH KUMAR JAIN.** vide affidavit dated 28-07-2025. Sworn before notary **K.V.MANI** Bangalore.

VEHICLES FOR SALE
TATA 1616
2024 MODEL
KA-01-AP-6041
TATA 1616
2024 MODEL
KA-01-AP-6038
For details contact
Sundaram Finance Ltd
No.258, 3rd Main Road, Chamrajpet, Bangalore - 560018.
9449063936
080-26509410
26500697

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
ಜಾಹೀರಾತು ವ್ಯವಸ್ಥಾಪಕರು

CHANGE OF NAME
I, **KISHORE KUMAR JAIN.R** R/at No.26, 5th Cross, Near Indira Canteen Thyagaraja Nagar, Bangalore-560070. have changed my Son's name from **HARSHVARDHAN KISHORE KUMAR JAIN** to **HARSHVARDHAN JAIN,** vide affidavit dated 28-07-2025. Sworn before notary **K.V.MANI,** Bangalore.

CHANGE OF NAME
I, **KISHORE KUMAR JAIN.R** R/at No.26, 5th Cross, Near Indira Canteen Thyagaraja Nagar, Bangalore-560070. have changed my Daughter's name from **PRISHA KISHORE KUMAR JAIN** to **PRISHA JAIN** vide affidavit dated 28-07-2025. Sworn before notary **K.V.MANI,** Bangalore.

ಭೂ ಮಾಲೀಕರಿಗೆ ಪರಿಹಾರ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ

ಬೆಂಗಳೂರು, ಜುಲೈ 31– ಕುಂದಾನಗರಿ ಬೆಳಗಾವಿಯಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಭೂಮಿ ನೀಡಿರುವ ಭೂಮಾಲೀಕರಿಗೆ ಪರಿಹಾರವನ್ನು ಹೆಚ್ಚಳ ಮಾಡುವ ನಿರ್ಧಾರ ಕೈಗೊಳ್ಳುವ ವಿಚಾರವನ್ನು ಸಚಿವ ಸಂಪುಟದಲ್ಲಿ ಚರ್ಚಿಸಲು ಮೂವರು ಸಚಿವರು ನಡೆಸಿದ ಸಭೆಯಲ್ಲಿ ನಿರ್ಧರಿಸಲಾಗಿದೆ.

ವಿಧಾನಸೌಧದಲ್ಲಿ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಮಹಿಳಾ & ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಉಪಸ್ಥಿತಿಯಲ್ಲಿ ನಗರಾಭಿವೃದ್ಧಿ, ಆರ್ಥಿಕ ಮತ್ತು ನಗರ ನೀರು ಸರಬರಾಜು ಇಲಾಖೆ ಉನ್ನತಾಧಿಕಾರಿಗಳ ಸಭೆ ನಡೆಯಿತು.

ಬೆಳಗಾವಿ ನಗರದಲ್ಲಿ 70 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕಾಗಿ ಹಲಗಾ ಗ್ರಾಮದ 17 ಎಕರೆ 37 ಗುಂಟೆ ಮತ್ತು ಬೆಳಗಾವಿಯ 1 ಎಕರೆ ಮತ್ತು 12 ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲಾಗಿತ್ತು. ಹತ್ತು ವರ್ಷಗಳ ಹಿಂದೆ ಒಟ್ಟು 19 ಎಕರೆ 9 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದ–ಕ್ಕೆ ಪರಿಹಾರವನ್ನೂ ಘೋಷಣೆ ಮಾಡಲಾಗಿತ್ತು. ಆದರೆ, ಅಂದು ಸರ್ಕಾರ ಘೋಷಣೆ ಮಾಡಿದ್ದ ಪರಿಹಾರವನ್ನು ಭೂಮಾಲೀಕರು ಒಪ್ಪದ ಕಾರಣ ನ್ಯಾಯಾಲಯದಲ್ಲಿ ಪರಿಹಾರದ ಮೊತ್ತವನ್ನು ಜಮಾ ಮಾಡಲಾಗಿತ್ತು. ಅಲ್ಲದೇ, ಸರ್ಕಾರದ ಭೂಸ್ವಾಧೀನ ಪ್ರಕ್ರಿಯೆ ಕ್ರಮಬದ್ಧವಾಗಿದೆ ಎಂದು ರಾಜ್ಯ ಹೈಕೋರ್ಟ್ ಸರ್ಕಾರದ ಪರವಾಗಿ ತೀರ್ಪು ನೀಡಿತ್ತು.

ಪರಿಹಾರ ಮೊತ್ತ ಹೆಚ್ಚಳ ಮಾಡಬೇಕೆಂದು ಒತ್ತಾಯಗಳು ಕೇಳಿ ಬಂದ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಸಚಿವ ಸುರೇಶ್ ಅವರು ಬೆಳಗಾವಿ ಜಿಲ್ಲೆಯ ಇಬ್ಬರು ಸಚಿವರೊಂದಿಗೆ ಸಭೆ ನಡೆಸಿದರು.

ಜರ್ಮನ್ ಅಥ್ಲೀಟ್ ಲಾರಾ ಪಾಕ್‌ನಲ್ಲಿ ನಿಧನ

ಪೇಶಾವರ,ಜು.31–ಜರ್ಮನಿಯ ಪ್ರಸಿದ್ಧ ಬಯಾಥ್ಲಾನ್ ಆಟಗಾರ್ತಿ ಮತ್ತು ಒಲಿಂಪಿಕ್ ಚಿನ್ನದ ಪದಕ ವಿಜೇತೆ ಲಾರಾ ಡಹ್ಲ್ಮೇಯರ್ ಉತ್ತರ ಪಾಕಿಸ್ತಾನದಲ್ಲಿ ಪರ್ವತಾರೋಹಣ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಲಾರಾ ಅವರ ಮೃತದೇಹವನ್ನು ಹೊರತೆಗೆಯಲು ಪ್ರಯತ್ನಗಳು ನಡೆಯುತ್ತಿವೆ ಎಂದು ಸ್ಥಳೀಯ ಸರ್ಕಾರದ ವಕ್ತಾರರು ತಿಳಿಸಿದ್ದಾರೆ. ಒಲಿಂಪಿಕ್ ಚಿನ್ನದ ಪದಕ ವಿಜೇತೆ ಡಹ್ಲ್ಮೇಯರ್ ಸೋಮವಾರ ಕರಕೋರಂ ಶ್ರೇಣಿಯಲ್ಲಿರುವ ಲೈಲಾ ಶಿಖರವನ್ನು ಹತ್ತುತ್ತಿದ್ದಾಗ ಬಂಡೆಗಳ ಮೇಲಿಂದ ಜಾರಿ ಬಿದ್ದು ಸಾವನ್ನಪ್ಪಿದ್ದಾರೆ. ಗಿಲ್ಗಿಟ್–ಬಾಲ್ಟಿಸ್ತಾನ್ ಪ್ರಾದೇಶಿಕ ಸರ್ಕಾರದ ವಕ್ತಾರ ಫೈಜುಲ್ಲಾ ಫರಾಕ್, ರಕ್ಷಣಾ ಕಾರ್ಯಕರ್ತರು ಬುಧವಾರ ಪರ್ವತದ ಮೇಲೆ ಡಹ್ಲ್ಮೇಯರ್ ಅವರ ಸಾವನ್ನು ದೃಢಪಡಿಸಿದ್ದಾರೆ.

ರಕ್ಷಣಾ ಕಾರ್ಯಕರ್ತರು ಮೃತದೇಹ ಹೊರತೆಗೆದ ನಂತರ ಸ್ಕಾರ್ದು ನಗರಕ್ಕೆ ತರಲಾಗುವುದು ಎಂದು ಫರಾಕ್ ಹೇಳಿದ್ದಾರೆ .ಮಿಲಿಟರಿ ಹೆಲಿಕಾಪ್ಟರ್‌ಗಳು ಸಹಾಯಕ್ಕಾಗಿ ಸಿದ್ಧವಾಗಿವೆ ಆದರೆ ಪ್ರತಿಕೂಲ ಹವಾಮಾನದಿಂದಾಗಿ ಹಾರಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದ್ದಾರೆ. ಜರ್ಮನಿಯಲ್ಲಿರುವ ಡಹ್ಲ್ಮೇಯರ್ ಅವರ ನಿರ್ವಹಣಾ ತಂಡದ ಪ್ರಕಾರ, ಸೋಮವಾರ ಮಧ್ಯಾಹ್ನ ಸುಮಾರು 5,700 ಮೀಟರ್ ಎತ್ತರದಲ್ಲಿ ಡಹ್ಲ್ಮೇಯರ್ ಅಪಘಾತಕ್ಕೀಡಾಗಿದ್ದಾರೆ ಎಂದು ಹೇಳಿದೆ.

ಅಪಘಾತದ ಸಮಯದಲ್ಲಿ, ಡಹ್ಲ್ಮೇಯರ್ ಅವರೊಂದಿಗೆ ಮತ್ತೊಬ್ಬ ಪರ್ವತಾರೋಹಿ ಮರೀನಾ ಇವಾ ಇದ್ದರು, ನಂತರ ಅವರು ಸುರಕ್ಷಿತವಾಗಿ ಬೇಸ್ ಕ್ಯಾಂಪ್‌ಗೆ ಮರಳಿದ್ದಾರೆ ಮತ್ತು ತುರ್ತು ಸಂಕೇತವನ್ನು ಕಳುಹಿಸಿದವರು ಅವರೇ ಎನ್ನಲಾಗಿದೆ.

ಲಾರಾ ಡಹ್ಲ್ಮೇಯರ್ ಬಯಾಥ್ಲಾನ್ ಕ್ರೀಡೆಯಲ್ಲಿ ವಿಶ್ವಾದ್ಯಂತ ಖ್ಯಾತಿಯನ್ನು ಗಳಿಸಿದ್ದಾರೆ .2017 ರಲ್ಲಿ, ಅವರು ಮಹಿಳಾ ಬಯಾಥ್ಲಾನ್ ವಿಶ್ವಕಪ್ ಗೆದ್ದಿದ್ದಾರೆ ಮತ್ತು ಅವರ ವೃತ್ತಿಜೀವನದಲ್ಲಿ ಅನೇಕ ಅಂತರರಾಷ್ಟ್ರೀಯ ಪದಕಗಳನ್ನು ಪಡೆದಿದ್ದಾರೆ. ಬಯಾಥ್ಲಾನ್ ಒಂದು ರೋಮಾಂಚಕಾರಿ ಚಳಿಗಾಲದ ಕ್ರೀಡೆ–ಯಾಗಿದ್ದು, ಇದರಲ್ಲಿ ಕ್ರೀಡಾಪಟುಗಳು ಕ್ರಾಸ್–ಕಂಟ್ರಿ ಸ್ಕೀಯಿಂಗ್ ಮತ್ತು ರೈಫಲ್ ಶೂಟಿಂಗ್ ಎರಡರಲ್ಲೂ ಭಾಗವಹಿಸುತ್ತಾರೆ. ಇದರಲ್ಲಿ, ಆಟಗಾರರು ಹಿಮದಿಂದ ಆವೃತವಾದ ಮೈದಾನಗಳಲ್ಲಿ ಸ್ಕೀಯಿಂಗ್ ಮಾಡುತ್ತಾರೆ ಮತ್ತು ನಡುವೆ ,ಗುರಿಗಳ ಮೇಲೆ ಗುಂಡು ಹಾರಿಸುತ್ತಾರೆ.

ಭಾರತಕ್ಕೆ ಶೇ.25 ಸುಂಕ ನಾಳೆಯಿಂದ ಜಾರಿ

ವಾಷಿಂಗ್ಟನ್,ಜು.31–ಭಾರತದ ಮೇಲೆ ಶೇಕಡಾ 25 ರಷ್ಟು ವ್ಯಾಪಾರ ಸುಂಕ ವಿಧಿಸುವುದಾಗಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದು ಹೊಸ ಸುಂಕ ನಾಳೆಯಿಂದಲೇ ಜಾರಿಗೆ ಬರಲಿದೆ.

ವ್ಯಾಪಾರ ಒಪ್ಪಂದ ಸಂಬಂಧ, ಅಮೆರಿಕಾ ಸದ್ಯ ಭಾರತದೊಂದಿಗೆ ಮಾತುಕತೆ ನಡೆಯುತ್ತಿದೆ ಅಮೆರಿಕಾದ ಉತ್ಪನ್ನಗಳ ಮೇಲೆ ವಿಶ್ವದ ಅತಿ ಹೆಚ್ಚು ಸುಂಕ ವಿಧಿಸುವ ದೇಶಗಳಲ್ಲಿ ಭಾರತ ಒಂದಾಗಿದೆ. ಈ ಹಿನ್ನೆಲೆಯಲ್ಲಿ ಭಾರತದ ಮೇಲೆ ಶೇಕಡಾ 25 ರಷ್ಟು ಸುಂಕ ವಿಧಿಸಿರುವುದಾಗಿ ತಿಳಿಸಿದ್ದಾರೆ

ಶ್ವೇತಭವನದಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಅವರು ಹೊಸ ಸುಂಕ ಏರಿಕೆ ವಿಷಯದಲ್ಲಿ ಭಾರತದೊಂದಿಗೆ ಮಾತುಕತೆಗೆ ಅಮೆರಿಕ ಮುಕ್ತವಾಗಿದೆ.. ಭಾರತ ಬ್ರಿಕ್ಸ್ ಸದಸ್ಯ ರಾಷ್ಟ್ರವಾಗಿದೆ. ಬ್ರಿಕ್ಸ್ ಮೂಲತಃ ಅಮೆರಿಕ ವಿರೋಧಿ ರಾಷ್ಟ್ರಗಳ ಗುಂಪಾಗಿದೆ. ಈ ಹಿನ್ನೆಲೆಯಲ್ಲಿ ಬ್ರಿಕ್ಸ್ ದೇಶಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗಿದೆ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಅಮೆರಿಕಾ ಆರೋಗ್ಯಕರ ಬಾಂಧವ್ಯ ಹೊಂದಿದೆ. ಆದರೆ ವ್ಯಾಪಾರ ವಿಷಯದಲ್ಲಿ ಅಮೆರಿಕಾ ಇತರೆ ದೇಶಗಳ ಮೇಲೆ ವಿಧಿಸಿದ ಸುಂಕವನ್ನು ಭಾರತದ ಮೇಲೆ ವಿಧಿಸಿದ್ದೇವೆ. ಉತ್ತಮ ಬಾಂಧವ್ಯಕ್ಕೂ ತೆರಿಗೆ ಏರಿಕೆಗೂ ಸಂಬಂಧವಿಲ್ಲ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನನ್ನ ಸ್ನೇಹಿತ, ಆದರೆ ಅವರು ವ್ಯವಹಾರದ ವಿಷಯದಲ್ಲಿ ಸ್ನೇಹ ಮುಖ್ಯವಾಗುವುದಿಲ್ಲ. ಸ್ನೇಹವೇ ಬೇರೆ ವ್ಯಾಪಾರವೇ ಬೇರೆ. ದೇಶದ ಹಿತಿ ಮುಖ್ಯ ಎಂದು ತಿಳಿಸಿದ್ದಾರೆ

ವ್ಯಸನಮುಕ್ತ ಸಮಾಜಕ್ಕೆ ಡಾ. ಮಹಾಂತ ಶಿವಯೋಗಿಗಳ ಜೋಳಿಗೆ ಯೋಜನೆ ನಾಂದಿ

ಅರಿವೆಯ ಚೀಲವನ್ನು ಹಿಡಿದು ಮನೆಯಿಂದ ಮನೆಗೆ ಹೋಗಿ ಕುಟುಂಬ–ಸಮಾಜ– ದೇಶವನ್ನೇ ಹಾಳು ಮಾಡುವ ದುರ್ವ್ಯಸನ ಹಾಗೂ ದುಶ್ಚಟಗಳ ದಾಸ್ಯದಿಂದ ಜನಸಾಮಾನ್ಯರನ್ನು ಹೊರತರಲು ಜನರ ಎಲ್ಲಾ ದುಶ್ಚಟಗಳ ವಸ್ತುಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡು, ಇನ್ನೆಂದೂ ಅವುಗಳನ್ನು ಬಳಸುವುದಿಲ್ಲ ಎಂದು ಪ್ರಮಾಣ ಮಾಡಿಸಿದವರು ಡಾ. ಮಹಾಂತ ಶಿವಯೋಗಿ ಅವರು. ಹಲವಾರು ಸಮಾಜ ಸುಧಾರಣೆ ಕಾರ್ಯಗಳೊಂದಿಗೆ ವ್ಯಸನಮುಕ್ತ ಸಮಾಜ ನಿರ್ಮಾಣದಲ್ಲಿಯೂ ತಮ್ಮನ್ನು ಸುಮಾರು 45 ವರ್ಷಗಳಿಗೂ ಹೆಚ್ಚು ಕಾಲ ತೊಡಗಿಸಿಕೊಂಡಿದ್ದ ಮಹಾಂತ ಸ್ವಾಮಿಗಳು ಸಮಾಜ ಸುಧಾರಣೆಯ ಮೊದಲ ಹಾಗೂ ಅತಿಮುಖ್ಯ ಹೆಜ್ಜೆ ಮನಃಪರಿವರ್ತನೆ ಎಂಬುದನ್ನು ಅರಿತಿ–ದ್ದರು. ಅಜ್ಞಾನ, ಅನಾರೋಗ್ಯ, ಅಪರಾಧ, ಅಸಮಾನತೆಯಂತಹ ಸಾಮಾಜಿಕ ಪಿಡುಗುಗಳಿಂದ ಮುಕ್ತರಾಗಲು ಮೊದಲು ಮನಸ್ಸನ್ನು ಈ ಪಿಡುಗುಗಳಿಂದ ಮುಕ್ತಗೊಳಿಸಬೇಕು ಎಂದು ಅವರು ನಂಬಿದ್ದರು.

ವಿಜಯಪುರ ಜಿಲ್ಲೆಯ (ಇಂದಿನ ಬಾಗಲಕೋಟೆ ಜಿಲ್ಲೆ) ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಅಗಸ್ಟ್ 1, 1930 ರಲ್ಲಿ ಜನಿಸಿದ ಡಾ.ಮಹಾಂತ ಶಿವಯೋಗಿಗಳು ತಮ್ಮ 10ನೇ ವಯಸ್ಸಿಗೆ ಸವದಿಯ ವಿರಕ್ತಮಠದ ಕಿರಿಯ ಸ್ವಾಮೀಜಿಗಳಾದರು. ಪೂಜ್ಯರ ಬಾಲ್ಯದ ಹೆಸರು ಮಹಾಂತಯ್ಯ. ಮುಧೋಳ ಗವಿಮಠದಲ್ಲಿ ಸಂಸ್ಕೃತ ಪಾಠಶಾಲೆಗೆ ಸೇರಿದ ಮಹಾಂತಯ್ಯ ಅವರು ಅಲ್ಲಿ ಮೂರು ವರ್ಷಗಳ ಕಾಲ ಅಧ್ಯಯನ ಮಾಡಿ ನಂತರ 1944 ರಲ್ಲಿ ಶಿವಯೋಗ ಮಂದಿರದಲ್ಲಿ ಆರು ವರ್ಷಗಳ ಕಾಲ ಸಂಸ್ಕೃತ–ಕನ್ನಡ ವಿದ್ಯಾಭ್ಯಾಸ ಮಾಡಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಬನಾರಸ ಅಂದರೆ ಕಾಶಿಗೆ ತೆರಳಿ ಅಲ್ಲಿ ಜಂಗಮವಾಡಿ ಮಠದಲ್ಲಿದ್ದು, ಸಂಸ್ಕೃತ, ಹಿಂದಿ, ಯೋಗ, ಶಾಸ್ತ್ರೀಯ ಸಂಗೀತದಲ್ಲಿ ವಿಶೇಷ ಪರಿಣಿತಿ ಸಾಧಿಸಿದರು.



ನಿರಂತರ ಅನ್ನದಾಸೋಹ, ವಚನ ಮಾಂಗಲ್ಯ, ದೇವದಾಸಿ ವಿಮೋಚನಾ ಸಂಸ್ಥೆ, ದೇವದಾಸಿಯರ ಮಕ್ಕಳಿಗೆ ಟ್ರಸ್ಟ್ ಸ್ಥಾಪನೆ, ನಿರುದ್ಯೋಗಿಗಳಿಗೆ ಮತ್ತು ವಿಧವೆಯರಿಗೆ ಕಾಯಕ ಸಂಜೀವಿನಿ ಸಂಸ್ಥೆ, ನಿಸರ್ಗ ಚಿಕಿತ್ಸೆ–ಯೋಗ ಕೇಂದ್ರ ಸ್ಥಾಪಿಸಿದ ಜೊತೆಗೆ ಶಾಖಾ ಮಠಗಳಿಗೆ ಪ.ಜಾತಿ ಮತ್ತು ಪಂಗಡಗಳ ಯುವಕರಿಗೆ ಧರ್ಮ ಸಂಸ್ಕಾರ ನೀಡಿ ಪಟ್ಟಾಭಿಷೇಕ ಮಾಡಿದ್ದು, ಮಹಿಳಾ ಸಾಧಕಿಯರಿಗೆ ಜಂಗಮ ದೀಕ್ಷೆ ನೀಡಿ ಮಠಾಧಿಕಾರಿಯನ್ನಾಗಿ ಮಾಡಿದ್ದು, ಮಠದ ನೂರಾರು ಎಕರೆ ಭೂಮಿಯನ್ನು ಆಯಾ ಗ್ರಾಮಗಳ ರೈತರಿಗೆ ಕೃಷಿ ಮಾಡಿ ಬದುಕಲು ನೀಡಿದ್ದು ಮುಂತಾದ ಹಲವು ಸಮಾಜಮುಖಿ ಕಾರ್ಯಗಳನ್ನು ಮಾಡಿದರು.

ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ ಭೀಕರ ಬರಗಾಲ ಉಂಟಾಗಿ ಮಳೆ ಬೆಳೆ ಇಲ್ಲದೆ ಹಳ್ಳಿಯ ಜನರು, ದನ–ಕರುಗಳು ಆಹಾರ–ನೀರು ಇಲ್ಲದೇ ಸಂಕಷ್ಟಕ್ಕೆ ಒಳಗಾಗಿರುವುದನ್ನು ತಿಳಿದು ಕಾಶಿಯಿಂದ ಹಿಂದಿರುಗಿದ ಅವರು ನೂರಾರು ಗ್ರಾಮಗಳಲ್ಲಿ ಗಂಜಿ ಕೇಂದ್ರ ಆರಂಭಿಸಿ ದಾಸೋಹ ಮಾಡಿದ್ದು ಮಾತ್ರವಲ್ಲದೇ ಗೋಶಾಲೆಗಳನ್ನು ಆರಂಭಿಸಿ ಮೇವು ಮತ್ತು ನೀರಿನ ವ್ಯವಸ್ಥೆ ಮಾಡಿದರು.

ಈ ಎಲ್ಲ ಸೇವೆಗಳಿಗಿಂತ ಹೆಚ್ಚಾಗಿ ಮತ್ತೊಂದು ಮಹತ್ತರ ಸಮಾಜ ಸುಧಾರಕ ಸೇವೆ ಅವರ ಹೆಸರನ್ನು ಸರ್ಕಾರ ಗುರುತಿಸುವಂತೆ ಮಾಡಿದೆ. ಅದೇ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಪ್ರಾರಂಭಿಸಿದ ಮಹಾಂತ ಜೋಳಿಗೆ ಯೋಜನೆ.

ಮನಸ್ಸು, ದೇಹ, ಕುಟುಂಬ ಹಾಗೂ ದೇಶದ ಸ್ವಾಸ್ಥ್ಯ ಹಾಳು ಮಾಡುವ ವ್ಯಸನ ದಾಸ್ಯವೂ ಸಾಮಾಜಿಕ ಪಿಡುಗುಗಳಲ್ಲಿ ಒಂದು. ಕುಡಿತದ ಚಟದಿಂದ ಪ.ಜಾತಿಯ ಯುವಕನೊಬ್ಬ ಜೀವ ಕಳೆದುಕೊಂಡ ಸುದ್ದಿ ಕೇಳಿ ಅವನ ಕೇರಿಗೆ ಸಾಂತ್ವನ ಹೇಳಲು ತೆರಳಿದ್ದ ಮಹಾಂತ ಶಿವಯೋಗಿ ಸ್ವಾಮಿಗಳಿಗೆ ಆತನ ಪತ್ನಿ ಮತ್ತು ಮಕ್ಕಳು ಉಪವಾಸದಿಂದ ದುಃಖಿಸುವುದನ್ನು ಕಂಡು ಇಂತಹ ಸಾವಿರಾರು ಕುಟುಂಬಗಳ ಕುಡಿತ ಮತ್ತು ಇತರೇ ದುಶ್ಚಟಗಳಿಂದ ಹಾಳಾಗಿರುವುದನ್ನು ಅರಿತರು. ಇಂತಹ ದುಶ್ಚಟಗಳಿಗೆ ಒಳಗಾಗಿರುವವರನ್ನು ವ್ಯಸನ ಮುಕ್ತಗೊಳಿಸುವ ಉದ್ದೇಶದಿಂದ ಮಹಾಂತ ಜೋಳಿಗೆ ಯೋಜನೆಯನ್ನು 1975 ರಿಂದ ಆರಂಭಿಸಿ ಯಶಸ್ವಿಯಾದರು.

ದಾವಣಗೆರೆಯಲ್ಲಿ ಫ್ಯಾಬ್ಯೂಸ್ಯ ಮಳಿಗೆ ಆರಂಭ

ದಾವಣಗೆರೆ, ಜು.31–ಭಾರತದ ಅತ್ಯಂತ ಪ್ರೀತಿಪಾತ್ರ ಜೀವನಶೈಲಿ ಬ್ರಾಂಡ್ ಫ್ಯಾಬ್ ಇಂಡಿಯಾ ತನ್ನ ವ್ಯಾಪ್ತಿಯಲ್ಲಿ ಹೊಸ ಬ್ರಾಂಡ್ "ಫ್ಯಾಬ್ಯೂಸ್ಯ "ಬಿಡುಗಡೆ ಮಾಡಿದೆ. ಇದು ಕೈಗೆಟುಕುವ ಬೆಲೆಗಳಲ್ಲಿ ಸಮಕಾಲೀನ ಶ್ರೇಣಿಯನ್ನು ಒದಗಿಸುತ್ತಿದ್ದು ಸಮಯರಹಿತ ನೋಟ ಮತ್ತು ವಿಶ್ವಾಸಾರ್ಹ ಗುಣಮಟ್ಟ ಹೊಂದಿದೆ. ವಿನ್ಯಾಸ ತತ್ವ ಮತ್ತು ಸೌಂದರ್ಯಪ್ರಜ್ಞೆಗೆ ಬ್ರಾಂಡ್ ಬದ್ಧತೆಗೆ ಅನುಗುಣವಾಗಿ ಫ್ಯಾಬ್ಯೂಸ್ಯ ಪುರುಷರು ಹಾಗೂ ಮಹಿಳೆಯರಿಗೆ ವೆಸ್ಟರ್ನ್ ವೇರ್, ಇಂಡಿಯನ್ ವೇರ್, ಪಾದರಕ್ಷೆಗಳಲ್ಲಿ ಆಧುನಿಕ ಸ್ಟೈಲ್ ಗಳನ್ನು ತರುತ್ತಿದ್ದು ಅದರೊಂದಿಗೆ ಮಹಿಳೆಯರ ಆಭರಣಗಳು ಹೊಂದಿದ್ದು ಪ್ರತಿನಿತ್ಯದ ಬಳಕೆ, ವರ್ಕ್ ವೇರ್ ಮತ್ತು ಹಬ್ಬದ ಉಡುಗೆಗಳಿವೆ.

ಎಥ್ನಿಕ್ ಮತ್ತು ವೆಸ್ಟರ್ನ್ ವೇರ್ ಎರಡೂ ಒಳಗೊಂಡ, ಮಹಿಳೆಯರಿಗೆ ಆಭರಣ ಒಳಗೊಂಡ ಫ್ಯಾಬ್ಯೂಸ್ಯ ನಮಗೆ ನಮ್ಮ ಗ್ರಾಹಕರೊಂದಿಗೆ ಹೆಚ್ಚು ಆಳವಾಗಿ ಸಂಪರ್ಕ ಹೊಂದಲು, ನಾವು ನಂಬಿರುವುದಕ್ಕೆ ಬದ್ಧವಾಗಿ ಮಹತ್ತರ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡುತ್ತದೆ" ಎಂದು ಫ್ಯಾಬ್ ಇಂಡಿಯಾ ವಕ್ತಾರರು ತಿಳಿಸಿದರು.

ಮಂಡ್ಯದ ನಾಗಮಂಗಲದ ಆದಿಚುಂಚನಗಿರಿ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೆಕಾನಿಕಲ್ ಇಂಜನಿಯರಿಂಗ್ ನಲ್ಲಿ ಪಿಹೆಚ್‌ಡಿ ಪದವಿ ಪಡೆದಿರುವ ಚೇತನ ಜಿ.ಸಿ. ಅವರು ಚಾನ್ಸಲರ್ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಂದ ಸ್ವೀಕರಿಸಿದರು. ಸಚಿವ ಎನ್. ಚಲುವರಾಯಸ್ವಾಮಿ, ಇಸ್ರೋದ ಮಾಜಿ ಅಧ್ಯಕ್ಷ ಎಸ್. ಸೋಮನಾಥ್, ಪ್ರೊ. ಮಂಜುನಾಥ್ ಎಸ್.ಹೆಚ್., ಪ್ರೊ. ಡಾ. ಗಿರೀಶ್ ಕೆ.ಬಿ. ಮತ್ತಿತರರು ಇದ್ದಾರೆ.

IN THE COURT OF THE HON'BLE ADDITIONAL DISTRICT MUNSIFF AT DENKANIKOTTAI
O.S.NO.124/2023

Mrs.KUMARI — PLAINTIFF
/Vs/
DEFENDANTS
Mrs. Chandramma, w/o. Sakrinayak @ Sakriyappa
Mr.MUNIRAJ, S/o. Sakirinayak@ Sakriyappa
Mr.ANAND, S/o. Sakrinayak@ Sakriyappa.
All are residing at No. 114, Mahalingeswara Layout, Bangalore South, Adugodi, Bangalore-560030.

SUMMON
Please take notice that the above plaintiff has filed a suit against you for Permanent Injunction. The said suit is posted to 11.08.2025 for your appearance. That you are hereby directed to appear on 11.08.2025 at 10.30 am before the Hon'ble Additional District Munsif, at Denkani kottai, Krishnagiri District, Tamilnadu either in person or through a pleader and state objections if any; failing which the Hon'ble Court will be pleased to pass exparte orders against you.

//BY ORDER OF THE COURT//
T.SHANKAR, B.A., LL.B
V.JHANSI RANI, B.A., L.LB Advocates,
No 2, 1st floor, Next to Police Quarters,
Anna Nagar, HOSUR-635109
Phone : 9865490056.

ಸಾನ್ವಿ ನವೀನ್ ರಂಗ ಪ್ರವೇಶ

ಬೆಂಗಳೂರು:ಜು.31–ಕುವೈಟ್‌ನ ದೆಹಲಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಸಾನ್ವಿ ನವೀನ್ ಇದೇ ಆಗಸ್ಟ್ 3ರಂದು ಬೆಂಗಳೂರು ನಗರದ ಖಿಂಚ ಆಡಿಯೋಟೋರಿಯಂನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ರಂಗಪ್ರವೇಶ ಮಾಡಲಿದ್ದಾಳೆ.

ತಂದೆ ತಾಯಿಯ ಆಶೀರ್ವಾದ ಮತ್ತು ನಾಟ್ಯ ದೇವತೆಯಿಂದ ಆಶೀರ್ವದಿಸಲ್ಪಟ್ಟ 15 ವರ್ಷದ ಸಾನ್ವಿ ನವೀನ್, ಭರತನಾಟ್ಯದ ಪವಿತ್ರ ಪರಂಪರೆಯನ್ನು ಭಕ್ತಿ ಮತ್ತು ಶ್ರದ್ಧೆಯಿಂದ ಮುಂದಕ್ಕೆ ಸಾಗಿಸಲು ರಂಗಪ್ರವೇಶಕ್ಕಾಗಿ ಕಾಯುತ್ತಿದ್ದಾಳೆ.

ಸಾನ್ವಿ ತನ್ನ ಶ್ರೇಷ್ಠ ನೃತ್ಯ ಶೈಲಿಯ ಪ್ರಾಥಮಿಕ ಪಾಠಗಳನ್ನು 'ಉಪಾಸನಾ' ಸಂಸ್ಥೆಯಿಂದ ಕಲಿತ ಬಳಿಕ ಅವಳು ಬಾಲ್ಯದ ಆರನೇ ವಯಸ್ಸಿನಲ್ಲಿ ಭರತನಾಟ್ಯದ ಆಳವಾದ ಅಧ್ಯಯನವನ್ನು ಆರಂಭಿಸಿ, ಪುಷ್ಕರ ನೃತ್ಯಾನಿಕೇತನ ಕುವೈಟ್ ಗುರುಗಳಾದ ನೃತ್ಯ ವಿದೂಷಿ ಶ್ರೀಮತಿ ಶಾಂತಲಾ ಸತೀಶ್ ಆಚಾರ್ಯ ಅವರ ಮಾರ್ಗದರ್ಶನದಲ್ಲಿ, ಶಿಸ್ತಿನಿಂದಲೂ ಸಮರ್ಪಣೆಯಿಂದಲೂ

ನೃತ್ಯವನ್ನು ಅಭ್ಯಾಸ ಮಾಡುತ್ತಾ, ತಾನು ಶಿಸ್ತಿನ ನೃತ್ಯಾಂಗಿಯಾಗಿ ರೂಪುಗೊಂಡಿದ್ದಾಳೆ

ನಾಗ್ಪೂರಿನ ಅಖಿಲ ನಟರಾಜಂ ಅಂತರ ಸಾಂಸ್ಕೃತಿಕ ಸಂಘದ ಆಯೋಜನೆಯಲ್ಲಿ ಸಾನ್ವಿಗೆ ಮೂರನೇ ಸ್ಥಾನ ದೊರಕಿತು. ಭಾರತೀಯ ರಾಯಭಾರಿ ಕಚೇರಿ, ಕುವೈಟ್‌ನ ವಿವಿಧ ಸಂಘಟನೆಗಳು ಆಯೋಜಿಸಿದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವಳು ತನ್ನ ನೃತ್ಯಕಲೆಯಿಂದ ಪ್ರೇಕ್ಷಕರಿಂದ ಪ್ರಶಂಸೆಗಳಿಸಿದ್ದಾಳೆ.

ಜಾನಪದ ತಜ್ಞ ಎಸ್.ಕೆ. ಕರೀಂಖಾನ್‌ರನ್ನು ಮರೆಯುವಂತಿಲ್ಲ

ಬೆಂಗಳೂರು,ಜು.31–ಜಾನಪದ ಕಲೆ, ಸಾಹಿತ್ಯದ ಉಳಿವಿಗಾಗಿ ಶ್ರಮಿಸಿದ ಜಾನಪದ ತಜ್ಞ ಎಸ್. ಕೆ. ಕರೀಂಖಾನ್ ಅವರನ್ನು ಕನ್ನಡ ನಾಡು ಎಂದಿಗೂ ಮರೆಯುವಂತಿಲ್ಲ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಡಾ.ಮನು ಬಳಿಗಾರ್ ಹೇಳಿದ್ದಾರೆ.

ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ ಜಂಟಿ–ಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ' ಸರಣಿ ಕಾರ್ಯಕ್ರಮದಲ್ಲಿ ಕರೀಂಖಾನ್ ಅವರ ಬಗ್ಗೆ ಉಪನ್ಯಾಸ ನೀಡಿದರು.

ಎಲ್ಲ ಸಾಹಿತ್ಯಕ್ಕೆ ಮೂಲ ಬೇರು ಜಾನಪದ ಸಾಹಿತ್ಯ. ಜಾನಪದ ಸಾಹಿತ್ಯ ಮತ್ತು ಕಲೆಗೆ ಕರೀಂಖಾನ್ ಗೌರವ ತಂದುಕೊಟ್ಟಿದ್ದಾರೆ. ಸಾಗರ ತಾಲ್ಲೂಕಿನಲ್ಲಿ 5 ಸಾವಿರ ಅಡಿ ಎತ್ತರದಲ್ಲಿ–ರುವ ಮೇಘಾನೆ ಎಂಬ ಗ್ರಾಮದಲ್ಲಿ ಕ್ಷೇತ್ರ ಕಾರ್ಯ ಮಾಡಿ, ಅಲ್ಲಿನ ಸಂಸ್ಕೃತಿಯ ಬಗ್ಗೆ ಚಿತ್ರೀಕರಣ ಮಾಡಿದ್ದಾರೆ.

ಅವರು ಈ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಜಾನಪದ ಕಲೆಯನ್ನು ರಕ್ಷಣೆ ಮಾಡಿರುವ ಅವರ ಹೆಸರಿನಲ್ಲಿ ಸರ್ಕಾರವು ಪ್ರಶಸ್ತಿ ಸ್ಥಾಪಿಸಿ, ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಶ್ರಮಿಸಿದವರಿಗೆ ಆ ಪ್ರಶಸ್ತಿ ನೀಡಬೇಕು. ಈ ಬಗ್ಗೆ ಸರ್ಕಾರಕ್ಕೆ ಆಗ್ರಹಿಸಲು ಸಾಹಿತಿಗಳ ನಿಯೋಗವನ್ನು ಮುಖ್ಯಮಂತ್ರಿ ಅವರ ಬಳಿ ಕರೆದೊಯ್ಯಬೇಕು ಎಂದರು.

ಕರ್ನಾಟಕ ವಿಕಾಸ ರಂಗದ ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ, 'ಅಪಾರ ಪ್ರತಿಭೆ ಹೊಂದಿದ್ದ ಕರೀಂಖಾನ್ ಅವರಿಗೆ ಸೂಕ್ತ ಗೌರವ, ಸ್ಥಾನಮಾನಗಳು ಸಿಗಲಿಲ್ಲ. ಅಜ್ಞಾತ ಕವಿಗಳ ಹಾಡುಗಳು ನಾಶವಾಗಬಾರದೆಂದು ಅವುಗಳನ್ನು ಸಂಗ್ರಹಿಸಿ, ಪ್ರಕಟಿಸಿದ್ದಾರೆ ಎಂದು ಹೇಳಿದರು.

ಅಧ್ಯಕ್ಷ ವ.ಚ.ಚನ್ನೇಗೌಡ, ಉರ್ದು ಮನೆ ಮಾತಾಗಿದ್ದರೂ ಕನ್ನಡ ಮತ್ತು ಸಂಸ್ಕೃತವನ್ನು ಕರೀಂಖಾನ್ ಅವರು ಅಧ್ಯಯನ ಮಾಡಿದ್ದರು. ಹೆಚ್ಚು ವಿದ್ಯಾಭ್ಯಾಸ ಮಾಡದಿದ್ದರೂ, ಜಾನಪದ ಪ್ರಕಾರ, ಭಗವದ್ಗೀತೆ, ಭಾಗವತ, ಶಿವಪುರಾಣಗಳ ಚಾರಿತ್ರಿಕ ಸಂಗತಿಗಳನ್ನು ನಿಂತಲ್ಲಿಯೇ ಹೇಳುವಷ್ಟು ಪ್ರತಿಭಾವಂತರಾಗಿದ್ದರು ಎಂದು ಸ್ಮರಿಸಿಕೊಂಡರು. ಕನ್ನಡ ಪರ ಹೋರಾಟಗಾರ ಜಾಣಗೆ–ರೆ ವೆಂಕಟರಾಮಯ್ಯ ಹಾಗೂ ಕರೀಂಖಾನ್ ಕುಟುಂಬಸ್ಥರು ಉಪಸ್ಥಿತರಿದ್ದರು.

CHANGE OF NAME
I, **BABITHA,** R/at No.26, 5th Cross, Near Indira Canteen Thyagaraja Nagar, Bangalore-560070. have changed my name to **BABITHA RAJATH KUMAR JAIN.** vide affidavit dated 28-07-2025. Sworn before notary **K.V.MANI** Bangalore.

VEHICLES FOR SALE
TATA 1616
2024 MODEL
KA-01-AP-6041
TATA 1616
2024 MODEL
KA-01-AP-6038
For details contact
Sundaram Finance Ltd
No.258, 3rd Main Road, Chamrajpet, Bangalore - 560018.
9449063936
080-26509410
26500697

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
ಜಾಹೀರಾತು ವ್ಯವಸ್ಥಾಪಕರು

CHANGE OF NAME
I, **KISHORE KUMAR JAIN.R** R/at No.26, 5th Cross, Near Indira Canteen Thyagaraja Nagar, Bangalore-560070. have changed my Son's name from **HARSHVARDHAN KISHORE KUMAR JAIN** to **HARSHVARDHAN JAIN,** vide affidavit dated 28-07-2025. Sworn before notary **K.V.MANI,** Bangalore.

CHANGE OF NAME
I, **KISHORE KUMAR JAIN.R** R/at No.26, 5th Cross, Near Indira Canteen Thyagaraja Nagar, Bangalore-560070. have changed my Daughter's name from **PRISHA KISHORE KUMAR JAIN** to **PRISHA JAIN** vide affidavit dated 28-07-2025. Sworn before notary **K.V.MANI,** Bangalore.

MCF
ಮಂಗಳೂರು ಕೆಮಿಕಲ್ಸ್ & ಫರ್ಟಿಲೈಜರ್ಸ್ ಲಿಮಿಟೆಡ್
ನೋಂದಾಯಿತ ಕಛೇರಿ: ಹಂತ 11, UB ಟವರ್, UB ಸಿಟಿ, 24, ವಿಟ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ದೂರವಾಣಿ: 080-45855599, ಫ್ಯಾಕ್ಸ್: 080-45855588
CIN: L24123KA1966PLC002036
ಇಮೇಲ್: shares.mcfl@adventz.com,
ವೆಬ್‌ಸೈಟ್: www.mangalorechemicals.com

58ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಈ ಮೂಲಕ ಮಂಗಳೂರು ಕೆಮಿಕಲ್ಸ್ & ಫರ್ಟಿಲೈಜರ್ಸ್ ಲಿಮಿಟೆಡ್ ಕಂಪನಿಯ ಸದಸ್ಯರಿಗೆ ಸೂಚನೆ ನೀಡುವುದೇನೆಂದರೆ 58ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಯು ಆಗಸ್ಟ್ 21, 2025 ರಂದು ಗುರುವಾರ ಮಧ್ಯಾಹ್ನ 2.30 ಕ್ಕೆ ವೀಡಿಯೊ ಕಾನ್ಫರೆನ್ಸಿಂಗ್ ("ವಿಸಿ") / ಇತರ ಆಡಿಯೋ ವಿಷುಯಲ್ ಮೀನ್ಸ್ (" ಓಎವಿಎಂ") ಮೂಲಕ ನಡೆಯಲಿದೆ. ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವ ಸೂಚನಾಪತ್ರದಲ್ಲಿ ಸೂಚಿಸಿದಂತೆ ವ್ಯವಹಾ-ರಗಳನ್ನು ನಡೆಸುವುದು ಇದರ ಉದ್ದೇಶವಾಗಿದೆ. ಕಂಪನಿಗಳ ಕಾಯಿದೆ, 2013 ಮತ್ತು SEBI (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) (LODR) ನಿಯಮಗಳು, 2015, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (MCA) ದಿನಾಂಕ 08.04.2020, 13.04.2020, 05.05.2020, 13.01.2021, 05.05.2022, 28.12.2022, 25.09. 2023 ಮತ್ತು 19.09.2024 ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆಗಳ ಅನ್ವಯ ವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಜುಲೈ 25, 2025 ರಂದು ಕಂಪನಿ / ಡಿಪಾಸಿಟರಿ ಪಾರ್ಟಿಸಿಪೆಂಟ್ (DPಗಳ) ಜೊತೆ ಇಮೇಲ್ ವಿಳಾಸವನ್ನು ನೋಂದಾಯಿಸಿರುವ ಕಂಪನಿಯ ಸದಸ್ಯರಿಗೆ ವಿದ್ಯುನ್ಮಾನ ರೂಪದಲ್ಲಿ ನೋಟಿಸ್ ಕಳುಹಿಸಲಾಗಿದೆ.

ಕಂಪನಿ ಅಥವಾ ಡೆಪಾಸಿಟಾರಿಗಳೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿ-ಸದ ಸದಸ್ಯರಿಗೆ 2024-25 ನೇ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ಪಡೆದು-ಕೊಳ್ಳಲು ವೆಬ್ ಲಿಂಕ್ ಅನ್ನು ಒದಗಿಸುವ ಪತ್ರವನ್ನು ಕಳುಹಿಸಲಾಗಿದೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 10 ರೊಂದಿಗೆ ಓದಿದ ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 91 ರ ಅಡಿಯಲ್ಲಿ, ತಿದ್ದುಪಡಿ ಮಾಡಿದಂತೆ ಮತ್ತು LODR ರೆಗ್ಯುಲೇಷನ್ಸ್, ರೆಗ್ಯುಲೇಷನ್ 42 ರ ಅಡಿಯಲ್ಲಿ 2024-25ರ ಹಣಕಾಸು ವರ್ಷಕ್ಕೆ ಡಿವಿಡೆಂಡ್ ಅನ್ನು ಘೋಷಿಸಿದ್ದಲ್ಲಿ, ಅದನ್ನು ಪಡೆಯಲು ಅರ್ಹರಾದ ಸದಸ್ಯರನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಕಂಪನಿಯ ಸದಸ್ಯರ ನೋಂದಣಿ ಮತ್ತು ಶೇರುದಾರರ ವರ್ಗಾವಣೆ ಪುಸ್ತಕವನ್ನು ಆಗಸ್ಟ್ 15, 2025 ರಿಂದ ಆಗಸ್ಟ್ 21, 2025 ರವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಲಾಗುತ್ತದೆ ಮತ್ತು ಅಧಿಕೃತ ದಿನಾಂಕವು ಆಗಸ್ಟ್ 14, 2025 ಆಗಿರುತ್ತದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಪ್ರಕಾರ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ರೊಂದಿಗೆ ತಿದ್ದುಪಡಿ ಮಾಡಿದಂತೆ ಮತ್ತು SEBI ಯ ನಿಯಮ 44 (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ಪ್ರಕಾರ ಸದಸ್ಯರಿಗೆ AGM ಸಮಯದಲ್ಲಿ ವಿದ್ಯುನ್ಮಾನ ವಿಧಾನದ ಮೂಲಕ (ರಿಮೋಟ್ ಇ-ವೋಟಿಂಗ್) ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸಲಾಗಿದೆ. ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಸೆಂಟ್ರಲ್ ಡಿಪಾಸಿಟರಿಸ್ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ಅನ್ನು ನೇಮಿ-ಸಿಕೊಂಡಿದೆ.

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

a) 58ನೇ AGM ನ ಸೂಚನೆಯಲ್ಲಿ ಸೂಚಿಸಿರುವ ಎಲ್ಲಾ ವ್ಯವಹಾರಗಳನ್ನು ವಿದ್ಯುನ್ಮಾನ ಮತದಾನದ ಮೂಲಕ ನಿರ್ಧರಿಸಲಾಗುವುದು.
b) ರಿಮೋಟ್ ಇ-ಮತದಾನವು ಆಗಸ್ಟ್ 18, 2025 ರಂದು ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭವಾಗುತ್ತದೆ.
c) ರಿಮೋಟ್ ಇ-ವೋಟಿಂಗ್ ಆಗಸ್ಟ್ 20, 2025 ರಂದು ಸಂಜೆ 5.00 ಗಂಟೆಗೆ ಕೊನೆ-ಗೊಳ್ಳುತ್ತದೆ.
d) ರಿಮೋಟ್ ಇ-ವೋಟಿಂಗ್ ಕಟ್ ಆಫ್ ದಿನಾಂಕ ಆಗಸ್ಟ್ 14, 2025.
e) ನೋಟಿಸ್ ಕಳುಹಿಸಿದ ನಂತರ ಶೇರುಗಳನ್ನು ಸ್ವಾಧೀನಪಡಿಸಿಕೊಂಡು ಕಂಪನಿಯ ಸದಸ್ಯರಾಗುವ ಮತ್ತು ಕಟ್ ಆಫ್ ದಿನಾಂಕದಂದು ಶೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಕಂಪನಿಗೆ ಲಿಖಿತವಾಗಿ ವಿನಂತಿಯನ್ನು ಕಳುಹಿಸುವ ಮೂಲಕ ಅಥವಾ shares.mcfl@adventz.com ಗೆ ಇಮೇಲ್ ಕಳುಹಿಸುವ ಮೂಲಕ ನೋಟಿಸ್ ಮತ್ತು ವಾರ್ಷಿಕ ವರದಿಯ ಪ್ರತಿಯನ್ನು ಪಡೆಯಬಹುದು ಅಥವಾ ಅದನ್ನು ಕಂಪನಿ-ಯ ವೆಬ್‌ಸೈಟ್ www.mangalorechemicals.com ನಿಂದ ಡೌನ್ಲೋಡ್ ಮಾಡಬಹುದು.
f) ಸದಸ್ಯರಿಗೆ ಮತ್ತಷ್ಟು ತಿಳಿಸುವುದೇನೆಂದರೆ:
   (i) ಆಗಸ್ಟ್ 20, 2025 ರಂದು ಸಂಜೆ 5.00 ಗಂಟೆಯ ನಂತರ ರಿಮೋಟ್ ಇ-ವೋಟಿಂಗ್ ಗೆ ಅವಕಾಶವಿರುವುದಿಲ್ಲ.
   (ii) ವಿಸಿ / ಓಎವಿಎಂ ಸೌಲಭ್ಯದ ಮೂಲಕ ಎಜಿಎಂ ನಲ್ಲಿ ಉಪಸ್ಥಿತರಿರುವ ಮತ್ತು ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ತಮ್ಮ ಮತವನ್ನು ಚಲಾಯಿಸದಿರುವ ಶೇರುದಾರರು ಅಥವಾ ಹಾಗೆ ಮಾಡುವುದನ್ನು ನಿರ್ಬಂಧಿಸದೇ ಇರುವಂತಹ ಶೇರುದಾರರು ಮಾತ್ರ, ಎಜಿಎಂ ಸಮಯದಲ್ಲಿ ಲಭ್ಯವಿರುವ ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
   (iii) ರಿಮೋಟ್ ಇ-ವೋಟಿಂಗ್ ಮೂಲಕ ಮತದಾನದ ಹಕ್ಕನ್ನು ಚಲಾಯಿಸಿದ ನಂತರವೂ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸ-ಬಹುದು ಆದರೆ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅವಕಾಶವಿರು-ವುದಿಲ್ಲ.
   (iv) ಸದಸ್ಯರ ರಿಜಿಸ್ಟರ್ ನಲ್ಲಿ ಅಥವಾ ಡಿಪಾಸಿಟರಿಗಳು ನಿರ್ವಹಿಸುವ ಅಂತಿಮ ಮಾಲೀಕರ ರಿಜಿಸ್ಟರ್ ನಲ್ಲಿ ಕಟ್-ಆಫ್ ದಿನಾಂಕವಾದ ಆಗಸ್ಟ್ 14, 2025 ರಂತೆ ಯಾರ ಹೆಸರನ್ನು ದಾಖಲಿಸಲಾಗಿದೆಯೋ ಅಂತಹ ವ್ಯಕ್ತಿಯು ಮಾತ್ರ ರಿಮೋಟ್ ಇ-ಮತದಾನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
g) 58ನೇ ಎಜಿಎಂ ನ ಸೂಚನೆಯು ಕಂಪನಿಯ ವೆಬ್‌ಸೈಟ್ www.mangalorechemicals.com ಮತ್ತು CDSLನ ವೆಬ್‌ಸೈಟ್ www.evotingindia.com ನಲ್ಲಿ ಲಭ್ಯವಿದೆ.
h) ಇ-ಮತದಾನಕ್ಕೆ ಸಂಬಂಧಿಸಿದಂತೆ ನಿಮಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಅಥವಾ ಸಮಸ್ಯೆಗಳನ್ನು ಹೊಂದಿದ್ದರೆ, ನೀವು "ಸಹಾಯ" ವಿಭಾಗದ ಅಡಿಯಲ್ಲಿ www.evotingindia.com ನಲ್ಲಿ ಲಭ್ಯವಿರುವ ಪದೇ ಪದೇ ಕೇಳಲಾಗುವ ಪ್ರಶ್ನೆಗಳು ("FAQs") ಮತ್ತು ಇ-ಮತದಾನ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ ಇ-ಮತದಾನ ಸಹಾಯವಾಣಿ helpdesk.evoting@cdslindia.com ಗೆ ಇ-ಮೇಲ್ ಮಾಡಬಹುದು, ಅಥವಾ ಶ್ರೀ ರಾಕೇಶ್ ದಳ್ವಿ, ಸೀನಿಯರ್ ಮ್ಯಾನೇಜರ್, ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್, A ವಿಂಗ್, 25 ನೇ ಮಹಡಿ, ಮ್ಯಾರಥಾನ್ ಫ್ಯೂಚರ್‌ಎಕ್ಸ್, ಮಫತಲಾಲ್ ಮಿಲ್ ಕಾಂಪೌಂಡ್ಸ್, ಎನ್. ಎಂ. ಜೋಷಿ ಮಾರ್ಗ್, ಲೋವರ್ ಪರೇಲ್ (ಪೂರ್ವ), ಮುಂಬೈ - 400013 ಅಥವಾ 1800 21 09911 ಗೆ ಕರೆ ಮಾಡಬಹುದು.

ಮಂಗಳೂರು ಕೆಮಿಕಲ್ಸ್ & ಫರ್ಟಿಲೈಜರ್ಸ್ ಲಿಮಿಟೆಡ್
ಸಹಿ/-
ವಿಘ್ನೇಶ್ವರ ಜಿ ಭಟ್
ಕಂಪನಿ ಕಾರ್ಯದರ್ಶಿ
ಸ್ಥಳ : ಬೆಂಗಳೂರು
ದಿನಾಂಕ : ಜುಲೈ 30, 2025

ಸಂಶೋಧನೆಗೆ 'ಇ–ಸಂಪನ್ಮೂಲ'

ಬೆಂಗಳೂರು ವಿ.ವಿ ಗ್ರಂಥಾಲಯ ವಿಭಾಗದಿಂದ ಹೊಸ ಸೌಲಭ್ಯ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ, ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ಗ್ರಂಥಾಲಯದ ಮೂಲಕ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ 'ಇ- ಸಂಪನ್ಮೂಲ'ಗಳ ಮೂಲಕ ಉಚಿತವಾಗಿ ಗುಣಮಟ್ಟದ ಆಕರ ಗ್ರಂಥಗಳನ್ನು ಪೂರೈಸಲು ಆರಂಭಿಸಿದೆ.

ವಿಶ್ವವಿದ್ಯಾಲಯದ ಸಂಶೋಧನೆ ಮತ್ತು ಅಧ್ಯಯನಕ್ಕೆ ಡಿಜಿಟಲ್ ಶಕ್ತಿ ತುಂಬುವುದು ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರಿಗೆ ಮತ್ತು ಅತಿಥಿ ಉಪನ್ಯಾಸಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಡಿಜಿಟಲ್ ಅಥವಾ ಎಲೆಕ್ಟ್ರಾನಿಕ್ ಸಂಪನ್ಮೂಲಗಳನ್ನು ದೊರೆಯುವಂತೆ ಮಾಡುವುದು, ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಇರುವ ಶೈಕ್ಷಣಿಕ ಅಂತರವನ್ನು ಕಡಿಮೆ ಮಾಡುವುದು ಈ ಯೋಜನೆಯ ಉದ್ದೇಶ.

ಏನೇನಿವೆ 'ಸಂಪನ್ಮೂಲಗಳು'?: 'ಇ-ಸಂಪನ್ಮೂಲ'ದಲ್ಲಿ ಸಮಾಜ ವಿಜ್ಞಾನ, ಮಾನವಿಕ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಡಿಜಿಟಲ್ ಸಂಪನ್ಮೂಲಗಳಿವೆ. 'ಸ್ಪ್ರಿಂಗರ್ ನೇಚರ್', 'ಟೇಲರ್ ಆ್ಯಂಡ್ ಫ್ರಾನ್ಸಿಸ್', 'ಪಿಯರ್‌ಸನ್', 'ಮ್ಯಾಕ್‌ಗ್ರಾಹಿಲ್' ನಂತಹ ಅಂತರರಾಷ್ಟ್ರೀಯ ಪ್ರಕಾಶಕರ 50 ಸಾವಿರಕ್ಕೂ ಹೆಚ್ಚು ಇ-ಪುಸ್ತಕಗಳಿವೆ. ವ್ಯಾಕರಣ ಕಲಿಕೆ, ವಿಶ್ವಾಸಾರ್ಹ ದತ್ತಾಂಶ, ಆರ್ಥಿಕತೆ ಮತ್ತು ಹಣಕಾಸು ಸಂಶೋಧನೆಗೆ ಆಗತ್ಯವಿರುವ ದತ್ತಾಂಶಗಳನ್ನು ನೀಡುವ ಪರಿಕರಗಳೂ ಲಭ್ಯವಿವೆ' ಎಂದು ಯೋಜನೆಯ ರೂವಾರಿ, ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕ ಎಂ.ರಘುನಂದನ್ 'ಪ್ರಜಾವಾಣಿ'ಗೆ ವಿವರಿಸಿದರು.

ಕೇಂದ್ರ ಸರ್ಕಾರದ 'ಒನ್ ನೇಷನ್ ಒನ್ ಸಬ್‌ಸ್ಕ್ರಿಪ್ಷನ್' (ಒಎನ್‌ಒಎಸ್) ಯೋಜನೆಯಡಿ, 13,236 ಅಂತರರಾಷ್ಟ್ರೀಯ ಇ-ಜರ್ನಲ್‌ಗಳು ಮತ್ತು 30 ಪ್ರಮುಖ ಪತ್ರಿಕೆಗಳ ಪ್ರಕಾಶಕರಿಂದ ಪರವಾನಗಿ ಪಡೆದುಕೊಂಡಿದೆ. ಈ ಸೌಲಭ್ಯವನ್ನು ವಿಶ್ವವಿದ್ಯಾಲಯಕ್ಕೆ ಸೇರಿರುವ ಸುಮಾರು 300 ಅನುಬಂಧಿತ ಕಾಲೇಜುಗಳಿಗೂ ಉಚಿತವಾಗಿ ಲಭ್ಯವಿರುವಂತೆ ಮಾಡಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

'ಇ-ಸಂಪನ್ಮೂಲ' ಪ್ರವೇಶ: 'ಪುಸ್ತಕಗಳನ್ನು ಬಳಸುವ ಪರವಾನಗಿ ಮತ್ತು ನಿಯತಕಾಲಿಕೆಗಳ ಚಂದಾದಾರಿಕೆಯನ್ನು ವಿಶ್ವವಿದ್ಯಾಲಯ ಪಡೆದುಕೊಂಡು, ಬಳಕೆಗಾಗಿರುವ ಕೋಡ್ (ಐಪಿ) ಗಳನ್ನು ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರಿಗೆ ನೀಡಲಾಗುತ್ತದೆ. ಆ ಕೋಡ್ ಬಳಸಿ ಎಲ್ಲ ಆಕರ ಗ್ರಂಥಗಳನ್ನು ಓದಬಹುದು. 'ಇ-ಸಂಪನ್ಮೂಲ'ಗಳಿಗಾಗಿಯೇ ಗ್ರಂಥಾಲಯ ವಿಭಾಗವು ಪ್ರತ್ಯೇಕ ಜಾಲತಾಣವನ್ನು ಆರಂಭಿಸಿದೆ. ಇತ್ತೀಚೆಗೆ 'ಇ-ಸಂಪನ್ಮೂಲ' ಬಳಕೆಯ ಪುನರ್ ಮನನ ಕಾರ್ಯಾಗಾರದಲ್ಲಿ ಈ ಜಾಲತಾಣವನ್ನು ಉದ್ಘಾಟಿಸಲಾಗಿದೆ' ಎಂದು ರಘುನಂದನ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಂಥ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕಾಗಿ ಆಕರ ಗ್ರಂಥಗಳು ಸಿಗುವುದು ಕಷ್ಟ. ಹೀಗಾಗಿ, ಇ-ಸಂಪನ್ಮೂಲದ ಮೂಲಕ ಗುಣಮಟ್ಟದ ಕೃತಿಗಳು, ನಿಯತಕಾಲಿಕೆಗಳು ಅವರಿಗೆ ಸುಲಭವಾಗಿ ಸಿಗುತ್ತವೆ. ಪ್ರಸ್ತುತ, ವಿಶ್ವವಿದ್ಯಾಲಯದ 1,500 ವಿದ್ಯಾರ್ಥಿಗಳು ಹಾಗೂ 500 ಅಧ್ಯಾಪಕರಿಗೆ ಈ ಸೌಲಭ್ಯವನ್ನು ಬಳಸಿಕೊಳ್ಳಲಿದ್ದಾರೆ' ಎಂದು ಅವರು ವಿವರಿಸಿದರು.

ಮುಖ್ಯಾಂಶಗಳು

- ಸಾವಿರಾರು ಪುಸ್ತಕಗಳು, ನಿಯತಕಾಲಿಕೆಗಳು ಲಭ್ಯ
- ಐದು ತರಹದ ಡಿಜಿಟಲ್ ಕಲಿಕಾ ಪರಿಗಳೂ ಇವೆ
- 1500 ವಿದ್ಯಾರ್ಥಿಗಳಿಂದ ಸೌಲಭ್ಯ ಬಳಕೆ

'ಇ-ಸಂಪನ್ಮೂಲ', ಜಾಲತಾಣ ಶುರುವಾಗಿ ಒಂದು ತಿಂಗಳಾಗಿದೆ. ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇನ್ನಷ್ಟು ಉನ್ನತೀಕರಿಸುವ ಪ್ರಯತ್ನ ಮಾಡಲಾಗುತ್ತಿದೆ
ಜಯಕರ ಎಂ.ಎಸ್.,
ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

'ಪೇಟೆಂಟ್' ಅಧ್ಯಯನಕ್ಕೆ ಅನುಕೂಲ

ರಘುನಂದನ್

ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಲ್ಲಿ ಹಲವರು 'ಬೌದ್ಧಿಕ ಆಸ್ತಿ ಹಕ್ಕು (ಪೇಟೆಂಟ್)'ಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡುತ್ತಿದ್ದಾರೆ. ಅಂಥವರಿಗೆ 'ಇ-ಸಂಪನ್ಮೂಲ' ತುಂಬಾ ಸಹಾಯವಾಗುತ್ತದೆ. ಶಿಕ್ಷಕರಿಗಿಂತ, ಉದಯೋನ್ಮುಖ ಸಂಶೋಧಕರಿಗೆ(ಸ್ಕಾಲರ್ಸ್) ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂದು ರಘುನಂದನ್ ವಿವರಿಸಿದರು.

'ಇ-ಸಂಪನ್ಮೂಲ' ವಿರುವ ಜಾಲತಾಣದಿಂದ ಸಂಶೋಧನಾ ಪ್ರಬಂಧ ಮತ್ತು ಲೇಖನ ತಯಾರಿಕೆಗಾಗಿ ಬೆರಳ ತುದಿಯಲ್ಲೇ ಭರಪೂರ ಮಾಹಿತಿ ಲಭ್ಯವಾಗುತ್ತಿದೆ
ಸತೀಶ್ ಕೆ.ಆರ್.,
ಸಂಶೋಧನಾ ವಿದ್ಯಾರ್ಥಿ, ಬೆಂವಿವಿ

'ಇ - ಸಂಪನ್ಮೂಲ'ಗಳಿಂದ ಆಳವಾದ ಮತ್ತು ಸುದೀರ್ಘ ಅಧ್ಯಯನಕ್ಕೆ ಅನುಕೂಲವಾಗುತ್ತಿದೆ. ಸ್ವ ಕಲಿಕೆಗೆ ಮತ್ತು ಬೋಧನೆಗೂ ಸಹಾಯಕವಾಗುತ್ತಿದೆ
ಸಿ.ಎಸ್.ಗೀತಾ,
ಅತಿಥಿ ಉಪನ್ಯಾಸಕಿ, ಬೆಂವಿವಿ

...ುದ್ಧ ಎಫ್‌ಐಆರ್

...ೀಡಿದ ನಟ ಪ್ರಥಮ್

ಪ್ರಥಮ್

...ಾಕುತ್ತಿದ್ದಾರೆ. ...ಕಾರಣ. ...ಅವರು ತಮ್ಮ ...ಕೋರಿದರು. ...ಕ್ಕೆ ಬೆಂಗಳೂರು ...ತೆರಳುತ್ತಿದ್ದೇನೆ. ...ಂದರು. ...ದರ ಆಹ್ವಾನದ

ಮೇರೆಗೆ ಜುಲೈ 22ರಂದು ದೊಡ್ಡಬಳ್ಳಾಪುರದ ಯಲ್ಲಮ್ಮ ದೇವಸ್ಥಾನಕ್ಕೆ ತೆರಳಿದ್ದೆ. ಪೂಜೆ ಮುಗಿಸಿಕೊಂಡು ವಾಪಸ್ ಬರುವಾಗ ಯಶಸ್ವಿ, ಬೇಕರಿ ರಘು ಮತ್ತಿತರರು ನನ್ನ ಕಾರನ್ನು ಸುತ್ತುವರಿದು, ಅಜ್ಞಾತ ಸ್ಥಳಕ್ಕೆ ಕರೆದೊಯ್ದರು. ನಮ್ಮ ಬಾಸ್ ಬಗ್ಗೆ ಮಾತನಾಡುತ್ತೀಯಾ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಡ್ರ್ಯಾಗರ್ ಹಾಗೂ ಚಾಕು ತೋರಿಸಿ ಚುಚ್ಚಲು ಯತ್ನಿಸಿದ್ದರು. ಬಹಳ ಉಪಾಯದಿಂದ ನಾನು ಪ್ರಾಣ ಉಳಿಸಿಕೊಂಡು ಬಂದೆ' ಎಂದು ಪ್ರಥಮ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ದರ್ಶನ್ ಅವರ ಅಧಿಕೃತ ಫ್ಯಾನ್ ಪೇಜ್‌ಗಳಾದ ಡಿ ಡೈನಾಸ್ಟಿ, ಡಿ ಕಿಂಗ್‌ಡಮ್, ಡಿ ಯೂನಿವರ್ಸ್ ಹಾಗೂ ಡೆವಿಲ್ ಕಿಂಗ್‌ಡಮ್ ಜತೆಗೆ 500ಕ್ಕೂ ಹೆಚ್ಚು ಪೇಜ್‌ಗಳಿಂದ ತೇಜೋವಧೆ ಮಾಡಲಾಗುತ್ತಿದೆ' ಎಂದು ದೂರಿನ ಪ್ರತಿಯಲ್ಲಿ ಉಲ್ಲೇಖಿಸಿದ್ದಾರೆ.

ಇದರ ಬೆನ್ನಲ್ಲೇ ತಮ್ಮ 'ಎಕ್ಸ್' ...ಾತೆಯಲ್ಲಿ ಪೋಸ್ಟ್ ಮಾಡಿದ್ದ ರಮ್ಯಾ, ...ಾರತದ ಸಾಮಾನ್ಯ ಜನರಿಗೆ ಸುಪ್ರೀಂ ...ೋರ್ಟ್ ಭರವಸೆಯ ಕಿರಣ ಇದ್ದಂತೆ. ...ೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ...ಗಲಿದೆ ಎನ್ನುವ ನಿರೀಕ್ಷೆಯಲ್ಲಿ' ಎಂದು ಅದರಲ್ಲಿ ಉಲ್ಲೇಖಿಸಿದ್ದರು. ಈ ಪೋಸ್ಟ್ ಬಳಿಕ ರಮ್ಯಾ ಅವರ ಇನ್‌ಸ್ಟಾಗ್ರಾಂ ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿದ್ದವು. ಸಂದೇಶಗಳ ಸ್ಕ್ರೀನ್ ಶಾಟ್ ಅನ್ನು ರಮ್ಯಾ ತೆಗೆದುಕೊಂಡು ಪೊಲೀಸರಿಗೆ ದೂರು ನೀಡಿದ್ದಾರೆ.

ಮಂತ್ರಾಲಯದ ಹುಂಡಿ ಎಣಿಕೆ ₹5.46 ಕೋಟಿ ಕಾಣಿಕೆ ಸಂಗ್ರಹ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಂಗಳವಾರ ಹುಂಡಿ ತೆರೆದು, ಕಾಣಿಕೆ ಎಣಿಸಲಾಯಿತು. ಒಟ್ಟು ₹5.46 ಕೋಟಿ ನಗದು, ಚಿನ್ನಾಭರಣ ಕಾಣಿಕೆ ಬಂದಿದೆ.

35 ದಿನಗಳಲ್ಲಿ ₹5,30,92,555 ನಗದು, ₹15,14,000 ಮೊತ್ತದ ನಾಣ್ಯಗಳು ಸೇರಿ ₹5,46,06,555 ನಗದು; 127 ಗ್ರಾಂ ಚಿನ್ನ, 1,820 ಗ್ರಾಂ ಬೆಳ್ಳಿ ಕಾಣಿಕೆ ಬಂದಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

Basaveshwara Medical College and Hospital BMCH
N.H.48, Bypass road, K.H.B Colony, Chitradurga- 577501
Date: 30.07.2025

TENDER NOTICE FOR PHARMACY OUTSOURCING SERVICES

The organization invites sealed proposals from qualified and experienced service providers for Pharmacy Outsourcing Services. The selected vendor will be responsible for the complete management of pharmacy operations, including procurement, storage and dispensing, staffing, and regulatory compliance.
Location of Work: **Basaveshwara Medical College and Hospital, N.H 48, Bypass road, K.H.B Colony, Chitradurga- 577501**
Pre-Bid Meeting Date: **11.08.2025 at 11:30AM.**
Last Date for Submission of Bids: **14.08.2025**
Opening of Bids: **16.08.2025 at 11:00AM.** Place: **S.J.M Vidyapeetha office, Sri Murugha Math Chitradurga- 577501.**
Bid Submission Details: Bids must be submitted in a sealed envelope marked **"Tender for Pharmacy Outsourcing Services"**, with the bidder's details. All tenders should be addressed to: Medical Superintendent, Basaveshwara Medical College & Hospital, Chitradurga.
Eligibility Criteria for Bidder
(1) Bidder's should have experience of running pharmacies in at least 2 medical colleges and 20 private hospitals.
(2) Annual turnover of S.J.M Pharmacy: approximately Rs.18 Crore.
(3) Exit clause is 6 months notice with no pending financial obligations at the time of exit from either side.
(4) All taxes to be paid in time and any fine received regarding same is not to be passed on to BMCH.
(5) Caution deposit is Rs.2 Crore.
(6) Earnest money deposit (EMD): 7,50,000/-(Returned within 15 days for unsuccessful bidders).
(7) Bid is w.r.t. profit sharing highest profit provider to our institution will be declared as succesful bidder.
(8) Existing software is to the used for all financial transactions i.e for all purchases & sales.
(9) All medicines for government scheme patients and free patients to be billed at 1% profit margin.
(10) Details of GST registration working team, financial stability, work executed, IT returns for three years, Firm registration copy have be enclosed in the **ELIGIBILITY CRITERIA** envelope.
(11) Supporting documents for claiming the eligibility criteria has to furnished in a separate envelope marked **ELIGIBILITY CRITERIA.**
Contact for Queries: 7204749463, Email: bmchstore2022@gmail.com

'ಕರೀಂಖಾನ್ ಹೆಸರಲ್ಲಿ ಪ್ರಶಸ್ತಿ ಸ್ಥಾಪಿಸಿ'

ರಾಜ್ಯ ಸರ್ಕಾರಕ್ಕೆ ಜಾಣಗೆರೆ ವೆಂಕಟರಾಮಯ್ಯ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾನಪದ ಕಲೆ, ಸಾಹಿತ್ಯದ ಉಳಿವಿಗಾಗಿ ಶ್ರಮಿಸಿದ ಜಾನಪದ ತಜ್ಞ ಎಸ್.ಕೆ. ಕರೀಂಖಾನ್ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಬೇಕು' ಎಂದು ಕನ್ನಡ ಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ' ಸರಣಿ ಕಾರ್ಯಕ್ರಮದಲ್ಲಿ ಕರೀಂಖಾನ್ ಅವರ ಬಗ್ಗೆ ಉಪನ್ಯಾಸ ನೀಡಿದರು.

'ಎಲ್ಲ ಸಾಹಿತ್ಯಕ್ಕೆ ಮೂಲ ಬೇರು ಜಾನಪದ ಸಾಹಿತ್ಯ. ಜಾನಪದ ಸಾಹಿತ್ಯ ಮತ್ತು ಕಲೆಗೆ ಕರೀಂಖಾನ್ ಗೌರವ ತಂದುಕೊಟ್ಟಿದ್ದಾರೆ. ಸಾಗರ ತಾಲ್ಲೂಕಿನಲ್ಲಿ 5 ಸಾವಿರ ಅಡಿ ಎತ್ತರದಲ್ಲಿರುವ ಮೇಘಾನೆ ಎಂಬ ಗ್ರಾಮದಲ್ಲಿ ಕ್ಷೇತ್ರ ಕಾರ್ಯ ಮಾಡಿ, ಅಲ್ಲಿನ ಸಂಸ್ಕೃತಿಯ ಬಗ್ಗೆ ಚಿತ್ರೀಕರಣ ಮಾಡಿದ್ದಾರೆ. ಅವರು ಈ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಜಾನಪದ ಕಲೆಯನ್ನು ರಕ್ಷಣೆ ಮಾಡಿರುವ ಅವರ ಹೆಸರಿನಲ್ಲಿ ಸರ್ಕಾರವು ಪ್ರಶಸ್ತಿ ಸ್ಥಾಪಿಸಿ, ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಶ್ರಮಿಸಿದವರಿಗೆ ಆ ಪ್ರಶಸ್ತಿ ನೀಡಬೇಕು. ಈ ಬಗ್ಗೆ ಸರ್ಕಾರಕ್ಕೆ ಆಗ್ರಹಿಸಲು ಸಾಹಿತಿಗಳ ನಿಯೋಗವನ್ನು ಮುಖ್ಯಮಂತ್ರಿ ಅವರ ಬಳಿ ಕರೆದೊಯ್ಯಬೇಕು' ಎಂದರು.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ, 'ಅಪಾರ ಪ್ರತಿಭೆ ಹೊಂದಿದ್ದ ಕರೀಂಖಾನ್ ಅವರಿಗೆ ಸೂಕ್ತ ಗೌರವ, ಸ್ಥಾನಮಾನಗಳು ಸಿಗಲಿಲ್ಲ. ಅಜ್ಞಾತ ಕವಿಗಳ ಹಾಡುಗಳು ನಾಶವಾಗಬಾರದೆಂದು ಅವುಗಳನ್ನು ಸಂಗ್ರಹಿಸಿ, ಪ್ರಕಟಿಸಿದ್ದಾರೆ' ಎಂದು ಹೇಳಿದರು.

ಕರ್ನಾಟಕ ವಿಕಾಸರಂಗದ ಅಧ್ಯಕ್ಷ ವ.ಚ.ಚನ್ನೇಗೌಡ, 'ಉರ್ದು ಮನೆ ಮಾತಾಗಿದ್ದರೂ ಕನ್ನಡ ಮತ್ತು ಸಂಸ್ಕೃತವನ್ನು ಕರೀಂಖಾನ್ ಅವರು ಅಧ್ಯಯನ ಮಾಡಿದ್ದರು. ಹೆಚ್ಚು ವಿದ್ಯಾಭ್ಯಾಸ ಮಾಡದಿದ್ದರೂ, ಜಾನಪದ ಪ್ರಕಾರ, ಭಗವದ್ಗೀತೆ, ಭಾಗವತ, ಶಿವಪುರಾಣಗಳ ಚಾರಿತ್ರಿಕ ಸಂಗತಿಗಳನ್ನು ನಿಂತಲ್ಲಿಯೇ ಹೇಳುವಷ್ಟು ಪ್ರತಿಭಾವಂತರಾಗಿದ್ದರು' ಎಂದು ಸ್ಮರಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಹಾಗೂ ಕರೀಂಖಾನ್ ಅವರ ಕುಟುಂಬಸ್ಥರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜಾಣಗೆರೆ ವೆಂಕಟರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಮನು ಬಳಿಗಾರ್, ರಾ.ನಂ.ಚಂದ್ರಶೇಖರ, ವ.ಚ.ಚನ್ನೇಗೌಡ ಉಪಸ್ಥಿತರಿದ್ದರು

ಬನ್ನೇರುಘಟ್ಟ ಉದ್ಯಾನ: ಆ. 1ರಿಂದ ಪ್ರವೇಶ ದರ ದುಬಾರಿ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಮೃಗಾಲಯದಲ್ಲಿ ಪ್ರಸ್ತುತ ಪ್ರಾಣಿಗಳ ಪೋಷಣೆ, ಇಂಧನ ವೆಚ್ಚ ಮತ್ತು ಇತರ ಆಡಳಿತ ವೆಚ್ಚಗಳು ಹೆಚ್ಚಳವಾಗಿರುವುದರಿಂದ ಮೃಗಾಲಯದ ಪ್ರವೇಶ ಟಿಕೆಟ್ ದರಗಳನ್ನು ಪರಿಷ್ಕರಿಸಲಾಗಿದೆ.

ಪರಿಷ್ಕೃತ ದರ ಆಗಸ್ಟ್ 1ರಿಂದ ಜಾರಿಗೆ ಬರಲಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದ್ದಾರೆ.

ಮೃಗಾಲಯ ಪರಿಷ್ಕೃತ ದರ	
ವಯಸ್ಕರು	₹120
ಮಕ್ಕಳು	₹60
ಹಿರಿಯ ನಾಗರಿಕರು	₹70
ಚಿಟ್ಟೆಗಳ ಪಾರ್ಕ್ ಪ್ರವೇಶ ದರ	
ವಯಸ್ಕರು	₹50
ಮಕ್ಕಳಿಗೆ	₹30
ಹಿರಿಯ ನಾಗರಿಕರಿಗೆ	₹30
ಮೃಗಾಲಯ ಮತ್ತು ಚಿಟ್ಟೆ ಪಾರ್ಕ್ ಎರಡೂ ಸೇರಿ	
ವಯಸ್ಕರು	₹170
ಮಕ್ಕಳಿಗೆ	₹90
ಹಿರಿಯ ನಾಗರಿಕರು	₹100

ಮೈಸೂರು ರೇಸ್

ಸಟಿವರ್ ಗೆಲ್ಲುವ ನಿರೀಕ್ಷೆ

ಅಂಬಾ ವಿಲಾಸ ಪ್ಯಾಲೇಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಟಿವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಿರಾಕಲ್ ಹನಿ 10, ಕೂರ್ಗ್ ಜನರಲ್ 8, ದಿ ಏಂಜೆಲ್ ಪವರ್ 4
2ನೇ ರೇಸ್: ಬೌಂಟಿಫುಲ್ ಬ್ಯೂಟಿ 8, ಸೊರೆಂಟೊ ಸೀಕ್ರೆಟ್ 10, ವಿಕ್ಟೋರಿಯಾನೊ 7
3ನೇ ರೇಸ್: ಅನುಶ್ಶುಭ 10, ಜನ್ನತ್ 12, ಬ್ರೇಕ್ ಅವೇ 8
4ನೇ ರೇಸ್: ಆಶೀರ್ವಾದ್ 3, ನ್ಯಾಚುರಲ್ ಸ್ಪೀಡ್ 2, ಮೇರ್‌ನಾಡ್ ಬ್ಯೂಟಿ 1
5ನೇ ರೇಸ್: ಮೂನ್‌ಲೈಟ್ ಕ್ವೀನ್ 3, ಅಮೇಜಿಂಗ್ ಇಮ್ರಾರಿಫ 4, ಫಾಲ್ಕನ್ ಫ್ಯೂರಿ 10
6ನೇ ರೇಸ್: ಸಟಿವರ್ 5, ಸೀ ದಿ ಸನ್ 4, ರೈಸ್ ಎ ಬಕ್ 3
7ನೇ ರೇಸ್: ಡೆಕರಾನ್ಸ್ 3, ವಂದಿಯಾಥೇವನ್ 8, ಸಿಯೊಲ್‌ಫಾರ್ ಬುಲೆಟ್ 6
8ನೇ ರೇಸ್: ಮ್ಯಾಜಿಕಲ್ ಬೇ 1, ಸೆರ್ರಾನೊ 3, ನ್ಯಾಚುರಲ್ ಲೈಟ್ 8

ಉತ್ತಮ ಬೆಟ್: ಆಶೀರ್ವಾದ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಬುರ್ಖಾ ಗ್ಯಾಂಗ್: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುರ್ಖಾ ಧರಿಸಿ ಪ್ರಯಾಣಿಕರ ಸೋಗಿನಲ್ಲಿ ಬಸ್‌ಗಳಲ್ಲಿ ಬ್ಯಾಗ್‌ಗಳಿಂದ ಚಿನ್ನಾಭರಣ ಕಳವು ಮಾಡುತ್ತಿದ್ದ ಮೂವರು ಮಹಿಳೆಯರನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಲಬುರ್ಗಿ ಜಿಲ್ಲೆಯ ಅನು, ಪ್ರಾರ್ಥನಾ ಮತ್ತು ಪದ್ಮಾ ಅವರನ್ನು ಬಂಧಿಸಿ, ₹16 ಲಕ್ಷ ಮೌಲ್ಯದ 190 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಬಂಧನದಿಂದ ಮೂರು ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿವಾಸಿಯೊಬ್ಬರು 8ನೇ ಮೈಲಿ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ವೇಳೆ ಮೂವರು ಮಹಿಳೆಯರು ಸಹ ತಳ್ಳಿಕೊಂಡು ಹತ್ತಿದ್ದಾರೆ. ಬಸ್ ಸ್ವಲ್ಪ ದೂರ ಹೋಗುತ್ತಿದ್ದಂತೆ ಸೀಟು ಇಲ್ಲವೆಂದು ಹೇಳಿ ಇಳಿದು ಹೋಗಿದ್ದಾರೆ. ಬಸ್ ನೆಲಮಂಗಲದ ಅರಸಿನಕುಂಟೆ ಬಳಿ ಹೋಗುತ್ತಿದ್ದಾಗ ವ್ಯಾನಿಟಿ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿದ್ದ 50 ಗ್ರಾಂ ತೂಕದ ಆಭರಣ ಇರಲಿಲ್ಲ. ಮೂವರು ಮಹಿಳೆಯರ ಮೇಲೆ ಅನುಮಾನ ವ್ಯಕ್ತಪಡಿಸಿ ಮಹಿಳೆ ಪೊಲೀಸರಿಗೆ ದೂರು ನೀಡಿದ್ದರು.

ಪೊಲೀಸರು, ಬಾತ್ಮಿದಾರರ ಮಾಹಿತಿ ಆಧರಿಸಿ 8ನೇ ಮೈಲಿ ಬಸ್ ನಿಲ್ದಾಣ ಬಳಿ ಮೂವರು ಬುರ್ಖಾಧಾರಿ ಮಹಿಳೆಯರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಮಾಡಿರುವುದಾಗಿ ಒಪ್ಪಿಕೊಂಡರು. ಇದೇ ರೀತಿ ಪೀಣ್ಯದಲ್ಲಿ ಮೂರು ಕಡೆ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾರೆ. ಆರೋಪಿಗಳು ನೀಡಿದ ಮಾಹಿತಿ ಆಧರಿಸಿ ಯಶವಂತಪುರ ರೈಲ್ವೆ ಹಳಿ ಬಳಿಯ ಶೆಡ್‌ನಲ್ಲಿ ಬಚ್ಚಿಟ್ಟಿದ್ದ 190 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಂಚಾರ ದಟ್ಟಣೆ: ಬುಧವಾರ ವರ್ಕ್ ಫ್ರಂ ಹೋಂ

ನಿರ್ಧಾರ ಕೈಗೊಳ್ಳದ ಐ.ಟಿ ಕಂಪನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆ ತಡೆಯುವ ನಿಟ್ಟಿನಲ್ಲಿ ಐ.ಟಿ ಕಂಪನಿಗಳ ನೌಕರರಿಗೆ ಪ್ರತಿ ಬುಧವಾರ ವರ್ಕ್ ಫ್ರಂ ಹೋಂಗೆ ಅವಕಾಶ ಹಾಗೂ ಕೆಲಸದ ಅವಧಿಯಲ್ಲಿ ಬದಲಾವಣೆ ಮಾಡಲು ಸಂಚಾರ ಪೊಲೀಸರು ಮತ್ತು ಬಿಎಂಟಿಸಿ ನೀಡಿರುವ ಸಲಹೆ ಬಗ್ಗೆ ಐ.ಟಿ ಕಂಪನಿಗಳು ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಟೆಕ್ ಕಾರಿಡಾರ್‌ನಲ್ಲಿ ದಟ್ಟಣೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಮನ್ವಯ ಸಭೆಯಲ್ಲಿ ಈ ಪ್ರಸ್ತಾವ ಚರ್ಚೆಗೆ ಬಂದಿತ್ತು.

ಬಿಬಿಎಂಪಿ ವಲಯ ಆಯುಕ್ತರು, ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ, ಗ್ರೇಟರ್ ಬೆಂಗಳೂರು ಐಟಿ ಆ್ಯಂಡ್ ಕಂಪನೀಸ್ ಅಸೋಸಿಯೇಷನ್ (ಜಿಬಿಐಟಿಎ) ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಐ.ಟಿ ಕಂಪನಿಗಳಿಗೆ ಕೆಲವು ಸಲಹೆ ನೀಡಿದ್ದ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ, 'ಐ.ಟಿ ಕಂಪನಿಗಳು ಅತಿ ಹೆಚ್ಚು ಇರುವ ಸಿಲ್ಕ್‌ಬೋರ್ಡ್‌-ಕೆ.ಆರ್.ಪುರಂ ವರೆಗಿನ ರಸ್ತೆಯಲ್ಲಿ ಗಂಟೆಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಇದೆ. ಹೊರವರ್ತುಲ ರಸ್ತೆಯಲ್ಲಿ ಬೆಳಿಗ್ಗೆ 9 ರಿಂದ 10ರ ದಟ್ಟಣೆ ಅವಧಿಯಲ್ಲಿ ವಾಹನ ಸಂಚಾರ ಹೆಚ್ಚಿರುತ್ತದೆ. ಆದ್ದರಿಂದ ಕೆಲಸದ ಅವಧಿಯನ್ನು ಬೆಳಿಗ್ಗೆ 7.30 ರಿಂದಲೇ ನಿಗದಿಪಡಿಸಬೇಕು. ವಾರದ ಮಧ್ಯದ ಅವಧಿಯಲ್ಲಿ ದಟ್ಟಣೆ ಹೆಚ್ಚಿರುವುದರಿಂದ ಬುಧವಾರ ವರ್ಕ್ ಫ್ರಂ ಹೋಂಗೆ ಅವಕಾಶ ಮಾಡಿಕೊಡಬೇಕು' ಎಂದು ಹೇಳಿದ್ದರು.

ಟೆಕ್ ಪಾರ್ಕ್‌ಗಳಿಗೆ ಸಂಪರ್ಕ ಕಲ್ಪಿಸಲು ಪೂರಕವಾಗುವಂತೆ ಎ.ಸಿ ಬಸ್ ಸೇವೆ ಒದಗಿಸುವುದಾಗಿ ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಜಿಬಿಐಟಿಎ ಉಪಾಧ್ಯಕ್ಷ ಗಿರೀಶ್, 'ಸಂಚಾರ ದಟ್ಟಣೆಗೆ ಪರಿಹಾರ ಕಂಡುಕೊಳ್ಳಲೇಬೇಕು. ಕೇವಲ ಬುಧವಾರ ವರ್ಕ್ ಫ್ರಂ ಹೋಂ ಮಾಡಿದರೆ ಉಳಿದ ದಿನಗಳಲ್ಲಿ ಸಂಚಾರ ಸಮಸ್ಯೆ ಇರುವುದಿಲ್ಲವೇ? ಇದಕ್ಕೆ ಎಲ್ಲಾ ಕಂಪನಿಗಳು ಒಪ್ಪಿಕೊಳ್ಳುವುದು ಕಷ್ಟ. ಕೆಲಸದ ಅವಧಿಯನ್ನು ಬೆಳಿಗ್ಗೆ 8 ರಿಂದ 4 ಹಾಗೂ 11ರಿಂದ 7ರವರೆಗೆ ನಿಗದಿ ಮಾಡಬಹುದು.

ಕಂಪನಿಗಳು ಪೇ ಆ್ಯಂಡ್ ಪಾರ್ಕಿಂಗ್ ಜಾರಿಗೊಳಿಸಿದರೆ ಉದ್ಯೋಗಿಗಳು ಕಾರು ತರುವುದನ್ನು ನಿಲ್ಲಿಸಿ, ಸಾರ್ವಜನಿಕ ಸಾರಿಗೆ ಸೇವೆ ಬಳಸುತ್ತಾರೆ. ಪರ್ಯಾಯವಾಗಿ ಕ್ಯಾಬ್ ವ್ಯವಸ್ಥೆ ಮಾಡಬಹುದು. ಕೆಲವು ಕಂಪನಿಗಳು ಈಗಾಗಲೇ ಪೇ ಆ್ಯಂಡ್ ಪಾರ್ಕಿಂಗ್ ಜಾರಿಗೊಳಿಸಿವೆ. ಕಾರ್ ಪೂಲಿಂಗ್ ಅನ್ನು ಪ್ರೋತ್ಸಾಹಿಸಬೇಕು. ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು' ಎಂದು ಹೇಳಿದರು.

ಕನ್ನಡ ಸಂಘರ್ಷ ಸಮಿತಿಯ ಕಾರ್ಯಾಧ್ಯಕ್ಷ ಡಾ.ಕೋಂ.ವೆಂ. ರಾಮಕೃಷ್ಣೇಗೌಡ, ಹಲಸೂರಿನ ರಸ್ತೆಯೊಂದಕ್ಕೆ ಕರೀಂಖಾನ್ ಹೆಸರಿಡಲು ಬಿಬಿಎಂಪಿ 2006ರಲ್ಲಿ ನಿರ್ಧಾರ ಕೈಗೊಂಡಿದೆ.

ಆದರೆ, ಇತ್ತೀಚೆಗೆ ಚುನಾಯಿತರಾದ ಬಿಬಿಎಂಪಿ ಸದಸ್ಯರೊಬ್ಬರು ಅದನ್ನು ಬದಲಿಸಿ ಮಾಜಿ ಪ್ರಧಾನಿ ವಾಜಪೇಯಿ ಹೆಸರು ಇಡಲು ಯತ್ನಿಸುತ್ತಿದ್ದಾರೆ. ಇದಕ್ಕೆ ಆಯುಕ್ತರು ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಸಮಿತಿಯ ಅಧ್ಯಕ್ಷ ರಾಮಣ್ಣ ಕೋಡಿಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎಂ.ಪ್ರಕಾಶ್‌ಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

ಅಜಿತ್ ಪ್ರಸಾದ್ ಅಧಿಕಾರ ಸ್ವೀಕಾರ

ಬೆಂಗಳೂರು, ಡಿ.18- ಜಯಕರ್ನಾಟಕ ಸಂಘಟನೆಯ ಯುವ ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿರುವ ಬೆಂಗಳೂರು ನಾಗರಿಕರ ಕನ್ನಡ ವೇದಿಕೆ ಅಧ್ಯಕ್ಷ ಅಜಿತ್ ಪ್ರಸಾದ್ ಇಂದು ಅಧಿಕಾರ ಸ್ವೀಕರಿಸಿದರು.

ನಗರದ ಬಿಬಿಎಂಪಿ ಕಚೇರಿ ಮುಂಭಾಗ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಆನಂತರ ಕಾರ್ಯಕರ್ತರೊಂದಿಗೆ ಬೃಹತ್ ಮೆರವಣಿಗೆ ಮೂಲಕ ಬಿಡದಿ ತಲುಪಿದ ಅವರು, ಯುವ ಘಟಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಜಯಕರ್ನಾಟಕ ಸಂಸ್ಥಾಪಕ ಅಧ್ಯಕ್ಷ ಮುತ್ತಪ್ಪ ರೈ ಅವರ ಮಾರ್ಗದರ್ಶನದಂತೆ ಪ್ರಸಾದ್ ಅವರನ್ನು ನೇಮಿಸಲಾಗಿದ್ದು, ರಾಜ್ಯಾಧ್ಯಕ್ಷ ಕುಮಾರಸ್ವಾಮಿ, ಬೆಂಗಳೂರು ನಗರಾಧ್ಯಕ್ಷ ಜಗದೀಶ್‌ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಶೈಲ ಚಂಗಪ್ಪ, ಕೆ.ಎಂ.ಪ್ರದೀಪ್, ಜಿ.ವೆಂಕಟಾಚಲಪತಿ ಮತ್ತಿತರರು ಪಾಲ್ಗೊಂಡಿದ್ದರು.

ನಗರದಲ್ಲಿಂದು ಕಣಗಾಲ್ ನೃತ್ಯಾಲಯ ಟ್ರಸ್ಟ್ ಪ್ರದರ್ಶಿಸಿದ ಕಣಗಾಲ್ ಕಾಲಕೋಶ ಸಾಕ್ಷ್ಯಚಿತ್ರವನ್ನು ಸಾಹಿತಿ ಪ್ರೊ.ಜಿ.ವೆಂಕಟಸುಬ್ಬಯ್ಯ, ಹಿರಿಯ ರಂಗಕರ್ಮಿ ಮಾಸ್ಟರ್ ಹಿರಣ್ಣಯ್ಯ, ಚಿತ್ರ ನಿರ್ದೇಶಕ ರಾಜೇಂದ್ರಸಿಂಗ್ ಬಾಬು, ಚಿತ್ರರಂಗದ ಇತರ ಗಣ್ಯರು ಪಾಲ್ಗೊಂಡಿದ್ದರು.



ನಗರದ ಮಿಥಿಕ್ ಸೊಸೈಟಿಯಲ್ಲಿ ದೇವುಡು ಪ್ರತಿಷ್ಠಾನದ ವತಿಯಿಂದ ಪ್ರೊ.ನಂಜುಂಡಶಾಸ್ತ್ರಿಯವರು ಮಹಾ ಬ್ರಾಹ್ಮಣ ಆಂಗ್ಲಕೃತಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಿರುವ ಪುಸ್ತಕವನ್ನು ಹೈಕೋರ್ಟ್ ನ್ಯಾಯಮೂರ್ತಿ ಶೈಲೇಂದ್ರಕುಮಾರ್ ಬಿಡುಗಡೆಗೊಳಿಸಿದರು. ದೂರದರ್ಶನ ಕೇಂದ್ರದ ನಿರ್ದೇಶಕ ಮಹೇಶ್ ಜೋಷಿ, ಪ್ರತಿಷ್ಠಾನದ ಅಧ್ಯಕ್ಷ ಗಂಗಾಧರ್ ದೇವುಡು ಉಪಸ್ಥಿತರಿದ್ದರು.

ಜ.21ರಂದು ಕಿಸಾನ್ ಬಚಾವೋ ಆಂದೋಲನ

ಬೆಂಗಳೂರು, ಡಿ.18- ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ಮೀನಾಮೇಷ ಎಣಿಸುತ್ತಿರುವ ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ ಬರುವ ಜನವರಿ 21ರಂದು ದೇಶವ್ಯಾಪಿ ಆಂದೋಲನ ನಡೆಸಲಾಗುವುದೆಂದು ಬಿಜೆಪಿ ರಾಷ್ಟ್ರೀಯ ಕಿಸಾನ್ ಘಟಕದ ಅಧ್ಯಕ್ಷ ಓಂ ಪ್ರಕಾಶ್ ದಿನಕರ್ ಇಂದಿಲ್ಲಿ ತಿಳಿಸಿದರು.

ಪಕ್ಷದ ಕಚೇರಿಯಲ್ಲಿಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ ಒಂದು ವರ್ಷದ ಹಿಂದೆಯೇ ಸ್ವಾಮಿನಾಥನ್ ಆಯೋಗದ ವರದಿ ಸಲ್ಲಿಕೆಯಾಗಿದ್ದವು. ಇದನ್ನು ಜಾರಿಗೊಳಿಸಲು ಸರ್ಕಾರ ಮೀನಾಮೇಷ ಎಣಿಸುತ್ತಿದೆ. ದೇಶದ ಆರ್ಥಿಕ ಯೋಜನೆಗಳು ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಲ್ಲ (ಕೈಗಾರಿಕಾ, ತಂತ್ರಜ್ಞಾನ ಇತರೆ) ಕ್ಷೇತ್ರಗಳು ಅಭಿವೃದ್ಧಿ ಹೊಂದಿದ್ದರೂ ಕೃಷಿ ಕ್ಷೇತ್ರ ಮಾತ್ರ ಗಣನೀಯವಾಗಿ ಕುಸಿತ ಕಾಣುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದ ಆರ್ಥಿಕ ಯೋಜನೆ ಹಾಗೂ ರೈತರ ಬಗೆಗಿನ ನಿರ್ಲಕ್ಷ್ಯ ಧೋರಣೆಯೇ ಕಾರಣ ಎಂದು ಆರೋಪಿಸಿದರು.

ಯಾವ ಸಂದರ್ಭದಲ್ಲೂ ಸಂಭವಿಸದ ಅನಾಹುತಗಳು ಕೃಷಿ ಕ್ಷೇತ್ರದಲ್ಲಿ ನಡೆಯುತ್ತಿವೆ. ಸಾವಿರಾರು ಮಂದಿ ರೈತರು ಪ್ರತಿದಿನ ಒಂದಲ್ಲ ಒಂದು ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆದರೂ ಆಹಾರ ಭದ್ರತೆ, ರೈತರ ಅಭ್ಯುದಯಕ್ಕೆ ಸರ್ಕಾರ ಮಾತ್ರ ಯಾವುದೇ ಪ್ರಾಮಾಣಿಕ ಕೆಲಸ ಮಾಡದೆ ಕೇವಲ ಚೆಲ್ಲಾಟವಾಡುತ್ತಿದೆ ಎಂದು ದೂಷಿಸಿದರು. ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಆಹಾರ ಭದ್ರತೆ ನೀತಿ ಕೇವಲ ಚುನಾವಣಾ ಗಿಮಿಕ್. ಇದರಿಂದ ಯಾವುದೇ ಪ್ರಯೋಜನವಿಲ್ಲ, ಕೂಡಲೇ ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಗೆ ತರಬೇಕೆಂದು ಬಿಜೆಪಿ ಒತ್ತಾಯಿಸುತ್ತದೆ ಎಂದರು.

ಕಳೆದೆರಡು ದಿನಗಳಿಂದ ಇಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕೈಗೊಂಡ ನಿರ್ಣಯಗಳಲ್ಲಿ ಇದೇ ಮೊದಲ ಪ್ರಾಮುಖ್ಯತೆ ಪಡೆದ ವಿಷಯವಾಗಿದೆ ಎಂದರು.

ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇದರ ಬಗ್ಗೆ ಗಮನ ಹರಿಸದ ಸರ್ಕಾರ ಲಕ್ಷಾಂತರ ಕ್ವಿಂಟಾಲ್ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಕೃಷಿ ಮಾರುಕಟ್ಟೆ ವೈಪರೀತ್ಯದಿಂದಾಗಿ ರೈತನಿಗೆ ಸರಿಯಾದ ಸಿಗುತ್ತಿಲ್ಲ ಎಂದರು.

ಸಿಎಸಿಪಿ (ದರ ನಿಗದಿ) ಮಾತನ್ನು ಸಹ ಸರ್ಕಾರ ಕೇಳದೆ ಬೆಂಬಲ ಬೆಲೆ ಘೋಷಿಸುತ್ತಿದೆ. ಆದ್ದರಿಂದಾಗಿ ಈ ಕೇಂದ್ರವನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಬೇಕು ಎಂದರು. ಕನಿಷ್ಠ ವರಮಾನ ಪ್ರತಿಯೊಬ್ಬ ರೈತನಿಗೂ ಸಿಕ್ಕಾಗ ಮಾತ್ರ ಆತ ಸ್ವಾವಲಂಬಿಯಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಲು ಸಾಧ್ಯ.

ಆದ್ದರಿಂದ ಇದರ ಬಗ್ಗೆ ಹೆಚ್ಚು ಒತ್ತು ನೀಡಬೇಕಾಗಿದೆ ಎಂದರು ಕೇಂದ್ರವನ್ನು ಒತ್ತಾಯಿಸಿದರು. ಇದಲ್ಲದೆ, ಪ್ರಾಕೃತಿಕ ವೈಪರೀತ್ಯ, ಬೆಳೆ ಹಾನಿ ಮತ್ತಿತರ ಸಂದರ್ಭಗಳಲ್ಲಿ ರೈತರ ಪ್ರತಿ ಎಕರೆಗೆ ವಿಮಾ ಪರಿಹಾರವನ್ನು 10 ಸಾವಿರಕ್ಕೆ ಏರಿಸಬೇಕು. ಹವಾಮಾನಕ್ಕೆ ಅನುಗುಣವಾಗಿ ಆಮದು-ರಫ್ತು ನೀತಿಯನ್ನು ಜಾರಿ- ಸೇರಿದಂತೆ ಹಲವು ನಿರ್ಣಯಗಳನ್ನು ರಾಷ್ಟ್ರೀಯ ಕಾರ್ಯಕಾರಿಣಿ ತೆಗೆದುಕೊಂಡಿದೆ ಎಂದರು.

ಇಂದಿಗೂ ಸಹ ಸರಿಯಾದ ಸೂರಿಲ್ಲದೆ ತುತ್ತು ಅನ್ನಕ್ಕಾಗಿ ಪರಿತಪಿಸುತ್ತಿರುವ ರೈತ ಕುಟುಂಬಗಳಿವೆ. ಇದರ ಬಗ್ಗೆಯೂ ಬೆಳಕು ಚೆಲ್ಲಿ ಆಹಾರ ಉತ್ಪಾದನೆಗೆ ಒತ್ತು ಕೊಟ್ಟು ರೈತರನ್ನು ರಕ್ಷಿಸುವ ಸಲುವಾಗಿ ಬರುವ ಜನವರಿ 21ರಂದು ದೇಶದ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಕಿಸಾನ್ ಬಚಾವೋ ದಿವಸ್ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕಿಸಾನ್ ರಾಜ್ಯ ಘಟಕದ ಅಧ್ಯಕ್ಷ ಶರಣಪ್ಪಗೌಡ, ರಾಷ್ಟ್ರೀಯ ಉಪಾಧ್ಯಕ್ಷ ಈಶ್ವರ್‌ಚಂದ್ರ ಹೊಸಮನಿ, ಸಂಚಾಲಕ ಸತ್ಯಾಮ್ ಮಲ್ಲಿಕ್ ಮತ್ತಿತರರು ಪಾಲ್ಗೊಂಡಿದ್ದರು.

ಬಸ್ ಉರುಳಿಬಿದ್ದು 12 ಸಾವು

ಉದಾಂಸಿಂಗ್‌ನಗರ್ (ಉ.ಪ್ರದೇಶ), ಡಿ.18- ಭಾರೀ ಮಂಜಿನಿಂದಾಗಿ ಪ್ರಯಾಣಿಕರಿದ್ದ ಬಸ್ ನದಿಗೆ ಉರುಳಿಬಿದ್ದು 12 ಮಂದಿ ಮೃತಪಟ್ಟು 20ಕ್ಕೂ ಹೆಚ್ಚು ಜನ ಗಾಯಗೊಂಡಿರುವ ಘಟನೆ ಉತ್ತರ ಪ್ರದೇಶದ ಉದಾಂಸಿಂಗ್‌ನಗರದಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ಗದಾರ್‌ಪುರ್ ಪ್ರದೇಶದಲ್ಲಿ ನಹಲ್ ನದಿಗೆ ಬಸ್ ಉರುಳಿ ಬಿದ್ದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ.

ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾಪಸ್ಸಾಗುತ್ತಿದ್ದ ವೇಳೆ ಭಾರೀ ಮಂಜಿನಿಂದಾಗಿ ಬಸ್ ಹಾದಿ ತಪ್ಪಿ ನದಿಗೆ ಉರುಳಿಬಿದ್ದ ಪರಿಣಾಮ 12 ಜನ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡಿರುವ 25 ಮಂದಿ ಪ್ರಯಾಣಿಕರನ್ನು ರುದ್ರಾಪುರ್ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಶಾಲಾ ಕಟ್ಟಡ ಧ್ವಂಸ

ಪಾಟ್ನಾ, ಡಿ.18- ಶಸ್ತ್ರಸಜ್ಜಿತ ಮಾವೋವಾದಿಗಳು ಎರಡು ಅಂತಸ್ತಿನ ಶಾಲಾ ಕಟ್ಟಡಗಳನ್ನು ಧ್ವಂಸಗೊಳಿಸಿರುವ ಘಟನೆ ಬಿಹಾರದ ಜಾಮೂಯಿ ಜಿಲ್ಲೆಯ ಚೆನಾಗ್‌ಬದ್ ಗ್ರಾಮದಲ್ಲಿ ನಡೆದಿದೆ.

ಹಣಕ್ಕಾಗಿ ಗುತ್ತಿಗೆದಾರರು ಕಟ್ಟುತ್ತಿದ್ದ ಈ ಎರಡು ಅಂತಸ್ತಿನ ಕಟ್ಟಡವನ್ನು 60 ಶಸ್ತ್ರಸಜ್ಜಿತ ಉಗ್ರರು ಎರಡು ಬಾಂಬ್‌ಗಳಿಂದ ಧ್ವಂಸಗೊಳಿಸಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಸಿಇಒ ಕಚೇರಿಗೆ ವಾಸ್ತು ದೋಷ!

ರಾಯಚೂರು, ಡಿ.18- ಜಿಲ್ಲೆಯಲ್ಲಿ ಬರ ತಾಂಡವವಾಡುತ್ತಿದ್ದು, ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ನೂತನ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮನೋಜ್ ಕುಮಾರ್ ಜೈನ್ ವಾಸ್ತು ಬೆನ್ನತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ಇಲ್ಲಿನ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಮನೋಜ್‌ಕುಮಾರ್ ಜೈನ್ ಇತ್ತೀಚೆಗಷ್ಟೆ ಅಧಿಕಾರ ಸ್ವೀಕರಿಸಿದರು.

ಕಚೇರಿಗೆ ಬರುತ್ತಿದ್ದಂತೆ ಅದೇನಾಯ್ತೋ ಏನೋ ಕುಳಿತುಕೊಳ್ಳುವ ಕಚೇರಿಯ ದಿಕ್ಕನ್ನೇ ಬದಲಾಯಿಸಿದ್ದಾರೆ. ಇಷ್ಟೇ ಅಲ್ಲದೆ ತಾವು ವಾಸ ಮಾಡುವ ಬಂಗಲೆಯನ್ನು ನವೀಕರಿಸಲು ಮುಂದಾಗಿದ್ದಾರೆ.

ಮನೆಯ ಕಾಂಪೌಂಡ್ ಕೆಡವಿ ನೂತನವಾಗಿ ನಿರ್ಮಿಸಿರುವ ಅವರು, ಪ್ರವೇಶದ್ವಾರದ ದಿಕ್ಕನ್ನು ಬದಲಾಯಿಸಿದ್ದಾರೆ. ಇದಕ್ಕಾಗಿ ಲಕ್ಷಾಂತರ ಹಣ ಖರ್ಚು ಮಾಡುತ್ತಿದ್ದಾರೆಂಬ ಸುದ್ದಿ ಎಲ್ಲೆಡೆ ಕೇಳಿಬರುತ್ತಿದೆ.

ಮನೋಜ್‌ಕುಮಾರ್ ಜೈನ್ ಅವರ ಈ ಘನಕಾರ್ಯಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗುತ್ತಿದೆ. ಏಕೆಂದರೆ, ಜಿಲ್ಲೆಯಲ್ಲಿ ಬರ ತಾಂಡವವಾಡುತ್ತಿದೆ. ಕುಡಿಯುವ ನೀರಿಗೆ ಎಲ್ಲೆಡೆ ಹಾಹಾಕಾರ ಉಂಟಾಗಿದೆ. ಒಂದು ಕೊಡ ನೀರಿಗಾಗಿ ಜನರು ಕಿಲೋಮೀಟರ್‌ಗಟ್ಟಲೆ ಅಲೆಯುತ್ತಿದ್ದಾರೆ. ಜಾನುವಾರುಗಳಿಗೂ ಕುಡಿಯಲು ನೀರು ಸಿಗುತ್ತಿಲ್ಲ, ಮೇವು ಕೂಡ ಅಷ್ಟಕ್ಕಷ್ಟೇ ಎಂಬಂತಾಗಿದೆ.

ಇದರ ಬಗ್ಗೆ ಗಮನ ನೀಡಬೇಕಾದ ಸಿಇಒ ತಮ್ಮ ಕಚೇರಿ, ಮನೆ ರಿಪೇರಿಗೆ ವಿಶೇಷ ಆದ್ಯತೆ ನೀಡಿದ್ದಾರೆಂದು ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ಅದ್ಯಾವ ಜ್ಯೋತಿಷಿ ಇವರಿಗೆ ಇಂತಹ ಸಲಹೆ ಕೊಟ್ಟನೋ ಗೊತ್ತಿಲ್ಲ, ಮೇಲ್ಮಹಡಿಯಲ್ಲಿದ್ದ ಕಚೇರಿಯನ್ನು ಕೆಳ ಮಹಡಿಗೆ ಸ್ಥಳಾಂತರಿಸಿದರು. ಹೊಸ ಪೀಠೋಪಕರಣ, ಎಸಿ ಅಳವಡಿಕೆ, ತಮ್ಮ ಮನೆಯ ಬಂಗಲೆಯ ಕಾಂಪೌಂಡ್ ಗೋಡೆ ಕೆಡವಿ ಈಶಾನ್ಯ ದಿಕ್ಕಿಗೆ ಪ್ರವೇಶ ದ್ವಾರ ನಿರ್ಮಿಸಿರುವುದು ಯಾವ ಪುರುಷಾರ್ಥಕ್ಕೆ ಎಂದು ಅನೇಕರು ಪ್ರಶ್ನಿಸಿದ್ದಾರೆ.

ಲಿಂಗಸೂರು, ಸಿಂಗನೂರು, ದೇವದುರ್ಗ ಸೇರಿದಂತೆ ಮತ್ತಿತರ ಕಡೆ ಕುಡಿಯುವ ನೀರಿಗೆ ಜನ ಪರದಾಡುತ್ತಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯು ಸರಿಯಾಗಿ ಅನುಷ್ಠಾನಗೊಂಡಿಲ್ಲ, ಕೆಲಸದ ಹಣವು ಜನಪ್ರತಿನಿಧಿಗಳ ಪಾಲಾಗುತ್ತಿದೆ. ಬರದಿಂದ ಕಂಗೆಟ್ಟಿರುವ ಜನರು ಬೇರೆ ಬೇರೆ ಕಡೆ ಗುಳೆ ಹೋಗುತ್ತಿದ್ದಾರೆ.

ಸಾರ್ವಜನಿಕರ ಸಮಸ್ಯೆ ಪರಿಹರಿಸಬೇಕಾದ ಜನಪ್ರತಿನಿಧಿಗಳೂ ಸಹ ಕಂಡೂ ಕಾಣದಂತೆ ಕಣ್ಮುಚ್ಚಿ ಕುಳಿತಿದ್ದಾರೆ.

ನೂತನವಾಗಿ ಬಂದಿರುವ ಸಿಇಒ ಇದರ ಬಗ್ಗೆ ಗಮನ ಹರಿಸದೆ ಅಜ್ಜಿಗೆ ಅನ್ನದ ಚಿಂತೆಯಾದರೆ, ಮೊಮ್ಮಗಳಿಗೆ ಮದುವೆ ಚಿಂತೆ ಎಂಬಂತೆ ತಮ್ಮ ಕಚೇರಿ ನವೀಕರಣ, ವಾಸ್ತುದೋಷ ನಿವಾರಣೆ ಕಡೆ ಗಮನ ಹರಿಸಿರುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಎದುರಾಗಿದೆ.

ಬಿಪಿಸಿಸಿ ಹೆಲ್ತ್ ಕೇರ್ ನಗರದ ಬಾಲಭವನದಲ್ಲಿ ಹಮ್ಮಿಕೊಂಡಿದ್ದ ಬೇಬೀಸಡೆಬಿಟ್ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಯಲ್ಲಿ ಗೆದ್ದ ಮಕ್ಕಳಿಗೆ ಬಿಬಿಎಂಪಿ ಆಯುಕ್ತ ಶಂಕರಲಿಂಗೇಗೌಡ, ಡಾ.ಕಾಮಿನಿರಾವ್ ಪ್ರಶಸ್ತಿ ನೀಡಿದರು.

ಡಿ.21-22ರಂದು ಅಂತಾರಾಷ್ಟ್ರೀಯ
ವಿಚಾರಗೋಷ್ಠಿ

ಬೆಂಗಳೂರು, ಡಿ.18- ಭಾರತೀಯ ಅಂಕಿ-ಸಂಖ್ಯೆ ವಿದ್ಯಾಲಯದ ವತಿಯಿಂದ ಗುಣಮಟ್ಟ ಹಾಗೂ ಅವಲಂಬನೆ ತಂತ್ರಜ್ಞಾನ ಕುರಿತ ಅಂತಾರಾಷ್ಟ್ರೀಯ ವಿಚಾರಗೋಷ್ಠಿ ಡಿ.21-22ರಂದು ನಗರದ ವಿಟ್ರಿಯಾ ಹೋಟೆಲ್‌ನಲ್ಲಿ ನಡೆಯಲಿದೆ.

ಡಿ.21ರಂದು ಬೆಳಿಗ್ಗೆ 9.30ಕ್ಕೆ ಆಕ್ಲೆಂಡ್ ಯೂನಿವರ್ಸಿಟಿಯ ಮಾಹಿತಿ ತಂತ್ರಜ್ಞಾನ ಹಾಗೂ ಕಾರ್ಯನಿರ್ವಹಣೆ ವಿಭಾಗದ ಮುಖ್ಯಸ್ಥ ಪ್ರೊ.ಟಿ.ಎಸ್.ಅರ್ಧನಾರಿ ವಿಚಾರಗೋಷ್ಠಿ ಉದ್ಘಾಟಿಸಲಿದ್ದು ಖ್ಯಾತ ವಿಜ್ಞಾನಿಗಳಾದ ಪ್ರೊ.ಅಲೆಕ್ಸ್ ಡಗ್ಲಸ್, ಪ್ರೊ.ಗೋಪಿನಾಥ್ ಚಟ್ಟೋಪಾಧ್ಯಾಯ, ಪ್ರೊ.ಜೆಫ್ ವೈ.ಲೀ, ಪ್ರೊ.ವಿಲಿಯಂ ಕ್ಯೂ. ಮೀಕರ್, ಪ್ರೊ. ಶಿಹುವಾ ಕಿಯೂ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಗ್ರಾಹಕರಲ್ಲಿ ಉತ್ಪನ್ನಗಳ ಗುಣಮಟ್ಟ ಹಾಗೂ ಅವಲಂಬನೆಯ ಬಗ್ಗೆ ಅರಿವು ಮೂಡಿಸಲು ಈ ವಿಚಾರಗೋಷ್ಠಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೆಹಲಿಗೆ ಕುಡುಕರ ಕಾಟ

ನವದೆಹಲಿ, ಡಿ.18- ರಾಷ್ಟ್ರದ ರಾಜಧಾನಿ ನವದೆಹಲಿ ಯಲ್ಲಿ ದಿನದಿಂದ ದಿನಕ್ಕೆ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿ ಸಿಕ್ಕಿಬೀಳುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಇದಕ್ಕೆ ಸಾಕ್ಷೀ ಕರಿಸುವಂತೆ 2011ರಲ್ಲಿ ಸುಮಾರು 17 ಸಾವಿರ ಮದ್ಯಪಾನ ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿವೆ.

ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದ ಮದ್ಯಪಾನ ಪ್ರಕರಣಗಳು ದಾಖಲಾಗಿರುವುದು ಎಂದು ಪೊಲೀಸರು ಬಿಡುಗಡೆ ಮಾಡಿರುವ ದಾಖಲೆಗಳೇ ರುಜುವಾತುಪಡಿಸಿವೆ.

ಜನವರಿಯಿಂದ ಡಿಸೆಂಬರ್ ತಿಂಗಳವರೆಗೆ ದೆಹಲಿಯ ವಿವಿಧ ಠಾಣೆಗಳಲ್ಲಿ ಒಟ್ಟು 17 ಸಾವಿರ ಮದ್ಯಪಾನ ಮಾಡಿ ವಾಹನ ಚಾಲನೆ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 2200 ಜನರ ಲೈಸೆನ್ಸ್‌ಗಳು ರದ್ದಾಗಿದ್ದರೆ 2869 ಜನರನ್ನು ಜೈಲಿಗೆ ಕಳುಹಿಸಲಾಗಿದೆ.

ಮದ್ಯಪಾನ ಮಾಡಿ ಚಾಲನೆ ಮಾಡಿ ಸಿಕ್ಕಿಬಿದ್ದಿರುವ 5 ಸಾವಿರ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ನಾವು ಜನವರಿ ತಿಂಗಳಿನಿಂದ ಇದುವರೆಗೂ 17 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿದ್ದೇವೆ. ಕುಡಿದು ಸಂಚಾರಿ ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅನೇಕರ ಮೇಲೆ ಕ್ರಮ ಜರುಗಿಸಲಾಗಿದೆ. ನಗರದಲ್ಲಿ ಹೆಚ್ಚುತ್ತಿರುವ ಅಪಘಾತಗಳನ್ನು ತಗ್ಗಿಸಲು ಕಠಿಣ ಕ್ರಮ ಅಗತ್ಯ ಎಂದು ಜಂಟಿ ಪೊಲೀಸ್ ಆಯುಕ್ತ (ಸಂಚಾರಿ) ಸತ್ಯೇಂದ್ರ ಗಾರ್ಗ್ ಹೇಳಿದರು.

ಕೆಲವು ಪ್ರಕರಣಗಳನ್ನು ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುತ್ತಿರುವುದರಿಂದ ಅಪಘಾತಗಳ ಸಂಖ್ಯೆ ಇಳಿಮುಖವಾಗುತ್ತವೆ.

2009ರಲ್ಲಿ 12,784 ಪ್ರಕರಣಗಳನ್ನು ವಿಚಾರಣೆ ನಡೆಸಿದ್ದರೆ, 2011ರಲ್ಲಿ 16,850 ಪ್ರಕರಣಗಳು ವಿಚಾರಣೆ ನಡೆದಿವೆ. ಮದ್ಯಪಾನ ಮಾಡಿ ಚಾಲನೆ ಮಾಡುತ್ತಿರುವುದರಿಂದ ಶೇ.6ರಷ್ಟು ಅಪಘಾತಗಳ ಸಂಖ್ಯೆ ಹೆಚ್ಚಳವಾಗಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕೆಲವರು ಮದ್ಯಪಾನ ಮಾಡಿ ಸಿಕ್ಕಿಬಿದ್ದಾಗ ಕಡಿಮೆ ಪ್ರಮಾಣದ ದಂಡ ಹಾಕಿ ಬಿಟ್ಟುಬಿಡುತ್ತಾರೆಂಬ ಮನೋಭಾವನೆ ಇದೆ. ಆದರೆ, ನಾವು ಮದ್ಯಪಾನ ಮಾಡಿದವರಿಗೆ ಹೆಚ್ಚಿನ ಶಿಕ್ಷೆ ವಿಧಿಸಲು ಹಿಂದೆ-ಮುಂದೆ ನೋಡುವುದಿಲ್ಲ. ಇದರ ಬಗ್ಗೆ ಜಾಗೃತಿ ಮೂಡಬೇಕಾದ ಅಗತ್ಯವಿದೆ ಎಂದಿದ್ದಾರೆ.

ಬಿಎಸ್‌ಪಿ ಸಂತಾಪ

ಬೆಂಗಳೂರು, ಡಿ.18- ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಕೇಂದ್ರ ರೈತ ಒಕ್ಕೂಟದ ಅಧ್ಯಕ್ಷ ಬಸವರಾಜ ತಂಬಾಕೆ ಅವರ ನಿಧನಕ್ಕೆ ಬಹುಜನ ಸಮಾಜ ಪಾರ್ಟಿ ರಾಜ್ಯ ಸಮಿತಿ ಸಂತಾಪ ವ್ಯಕ್ತಪಡಿಸಿದೆ.

ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ರೈತರ ಪರ ಹಲವಾರು ಹೋರಾಟಗಳನ್ನು ಮಾಡಿದ್ದು, ಇವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಇವರ ಕುಟುಂಬಕ್ಕೆ ಭಗವಾನ್ ಬುದ್ಧ ಶಾಂತಿ ನೀಡಲೆಂದು ಬಹುಜನ ಸಮಾಜ ಪಕ್ಷದ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ಕೋರಿದ್ದಾರೆ.

ರಾಜ್ಯಾಧ್ಯಕ್ಷ ಸ್ಥಾನ ಬೇಡವೇ ಬೇಡ

ಸಾಮಾನ್ಯ ಶಾಸಕನಾಗಿ ಮುಂದುವರಿಯುವೆ: ಬಿಎಸ್‌ವೈ



ಮಂಗಳೂರು, ಡಿ.18- ನನಗೆ ಪಕ್ಷದಲ್ಲಿ ಯಾವುದೇ ಹುದ್ದೆ ಬೇಡ. ಅಧ್ಯಕ್ಷ ಸ್ಥಾನ ಹಾಗೂ ಮುಖ್ಯಮಂತ್ರಿ ಪದವಿಯನ್ನು ನಾನು ಕೊಡಿ ಎಂದು ಕೇಳಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಅಧ್ಯಕ್ಷ ಪದವಿ ಬೇಡ. ನಾನು ಸಾಮಾನ್ಯ ಶಾಸಕನಾಗಿಯೇ ಇರಲು ಇಷ್ಟಪಡುತ್ತೇನೆ ಎಂದರು. ಇನ್ನು ಸಚಿವ ಸಂಪುಟ ವಿಸ್ತರಣೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಈ ವಿಚಾರದಲ್ಲಿ ನಾನು ತಲೆ ಹಾಕುವುದಿಲ್ಲ. ಇದು ಮುಖ್ಯಮಂತ್ರಿ ಸದಾನಂದಗೌಡ ಹಾಗೂ ರಾಜ್ಯಾಧ್ಯಕ್ಷ ಕೆ.ಎಸ್.ಈಶ್ವರಪ್ಪ ಅವರಿಗೆ ಬಿಟ್ಟ ವಿಚಾರ ಎಂದರು.

ಇನ್ನು ವಿಧಾನಪರಿಷತ್ ಚುನಾವಣೆಯಲ್ಲಿ ಮುಖ್ಯಮಂತ್ರಿ ಸದಾನಂದಗೌಡ ಅವರ ಗೆಲುವು ಖಚಿತ. ಬಿಜೆಪಿಯ ಎಲ್ಲ ಶಾಸಕರು ಒಗ್ಗಟ್ಟಾಗಿದ್ದಾರೆ. ಎಲ್ಲರೂ ಅವರಿಗೆ ಮತ ಹಾಕುತ್ತಾರೆ ಎಂದರು.

ಮಾಜಿ ಸಚಿವ ಶ್ರೀರಾಮುಲು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ ಅವರ ನಡುವಣ ಜಗಳವನ್ನು ಶಮನ ಮಾಡಲು ಪ್ರಯತ್ನ ಮಾಡುವುದಾಗಿಯೂ ಯಡಿಯೂರಪ್ಪ ತಿಳಿಸಿದರು.

ಇತ್ತೀಚೆಗೆ ದೆಹಲಿಗೆ ಭೇಟಿ ನೀಡಿ ವರಿಷ್ಠರೊಂದಿಗೆ ನಡೆಸಿರುವ ಮಾತುಕತೆಗಳ ಬಗ್ಗೆ ಇಲ್ಲಸಲ್ಲದ ಊಹಾಪೋಹಗಳ ವರದಿಗಳೇ ಪ್ರಕಟವಾಗಿವೆ. ನಾನು ಯಾವುದೇ ಪದವಿ ಆಸೆಗಾಗಿ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡಿಲ್ಲ, ಒತ್ತಾಯ ಮಾಡಿಲ್ಲ. ಆದರೆ, ಯಡಿಯೂರಪ್ಪನವರಿಗೆ ಸೂಕ್ತ ಸ್ಥಾನಮಾನ ಕೊಡಬೇಕು ಎಂದು ಸಂಸದರು ಸ್ವ ಇಚ್ಛೆಯಿಂದ ಮನವಿ ಮಾಡಿದ್ದಾರೆ ಎಂದರು.

ಬಿಹಾರದಲ್ಲೂ ಗೌರ್ನರ್-ಡಿಸಿಎಂ

ಜಟಾಪಟಿ

ಪಾಟ್ನಾ, ಡಿ.18- ಕರ್ನಾಟಕದಲ್ಲಿ ರಾಜ್ಯಪಾಲರು ಮತ್ತು ಸರ್ಕಾರದ ನಡುವೆ ಪ್ರತಿದಿನ ಜಟಾಪಟಿ ನಡೆಯುತ್ತಿರುವ ಬೆನ್ನಲ್ಲೇ ದೂರದ ಬಿಹಾರದಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯಪಾಲರ ಅಧಿಕಾರ ವ್ಯಾಪ್ತಿಯನ್ನು ಕೇಂದ್ರ ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕೆಂದು ಉಪ ಮುಖ್ಯಮಂತ್ರಿ ಸುಶೀಲ್‌ಕುಮಾರ್ ಮೋದಿ ಒತ್ತಾಯಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಹೇಗಿರಬೇಕೆಂದು ನ್ಯಾ. ಮದನ್ ಮೋಹನ್ ಪುಂಛಿ ಆಯೋಗ ಸ್ಪಷ್ಟವಾಗಿ ತಿಳಿಸಿದೆ.

ಇದೇ ಆಯೋಗದ ವರದಿಯಲ್ಲಿ ರಾಜ್ಯಪಾಲರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಕುರಿತಂತೆ 2010ರ ಮಾರ್ಚ್‌ನಲ್ಲಿ ವರದಿ ನೀಡಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸಿದ್ದಾರೆ.

ವಿಶ್ವವಿದ್ಯಾನಿಲಯ ಸ್ವಾಯತ್ತ ಸಂಸ್ಥೆಯಾದರೂ ಉಪಕುಲಪತಿಗಳ ನೇಮಕಾತಿ, ರಾಜ್ಯಪಾಲರ ತೀರ್ಮಾನವೇ ಅಂತಿಮ. ಸರ್ಕಾರ ಸೂಚಿಸಿದ ವ್ಯಕ್ತಿಯನ್ನು ಆಯ್ಕೆ ಮಾಡಬೇಕಾದುದ್ದು ಅವರ ಕರ್ತವ್ಯ.

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರ ಕಳುಹಿಸಿರುವ ಅನೇಕ ಮಸೂದೆಗಳಿಗೆ ರಾಜ್ಯಪಾಲ ದೇವನಂದ್ ಕೊನ್ವಾರ್ ಸಹಿ ಹಾಕದೇ ಬಾಕಿ ಉಳಿಸಿಕೊಂಡಿದ್ದಾರೆ. ತಕ್ಷಣವೇ ಸಹಿ ಹಾಕಬೇಕೆಂದು ಒತ್ತಾಯಿಸಿದರು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಅಧ್ಯಯನಕ್ಕೆಂದು ಆಗಮಿಸಿರುವ ಕೇಂದ್ರ ತಂಡದ ಸದಸ್ಯರೊಂದಿಗೆ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಇಂದು ಬೆಳಗ್ಗೆ ಚರ್ಚೆ ನಡೆಸಿದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ಭೀಕರ

ಹೆಚ್ಚು ನೆರವಿಗೆ ಶಿಫಾರಸು

ಬೆಂಗಳೂರು, ಡಿ.18- ರಾಜ್ಯದಲ್ಲಿ ಬರ ಪರಿಸ್ಥಿತಿ ಭೀಕರವಾಗಿದೆ. ಕುಡಿಯುವ ನೀರು, ಜಾನುವಾರುಗಳಿಗೂ ತೊಂದರೆಯಾಗಿದೆ ಎಂದು ಕೇಂದ್ರ ಬರ ಅಧ್ಯಯನ ತಂಡದ ಮುಖ್ಯಸ್ಥ ವಿಜಯ್‌ಕುಮಾರ್ ತಿಳಿಸಿದ್ದಾರೆ.

ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸದಾನಂದಗೌಡ ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ನಂತರ ಅವರು ಈ ವಿಷಯ ತಿಳಿಸಿದರು.

ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಭೀಕರವಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಇನ್ನೊಂದು ವಾರದಲ್ಲಿ ಸಮಗ್ರ ಅಧ್ಯಯನ ವರದಿಯನ್ನು ಸಲ್ಲಿಸುವುದಾಗಿ ಅವರು ತಿಳಿಸಿದರು.

ತುಮಕೂರು, ಚಿಕ್ಕಬಳ್ಳಾಪುರ, ಗದಗ, ಬೀದರ್, ರಾಯಚೂರು, ಗುಲ್ಬರ್ಗಾ ಸೇರಿದಂತೆ ಕೇಂದ್ರ ತಂಡದ ಸದಸ್ಯರು 14 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ರೈತರೊಂದಿಗೆ ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ್ದಾರೆ ಎಂದರು.

ನಿಜಕ್ಕೂ ಇಲ್ಲಿನ ಪರಿಸ್ಥಿತಿ ಭೀಕರವಾಗಿದೆ. ಮಳೆ ಇಲ್ಲದೆ ಬೆಳೆ ಸಂಪೂರ್ಣವಾಗಿ ಒಣಗಿ ಹೋಗಿದೆ. ಅನೇಕ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಜಾನುವಾರುಗಳಿಗೂ ಮೇವು ಮತ್ತು ನೀರಿನ ತೊಂದರೆ ಇದೆ. ಆದ್ದರಿಂದ ರಾಜ್ಯ ಸರ್ಕಾರಕ್ಕೆ ಕೂಡಲೇ ಹೆಚ್ಚಿನ ಹಣ ಬಿಡುಗಡೆ ಮಾಡುವಂತೆ ನಾವು ಕೇಂದ್ರಕ್ಕೆ ಶಿಫಾರಸು ಮಾಡುತ್ತೇವೆ ಎಂದರು.

ಇದಕ್ಕೂ ಮುನ್ನ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸದಾನಂದಗೌಡ ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದು, ಕೇಂದ್ರ ಸರ್ಕಾರ ಉದಾರವಾಗಿ ಹಣಕಾಸು ಸಹಾಯ ಮಾಡಬೇಕು ಎಂದು ಮನವಿ ಮಾಡಿದರು.

ಕರೀಂಖಾನ್ ಜನ್ಮಶತಮಾನೋತ್ಸವ ಆಚರಿಸಿ

ಬೆಂಗಳೂರು, ಡಿ.18- ಕನ್ನಡ ಭಾಷೆ, ಚಿತ್ರರಂಗ, ಜನಪದ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವ ಡಾ.ಎಸ್.ಕೆ.ಕರೀಂಖಾನ್ ಅವರ ಜನ್ಮಶತಮಾನೋತ್ಸವವನ್ನು ರಾಜ್ಯ ಸರ್ಕಾರವೇ ಆಚರಿಸಬೇಕು ಎಂದು ಜಾನಪದ ವಿದ್ವಾಂಸ ಪ್ರೊ.ಡಿ.ಲಿಂಗಯ್ಯ ಒತ್ತಾಯಿಸಿದರು.

ಕನ್ನಡ ಸಂಘರ್ಷ ಸಮಿತಿ ನಗರದ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಏರ್ಪಡಿಸಿದ್ದ ಏರ್ಪಡಿಸಿದ್ದ ಜಾನಪದ ಜಂಗಮ ಡಾ.ಎಸ್.ಕೆ.ಕರೀಂಖಾನ್ ಜನ್ಮಶತಮಾನೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಭಾಷೆ ಮತ್ತು ಸಂಸ್ಕೃತಿಗೆ ಸೇವೆ ಸಲ್ಲಿಸಿದವರನ್ನು ಸರ್ಕಾರ ಮರೆಯುತ್ತಿದೆ ಎಂದು ವಿಷಾದಿಸಿದರು.

ಕನ್ನಡಕ್ಕೆ ಕರೀಂಖಾನ್‌ರ ಸೇವೆ ಅನನ್ಯ. ನಾಡಿನ ಏಕೀಕರಣಕ್ಕಾಗಿ ದುಡಿದ ಅವರು, ಚಿತ್ರರಂಗಕ್ಕೆ ಸಾಹಿತ್ಯ, ಸಂಭಾಷಣೆ ಸೇರಿದಂತೆ ವಿವಿಧ ರೀತಿಯ ಕೊಡುಗೆ ನೀಡಿದ್ದಾರೆ.

ನಟವರ ಗಂಗಾಧರ ಎಂಬಂತಹ ಹಲವಾರು ಭಕ್ತಿಗೀತೆಗಳನ್ನು ಹಿಂದೂಗಳಿಗಿಂತಲೂ ಸೊಗಸಾಗಿ ಬರೆದಿದ್ದಾರೆ. ಹಾಸನ ಮತ್ತಿತರ ಜಿಲ್ಲೆಗಳಲ್ಲಿ ಸಂಚರಿಸಿ ಮೂಲ ಜಾನಪದ ಗೀತೆಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ.

ಇಂತಹ ಮಹಾನ್ ವ್ಯಕ್ತಿಗಳ ಜನ್ಮ ಶತಮಾನೋತ್ಸವವನ್ನು ಸರ್ಕಾರವೇ ಆಚರಿಸಬೇಕಿತ್ತು.

ಜಾನಪದ ಮತ್ತು ಸಾಹಿತ್ಯ ಅಕಾಡೆಮಿಗಳು ಈ ಗಮನಹರಿಸಬೇಕಿತ್ತು ಎಂದು ಅವರು ಹೇಳಿದರು.

ಚಲನಚಿತ್ರ ನಟ, ನಿರ್ದೇಶಕ ಸಿ.ವಿ.ಶಿವಶಂಕರ್ ಮಾತನಾಡಿ, ಕರೀಂಖಾನ್ ಸರಳ ಸಜ್ಜನಿಕೆಯ ವ್ಯಕ್ತಿ. ಶಾಸ್ತ್ರೀಯವಾಗಿ ಸ್ಪಷ್ಟ ಕನ್ನಡ ಮಾತನಾಡುತ್ತಿದ್ದ ಅವರು ಎಂದಿಗೂ ಯಾರಿಗೂ ನೋವು ಮಾಡಿದವರಲ್ಲ ಎಂದರು.

ಬಹಳಷ್ಟು ಮಂದಿ ಕರೀಂಖಾನ್ ಬರೆದ ಗೀತೆಗಳನ್ನು ಕದ್ದು ತಮ್ಮದೆಂದು ಪ್ರಕಟಿಸಿಕೊಂಡರು. ಚಿತ್ರಗಳಿಗೆ ಮಾರಾಟ ಮಾಡಿ ಹಣ ಗಳಿಸಿದರು. ಅಷ್ಟು ಮೋಸ ಮಾಡಿದರು ಕರೀಂಖಾನ್ ತಮ್ಮಷ್ಟಕ್ಕೆ ತಾವೇ ನೊಂದುಕೊಂಡರೆ ಹೊರತು ಕಠಿಣವಾಗಿ ಮಾತನಾಡಿ ಇನ್ನೊಬ್ಬರನ್ನು ನೋಯಿಸಲಿಲ್ಲ ಎಂದು ಹೇಳಿದರು.

ಕನ್ನಡ ಸಂಘರ್ಷ ಸಮಿತಿಯ ಕಾರ್ಯಾಧ್ಯಕ್ಷ ಡಾ.ಕೋಂ.ವೆಂ. ರಾಮಕೃಷ್ಣೇಗೌಡ, ಹಲಸೂರಿನ ರಸ್ತೆಯೊಂದಕ್ಕೆ ಕರೀಂಖಾನ್ ಹೆಸರಿಡಲು ಬಿಬಿಎಂಪಿ 2006ರಲ್ಲಿ ನಿರ್ಧಾರ ಕೈಗೊಂಡಿದೆ.

ಆದರೆ, ಇತ್ತೀಚೆಗೆ ಚುನಾಯಿತರಾದ ಬಿಬಿಎಂಪಿ ಸದಸ್ಯರೊಬ್ಬರು ಅದನ್ನು ಬದಲಿಸಿ ಮಾಜಿ ಪ್ರಧಾನಿ ವಾಜಪೇಯಿ ಹೆಸರು ಇಡಲು ಯತ್ನಿಸುತ್ತಿದ್ದಾರೆ. ಇದಕ್ಕೆ ಆಯುಕ್ತರು ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಸಮಿತಿಯ ಅಧ್ಯಕ್ಷ ರಾಮಣ್ಣ ಕೋಡಿಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎಂ.ಪ್ರಕಾಶ್‌ಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

ಅಜಿತ್ ಪ್ರಸಾದ್ ಅಧಿಕಾರ ಸ್ವೀಕಾರ

ಬೆಂಗಳೂರು, ಡಿ.18- ಜಯಕರ್ನಾಟಕ ಸಂಘಟನೆಯ ಯುವ ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿರುವ ಬೆಂಗಳೂರು ನಾಗರಿಕರ ಕನ್ನಡ ವೇದಿಕೆ ಅಧ್ಯಕ್ಷ ಅಜಿತ್ ಪ್ರಸಾದ್ ಇಂದು ಅಧಿಕಾರ ಸ್ವೀಕರಿಸಿದರು.

ನಗರದ ಬಿಬಿಎಂಪಿ ಕಚೇರಿ ಮುಂಭಾಗ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅನಂತರ ಕಾರ್ಯಕರ್ತರೊಂದಿಗೆ ಬೃಹತ್ ಮೆರವಣಿಗೆ ಮೂಲಕ ಬಿಡದಿ ತಲುಪಿದ ಅವರು, ಯುವ ಘಟಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಜಯಕರ್ನಾಟಕ ಸಂಸ್ಥಾಪಕ ಅಧ್ಯಕ್ಷ ಮುತ್ತಪ್ಪ ರೈ ಅವರ ಮಾರ್ಗದರ್ಶನದಂತೆ ಪ್ರಸಾದ್ ಅವರನ್ನು ನೇಮಿಸಲಾಗಿದ್ದು, ರಾಜ್ಯಾಧ್ಯಕ್ಷ ಕುಮಾರಸ್ವಾಮಿ, ಬೆಂಗಳೂರು ನಗರಾಧ್ಯಕ್ಷ ಜಗದೀಶ್‌ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಶೈನ್ ಚಂಗಪ್ಪ, ಕೆ.ಎಂ.ಪ್ರದೀಪ್, ಜಿ.ವೆಂಕಟಾಚಲಪತಿ ಮುತ್ತಿತರರು ಪಾಲ್ಗೊಂಡಿದ್ದರು.

ನಗರದಲ್ಲಿಂದು ಕಣಗಾಲ್ ನೃತ್ಯಾಲಯ ಟ್ರಸ್ಟ್ ಪ್ರದರ್ಶಿಸಿದ ಕಣಗಾಲ್ ಕಾಲಕೋಶ ಸಾಕ್ಷ್ಯಚಿತ್ರವನ್ನು ಸಾಹಿತಿ ಪ್ರೊ.ಜಿ.ವೆಂಕಟಸುಬ್ಬಯ್ಯ, ಹಿರಿಯ ರಂಗಕರ್ಮಿ ಮಾಸ್ಟರ್ ಹಿರಣ್ಣಯ್ಯ, ಚಿತ್ರ ನಿರ್ದೇಶಕ ರಾಜೇಂದ್ರಸಿಂಗ್ ಬಾಬು, ಚಿತ್ರರಂಗದ ಇತರ ಗಣ್ಯರು ಪಾಲ್ಗೊಂಡಿದ್ದರು.

ನಗರದ ಮಿಥಿಕ್ ಸೊಸೈಟಿಯಲ್ಲಿ ದೇವುಡು ಪ್ರತಿಷ್ಠಾನದ ವತಿಯಿಂದ ಪ್ರೊ.ನಂಜುಂಡಶಾಸ್ತ್ರಿಯವರು ಮಹಾ ಬ್ರಾಹ್ಮಣ ಆಂಗ್ಲಕೃತಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಿರುವ ಪುಸ್ತಕವನ್ನು ಹೈಕೋರ್ಟ್ ನ್ಯಾಯಮೂರ್ತಿ ಶೈಲೇಂದ್ರಕುಮಾರ್ ಬಿಡುಗಡೆಗೊಳಿಸಿದರು. ದೂರದರ್ಶನ ಕೇಂದ್ರದ ನಿರ್ದೇಶಕ ಮಹೇಶ್ ಜೋಷಿ, ಪ್ರತಿಷ್ಠಾನದ ಅಧ್ಯಕ್ಷ ಗಂಗಾಧರ್ ದೇವುಡು ಉಪಸ್ಥಿತರಿದ್ದರು.

ಜ.21ರಂದು ಕಿಸಾನ್ ಬಚಾವೋ ಆಂದೋಲನ

ಬೆಂಗಳೂರು, ಡಿ.18- ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ಮೀನಾಮೇಷ ಎಣಿಸುತ್ತಿರುವ ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ ಬರುವ ಜನವರಿ 21ರಂದು ದೇಶವ್ಯಾಪಿ ಆಂದೋಲನ ನಡೆಸಲಾಗುವುದೆಂದು ಬಿಜೆಪಿ ರಾಷ್ಟ್ರೀಯ ಕಿಸಾನ್ ಘಟಕದ ಅಧ್ಯಕ್ಷ ಓಂ ಪ್ರಕಾಶ್ ದಿನಕರ್ ಇಂದಿಲ್ಲಿ ತಿಳಿಸಿದರು.

ಪಕ್ಷದ ಕಚೇರಿಯಲ್ಲಿಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ ಒಂದು ವರ್ಷದ ಹಿಂದೆಯೇ ಸ್ವಾಮಿನಾಥನ್ ಆಯೋಗದ ವರದಿ ಸಲ್ಲಿಕೆಯಾಗಿದ್ದವು. ಇದನ್ನು ಜಾರಿಗೊಳಿಸಲು ಸರ್ಕಾರ ಮೀನಾಮೇಷ ಎಣಿಸುತ್ತಿದೆ. ದೇಶದ ಆರ್ಥಿಕ ಯೋಜನೆಗಳು ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಲ್ಲ (ಕೈಗಾರಿಕಾ, ತಂತ್ರಜ್ಞಾನ ಇತರೆ) ಕ್ಷೇತ್ರಗಳು ಅಭಿವೃದ್ಧಿ ಹೊಂದಿದ್ದರೂ ಕೃಷಿ ಕ್ಷೇತ್ರ ಮಾತ್ರ ಗಣನೀಯವಾಗಿ ಕುಸಿತ ಕಾಣುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದ ಆರ್ಥಿಕ ಯೋಜನೆ ಹಾಗೂ ರೈತರ ಬಗೆಗಿನ ನಿರ್ಲಕ್ಷ್ಯ ಧೋರಣೆಯೇ ಕಾರಣ ಎಂದು ಆರೋಪಿಸಿದರು.

ಯಾವ ಸಂದರ್ಭದಲ್ಲೂ ಸಂಭವಿಸದ ಅನಾಹುತಗಳು ಕೃಷಿ ಕ್ಷೇತ್ರದಲ್ಲಿ ನಡೆಯುತ್ತಿವೆ. ಸಾವಿರಾರು ಮಂದಿ ರೈತರು ಪ್ರತಿದಿನ ಒಂದಲ್ಲ ಒಂದು ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆದರೂ ಆಹಾರ ಭದ್ರತೆ, ರೈತರ ಅಭ್ಯುದಯಕ್ಕೆ ಸರ್ಕಾರ ಮಾತ್ರ ಯಾವುದೇ ಪ್ರಾಮಾಣಿಕ ಕೆಲಸ ಮಾಡದೆ ಕೇವಲ ಚೆಲ್ಲಾಟವಾಡುತ್ತಿದೆ ಎಂದು ದೂಷಿಸಿದರು. ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಆಹಾರ ಭದ್ರತೆ ನೀತಿ ಕೇವಲ ಚುನಾವಣಾ ಗಿಮಿಕ್. ಇದರಿಂದ ಯಾವುದೇ ಪ್ರಯೋಜನವಿಲ್ಲ. ಕೂಡಲೇ ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಗೆ ತರಬೇಕೆಂದು ಬಿಜೆಪಿ ಒತ್ತಾಯಿಸುತ್ತದೆ ಎಂದರು.

ಕಳೆದೆರಡು ದಿನಗಳಿಂದ ಇಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕೈಗೊಂಡ ನಿರ್ಣಯಗಳಲ್ಲಿ ಇದೇ ಮೊದಲ ಪ್ರಾಮುಖ್ಯತೆ ಪಡೆದ ವಿಷಯವಾಗಿದೆ ಎಂದರು.

ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇದರ ಬಗ್ಗೆ ಗಮನ ಹರಿಸದ ಸರ್ಕಾರ ಲಕ್ಷಾಂತರ ಕ್ವಿಂಟಾಲ್ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಕೃಷಿ ಮಾರುಕಟ್ಟೆ ವೈಪರೀತ್ಯದಿಂದಾಗಿ ರೈತನಿಗೆ ಸರಿಯಾದ ಸಿಗುತ್ತಿಲ್ಲ ಎಂದರು.

ಸಿಎಸಿಪಿ (ದರ ನಿಗದಿ) ಮಾತನ್ನು ಸಹ ಸರ್ಕಾರ ಕೇಳದೆ ಬೆಂಬಲ ಬೆಲೆ ಘೋಷಿಸುತ್ತಿದೆ. ಆದ್ದರಿಂದಾಗಿ ಈ ಕೇಂದ್ರವನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಬೇಕು ಎಂದರು. ಕನಿಷ್ಠ ವರಮಾನ ಪ್ರತಿಯೊಬ್ಬ ರೈತನಿಗೂ ಸಿಕ್ಕಾಗ ಮಾತ್ರ ಆತ ಸ್ವಾವಲಂಬಿಯಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಲು ಸಾಧ್ಯ.

ಆದ್ದರಿಂದ ಇದರ ಬಗ್ಗೆ ಹೆಚ್ಚು ಒತ್ತು ನೀಡಬೇಕಾಗಿದೆ ಎಂದರು ಕೇಂದ್ರವನ್ನು ಒತ್ತಾಯಿಸಿದರು. ಇದಲ್ಲದೆ, ಪ್ರಾಕೃತಿಕ ವೈಪರೀತ್ಯ, ಬೆಳೆ ಹಾನಿ ಮತ್ತಿತರ ಸಂದರ್ಭಗಳಲ್ಲಿ ರೈತರ ಪ್ರತಿ ಎಕರೆಗೆ ವಿಮಾ ಪರಿಹಾರವನ್ನು 10 ಸಾವಿರಕ್ಕೆ ಏರಿಸಬೇಕು, ಹವಾಮಾನಕ್ಕೆ ಅನುಗುಣವಾಗಿ ಆಮದು-ರಫ್ತು ನೀತಿಯನ್ನು ಜಾರಿ- ಸೇರಿದಂತೆ ಹಲವು ನಿರ್ಣಯಗಳನ್ನು ರಾಷ್ಟ್ರೀಯ ಕಾರ್ಯಕಾರಿಣಿ ತೆಗೆದುಕೊಂಡಿದೆ ಎಂದರು.

ಇಂದಿಗೂ ಸಹ ಸರಿಯಾದ ಸೂರಿಲ್ಲದೆ ತುತ್ತು ಅನ್ನಕ್ಕಾಗಿ ಪರಿತಪಿಸುತ್ತಿರುವ ರೈತ ಕುಟುಂಬಗಳಿವೆ. ಇದರ ಬಗ್ಗೆಯೂ ಬೆಳಕು ಚೆಲ್ಲಿ ಆಹಾರ ಉತ್ಪಾದನೆಗೆ ಒತ್ತು ಕೊಟ್ಟು ರೈತರನ್ನು ರಕ್ಷಿಸುವ ಸಲುವಾಗಿ ಬರುವ ಜನವರಿ 21ರಂದು ದೇಶದ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಕಿಸಾನ್ ಬಚಾವೋ ದಿವಸ್ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕಿಸಾನ್ ರಾಜ್ಯ ಘಟಕದ ಅಧ್ಯಕ್ಷ ಶರಣಪ್ಪಗೌಡ, ರಾಷ್ಟ್ರೀಯ ಉಪಾಧ್ಯಕ್ಷ ಈಶ್ವರ್‌ಚಂದ್ರ ಹೊಸಮನಿ, ಸಂಚಾಲಕ ಸತ್ಯಾಮ್ ಮಲ್ಲಿಕ್ ಮುತ್ತಿತರರು ಪಾಲ್ಗೊಂಡಿದ್ದರು.

ಬಸ್ ಉರುಳಿಬಿದ್ದು 12 ಸಾವು

ಉದಾಂಸಿಂಗ್‌ನಗರ್ (ಉ. ಪ್ರದೇಶ), ಡಿ.18- ಭಾರೀ ಮಂಜಿನಿಂದಾಗಿ ಪ್ರಯಾಣಿಕರಿದ್ದ ಬಸ್ ನದಿಗೆ ಉರುಳಿಬಿದ್ದು 12 ಮಂದಿ ಮೃತಪಟ್ಟು, 20ಕ್ಕೂ ಹೆಚ್ಚು ಜನ ಗಾಯಗೊಂಡಿರುವ ಘಟನೆ ಉತ್ತರ ಪ್ರದೇಶದ ಉದಾಂಸಿಂಗ್‌ನಗರದಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ಗದಾರ್‌ಪುರ್ ಪ್ರದೇಶದಲ್ಲಿ ನಪಲ್ ನದಿಗೆ ಬಸ್ ಉರುಳಿ ಬಿದ್ದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ.

ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾಪಸ್ಸಾಗುತ್ತಿದ್ದ ವೇಳೆ ಭಾರೀ ಮಂಜಿನಿಂದಾಗಿ ಬಸ್ ಆಯ ತಪ್ಪಿ ನದಿಗೆ ಉರುಳಿಬಿದ್ದ ಪರಿಣಾಮ 12 ಜನ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡಿರುವ 25 ಮಂದಿ ಪ್ರಯಾಣಿಕರನ್ನು ರುದ್ರಾಪುರ್ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಸಿಇಒ ಕಚೇರಿಗೆ ವಾಸ್ತು ದೋಷ!

ರಾಯಚೂರು, ಡಿ.18- ಜಿಲ್ಲೆಯಲ್ಲಿ ಬರ ತಾಂಡವವಾಡುತ್ತಿದ್ದು, ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ನೂತನ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮನೋಜ್ ಕುಮಾರ್ ಜೈನ್ ವಾಸ್ತು ಬೆನ್ನತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ಇಲ್ಲಿನ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಮನೋಜ್‌ಕುಮಾರ್ ಜೈನ್ ಇತ್ತೀಚೆಗಷ್ಟೆ ಅಧಿಕಾರ ಸ್ವೀಕರಿಸಿದರು.

ಕಚೇರಿಗೆ ಬರುತ್ತಿದ್ದಂತೆ ಅದೇನಾಯ್ತೊ ಏನೋ ಕುಳಿತುಕೊಳ್ಳುವ ಕಚೇರಿಯ ದಿಕ್ಕನ್ನೇ ಬದಲಾಯಿಸಿದ್ದಾರೆ. ಇಷ್ಟೇ ಅಲ್ಲದೆ ತಾವು ವಾಸ ಮಾಡುವ ಬಂಗಲೆಯನ್ನು ನವೀಕರಿಸಲು ಮುಂದಾಗಿದ್ದಾರೆ.

ಮನೆಯ ಕಾಂಪೌಂಡ್ ಕೆಡವಿ ನೂತನವಾಗಿ ನಿರ್ಮಿಸಿರುವ ಅವರು, ಪ್ರವೇಶದ್ವಾರದ ದಿಕ್ಕನ್ನು ಬದಲಾಯಿಸಿದ್ದಾರೆ. ಇದಕ್ಕಾಗಿ ಲಕ್ಷಾಂತರ ಹಣ ಖರ್ಚು ಮಾಡುತ್ತಿದ್ದಾರೆಂಬ ಸುದ್ದಿ ಎಲ್ಲೆಡೆ ಕೇಳಿಬರುತ್ತಿದೆ.

ಮನೋಜ್‌ಕುಮಾರ್ ಜೈನ್ ಅವರ ಈ ಘನಕಾರ್ಯಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗುತ್ತಿದೆ. ಏಕೆಂದರೆ, ಜಿಲ್ಲೆಯಲ್ಲಿ ಬರ ತಾಂಡವವಾಡುತ್ತಿದೆ. ಕುಡಿಯುವ ನೀರಿಗೆ ಎಲ್ಲೆಡೆ ಹಾಹಾಕಾರ ಉಂಟಾಗಿದೆ. ಒಂದು ಕೊಡ ನೀರಿಗಾಗಿ ಜನರು ಕಿಲೋಮೀಟರ್‌ಗಟ್ಟಲೆ ಅಲೆಯುತ್ತಿದ್ದಾರೆ. ಜಾನುವಾರುಗಳಿಗೂ ಕುಡಿಯಲು ನೀರು ಸಿಗುತ್ತಿಲ್ಲ, ಮೇವು ಕೂಡ ಅಷ್ಟಕ್ಕಷ್ಟೇ ಎಂಬಂತಾಗಿದೆ.

ಇದರ ಬಗ್ಗೆ ಗಮನ ನೀಡಬೇಕಾದ ಸಿಇಒ ತಮ್ಮ ಕಚೇರಿ, ಮನೆ ರಿಪೇರಿಗೆ ವಿಶೇಷ ಆದ್ಯತೆ ನೀಡಿದ್ದಾರೆಂದು ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ಅದ್ಯಾವ ಜ್ಯೋತಿಷಿ ಇವರಿಗೆ ಇಂತಹ ಸಲಹೆ ಕೊಟ್ಟನೋ ಗೊತ್ತಿಲ್ಲ. ಮೇಲ್ಮಹಡಿಯಲ್ಲಿದ್ದ ಕಚೇರಿಯನ್ನು ಕೆಳ ಮಹಡಿಗೆ ಸ್ಥಳಾಂತರಿಸಿದರು. ಹೊಸ ಪೀಠೋಪಕರಣ, ಎಸಿ ಅಳವಡಿಕೆ, ತಮ್ಮ ಮನೆಯ ಬಂಗಲೆಯ ಕಾಂಪೌಂಡ್ ಗೋಡೆ ಕೆಡವಿ ಈಶಾನ್ಯ ದಿಕ್ಕಿಗೆ ಪ್ರವೇಶ ದ್ವಾರ ನಿರ್ಮಿಸಿರುವುದು ಯಾವ ಪುರುಷಾರ್ಥಕ್ಕೆ ಎಂದು ಅನೇಕರು ಪ್ರಶ್ನಿಸಿದ್ದಾರೆ.

ಲಿಂಗಸೂರು, ಸಿಂಗನೂರು, ದೇವದುರ್ಗ ಸೇರಿದಂತೆ ಮತ್ತಿತರ ಕಡೆ ಕುಡಿಯುವ ನೀರಿಗೆ ಜನ ಪರದಾಡುತ್ತಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯು ಸರಿಯಾಗಿ ಅನುಷ್ಠಾನಗೊಂಡಿಲ್ಲ. ಕೆಲಸದ ಹಣವು ಜನಪ್ರತಿನಿಧಿಗಳ ಪಾಲಾಗುತ್ತಿದೆ. ಬರದಿಂದ ಕಂಗೆಟ್ಟಿರುವ ಜನರು ಬೇರೆ ಬೇರೆ ಕಡೆ ಗುಳೆ ಹೋಗುತ್ತಿದ್ದಾರೆ.

ಸಾರ್ವಜನಿಕರ ಸಮಸ್ಯೆ ಪರಿಹರಿಸಬೇಕಾದ ಜನಪ್ರತಿನಿಧಿಗಳೂ ಸಹ ಕಂಡೂ ಕಾಣದಂತೆ ಕಣ್ಮುಚ್ಚಿ ಕುಳಿತಿದ್ದಾರೆ.

ನೂತನವಾಗಿ ಬಂದಿರುವ ಸಿಇಒ ಇದರ ಬಗ್ಗೆ ಗಮನ ಹರಿಸದೆ ಅಜ್ಜಿಗೆ ಅನ್ನದ ಚಿಂತೆಯಾದರೆ, ಮೊಮ್ಮಗಳಿಗೆ ಮದುವೆ ಚಿಂತೆ ಎಂಬಂತೆ ತಮ್ಮ ಕಚೇರಿ ನವೀಕರಣ, ವಾಸ್ತುದೋಷ ನಿವಾರಣೆ ಕಡೆ ಗಮನ ಹರಿಸಿರುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಎದುರಾಗಿದೆ.

ದೆಹಲಿಗೆ ಕುಡುಕರ ಕಾಟ

ನವದೆಹಲಿ, ಡಿ.18- ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ದಿನದಿಂದ ದಿನಕ್ಕೆ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿ ಸಿಕ್ಕಿಬೀಳುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಇದಕ್ಕೆ ಸಾಕ್ಷೀಕರಿಸುವಂತೆ 2011ರಲ್ಲಿ ಸುಮಾರು 17 ಸಾವಿರ ಮದ್ಯಪಾನ ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿವೆ.

ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದ ಮದ್ಯಪಾನ ಪ್ರಕರಣಗಳು ದಾಖಲಾಗಿರುವುದು ಎಂದು ಪೊಲೀಸರು ಬಿಡುಗಡೆ ಮಾಡಿರುವ ದಾಖಲೆಗಳೇ ರುಜುವಾತುಪಡಿಸಿವೆ.

ಜನವರಿಯಿಂದ ಡಿಸೆಂಬರ್ ತಿಂಗಳವರೆಗೆ ದೆಹಲಿಯ ವಿವಿಧ ಠಾಣೆಗಳಲ್ಲಿ ಒಟ್ಟು 17 ಸಾವಿರ ಮದ್ಯಪಾನ ಮಾಡಿ ವಾಹನ ಚಾಲನೆ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 2200 ಜನರ ಲೈಸೆನ್ಸ್‌ಗಳು ರದ್ದಾಗಿದ್ದರೆ 2869 ಜನರನ್ನು ಜೈಲಿಗೆ ಕಳುಹಿಸಲಾಗಿದೆ.

ಮದ್ಯಪಾನ ಮಾಡಿ ಚಾಲನೆ ಮಾಡಿ ಸಿಕ್ಕಿಬಿದ್ದಿರುವ 5 ಸಾವಿರ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ನಾವು ಜನವರಿ ತಿಂಗಳಿನಿಂದ ಇದುವರೆಗೂ 17 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿದ್ದೇವೆ. ಕುಡಿದು ಸಂಚಾರಿ ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅನೇಕರ ಮೇಲೆ ಕ್ರಮ ಜರುಗಿಸಲಾಗಿದೆ. ನಗರದಲ್ಲಿ ಹೆಚ್ಚುತ್ತಿರುವ ಅಪಘಾತಗಳನ್ನು ತಗ್ಗಿಸಲು ಕಠಿಣ ಕ್ರಮ ಅಗತ್ಯ ಎಂದು ಜಂಟಿ ಪೊಲೀಸ್ ಆಯುಕ್ತ (ಸಂಚಾರಿ) ಸತ್ಯೇಂದ್ರ ಗಾರ್ಗ್ ಹೇಳಿದರು.

ಕೆಲವು ಪ್ರಕರಣಗಳನ್ನು ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುತ್ತಿರುವುದರಿಂದ ಅಪಘಾತಗಳ ಸಂಖ್ಯೆ ಇಳಿಮುಖವಾಗುತ್ತವೆ.

2009ರಲ್ಲಿ 12,784 ಪ್ರಕರಣಗಳನ್ನು ವಿಚಾರಣೆ ನಡೆಸಿದ್ದರೆ, 2011ರಲ್ಲಿ 16,850 ಪ್ರಕರಣಗಳು ವಿಚಾರಣೆ ನಡೆದಿವೆ. ಮದ್ಯಪಾನ ಮಾಡಿ ಚಾಲನೆ ಮಾಡುತ್ತಿರುವುದರಿಂದ ಶೇ.6ರಷ್ಟು ಅಪಘಾತಗಳ ಸಂಖ್ಯೆ ಹೆಚ್ಚಳವಾಗಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕೆಲವರು ಮದ್ಯಪಾನ ಮಾಡಿ ಸಿಕ್ಕಿಬಿದ್ದಾಗ ಕಡಿಮೆ ಪ್ರಮಾಣದ ದಂಡ ಹಾಕಿ ಬಿಟ್ಟುಬಿಡುತ್ತಾರೆಂಬ ಮನೋಭಾವನೆ ಇದೆ. ಆದರೆ, ನಾವು ಮದ್ಯಪಾನ ಮಾಡಿದವರಿಗೆ ಹೆಚ್ಚಿನ ಶಿಕ್ಷೆ ವಿಧಿಸಲು ಹಿಂದೆ-ಮುಂದೆ ನೋಡುವುದಿಲ್ಲ. ಇದರ ಬಗ್ಗೆ ಜಾಗೃತಿ ಮೂಡಬೇಕಾದ ಅಗತ್ಯವಿದೆ ಎಂದಿದ್ದಾರೆ.

ಶಾಲಾ ಕಟ್ಟಡ ಧ್ವಂಸ

ಪಾಟ್ನಾ, ಡಿ.18- ಶಸ್ತ್ರಸಜ್ಜಿತ ಮಾವೋವಾದಿಗಳು ಎರಡು ಅಂತಸ್ತಿನ ಶಾಲಾ ಕಟ್ಟಡಗಳನ್ನು ಧ್ವಂಸಗೊಳಿಸಿರುವ ಘಟನೆ ಬಿಹಾರದ ಜಾಮೋಯ್ ಜಿಲ್ಲೆಯ ಚೆನಂಗ್‌ಬರ್ ಗ್ರಾಮದಲ್ಲಿ ನಡೆದಿದೆ.

ಖಾಸಗಿ ಗುತ್ತಿಗೆದಾರರು ಕಟ್ಟುತ್ತಿದ್ದ ಈ ಎರಡು ಅಂತಸ್ತಿನ ಕಟ್ಟಡವನ್ನು 60 ಶಸ್ತ್ರಸಜ್ಜಿತ ಉಗ್ರರು ಎರಡು ಬಾಂಬ್‌ಗಳಿಂದ ಧ್ವಂಸಗೊಳಿಸಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಬಿಪಿಸಿಸಿ ಹೆಲ್ತ್ ಕೇರ್ ನಗರದ ಬಾಲಭವನದಲ್ಲಿ ಹಮ್ಮಿಕೊಂಡಿದ್ದ ಬೇಬೀಸಡೆಟಿಟ್ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಯಲ್ಲಿ ಗೆದ್ದ ಮಕ್ಕಳಿಗೆ ಬಿಬಿಎಂಪಿ ಆಯುಕ್ತ ಶಂಕರಲಿಂಗೇಗೌಡ, ಡಾ.ಕಾಮಿನಿರಾವ್ ಪ್ರಶಸ್ತಿ ನೀಡಿದರು.

ಡಿ.21-22ರಂದು ಅಂತಾರಾಷ್ಟ್ರೀಯ

ವಿಚಾರಗೋಷ್ಠಿ

ಬೆಂಗಳೂರು, ಡಿ.18- ಭಾರತೀಯ ಅಂಕಿ-ಸಂಖ್ಯೆ ವಿದ್ಯಾಲಯದ ವತಿಯಿಂದ ಗುಣಮಟ್ಟ ಹಾಗೂ ಅವಲಂಬನೆ ತಂತ್ರಜ್ಞಾನ ಕುರಿತ ಅಂತಾರಾಷ್ಟ್ರೀಯ ವಿಚಾರಗೋಷ್ಠಿ ಡಿ.21-22ರಂದು ನಗರದ ಏಟ್ರಿಯಾ ಹೋಟೆಲ್‌ನಲ್ಲಿ ನಡೆಯಲಿದೆ.

ಡಿ.21ರಂದು ಬೆಳಗ್ಗೆ 9.30ಕ್ಕೆ ಆಕ್ಲೆಂಡ್ ಯೂನಿವರ್ಸಿಟಿಯ ಮಾಹಿತಿ ತಂತ್ರಜ್ಞಾನ ಹಾಗೂ ಕಾರ್ಯನಿರ್ವಹಣೆ ವಿಭಾಗದ ಮುಖ್ಯಸ್ಥ ಪ್ರೊ.ಟಿ.ಎಸ್.ಅರ್ಥನಾರಿ ವಿಚಾರಗೋಷ್ಠಿ ಉದ್ಘಾಟಿಸಲಿದ್ದು, ಖ್ಯಾತ ವಿಜ್ಞಾನಿಗಳಾದ ಪ್ರೊ.ಅಲೆಕ್ಸ್ ಡಗ್ಲಸ್, ಪ್ರೊ.ಗೋಪಿನಾಥ್ ಚಟ್ಟೋಪಾಧ್ಯಾಯ, ಪ್ರೊ.ಜೆಫ್ ವೈ.ಲೀ, ಪ್ರೊ. ವಿಲಿಯಂ ಕ್ಯೂ. ಮೀಕರ್, ಪ್ರೊ. ಹಿಜುವಾ ಕಿಯಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಗ್ರಾಹಕರಲ್ಲಿ ಉತ್ಪನ್ನಗಳ ಗುಣಮಟ್ಟ ಹಾಗೂ ಅವಲಂಬನೆಯ ಬಗ್ಗೆ ಅರಿವು ಮೂಡಿಸಲು ಈ ವಿಚಾರಗೋಷ್ಠಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿಎಸ್‌ಪಿ ಸಂತಾಪ

ಬೆಂಗಳೂರು, ಡಿ.18- ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಕೇಂದ್ರ ರೈತ ಒಕ್ಕೂಟದ ಅಧ್ಯಕ್ಷ ಬಸವರಾಜ ತಂಬಾಕೆ ಅವರ ನಿಧನಕ್ಕೆ ಬಹುಜನ ಸಮಾಜ ಪಾರ್ಟಿ ರಾಜ್ಯ ಸಮಿತಿ ಸಂತಾಪ ವ್ಯಕ್ತಪಡಿಸಿದೆ.

ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ರೈತರ ಪರ ಹಲವಾರು ಹೋರಾಟಗಳನ್ನು ಮಾಡಿದ್ದು, ಇವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಇವರ ಕುಟುಂಬಕ್ಕೆ ಭಗವಾನ್ ಬುದ್ಧ ಶಾಂತಿ ನೀಡಲೆಂದು ಬಹುಜನ ಸಮಾಜ ಪಕ್ಷದ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ಕೋರಿದ್ದಾರೆ.

ಭಯೋತ್ಪಾದಕರ ನಿರ್ಮೂಲನೆಯೇ ನಮ್ಮ ಗುರಿ

• ಪ್ರಜೋದಯ ವರದಿ

ನವದೆಹಲಿ: ಕಾಂಗ್ರೆಸ್ ವಿರುದ್ಧ ಸಂಸತ್‌ನಲ್ಲಿ ಅಕ್ಷರಶಃ ಬೆಂಕಿ ಉಗುಳಿದ ಕೇಂದ್ರ ಗೃಹಸಚಿವ ಅಮಿತ್ ಶಾ, ಪಂಡಿತ್ ಜವಹರಲಾಲ್ ನೆಹರೂ ಅವರ ಕಾಲದಿಂದಲೇ ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಅಸ್ತಿತ್ವಕ್ಕೆ ಬಂದಿದೆ. ಭಯೋತ್ಪಾದಕರನ್ನು ನಿರ್ಮೂಲನೆ ಮಾಡುವುದೇ ನಮ್ಮ ಗುರಿ ಎಂದು ಶಪಥ ಮಾಡಿದರು.

ತಮ್ಮ ಒಂದು ಗಂಟೆ ಸುದೀರ್ಘ ಭಾಷಣದಲ್ಲಿ ಪ್ರತಿಪಕ್ಷ ಕಾಂಗ್ರೆಸ್ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿ, ಕೇಂದ್ರ ಸರ್ಕಾರ ತೆಗೆದುಕೊಂಡ ಕ್ರಮಗಳು ಸೇರಿದಂತೆ ಹಲವು ವಿಷಯಗಳ ಬಗ್ಗೆ ಬೆಳಕು ಚೆಲ್ಲಿ ಅಧಿಕೃತ ವಿರೋಧಪಕ್ಷ ಕಾಂಗ್ರೆಸ್ ಅನ್ನು ಹಿಗ್ಗಾಮುಗ್ಗ ಜಾಡಿಸಿದರು. ಲೋಕಸಭೆಯಲ್ಲಿ ಮುಂದುವರೆದ ಆಪರೇಷನ್ ಸಿಂಧೂರ್ ಚರ್ಚೆಯಲ್ಲಿ ಮಾತನಾಡಿದ ಅಮಿತ್ ಷಾ, ಮಾಜಿ ಗೃಹಸಚಿವ ಪಿ.ಚಿದಂಬರಂ ಅವರು ಉಗ್ರರು ಎಲ್ಲಿಂದ ಬಂದಿದ್ದರು?, ಅವರು ಇಲ್ಲಿಯವರೇ, ಅಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಇದು ದೇಶದ ಭದ್ರತೆ ವಿಷಯವೇ ಹೊರತು ರಾಜಕಾರಣ ಮಾಡುವ ಸಂದರ್ಭವಲ್ಲ. ಪಹಲ್ಗಾಮ್ ದಾಳಿಗೂ, ಪಾಕಿಸ್ತಾನಕ್ಕೂ ಏನು ಸಂಬಂಧ ಎಂದು ಕೇಳುತ್ತಾರೆ. ಅವರು ಎಲ್ಲಿಂದ ಬಂದರು, ಅದಕ್ಕೆ ಯಾರು ಹೊಣೆ ಎಂದು ಪ್ರಶ್ನಿಸಿದ್ದಾರೆ. ಇದು ಕಾಂಗ್ರೆಸ್‌ನ ಬುದ್ಧಿ ಎಂದು ವಾಗ್ದಾಳಿ ನಡೆಸಿದರು.

ಪಾಕಿಸ್ತಾನವನ್ನು ಹೊಗಳುವುದರಿಂದ ನಿಮಗೆ ಏನು ಸಿಗುತ್ತದೆ ಎಂದು ನಾನು ಚಿದಂಬರಂ ಅವರನ್ನು ಕೇಳಲು ಬಯಸುತ್ತೇನೆ. ನಾವು ಸಾಕ್ಷ್ಯಾಧಾರವನ್ನು ಇಟ್ಟುಕೊಂಡೇ ಸದನದಲ್ಲಿ ಮಾತನಾಡುತ್ತಿದ್ದೇನೆ. ಎನ್‌ಕೌಂಟರ್‌ನಲ್ಲಿ ಬಲಿಯಾದ ಉಗ್ರರನ್ನು ಪಾಕಿಸ್ತಾನದ ಜೊತೆ ನಂಟು ಹೊಂದಿದ್ದಾರೆ ಎಂಬುದಕ್ಕೆ ಅವರಿಗೆ ಸಿಕ್ಕ ಗುರುತಿನ ಚೀಟಿಗಳೇ ಸಾಕ್ಷಿ. ಇದಕ್ಕಿಂತ ಇನ್ನೇನು ಬೇಕು? ಎಂದು ಪ್ರಶ್ನೆ ಮಾಡಿದರು.

ಭಯೋತ್ಪಾದಕರ ಬಗ್ಗೆ ಕಾಂಗ್ರೆಸ್‌ಗೆ ಯಾವಾಗಲೂ ವಿಶೇಷವಾದ ಪ್ರೀತಿ. ನಮ್ಮ ಭಾರತೀಯ ಸೇನೆ ಮತ್ತು ಇಲ್ಲಿನ ಜನರು ಹುತಾತ್ಮರಾದರೂ ನೀವು ಎಂದಿಗೂ ಕಣ್ಣೀರು ಸುರಿಸು



ವುದಿಲ್ಲ. ಬದಲಿಗೆ ದೆಹಲಿ ಬಾಟ್ಲಾ ಪ್ರಕರಣದಲ್ಲಿ ಶಿಕ್ಷೆಯಾದರೆ ನಿಮ್ಮ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಕಣ್ಣೀರು ಹಾಕುತ್ತಾರೆ. ಇದೇನಾ ನಿಮ್ಮ ದ್ವಂದ್ವ ನೀತಿ ಎಂದು ತರಾಟೆಗೆ ತೆಗೆದುಕೊಂಡರು.

ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರನ್ನು ಗುರಿಯಾಗಿಸಿಕೊಂಡು ಮಾತನಾಡಿದ ಶಾ, ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಕುರಿತಾದ ನಿರಂತರ ವಿವಾದಕ್ಕೆ ಅವರೇ ಕಾರಣ. 1948 ರಲ್ಲಿ, ಭಾರತೀಯ ಸಶಸ್ತ್ರ ಪಡೆಗಳು ಪಿಒಕೆಯನ್ನು ವಾಪಸ್ ಪಡೆಯುವ ನಿರ್ಣಾಯಕ ಸ್ಥಾನದಲ್ಲಿದ್ದವು, ಆದರೆ ಆಗ ಪ್ರಧಾನಿ ನೆಹರು ಏಕಪಕ್ಷೀಯ ಕದನ ವಿರಾಮವನ್ನು ಘೋಷಿಸಿದರು ಎಂದು ಶಾ ಹೇಳಿದರು. ಇಂದು ಪಿಒಕೆ ಪ್ರತ್ಯೇಕ ಗುರುತಿನೊಂದಿಗೆ ಅಸ್ತಿತ್ವದಲ್ಲಿದ್ದರೆ, ಅದು ನೆಹರು ಯುದ್ಧವನ್ನು ನಿಲ್ಲಿಸುವ ನಿರ್ಧಾರದಿಂದಾಗಿ ಎಂದು ಟೀಕಾ ಪ್ರಹಾರ ನಡೆಸಿದರು.

ಕಾಂಗ್ರೆಸ್ ಭಾರತವನ್ನು ಪ್ರಶ್ನಿಸುತ್ತಿದೆ, ಪಾಕಿಸ್ತಾನವನ್ನಲ್ಲ:

ಭಾರತದ ಗಡಿಯಾಚೆಗಿನ ದಾಳಿಯ ಪುರಾವೆಗಳನ್ನು ಕೋರಿದ್ದಕ್ಕಾಗಿ ಕಾಂಗ್ರೆಸ್ ಅನ್ನು ಗುರಿಯಾಗಿಸಿಕೊಂಡ ಶಾ, ಆಪರೇಷನ್ ಸಿಂಧೂರ್ ನಂತರ, ನಮ್ಮ ಡಿಜಿಎಂಒ ಪಾಕ್ ಡಿಜಿಎಂಒಗೆ ಭಾರತವು ನಮ ಆತರಕ್ಷಣೆಯ ಹಕ್ಕಿನ ಪ್ರಕಾರ ಅವರ ಭೂಮಿಯಲ್ಲಿ ಭಯೋತ್ಪಾದಕ ಮೂಲಸೌಕರ್ಯದ ಮೇಲೆ ದಾಳಿ ಮಾಡಿದೆ ಎಂದರು.

ಮನಮೋಹನ್ ಸಿಂಗ್ ಅವರ ಸರ್ಕಾರದ ಅವಧಿಯಲ್ಲಿ ಹೇಗೆ ಆಯಿತೋ ಹಾಗೆ, ಭಯೋತ್ಪಾದಕರು ಬಂದು ನಮನ್ನು ಕೊಲ್ಲುತ್ತಾರೆ ಮತ್ತು ನಾವು ಮೌನವಾಗಿ ಕುಳಿತುಕೊಳ್ಳುತ್ತೇವೆ ಎಂದು ಯಾರೊಬ್ಬರು ಭಾವಿಸಬೇಡಿ ಎಂದು ಅಬ್ಬರಿಸಿದರು.

ಆಪರೇಷನ್ ಸಿಂಧೂರ್ ಮತ್ತು ಮಹಾದೇವ್ ಅನ್ನು ಸಮರ್ಥಿಸಿಕೊಂಡರು, ಕಾಂಗ್ರೆಸ್ ಪಾಕಿಸ್ತಾನವನ್ನು ರಕ್ಷಿಸುತ್ತಿದೆ ಎಂದು ಆರೋಪಿಸಿದರು ಮತ್ತು ಪಿಒಕೆಯ ನಿರಂತರ ಅಸ್ತಿತ್ವಕ್ಕೆ ನೆಹರೂ ಅವರನ್ನು ದೂಷಿಸಿದರು.

ಭಾರತದ ರಾಷ್ಟ್ರೀಯ ಭದ್ರತಾ ನಿಲುವನ್ನು ದುರ್ಬಲಗೊಳಿಸುತ್ತಿದೆ ಮತ್ತು ಭಯೋತ್ಪಾದನೆ ವಿರುದ್ಧ ಹೋರಾಡುವ ಅದರ ಬದ್ಧತೆಯನ್ನು ಪ್ರಶ್ನಿಸುತ್ತಿದೆ. ಭಯೋತ್ಪಾದನೆಗೆ ಪ್ರಸ್ತುತ ಮೋದಿ ನೇತೃತ್ವದ ಸರ್ಕಾರದ ಆಕ್ರಮಣಕಾರಿ ಪ್ರತಿಕ್ರಿಯೆ ಮತ್ತು ಪ್ರಧಾನಿ ಮನಮೋಹನ್ ಸಿಂಗ್ ಅವರ ಅಡಿಯಲ್ಲಿ ಹಿಂದಿನ ಯುಪಿಎ ಆಡಳಿತದ ನಿಷ್ಕ್ರಿಯ ವಿಧಾನ ಎಂದು ಅವರು ವಿವರಿಸಿದ್ದರ ನಡುವಿನ ತೀಕ್ಷ್ಣವಾದ ವ್ಯತ್ಯಾಸವನ್ನು ತೋರಿಸಿದರು.

ನಾವು ಸಿಂಧೂ ನೀರಿನ ವಿಷಯದಲ್ಲಿ ಬಲಶಾಲಿಗಳಾಗಿದ್ದೇವೆ, ಆದರೆ ಸಿಂಧೂ ಜಲ ಒಪ್ಪಂದದ ನಂತರ, ನಾವು ಶೇ. 80ರಷ್ಟು ನೀರನ್ನು ಪಾಕಿಸ್ತಾನಕ್ಕೆ ನೀಡಿದ್ದೇವೆ. ಕಾಂಗ್ರೆಸ್ ನಾಯಕತ್ವವು ಭಾರತದ ಕಾರ್ಯತಂತ್ರದ ಪ್ರಯೋಜನವನ್ನು ಬಿಟ್ಟುಕೊಟ್ಟಿದೆ 1960 ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಈ ಕ್ರಮವನ್ನು ವಿರೋಧಿಸಿದ್ದರು ಎಂದು ಶಾ ಗಮನ ಸೆಳೆದರು.

ಕೆ.ಆಲದಹಳ್ಳಿಯಲ್ಲಿ ಬೀಜೋಪಚಾರ ಕಾರ್ಯಕ್ರಮ

• ಪ್ರಜೋದಯ ವರದಿ

ಹಾಸನ: ತಾಲ್ಲೂಕಿನ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ತಾಲ್ಲೂಕಿನ ಕೆ. ಆಲದಹಳ್ಳಿಯಲ್ಲಿ ಬೀಜೋಪಚಾರ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಮಹಾ ವಿದ್ಯಾಲಯದ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ. ಶೋಟ ಜೋಸೆಫ್ ಅವರು, ಬೀಜೋಪಚಾರದ ಪ್ರಾಮುಖ್ಯತೆ ಮತ್ತು ಕಾರ್ಯ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಜೋಳ ಬೀಜದ ಬೀಜೋಪಚಾರದ ಪ್ರಾತ್ಯಕ್ಷಿತೆಯನ್ನು ಗ್ರಾಮಸ್ಥರಿಂದಲೇ ಮಾಡಿಸಲಾಯಿತು. ಬೀಜೋಪಚಾರಕ್ಕೆ ಜೈವಿಕ ಗೊಬ್ಬರವಾದ ಟ್ರೈಕೋಡೆಮರ್ ಹಾಗು ಸುಡೋಮೋನಸ್, ರಾಸಾಯನಿಕ ಗೊಬ್ಬರವಾದ ಮೆಟಲಾಕ್ಸಿಲ್ ಮತ್ತು ಮಾಂಕೋಝೆಬ್, ಬೀಜಾಮೃತವನ್ನು ಬಳಸಲಾಯಿತು.

ಶಿರಾರ್ಥಿಗಳಾದ ಅಮೃತ್ ಹಾಗು ರಂಜಿತಾ ಅವರು ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯಾರ್ಥಿಗಳು ಹೆತ್ತವರ ಋಣ ತೀರಿಸಬೇಕು

• ಪ್ರಜೋದಯ ವರದಿ

ಹಾಸನ: ವಿದ್ಯಾರ್ಥಿಗಳು ಸಂಸ್ಕಾರವಂತರಾಗಿ ಹೆತ್ತ ತಂದೆ-ತಾಯಿಯ ಋಣ ತೀರಿಸಬೇಕೆಂದು ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಆಯುಕ್ತ ಡಾ. ವೈ.ಎಸ್. ವೀರಭದ್ರಪ್ಪ ಹೇಳಿದರು.

ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕಿನ ವಿವಿಧ ಕಾಲೇಜುಗಳ ರೋವರ್ಸ್ ಮತ್ತು ರೇಂಜರ್ಸ್, ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಅಗ್ರಗಾಮಿ ಪ್ರಾವೀಣ್ಯತಾ ಪದಕ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳು ಸಂಸ್ಕಾರವಂತರಾಗಿ ಗುರುಗಳ ಹಾಗು ತಂದೆ-ತಾಯಿ ಮತ್ತು ಸಮಾಜದ ಋಣ ತೀರಿಸಬೇಕಿದೆ. ವಿದ್ಯಾಭ್ಯಾಸದ ಜೊತೆಗೆ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿದರೆ ಸದೃಢ ರಾಷ್ಟ್ರ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಂಯೋಜಕಿ ಬಿ.ಎಸ್. ವನಜಾಕ್ಷಿ ಅವರು ಮಾತ

ನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯು ವಿದ್ಯಾರ್ಥಿಯ ಮೂಲ ಶಿಕ್ಷಣದಿಂದ ವೃತ್ತಿಪರ ಶಿಕ್ಷಣದವರೆಗೂ ಸೇರಿ ಎಲ್ಲಾ ಚಟುವಟಿಕೆಗಳಿಗೆ ಮಾರ್ಗದರ್ಶಕ ಕ್ರಿಯಾ ರೂಪದಂತಿರುತ್ತದೆ. ಈ ಪಯಣದಲ್ಲಿ ಯಾವ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುತ್ತಾರೋ ಅವರಿಗೆ ವೃತ್ತಿ ಮತ್ತು ಪ್ರವೃತ್ತಿ, ವೈಯಕ್ತಿಕ ಬದುಕಿಗೆ, ಮಾರ್ಗದರ್ಶನದ ಕೈಗನ್ನಡಿಯಂತಿರುತ್ತದೆಂದು ತಿಳಿಸಿದರು.

ಗೈಡ್ಸ್ ಆಯುಕ್ತ ಜಯರಮೇಶ್ ಅವರು ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ ಎಂದು ಅಭಿಪ್ರಾಯಿಸಿದರು.

ವಿವಿಧ ಶಾಲೆಗಳಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಏಕಲವ್ಯ ಮುಕ್ತ ದಳದ ಸಹ ನಾಯಕ ಗಿರೀಶ್, ಕುಮಾರಸ್ವಾಮಿ, ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಗೃಹ ಉಪಯೋಗಿ ಉಪಕರಣ ತಯಾರಿಕೆ ಧ್ವಜ ಸಂಬಂಧ ಮತ್ತು ಸೇತುವೆ, ಗ್ಯಾಜೆಟ್ ನಿರ್ಮಾಣ ಕುರಿತು ತರಬೇತಿ ನೀಡಿದರು.

ಸ್ಕೌಟ್ಸ್ ಅಂಡ್ ಗೈಡ್ಸ್ ಖಜಾಂಚಿ ಮಹಾಲಿಂಗೇಗೌಡ, ಪ್ರಿಯಾಂಕ, ನಿಕಟ ಪೂರ್ವ ಜಿಲ್ಲಾ ಜಂಟಿ ಕಾರ್ಯದರ್ಶಿ ಕಾಂಚನಮಾಲ ಇತರರಿದ್ದರು.

ಗ್ರಾಮೀಣ ಸಂಸ್ಕೃತಿ ಅರಿಯಲು ಕರೀಂ ಖಾನ್ ಜೀವನ ಮುಡಿಪು

ಸಕಲೇಶಪುರದಲ್ಲಿ 'ಜನಪದ ಜಂಗಮ' ಡಾ. ಎಸ್.ಕೆ. ಕರೀಂ ಖಾನ್‌ರ 19ನೇ ವರ್ಷದ ನುಡಿ ನಮನ ಕಾರ್ಯಕ್ರಮ

• ಪ್ರಜೋದಯ ವರದಿ

ಸಕಲೇಶಪುರ: ಡಾ. ಎಸ್.ಕೆ. ಕರೀಂ ಖಾನ್ ಅವರು ಗ್ರಾಮೀಣ ಬದುಕು, ಕಲೆ ಮತ್ತು ಸಂಸ್ಕೃತಿ ಅಧ್ಯಯನಕ್ಕಾಗಿ ಜೀವವನ್ನೇ ಮುಡಿಪಾಗಿಟ್ಟಿದ್ದರೆಂದು ರಂಗಕರ್ಮಿ ಪ್ರಸಾದ್ ರಕ್ಷಿದಿ ಅವರು ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮಂಗಳವಾರ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಜನಪದ ಜಂಗಮ' ಡಾ. ಎಸ್.ಕೆ. ಕರೀಂ ಖಾನ್ ಅವರ 19ನೇ ವರ್ಷದ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿ, ಕರೀಂ ಖಾನ್ ಕನ್ನಡ ಜಾನಪದ ಲೋಕದ ಅನನ್ಯ ಪ್ರತಿಭೆ. ಜಾನಪದವು ಅವರ ಹೃದಯದ ನಾಡಿಯಾಗಿತ್ತು. ಮಹಾತ್ಮ ಗಾಂಧೀಜಿ

ಅವರ ಚಿಂತನೆಗಳನ್ನು ಅಳವಡಿಸಿಕೊಂಡಿದ್ದ ಅವರು ಗ್ರಾಮೀಣ ಸಂಸ್ಕೃತಿಯ ಅಧ್ಯಯನಕ್ಕಾಗಿ ಇಡೀ ಜೀವನ ಮೀಸಲಿಟ್ಟಿದ್ದರೆಂದರು.

ಸುಮಾರು 8 ಸಾವಿರ ಕಿ.ಮೀ. ಬಸ್‌ನಲ್ಲಿ ಸಂಚರಿಸಿ 240 ಗಂಟೆಗಳ ಜಾನಪದ ಕಲಾ ವೀಡಿಯೋ ದಾಖಲೆ ಮಾಡಿದರು. ಜಾನಪದ ಗೀತೆಗಳ ರಚನೆ, ಸಂಗ್ರಹ, ಅಧ್ಯಯನ ಮತ್ತು ಪ್ರಸಾರದಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿದ್ದಾರೆ. ಅವರ ಕೃಷಿ, ಗಿರಿಜನ ಕಲೆಯ ಪ್ರೋತ್ಸಾಹ, ಜನಪದ ಲೋಕದ ವೈಶಿಷ್ಟ್ಯತೆಗಳ ಕುರಿತ ಸಂಶೋಧನೆಗಳು ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಚರ್ಚೆಗೂ ದಿಕ್ಕು ತೋರಿದವು. ಜನಪದ ಗೀತೆ ಮತ್ತು ಕನ್ನಡ ಜನಪದ ಗೀತೆಗಳು ಎಂಬ ಎರಡು ಪ್ರಮುಖ ಸಂಕಲನಗಳನ್ನು ಕನ್ನಡಿಗರಿಗೆ ನೀಡಿದ್ದಾರೆ. ಅವರ ರಚನೆಗಳಲ್ಲಿ ನಾಟಕ, ಕಥಾ ಸಂಕಲನ, ಕಾದಂಬರಿ, ಭಕ್ತಿಗೀತೆ, ಚಿತ್ರಗೀತೆಗಳು ಸೇರಿವೆ ಎಂದರು.

ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಅವರು ಮಾತನಾಡಿ, ಎಸ್.ಕೆ. ಕರೀಂ ಖಾನ್ ಆದರ್ಶದ ಜೀವನ ಎಲ್ಲರಿಗೂ ಮಾದರಿ ನಮ್ಮೂರ ಹೆಸರಿಗೆ ಕೀರ್ತಿ ತಂದವರು ಎಂದರು.

ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳನ್ನು ಡ್ರಗ್ ಪಿಡುಗು ನಾಶ ಮಾಡಲು ಮುಂದಾಗಿದೆ. ಅದರ ವಿರುದ್ಧ ಹೋರಾಡಲು ನಾವೆಲ್ಲ ಒಂದಾಗಬೇಕಾಗಿದೆ. ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಿದ್ಯಾರ್ಥಿನಿಯರು ವಹಿಸಬೇಕಾಗಿದೆ ಎಂದು ಕರೆ ನೀಡಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಶಾರದಾ ಗುರುಮೂರ್ತಿ ಅವರು ಮಾತನಾಡಿ, 1989 ರಲ್ಲಿ ಕಲಬುರಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 1995ರಲ್ಲಿ ಜಾನಪದ ಶ್ರೀ, 1997ರಲ್ಲಿ ನಾಡೋಜ, 2004ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸೇರಿ ನೂರಕ್ಕೂ ಹೆಚ್ಚು ಗೌರವಕ್ಕೆ ಪಾತ್ರರಾದ ಕರೀಂ ಖಾನ್ ನಮ್ಮ ತಾಲ್ಲೂಕಿನವರು ಎನ್ನುವುದು ಹೆಮ್ಮೆಯ ವಿಚಾರ. ಅವರ ಸಾಧನೆಯ ಪ್ರತೀಕವೆಂಬಂತೆ ಬೆಂಗಳೂರು ಇಂದಿರಾ ನಗರದ 100 ಅಡಿ ರಸ್ತೆಗೆ ಎಸ್.ಕೆ. ಕರೀಂ ಖಾನ್ ರಸ್ತೆ ಎಂಬ ನಾಮಕರಣವೂ ಮಾಡಲಾಗಿದೆ ಎಂದರು.

ಪ್ರಾಂಶುಪಾಲ ವಿ.ಪಿ. ರಮೇಶ್ ಉದ್ಘಾಟಿಸಿದರು. ಪತ್ರಕರ್ತ ಮಲ್ನಾಡ್ ಮೆಹಬೂಬ್, ಅರ್ಚನಾ ಜಯಂತ್, ಕಸಾಪ ತಾಲ್ಲೂಕು ಕಾರ್ಯದರ್ಶಿ ಯೋಗೇಶ್, ಎಸ್.ಡಿ. ಆದರ್ಶ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೈಭೀಮ್ ಮಂಜುನಾಥ್, ಚೇತನ್, ಅಕ್ಬರ್ ಜುನೈದ್, ಪುರಸಭೆ ನಾಮ ನಿರ್ದೇಶಿತ ಸದಸ್ಯ ಬಿಲ್ಕಿಸ್ ರಾಣಿ, ಸಾಯಿಬಾಬಾ ಹಾಗು ಇನ್ನಿತರರು ಉಪಸ್ಥಿತರಿದ್ದರು.

ಸೆಸ್ಕ್ ಸಿಬ್ಬಂದಿ ಜನರ ಕರೆಗಳಿಗೆ ಸ್ಪಂದಿಸಿ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

ಸಕಲೇಶಪುರ: ಪ್ರತಿಯೊಬ್ಬ ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮೊದಲು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಚೆಸ್ಕಾಂ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ, ಸಕಲೇಶಪುರ ಹಾಗೂ ಆಲೂರು ಉಪವಿಭಾಗದ ಸೆಸ್ಕ್ ಅಧಿಕಾರಿಗಳು ಹಾಗೂ ವಿದ್ಯುತ್ ಗುತ್ತಿಗೆದಾರರ ಜೊತೆ ಮಾತನಾಡಿದ ಅವರು, ಅಧಿಕಾರಿಗಳು ಮೊಬೈಲ್ ಸ್ವಿಚ್ ಆನ್ ಮಾಡಿಕೊಂಡು ಸಾರ್ವಜನಿಕರ ಕರೆಗಳಿಗೆ ಸ್ಪಂದಿಸಬೇಕು. ಕರೆ ಸ್ವೀಕರಿಸುವ ಜೊತೆಗೆ ಸೌಜನ್ಯದಿಂದ ಮಾತನಾಡಬೇಕು. ಇದರಿಂದ ಹಲವಾರು ಸಮಸ್ಯೆಗಳು ತಕ್ಷಣ ಬಗೆಹರಿಯಬಹುದು ಎಂದರು.

ಮಲೆನಾಡಿನಲ್ಲಿ ಮಳೆಗಾಲದಲ್ಲಿ

ಮರದ ರೆಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವುದು ಸಾಮಾನ್ಯ. ಸಾರ್ವಜನಿಕರಿಂದ ಬರುವ ದೂರುಗಳಲ್ಲಿ ಶೇ.50ರಷ್ಟು ಸಮಸ್ಯೆಗಳು ಸೆಸ್ಕ್‌ಗೆ ಸಂಬಂಧಿಸಿದಂತಿವೆ. ಮುಂದಿನ ಮಳೆಗಾಲ ಆರಂಭವಾಗುವ ಮೊದಲು ಅರಣ್ಯ ಇಲಾಖೆಯ ಜೊತೆ ಸಂವಹನ ನಡೆಸಿ, ವಿದ್ಯುತ್ ತಂತಿಗಳು ಹಾದು ಹೋಗಿರುವ ಪ್ರದೇಶದಲ್ಲಿ ಮರದ ರೆಂಬೆಗಳನ್ನು ತೆರವುಗೊಳಿಸುವ ಕಾರ್ಯ ಕೈಗೊಳ್ಳಬೇಕು. ಇದರಿಂದ ಶೇ.50ರಷ್ಟು ಸಮಸ್ಯೆಗಳಿಗೆ ಪರಿಹಾರ ಸಿಗಬಹುದು.

ಅಭಿಯಂತರರು ಕಚೇರಿಗೆ ಸೀಮಿತವಾಗದೇ ತಮ್ಮ ವ್ಯಾಪ್ತಿಯ ಎಲ್ಲಾ ಕಡೆ ಸಂಚರಿಸಬೇಕು. ಆದರಿಂದ ಸ್ಥಳೀಯ ಸಮಸ್ಯೆಗಳು ಅರಿವಾಗುತ್ತವೆ. ವಿದ್ಯುತ್ ಕಂಬಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಹಾದು ಹೋಗಿರುವ ತಂತಿಗಳ ಸ್ಥಿತಿಗೆ ಗಮನ ಹರಿಸಬೇಕು. ಗಂಭೀರ ಸಮಸ್ಯೆಗಳ ಬಗ್ಗೆ ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಅವರಿಂದಲೂ ಪರಿಹಾರ ಸಿಗದಿದ್ದರೆ ಶಾಸಕರ ಗಮನಕ್ಕೆ ತರಬೇಕು. ಸರ್ಕಾರದ ಮಟ್ಟದಲ್ಲಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಆಗದಂತೆ ಎಚ್ಚರಿಕೆ ವಹಿಸಬೇಕು. ವಿದ್ಯುತ್ ಇಲ್ಲದೆ ಯಾವುದೇ ಯೋಜನೆಗಳು ಸಾಗುವುದು ಅಸಾಧ್ಯ. ಪೂರೈಕೆ ನಿರಂತರವಾಗಿರಲು ತಕ್ಕ ಕ್ರಮ ಕೈಗೊಳ್ಳಬೇಕು. ಗುತ್ತಿಗೆದಾರರ ಕಡತಗಳನ್ನು ನೆಪವಿಲ್ಲದೆ ಸ್ಥಗಿತಗೊಳಿಸಬಾರದು. ಬಿಲ್‌ಗಳನ್ನು ತಕ್ಷಣ ವಿಲೇವಾರಿ ಮಾಡುವಂತೆ ಸೂಚಿಸಿದರು. ಸಾರ್ವಜನಿಕರ ಕೆಲಸಗಳನ್ನು ವಿಳಂಬವಿಲ್ಲದೆ ಮುಗಿಸಲು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಟ್ಟುಕಟ್ಟಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಸೆಸ್ಕ್ ಹಾಸನ ವೃತ್ತದ ಮುಖ್ಯ ಅಭಿಯಂತರ ಕಾಂತರಾಜು, ಸಕಲೇಶಪುರ ಉಪವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಅರ್ಜುನ್, ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್, ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಪ್ರೇಮ್‌ನಾಥ್, ಪದಾಧಿಕಾರಿಗಳಾದ ಗಿರೀಶ್, ಆನಂದ್ ಲಿಯೋ ವ್ಯಾಸ್, ಮೋಹನ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಗ್ಯಾರಂಟಿ ಯೋಜನೆಗಳನ್ನು ಸಕಾಲಕ್ಕೆ ತಲುಪಿಸಿ

• ಪ್ರಜೋದಯ ವರದಿ

ಬೇಲೂರು: ಅನ್ನಭಾಗ್ಯದಿಂದ ಯಾವುದೇ ಬಡವರು ವಂಚಿತರಾಗಬಾರದು ಹಾಗೂ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸಕಾಲಕ್ಕೆ ತಲುಪಿಸಲು ಸಂಬಂಧಿಸಿದ ಅಧಿಕಾರಿಗಳು ಮುಂದಾಗಬೇಕು ಎಂದು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಣಿ ಆನಂದ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿಯಲ್ಲಿ ಕರೆಯಲಾಗಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅನ್ನಭಾಗ್ಯ ಯೋಜನೆಯಿಂದ ಸಾಕಷ್ಟು ಅರ್ಹರು ಹೊರಗಿರುವ ಬಗ್ಗೆ ಮಾಹಿತಿ ಇದ್ದು, ಎಲ್ಲರಿಗೂ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಈಗ ಪಡಿತರ ಚೀಟಿಗೆ ಹೆಸರು ನೊಂದಾಯಿಸಲಾಗುತ್ತಿದೆ. ಅನ್ನಭಾಗ್ಯ ಯೋಜನೆಯಲ್ಲಿ

ಸರ್ಕಾರ ಎಲ್ಲರಿಗೂ ಅಕ್ಕಿ ಕೊಡುತ್ತಿದ್ದರೆ ನ್ಯಾಯಬೆಲೆ ಅಂಗಡಿಗಳಲ್ಲಿ ತೂಕದಲ್ಲಿ ಮೋಸ ಮಾಡುತಿದ್ದಾರೆ ಎಂಬ ಆರೋಪವಿದ್ದು ಅಂತವರ ವಿರುದ್ಧ ಕ್ರಮಕ್ಕೆ ಮುಂದಾಗಬೇಕು ಎಂದರು.

ಮುಂದಿನ ಒಂದು ವಾರದಲ್ಲಿ ನ್ಯಾಯಬೆಲೆ ಅಂಗಡಿಗಳವರ ಸಭೆ ಕರೆಯಬೇಕು. ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲೂ ಪ್ರತಿ ತಿಂಗಳು ಒಬ್ಬರಿಗೆ ಎಷ್ಟು ಪಡಿತರ ವಿತರಿಸಲಾಗುವುದು ಎಂಬುದರ ಬಗ್ಗೆ ನಾಮಫಲಕ ಅಳವಡಿಸಬೇಕು. ಆಹಾರ ಇಲಾಖೆ ಅಧಿಕಾರಿಗಳು ನ್ಯಾಯಬೆಲೆ ಅಂಗಡಿಗೆ ಬೇಟಿ ನೀಡಿ ಗ್ರಾಹಕರ ಸಮಸ್ಯೆ ಪರಿಹರಿಸಲು ಮುಂದಾಗಬೇಕು. ನ್ಯಾಯಬೆಲೆ ಅಂಗಡಿಗಳ ವ್ಯಾಪ್ತಿಯ ಜನರಲ್ಲಿ ಯೋಜನೆಯ ಬಗ್ಗೆ ಜಾಗೃತಿ ಸಮಿತಿ ರಚಿಸಬೇಕು ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಇಂದ್ರೇಶ್ ಮಾತನಾಡಿ, ಆಹಾರ ಇಲಾಖೆ ಅಧಿಕಾರಿಗಳು ಇಲ್ಲಿವರೆಗೂ ಎಷ್ಟು ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿದ್ದೀರ. ಎಷ್ಟು ಸಮಸ್ಯೆ ಬಗೆ ಹರಿಸಿದ್ದೀರ ಸಂಪೂರ್ಣ ಮಾಹಿತಿ ಕೊಡಿ ಎಂದರು.

ಆಹಾರ ಇಲಾಖೆ ಶಿರಸ್ತೆದಾರ್ ವೀಣಾ ಮಾತನಾಡಿ, ಸರ್ಕಾರದ ಗ್ಯಾರಂಟಿ ಯೋಜನೆಯಲ್ಲಿ ಆಹಾರ ಇಲಾಖೆ ಪಾತ್ರ ಮಹತ್ತರದ್ದಾಗಿದೆ. ಅಂಗಡಿಯವರು ಗ್ರಾಹಕರಿಗೇನಾದರೂ ಮೋಸ ಮಾಡುತ್ತಿರುವ ಬಗ್ಗೆ ದೂರು ಬಂದರೆ ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ತಾಪಂ ಇಒ ವಸಂತ ಕುಮಾರ್ ಸೇರಿದಂತೆ ಗ್ಯಾರಂಟಿ ಸಮಿತಿ ಸದಸ್ಯರು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಜಿಲ್ಲಾದ್ಯಂತ ನಾಗರ ಪಂಚಮಿ ಸಂಭ್ರಮ

• ಪ್ರಜೋದಯ ವರದಿ

ಹಾಸನ: ನಗರ ಸೇರಿ ಜಿಲ್ಲಾದ್ಯಂತ ಮಂಗಳವಾರ ನಾಗರ ಪಂಚಮಿಯನ್ನು ಸಾರ್ವಜನಿಕರು ಅರ್ಥಪೂರ್ಣವಾಗಿ ಆಚರಿಸಿದರು.

ನಗರದ ಮಹಾರಾಜ ಪಾರ್ಕ್, ಹೇಮಾವತಿ ನಗರದ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ ಸೇರಿ ವಿವಿಧೆಡೆ ಹುತ್ತಕ್ಕೆ ಹಾಲೆರೆದು ಭಕ್ತಿ ಮೆರೆದರು.

ಶ್ರಾವಣ ಮಾಸದ ಮೊದಲ ಹಬ್ಬ ನಾಗರ ಪಂಚಮಿ. ಈ ಹಬ್ಬ ಮುಂದೆ ಬರಲಿರುವ ಗಣೇಶ ಚತುರ್ಥಿ, ಕೃಷ್ಣಾಷ್ಟಮಿ, ನವರಾತ್ರಿ, ಊರಿನ ಜಾತ್ರೆಗೆ ಮುನ್ನುಡಿಯಾಗಿದೆ.

ನಾಗರ ಪಂಚಮಿ ದಿನ ಹುತ್ತಕ್ಕೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದರೆ ಇಷ್ಟಾರ್ಥಗಳು ನೆರವೇರುತ್ತದೆಂಬುದು ನಂಬಿಕೆಯಾಗಿದೆ.

ಹೃದಯದ ಆರೋಗ್ಯಕ್ಕಾಗಿ ಬನ್ನಿ ನಡೆಯೋಣ

• ಪ್ರಜೋದಯ ವರದಿ

ಹೊಳೆನರಸೀಪುರ: ಹೃದಯದ ಆರೋಗ್ಯಕ್ಕಾಗಿ ಬನ್ನಿ ನಡೆಯೋಣ ಎಂಬುದಾಗಿ ತಾಲ್ಲೂಕು ಆಡಳಿತ ನಾಗರೀಕರಿಗೆ ಜಾಗೃತಿ ಮೂಡಿಸಿ ವಾಕಥಾನ್ ನಡಿಗೆ ಜಾಥ ನಡೆಸಲಾಯಿತು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಂಗಳವಾರ ನಾನಾ ಇಲಾಖೆ ಅಧಿಕಾರಿಗಳು ಮತ್ತು ವಿವಿಧ ಸಂಘ, ಸಂಸ್ಥೆಯ ಮುಖಂಡರೊಂದಿಗೆ ವೇಗದ ನಡಿಗೆ ಕಾರ್ಯಕ್ರಮಕ್ಕೆ ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಚಾಲನೆ ನೀಡಿ ಮಾತನಾಡಿ, ಈ ಮೂಲಕ ಸಾರ್ವಜನಿಕರಲ್ಲಿ ಹೃದಯದ ಆರೋಗ್ಯಕ್ಕಾಗಿ ವ್ಯಾಯಾಮ ಅಗತ್ಯ. ಪೂರ್ವಿಕರು ಆಹಾರಕ್ಕಾಗಿ ಶ್ರಮದಾಯಕ ಕೆಲಸ ಮಾಡುತ್ತಿದ್ದರು. ಮಾನವ ಸಂಪನ್ಮೂಲ

ಬಳಕೆಯ ಬದಲಿಗೆ ಯಂತ್ರೋಪಕರಣಗಳ ಅವಿಷ್ಕಾರ ಸ್ವಾಗತಾರ್ಹ. ಆದರೆ ಶ್ರಮ ಇಲ್ಲದ ಜೀವನ ಕಾಯಿಲೆಗೆ ದಾರಿ ಮಾಡಿಕೊಡುತ್ತದೆ.

ಇಂದಿನ ಯುವಕರಲ್ಲಿ ದೈಹಿಕ ಕಸರತ್ತು ಕಡಿಮೆಯಾಗುತ್ತಿದೆ. ಹೊರ ಆಟಾಟೋಪಗಳು ಮಾಯವಾಗಿ ಕೈಯಲ್ಲಿ ಸದಾ ಮೊಬೈಲ್ ರಿಂಗುಣಿಸಿವೆ. ಇದರಿಂದ ಮಾನಸಿಕ ದುರ್ಬಲತೆಗೂ ಕಾರಣವಾಗುತ್ತಿದೆ. ಸದಾ ಚೈತನ್ಯಯುತ ಜೀವನಕ್ಕಾಗಿ ದಿನವಿಡಿ ಲವಲವಿಕೆಯಿಂದ ಇರಲು ಬೆಳಗಿನ ವ್ಯಾಯಾಮ ಅಗತ್ಯ. ವಯೋವೃದ್ಧರಿಗೆ ವಾಕಿಂಗ್ ಪ್ರಶಸ್ತವಾಗಿರುತ್ತದೆ ಎಂದರು.

ಟಿಎಚ್‌ಒ ಡಾ.ಎಚ್.ಎನ್.ರಾಜೇಶ್ ಮಾತನಾಡಿ, ಆರೋಗ್ಯವಂತ ಸಮಾಜ ದೇಶದ ಪ್ರಗತಿಗೆ ಪೂರಕ. ಹೃದಯಾಘಾತ ಪ್ರಕರಣಗಳು ಚಿಕ್ಕ ವಯೋಮಾನದವರಲ್ಲಿ ಪ್ರಾಣ ತೆತ್ತುವಂತೆ ಮಾಡುತ್ತಿದೆ. ಉತ್ತಮ ಆಹಾರ ಪದ್ದತಿ ಅನುಸರಿಸಿ, ಆಗಾಗ್ಗೆ ಅಗತ್ಯ ಎನಿಸಿದಾಗ ತಪಾಸಣೆ ಮಾಡಿಸಿಕೊಳ್ಳಲು ನಿರ್ಲಕ್ಷ್ಯ ಮಾಡದಿರಿ. ದುಶ್ಚಟಗಳಿಂದ ಯುವಕರು ದೂರ ಉಳಿಯಲು ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ಪುರಸಭಾ ಅಧ್ಯಕ್ಷ ಎಚ್.ಕೆ.ಪ್ರಸನ್ನ, ತಾಪಂ ಇಒ ಮುನಿರಾಜ್, ಸೋಶಿಯಲ್ ಕ್ಲಬ್‌ನ ಅಧ್ಯಕ್ಷ ಕೆ.ಎಂ.ಹೊನ್ನಪ್ಪ, ರೋಟರಿ ಅಧ್ಯಕ್ಷ ಪ್ರವೀಣ್, ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ.ನಾಗೇಂದ್ರ ಹಾಗೂ ವೈದ್ಯರುಗಳು ವಾಕಥಾನ್‌ನಲ್ಲಿ ಭಾಗವಹಿಸಿದ್ದರು.

ಇಂದಿನಿಂದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನ

• ಪ್ರಜೋದಯ ವರದಿ

ಹಾಸನ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ, ತಾಲ್ಲೂಕು ರೆಡ್ ಕ್ರಾಸ್ ಘಟಕ, ತಾಲ್ಲೂಕು ಒಕ್ಕಲಿಗರ ಸಂಘ ಆಲೂರು, ಹಾಸನ ಜಿಲ್ಲಾ ಪಕ್ಷಿ ವೀಕ್ಷಕರ ಸಂಘ ಮತ್ತು ಚಿತ್ಕಲಾ ಫೌಂಡೇಶನ್ ಹಾಸನ ಇವರ ಸಹಯೋಗದಲ್ಲಿ ಪರಿಸರವಾದಿ ಹೆಮ್ಮಿಗೆ ಮೋಹನ್ ಹಾಗೂ ಚಿತ್ರ ಕಲಾವಿದ ಬಿ.ಎಸ್.ದೇಸಾಯಿ ಅವರು ಸೆರೆಹಿಡಿದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನವನ್ನು ಜು.30 ಹಾಗು 31ರಂದು ಏರ್ಪಡಿಸಲಾಗಿದೆ.

ಆಲೂರು ಪಟ್ಟಣದ ಒಕ್ಕಲಿಗರ ಸಂಘದಲ್ಲಿ ಬೆಳಗ್ಗೆ 11.15 ಗಂಟೆಗೆ ಆಲೂರು ಮತ್ತು ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿಮೆಂಟ್ ಮಂಜು ಉದ್ಘಾಟಿಸಲಿದ್ದು, ಉಪ ಅರಣ್ಯ ಸಂರಕ್ಷಾಧಿಕಾರಿ ಸೌರಬ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಮಲ್ಲಿಕಾರ್ಜುನ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಕೃಷ್ಣೇಗೌಡ, ವಲಯ ಅರಣ್ಯಾಧಿಕಾರಿ ಹೇಮಂತ್, ತಾಲ್ಲೂಕು ಒಕ್ಕಲಿಗರ ಸಂಘದ ಉಪಾಧ್ಯಕ್ಷ ಕಣದಹಳ್ಳಿ ಮಂಜೇಗೌಡ, ರೈಸ್ ಮಿಲ್ ಮಾಲೀಕರಾದ ರೇಣುಕಾ ಪ್ರಸಾದ್, ತಾಲ್ಲೂಕು ಸಭಾಪತಿ ಕಾಂತರಾಜ್, ಶಾಂತ ಕೃಷ್ಣ ಖಜಾಂಚಿ ತಾಲ್ಲೂಕು ಒಕ್ಕಲಿಗರ ಸಂಘ, ಸುರೇಶ್, ಜಿಲ್ಲಾ ರೆಡ್ ಕ್ರಾಸ್, ಸುಬ್ಬಸ್ವಾಮಿ ಅಧ್ಯಕ್ಷರು ಜಿಲ್ಲಾ ಪಕ್ಷಿ ವೀಕ್ಷಕರ ಸಂಘ ಮತ್ತು ಉಪಪ್ರಾಂಶುಪಾಲ ವಿಜಯಕುಮಾರ್ ಭಾಗವಹಿಸಲಿದ್ದಾರೆ.

ದೇವಾಲಯ ಆವರಣದಲ್ಲಿ ಪ್ಲಾಸ್ಟಿಕ್ ನಿರ್ಬಂಧ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿರುವ ಎಲ್ಲಾ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಬರುವ ಎಲ್ಲಾ ವರ್ಗದ ಅಧಿಸೂಚಿತ ಸಂಸ್ಥೆಗಳಲ್ಲಿ ಪ್ಲಾಸ್ಟಿಕ್ ನಿರ್ಬಂಧಿಸುವ ಹಾಗೂ ಸ್ವಚ್ಛತೆಗೆ ಸಂಬಂಧಿಸಿದಂತೆ ಈ ಕೆಳಕಂಡ ನಿರ್ದೇಶನಗಳನ್ನು ಕಡ್ಡಾಯವಾಗಿ ಜಾರಿಗೆ ತರುವಂತೆ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ದೇವಸ್ಥಾನದ ಆವರಣದಲ್ಲಿ ಪ್ಲಾಸ್ಟಿಕ್ ಬಳಕೆಯಾಗದಂತೆ ಕಟ್ಟು-ನಿಟ್ಟಾಗಿ ಕ್ರಮವಹಿಸುವುದು. ದೇವಾಲಯಕ್ಕೆ ಸೇರಿದ ಅಂಗಡಿ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿ, ಬಟ್ಟೆಯ ಕೈ ಚೀಲಗಳನ್ನು ಬಳಸುವುದನ್ನು ಕಡ್ಡಾಯಗೊಳಿಸುವುದು. ದೇವಾಲಯದ ಆವರಣದಲ್ಲಿ ಪ್ಲಾಸ್ಟಿಕ್ ಕಸವನ್ನು ಎಸೆದಲ್ಲಿ ಅಥವಾ ತ್ಯಾಜ್ಯವನ್ನು ಹಾಕಿದಲ್ಲಿ ಸಂಬಂಧಪಟ್ಟವರಿಗೆ ಕಡ್ಡಾಯವಾಗಿ ರೂ.1000 ದಂಡವನ್ನು ವಿಧಿಸಿ ಸಂಗ್ರಹವಾದ ಮೊತ್ತವನ್ನು ದೇವಾಲಯದ ನಿಧಿಗೆ ಜಮಾ ಮಾಡುವ ಬಗ್ಗೆ ಕ್ರಮ ವಹಿಸುವುದು.

ದೇವಸ್ಥಾನದ ಸುತ್ತ-ಮುತ್ತಲಿನ ಪರಿಸರ ಬಗ್ಗೆ ಹೆಚ್ಚಿನ ಗಮನ ಹರಿಸಿ ಶುಚಿತ್ವವನ್ನು ಕಾಪಾಡುವುದು. ದೇವಾಲಯದ ಮುಖ್ಯ ದ್ವಾರಗಳಲ್ಲಿಯೇ ಭಕ್ತಾದಿಗಳು/ಸಾರ್ವಜನಿಕರಿಗೆ ಗೋಚರಿಸುವಂತೆ ಪ್ಲಾಸ್ಟಿಕ್ ಬಳಕೆಯನ್ನು ನಿಷೇದಿಸಲಾಗಿದೆ ಎಂಬ ಸೂಚನಾ ಫಲಕವನ್ನು ಅಳವಡಿಸುವುದು. ದೇವಸ್ಥಾನದಲ್ಲಿ ಪ್ರಸಾದ ವಿತರಿಸಲು ಯಾವುದೇ ರೀತಿಯ ಪ್ಲಾಸ್ಟಿಕ್ ಅನ್ನು ಬಳಸದೇ ನೈಸರ್ಗಿಕವಾಗಿ ಸಿಗುವಂತಹ ಅಡಿಕೆ ತಟ್ಟೆ, ಬಾಳೆ ಎಲೆ, ಹಾಗೂ ದೊನ್ನೆಯನ್ನು ಬಳಸತಕ್ಕದ್ದು. ದೇವಾಲಯಗಳಲ್ಲಿ ಯಾವುದೇ ತರಹದ ಪ್ಲಾಸ್ಟಿಕ್‌ನಿಂದ ತಯಾರಿಸಿದ ಅಲಂಕಾರಿಕ ಹೂವು, ತೋರಣ ಹಾಗೂ ಇತರೆ ವಸ್ತುಗಳನ್ನು ಬಳಿದಂತೆ ಜಾಗ್ರತೆ ವಹಿಸುವುದು.

ಇದನ್ನು ಪಾಲನೆ ಮಾಡದಿದ್ದಲ್ಲಿ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ಅವರು ಆದೇಶಿಸಿದ್ದಾರೆ.

ವೈರತ್ವ ಬಿಟ್ಟು ಸ್ನೇಹ, ಸಹಬಾಳ್ವೆ ರೂಢಿಸಿಕೊಳ್ಳಬೇಕು

• ಪ್ರಜೋದಯ ವರದಿ

ಹೊಳೆನರಸೀಪುರ: ಇತ್ತೀಚಿಗೆ ಜನರಲ್ಲಿ ವೈರತ್ವ ಜಾಸ್ತಿಯಾಗುತ್ತಿದೆ. ಇದು ಸಮಾಜದ ಶಾಂತಿಯನ್ನು ಕದಡುತ್ತದೆ. ಆದ್ದರಿಂದ ಜನರು ವೈರತ್ವ ಬಿಡಬೇಕು ಸ್ನೇಹ ಸಹಬಾಳ್ವೆ ರೂಢಿಸಿಕೊಳ್ಳಬೇಕು ಎಂದು ದೊಡ್ಡಕಾಡನೂರು ಜೆಎಸ್‌ಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹಾಗೂ ಚಿಂತಕ ಡಾ. ಚೌಡಯ್ಯ ಕಟ್ನವಾಡಿ ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ನಡೆದ ಹೊಸ, ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ 2025-26ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘಗಳ ಉದ್ಘಾಟನೆ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಂದ ಪ್ರಥಮ ಪಿಯುಸಿ ವಿದ್ಯಾರ್ಥಿನಿಯರಿಗೆ ಸ್ವಾಗತ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿಗೆ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಜನರು ದೇಹದ ಮೇಲ್ಭಾಗದ ಸೌಂದರ್ಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ದೇಹದ

ಒಳಗಡೆ ಇರುವ ಮನಸ್ಸಿನ ಬಗ್ಗೆ ಯಾರೂ ಚಿಂತೆ ಮಾಡುತ್ತಿಲ್ಲ. ದೇಹ ಬೆಳವಣಿಗೆಯಾದಂತೆ, ಮನಸ್ಸನ್ನು ಯಾರು ಬದಲಾವಣೆ ಮಾಡಿಕೊಳ್ಳುತ್ತಾರೆಯೋ ಅವರು ಮಾತ್ರ ಬುದ್ಧಿವಂತರಾಗುತ್ತಾರೆ ಎಂದು ಸಲಹೆ ನೀಡಿದರು.

ಪರೀಕ್ಷೆಗಾಗಿ ಮಾತ್ರ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸುತ್ತಾರೆ. ಆದರೆ ಜೀವನದಲ್ಲಿ ಬರುವ ಕಷ್ಟ-ಸುಖಗಳನ್ನು ನಿಭಾಯಿಸಲು ಸೋಲುತ್ತಾರೆ. ಆದ್ದರಿಂದ ವಿದ್ಯಾಭ್ಯಾಸವನ್ನು ಪರೀಕ್ಷೆಯಲ್ಲಿ ಅಂಕ ಗಳಿಸುವುದರ ಜೊತೆಗೆ ಜೀವನ ನಿರ್ವಹಣೆ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅರ್ಥ ಮಾಡಿಕೊಂಡು ಜ್ಞಾನ ವೃದ್ಧಿಸಿಕೊಳ್ಳಬೇಕು. ಜ್ಞಾನದ ಹಸಿವನ್ನು ಹೆಚ್ಚಿಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಧನಾತ್ಮಕ ಆಲೋಚನೆಗಳಿಗಿಂತ, ಋಣಾತ್ಮಕ ಆಲೋಚನೆಗಳೇ ಅಧಿಕವಾಗುತ್ತಿವೆ. ಋಣಾತ್ಮಕ ಆಲೋಚನೆಗಳನ್ನು ಹೊಂದಿರುವ ವಿದ್ಯಾರ್ಥಿಗಳು ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ. ಧನಾತ್ಮಕ ಆಲೋಚನೆಗಳು ಅಸಾಧ್ಯವಾದುದನ್ನು ಸಾಧ್ಯವಾಗುವಂತೆ ಮಾಡುತ್ತವೆ. ಆದ್ದರಿಂದ ಯಾವಾಗಲೂ ಧನಾತ್ಮಕವಾಗಿ ಚಿಂತಿಸಬೇಕೆಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳಲ್ಲಿ ಗೌರವ ಕೊಡುವ ಮತ್ತು ತೆಗೆದುಕೊಳ್ಳುವ ಗುಣಗಳು ಕಡಿಮೆಯಾಗುತ್ತಿವೆ. ತಂದೆ-ತಾಯಿ, ಗುರು ಹಿರಿಯರಿಗೆ ಗೌರವ ಕೊಡುವುದನ್ನು ರೂಢಿಸಿಕೊಳ್ಳಬೇಕು. ಹಾಗೆಯೇ, ಈ ನಾಡು ಇಷ್ಟೊಂದು ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ಅಭಿವೃದ್ಧಿ ಹೊಂದಲು, ಹಲವಾರು ಜನ ಸಂಶೋಧಕರು ಮತ್ತು ವಿಜ್ಞಾನಿಗಳು ಶ್ರಮವಹಿಸಿದ್ದಾರೆ ಅವರಿಗೂ ಸಹ ನಾವೆಲ್ಲರೂ ಸದಾ ಋಣಿಗಳಾಗಿರಬೇಕು. ನಾವು ಇತರರಿಗೆ ಗೌರವ ನೀಡಿದರೆ, ಬೇರೆಯವರು ನಮಗೆ ಗೌರವ ನೀಡುತ್ತಾರೆ ಎಂದು ತಿಳಿಸಿದರು.

ನಿವೃತ್ತ ಪ್ರಾಂಶುಪಾಲ ಹೆಚ್.ಕೆ.ಯೋಗನರಸಿಂಹ ಮಾತನಾಡಿ, ವಿದ್ಯಾರ್ಥಿಗಳು ಕಾಲಕಾಲಕ್ಕೆ ಹೊಂದಾಣಿಕೆ ಮಾಡಿಕೊಂಡು ಶಿಕ್ಷಣ ಕಲಿಯಬೇಕಾಗುತ್ತದೆ. ನಿರಂತರವಾದ ಬದಲಾವಣೆಯಿಂದ ಮಾತ್ರ ಉತ್ತಮ ವಿದ್ಯಾರ್ಥಿಗಳಾಗಲು ಸಾಧ್ಯ, ಸಣ್ಣ ಪುಟ್ಟ ಕೆಲಸಗಳನ್ನು ಶ್ರದ್ಧೆಯಿಂದ ಮಾಡಬೇಕು, ಪಠ್ಯೇತರ ವಿಷಯಕ್ಕಿಂತ ಪಠ್ಯ ವಿಷಯದಲ್ಲಿ ಹೆಚ್ಚು ಸಮಯ ವಿನಿಯೋಗ ಮಾಡಿದಾಗ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪ್ರಾಂಶುಪಾಲ ಲೋಕೇಶ್ ಮಾತನಾಡುತ್ತಾ, ವಿದ್ಯಾರ್ಥಿನಿಯರು ವಿಶೇಷ ತರಗತಿಗಳನ್ನು ತೆಗೆದುಕೊಂಡಾಗ, ಪರಿಹಾರ ಬೋಧನೆ ಮಾಡಿದಾಗ ತರಗತಿಗಳಿಗೆ ಗೈರು ಹಾಜರಾಗಬಾರದು. ಎಲ್ಲಾ ತರಗತಿಗಳನ್ನು ನಿಮ್ಮ ಒಳ್ಳೆಯದಕ್ಕಾಗಿಯೇ ಮಾಡುತ್ತೇವೆ. ಅದನ್ನು ಬಳಸಿಕೊಳ್ಳಬೇಕು ಎಂದರು.

ಮಾಜಿ ಪುರಸಭೆ ಅಧ್ಯಕ್ಷ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಸುದರ್ಶನ್, ಅಭಿವೃದ್ಧಿ ಸಮಿತಿ ಸದಸ್ಯರಾದ ದೇವರಾಜು, ರಜನಿ, ಕವಿತ ಹಾಗೂ ಕಾಲೇಜಿನ ಉಪನ್ಯಾಸಕರು, ವಿಜ್ಞಾನ ವಿಭಗದ ಸಿಂಧು ಮತ್ತು ಸಿಂಚನ ಭಾಗವಹಿಸಿದ್ದರು.

ಭಯೋತ್ಪಾದಕರ ನಿರ್ಮೂಲನೆಯೇ ನಮ್ಮ ಗುರಿ

• [illegible] ವರದಿ

[illegible] ಕಾಂಗ್ರೆಸ್ [illegible] ಜವಾಹರಲಾಲ್ ನೆಹರು ಅವರ [illegible] ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಅಸ್ತಿತ್ವಕ್ಕೆ [illegible] ನಿರ್ಮೂಲನೆ ಮಾಡುವುದೇ ನಮ್ಮ [illegible] ಎಂದು ಶಪಥ ಮಾಡಿದರು.

[illegible] ಸುದೀರ್ಘ [illegible] ಪ್ರತಿಪಕ್ಷ ಕಾಂಗ್ರೆಸ್ [illegible] ಕೇಂದ್ರ ಸರ್ಕಾರ [illegible] ವಿಷಯಗಳ [illegible] ಕಾಂಗ್ರೆಸ್ [illegible] ಲೋಕಸಭೆಯಲ್ಲಿ ಮುಂದುವರೆದ ಆಪರೇಷನ್ ಸಿಂಧೂರ್ ಚರ್ಚೆಯಲ್ಲಿ ಮಾತನಾಡಿದ ಅಮಿತ್ ಶಾ ಮಾಜಿ [illegible] ಪಿ. ಚಿದಂಬರಂ ಅವರು ಉಗ್ರರು ಎಲ್ಲಿಂದ ಬಂದಿದ್ದರು?. ಅವರು [illegible] ಎಂದು ಪ್ರಶ್ನಿಸಿದ್ದಾರೆ.

ಇದು ದೇಶದ ಭದ್ರತೆ ವಿಷಯವೇ ಹೊರತು ರಾಜಕಾರಣ ಮಾಡುವ ಸಂದರ್ಭವಲ್ಲ. ಪಹಲ್ಗಾಮ್ ದಾಳಿಗೂ, ಪಾಕಿಸ್ತಾನಕ್ಕೂ ಏನು ಸಂಬಂಧ ಎಂದು ಕೇಳುತ್ತಾರೆ. ಅವರು ಎಲ್ಲಿಂದ ಬಂದರು, ಅದಕ್ಕೆ ಯಾರು ಹೊಣೆ ಎಂದು ಪ್ರಶ್ನಿಸಿದ್ದಾರೆ. ಇದು ಕಾಂಗ್ರೆಸ್‌ನ [illegible] ಎಂದು ವಾಗ್ದಾಳಿ ನಡೆಸಿದರು.

ಪಾಕಿಸ್ತಾನವನ್ನು ಹೊಗಳುವುದರಿಂದ ನಿಮಗೆ ಏನು ಸಿಗುತ್ತದೆ ಎಂದು ನಾನು ಚಿದಂಬರಂ ಅವರನ್ನು ಕೇಳಲು ಬಯಸುತ್ತೇನೆ. ನಾವು ಸಾಕ್ಷ್ಯಾಧಾರವನ್ನು ಇಟ್ಟುಕೊಂಡೇ ಸದನದಲ್ಲಿ ಮಾತನಾಡುತ್ತಿದ್ದೇನೆ. ಎನ್‌ಕೌಂಟರ್‌ನಲ್ಲಿ ಬಲಿಯಾದ ಉಗ್ರರನ್ನು ಪಾಕಿಸ್ತಾನದ ಜೊತೆ ನಂಟು ಹೊಂದಿದ್ದಾರೆ ಎಂಬುದಕ್ಕೆ ಅವರಿಗೆ ಸಿಕ್ಕ ಗುರುತಿನ ಚೀಟಿಗಳೇ ಸಾಕ್ಷಿ. ಇದಕ್ಕಿಂತ ಇನ್ನೇನು ಬೇಕು? ಎಂದು ಪ್ರಶ್ನೆ ಮಾಡಿದರು.

ಭಯೋತ್ಪಾದಕರ ಬಗ್ಗೆ ಕಾಂಗ್ರೆಸ್‌ಗೆ ಯಾವಾಗಲೂ ವಿಶೇಷವಾದ ಪ್ರೀತಿ. ನಮ್ಮ ಭಾರತೀಯ ಸೇನೆ ಮತ್ತು ಇಲ್ಲಿನ ಜನರು ಹುತಾತ್ಮರಾದರೂ ನೀವು ಎಂದಿಗೂ ಕಣ್ಣೀರು ಸುರಿಸು

ವುದಿಲ್ಲ. ಬದಲಿಗೆ ದೆಹಲಿ ಬಾಟ್ಲಾ ಪ್ರಕರಣದಲ್ಲಿ ಶಿಕ್ಷೆಯಾದರೆ ನಿಮ್ಮ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಕಣ್ಣೀರು ಹಾಕುತ್ತಾರೆ. ಇದೇನಾ ನಿಮ್ಮ ದ್ವಂದ್ವ ನೀತಿ ಎಂದು ತರಾಟೆಗೆ ತೆಗೆದುಕೊಂಡರು.

ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರನ್ನು ಗುರಿಯಾಗಿಸಿಕೊಂಡು ಮಾತನಾಡಿದ ಶಾ, ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಕುರಿತಾದ ನಿರಂತರ ವಿವಾದಕ್ಕೆ ಅವರೇ ಕಾರಣ. 1948 ರಲ್ಲಿ, ಭಾರತೀಯ ಸಶಸ್ತ್ರ ಪಡೆಗಳು ಪಿಒಕೆಯನ್ನು ವಾಪಸ್ ಪಡೆಯುವ ನಿರ್ಣಾಯಕ ಸ್ಥಾನದಲ್ಲಿದ್ದವು. ಆದರೆ ಆಗ ಪ್ರಧಾನಿ ನೆಹರು ಏಕಪಕ್ಷೀಯ ಕದನ ವಿರಾಮವನ್ನು ಘೋಷಿಸಿದರು ಎಂದು ಶಾ ಹೇಳಿದರು. ಇಂದು ಪಿಒಕೆ ಪ್ರತ್ಯೇಕ ಗುರುತಿನೊಂದಿಗೆ ಅಸ್ತಿತ್ವದಲ್ಲಿದ್ದರೆ, ಅದು ನೆಹರು ಯುದ್ಧವನ್ನು ನಿಲ್ಲಿಸುವ ನಿರ್ಧಾರದಿಂದಾಗಿ ಎಂದು ಟೀಕಾ ಪ್ರಹಾರ ನಡೆಸಿದರು.

ಕಾಂಗ್ರೆಸ್ ಭಾರತವನ್ನು ಪ್ರಶ್ನಿಸುತ್ತಿದೆ, ಪಾಕಿಸ್ತಾನವನ್ನಲ್ಲ:

ಭಾರತದ ಗಡಿಯಾಚೆಗಿನ ದಾಳಿಯ ಪುರಾವೆಗಳನ್ನು ಕೇಳಿದ್ದಕ್ಕಾಗಿ ಕಾಂಗ್ರೆಸ್ ಅನ್ನು ಗುರಿಯಾಗಿಸಿಕೊಂಡ ಶಾ, ಆಪರೇಷನ್ ಸಿಂಧೂರ್ ನಂತರ, ನಮ್ಮ ಡಿಜಿಎಂಒ ಪಾಕ್ ಡಿಜಿಎಂಒಗೆ ಭಾರತವು ನಮ್ಮ ಆತ್ಮರಕ್ಷಣೆಯ ಹಕ್ಕಿನ ಪ್ರಕಾರ ಅವರ ಭೂಮಿಯಲ್ಲಿ ಭಯೋತ್ಪಾದಕ ಮೂಲಸೌಕರ್ಯದ ಮೇಲೆ ದಾಳಿ ಮಾಡಿದೆ ಎಂದರು.

ಮನಮೋಹನ್ ಸಿಂಗ್ ಅವರ ಸರ್ಕಾರದ ಅವಧಿಯಲ್ಲಿ ಹೇಗೆ ಆಯಿತೋ ಹಾಗೆ, ಭಯೋತ್ಪಾದಕರು ಬಂದು ನಮ್ಮನ್ನು ಕೊಲ್ಲುತ್ತಾರೆ ಮತ್ತು ನಾವು ಮೌನವಾಗಿ ಕುಳಿತುಕೊಳ್ಳುತ್ತೇವೆ ಎಂದು ಯಾರೊಬ್ಬರೂ ಭಾವಿಸಬೇಡಿ ಎಂದು ಅಬ್ಬರಿಸಿದರು.

ಆಪರೇಷನ್ ಸಿಂಧೂರ್ ಮತ್ತು ಮಹಾದೇವ್ ಅನ್ನು ಸಮರ್ಥಿಸಿಕೊಂಡರು. ಕಾಂಗ್ರೆಸ್ ಪಾಕಿಸ್ತಾನವನ್ನು ರಕ್ಷಿಸುತ್ತಿದೆ ಎಂದು ಆರೋಪಿಸಿದರು ಮತ್ತು ಪಿಒಕೆಯ ನಿರಂತರ ಅಸ್ತಿತ್ವಕ್ಕೆ ನೆಹರೂ ಅವರನ್ನು ದೂಷಿಸಿದರು.

ಭಾರತದ ರಾಷ್ಟ್ರೀಯ ಭದ್ರತಾ ನಿಲುವನ್ನು ದುರ್ಬಲಗೊಳಿಸುತ್ತಿದೆ ಮತ್ತು ಭಯೋತ್ಪಾದನೆ ವಿರುದ್ಧ ಹೋರಾಡುವ ಅವರ ಬದ್ಧತೆಯನ್ನು ಪ್ರಶ್ನಿಸುತ್ತಿದೆ. ಭಯೋತ್ಪಾದನೆಗೆ ಪ್ರಸ್ತುತ ಮೋದಿ ನೇತೃತ್ವದ ಸರ್ಕಾರದ ಆಕ್ರಮಣಕಾರಿ ಪ್ರತಿಕ್ರಿಯೆ ಮತ್ತು ಪ್ರಧಾನಿ ಮನಮೋಹನ್ ಸಿಂಗ್ ಅವರ ಅಡಿಯಲ್ಲಿ ಹಿಂದಿನ ಯುಪಿಎ ಆಡಳಿತದ ನಿಷ್ಕ್ರಿಯ ವಿಧಾನ ಎಂದು ಅವರು ವಿವರಿಸಿದ್ದರ ನಡುವಿನ ತೀಕ್ಷ್ಣವಾದ ವ್ಯತ್ಯಾಸವನ್ನು ತೋರಿಸಿದರು.

ನಾವು ಸಿಂಧೂ ನೀರಿನ ವಿಷಯದಲ್ಲಿ ಬಲಶಾಲಿಗಳಾಗಿದ್ದೇವೆ, ಆದರೆ ಸಿಂಧೂ ಜಲ ಒಪ್ಪಂದದ ನಂತರ, ನಾವು ಶೇ. 80ರಷ್ಟು ನೀರನ್ನು ಪಾಕಿಸ್ತಾನಕ್ಕೆ ನೀಡಿದ್ದೇವೆ. ಕಾಂಗ್ರೆಸ್ ನಾಯಕತ್ವವು ಭಾರತದ ಕಾರ್ಯತಂತ್ರದ ಪ್ರಯೋಜನವನ್ನು ಬಿಟ್ಟುಕೊಟ್ಟಿದೆ. 1960 ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಈ ಕ್ರಮವನ್ನು ವಿರೋಧಿಸಿದ್ದರು ಎಂದು ಶಾ ಗಮನ ಸೆಳೆದರು.

ಕೆ.ಆಲದಹಳ್ಳಿಯಲ್ಲಿ ಬೀಜೋಪಚಾರ ಕಾರ್ಯಕ್ರಮ

• ಪ್ರಜೋದಯ ವರದಿ

ಹಾಸನ: ತಾಲ್ಲೂಕಿನ ಕಾರೇಕೆರೆ ಕೃಷಿ ಮಹಾವಿದ್ಯಾಲಯದ ಬಿ.ಎಸ್ಸಿ. ಅಂತಿಮ ವರ್ಷದ ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ತಾಲ್ಲೂಕಿನ ಕೆ. ಆಲದಹಳ್ಳಿಯಲ್ಲಿ ಬೀಜೋಪಚಾರ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಮಹಾ ವಿದ್ಯಾಲಯದ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ. ಕೋಟಿ ಜೋಸೆಫ್ ಅವರು, ಬೀಜೋಪಚಾರದ ಪ್ರಾಮುಖ್ಯತೆ ಮತ್ತು ಕಾರ್ಯ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಜೋಳ ಬೀಜದ ಬೀಜೋಪಚಾರದ ಪ್ರಾತ್ಯಕ್ಷಿತೆಯನ್ನು ಗ್ರಾಮಸ್ಥರಿಂದಲೇ ಮಾಡಿಸಲಾಯಿತು. ಬೀಜೋಪಚಾರಕ್ಕೆ ಜೈವಿಕ ಗೊಬ್ಬರವಾದ ಟ್ರೈಕೋಡರ್ಮ ಹಾಗು ಸುಡೋಮೋನಸ್, ರಾಸಾಯನಿಕ ಗೊಬ್ಬರವಾದ ಮೆಟಲಾಕ್ಸಿಲ್ ಮತ್ತು ಮ್ಯಾಂಕೋಜೆಬ್, ಬೀಜಾಮೃತವನ್ನು ಬಳಸಲಾಯಿತು.

ಶಿಬಿರಾರ್ಥಿಗಳಾದ ಅಮೃತ್ ಹಾಗು ರಂಜಿತಾ ಅವರು ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯಾರ್ಥಿಗಳು ಹೆತ್ತವರ ಋಣ ತೀರಿಸಬೇಕು

• ಪ್ರಜೋದಯ ವರದಿ

ಹಾಸನ: ವಿದ್ಯಾರ್ಥಿಗಳು ಸಂಸ್ಕಾರವಂತರಾಗಿ ಹೆತ್ತ ತಂದೆ-ತಾಯಿಯ ಋಣ ತೀರಿಸಬೇಕೆಂದು ಸ್ಕೌಟ್ ಅಂಡ್ ಗೈಡ್ ಜಿಲ್ಲಾ ಆಯುಕ್ತ ಡಾ. ವೈ.ಎಸ್. ವೀರಭದ್ರಪ್ಪ ಹೇಳಿದರು.

ನಗರದ ಸ್ಕೌಟ್ ಅಂಡ್ ಗೈಡ್ ಭವನದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕಿನ ವಿವಿಧ ಕಾಲೇಜುಗಳ ರೋವರ್ಸ್ ಮತ್ತು ರೇಂಜರ್ಸ್, ಶಾಲೆಯ ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳಿಗೆ ಅಗ್ರಗಾಮಿ ಪ್ರಾವೀಣ್ಯತಾ ಪದಕ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳು ಸಂಸ್ಕಾರವಂತರಾಗಿ ಗುರುಗಳ ಹಾಗು ತಂದೆ-ತಾಯಿ ಮತ್ತು ಸಮಾಜದ ಋಣ ತೀರಿಸಬೇಕಿದೆ. ವಿದ್ಯಾಭ್ಯಾಸದ ಜೊತೆಗೆ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿದರೆ ಸದೃಢ ರಾಷ್ಟ್ರ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಂಯೋಜಕಿ ಬಿ.ಎಸ್. ವನಜಾಕ್ಷಿ ಅವರು ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯು ವಿದ್ಯಾರ್ಥಿಯ ಮೂಲ ಶಿಕ್ಷಣದಿಂದ ವ್ಯಕ್ತಿಪರ ಶಿಕ್ಷಣದವರೆಗೂ ಸೇರಿ ಎಲ್ಲಾ ಚಟುವಟಿಕೆಗಳಿಗೆ ಮಾರ್ಗದರ್ಶಕ ಕ್ರಿಯಾ ರೂಪದಂತಿರುತ್ತದೆ. ಈ ಪಯಣದಲ್ಲಿ ಯಾವ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುತ್ತಾರೋ ಅವರಿಗೆ ವೃತ್ತಿ ಮತ್ತು ಪ್ರವೃತ್ತಿ, ವೈಯಕ್ತಿಕ ಬದುಕಿಗೆ, ಮಾರ್ಗದರ್ಶನದ ಕೈಗನ್ನಡಿಯಂತಿರುತ್ತದೆಂದು ತಿಳಿಸಿದರು.

ಗೈಡ್ಸ್ ಆಯುಕ್ತ ಜಯರಮೇಶ್ ಅವರು ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ ಎಂದು ಅಭಿಪ್ರಾಯಿಸಿದರು.

ವಿವಿಧ ಶಾಲೆಗಳಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಏಕಲವ್ಯ ಮುಕ್ತ ದಳದ ಸಹ ನಾಯಕ ಗಿರೀಶ್, ಕುಮಾರಸ್ವಾಮಿ, ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಗೃಹ ಉಪಯೋಗಿ ಉಪಕರಣ ತಯಾರಿಕೆ ಧ್ವಜ ಸಂಬಂಧ ಮತ್ತು ಸೇತುವೆ, ಗ್ಯಾಜೆಟ್ ನಿರ್ಮಾಣ ಕುರಿತು ತರಬೇತಿ ನೀಡಿದರು.

ಸ್ಕೌಟ್ಸ್ ಅಂಡ್ ಗೈಡ್ಸ್ ಖಜಾಂಚಿ ಮಹಾಲಿಂಗೇಗೌಡ, ಪ್ರಿಯಾಂಕ, ನಿಕಟ ಪೂರ್ವ ಜಿಲ್ಲಾ ಜಂಟಿ ಕಾರ್ಯದರ್ಶಿ ಕಾಂಚನಮಾಲ ಇತರರಿದ್ದರು.

ಗ್ರಾಮೀಣ ಸಂಸ್ಕೃತಿ ಅರಿಯಲು ಕರೀಂ ಖಾನ್ ಜೀವನ ಮುಡಿಪು

ಸಕಲೇಶಪುರದಲ್ಲಿ 'ಜನಪದ ಜಂಗಮ' ಡಾ. ಎಸ್.ಕೆ. ಕರೀಂ ಖಾನ್‌ರ 19ನೇ ವರ್ಷದ ನುಡಿ ನಮನ ಕಾರ್ಯಕ್ರಮ

• ಪ್ರಜೋದಯ ವರದಿ

ಸಕಲೇಶಪುರ: ಡಾ. ಎಸ್.ಕೆ. ಕರೀಂ ಖಾನ್ ಅವರು ಗ್ರಾಮೀಣ ಬದುಕು, ಕಲೆ ಮತ್ತು ಸಂಸ್ಕೃತಿ ಅಧ್ಯಯನಕ್ಕಾಗಿ ಜೀವವನ್ನೇ ಮುಡಿಪಾಗಿಟ್ಟಿದ್ದರೆಂದು ರಂಗಕರ್ಮಿ ಪ್ರಸಾದ್ ರಕ್ಷಿದಿ ಅವರು ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮಂಗಳವಾರ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಜನಪದ ಜಂಗಮ' ಡಾ. ಎಸ್.ಕೆ. ಕರೀಂ ಖಾನ್ ಅವರ 19ನೇ ವರ್ಷದ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿ, ಕರೀಂ ಖಾನ್ ಕನ್ನಡ ಜಾನಪದ ಲೋಕದ ಅನನ್ಯ ಪ್ರತಿಭೆ. ಜಾನಪದವು ಅವರ ಹೃದಯದ ನಾಡಿಯಾಗಿತ್ತು. ಮಹಾತ್ಮ ಗಾಂಧೀಜಿ ಅವರ ಚಿಂತನೆಗಳನ್ನು ಅಳವಡಿಸಿಕೊಂಡಿದ್ದ ಅವರು ಗ್ರಾಮೀಣ ಸಂಸ್ಕೃತಿಯ ಅಧ್ಯಯನಕ್ಕಾಗಿ ಇಡೀ ಜೀವನ ಮೀಸಲಿಟ್ಟಿದ್ದರೆಂದರು.

ಸುಮಾರು 8 ಸಾವಿರ ಕಿ.ಮೀ. ಬಸ್‌ನಲ್ಲಿ ಸಂಚರಿಸಿ 240 ಗಂಟೆಗಳ ಜಾನಪದ ಕಲಾ ವೀಡಿಯೋ ದಾಖಲೆ ಮಾಡಿದರು. ಜಾನಪದ ಗೀತೆಗಳ ರಚನೆ, ಸಂಗ್ರಹ, ಅಧ್ಯಯನ ಮತ್ತು ಪ್ರಸಾರದಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿದ್ದಾರೆ. ಅವರ ಕೃಷಿ, ಗಿರಿಜನ ಕಲೆಯ ಪ್ರೋತ್ಸಾಹ, ಜನಪದ ಲೋಕದ ವೈಶಿಷ್ಟ್ಯತೆಗಳ ಕುರಿತ ಸಂಶೋಧನೆಗಳು ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಚರ್ಚೆಗೂ ದಿಕ್ಕು ತೋರಿದವು. ಜನಪದ ಗೀತೆ ಮತ್ತು ಕನ್ನಡ ಜನಪದ ಗೀತೆಗಳು ಎಂಬ ಎರಡು ಪ್ರಮುಖ ಸಂಕಲನಗಳನ್ನು ಕನ್ನಡಿಗರಿಗೆ ನೀಡಿದ್ದಾರೆ. ಅವರ ರಚನೆಗಳಲ್ಲಿ ನಾಟಕ, ಕಥಾ ಸಂಕಲನ, ಕಾದಂಬರಿ, ಭಕ್ತಿಗೀತೆ, ಚಿತ್ರಗೀತೆಗಳು ಸೇರಿವೆ ಎಂದರು.

ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಅವರು ಮಾತನಾಡಿ, ಎಸ್.ಕೆ. ಕರೀಂ ಖಾನ್ ಆದರ್ಶದ ಜೀವನ ಎಲ್ಲರಿಗೂ ಮಾದರಿ ಸಮ್ಮೂರ ಹೆಸರಿಗೆ ಕೀರ್ತಿ ತಂದವರು ಎಂದರು.

ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳನ್ನು ಡ್ರಗ್ಸ್ ಪಿಡುಗು ನಾಶ ಮಾಡಲು ಮುಂದಾಗಿದೆ. ಅದರ ವಿರುದ್ಧ ಹೋರಾಡಲು ನಾವೆಲ್ಲ ಒಂದಾಗಬೇಕಾಗಿದೆ. ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಿದ್ಯಾರ್ಥಿನಿಯರು ವಹಿಸಬೇಕಾಗಿದೆ ಎಂದು ಕರೆ ನೀಡಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಶಾರದಾ ಗುರುಮೂರ್ತಿ ಅವರು ಮಾತನಾಡಿ, 1989 ರಲ್ಲಿ ಕಲಬುರಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 1995ರಲ್ಲಿ ಜಾನಪದ ಶ್ರೀ, 1997ರಲ್ಲಿ ನಾಡೋಜ, 2004ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸೇರಿ ನೂರಕ್ಕೂ ಹೆಚ್ಚು ಗೌರವಕ್ಕೆ ಪಾತ್ರರಾದ ಕರೀಂ ಖಾನ್ ನಮ್ಮ ತಾಲ್ಲೂಕಿನವರು ಎನ್ನುವುದು ಹೆಮ್ಮೆಯ ವಿಚಾರ. ಅವರ ಸಾಧನೆಯ ಪ್ರತೀಕವೆಂಬಂತೆ ಬೆಂಗಳೂರು ಬಿಬಿಎಂಪಿ ನಗರದ 100 ಅಡಿ ರಸ್ತೆಗೆ ಎಸ್.ಕೆ. ಕರೀಂ ಖಾನ್ ರಸ್ತೆ ಎಂಬ ನಾಮಕರಣವೂ ಮಾಡಲಾಗಿದೆ ಎಂದರು.

ಪ್ರಾಂಶುಪಾಲ ಪಿ.ಎ. ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಮಲ್ನಾಡ್ ಮೆಹಬೂಬ್, ಅರ್ಚನಾ ಜಯಂತ್, ಕಸಾಪ ತಾಲ್ಲೂಕು ಕಾರ್ಯದರ್ಶಿ ಯೋಗೇಶ್, ಎಸ್.ಡಿ. ಆದರ್ಶ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೈಭೀಮ್ ಮಂಜುನಾಥ್, ಚೇತನ್, ಅಕ್ತರ್ ಜುನೈದ್, ಪುರಸಭೆ ನಾಮ ನಿರ್ದೇಶಿತ ಸದಸ್ಯ ಬಿಲ್ಕಿಸ್ ದಾನಿ, ಸಾಯಿಬಾಬಾ ಹಾಗು ಇತರರು ಉಪಸ್ಥಿತರಿದ್ದರು.

ಸೆಸ್ಕ್ ಸಿಬ್ಬಂದಿ ಜನರ ಕರೆಗಳಿಗೆ ಸ್ಪಂದಿಸಿ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

ಸಕಲೇಶಪುರ: ಪ್ರತಿಯೊಬ್ಬ ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮೊದಲು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಚೆಸ್ಕಾಂ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಸಕಲೇಶಪುರ ಹಾಗೂ ಆಲೂರು ಉಪವಿಭಾಗದ ಸೆಸ್ಕ್ ಅಧಿಕಾರಿಗಳು ಹಾಗೂ ವಿದ್ಯುತ್ ಗುತ್ತಿಗೆದಾರರ ಜೊತೆ ಮಾತನಾಡಿದ ಅವರು ಅಧಿಕಾರಿಗಳು ಮೊಬೈಲ್ ಸ್ವಿಚ್ ಆನ್ ಮಾಡಿಕೊಂಡು ಸಾರ್ವಜನಿಕರ ಕರೆಗಳಿಗೆ ಸ್ಪಂದಿಸಬೇಕು ಕರೆ ಸ್ವೀಕರಿಸುವ ಜೊತೆಗೆ ಸೌಜನ್ಯದಿಂದ ಮಾತನಾಡಬೇಕು ಇದರಿಂದ ಹಲವಾರು ಸಮಸ್ಯೆಗಳು ತಕ್ಷಣ ಬಗೆಹರಿಯಬಹುದು ಎಂದರು.

ಮಲೆನಾಡಿನಲ್ಲಿ ಮಳೆಗಾಲದಲ್ಲಿ ಮರದ ರೆಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವುದು ಸಾಮಾನ್ಯ. ಸಾರ್ವಜನಿಕರಿಂದ ಬರುವ ದೂರುಗಳಲ್ಲಿ ಶೇ.50ರಷ್ಟು ಸಮಸ್ಯೆಗಳು ಸೆಸ್ಕ್‌ಗೆ ಸಂಬಂಧಿಸಿದಂತಿವೆ. ಮುಂದಿನ ಮಳೆಗಾಲ ಆರಂಭವಾಗುವ ಮೊದಲು ಅರಣ್ಯ ಇಲಾಖೆಯ ಜೊತೆ ಸಂವಹನ ನಡೆಸಿ, ವಿದ್ಯುತ್ ತಂತಿಗಳು ಹಾದು ಹೋಗಿರುವ ಪ್ರದೇಶದಲ್ಲಿ ಮರದ ರೆಂಬೆಗಳನ್ನು ತೆರವುಗೊಳಿಸುವ ಕಾರ್ಯ ಕೈಗೊಳ್ಳಬೇಕು. ಇದರಿಂದ ಶೇ.50ರಷ್ಟು ಸಮಸ್ಯೆಗಳಿಗೆ ಪರಿಹಾರ ಸಿಗಬಹುದು.



ಅಭಿಯಂತರರು ಕಚೇರಿಗೆ ಸೀಮಿತವಾಗದೇ ತಮ್ಮ ವ್ಯಾಪ್ತಿಯ ಎಲ್ಲಾ ಕಡೆ ಸಂಚರಿಸಬೇಕು. ಆದರಿಂದ ಸ್ಥಳೀಯ ಸಮಸ್ಯೆಗಳು ಅರಿವಾಗುತ್ತವೆ. ವಿದ್ಯುತ್ ಕಂಬಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಹಾದು ಹೋಗಿರುವ ತಂತಿಗಳ ಸ್ಥಿತಿಗೆ ಗಮನ ಹರಿಸಬೇಕು. ಗಂಭೀರ ಸಮಸ್ಯೆಗಳ ಬಗ್ಗೆ ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಅವರಿಂದಲೂ ಪರಿಹಾರ ಸಿಗದಿದ್ದರೆ ಶಾಸಕರ ಗಮನಕ್ಕೆ ತರಬೇಕು. ಸರ್ಕಾರದ ಮಟ್ಟದಲ್ಲಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಆಗದಂತೆ ಎಚ್ಚರಿಕೆ ವಹಿಸಬೇಕು. ವಿದ್ಯುತ್ ಇಲ್ಲದೆ ಯಾವುದೇ ಯೋಜನೆಗಳು ಸಾಗುವುದು ಅಸಾಧ್ಯ. ಪೂರೈಕೆ ನಿರಂತರವಾಗಿರಲು ತಕ್ಕ ಕ್ರಮ ಕೈಗೊಳ್ಳಬೇಕು. ಗುತ್ತಿಗೆದಾರರ ಕಡತಗಳನ್ನು ನೆಪವಿಲ್ಲದೆ ಸ್ಥಗಿತಗೊಳಿಸಬಾರದು. ಬಿಲ್‌ಗಳನ್ನು ತಕ್ಷಣ ವಿಲೇವಾರಿ ಮಾಡುವಂತೆ ಸೂಚಿಸಿದರು. ಸಾರ್ವಜನಿಕರ ಕೆಲಸಗಳನ್ನು ವಿಳಂಬವಿಲ್ಲದೆ ಮುಗಿಸಲು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಟ್ಟುನಿಟ್ಟಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಸೆಸ್ಕ್ ಹಾಸನ ವೃತ್ತದ ಮುಖ್ಯ ಅಭಿಯಂತರ ಕಾಂತರಾಜು, ಸಕಲೇಶಪುರ ಉಪವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಅರ್ಜುನ್, ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್, ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಪ್ರೇಮ್‌ನಾಥ್, ಪದಾಧಿಕಾರಿಗಳಾದ ಗಿರೀಶ್, ಆನಂದ್ ರಿಯೋ ವ್ಯಾಸ್, ಮೋಹನ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಗ್ಯಾರಂಟಿ ಯೋಜನೆಗಳನ್ನು ಸಕಾಲಕ್ಕೆ ತಲುಪಿಸಿ

• ಪ್ರಜೋದಯ ವರದಿ

ಬೇಲೂರು: ಅನ್ನಭಾಗ್ಯದಿಂದ ಯಾವುದೇ ಬಡವರು ವಂಚಿತರಾಗಬಾರದು ಹಾಗೂ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸಕಾಲಕ್ಕೆ ತಲುಪಿಸಲು ಸಂಬಂಧಿಸಿದ ಅಧಿಕಾರಿಗಳು ಮುಂದಾಗಬೇಕು ಎಂದು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿಯಲ್ಲಿ ಕರೆಯಲಾಗಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅನ್ನಭಾಗ್ಯ ಯೋಜನೆಯಿಂದ ಸಾಕಷ್ಟು ಅರ್ಹರು ಹೊರಗಿರುವ ಬಗ್ಗೆ ಮಾಹಿತಿ ಇದ್ದು, ಎಲ್ಲರಿಗೂ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಈಗ ಪಡಿತರ ಚೀಟಿಗೆ ಹೆಸರು ನೊಂದಾಯಿಸಲಾಗುತ್ತಿದೆ. ಅನ್ನಭಾಗ್ಯ ಯೋಜನೆಯಲ್ಲಿ

ಸರ್ಕಾರ ಎಲ್ಲರಿಗೂ ಅಕ್ಕಿ ಕೊಡುತ್ತಿದ್ದರೆ ನ್ಯಾಯಬೆಲೆ ಅಂಗಡಿಗಳಲ್ಲಿ ತೂಕದಲ್ಲಿ ಮೋಸ ಮಾಡುತ್ತಿದ್ದಾರೆ ಎಂಬ ಆರೋಪವಿದ್ದು ಅಂತಹವರ ವಿರುದ್ಧ ಕ್ರಮಕ್ಕೆ ಮುಂದಾಗಬೇಕು ಎಂದರು.

ಮುಂದಿನ ಒಂದು ವಾರದಲ್ಲಿ ನ್ಯಾಯಬೆಲೆ ಅಂಗಡಿಗಳವರ ಸಭೆ ಕರೆಯಬೇಕು. ಎಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲೂ ಪ್ರತಿ ತಿಂಗಳು ಒಬ್ಬರಿಗೆ ಎಷ್ಟು ಪಡಿತರ ವಿತರಿಸಲಾಗುವುದು ಎಂಬುದರ ಬಗ್ಗೆ ನಾಮಫಲಕ ಅಳವಡಿಸಬೇಕು. ಆಹಾರ ಇಲಾಖೆ ಅಧಿಕಾರಿಗಳು ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಗ್ರಾಹಕರ ಸಮಸ್ಯೆ ಪರಿಹರಿಸಲು ಮುಂದಾಗಬೇಕು. ನ್ಯಾಯಬೆಲೆ ಅಂಗಡಿಗಳ ವ್ಯಾಪ್ತಿಯ ಜನರಲ್ಲಿ ಯೋಜನೆಯ ಬಗ್ಗೆ ಜಾಗೃತಿ ಸಮಿತಿ ರಚಿಸಬೇಕು ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಇಂದ್ರೇಶ್ ಮಾತನಾಡಿ, ಆಹಾರ ಇಲಾಖೆ ಅಧಿಕಾರಿಗಳು ಇಲ್ಲಿವರೆಗೂ ಎಷ್ಟು ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿದ್ದೀರ ಎಷ್ಟು ಸಮಸ್ಯೆ ಬಗೆಹರಿಸಿದ್ದೀರ ಸಂಪೂರ್ಣ ಮಾಹಿತಿ ಕೊಡಿ ಎಂದರು.

ಆಹಾರ ಇಲಾಖೆ ಶಿರಸ್ತೇದಾರ್ ವೀಣಾ ಮಾತನಾಡಿ, ಸರ್ಕಾರದ ಗ್ಯಾರಂಟಿ ಯೋಜನೆಯಲ್ಲಿ ಆಹಾರ ಇಲಾಖೆ ಪಾತ್ರ ಮಹತ್ತರದ್ದಾಗಿದೆ. ಅಂಗಡಿಯವರು ಗ್ರಾಹಕರಿಗೇನಾದರೂ ಮೋಸ ಮಾಡುತ್ತಿರುವ ಬಗ್ಗೆ ದೂರು ಬಂದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ತಾಪಂ ಇಒ ವಸಂತ ಕುಮಾರ್ ಸೇರಿದಂತೆ ಗ್ಯಾರಂಟಿ ಸಮಿತಿ ಸದಸ್ಯರು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಜಿಲ್ಲಾದ್ಯಂತ ನಾಗರ ಪಂಚಮಿ ಸಂಭ್ರಮ



• ಪ್ರಜೋದಯ ವರದಿ

ಹಾಸನ: ನಗರ ಸೇರಿ ಜಿಲ್ಲಾದ್ಯಂತ ಮಂಗಳವಾರ ನಾಗರ ಪಂಚಮಿಯನ್ನು ಸಾರ್ವಜನಿಕರು ಅರ್ಥಪೂರ್ಣವಾಗಿ ಆಚರಿಸಿದರು.

ನಗರದ ಮಹಾರಾಜ ಪಾರ್ಕ್, ಹೇಮಾವತಿ ನಗರದ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ ಸೇರಿ ವಿವಿಧೆಡೆ ಹುತ್ತಕ್ಕೆ ಹಾಲೆರೆದು ಭಕ್ತಿ ಮೆರೆದರು.

ಶ್ರಾವಣ ಮಾಸದ ಮೊದಲ ಹಬ್ಬ ನಾಗರ ಪಂಚಮಿ. ಈ ಹಬ್ಬ ಮುಂದೆ ಬರಲಿರುವ ಗಣೇಶ ಚತುರ್ಥಿ, ಕೃಷ್ಣಾಷ್ಟಮಿ, ನವರಾತ್ರಿ, ಊರಿನ ಜಾತ್ರೆಗೆ ಮುನ್ನುಡಿಯಾಗಿದೆ.

ನಾಗರ ಪಂಚಮಿ ದಿನ ಹುತ್ತಕ್ಕೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದರೆ ಇಷ್ಟಾರ್ಥಗಳು ನೆರವೇರುತ್ತದೆಂಬುದು ನಂಬಿಕೆಯಾಗಿದೆ.

ಹೃದಯದ ಆರೋಗ್ಯಕ್ಕಾಗಿ ಬನ್ನಿ ನಡೆಯೋಣ

• ಪ್ರಜೋದಯ ವರದಿ

ಹೊಳೆನರಸೀಪುರ: ಹೃದಯದ ಆರೋಗ್ಯಕ್ಕಾಗಿ ಬನ್ನಿ ನಡೆಯೋಣ ಎಂಬುದಾಗಿ ತಾಲ್ಲೂಕು ಆಡಳಿತ ನಾಗರೀಕರಿಗೆ ಜಾಗೃತಿ ಮೂಡಿಸಿ ವಾಕಥಾನ್ ನಡಿಗೆ ಜಾಥ ನಡೆಸಲಾಯಿತು.



ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಂಗಳವಾರ ನಾನಾ ಇಲಾಖೆ ಅಧಿಕಾರಿಗಳು ಮತ್ತು ವಿವಿಧ ಸಂಘ ಸಂಸ್ಥೆಯ ಮುಖಂಡರೊಂದಿಗೆ ವೇಗದ ನಡಿಗೆ ಕಾರ್ಯಕ್ರಮಕ್ಕೆ ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಚಾಲನೆ ನೀಡಿ ಮಾತನಾಡಿ, ಈ ಮೂಲಕ ಸಾರ್ವಜನಿಕರಲ್ಲಿ ಹೃದಯದ ಆರೋಗ್ಯಕ್ಕಾಗಿ ವ್ಯಾಯಾಮ ಅಗತ್ಯ. ಪೂರ್ವಿಕರು ಆಹಾರಕ್ಕಾಗಿ ಶ್ರಮದಾಯಕ ಕೆಲಸ ಮಾಡುತ್ತಿದ್ದರು. ಮಾನವ ಸಂಪನ್ಮೂಲ ಬಳಕೆಯ ಬದಲಿಗೆ ಯಂತ್ರೋಪಕರಣಗಳ ಆವಿಷ್ಕಾರ ಸ್ವಾಗತಾರ್ಹ. ಆದರೆ ಶ್ರಮ ಇಲ್ಲದ ಜೀವನ ಕಾಯಿಲೆಗೆ ದಾರಿ ಮಾಡಿಕೊಡುತ್ತದೆ.

ಇಂದಿನ ಯುವಕರಲ್ಲಿ ದೈಹಿಕ ಕಸರತ್ತು ಕಡಿಮೆಯಾಗುತ್ತಿದೆ. ಹೊರ ಆಟಾಟೋಪಗಳು ಮಾಯವಾಗಿ ಕೈಯಲ್ಲಿ ಸದಾ ಮೊಬೈಲ್ ರಿಂಗಣಿಸಿವೆ. ಇದರಿಂದ ಮಾನಸಿಕ ದುರ್ಬಲತೆಗೂ ಕಾರಣವಾಗುತ್ತಿದೆ. ಸದಾ ಚೈತನ್ಯಯುತ ಜೀವನಕ್ಕಾಗಿ ದಿನವಿಡಿ ಲವಲವಿಕೆಯಿಂದ ಇರಲು ಬೆಳಗಿನ ವ್ಯಾಯಾಮ ಅಗತ್ಯ. ವಯೋವೃದ್ಧರಿಗೆ ವಾಕಿಂಗ್ ಪ್ರಶಸ್ತವಾಗಿರುತ್ತದೆ ಎಂದರು.

ಟಿಹೆಚ್‌ಒ ಡಾ.ಎಚ್.ಎನ್.ರಾಜೇಶ್ ಮಾತನಾಡಿ, ಆರೋಗ್ಯವಂತ ಸಮಾಜ ದೇಶದ ಪ್ರಗತಿಗೆ ಪೂರಕ. ಹೃದಯಾಘಾತ ಪ್ರಕರಣಗಳು ಚಿಕ್ಕ ವಯೋಮಾನದವರಲ್ಲಿ ಪ್ರಾಣ ತೆತ್ತುವಂತೆ ಮಾಡುತ್ತಿದೆ. ಉತ್ತಮ ಆಹಾರ ಪದ್ಧತಿ ಅನುಸರಿಸಿ. ಆಗಾಗ್ಗೆ ಅಗತ್ಯ ಎನಿಸಿದಾಗ ತಪಾಸಣೆ ಮಾಡಿಸಿಕೊಳ್ಳಲು ನಿರ್ಲಕ್ಷ್ಯ ಮಾಡದಿರಿ. ದುಶ್ಚಟಗಳಿಂದ ಯುವಕರು ದೂರ ಉಳಿಯಲು ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ಪುರಸಭಾ ಅಧ್ಯಕ್ಷ ಎಚ್.ಕೆ.ಪ್ರಸನ್ನ, ತಾಪಂ ಇಒ ಮುನಿರಾಜ್, ಸೋಶಿಯಲ್ ಕ್ಲಬ್‌ನ ಅಧ್ಯಕ್ಷ ಕೆ.ಎಂ.ಹೊನ್ನಪ್ಪ, ರೋಟರಿ ಅಧ್ಯಕ್ಷ ಪ್ರವೀಣ್, ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ.ನಾಗೇಂದ್ರ, ಹಾಗೂ ವೈದ್ಯರುಗಳು ವಾಕಥಾನ್‌ನಲ್ಲಿ ಭಾಗವಹಿಸಿದ್ದರು.

ಇಂದಿನಿಂದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನ

• ಪ್ರಜೋದಯ ವರದಿ

ಹಾಸನ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ, ತಾಲ್ಲೂಕು ರೆಡ್ ಕ್ರಾಸ್ ಘಟಕ, ತಾಲ್ಲೂಕು ಒಕ್ಕಲಿಗರ ಸಂಘ ಆಲೂರು, ಹಾಸನ ಜಿಲ್ಲಾ ಪಕ್ಷಿ ವೀಕ್ಷಕರ ಸಂಘ ಮತ್ತು ಚಿತ್ಕಲಾ ಫೌಂಡೇಶನ್ ಹಾಸನ ಇವರ ಸಹಯೋಗದಲ್ಲಿ ಪರಿಸರವಾದಿ ಹೆಮ್ಮಿಗೆ ಮೋಹನ್ ಹಾಗೂ ಚಿತ್ರ ಕಲಾವಿದ ಬಿ.ಎಸ್.ದೇಸಾಯಿ ಅವರು ಸೆರೆಹಿಡಿದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನವನ್ನು ಜು.30 ಹಾಗು 31ರಂದು ಏರ್ಪಡಿಸಲಾಗಿದೆ.

ಆಲೂರು ಪಟ್ಟಣದ ಒಕ್ಕಲಿಗರ ಸಂಘದಲ್ಲಿ ಬೆಳಗ್ಗೆ 11.15 ಗಂಟೆಗೆ ಆಲೂರು ಮತ್ತು ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿಮೆಂಟ್ ಮಂಜು ಉದ್ಘಾಟಿಸಲಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ತಹಸೀಲ್ದಾರ್ ಮಲ್ಲಿಕಾರ್ಜುನ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಕೃಷ್ಣೇಗೌಡ, ವಲಯ ಅರಣ್ಯಾಧಿಕಾರಿ ಹೇಮಂತ್, ತಾಲ್ಲೂಕು ಒಕ್ಕಲಿಗರ ಸಂಘದ ಉಪಾಧ್ಯಕ್ಷ ಕಣದಹಳ್ಳಿ ಮಂಜೇಗೌಡ, ರೈಸ್ ಮಿಲ್ ಮಾಲೀಕರಾದ ರೇಣುಕಾ ಪ್ರಸಾದ್, ತಾಲ್ಲೂಕು ಸಭಾಪತಿ ಕಾಂತರಾಜ್, ಶಾಂತ ಕೃಷ್ಣ ಖಜಾಂಚಿ ತಾಲ್ಲೂಕು ಒಕ್ಕಲಿಗರ ಸಂಘ, ಸುರೇಶ್, ಜಿಲ್ಲಾ ರೆಡ್ ಕ್ರಾಸ್, ಸುಬ್ಬಸ್ವಾಮಿ ಅಧ್ಯಕ್ಷರು ಜಿಲ್ಲಾ ಪಕ್ಷಿ ವೀಕ್ಷಕರ ಸಂಘ ಮತ್ತು ಉಪಪ್ರಾಂಶುಪಾಲ ವಿಜಯಕುಮಾರ್ ಭಾಗವಹಿಸಲಿದ್ದಾರೆ.

ದೇವಾಲಯ ಆವರಣದಲ್ಲಿ ಪ್ಲಾಸ್ಟಿಕ್ ನಿರ್ಬಂಧ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿರುವ ಎಲ್ಲಾ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಬರುವ ಎಲ್ಲಾ ವರ್ಗದ ಅಧಿಸೂಚಿತ ಸಂಸ್ಥೆಗಳಲ್ಲಿ ಪ್ಲಾಸ್ಟಿಕ್ ನಿರ್ಬಂಧಿಸುವ [illegible] ಈ ಕೆಳಕಂಡ ನಿರ್ದೇಶನಗಳನ್ನು ಕಡ್ಡಾಯವಾಗಿ [illegible] ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

[illegible] ಆವರಣದಲ್ಲಿ ಪ್ಲಾಸ್ಟಿಕ್ [illegible] ದೇವಾಲಯಕ್ಕೆ [illegible] ಪ್ಲಾಸ್ಟಿಕ್ [illegible] ದೇವಾಲಯದ [illegible] ಪ್ಲಾಸ್ಟಿಕ್ ಕಸವನ್ನು [illegible] ಸಂಗ್ರಹವಾದ ಮೊತ್ತವನ್ನು ದೇವಾಲಯ [illegible] ಜಮಾ ಮಾಡುವ ಬಗ್ಗೆ ಕ್ರಮ ವಹಿಸುವುದು.

ದೇವಸ್ಥಾನದ ಸುತ್ತ-ಮುತ್ತಲಿನ ಪರಿಸರ ಬಗ್ಗೆ ಹೆಚ್ಚಿನ ಗಮನ ಹರಿಸಿ ಶುಚಿತ್ವವನ್ನು ಕಾಪಾಡುವುದು ದೇವಾಲಯದ ಮುಖ್ಯ ದ್ವಾರಗಳಲ್ಲಿಯೇ ಭಕ್ತಾಧಿಗಳು/ಸಾರ್ವಜನಿಕರಿಗೆ ಗೋಚರಿಸುವಂತೆ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿದೆ ಎಂಬ ಸೂಚನಾ ಫಲಕವನ್ನು ಅಳವಡಿಸುವುದು. ದೇವಸ್ಥಾನದಲ್ಲಿ ಪ್ರಸಾದ ವಿತರಿಸಲು ಯಾವುದೇ ರೀತಿಯ ಪ್ಲಾಸ್ಟಿಕ್ ಅನ್ನು ಬಳಸದೇ ನೈಸರ್ಗಿಕವಾಗಿ ಸಿಗುವಂತಹ ಅಡಿಕೆ ತಟ್ಟೆ, ಬಾಳೆ ಎಲೆ, ಹಾಗೂ ದೊನ್ನೆಯನ್ನು ಬಳಸತಕ್ಕದ್ದು. ದೇವಾಲಯಗಳಲ್ಲಿ ಯಾವುದೇ ತರಹದ ಪ್ಲಾಸ್ಟಿಕ್‌ನಿಂದ ತಯಾರಿಸಿದ ಅಲಂಕಾರಿಕ ಹೂವು, ತೋರಣ ಹಾಗೂ ಇತರೆ ವಸ್ತುಗಳನ್ನು ಬಳಸದಂತೆ ಜಾಗೃತೆ ವಹಿಸುವುದು.

ಇದನ್ನು ಪಾಲನೆ ಮಾಡದಿದ್ದಲ್ಲಿ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ಅವರು ಆದೇಶಿಸಿದ್ದಾರೆ.

ವೈರತ್ವ ಬಿಟ್ಟು ಸ್ನೇಹ, ಸಹಬಾಳ್ವೆ ರೂಢಿಸಿಕೊಳ್ಳಬೇಕು

• ಪ್ರಜೋದಯ ವರದಿ

ಹೊಳೆನರಸೀಪುರ: ಇತ್ತೀಚೆಗೆ ಜನರಲ್ಲಿ ವೈರತ್ವ ಜಾಸ್ತಿಯಾಗುತ್ತಿದೆ ಇದು ಸಮಾಜದ ಶಾಂತಿಯನ್ನು ಕದಡುತ್ತದೆ ಆದ್ದರಿಂದ ಜನರು ವೈರತ್ವ ಬಿಡಬೇಕು ಸ್ನೇಹ ಸಹಬಾಳ್ವೆ ರೂಢಿಸಿಕೊಳ್ಳಬೇಕು ಎಂದು ದೊಡ್ಡಕಾಡನೂರು ಜೆಎಸ್‌ಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹಾಗೂ ಚಿಂತಕ ಡಾ. ಚೌಡಯ್ಯ ಕಟ್ನವಾಡಿ ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ನಡೆದ ಹೊಸ, ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ 2025-26ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘಗಳ ಉದ್ಘಾಟನೆ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಂದ ಪ್ರಥಮ ಪಿಯುಸಿ ವಿದ್ಯಾರ್ಥಿನಿಯರಿಗೆ ಸ್ವಾಗತ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿಗೆ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಜನರು ದೇಹದ ಮೇಲ್ಭಾಗದ ಸೌಂದರ್ಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ದೇಹದ

ಒಳಗಡೆ ಇರುವ ಮನಸ್ಸಿನ ಬಗ್ಗೆ ಯಾರೂ ಚಿಂತೆ ಮಾಡುತ್ತಿಲ್ಲ, ದೇಹ ಬೆಳವಣಿಗೆಯಾದಂತೆ, ಮನಸ್ಸನ್ನು ಯಾರು ಒದಗಾವಣೆ ಮಾಡಿಕೊಳ್ಳುತ್ತಾರೆಯೋ ಅವರು ಮಾತ್ರ ಬುದ್ಧಿವಂತರಾಗುತ್ತಾರೆ ಎಂದು ಸಲಹೆ ನೀಡಿದರು.

ಪರೀಕ್ಷೆಗಾಗಿ ಮಾತ್ರ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸುತ್ತಾರೆ, ಆದರೆ ಜೀವನದಲ್ಲಿ ಬರುವ ಕಷ್ಟ-ಸುಖಗಳನ್ನು ನಿಭಾಯಿಸಲು ಸೋಲುತ್ತಾರೆ ಆದ್ದರಿಂದ ವಿದ್ಯಾಭ್ಯಾಸವನ್ನು ಪರೀಕ್ಷೆಯಲ್ಲಿ ಅಂಕ ಗಳಿಸುವುದರ ಜೊತೆಗೆ ಜೀವನ ನಿರ್ವಹಣೆ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅರ್ಥ ಮಾಡಿಕೊಂಡು ಜ್ಞಾನ ವೃದ್ಧಿಸಿಕೊಳ್ಳಬೇಕು. ಜ್ಞಾನದ ಹಸಿವನ್ನು ಹೆಚ್ಚಿಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಧನಾತ್ಮಕ ಆಲೋಚನೆಗಳಿಗಿಂತ, ಋಣಾತ್ಮಕ ಆಲೋಚನೆಗಳೇ ಅಧಿಕವಾಗುತ್ತಿವೆ ಋಣಾತ್ಮಕ ಆಲೋಚನೆಗಳನ್ನು ಹೊಂದಿರುವ ವಿದ್ಯಾರ್ಥಿಗಳು ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ, ಧನಾತ್ಮಕ ಆಲೋಚನೆಗಳು ಅಸಾಧ್ಯವಾದುದನ್ನು ಸಾಧ್ಯವಾಗುವಂತೆ ಮಾಡುತ್ತವೆ. ಆದ್ದರಿಂದ ಯಾವಾಗಲೂ ಧನಾತ್ಮಕವಾಗಿ ಚಿಂತಿಸಬೇಕೆಂದು ಕಿವಿ ಮಾತು ಹೇಳಿದರು.

ವಿದ್ಯಾರ್ಥಿಗಳಲ್ಲಿ ಗೌರವ ಕೊಡುವ ಮತ್ತು ತೆಗೆದುಕೊಳ್ಳುವ ಗುಣಗಳು ಕಡಿಮೆಯಾಗುತ್ತಿವೆ. ತಂದೆ-ತಾಯಿ, ಗುರು ಹಿರಿಯರಿಗೆ ಗೌರವ ಕೊಡುವುದನ್ನು ರೂಢಿಸಿಕೊಳ್ಳಬೇಕು. ಹಾಗೆಯೇ, ಈ ನಾಡು ಇಷ್ಟೊಂದು ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ಅಭಿವೃದ್ಧಿ ಹೊಂದಲು, ಹಲವಾರು ಜನ ಸಂಶೋಧಕರು ಮತ್ತು ವಿಜ್ಞಾನಿಗಳು ಶ್ರಮವಹಿಸಿದ್ದಾರೆ ಅವರಿಗೂ ಸಹ ನಾವೆಲ್ಲರೂ ಸದಾ ಋಣಿಗಳಾಗಿರಬೇಕು. ನಾವು ಇತರರಿಗೆ ಗೌರವ ನೀಡಿದರೆ, ಬೇರೆಯವರು ನಮಗೆ ಗೌರವ ನೀಡುತ್ತಾರೆ ಎಂದು ತಿಳಿಸಿದರು.

ನಿವೃತ್ತ ಪ್ರಾಂಶುಪಾಲ ಹೆಚ್.ಕೆ.ಯೋಗ ನರಸಿಂಹ ಮಾತನಾಡಿ, ವಿದ್ಯಾರ್ಥಿಗಳು ಕಾಲ ಕಾಲಕ್ಕೆ ಹೊಂದಾಣಿಕೆ ಮಾಡಿಕೊಂಡು ಶಿಕ್ಷಣ ಕಲಿಯಬೇಕಾಗುತ್ತದೆ. ನಿರಂತರವಾದ ಬದಲಾವಣೆಯಿಂದ ಮಾತ್ರ ಉತ್ತಮ ವಿದ್ಯಾರ್ಥಿಗಳಾಗಲು ಸಾಧ್ಯ. ಸಣ್ಣ ಪುಟ್ಟ ಕೆಲಸಗಳನ್ನು ಶ್ರದ್ಧೆಯಿಂದ ಮಾಡಬೇಕು, ಪಠ್ಯೇತರ ವಿಷಯಕ್ಕಿಂತ ಪಠ್ಯ ವಿಷಯದಲ್ಲಿ ಹೆಚ್ಚು ಸಮಯ ವಿನಿಯೋಗ ಮಾಡಿದಾಗ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪ್ರಾಂಶುಪಾಲ ಲೋಕೇಶ್ ಮಾತನಾಡುತ್ತಾ, ವಿದ್ಯಾರ್ಥಿನಿಯರು ವಿಶೇಷ ತರಗತಿಗಳನ್ನು ತೆಗೆದುಕೊಂಡಾಗ, ಪರಿಹಾರ ಬೋಧನೆ ಮಾಡಿದಾಗ ತರಗತಿಗಳಿಗೆ ಗೈರು ಹಾಜರಾಗಬಾರದು ಎಲ್ಲಾ ತರಗತಿಗಳನ್ನು ನಿಮ್ಮ ಒಳ್ಳೆಯದಕ್ಕಾಗಿಯೇ ಮಾಡುತ್ತೇವೆ. ಅದನ್ನು ಬಳಸಿಕೊಳ್ಳಬೇಕು ಎಂದರು.

ಮಾಜಿ ಪುರಸಭೆ ಅಧ್ಯಕ್ಷ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಸುದರ್ಶನ್, ಅಭಿವೃದ್ಧಿ ಸಮಿತಿ ಸದಸ್ಯರಾದ ದೇವರಾಜು, ರಜನಿ, ಕವಿತ ಹಾಗೂ ಕಾಲೇಜಿನ ಉಪನ್ಯಾಸಕರು, ವಿಜ್ಞಾನ ವಿಭಾಗದ ಸಿಂಧು ಮತ್ತು ಸಿಂಚನ ಭಾಗವಹಿಸಿದ್ದರು.

॥ ಸುಭಾಷಿತ ॥

ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು [illegible]
-ಕೆ ಶಿವರಾಮ ಕಾರಂತ

ಪ್ರಜಾವಾಣಿ

ಸಂಸದರ ನಿಧಿ ಸದ್ಬಳಕೆಯಾಗಲಿ

ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ (ಎಂಪಿ ಲ್ಯಾಡ್) ನಿಧಿ ಬಳಕೆಯಲ್ಲಿ ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳ ಸಂಸದರು ಹಿಂದೆ ಬಿದ್ದಿದ್ದಾರೆ. ಪ್ರತಿ ವರ್ಷ ಹಣ ಬಳಕೆಯಾಗದೆ ಉಳಿಯುತ್ತಿದ್ದರೂ ನಮ್ಮ ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸದೆ ಇರುವುದು ವಿಪರ್ಯಾಸ. ತಮ್ಮ ಕ್ಷೇತ್ರದ ಸಣ್ಣಪುಟ್ಟ ಬೇಡಿಕೆಗಳನ್ನು ಸಂಸದರು ಪೂರೈಸಿಕೊಳ್ಳಲಿ ಎನ್ನುವ ಉದ್ದೇಶದಿಂದ ತೊಂಬತ್ತರ ದಶಕದಲ್ಲಿ ಆಗಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಈ ಯೋಜನೆ ಆರಂಭಿಸಿದರು. ಈಗ ಈ ನಿಧಿಯ ಮೊತ್ತ ಕಳೆದ ಮೂರು ವರ್ಷದಿಂದ ವರ್ಷಕ್ಕೆ ಐದು ಕೋಟಿ ರೂಪಾಯಿ ಆಗಿದೆ. ಇದು ಕಡಿಮೆ ಮೊತ್ತವೇನಲ್ಲ. ಆದರೆ ನಮ್ಮ ಜನಪ್ರತಿನಿಧಿಗಳಿಗೆ ಲಭ್ಯವಿರುವ ಹಣವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಕಾಳಜಿ ಇಲ್ಲ. ಸಕಾಲಕ್ಕೆ ಹಣ ಬಳಕೆ ಆಗದಿದ್ದರೆ ಅದು ವ್ಯರ್ಥ. ಸಂಸದರ ನಿಧಿ ಸರಿಯಾಗಿ ಬಳಕೆ ಮಾಡದವರ ಸಾಲಿನಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮೇನಕಾ ಗಾಂಧಿ, ಮುರಳಿಮನೋಹರ ಜೋಷಿ, ಅಜಿತ್ ಸಿಂಗ್ ಸೇರಿದಂತೆ ದೊಡ್ಡವರು, ಸಣ್ಣವರು ಎಲ್ಲರೂ ಇದ್ದಾರೆ. ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಸೇರಿದರೆ ನಿಧಿಗೆ ಪ್ರತಿವರ್ಷ ನಿಗದಿಯಾಗುವ ಹಣ ಸುಮಾರು ₹ 4000 ಕೋಟಿ. ಈ ನಿಧಿಯನ್ನು ಸರಿಯಾಗಿ ಬಳಸಿದರೆ ಕ್ಷೇತ್ರಗಳ ಮೂಲ ಸೌಕರ್ಯಗಳನ್ನು ಸ್ವಲ್ಪಮಟ್ಟಿಗಾದರೂ ಪೂರೈಸಲು ಸಾಧ್ಯವಿದೆ.

ಸಂಸದರ ನಿಧಿ ಬಳಕೆಯಲ್ಲಿ ಸಂಸದರ ಪಾತ್ರವಷ್ಟೇ ಇಲ್ಲ. ಜಿಲ್ಲಾಧಿಕಾರಿಗಳ ಹೊಣೆಯೂ ಇದೆ. ಸಂಸದರ ಶಿಫಾರಸುಗಳನ್ನು ಸರ್ಕಾರಕ್ಕೆ ಕಳುಹಿಸಿ ಮಂಜೂರಾತಿ ಪಡೆಯಬೇಕು. ಕಾಲಕಾಲಕ್ಕೆ ಹಣ ಬಿಡುಗಡೆ ಆಗುವಂತೆ ನೋಡಿಕೊಳ್ಳಬೇಕು. ಜಿಲ್ಲಾ ಪಂಚಾಯತ್, ಎಂಜಿನಿಯರ್ ವಿಭಾಗ ಕಾಮಗಾರಿಗಳ ಪ್ರಗತಿ ಪರಿಶೀಲಿಸಿ ವರದಿ ಸಲ್ಲಿಸಬೇಕು. ಬಿಡುಗಡೆಯಾದ ಹಣ ಬಳಸಿದ ಪ್ರಮಾಣ ಪತ್ರ ಸಲ್ಲಿಸಬೇಕು. ಪ್ರಮಾಣ ಪತ್ರ ಸಲ್ಲಿಸದೆ ಕೆಲಸ ಅರ್ಧಕ್ಕೆ ನಿಂತ ಉದಾಹರಣೆಗಳೂ ಬೇಕಾದಷ್ಟಿವೆ. 'ಅರ್ಧದಷ್ಟು ಸಂಸದರಿಗೆ ಈ ಯೋಜನೆ ಬೇಕಾಗಿಲ್ಲ. ಇದನ್ನು ಮುಂದುವರಿಸುವುದಕ್ಕಿಂತ ರದ್ದುಪಡಿಸುವುದೇ ಲೇಸು' ಎಂದು ರಾಹುಲ್ ಗಾಂಧಿ ಕಳೆದ ವಾರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಅವರು ಕೊಟ್ಟ ಕಾರಣ ₹ 5 ಕೋಟಿ ಸಾಕಾಗುವುದಿಲ್ಲ ಎನ್ನುವುದು. ಪ್ರತಿ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಎಂಟು ವಿಧಾನಸಭಾ ಕ್ಷೇತ್ರಗಳು ಸೇರುತ್ತವೆ. ₹ 5 ಕೋಟಿ ಹಂಚಿಕೆ ಮಾಡಿದರೆ ಒಂದೊಂದು ಕ್ಷೇತ್ರಕ್ಕೆ ₹ 60 ಲಕ್ಷ ಕೂಡಾ ಸಿಗುವುದಿಲ್ಲ. ಎಲ್ಲ ಗ್ರಾಮಗಳ ಜನ ಮನವಿ ಹಿಡಿದುಕೊಂಡು ಬರುತ್ತಾರೆ. ನಾವು ಯಾರ ಅರ್ಜಿ ಶಿಫಾರಸು ಮಾಡುವುದು, ಯಾರನ್ನು ಬಿಡುವುದು ಎನ್ನುವುದೇ ತಲೆನೋವು. ಹೀಗಾಗಿ ನಿಧಿ ಇರುವುದಕ್ಕಿಂತ ರದ್ದು ಮಾಡುವುದೇ ಮೇಲು ಎನ್ನುವುದು ರಾಹುಲ್ ಅವರ ನಿಲುವು. ಆದರೆ ಯೋಜನೆ ಎಲ್ಲಿ ಎಡವುತ್ತಿದೆ ಎಂಬುದನ್ನು ಪತ್ತೆ ಹಚ್ಚಿ ಪರಿಣಾಮಕಾರಿಯಾಗಿಸುವ ಅಗತ್ಯವಿದೆ. ಪ್ರತಿ ವರ್ಷ ಕಾಲಮಿತಿಯಲ್ಲಿ ಹಣ ಬಳಕೆ ಮಾಡಬೇಕಾದುದನ್ನು ಸಂಸದರಿಗೆ ಕಡ್ಡಾಯ ಮಾಡಬೇಕಾದ ಅಗತ್ಯವಿದೆ.

ಕಲಿಕಾ ಸಾಮರ್ಥ್ಯ ಕುಸಿತ ಆತಂಕಕಾರಿ

ರಾಜ್ಯದ ಗ್ರಾಮೀಣ ಪ್ರದೇಶದ ಶಾಲಾ ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ಕುಸಿಯುತ್ತಿರುವುದು ಆತಂಕಕಾರಿ ಬೆಳವಣಿಗೆ. ಶಿಕ್ಷಣದ ಸ್ಥಿತಿಗತಿ ಕುರಿತು 'ಪ್ರಥಮ್' ಎಂಬ ಸ್ವಯಂ ಸೇವಾ ಸಂಸ್ಥೆ ನಡೆಸಿದ [illegible] ಈ ಅಂಶ ಬೆಳಕಿಗೆ ಬಂದಿದೆ. ನಗರ ಪ್ರದೇಶದ ಮಕ್ಕಳು [illegible] ಮತ್ತು ಅಂಕ ಗಳಿಕೆಯಲ್ಲಿ ಹೊಸ ಎತ್ತರಗಳಿಗೆ ಜಿಗಿಯುತ್ತಿದ್ದಾರೆ. [illegible] ಶಿಕ್ಷಣಕ್ಕೆ ಪ್ರವೇಶ ಪಡೆಯಲು ಸ್ಪರ್ಧೆ ಹಿಂದೆಂದೂ ಇಲ್ಲದಷ್ಟು ತುರುಸಾಗಿದೆ. ಇಂತಹ ಹೊತ್ತಿನಲ್ಲಿ ಹಳ್ಳಿಗಾಡಿನ ಮಕ್ಕಳು ಕಲಿಕೆಯಲ್ಲಿ ಮತ್ತಷ್ಟು [illegible] ಸರಿದಿರುವುದು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಣ ಅಂತರವನ್ನು ಇನ್ನಷ್ಟು ಹಿಗ್ಗಿಸಿದೆ ಎಂದೇ ಪರಿಗಣಿಸಬೇಕಾಗುತ್ತದೆ. ಸಮಾನ ಶಿಕ್ಷಣ ಒದಗಿಸಬೇಕೆಂಬ ಸಂವಿಧಾನದ ಆಶಯಕ್ಕೇ ಇದರಿಂದ [illegible] ಉಂಟಾಗಲಿದೆ. ಗ್ರಾಮೀಣ ಪ್ರದೇಶದ ಎಂಟನೇ ತರಗತಿಯ ಶೇ 82.7 ರಷ್ಟು ವಿದ್ಯಾರ್ಥಿಗಳಿಗೆ ಒಂದನೇ ತರಗತಿಯ ಕನ್ನಡ ಪಾಠಗಳನ್ನೇ ಓದುವ ಕೌಶಲ ಇಲ್ಲ. ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಕೂಡುವ, ಕಳೆಯುವ [illegible] ಲೆಕ್ಕಗಳೂ ಬರುವುದಿಲ್ಲ ಎಂದು ವರದಿ ಹೇಳಿದೆ. ಇದು ತಲೆತಗ್ಗಿಸಬೇಕಾದ ವಿಚಾರ. ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆ ಮಕ್ಕಳ ಕಲಿಕಾ ಸಾಮರ್ಥ್ಯ ಮತ್ತೂ ಕಳಪೆ ಆಗಿದೆ. ಕಲಿಕಾ [illegible] 2009ರಿಂದ ಕುಸಿಯುತ್ತಲೇ ಸಾಗಿರುವುದು ಆತಂಕದ ವಿಷಯ.

ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮತ್ತು ಮಕ್ಕಳು ಶಾಲೆಗಳಿಂದ ಹೊರಗುಳಿಯದಂತೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿವೆ. ಶಿಕ್ಷಣ ಹಕ್ಕು ಕಾಯ್ದೆಯೂ ಜಾರಿಗೆ ಬಂದಿದೆ. ಸರ್ವ ಶಿಕ್ಷಣ ಅಭಿಯಾನ [illegible] ಪಠ್ಯ ಪುಸ್ತಕ, ಸಮವಸ್ತ್ರ ಮತ್ತು ಪಾಠೋಪಕರಣಗಳ ವಿತರಣೆ, ಬಿಸಿಯೂಟ ಮುಂತಾದ ಕಾರ್ಯಕ್ರಮಗಳು ಅನುಷ್ಠಾನದಲ್ಲಿವೆ. [illegible] ಉದ್ದೇಶ ಮಾತ್ರ ಈಡೇರಿಲ್ಲ. ಈ ಕುರಿತು ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕು. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಅನೇಕ ಕಡೆ ಕಟ್ಟಡಗಳಿಲ್ಲ. ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಇನ್ನೂ ಸಾಧ್ಯವಾಗಿಲ್ಲ. ಅನೇಕ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವೂ ಸಮಾಧಾನಕರವಾಗಿಲ್ಲ. ಈ ಎಲ್ಲದರೊಂದಿಗೆ ಹಳ್ಳಿಗಳಲ್ಲಿ ಶಾಲೆಗಳು ಸರಿಯಾಗಿ ನಡೆಯುತ್ತವೆ ಎನ್ನುವ ಬಗೆಗೆ ಯಾವುದೇ ಖಾತರಿ ಇಲ್ಲ. ಅನೇಕ ಶಿಕ್ಷಕರು ಸ್ಥಳೀಯರಾಗಿದ್ದುಕೊಂಡು ಪಾಠ ಹೇಳುವುದಕ್ಕಿಂತ ಅನ್ಯ ಚಟುವಟಿಕೆಗಳಲ್ಲಿಯೇ ಹೆಚ್ಚಾಗಿ ತೊಡಗಿರುತ್ತಾರೆ ಎನ್ನುವ ದೂರು [illegible] ಇಂತಹ ಹತ್ತಾರು ಅಂಶಗಳು ವಿದ್ಯಾರ್ಥಿಗಳ ಕಲಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಕಡಿಮೆ ಆಗಿರುವುದನ್ನು ಶಿಕ್ಷಣ ಇಲಾಖೆಯು ಗಂಭೀರವಾಗಿ ಪರಿಗಣಿಸಬೇಕು. ಪರಿಹಾರ ಹುಡುಕಬೇಕು. ಶಾಲೆಗಳಲ್ಲಿನ ಶೈಕ್ಷಣಿಕ ಸ್ಥಿತಿಗತಿ ಮತ್ತು ಗುಣಮಟ್ಟವನ್ನು ಇಲಾಖೆಯ [illegible] ಅಧಿಕಾರಿಗಳು ಆಗಿಂದಾಗ್ಗೆ ಪರಿಶೀಲಿಸಬೇಕು. [illegible] ಸುಧಾರಣೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು.

ಪ್ರಜಾವಾಣಿ 50 ವರ್ಷಗಳ ಹಿಂದೆ

ಮಂಗಳವಾರ, 28-1-1964

ಜನತಾ ಚೀನಕ್ಕೆ ಫ್ರಾನ್ಸಿನ ಅಧಿಕೃತ ಮನ್ನಣೆ

ಲಂಡನ್, ಜ. 27 – [illegible]

ಭಾರತಕ್ಕೆ ರಷ್ಯನ್ ನೆರವು

[illegible]

ಭಾರತ ಗಡಿ ರಕ್ಷಣಾ ದಳದ ಮೇಲೆ ಪಾಕ್ ದಾಳಿ

[illegible]

ರಾಜಕೀಯವಾಗಿ ಸಮಾನರಾಗುವುದು ಎಂದಿಗೆ?

ಕಡೆಗೋಲು

ಸಿ.ಜಿ. ಮಂಜುಳಾ

65ನೇ ಗಣರಾಜ್ಯೋತ್ಸವವನ್ನು ಆಚರಿಸಿದ್ದೇವೆ. ಭಾರತದಲ್ಲಿ ಪ್ರಜಾತಂತ್ರ ವಿಸ್ತರಣೆಗೊಂಡಿದೆ. ಆಳವಾಗಿ ಬೇರು ಬಿಟ್ಟಿದೆ ಎಂಬುದನ್ನು ಧ್ವನಿಸುವ ಅನೇಕ ಸಂಗತಿಗಳಿವೆ. ಆದರೆ ಹಾಗೆಯೇ ಅನೇಕ ವೈರುಧ್ಯಗಳೂ ಇವೆ ಎಂಬುದನ್ನು ಮರೆಯಲಾಗದು.

ಗಣರಾಜ್ಯೋತ್ಸವದ ಮುನ್ನಾ ದಿನದ ಭಾಷಣದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಮುಂದಿನ ಲೋಕಸಭಾ ಚುನಾವಣೆಗಳ ನಂತರ ಸ್ಥಿರ ಸರ್ಕಾರ ರಚನೆಯಾಗಲೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಚುನಾವಣೆಗಳ ಸಂದರ್ಭದಲ್ಲಿ ಜನರಿಗೆ ಅನೇಕ ವಚನಗಳನ್ನು ನೀಡುತ್ತಾ ನಂತರ ವಚನಭ್ರಷ್ಟತೆ ಮೆರೆಯುವುದು ರಾಜಕೀಯ ಪ್ರಕ್ರಿಯೆಯ ಭಾಗವಾಗಿಬಿಟ್ಟಿದೆ. ಹುಸಿ ಭರವಸೆಗಳು ಭ್ರಮೆಗಳನ್ನು ಸೃಷ್ಟಿಸುತ್ತವೆ. ಅವು ಆಕ್ರೋಶವನ್ನು ಹುಟ್ಟುಹಾಕುತ್ತವೆ. ಆ ಆಕ್ರೋಶದ ಒಂದು ಗುರಿ ಅಧಿಕಾರದಲ್ಲಿರುವವರು ಎಂಬುದರ ಕುರಿತು ರಾಷ್ಟ್ರಪತಿಗಳು ಸರಿಯಾಗಿಯೇ ಎಚ್ಚರಿಸಿದ್ದಾರೆ.

ರೇಸ್ ಕುದುರೆಯ ವೇಗದಲ್ಲಿ ಭರವಸೆಗಳನ್ನು ಈಡೇರಿಸಿ, ಬಸವನ ಹುಳುವಿನ ಹೆಜ್ಜೆಯಂತಲ್ಲ ಎಂಬುದನ್ನು ರಾಷ್ಟ್ರಪತಿ ಹೇಳಿದ್ದಾರೆ. ರಾಷ್ಟ್ರ ಮತ್ತೊಂದು ಸಾರ್ವತ್ರಿಕ ಚುನಾವಣೆಯ ಹೊಸ್ತಿಲಲ್ಲಿದೆ. ಆದರೆ ಭ್ರಷ್ಟಾಚಾರ, ಬೆಲೆ ಏರಿಕೆ, ಕೋಮುವಾದ, ಭಯೋತ್ಪಾದನೆ, ನಿರುದ್ಯೋಗಗಳಂತಹ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಭರವಸೆಗಳು ಈಡೇರಿಲ್ಲ. ಹಾಗೆಯೇ ಪ್ರಗತಿಗೆ ಅಡ್ಡಗಾಲಾಗಿರುವ ಅನೇಕ ವೈರುಧ್ಯಗಳ ಸಂಕೋಲೆಗಳಲ್ಲೂ ರಾಷ್ಟ್ರ ಸಿಲುಕಿದೆ. ಇವುಗಳಲ್ಲಿ ಮುಖ್ಯವಾದದ್ದು ನಮ್ಮ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುವ ಲಿಂಗತ್ವ ಪೂರ್ವಗ್ರಹಗಳು.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ರಾಷ್ಟ್ರೀಯವಾದಿ ನಾಯಕರು ಅಪೇಕ್ಷಿಸಿದ್ದರು ಹಾಗೂ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಮಹಿಳೆಯರೂ ಪಾಲ್ಗೊಂಡರೆಂಬುದು ಗೊತ್ತಿರುವ ಸಂಗತಿ. 'ಪುರುಷರ ಜತೆ ಜತೆಯಲ್ಲೇ ಮಹಿಳೆಯರು ಕೆಲಸ ಮಾಡದಿದ್ದರೆ ಭಾರತಕ್ಕೆ ವಿಮುಕ್ತಿ ಇಲ್ಲ. ವಿಮುಕ್ತಿ ಎಂಬುದನ್ನು ಒಂದಲ್ಲ ನಾನಾ ಅರ್ಥಗಳಲ್ಲಿ ಗ್ರಹಿಸಬೇಕು. ರಾಜಕೀಯ ವಿಮುಕ್ತಿಯಷ್ಟೇ ಅಲ್ಲ, ಆರ್ಥಿಕ ಉದ್ಧಾರ ಹಾಗೂ ಆತ್ಮೋದ್ಧಾರಕ್ಕೂ ಇದು ಬೇಕು.' ಎಂದು ಗಾಂಧಿ ಹೇಳಿದ್ದರು.

ಆದರೆ ಈ ಆಶಯ ಸ್ವತಂತ್ರ ಭಾರತದಲ್ಲಿ ಸಾಕಾರಗೊಳ್ಳದಿರುವುದನ್ನು ಕಾಣಬಹುದು. 543 ಸದಸ್ಯ ಬಲದ ಲೋಕಸಭೆಯಲ್ಲಿ ಮಹಿಳಾ ಎಂಪಿಗಳು ಸಾಮಾನ್ಯವಾಗಿ 50ರ ಸಂಖ್ಯೆ ದಾಟುವುದೇ ಕಷ್ಟ. 2009ರಲ್ಲಿ ಚುನಾವಣೆ ನಡೆದ 15ನೇ ಲೋಕಸಭೆಗೆ ಮಹಿಳೆಯರ ಸಂಖ್ಯೆ 60ರ ಸಮೀಪಕ್ಕೆ ಬಂದಿದ್ದೇ ಸಾಧನೆ ಎಂದು ಅಲ್ಪ ತೃಪ್ತಿ ಪಟ್ಟುಕೊಳ್ಳುವ ಸ್ಥಿತಿ ನಮ್ಮದಾಗಿದೆ.

[illegible] ಅಣಿಯಾಗುತ್ತಿದೆ. ರಾಜಕೀಯ ವಲಯದಲ್ಲಿ ಅಂತರ್ಗತವಾಗಿರುವ ಮಹಿಳೆ ವಿರುದ್ಧದ ಪೂರ್ವಗ್ರಹಗಳನ್ನು ತೋರಿಸುವ ಮಾತುಗಳನ್ನಾಡುತ್ತಿವೆ ರಾಜಕೀಯ ಪಕ್ಷಗಳು. ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಅವರಂತೂ ಈ ರಾಷ್ಟ್ರದಲ್ಲಿ ಮಹಿಳೆಯರು ಸಬಲೀಕರಣ ಸಾಧಿಸುವುದು ಸಾಧ್ಯವಾಗುವವರೆಗೆ ಪ್ರಗತಿ ಸಾಧ್ಯವಿಲ್ಲ ಎಂದು ಇತ್ತೀಚೆಗೆ ಎಐಸಿಸಿ ಅಧಿವೇಶನದಲ್ಲಿ ಹೇಳಿದ್ದಾರೆ. ಪಕ್ಷದ ಸಭೆಗಳಲ್ಲಿ ಸದಾ ಅರ್ಧದಷ್ಟು ಪ್ರಮಾಣದಲ್ಲಿ ಮಹಿಳೆಯರು ಹಾಗೂ ಮುಖ್ಯಮಂತ್ರಿಗಳಲ್ಲೂ ಅರ್ಧದಷ್ಟು ಮಂದಿ ಮಹಿಳೆಯರು ಇರುವಂತಹ ಕಾಲವನ್ನು ಕಾಣಲು ಬಯಸುವುದಾಗಿಯೂ ರಾಹುಲ್ ಹೇಳಿದ್ದಾರೆ.

ಪಕ್ಷದ ಲೋಕಸಭಾ ಚುನಾವಣಾ ಪ್ರಣಾಳಿಕೆಗೆ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲು ಭೋಪಾಲ್‌ನಲ್ಲಿ ವಿವಿಧ ಕ್ಷೇತ್ರಗಳ 250 ಮಹಿಳೆಯರ ಜೊತೆಗೂ ರಾಹುಲ್ ಸಭೆ ನಡೆಸಿದ್ದಾರೆ. ವಿಶ್ವದಲ್ಲಿ 'ಸೂಪರ್ ಪವರ್' ಆಗುವ ಬಗ್ಗೆ ನಾವು ಬಹಳ ಮಾತನಾಡುತ್ತೇವೆ. ಆದರೆ ಈ ದೇಶದ ಮಹಿಳೆಯರು ಭದ್ರತೆಯ ಭಾವನೆ ಅನುಭವಿಸುವವರೆಗೆ ನಮ್ಮ ರಾಷ್ಟ್ರ 'ಸೂಪರ್ ಪವರ್' ಆಗುವುದು ಸಾಧ್ಯವಿಲ್ಲ ಎನ್ನುತ್ತಾ ಅಜ್ಜಿ, ತಾಯಿ ಹಾಗೂ ಅಮೇಥಿಯ ಮಹಿಳೆಯರಿಂದ ತಾವು ಕಲಿತಿದ್ದು ಅಪಾರ ಎಂದು ಭಾವನಾತ್ಮಕ ಎಳೆ ಮೀಟಿದ್ದಾರೆ. ಬದಲಾಗುತ್ತಿರುವ ಭಾರತದಲ್ಲಿ ಯುವಜನರು, ಹಾಗೆಯೇ ಮಹಿಳಾ ಶಕ್ತಿಯತ್ತಲೂ ಚುನಾವಣಾ ಪ್ರಚಾರ ಕೇಂದ್ರೀಕರಿಸುವ ಪ್ರಯತ್ನ ಇಲ್ಲಿ ಎದ್ದು ಕಾಣಿಸುತ್ತದೆ.

'ಬೇಟಿ ಬಚಾವೊ, ಬೇಟಿ ಪಢಾವೊ' (ಹೆಣ್ಣುಮಗು ಉಳಿಸಿ, ಹೆಣ್ಣುಮಗು ಬೆಳೆಸಿ) ಎಂದಿರುವ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯವರು ಮಹಿಳೆಯರು ಗೃಹಕೃತ್ಯಗಳಿಗೆ ಸೀಮಿತರಾಗದೆ ರಾಷ್ಟ್ರ ನಿರ್ಮಾಪಕರಾಗಬೇಕು ಎನ್ನುತ್ತಾ ಮಹಿಳೆಯರನ್ನು ಒಲಿಸಿಕೊಳ್ಳುವ ಯತ್ನ ಮಾಡುತ್ತಿದ್ದಾರೆ.

ಲಿಂಗತ್ವ ಎನ್ನುವುದು ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಲ್ಲಿ ಈಗಲೂ ಚುನಾವಣಾ ರಾಜಕಾರಣದ ಕಾರ್ಯಸೂಚಿಯ ಭಾಗವಾಗಿಲ್ಲ ಎಂಬುದನ್ನು ನೆನಪಿಡಬೇಕು. ಲಿಂಗ ತಾರತಮ್ಯದಿಂದಾಗುವ ಪರಿಣಾಮಗಳನ್ನು ನಿರ್ವಹಿಸಬೇಕಾದ ಅಗತ್ಯದ ಭಾರತದಲ್ಲಿ ಚುನಾವಣೆಗಳನ್ನು ಎದುರಿಸಲಾಗುವುದಿಲ್ಲ. ಮಹಿಳೆಯರಿಗೆ ಸಂಬಂಧಿಸಿದ ಚಳವಳಿಗಳು ಜಾತಿ, ವರ್ಗ ಅಥವಾ ಸಮುದಾಯಗಳ ದೊಡ್ಡ ಗುಂಪುಗಳೊಳಗೆ ಮಸುಕಾಗಿ ಹೋಗುತ್ತವೆ. ಪಿತೃಪ್ರಧಾನ ವ್ಯವಸ್ಥೆಯೊಳಗೆ ಅಂಚಿಗೆ ಒತ್ತರಿಸಲಾಗಿರುವ ಮಹಿಳೆಯರನ್ನು ಪ್ರತ್ಯೇಕ ಮತದಾರ ಗುಂಪಾಗಿ ಗುರುತಿಸುವುದೂ ಸಾಧ್ಯವಾಗಿಲ್ಲ. ಭಾರತದಲ್ಲಿ ಚುನಾವಣಾ ರಾಜಕಾರಣದಲ್ಲಿ ದಲಿತರು ಹಾಗೂ ಮುಸ್ಲಿಮರು ತೀವ್ರವಾಗಿ [illegible] ಇಂತಹ ಸಮುದಾಯಗಳ ಪುರುಷ ಸದಸ್ಯರ ಜೊತೆಗೆ ಈ ಗುಂಪಿನ ಮಹಿಳೆಯರನ್ನೂ ಮಿಳಿತಗೊಳಿಸಲಾಗುತ್ತದೆ. ಮುಸ್ಲಿಂ ಹಾಗೂ ದಲಿತ ಮತ ಬ್ಯಾಂಕ್‌ಗಳು ಭಾರತದ ರಾಜಕಾರಣದಲ್ಲಿ ಹಾಸುಹೊಕ್ಕಾಗಿವೆ. ಆದರೆ ಇಂತಹ ಮತ ಬ್ಯಾಂಕ್‌ಗಳಲ್ಲಿನ ಮಹಿಳಾ ಸದಸ್ಯರ ಜೊತೆಗೆ ಸಮುದಾಯ ಹಾಗೂ ರಾಜಕೀಯ ವರ್ಗಗಳಿಗೆ ಸಂಪರ್ಕ ಇಲ್ಲದಿರುವುದು ಗಮನಾರ್ಹ.

ವಿಶ್ವದಲ್ಲೇ ಅತಿ ಪ್ರಭಾವಿ ಮಹಿಳೆ ಸೋನಿಯಾ ಗಾಂಧಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ. ದೆಹಲಿಗೆ ಮೂರು ಬಾರಿ ಶೀಲಾ ದೀಕ್ಷಿತ್ ಮುಖ್ಯ ಮಂತ್ರಿಯಾಗಿದ್ದರು. ಈಗ ತಮಿಳುನಾಡಿನಲ್ಲಿ ಜೆ ಜಯಲಲಿತಾ, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಹಾಗೂ ರಾಜಸ್ತಾನದಲ್ಲಿ ವಸುಂಧರಾ ರಾಜೆ ಮುಖ್ಯ ಮಂತ್ರಿಗಳಾಗಿದ್ದಾರೆ. ವಿವಿಧ ರಾಜಕೀಯ ಪಕ್ಷಗಳ ನೇತಾರರಾಗಿ ಸುಷ್ಮಾ ಸ್ವರಾಜ್ (ಬಿಜೆಪಿ), ಮಾಯಾವತಿ (ಬಿಎಸ್‌ಪಿ) ಹಾಗೂ ಮೆಹಬೂಬಾ ಮುಫ್ತಿ (ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ) ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ. ಆದರೆ ಈ ಮಹಿಳೆಯರ ಪ್ರಾಬಲ್ಯ ಲೋಕಸಭೆಯಲ್ಲಿ ವ್ಯಕ್ತವಾಗುವುದಿಲ್ಲ.

ಕಳೆದ ಹತ್ತು ವರ್ಷಗಳಲ್ಲಿ ಒಟ್ಟು 62,847 ಅಭ್ಯರ್ಥಿಗಳಲ್ಲಿ ಕೇವಲ 4,148 ಮಹಿಳೆಯರು [illegible] ಶೇ 7ರಷ್ಟು ಮಂದಿ ಮಾತ್ರ ಮಹಿಳೆಯರು ಎಂಬುದನ್ನು ಸಮೀಕ್ಷೆ ಹೇಳುತ್ತದೆ. ಇವರಲ್ಲಿ 675 ಮಹಿಳೆಯರು ಗೆದ್ದು ಸಂಸತ್ ಸದಸ್ಯರು ಅಥವಾ ಶಾಸಕರಾದರು.

ಚುನಾವಣಾ ಆಯೋಗಕ್ಕೆ ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣಪತ್ರಗಳ ಆಧಾರದ ಮೇಲೆ ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ನಡೆಸಿದ [illegible] ವಿಶ್ಲೇಷಣೆ ಪ್ರಕಾರ, ಹೆಚ್ಚಿನ ಸಂಖ್ಯೆಯ ಮಹಿಳಾ ಅಭ್ಯರ್ಥಿಗಳು (981) ಪಕ್ಷೇತರರು. [illegible] ಸ್ಥಾನ ಕಾಂಗ್ರೆಸ್ (551), ಆಮೇಲೆ ಭಾರತೀಯ ಜನತಾ ಪಕ್ಷ (460), ಬಹುಜನ ಸಮಾಜ ಪಕ್ಷ (249), ಸಮಾಜವಾದಿ ಪಕ್ಷ 148 ಹಾಗೂ ಸಿಪಿಎಂ 132 ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು.

ಕಣಕ್ಕಿಳಿಸಲಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಶ್ಲೇಷಿಸಿದಲ್ಲಿ ತೃಣಮೂಲ ಕಾಂಗ್ರೆಸ್ ಅತಿ ಹೆಚ್ಚಿನ ಶೇ 12ರಷ್ಟು ಪಕ್ಷದ ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡಿದೆ (904ರಲ್ಲಿ 110). ನಂತರದ ಸ್ಥಾನ ಸಿಪಿಎಂನದು. 1163 ಅಭ್ಯರ್ಥಿಗಳಲ್ಲಿ 132 ಮಹಿಳೆಯರಿಗೆ ಅಥವಾ ಶೇ 11ರಷ್ಟು ನೀಡಲಾಗಿದೆ. ಬಿಜೆಪಿ ಒಟ್ಟು 315 ಅಭ್ಯರ್ಥಿಗಳಲ್ಲಿ 30 ಮಹಿಳೆಯರಿಗೆ ಅಂದರೆ ಶೇ 10ರಷ್ಟು ಮಂದಿಗೆ ಅವಕಾಶ ನೀಡಿದೆ.

ಇಂತಹ ಪರಿಸ್ಥಿತಿಯಲ್ಲಿ ರಾಜಕಾರಣದಲ್ಲಿ ಲಿಂಗ ಸಂವೇದನಾಶೀಲತೆ ಮೂಡಿಸಲು ರಾಜಕೀಯ ಪಕ್ಷಗಳ ಪರಿಗಣನೆಗಾಗಿ ಇದೇ ಮೊದಲ ಬಾರಿಗೆ ಜೆಂಡರ್ ಪ್ರಣಾಳಿಕೆಯನ್ನು ಮಹಿಳಾ ಸಂಘಟನೆಗಳು ಇತ್ತೀಚೆಗೆ ಬಿಡುಗಡೆ ಮಾಡಿವೆ. ರಾಜಕೀಯ ಪಕ್ಷಗಳೊಳಗೆ ಲಿಂಗ ಸಮಾನತೆ ಸೃಷ್ಟಿಸುವ ಕಾನೂನು ಚೌಕಟ್ಟುಗಳ ಅಭಿವೃದ್ಧಿಗಾಗಿ ಈ ಪ್ರಣಾಳಿಕೆಯಲ್ಲಿ ಆಗ್ರಹಪಡಿಸಲಾಗಿದೆ.

ಮಹಿಳಾ ಮೀಸಲು ಮಸೂದೆ ಭಾರತದ ರಾಜಕೀಯ ವಲಯವನ್ನು ಗಣನೀಯವಾಗಿ [illegible] ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ. [illegible] ರಾಜಕೀಯದಲ್ಲಿ ಮಹಿಳೆಯರು ತಮ್ಮ [illegible] ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. ಆದರೆ 2010ರ ಮಾರ್ಚ್ ತಿಂಗಳಲ್ಲಿ ಈ ಮಸೂದೆ ರಾಜ್ಯಸಭೆಯಲ್ಲಿ ಅಂಗೀಕಾರವಾಗಿದ್ದು ಲೋಕಸಭೆಯ ಅನುಮೋದನೆಗೆ ಇನ್ನೂ ಕಾದು ಕೂತಿದೆ. ಕಳೆದ 17 ವರ್ಷಗಳಿಂದಲೂ ಈ ಮಸೂದೆಗೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಈ ಸಬಲ [illegible] ಭಾರತೀಯ ಮಹಿಳೆ ಕುರಿತಂತೆ ತಮ್ಮ [illegible] ಹೊಣೆಗಾರಿಕೆಯನ್ನು ಎಲ್ಲಾ ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಲೋಕಸಭೆ ಚುನಾವಣೆ ಸಂದರ್ಭದಲ್ಲಿ ತಂತಮ್ಮ ರಾಜಕೀಯ ಪ್ರಣಾಳಿಕೆಗಳಲ್ಲಿ ಮಹಿಳೆ ವಿರುದ್ಧದ ತಾರತಮ್ಯಗಳ ಪರಿಹಾರಕ್ಕಾಗಿ ಬಲವಾದ ಬದ್ಧತೆಗಳನ್ನು ರಾಜಕೀಯ ಪಕ್ಷಗಳು ಪ್ರದರ್ಶಿಸಬೇಕು ಎಂದು ಈ ಪ್ರಣಾಳಿಕೆ ಆಗ್ರಹಪಡಿಸಿದೆ. ಇದು ನಮ್ಮ ರಾಜಕೀಯ ಪಕ್ಷಗಳಿಗೆ ಎಷ್ಟರ ಮಟ್ಟಿಗೆ ತಾಕಬಹುದು?

ಕರ್ನಾಟಕದಲ್ಲಿ 28 ಲೋಕಸಭೆ ಕ್ಷೇತ್ರಗಳಲ್ಲಿ ಎಷ್ಟು ಮಹಿಳೆಯರು ಕಣಕ್ಕಿಳಿಯಬಹುದು? 2009ರ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದು ಜೆ ಶಾಂತಾ (ಬಿಜೆಪಿ, ಬಳ್ಳಾರಿ) ಮಾತ್ರ.

ರಾಜ್ಯದಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಕುಸಿಯುತ್ತಾ ಸಾಗಿರುವುದು ಆತಂಕಕಾರಿ. 225 ಸದಸ್ಯ ಬಲದ ಪ್ರಸಕ್ತ ವಿಧಾನಸಭೆಯಲ್ಲಿರುವುದು ಕೇವಲ ಐವರು ಶಾಸಕಿಯರು. ಎಂದರೆ ಮಹಿಳಾ ಪ್ರಾತಿನಿಧ್ಯ ಕೇವಲ ಶೇ 2.2

ಸಂವಿಧಾನದ 325 ಹಾಗೂ 326 ವಿಧಿಗಳು ಪುರುಷ ಮಹಿಳೆಯರಿಗೆ ಸಮಾನ ರಾಜಕೀಯ ಪ್ರಾತಿನಿಧ್ಯ [illegible] ಆದರೆ ಮಹಿಳಾ ಶಕ್ತಿಯನ್ನು ರಾಜಕೀಯ ಪಕ್ಷಗಳು [illegible] ಒಂದಿವೆ 31 ಸದಸ್ಯರ [illegible] ನವರ ಸಚಿವ ಸಂಪುಟದಲ್ಲಿ [illegible] ಸಚಿವೆ [illegible] ಯಾದ ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಕಳೆದ ಒಂದು ವರ್ಷದಿಂದ ಅಧ್ಯಕ್ಷರ ನೇಮಕವಾಗಿಲ್ಲ. ನಮ್ಮ ಸರ್ಕಾರಗಳ ಮಹಿಳಾ ಪರ ಕಾಳಜಿಗಳು ಯಾವ ಮಟ್ಟದಲ್ಲಿವೆ ಎಂಬುದನ್ನು ಇದು ಎತ್ತಿ ತೋರುತ್ತದೆ.

[illegible] ಆದ್ಮಿ ಪಕ್ಷದ ಹೊಸ ರಾಜಕಾರಣದಲ್ಲೂ ಲಿಂಗತ್ವ [illegible] ಢಾಳಾಗಿ ಕಾಣಿಸುತ್ತಿದೆ. [illegible]

editpagefeedback@prajavani.co.in

ಪ್ರಜಾವಾಣಿ 28 01-2014 Page 6

ವಾಚಕರ ವಾಣಿ

ಕರೀಂಖಾನ್‌ಗೆ ಸ್ಮಾರಕ ಏಕೆ ಬೇಡ?

[illegible] 100 ಅಡಿ ರಸ್ತೆಗೆ ಜಾನಪದ ತಜ್ಞ ಕರೀಂಖಾನ್ ಅವರ ಹೆಸರಿಡಲು ಬಿಬಿಎಂಪಿ ಇನ್ನೂ ಹಿಂಜರಿಯುತ್ತಿರುವುದು (ಪ್ರ.ವಾ., ಜ. 26) ನಮ್ಮ [illegible] ಇಚ್ಛಾಶಕ್ತಿಯ ಕೊರತೆಗೆ ಹಿಡಿದ ಕನ್ನಡಿಯಾಗಿದೆ.

[illegible] ರಾಷ್ಟ್ರೀಯ ಪಕ್ಷಗಳ ನಾಯಕರು, ಕೇವಲ ಪಕ್ಷದ [illegible] ಮಾತ್ರ ಅವರಿಗೆ ಕನ್ನಡ, ಕನ್ನಡಿಗ, ಕರ್ನಾಟಕ [illegible] ಕಡ್ಡಾಯವಲ್ಲದ [illegible] ಇದಕ್ಕೆ ಸಾಕ್ಷಿಯಾಗಿ ಇಲ್ಲಿ [illegible] ರಾಜೀವ್ ವಾಜಪೇಯಿ [illegible] ಪ್ರಸಾದ್ ಮುಖರ್ಜಿ, ದೀನದಯಾಳ್ ಉಪಾಧ್ಯಾಯ. ಹೀಗೆ ಇತರರ ಸ್ಮಾರಕಗಳು [illegible] ಮಿಂಚುತ್ತಿವೆ.

ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕರೀಂಖಾನರಂತಹ ಕನ್ನಡಿಗ ಸಾಧಕರು ಇವರಿಗೆ ಭಾರತೀಯರಂತೆ ಕಂಡುಬರದಿರುವುದು ವಿಪರ್ಯಾಸ. ಹೈಕಮಾಂಡ್‌ನ ಗುಲಾಮಗಿರಿಗೆ ಸಿಲುಕಿ, ಕೇಂದ್ರದವರ ಅಡಿಯಾಳುಗಳಾಗಿ, ಆಡಿಸಿಕೊಳ್ಳುವ ಗೊಂಬೆಗಳಾಗಿ, ಪೊಳ್ಳು ರಾಷ್ಟ್ರೀಯತೆಯ ಸೋಗಿನಲ್ಲಿ ಮುಳುಗಿ ಹೋಗಿ, ತಮ್ಮತನ ಮರೆತು, ಬದ್ಧತೆಯನ್ನು ಮರೆತು ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ನಿರ್ಲಕ್ಷಿಸುವ ನಮ್ಮ ನಾಯಕರಲ್ಲಿ, ದೇಶದ ಇತರ ರಾಜ್ಯಗಳಲ್ಲಿನ ರಾಜಕಾರಣಿಗಳಿಗಿರುವಂತೆ ಸ್ಥಳೀಯತೆಯ ಹಿತಾಸಕ್ತಿ ಬಗೆಗಿನ ಮೊದಲ ಒಲವನ್ನು ನಾವು ಎಂದಿಗೂ ನಿರೀಕ್ಷಿಸುವಂತಿಲ್ಲ.

—ಕಲ್ಯಾಣರಾಮನ್ ಚಂದ್ರಶೇಖರನ್, ಬೆಂಗಳೂರು

ಭಾಷಾಂತರ: ತಾತ್ಸಾರ

ಸಾಹಿತ್ಯ ಸಮ್ಮೇಳನಗಳಲ್ಲಿ, 'ಸಂಭ್ರಮ'ಗಳಲ್ಲಿ, ಇತರ ಸಾಹಿತ್ಯ ಸಮಾವೇಶಗಳಲ್ಲಿ ಭಾಷಾಂತರವನ್ನು ಕುರಿತ ಒಂದು ಗೋಷ್ಠಿಯೂ ಇರುವುದಿಲ್ಲ. ಅದರ ಬಗೆಗೆ ಒಂದು ಮಾತೂ ಕೇಳಿಬರುವುದಿಲ್ಲ ಎಂಬುದು ವಿಷಾದನೀಯ. ಭಾಷಾಂತರದ ಮಹತ್ವವನ್ನು ಇಲ್ಲಿ ವಿವರಿಸಬೇಕಿಲ್ಲ; ಒಂದು ಹೇಳಿಕೆ ಸಾಕು: 'ಭಾಷಾಂತರ ಎಂಥ ಉಪಕಾರವೆಂದರೆ, ಅದಿಲ್ಲದಿದ್ದ ಪಕ್ಷದಲ್ಲಿ ವಿಶ್ವ ಸಾಹಿತ್ಯದ ವಿಸ್ತಾರವಾದ ಪ್ರಾಂತಗಳು ನಮ್ಮ ಪಾಲಿಗೆ ನಷ್ಟವಾಗುತ್ತಿದ್ದುವು!'

ಹೈಟ್ ಎಂಬ ವಿದ್ವಾಂಸ ತನ್ನ classical Tradition' ಎಂಬ [illegible] ಹಿಂದೆಯೆ ಹೇಳಿದ [illegible]ರವೊಂದು ಅಲಕ್ಷಿತ ಕಲೆ ([illegible]eted art)'. ಆ ಉಕ್ತಿ ಈ ಹೊತ್ತಿಗೂ ಸತ್ಯವಾಗಿ ಉಳಿಯಬೇಕೆ?

—ಸಿ.ಪಿ.ಕೆ., ಮೈಸೂರು

ಕನ್ನಡಕ್ಕಾಗಿ ಕೈಜೋಡಿಸಲಿ

ಎಸ್.ಎಲ್. ಭೈರಪ್ಪ ಹಾಗೂ ಯು.ಆರ್. ಅನಂತಮೂರ್ತಿ ಇವರಿಬ್ಬರೂ ಧಾರವಾಡದ 'ಸಾಹಿತ್ಯ ಸಂಭ್ರಮ'ದಲ್ಲಿ ಪರಸ್ಪರ ಕೈಕುಲುಕುತ್ತಿರುವ ಚಿತ್ರ (ಪ್ರ.ವಾ. ಜ. 19) ಒಂದು ಹಿತವಾದ ಭಾವನೆ ಉಂಟುಮಾಡಿತು. ಇನ್ನೊಬ್ಬರ ಅನುಪಸ್ಥಿತಿಯಲ್ಲಿ ವೇದಿಕೆಯಲ್ಲೇ ವಾಗ್ಯುದ್ಧ ಮಾಡುವ ಮತ್ತು ಪತ್ರಿಕೆಯ ಮೂಲಕವೂ ಟೀಕೆ–ಟಿಪ್ಪಣಿಗಳ ಬಾಣಬಿಡುವ ಇವರು ಕನ್ನಡಕ್ಕಾಗಿ ಕೈಜೋಡಿಸಿದರೆ ಅದೆಂತಹ ಬಲ ಬಂದೀತು!

ಭಾರತೀಯ ತತ್ವಶಾಸ್ತ್ರವನ್ನು ಅರೆದು ಕುಡಿದಿರುವ [illegible] ಪಾಶ್ಚಾತ್ಯ [illegible] ಧರಿಸಿ, ಪರಂಪರೆಯನ್ನು [illegible] ದ್ದಾರೆ. ಆದರೆ ಪಾಶ್ಚಾತ್ಯ ಚಿಂತನೆಯನ್ನು [illegible] ಸಿಕೊಂಡಿರುವ ಅನಂತಮೂರ್ತಿ [illegible] ತೀಯ [illegible] ದ್ದಾರೆ. [illegible] ಜೋಡಿ ಅಲ್ಲವೆ?

—[illegible]

ಪೋಲಾಗುತ್ತಿರುವ ವಿ.ವಿ. ಹಣ

ಬೆಂಗಳೂರು ವಿಶ್ವವಿದ್ಯಾಲಯ ನಡೆಸುವ ಎಲ್ಲಾ ಸೆಮಿಸ್ಟರ್ ಪದ್ಧತಿಯ ಪರೀಕ್ಷೆಗಳಲ್ಲಿ ಕೊಡುವ ಉತ್ತರ ಪತ್ರಿಕೆಗಳಲ್ಲಿ 36 ರಿಂದ 38 ಪುಟಗಳಿರುತ್ತವೆ. ಎಲ್ಲಾ ವಿದ್ಯಾರ್ಥಿಗಳು ಉತ್ತರಿಸುವುದು 18 ರಿಂದ 20 ಪುಟಗಳು ಮಾತ್ರ. ವಿಜ್ಞಾನ, ಕಲೆ, ವಾಣಿಜ್ಯ ವಿಷಯ ಯಾವುದಿದ್ದರೂ ಸರಿ ಸಂಪೂರ್ಣ ಉತ್ತರ ಪತ್ರಿಕೆಯ ಪುಟಗಳನ್ನು ಬಳಸುವುದು ಅತಿ ವಿರಳ. ಸಾವಿರಕ್ಕೆ ಒಬ್ಬ ವಿದ್ಯಾರ್ಥಿ ಮಾತ್ರ ಅಪರೂಪವಾಗಿ [illegible] ಇದರಿಂದ [illegible] 10 ರಿಂದ 12 ಪುಟಗಳು [illegible] ಹೊರೆಯನ್ನು [illegible] ಅಧಿಕಾರಿಗಳು ಇದರ ಬಗೆ ಗಮನಹರಿಸಿ [illegible] ಹಣವನ್ನು ಉಳಿಸಬಹುದಲ್ಲವೆ?

—[illegible], ಬೆಂಗಳೂರು

ಸಂಗತ

ಆಮ್ ಆದ್ಮಿ ಪಕ್ಷ ಸಜ್ಜನಶಕ್ತಿಯಾಗಿ ಹೊರಹೊಮ್ಮಲಿ

ಗಾಂಧೀಜಿಯವರ ಲೋಕಸೇವಕ ಸಂಘದ ವಿಚಾರವನ್ನು ಆಮ್ ಆದ್ಮಿ ಪಕ್ಷ ಕೈಗೆತ್ತಿಕೊಂಡು ತನ್ನನ್ನು ಬದಲಾಯಿಸಿಕೊಳ್ಳುತ್ತಾ ಹೋದರೆ ಅದೊಂದು ಅದ್ಭುತ ಸಂಗತಿಯಾಗುತ್ತದೆ. ಅಧಿಕಾರಶಕ್ತಿಯ ಬದಲಾಗಿ ಲೋಕಶಕ್ತಿಯ ನಿರ್ಮಾಣವಾಗುತ್ತದೆ ಮತ್ತು ರಾಜನೀತಿಯ ಆಧ್ಯಾತ್ಮೀಕರಣದ ಅಧ್ಯಾಯ ಪ್ರಾರಂಭವಾಗುತ್ತದೆ

ಆಮ್ ಆದ್ಮಿ ಪಕ್ಷ ಒಂದು ರಾಜಕೀಯ ಪಕ್ಷವಾಗಿ ತನ್ನ ಅಸ್ತಿತ್ವವನ್ನು ಸೀಮಿತಗೊಳಿಸಿಕೊಳ್ಳದೆ ವ್ಯವಸ್ಥೆಯ ಮೇಲೆ ದೇಶದ ಜನರ [illegible] ರೂಪುಗೊಳ್ಳುವುದು [illegible] ಕಾಲಧರ್ಮಕ್ಕೆ ಅಗತ್ಯವೆನಿಸುತ್ತದೆ. ಯಾವುದೇ ಪ್ರಕಾರದ ರಾಜ್ಯವ್ಯವಸ್ಥೆಯಲ್ಲಿ ಜನತೆಯನ್ನು ನಿಯಂತ್ರಣದಲ್ಲಿ ಇಡುವುದು ಒಂದು ರಾಜ್ಯಶಕ್ತಿ (State Power), ಇನ್ನೊಂದು ದಂಡಶಕ್ತಿ (Military Power). ಈ ಎರಡು ಶಕ್ತಿಗಳನ್ನು ನಿಯಂತ್ರಿಸುವ ಶಕ್ತಿ ಬೇರೊಂದಿಲ್ಲದಿದ್ದರೆ ಆ ಎರಡು ಶಕ್ತಿಗಳು ನಿರಂಕುಶವಾಗಿ ವರ್ತಿಸುತ್ತವೆ. ಸಮಾಜ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತವೆ.

ಸಮಾಜದಲ್ಲಿ ಯಾವಾಗಲೂ ಬಂಡಾಯದ ವಾತಾವರಣವಿರುತ್ತದೆ. ಇಂಥ ಸಮಾಜ ಆರೋಗ್ಯಕರವಾಗಿ ಪರಿಸ್ಥಿತಿ ತಪ್ಪಬೇಕಾದರೆ ಸಜ್ಜನಶಕ್ತಿ ಲೋಕದ [illegible] ರೂಪಾಂತರಗೊಂಡು ಲೋಕಶಕ್ತಿಯಾಗಿ (Peoples' Power) ಹೊರಹೊಮ್ಮಬೇಕು. ಅದು ಸದಾ ಕಾಲವೂ ಸಕ್ರಿಯವಾಗಿರಬೇಕು. ಇಂಥ ಲೋಕಶಕ್ತಿಯ [illegible] ಪ್ರತಿನಿಧಿಯಾಗಿ [illegible] ಕೆಲಸವನ್ನು ಆಮ್ ಆದ್ಮಿ ಪಕ್ಷ ಈಗ ಮಾಡಿದೆ. 15 ವರ್ಷಗಳಿಂದ ದೆಹಲಿಯಲ್ಲಿ ಬೇರುಬಿಟ್ಟಿದ್ದ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದ ಗದ್ದುಗೆಯಿಂದ ಇಳಿಸಿದ್ದು ಮತ್ತು ಬಿಜೆಪಿಯಂಥ ಬಲಿಷ್ಠ ಪಕ್ಷವನ್ನು ಹಿಮ್ಮೆಟ್ಟಿಸಿದ್ದು ಸಾಮಾನ್ಯ ಸಂಗತಿಯಲ್ಲ.

[illegible] ಸಮಾಧಾನಗೊಳ್ಳದೆ ಇನ್ನು ಮುಂದೆ ಮಾಡಬೇಕಿರುವ ಮೌಲ್ಯಾಧಾರಿತ ಹೊಸ ಸಮಾಜದ ನಿರ್ಮಾಣಕ್ಕೆ ತೊಡಗಿಕೊಳ್ಳುವ ಕೆಲಸ ಮಾಡಬೇಕಿದೆ. ಹೊಸ ಸಮಾಜದಂಥ ನಿರ್ಮಾಣದ ಕೆಲಸ ಯಾವತ್ತಿಗೂ ರಾಜಕೀಯ ಪಕ್ಷದ ಮೂಲಕ ಸಾಧ್ಯವಾಗುವುದಿಲ್ಲ.

ಆದ್ದರಿಂದ ಆಮ್ ಆದ್ಮಿ ಪಕ್ಷ, ಲೋಕಶಕ್ತಿಯನ್ನು ನಿರ್ಮಾಣ ಮಾಡುವ ಕೆಲಸದಲ್ಲಿ ತೊಡಗಬೇಕು. ಲೋಕಶಕ್ತಿ ನಿರ್ಮಾಣದ ಕೆಲಸ ರಾಜಕೀಯ ಕ್ರಿಯೆಯಲ್ಲ. ಅದೊಂದು ಪರಿಶುದ್ಧವಾದ ರಚನಾತ್ಮಕ ಕೆಲಸ. ಆಮ್ ಆದ್ಮಿ ಪಕ್ಷಕ್ಕೆ ಹೊಸದಾಗಿ ಸೇರಿಕೊಂಡಿರುವ ಮಾಹಿತಿ ತಂತ್ರಜ್ಞಾನದ ಮತ್ತು ಕಾರ್ಪೊರೇಟ್ ಕ್ಷೇತ್ರದ ಹೊಸ ಪೀಳಿಗೆಯ ಯುವಕರು ಇದುವರೆಗಿನ ಎಲ್ಲ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ ಬಗ್ಗೆ ಅಸಮಾಧಾನಗೊಂಡಿದ್ದಾರೆ. ಅವರು ತಮ್ಮ ಆಧುನಿಕ ಐಷಾರಾಮಿ ಜೀವನಶೈಲಿಯಿಂದಲೂ ಬೇಸತ್ತಿದ್ದಾರೆ. ಅವರ ಮನದಲ್ಲಿ ಯಾವುದೋ ಒಂದು ತೀವ್ರತರವಾದ ಬದಲಾವಣೆಗಾಗಿ ಅಸಂತೋಷ ಕುದಿಯುತ್ತಿದೆ. ಹೊಸ ಪೀಳಿಗೆಯ ಯುವಕರ ಮನದಲ್ಲಿರುವ ಈ ಕುದಿತದಿಂದ ಹೊರಬರಲು ಒಂದು ಸೂಕ್ತ ಮಾರ್ಗ ದೊರೆಯದೇ ಹೋದಲ್ಲಿ ದೇಶ ಇನ್ನೂ ಭಯಂಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬುದು ನಮ್ಮ ಜ್ಞಾಪಕದಲ್ಲಿರಬೇಕು.

ಈ ಮೊದಲು 1975ರಲ್ಲಿ ತುರ್ತು ಪರಿಸ್ಥಿತಿಯನ್ನು ಇಂದಿರಾ ಗಾಂಧಿ ಹೇರಿದಾಗ ಲೋಕನಾಯಕ ಜಯಪ್ರಕಾಶ ನಾರಾಯಣರು ಪ್ರಾರಂಭಿಸಿದ್ದ ನವ ನಿರ್ಮಾಣ ಮತ್ತು ಸಂಪೂರ್ಣ ಕ್ರಾಂತಿಯಂಥ ಆಂದೋಲನಗಳ [illegible] ಲೋಕಶಕ್ತಿಯ ನಿರ್ಮಾಣ ಮಾಡಿ ರಾಜ್ಯ ಮತ್ತು ದಂಡಗಳನ್ನು ನಿಯಂತ್ರಣದಲ್ಲಿರಿಸುವುದಾಗಿತ್ತು. ಈಗ ಅಂಥದೇ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯಶಕ್ತಿ ಬಹು ಕೇಂದ್ರಿತವಾಗಿದೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಪ್ರಮುಖ ರಾಜಕೀಯ ಪಕ್ಷಗಳು ಧನವಂತರಪರವಾಗುತ್ತಿವೆ. ಅಭಿವೃದ್ಧಿ ನೀತಿ ಪರಿಸರ ವಿನಾಶ ಮಾಡುತ್ತಿದೆ. ಶಿಕ್ಷಣ ನೀತಿ ಗೊಂದಲಮಯವಾಗಿದೆ. ಕೃಷಿ ಉದಾಸೀನಕ್ಕೆ ಒಳಗಾಗುತ್ತಿದೆ. ಕೇಂದ್ರೀಕೃತ ಕೈಗಾರಿಕೆಗಳು ಪ್ರಾಕೃತಿಕ ಸಂಪನ್ಮೂಲಗಳನ್ನು ಕಬಳಿಸುತ್ತಿವೆ. ರಾಜಕೀಯ ಪಕ್ಷಗಳು ಜನತೆಯನ್ನು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿವೆ. ಚುನಾವಣೆಗಳು ಮತದಾರರಿಗೆ ಆಮಿಷಗಳನ್ನು ಒಡ್ಡುವ ಸಂದರ್ಭಗಳಾಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಎಲ್ಲ ಸದ್ವಿಚಾರಗಳನ್ನು ಮತ್ತು [illegible] ಸತ್ವಗಳನ್ನು ಸುಳ್ಳಾಗಿಸುತ್ತಿವೆ. ಮಹಿಳೆಯರು ಮತ್ತು ದಲಿತರ ಮೇಲೆ ದೌರ್ಜನ್ಯಗಳು [illegible] ಸತತವಾಗಿ ನಡೆಯುತ್ತಿವೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ರಾಜಕಾರಣ ಹೊಸರೀತಿಯಲ್ಲಿ ನಡೆಯಬೇಕೆಂದು ಗಾಂಧೀಜಿ ಬಯಸಿದ್ದರು. [illegible] ಲೋಕಸೇವಕ ಸಂಘವೆಂದು ಕಾಂಗ್ರೆಸ್ ಪಕ್ಷ ಪರಿವರ್ತನೆಗೊಂಡು ಅಹಿಂಸಾತ್ಮಕ [illegible] ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಅದನ್ನು ಪುನರ್ರಚಿಸಲು 1948ರಲ್ಲಿ ಗಾಂಧೀಜಿ ಸೂಚಿಸಿದ್ದರು. ಆದರೆ ಕಾಂಗ್ರೆಸ್ ಪಕ್ಷ ಗಾಂಧೀಜಿ ಹೇಳಿದಂತೆ ತನ್ನನ್ನು ಹೊಸ ಸ್ವರೂಪಕ್ಕೆ ಅನುಗುಣವಾಗಿ ಪರಿವರ್ತಿಸಿಕೊಳ್ಳದೆ ಪರಂಪರಾಗತ ರಾಜಕಾರಣದಲ್ಲಿ [illegible] ಅವ್ಯವಸ್ಥೆಯ [illegible] ಸೇರುತ್ತಿದೆ.

ಈಗ ಆರು ದಶಕಗಳ ನಂತರ ಅದು ಆಮ್ ಆದ್ಮಿ ಪಕ್ಷದ [illegible] ರೂಪ ತಳೆಯುತ್ತಿದೆ ಎಂದು ಕೊಳ್ಳುತ್ತಿದೆ. ಗಾಂಧೀಜಿಯವರ ಲೋಕಸೇವಕ ಸಂಘದ ವಿಚಾರವನ್ನು ಆಮ್ ಆದ್ಮಿ ಪಕ್ಷ ಕೈಗೆತ್ತಿಕೊಂಡು ತನ್ನನ್ನು ಬದಲಾಯಿಸಿಕೊಳ್ಳುತ್ತಾ ಹೋದರೆ ಅದೊಂದು ಅದ್ಭುತ ಸಂಗತಿಯಾಗುತ್ತದೆ. ಅಧಿಕಾರಶಕ್ತಿಯ ಬದಲಾಗಿ ಲೋಕಶಕ್ತಿಯ ನಿರ್ಮಾಣವಾಗುತ್ತದೆ ಮತ್ತು ರಾಜನೀತಿಯ ಆಧ್ಯಾತ್ಮೀಕರಣದ ಅಧ್ಯಾಯ ಪ್ರಾರಂಭವಾಗುತ್ತದೆ. 2014ರ ಮೇ ತಿಂಗಳಲ್ಲಿ ನಡೆಯುವ ಚುನಾವಣೆಯನ್ನು ಎಲ್ಲರೂ ಒಂದು ಮಹಾಸಮರವೆಂದು ಭಾವಿಸುತ್ತಿದ್ದಾರೆ. ಕುರುಕ್ಷೇತ್ರದಂಥ ಯುದ್ಧಕ್ಕೂ ಅದನ್ನು ಹೋಲಿಸುತ್ತಿದ್ದಾರೆ. ಈ ಮಹಾಸಮರ ಭಾರತೀಯರ ರಾಜಕೀಯ ಪ್ರಬುದ್ಧತೆಯ ಅಗ್ನಿಪರೀಕ್ಷೆಯೂ ಹೌದು. ಇದು ರಾಜಕೀಯ ಪಕ್ಷಗಳ ಸಿಂಧುತ್ವವನ್ನು ಒರೆಗಲ್ಲಿಗೆ ಹಚ್ಚಲಿದೆ.

2014ರ ಚುನಾವಣೆ ಎಂದಿನಂತೆ ಬಹುಮತದ ಆಧಾರದಿಂದ ಜನರ ಪರವಾಗಿ ಹೊಣೆಗಾರಿಕೆ ವಹಿಸಿಕೊಳ್ಳುವ ಅಧಿಕಾರಾರೂಢ ಪಕ್ಷ ಮತ್ತು ವಿರೋಧ ಪಕ್ಷ ಎಂದು ಈ ಮಹಾ ಚುನಾವಣೆಯಿಂದ ತೋರಬರುವುದಾದರೆ ಯಾವ ಸಾಮಾಜಿಕ ಕ್ರಾಂತಿಯೂ ಸಾಧ್ಯವಾಗುವುದಿಲ್ಲ. ಆಮ್ ಆದ್ಮಿ ಪಕ್ಷದಂಥ ಸಂಘಟನೆಗಳು ಇಟ್ಟುಕೊಂಡಿರುವ ಯಾವ ಧ್ಯೇಯಗಳೂ ಸಾಧಿತವಾಗುವುದಿಲ್ಲ.

ಆದ್ದರಿಂದ ಬದಲಾವಣೆ ತರುವ ಕೆಲಸ ಹೊಸ ರೀತಿಯಲ್ಲಿ ನಡೆಯಬೇಕು. ಅಧಿಕಾರ ನಡೆಸುವ ಪಕ್ಷ ಮತ್ತು ವಿರೋಧ ಪಕ್ಷ ಎಂಬ ಈ ಎರಡು ತೆರನಾದ ಪಕ್ಷಗಳ ಹೊರತಾಗಿ ಮೂರನೆಯ ನಿಷ್ಪಕ್ಷಪಾತ ಸಮೂಹ ಒಂದಿರಬೇಕು. ಆ ಸಮೂಹ ಅಧಿಕಾರದಲ್ಲಿರುವ ಪಕ್ಷದ್ದೂ ಆಗಿರುವುದಿಲ್ಲ, ವಿರೋಧ ಪಕ್ಷದ್ದೂ ಆಗಿರುವುದಿಲ್ಲ. ವಿನೋಬಾ ಹೇಳುವಂತೆ ಅದೇ ಒಂದು ತಟಸ್ಥ ಸಮೂಹವಾಗಿರುವುದು.

ಲೋಕಹಿತಸಾಧನೆಯೇ ಈ ಸಮೂಹದ ವೈಶಿಷ್ಟ್ಯ. ಈ ಸಮೂಹ ದೊಡ್ಡದಾದಷ್ಟೂ ಬಲಶಾಲಿಯಾದಷ್ಟೂ ಆಡಳಿತ ಮತ್ತು ಪ್ರಜಾತಂತ್ರ ಪರಿಶುದ್ಧವಾಗಿರುತ್ತವೆ. ಇಂಥ ನಿಷ್ಪಕ್ಷಪಾತ ಸಮೂಹವಾಗುವ ಪ್ರಯತ್ನವನ್ನು ಆಮ್ ಆದ್ಮಿ ಪಕ್ಷ ಮುಂದಿನ ಚುನಾವಣೆ ವೇಳೆಗೆ ಮಾಡಿಕೊಂಡಲ್ಲಿ ಅದು ಮತ್ತು ಅದರ ಪರವಾಗಿ ನಿಂತಿರುವ ಸಹಾನುಭೂತಿಯುಳ್ಳವರು ಬಯಸಿರುವ ಬದಲಾವಣೆಗಳನ್ನು ತರುವ ಸಾಧ್ಯತೆ ಇದೆ. ಇಲ್ಲವಾದರೆ ಇಲ್ಲ. ಪರಂಪರಾಗತ ರಾಜಕೀಯ ಬಿರುಗಾಳಿಯಲ್ಲಿ ಆಮ್ ಆದ್ಮಿ ಪಕ್ಷ ತರಗೆಲೆಯಂತೆ ಹಾರಿಹೋಗುವುದು.

ಆಮ್ ಆದ್ಮಿ ಪಕ್ಷಕ್ಕೆ ಇಂಥ ಒಂದು ದುರಂತ ಸಂಭವಿಸದಂತೆ ಮಾಡಲು ಮತ್ತು ಆಮ್ ಆದ್ಮಿ ಅಂದರೆ ಜನಸಾಮಾನ್ಯರ ಹಿತಸಾಧಿಸುವ ಸಂಘಟನೆಯಾಗಿ ಪರಿವರ್ತನೆಗೊಳ್ಳಲು ಕೇಜ್ರಿವಾಲ್ ಇಟ್ಟುಕೊಂಡಿರುವ ಆದರ್ಶಗಳು ಸ್ಥಿರವಾಗಿ ನಿಲ್ಲಬೇಕು.

ವಿನೋಬಾಜಿ ಹೇಳುವಂತೆ ವಿಜ್ಞಾನ ನಮ್ಮನ್ನು ಪ್ರಪಂಚವಾದ ಜಗತ್ತಿನ ನಾಗರಿಕರನ್ನಾಗಿ ಮಾಡಿದೆ. ಇಡೀ ವಿಶ್ವ ಸಮೀಪಕ್ಕೆ ಬಂದಿದೆ. ಆದುದರಿಂದ ವ್ಯಾಪಕ ವಿಶಾಲ ರಾಜನೀತಿಯೇ ಲೋಕನೀತಿ. ವಿಶ್ವ ಮಾನವರನ್ನಾಗಿ ಮಾಡುವಂಥ ರಾಜನೀತಿಗೆ ರಾಜನೀತಿ ಶಬ್ದ ಸರಿಹೋಗದು. ಇದನ್ನು ಲೋಕನೀತಿ ಎನ್ನಬೇಕು.

ಈ ಲೋಕನೀತಿಯು ಲೋಕಶಕ್ತಿಯಾಗಿ ಪರಿಣಮಿಸುವುದು ಐತಿಹಾಸಿಕವಾಗಿ ಮಹತ್ತರವಾಗಬಹುದಾದ ಇಂಥ ಲೋಕಶಕ್ತಿ ಅಥವಾ ಸಜ್ಜನಶಕ್ತಿಯ ನಿರ್ಮಾಣದ ಕೆಲಸವನ್ನು ಸದ್ಯದ ಆಮ್ ಆದ್ಮಿ ಪಕ್ಷ ಮಾಡಲು ಮುಂದಾಗಬೇಕು. ಇದೇ ಒಂದು ದೊಡ್ಡ ರಾಜಕಾರಣ.

ಸುರೇಂದ್ರ ಕೌಲಗಿ, ಮೇಲುಕೋಟೆ

ಸುಭಾಷಿತ

ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು [illegible]

-ಕೆ ಶಿವರಾಮ ಕಾರಂತ

ಪ್ರಜಾವಾಣಿ

ಸಂಸದರ ನಿಧಿ ಸದ್ಬಳಕೆಯಾಗಲಿ

ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ (ಎಂಪಿ ಲ್ಯಾಡ್) ನಿಧಿ ಬಳಕೆಯಲ್ಲಿ ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳ ಸಂಸದರು ಹಿಂದೆ ಬಿದ್ದಿದ್ದಾರೆ. ಪ್ರತಿ ವರ್ಷ ಹಣ ಬಳಕೆಯಾಗದೆ ಉಳಿಯುತ್ತಿದ್ದರೂ ಇದನ್ನು ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸದೆ ಇರುವುದು ವಿಪರ್ಯಾಸ. ತಮ್ಮ ಕ್ಷೇತ್ರದ ಸಣ್ಣಪುಟ್ಟ ಬೇಡಿಕೆಗಳನ್ನು ಸಂಸದರು ಪೂರೈಸಿಕೊಳ್ಳಲಿ ಎನ್ನುವ ಉದ್ದೇಶದಿಂದ ತೊಂಬತ್ತರ ದಶಕದಲ್ಲಿ ಆಗಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಈ ಯೋಜನೆ ಆರಂಭಿಸಿದರು. ಈಗ ಈ ನಿಧಿಯ ಮೊತ್ತ ಕಳೆದ ಮೂರು ವರ್ಷದಿಂದ ವರ್ಷಕ್ಕೆ ಐದು ಕೋಟಿ ರೂಪಾಯಿ ಆಗಿದೆ. ಇದು ಕಡಿಮೆ ಮೊತ್ತವೇನಲ್ಲ. ಆದರೆ ನಮ್ಮ ಜನಪ್ರತಿನಿಧಿಗಳಿಗೆ ಲಭ್ಯವಿರುವ ಹಣವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಕಾಳಜಿ ಇಲ್ಲ. ಸಕಾಲಕ್ಕೆ ಹಣ ಬಳಕೆ ಆಗದಿದ್ದರೆ ಅದು ವ್ಯರ್ಥ. ಸಂಸದರ ನಿಧಿ ಸರಿಯಾಗಿ ಬಳಕೆ ಮಾಡದವರ ಸಾಲಿನಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮೇನಕಾ ಗಾಂಧಿ, ಮುರಳಿಮನೋಹರ ಜೋಷಿ, ಅಜಿತ್ ಸಿಂಗ್ ಸೇರಿದಂತೆ ದೊಡ್ಡವರು, ಸಣ್ಣವರು ಎಲ್ಲರೂ ಇದ್ದಾರೆ. ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಸೇರಿದರೆ ನಿಧಿಗೆ ಪ್ರತಿವರ್ಷ ನಿಗದಿಯಾಗುವ ಹಣ ಸುಮಾರು ₹ 4000 ಕೋಟಿ. ಈ ನಿಧಿಯನ್ನು ಸರಿಯಾಗಿ ಬಳಸಿದರೆ ಕ್ಷೇತ್ರಗಳ ಮೂಲ ಸೌಕರ್ಯಗಳನ್ನು ಸ್ವಲ್ಪಮಟ್ಟಿಗಾದರೂ ಪೂರೈಸಲು ಸಾಧ್ಯವಿದೆ.

ಸಂಸದರ ನಿಧಿ ಬಳಕೆಯಲ್ಲಿ ಸಂಸದರ ಪಾತ್ರವಷ್ಟೇ ಇಲ್ಲ, ಜಿಲ್ಲಾಧಿಕಾರಿಗಳ ಹೊಣೆಯೂ ಇದೆ. ಸಂಸದರ ಶಿಫಾರಸುಗಳನ್ನು ಸರ್ಕಾರಕ್ಕೆ ಕಳುಹಿಸಿ ಮಂಜೂರಾತಿ ಪಡೆಯಬೇಕು. ಕಾಲಕಾಲಕ್ಕೆ ಹಣ ಬಿಡುಗಡೆ ಆಗುವಂತೆ ನೋಡಿಕೊಳ್ಳಬೇಕು. ಜಿಲ್ಲಾ ಪಂಚಾಯತ್, ಎಂಜಿನಿಯರ್ ವಿಭಾಗ ಕಾಮಗಾರಿಗಳ ಪ್ರಗತಿ ಪರಿಶೀಲಿಸಿ ವರದಿ ಸಲ್ಲಿಸಬೇಕು. ಬಿಡುಗಡೆಯಾದ ಹಣ ಬಳಸಿದ ಪ್ರಮಾಣ ಪತ್ರ ಸಲ್ಲಿಸಬೇಕು. ಪ್ರಮಾಣ ಪತ್ರ ಸಲ್ಲಿಸದೆ ಕೆಲಸ ಅರ್ಧಕ್ಕೆ ನಿಂತ ಉದಾಹರಣೆಗಳೂ ಬೇಕಾದಷ್ಟಿವೆ. 'ಅರ್ಧದಷ್ಟು ಸಂಸದರಿಗೆ ಈ ಯೋಜನೆ ಬೇಕಾಗಿಲ್ಲ. ಇದನ್ನು ಮುಂದುವರಿಸುವುದಕ್ಕಿಂತ ರದ್ದುಪಡಿಸುವುದೇ ಲೇಸು' ಎಂದು ರಾಹುಲ್ ಗಾಂಧಿ ಕಳೆದ ವಾರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಅವರು ಕೊಟ್ಟ ಕಾರಣ ₹ 5 ಕೋಟಿ ಸಾಕಾಗುವುದಿಲ್ಲ ಎನ್ನುವುದು. ಪ್ರತಿ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಎಂಟು ವಿಧಾನಸಭಾ ಕ್ಷೇತ್ರಗಳು ಸೇರುತ್ತವೆ. ₹ 5 ಕೋಟಿ ಹಂಚಿಕೆ ಮಾಡಿದರೆ ಒಂದೊಂದು ಕ್ಷೇತ್ರಕ್ಕೆ ₹ 60 ಲಕ್ಷ ಕೂಡಾ ಸಿಗುವುದಿಲ್ಲ. ಎಲ್ಲ ಗ್ರಾಮಗಳ ಜನ ಮನವಿ ಹಿಡಿದುಕೊಂಡು ಬರುತ್ತಾರೆ. ನಾವು ಯಾರ ಅರ್ಜಿ ಶಿಫಾರಸು ಮಾಡುವುದು, ಯಾರನ್ನು ಬಿಡುವುದು ಎನ್ನುವುದೇ ತಲೆನೋವು. ಹೀಗಾಗಿ ನಿಧಿ [illegible] ರದ್ದು ಮಾಡುವುದೇ ಮೇಲು ಎನ್ನುವುದು ರಾಜ್ಯದ ಬಹಳಷ್ಟು ಸಂಸದರ ನಿಲುವು. ಆದರೆ ಯೋಜನೆ ಎಲ್ಲಿ ಎಡವುತ್ತಿದೆ ಎಂಬುದನ್ನು ಪತ್ತೆ ಹಚ್ಚಿ ಪರಿಣಾಮಕಾರಿಯಾಗಿಸುವ ಅಗತ್ಯವಿದೆ. ಪ್ರತಿ ವರ್ಷ ಕಾಲಮಿತಿಯಲ್ಲಿ ಹಣ ಬಳಕೆ ಮಾಡಬೇಕಾದುದನ್ನು ಸಂಸದರಿಗೆ ಕಡ್ಡಾಯ ಮಾಡಬೇಕಾದ ಅಗತ್ಯವಿದೆ.

ಕಲಿಕಾ ಸಾಮರ್ಥ್ಯ ಕುಸಿತ ಆತಂಕಕಾರಿ

ರಾಜ್ಯದ ಗ್ರಾಮೀಣ ಪ್ರದೇಶದ ಶಾಲಾ ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ಕುಸಿಯುತ್ತಿರುವುದು ಆತಂಕಕಾರಿ ಬೆಳವಣಿಗೆ. ಶಿಕ್ಷಣದ ಸ್ಥಿತಿಗತಿ ಕುರಿತು 'ಪ್ರಥಮ್' ಎಂಬ ಸ್ವಯಂ ಸೇವಾ ಸಂಸ್ಥೆ ನಡೆಸಿದ ಸಮೀಕ್ಷೆಯಿಂದ ಈ ಅಂಶ ಬೆಳಕಿಗೆ ಬಂದಿದೆ. ನಗರ ಪ್ರದೇಶದ ಮಕ್ಕಳು ವಿಷಯ ಗ್ರಹಿಕೆ ಮತ್ತು ಅಂಕ ಗಳಿಕೆಯಲ್ಲಿ ಹೊಸ ಎತ್ತರಗಳಿಗೆ ಜಿಗಿಯುತ್ತಿದ್ದಾರೆ. ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಸ್ಪರ್ಧೆ ಹಿಂದೆಂದೂ ಇಲ್ಲದಷ್ಟು ತುರುಸಾಗಿದೆ. ಇಂತಹ ಹೊತ್ತಿನಲ್ಲಿ ಹಳ್ಳಿಗಾಡಿನ ಮಕ್ಕಳು ಕಲಿಕೆಯಲ್ಲಿ ಮತ್ತಷ್ಟು ಹಿಂದೆ ಸರಿದಿರುವುದು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಣ ಅಂತರವನ್ನು ಇನ್ನಷ್ಟು ಹಿಗ್ಗಿಸಿದೆ ಎಂದೇ ಪರಿಗಣಿಸಬೇಕಾಗುತ್ತದೆ. [illegible] ಶಿಕ್ಷಣ ಒದಗಿಸಬೇಕೆಂಬ ಸಂವಿಧಾನದ ಆಶಯಕ್ಕೇ ಇದರಿಂದ [illegible] ಉಂಟಾಗಲಿದೆ. ಗ್ರಾಮೀಣ ಪ್ರದೇಶದ ಎಂಟನೇ ತರಗತಿಯ ಶೇ 82.7 ರಷ್ಟು ವಿದ್ಯಾರ್ಥಿಗಳಿಗೆ ಒಂದನೇ ತರಗತಿಯ ಕನ್ನಡ ಪಾಠಗಳನ್ನೇ ಓದುವ ಕೌಶಲ ಇಲ್ಲ. ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಕೂಡುವ, ಕಳೆಯುವ ಸರಳ ಲೆಕ್ಕಗಳೂ ಬರುವುದಿಲ್ಲ ಎಂದು ವರದಿ ಹೇಳಿದೆ. ಇದು ತಲೆತಗ್ಗಿಸಬೇಕಾದ ವಿಚಾರ. ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆ ಮಕ್ಕಳ ಕಲಿಕಾ ಸಾಮರ್ಥ್ಯ ಮತ್ತೂ ಕಳಪೆ ಆಗಿದೆ. ಕಲಿಕಾ ಮಟ್ಟ 2009ರಿಂದ ಕುಸಿಯುತ್ತಲೇ ಸಾಗಿರುವುದು ಆತಂಕದ ವಿಷಯ.

ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮತ್ತು ಮಕ್ಕಳು ಶಾಲೆಗಳಿಂದ ಹೊರಗುಳಿಯದಂತೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿವೆ. ಶಿಕ್ಷಣ ಹಕ್ಕು ಕಾಯ್ದೆಯೂ ಜಾರಿಗೆ ಬಂದಿದೆ. ಸರ್ವ ಶಿಕ್ಷಣ ಅಭಿಯಾನ, ಉಚಿತ ಪಠ್ಯ ಪುಸ್ತಕ, ಸಮವಸ್ತ್ರ ಮತ್ತು ಪಾಠೋಪಕರಣಗಳ ವಿತರಣೆ, ಮಧ್ಯಾಹ್ನದ ಬಿಸಿಯೂಟ ಮುಂತಾದ ಕಾರ್ಯಕ್ರಮಗಳು ಅನುಷ್ಠಾನದಲ್ಲಿ [illegible] ಉದ್ದೇಶ ಮಾತ್ರ ಈಡೇರಿಲ್ಲ. ಈ ಕುರಿತು ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕು. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಅನೇಕ ಕಡೆ ಕಟ್ಟಡಗಳಿಲ್ಲ. ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಇನ್ನೂ ಸಾಧ್ಯವಾಗಿಲ್ಲ. ಅನೇಕ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವೂ ಸಮಾಧಾನಕರವಾಗಿಲ್ಲ. ಈ ಪಟ್ಟಿಯೊಂದಿಗೆ ಹಳ್ಳಿಗಳಲ್ಲಿ ಶಾಲೆ [illegible] ಸರಿಯಾಗಿ ನಡೆಯುತ್ತವೆ ಎನ್ನುವ ಬಗೆಗೆ ಯಾವುದೇ ಖಾತರಿ ಇಲ್ಲ. [illegible] ಶಿಕ್ಷಕರು ಸ್ಥಳೀಯರಾಗಿದ್ದುಕೊಂಡು ಪಾಠ ಹೇಳುವುದಕ್ಕಿಂತ ಅನ್ಯ ಚಟುವಟಿಕೆಗಳಲ್ಲಿಯೇ ಹೆಚ್ಚಾಗಿ ತೊಡಗಿರುತ್ತಾರೆ ಎನ್ನುವ ದೂರುಗಳಿವೆ. ಇಂತಹ ಹತ್ತಾರು ಅಂಶಗಳು ವಿದ್ಯಾರ್ಥಿಗಳ ಕಲಿಕೆಯ ಮೇಲೆ [illegible] ಪರಿಣಾಮ ಬೀರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಕಡಿಮೆ ಆಗಿರುವುದನ್ನು ಶಿಕ್ಷಣ ಇಲಾಖೆಯು ಗಂಭೀರವಾಗಿ ಪರಿಗಣಿಸಬೇಕು. ಪರಿಹಾರ ಹುಡುಕಬೇಕು. ಶಾಲೆಗಳಲ್ಲಿನ ಶೈಕ್ಷಣಿಕ ಸ್ಥಿತಿಗತಿ ಮತ್ತು ಗುಣಮಟ್ಟವನ್ನು ಇಲಾಖೆಯ ಉನ್ನತ ಅಧಿಕಾರಿಗಳು ಆಗಿಂದಾಗ್ಗೆ ಪರಿಶೀಲಿಸಬೇಕು. ಗುಣಮಟ್ಟ ಸುಧಾರಣೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು.

ಪ್ರಜಾವಾಣಿ 50 ವರ್ಷಗಳ ಹಿಂದೆ

ಮಂಗಳವಾರ, 28-1-1964

ಜನತಾ ಚೇನಕ್ಕೆ ಫ್ರಾನ್ಸಿನ ಅಧಿಕೃತ ಮನ್ನಣೆ

[illegible]

ಬಾರತಕ್ಕೆ ರಷ್ಯನ್ ನೆರವು

[illegible]

ಆರ್ಥಿಕ ನೆರವು ನೀಡುವುದಕ್ಕೆ ವಿವರಗಳನ್ನು ಸೋವಿಯತ್ ರಷ್ಯ ಈಗ ಸಿದ್ಧಪಡಿಸುತ್ತಿದೆಯೆಂದು ತಿಳಿದು ಬಂದಿದೆ.

ಭಾರತ ಗಡಿ ರಕ್ಷಣಾ ದಳದ ಮೇಲೆ ಪಾಕ್ ದಾಳಿ

ಶಿಲಾಂಗ್, ಜ. 27 - [illegible] ಪೂರ್ವ ಪಾಕಿಸ್ತಾನದ ರೈಫಲ್ ತಂಡಗಳು [illegible] ಹಠಾತ್ ದಾಳಿ ನಡೆಸಿ [illegible]

[illegible] ಅದರ ಹೇಡುಕೊಂಡು ಎಂದೂ [illegible]

-ರೀಚ್

ರಾಜಕೀಯವಾಗಿ ಸಮಾನರಾಗುವುದು ಎಂದಿಗೆ?

ಕಡೆಗೋಲು

ಸಿ.ಜಿ. ಮಂಜುಳಾ

65ನೇ ಗಣರಾಜ್ಯೋತ್ಸವವನ್ನು ಆಚರಿಸಿದ್ದೇವೆ. ಭಾರತದಲ್ಲಿ ಪ್ರಜಾತಂತ್ರ ವಿಸ್ತರಣೆಗೊಂಡಿದೆ, ಆಳವಾಗಿ ಬೇರು ಬಿಟ್ಟಿದೆ ಎಂಬುದನ್ನು ಧ್ವನಿಸಲು ಅನೇಕ ಸಂಗತಿಗಳಿವೆ. ಆದರೆ ಹಾಗೆಯೇ ಅನೇಕ ವೈರುಧ್ಯಗಳೂ ಇವೆ ಎಂಬುದನ್ನು ಮರೆಯಲಾಗದು.

ಗಣರಾಜ್ಯೋತ್ಸವದ ಮುನ್ನಾ ದಿನದ ಭಾಷಣದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಮುಂದಿನ ಲೋಕಸಭಾ ಚುನಾವಣೆಗಳ ನಂತರ ಸ್ಥಿರ ಸರ್ಕಾರ ರಚನೆಯಾಗಲೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಚುನಾವಣೆಗಳ ಸಂದರ್ಭದಲ್ಲಿ ಜನರಿಗೆ ಅನೇಕ ವಚನಗಳನ್ನು ನೀಡುತ್ತಾ ನಂತರ ವಚನಭ್ರಷ್ಟತೆ ಮೆರೆಯುವುದು ರಾಜಕೀಯ ಪ್ರಕ್ರಿಯೆಯ ಭಾಗವಾಗಿಬಿಟ್ಟಿದೆ. ಹುಸಿ ಭರವಸೆಗಳು ಭ್ರಮೆಗಳನ್ನು ಸೃಷ್ಟಿಸುತ್ತವೆ. ಅವು ಆಕ್ರೋಶವನ್ನು ಹುಟ್ಟುಹಾಕುತ್ತವೆ. ಆ ಆಕ್ರೋಶದ ಒಂದು ಗುರಿ ಅಧಿಕಾರದಲ್ಲಿರುವವರು ಎಂಬುದರ ಕುರಿತು ರಾಷ್ಟ್ರಪತಿಗಳು ಸರಿಯಾಗಿಯೇ ಎಚ್ಚರಿಸಿದ್ದಾರೆ.

ರೇಸ್ ಕುದುರೆಯ ವೇಗದಲ್ಲಿ ಭರವಸೆಗಳನ್ನು ಈಡೇರಿಸಿ, ಬಸವನ ಹುಳುವಿನ ಹೆಜ್ಜೆಯುತ್ತಿಲ್ಲ ಎಂಬುದನ್ನು ರಾಷ್ಟ್ರಪತಿ ಹೇಳಿದ್ದಾರೆ. ರಾಷ್ಟ್ರ ಮತ್ತೊಂದು ಸಾರ್ವತ್ರಿಕ ಚುನಾವಣೆಯ ಹೊಸ್ತಿಲಲ್ಲಿದೆ. ಆದರೆ ಭ್ರಷ್ಟಾಚಾರ, ಬೆಲೆ ಏರಿಕೆ, ಕೋಮುವಾದ, ಭಯೋತ್ಪಾದನೆ, ನಿರುದ್ಯೋಗಗಳಂತಹ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಭರವಸೆಗಳು ಈಡೇರಿಲ್ಲ. ಹಾಗೆಯೇ ಪ್ರಗತಿಗೆ ಅಡ್ಡಗಾಲಾಗಿರುವ ಅನೇಕ ವೈರುಧ್ಯಗಳ ಸಂಕೋಲೆಗಳಲ್ಲೂ ರಾಷ್ಟ್ರ ಸಿಲುಕಿದೆ. ಇವುಗಳಲ್ಲಿ ಮುಖ್ಯವಾದದ್ದು ನಮ್ಮ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುವ ಲಿಂಗತ್ವ ಪೂರ್ವಗ್ರಹಗಳು.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ರಾಷ್ಟ್ರೀಯವಾದಿ ನಾಯಕರು ಅಪೇಕ್ಷಿಸಿದ್ದರು ಹಾಗೂ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಮಹಿಳೆಯರೂ ಪಾಲ್ಗೊಂಡರೆಂಬುದು ಗೊತ್ತಿರುವ ಸಂಗತಿ. 'ಪುರುಷರ ಜತೆ ಜತೆಯಲ್ಲೇ ಮಹಿಳೆಯರು ಕೆಲಸ ಮಾಡದಿದ್ದರೆ ಭಾರತಕ್ಕೆ ವಿಮುಕ್ತಿ ಇಲ್ಲ. ವಿಮುಕ್ತಿ ಎಂಬುದನ್ನು ಒಂದಲ್ಲ ನಾನಾ ಅರ್ಥಗಳಲ್ಲಿ ಗ್ರಹಿಸಬೇಕು. ರಾಜಕೀಯ ವಿಮುಕ್ತಿಯಷ್ಟೇ ಅಲ್ಲ, ಆರ್ಥಿಕ ಉದ್ಧಾರ ಹಾಗೂ ಆತ್ಮೋದ್ಧಾರಕ್ಕೂ ಇದು ಬೇಕು.' ಎಂದು ಗಾಂಧಿ ಹೇಳಿದ್ದರು.

ಆದರೆ ಈ ಆಶಯ ಸ್ವತಂತ್ರ ಭಾರತದಲ್ಲಿ ಸಾಕಾರಗೊಳ್ಳದಿರುವುದನ್ನು ಕಾಣಬಹುದು. 543 ಸದಸ್ಯ ಬಲದ ಲೋಕಸಭೆಯಲ್ಲಿ ಮಹಿಳಾ ಎಂಪಿಗಳು ಸಾಮಾನ್ಯವಾಗಿ 50ರ ಸಂಖ್ಯೆ ದಾಟುವುದೇ ಕಷ್ಟ. 2009ರಲ್ಲಿ ಚುನಾವಣೆ ನಡೆದ 15ನೇ ಲೋಕಸಭೆಗೆ ಮಹಿಳೆಯರ ಸಂಖ್ಯೆ 60ರ ಸಮೀಪಕ್ಕೆ ಬಂದಿದ್ದೇ ಸಾಧನೆ ಎಂದು ಅಲ್ಪ ತೃಪ್ತಿ ಪಟ್ಟುಕೊಳ್ಳುವ ಸ್ಥಿತಿ ನಮ್ಮದಾಗಿದೆ. ಈಗ ರಾಷ್ಟ್ರ 16ನೇ ಲೋಕಸಭೆ ಚುನಾವಣೆಗೆ ಅಣಿಯಾಗುತ್ತಿದೆ. ರಾಜಕೀಯ ವಲಯದಲ್ಲಿ ಅಂತರ್ಗತವಾಗಿರುವ ಮಹಿಳೆ ವಿರುದ್ಧದ ಪೂರ್ವಗ್ರಹಗಳನ್ನು ತೋರೆಯುವ ಮಾತುಗಳನ್ನಾಡುತ್ತಿವೆ ರಾಜಕೀಯ ಪಕ್ಷಗಳು. ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಅವರಂತೂ ಈ ರಾಷ್ಟ್ರದಲ್ಲಿ ಮಹಿಳೆಯರು ಸಬಲೀಕರಣ ಸಾಧಿಸುವುದು ಸಾಧ್ಯವಾಗುವವರೆಗೆ ಪ್ರಗತಿ ಸಾಧ್ಯವಿಲ್ಲ ಎಂದು ಇತ್ತೀಚೆಗೆ ಎಐಸಿಸಿ ಅಧಿವೇಶನದಲ್ಲಿ ಹೇಳಿದ್ದಾರೆ. ಪಕ್ಷದ ಸಭೆಗಳಲ್ಲಿ ಸದಾ ಅರ್ಧದಷ್ಟು ಪ್ರಮಾಣದಲ್ಲಿ ಮಹಿಳೆಯರು ಹಾಗೂ ಮುಖ್ಯಮಂತ್ರಿಗಳಲ್ಲೂ ಅರ್ಧದಷ್ಟು ಮಂದಿ ಮಹಿಳೆಯರು ಇರುವಂತಹ ಕಾಲವನ್ನು ಕಾಣಲು ಬಯಸುವುದಾಗಿಯೂ ರಾಹುಲ್ ಹೇಳಿದ್ದಾರೆ.

ಪಕ್ಷದ ಲೋಕಸಭಾ ಚುನಾವಣಾ ಪ್ರಣಾಳಿಕೆಗೆ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲು ಭೋಪಾಲ್‌ನಲ್ಲಿ ವಿವಿಧ ಕ್ಷೇತ್ರಗಳ 250 ಮಹಿಳೆಯರ ಜೊತೆಗೂ ರಾಹುಲ್ ಸಭೆ ನಡೆಸಿದ್ದಾರೆ. ವಿಶ್ವದಲ್ಲಿ 'ಸೂಪರ್ ಪವರ್' ಆಗುವ ಬಗ್ಗೆ ನಾವು ಬಹಳ ಮಾತನಾಡುತ್ತೇವೆ. ಆದರೆ ಈ ದೇಶದ ಮಹಿಳೆಯರು ಭದ್ರತೆಯ ಭಾವನೆ ಅನುಭವಿಸುವವರೆಗೆ ನಮ್ಮ ರಾಷ್ಟ್ರ 'ಸೂಪರ್ ಪವರ್' ಆಗುವುದು ಸಾಧ್ಯವಿಲ್ಲ ಎನ್ನುತ್ತಾ ಅಜ್ಜಿ, ತಾಯಿ ಹಾಗೂ ಅಮೇಥಿಯ ಮಹಿಳೆಯರಿಂದ ತಾವು ಕಲಿತಿದ್ದು ಅಪಾರ ಎಂದು ಭಾವನಾತ್ಮಕ ಎಳೆ ಮೀಟಿದ್ದಾರೆ. ಬದಲಾಗುತ್ತಿರುವ ಭಾರತದಲ್ಲಿ ಯುವಜನರು, ಹಾಗೆಯೇ ಮಹಿಳಾ ಶಕ್ತಿಯತ್ತಲೂ ಚುನಾವಣಾ ಪ್ರಚಾರ ಕೇಂದ್ರೀಕರಿಸುವ ಪ್ರಯತ್ನ ಇಲ್ಲಿ ಎದ್ದು ಕಾಣಿಸುತ್ತದೆ.

'ಬೇಟಿ ಬಚಾವೊ, ಬೇಟಿ ಬಡಾವೊ' (ಹೆಣ್ಣು ಮಗು ಉಳಿಸಿ, ಹೆಣ್ಣುಮಗು ಬೆಳೆಸಿ) ಎಂದಿರುವ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯವರು ಮಹಿಳೆಯರು ಗೃಹಕೃತ್ಯಗಳಿಗೆ ಸೀಮಿತರಾಗದೆ ರಾಷ್ಟ್ರ ನಿರ್ಮಾಪಕರಾಗಬೇಕು ಎನ್ನುತ್ತಾ ಮಹಿಳೆಯರನ್ನು ಒಲಿಸಿಕೊಳ್ಳುವ ಯತ್ನ ಮಾಡುತ್ತಿದ್ದಾರೆ.

ಲಿಂಗತ್ವ ಎನ್ನುವುದು ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಲ್ಲಿ ಈಗಲೂ ಚುನಾವಣಾ ರಾಜಕಾರಣದ ಕಾರ್ಯಸೂಚಿಯ ಭಾಗವಾಗಿಲ್ಲ ಎಂಬುದನ್ನು ನೆನಪಿಡಬೇಕು. ಲಿಂಗ ತಾರತಮ್ಯದಿಂದಾಗುವ ಪರಿಣಾಮಗಳನ್ನು ನಿರ್ವಹಿಸಬೇಕಾದ ಅಗತ್ಯದಡಿ ಭಾರತದಲ್ಲಿ ಚುನಾವಣೆಗಳನ್ನು ಎದುರಿಸಲಾಗುವುದಿಲ್ಲ. ಮಹಿಳೆಯರಿಗೆ ಸಂಬಂಧಿಸಿದ ಚಳವಳಿಗಳು ಜಾತಿ, ವರ್ಗ ಅಥವಾ ಸಮುದಾಯಗಳ ದೊಡ್ಡ ಗುಂಪುಗಳೊಳಗೆ ಮಸುಕಾಗಿ ಹೋಗುತ್ತವೆ. ಪಿತೃಪ್ರಧಾನ ವ್ಯವಸ್ಥೆಯೊಳಗೆ ಅಂಚಿಗೆ ಒತ್ತರಿಸಲಾಗಿರುವ ಮಹಿಳೆಯರನ್ನು ಪ್ರತ್ಯೇಕ ಮತದಾರ ಗುಂಪಾಗಿ ಗುರುತಿಸುವುದೂ ಸಾಧ್ಯವಾಗಿಲ್ಲ. ಭಾರತದಲ್ಲಿ ಚುನಾವಣಾ ರಾಜಕಾರಣದಲ್ಲಿ ದಲಿತರು ಹಾಗೂ ಮುಸ್ಲಿಮರು ತೀವ್ರವಾಗಿ [illegible] ಇಂತಹ ಸಮುದಾಯಗಳ ಪುರುಷ [illegible] ಜೊತೆಗೆ ಈ ಗುಂಪಿನ ಮಹಿಳೆಯರನ್ನೂ ಮಿಳಿತಗೊಳಿಸಲಾಗುತ್ತದೆ. ಮುಸ್ಲಿಂ ಹಾಗೂ ದಲಿತ ಮತ ಬ್ಯಾಂಕ್‌ಗಳು ಭಾರತದ ರಾಜಕಾರಣದಲ್ಲಿ ಹಾಸುಹೊಕ್ಕಾಗಿವೆ. ಆದರೆ ಇಂತಹ ಮತ ಬ್ಯಾಂಕ್‌ಗಳಲ್ಲಿನ ಮಹಿಳಾ ಸದಸ್ಯರ ಜೊತೆಗೆ ಸಮುದಾಯ ಹಾಗೂ ರಾಜಕೀಯ ವರ್ಗಗಳಿಗೆ ಸಂಪರ್ಕ ಇಲ್ಲದಿರುವುದು ಗಮನಾರ್ಹ.

ವಿಶ್ವದಲ್ಲೇ ಅತಿ ಪ್ರಭಾವಿ ಮಹಿಳೆ ಸೋನಿಯಾ ಗಾಂಧಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ. ದೆಹಲಿಗೆ ಮೂರು ಬಾರಿ ಶೀಲಾ ದೀಕ್ಷಿತ್ ಮುಖ್ಯ ಮಂತ್ರಿಯಾಗಿದ್ದರು. ಈಗ ತಮಿಳುನಾಡಿನಲ್ಲಿ ಜೆ ಜಯಲಲಿತಾ, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಹಾಗೂ ರಾಜಸ್ತಾನದಲ್ಲಿ ವಸುಂಧರಾ ರಾಜೆ ಮುಖ್ಯ ಮಂತ್ರಿಗಳಾಗಿದ್ದಾರೆ. ವಿವಿಧ ರಾಜಕೀಯ ಪಕ್ಷಗಳ ನೇತಾರರಾಗಿ ಸುಷ್ಮಾ ಸ್ವರಾಜ್ (ಬಿಜೆಪಿ), ಮಾಯಾವತಿ (ಬಿಎಸ್‌ಪಿ) ಹಾಗೂ ಮೆಹಬೂಬಾ ಮುಫ್ತಿ (ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ) ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ. ಆದರೆ ಈ ಮಹಿಳೆಯರ ಪ್ರಾಬಲ್ಯ ಲೋಕಸಭೆಯಲ್ಲಿ ವ್ಯಕ್ತವಾಗುವುದಿಲ್ಲ.

ಕಳೆದ ಹತ್ತು ವರ್ಷಗಳಲ್ಲಿ ಒಟ್ಟು 62,847 ಅಭ್ಯರ್ಥಿಗಳಲ್ಲಿ ಕೇವಲ 4 148 ಮಹಿಳೆಯರು [illegible] ಶೇ 7ರಷ್ಟು ಮಂದಿ ಮಾತ್ರ ಮಹಿಳೆಯರು ಎಂಬುದನ್ನು ಸಮೀಕ್ಷೆ ಹೇಳುತ್ತದೆ. ಇವರಲ್ಲಿ 675 ಮಹಿಳೆಯರು ಗೆದ್ದು ಸಂಸತ್ ಸದಸ್ಯರು ಅಥವಾ ಶಾಸಕರಾದರು.

ಚುನಾವಣಾ ಆಯೋಗಕ್ಕೆ ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣಪತ್ರಗಳ ಆಧಾರದ ಮೇಲೆ ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ನಡೆಸಿದ [illegible] ವಿಶ್ಲೇಷಣೆ ಪ್ರಕಾರ, ಹೆಚ್ಚಿನ ಸಂಖ್ಯೆಯ ಮಹಿಳಾ ಅಭ್ಯರ್ಥಿಗಳು (981) ಪಕ್ಷೇತರರು. ನಂತರದ ಸ್ಥಾನ ಕಾಂಗ್ರೆಸ್ (551), ಆಮೇಲೆ ಭಾರತೀಯ ಜನತಾ ಪಕ್ಷ (460), ಬಹುಜನ ಸಮಾಜ ಪಕ್ಷ (249), ಸಮಾಜವಾದಿ ಪಕ್ಷ 148 ಹಾಗೂ ಸಿಪಿಎಂ 132 ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು.

ಕಣಕ್ಕಿಳಿಸಲಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಶ್ಲೇಷಿಸಿದಲ್ಲಿ ತೃಣಮೂಲ ಕಾಂಗ್ರೆಸ್ ಅತಿ ಹೆಚ್ಚಿನ ಶೇ 12ರಷ್ಟು ಪಕ್ಷದ ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡಿದೆ (904ರಲ್ಲಿ 110). ನಂತರದ ಸ್ಥಾನ ಸಿಪಿಎಂನದು. 1163 ಅಭ್ಯರ್ಥಿಗಳಲ್ಲಿ 132 ಮಹಿಳೆಯರಿಗೆ ಅಥವಾ ಶೇ 11ರಷ್ಟು ನೀಡಲಾಗಿದೆ. ಡಿಎಂಕೆ ಒಟ್ಟು 315 ಅಭ್ಯರ್ಥಿಗಳಲ್ಲಿ 30 ಮಹಿಳೆಯರಿಗೆ ಅಂದರೆ ಶೇ 10ರಷ್ಟು ಮಂದಿಗೆ ಅವಕಾಶ ನೀಡಿದೆ.

ಇಂತಹ ಪುರುಷಮಯ ರಾಜಕಾರಣದಲ್ಲಿ ಲಿಂಗ ಸಂವೇದನಾಶೀಲತೆ ಮೂಡಿಸಲು ರಾಜಕೀಯ ಪಕ್ಷಗಳ ಪರಿಗಣನೆಗಾಗಿ ಇದೇ ಮೊದಲ ಬಾರಿಗೆ ಜೆಂಡರ್ ಪ್ರಣಾಳಿಕೆಯನ್ನು ಮಹಿಳಾ ಸಂಘಟನೆಗಳು ಇತ್ತೀಚೆಗೆ ಬಿಡುಗಡೆ ಮಾಡಿವೆ. ರಾಜಕೀಯ ಪಕ್ಷಗಳೊಳಗೆ ಲಿಂಗ ಸಮಾನತೆ ಸೃಷ್ಟಿಸುವ ಕಾನೂನು ಚೌಕಟ್ಟುಗಳ ಅಭಿವೃದ್ಧಿಗಾಗಿ ಈ ಪ್ರಣಾಳಿಕೆಯಲ್ಲಿ ಆಗ್ರಹಪಡಿಸಲಾಗಿದೆ.

ಮಹಿಳಾ ಮೀಸಲು ಮಸೂದೆ ಭಾರತದ ರಾಜಕೀಯ ವಲಯವನ್ನು ಗಣನೀಯವಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ. [illegible] ರಾಜಕೀಯದಲ್ಲಿ ಮಹಿಳೆಯರು ತಮ್ಮ ದನಿ ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. [illegible] 2010ರ ಮಾರ್ಚ್ ತಿಂಗಳಲ್ಲಿ ಈ ಮಸೂದೆ ರಾಜ್ಯಸಭೆಯಲ್ಲಿ ಅಂಗೀಕಾರವಾಗಿದ್ದು [illegible] ಸಭೆಯ ಅನುಮೋದನೆಗೆ ಇನ್ನೂ ಕಾದು ಕೂತಿದೆ. ಕಳೆದ 17 ವರ್ಷಗಳಿಂದಲೂ ಈ ಮಸೂದೆಗೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಈ ನಿಟ್ಟಿನಲ್ಲಿ ಭಾರತೀಯ ಮಹಿಳೆ ಕುರಿತಂತೆ ಕಮಾಗಿರುವ ಹೊಣೆಗಾರಿಕೆಯನ್ನು [illegible] ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಲೋಕಸಭೆ ಚುನಾವಣೆ [illegible] ತಂತಮ್ಮ ರಾಜಕೀಯ ಪ್ರಣಾಳಿಕೆಗಳಲ್ಲಿ ಮಹಿಳೆ ವಿರುದ್ಧದ ತಾರತಮ್ಯಗಳ ಪರಿಹಾರಕ್ಕೆ ಬಲವಾದ ಬದ್ಧತೆಗಳನ್ನು ರಾಜಕೀಯ ಪಕ್ಷಗಳು ಪ್ರದರ್ಶಿಸಬೇಕು ಎಂದು ಈ ಪ್ರಣಾಳಿಕೆ ಆಗ್ರಹಪಡಿಸಿದೆ. ಇದು ನಮ್ಮ ರಾಜಕೀಯ ಪಕ್ಷಗಳಿಗೆ ಎಷ್ಟರ ಮಟ್ಟಿಗೆ ತಾಕಬಹುದು?

ಕರ್ನಾಟಕದಲ್ಲಿ 28 ಲೋಕಸಭೆ ಕ್ಷೇತ್ರಗಳಲ್ಲಿ ಎಷ್ಟು ಮಹಿಳೆಯರು ಕಣಕ್ಕಿಳಿಯಬಹುದು? 2009ರ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದು ಜೆ ಶಾಂತಾ (ಬಿಜೆಪಿ, ಬಳ್ಳಾರಿ) ಮಾತ್ರ.

ರಾಜ್ಯದಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಕುಸಿಯುತ್ತಾ ಸಾಗಿರುವುದು ಆತಂಕಕಾರಿ. 225 ಸದಸ್ಯ ಬಲದ ಪ್ರಸಕ್ತ ವಿಧಾನಸಭೆಯಲ್ಲಿರುವುದು ಕೇವಲ ಐವರು ಶಾಸಕಿಯರು. ಅಂದರೆ ಮಹಿಳಾ ಪ್ರಾತಿನಿಧ್ಯ ಕೇವಲ ಶೇ 2.2.

ಸಂವಿಧಾನದ 325 ಹಾಗೂ 326 ವಿಧಿಗಳು ಪುರುಷ, ಮಹಿಳೆಯರಿಗೆ ಸಮಾನ ರಾಜಕೀಯ ಪ್ರಾತಿನಿಧ್ಯ ನೀಡಿವೆ. ಆದರೆ ಮಹಿಳಾ ಶಕ್ತಿಯನ್ನು ರಾಜಕೀಯ ಪಕ್ಷಗಳು [illegible] ಬಂದಿವೆ. 31 ಸದಸ್ಯಬಲದ ಸಿದ್ದರಾಮಯ್ಯನವರ ಸಚಿವ ಸಂಪುಟದಲ್ಲಿ ಉಮಾಶ್ರೀ ಏಕೈಕ ಸಚಿವೆ. [illegible] ಪರ ಕಾಳಜಿಗಳು ಯಾವ ಮಟ್ಟದಲ್ಲಿವೆ ಎಂಬುದನ್ನು ಇವು ಚಿತ್ರಿಸುತ್ತವೆ.

ಜಾತಿ ಬಲ, ತೋಳ್ಬಲ, ಹಣ ಬಲವಿಲ್ಲದೆ ನವದೆಹಲಿಯಲ್ಲಿ ಅಧಿಕಾರಕ್ಕೆ ಬಂದ ಆಮ್ ಆದ್ಮಿ ಪಕ್ಷದ ಹೊಸ ರಾಜಕಾರಣದಲ್ಲೂ ಲಿಂಗತ್ವ [illegible] ಢಾಳಾಗಿ ಕಾಣಿಸುತ್ತಿದೆ. ದೆಹಲಿ ಚುನಾವಣೆ [illegible] ಹಾಕುತ್ತಲೇ ಇದ್ದರೆ ಮಹಿಳೆಯರ ಮೇಲಿನ [illegible] ಪೋಸ್ಟರ್‌ಗಳನ್ನು ಆಮ್ ಆದ್ಮಿ ಪಕ್ಷ ದೆಹಲಿಯ [illegible] ಅತ್ಯಾಚಾರ ವಿಚಾರವನ್ನು ಎಎಪಿ ಬಳಸಿ ಕೊಂಡಿತ್ತು. [illegible] ಳ್ಳುವ ಪ್ರಯತ್ನ ಆಗಿತ್ತು. [illegible] ವಾದವಾಗುತ್ತವೆ. [illegible]

ನಿಮ್ಮ ಅನಿಸಿಕೆ ತಿಳಿಸಿ

editpagefeedback@prajavani.co.in

ವಾಚಕರ ವಾಣಿ

ಕರೀಂಖಾನ್‌ಗೆ ಸ್ಮಾರಕ ಏಕೆ ಬೇಡ?

ಬೆಂಗಳೂರಿನ ಇಂದಿರಾನಗರದ 100 ಅಡಿ ರಸ್ತೆಗೆ ಜಾನಪದ ತಜ್ಞ, ಕರೀಂಖಾನ್ ಅವರ ಹೆಸರಿಡಲು ಬಿಬಿಎಂಪಿ ಇನ್ನೂ ಮೀನಮೇಷ ಎಣಿಸುತ್ತಿರುವುದು (ಪ್ರ.ವಾ., ಜ. 26) ನಮ್ಮ ಆಡಳಿತಗಾರರ ಇಚ್ಛಾಶಕ್ತಿಯ ಕೊರತೆಗೆ ಹಿಡಿದ ಕನ್ನಡಿಯಾಗಿದೆ.

ಸರತಿಯಂತೆ ನಮ್ಮನ್ನಾಳುತ್ತಿರುವ ರಾಷ್ಟ್ರೀಯ ಪಕ್ಷಗಳ ನಾಯಕರು, ಕೇವಲ ಪಕ್ಷದ ಹೈಕಮಾಂಡಿನ ನಿಷ್ಠರು ಮಾತ್ರ. ಅವರಿಗೆ ಕನ್ನಡ, ಕನ್ನಡಿಗ, ಕರ್ನಾಟಕ [illegible] ಕಡ್ಡಾಯವಲ್ಲದ ಕೊನೆಯ ಆಯ್ಕೆ. ಇದಕ್ಕೆ ಸಾಕ್ಷಿಯಾಗಿ ಇಲ್ಲಿ ನೆಹರೂ, ಇಂದಿರಾ, ರಾಜೀವ್, ವಾಜಪೇಯಿ, ಶ್ಯಾಮ್ ಪ್ರಸಾದ್ ಮುಖರ್ಜಿ, ದೀನದಯಾಳ್ ಉಪಾಧ್ಯಾಯ ಹೀಗೆ ಇತರರ ಸ್ಮಾರಕಗಳು ಸ್ಪರ್ಧೆಯೆಂಬಂತೆ ನಿಂತಿವೆ.

ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು, ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕರೀಂಖಾನರಂತಹ ಕನ್ನಡಿಗ ಸಾಧಕರು ಇವರಿಗೆ ಭಾರತೀಯರಂತೆ ಕಂಡುಬರದಿರುವುದು ವಿಪರ್ಯಾಸ. ಹೈಕಮಾಂಡ್‌ನ ಗುಲಾಮಗಿರಿಗೆ ಸಿಲುಕಿ ಕೇಂದ್ರದವರ ಅಡಿಯಾಳುಗಳಾಗಿ, ಆಡಿಸಿಕೊಳ್ಳುವ ಗೊಂಬೆಗಳಾಗಿ, ಪೊಳ್ಳು ರಾಷ್ಟ್ರೀಯತೆಯ ಸೋಗಿನಲ್ಲಿ ಮುಳುಗಿ ಹೋಗಿ, ತಮ್ಮತನ ಮತ್ತು ಬದ್ಧತೆಯನ್ನು ಮರೆತು ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ಸದಾಕಾಲ ನಿರ್ಲಕ್ಷಿಸುವ ನಮ್ಮ ನಾಯಕರಲ್ಲಿ, ದೇಶದ ಇತರ ರಾಜ್ಯಗಳಲ್ಲಿನ ರಾಜಕಾರಣಿಗಳಿಗಿರುವಂತೆ ಸ್ಥಳೀಯತೆಯ ಚಿಂತಾಸಕ್ತಿ ಬಗೆಗಿನ ಮೊದಲ ಒಲವನ್ನು ನಾವು ಎಂದಿಗೂ ನಿರೀಕ್ಷಿಸುವಂತಿಲ್ಲ.

—ಕಲ್ಯಾಣರಾಮನ್ ಚಂದ್ರಶೇಖರನ್, ಬೆಂಗಳೂರು

ಭಾಷಾಂತರ: ತಾತ್ಸಾರ

ಸಾಹಿತ್ಯ ಸಮ್ಮೇಳನಗಳಲ್ಲಿ, 'ಸಂಭ್ರಮ'ಗಳಲ್ಲಿ, ಇತರ ಸಾಹಿತ್ಯ ಸಮಾವೇಶಗಳಲ್ಲಿ ಭಾಷಾಂತರವನ್ನು ಕುರಿತ ಒಂದು ಗೋಷ್ಠಿಯೂ ಇರುವುದಿಲ್ಲ. ಅದರ ಬಗೆಗೆ ಒಂದು ಮಾತೂ ಕೇಳಿಬರುವುದಿಲ್ಲ ಎಂಬುದು ವಿಷಾದನೀಯ. ಭಾಷಾಂತರದ ಮಹತ್ವವನ್ನು ಇಲ್ಲಿ ವಿವರಿಸಬೇಕಿಲ್ಲ; ಒಂದು ಹೇಳಿಕೆ ಸಾಕು: 'ಭಾಷಾಂತರ ಎಂಥ ಉಪಕರಣವೆಂದರೆ, ಅದಿಲ್ಲದಿದ್ದ ಪಕ್ಷದಲ್ಲಿ ವಿಶ್ವ ಸಾಹಿತ್ಯದ ವಿಸ್ತಾರವಾದ ಪ್ರಾಂತಗಳು ನಮ್ಮ ಪಾಲಿಗೆ ನಷ್ಟವಾಗುತ್ತಿದ್ದುವು.'

ಹೈಟ್ ಎಂಬ ವಿದ್ವಾಂಸ ತನ್ನ 'classical Tradition' ಎಂಬ [illegible]ದಲ್ಲಿ ಬಹಳ ಹಿಂದೆಯೆ ಹೇಳಿದ: 'ಭಾಷಾಂತರವೊಂದು ಅಲಕ್ಷಿತ ಕಲೆ (neglected art)'. ಆ ಉಕ್ತಿ ಈ [illegible] ಸತ್ಯವಾಗಿ ಉಳಿಯಬೇಕೆ?

—ಸಿ.ಪಿ.ಕೆ., ಮೈಸೂರು

ಕನ್ನಡಕ್ಕಾಗಿ ಕೈಜೋಡಿಸಲಿ

ಎಸ್.ಎಲ್. ಭೈರಪ್ಪ ಹಾಗೂ ಯು.ಆರ್. ಅನಂತಮೂರ್ತಿ ಇಬ್ಬರೂ ಧಾರವಾಡದ 'ಸಾಹಿತ್ಯ ಸಂಭ್ರಮ'ದಲ್ಲಿ ಪರಸ್ಪರ ಕೈಕುಲುಕುತ್ತಿರುವ ಚಿತ್ರ (ಪ್ರ.ವಾ. ಜ. 19) ಒಂದು ಹಿತವಾದ ಭಾವನೆ ಉಂಟುಮಾಡಿತು. ಇನ್ನೊಬ್ಬರ ಅನುಪಸ್ಥಿತಿಯಲ್ಲಿ ವೇದಿಕೆಯಲ್ಲೇ ವಾಗ್ಯುದ್ಧ ಮಾಡುವ ಮತ್ತು ಪತ್ರಿಕೆಯ ಮೂಲಕವೂ ಟೀಕೆ–ಟಿಪ್ಪಣಿಗಳ ಬಾಣಬಿಡುವ ಇವರು ಕನ್ನಡಕ್ಕಾಗಿ ಕೈಜೋಡಿಸಿದರೆ ಅದೆಂತಹ ಬಲ ಬಂದೀತು!

ಭಾರತೀಯ ತತ್ವಶಾಸ್ತ್ರವನ್ನು ಅರೆದು ಕುಡಿದಿರುವ ಭೈರಪ್ಪ, ಪಾಶ್ಚಾತ್ಯ ಶೈಲಿಯಂತೆ ಪ್ಯಾಂಟ್ ಧರಿಸಿ, ಷರಟನ್ನು ಇನ್ ಮಾಡಿ ಬೆಲ್ಟ್ ಹಾಕಿದ್ದಾರೆ. ಅವರೆ ಪಾಶ್ಚಾತ್ಯ ಚಿಂತನೆಯನ್ನು [illegible] ಕೊಂಡಿರುವ ಅನಂತಮೂರ್ತಿ [illegible] ತೀರ ಉಡುಪಿನಲ್ಲಿದ್ದಾರೆ. [illegible] ಸೋಜಿಗ ಅಲ್ಲವೆ?

—[illegible]

ಪೋಲಾಗುತ್ತಿರುವ ವಿ.ವಿ. ಹಣ

ಬೆಂಗಳೂರು ವಿಶ್ವವಿದ್ಯಾಲಯ ನಡೆಸುವ ಎಲ್ಲಾ ಸೆಮಿಸ್ಟರ್ ಪದ್ಧತಿಯ ಪರೀಕ್ಷೆಗಳಲ್ಲಿ ಕೊಡುವ ಉತ್ತರ ಪತ್ರಿಕೆಗಳಲ್ಲಿ 36 ರಿಂದ 38 ಪುಟಗಳಿರುತ್ತವೆ. ಎಲ್ಲಾ ವಿದ್ಯಾರ್ಥಿಗಳು ಉತ್ತರಿಸುವುದು 18 ರಿಂದ 20 ಪುಟಗಳು ಮಾತ್ರ. ವಿಜ್ಞಾನ, ಕಲೆ, ವಾಣಿಜ್ಯ ವಿಷಯ ಯಾವುದಿದ್ದರೂ ಸರಿ! ಸಂಪೂರ್ಣ ಉತ್ತರ ಪತ್ರಿಕೆಯ ಪುಟಗಳನ್ನು ಬಳಸುವುದು ಅತಿ ವಿರಳ. ಸಾವಿರಕ್ಕೆ ಒಬ್ಬ ವಿದ್ಯಾರ್ಥಿ ಮಾತ್ರ ಆ[illegible] ರೂಪವಾಗಿ ಎಲ್ಲಾ ಪುಟಗಳನ್ನು ತುಂಬಿಸುವುದು. [illegible] 10 ರಿಂದ 12 [illegible] ಹೊರೆಯನ್ನು ಹೆಚ್ಚಿಸುತ್ತಿದೆ. [illegible] ಅಧಿಕಾರಿಗಳು [illegible] ಗುತ್ತಿರುವ ಸರ್ಕಾರಿ [illegible] ಉಳಿಸಬಹುದಲ್ಲವೇ?

—[illegible]

ಸಂಗತ

ಆಮ್ ಆದ್ಮಿ ಪಕ್ಷ ಸಜ್ಜನಶಕ್ತಿಯಾಗಿ ಹೊರಹೊಮ್ಮಲಿ

ಗಾಂಧೀಜಿಯವರ ಲೋಕಸೇವಕ ಸಂಘದ ವಿಚಾರವನ್ನು ಆಮ್ ಆದ್ಮಿ ಪಕ್ಷ ಕೈಗೆತ್ತಿಕೊಂಡು ತನ್ನನ್ನು ಬದಲಾಯಿಸಿಕೊಳ್ಳುತ್ತಾ ಹೋದರೆ ಅದೊಂದು ಅದ್ಭುತ ಸಂಗತಿಯಾಗುತ್ತದೆ. ಅಧಿಕಾರಶಕ್ತಿಯ ಬದಲಾಗಿ ಲೋಕಶಕ್ತಿಯ ನಿರ್ಮಾಣವಾಗುತ್ತದೆ ಮತ್ತು ರಾಜನೀತಿಯ ಆಧ್ಯಾತ್ಮೀಕರಣದ ಅಧ್ಯಾಯ ಪ್ರಾರಂಭವಾಗುತ್ತದೆ.

ಆಮ್ ಆದ್ಮಿ ಪಕ್ಷ ಒಂದು ರಾಜಕೀಯ ಪಕ್ಷವಾಗಿ ತನ್ನ ಅಸ್ತಿತ್ವವನ್ನು ಸೀಮಿತಗೊಳಿಸಿಕೊಳ್ಳದೆ ವ್ಯವಸ್ಥೆಯ ಮೇಲೆ ದೇಶದ [illegible] ರೂಪುಗೊಳ್ಳುವುದು ಇಂದಿನ ಕಾಲಧರ್ಮಕ್ಕೆ ಅಗತ್ಯವೆನಿಸುತ್ತದೆ. ಯಾವುದೇ ಪ್ರಕಾರದ ರಾಜ್ಯವ್ಯವಸ್ಥೆಯಿರಲಿ ಜನತೆಯನ್ನು ನಿಯಂತ್ರಣದಲ್ಲಿ ಇಡುವುದು ಒಂದು ರಾಜ್ಯಶಕ್ತಿ (State Power), ಇನ್ನೊಂದು ದಂಡಶಕ್ತಿ (Military Power). ಈ ಎರಡು ಶಕ್ತಿಗಳನ್ನು ನಿಯಂತ್ರಿಸುವ ಶಕ್ತಿ ಬೇರೊಂದಿಲ್ಲದಿದ್ದರೆ ಆ ಎರಡು ಶಕ್ತಿಗಳು ನಿರಂಕುಶವಾಗಿ ವರ್ತಿಸುತ್ತವೆ. ಸಮಾಜ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತವೆ.

[illegible] ಆರೋಗ್ಯಹಿತವಿರೋಧಿ ಪರಿಸ್ಥಿತಿ ತಪ್ಪಬೇಕಾದರೆ ಸಜ್ಜನಶಕ್ತಿಯೊಂದು ರೂಪಾಂತರಗೊಂಡು ಲೋಕಶಕ್ತಿಯಾಗಿ (Peoples' Power) ಹೊರಹೊಮ್ಮಬೇಕು. ಅದು ಸದಾ ಕಾಲವೂ ಸಕ್ರಿಯವಾಗಿರಬೇಕು. ಅಂಥ ಲೋಕಶಕ್ತಿಯ ಬೀಜವನ್ನು ದೇಶದ ಪ್ರಜಾಪ್ರಭುತ್ವದ ನೆಲದಲ್ಲಿ ಬಿತ್ತಿರುವ ಕೆಲಸವನ್ನು ಆಮ್ ಆದ್ಮಿ ಪಕ್ಷ ಈಗ ಮಾಡಿದೆ. 15 ವರ್ಷಗಳಿಂದ ದೆಹಲಿಯಲ್ಲಿ ಬೀಡುಬಿಟ್ಟಿದ್ದ ಕಾಂಗ್ರೆಸ್ [illegible] ಅಧಿಕಾರದ ಗದ್ದುಗೆಯಿಂದ ಇಳಿಸಿದ್ದು ಮತ್ತು ಬಿಜೆಪಿಯಂಥ ಬಲ [illegible] ಸಾಮಾನ್ಯ [illegible]

ಹತ್ತು ವರ್ಷದಿಂದ ನನೆಗುದಿಗೆ ಬಿದ್ದಿದ್ದ [illegible] ಸಮಾಧಾನಗೊಳ್ಳದೆ ಇನ್ನು ಮುಂದೆ ಮಾಡಬೇಕಿರುವ ಮೌಲ್ಯಾಧಾರಿತ ಹೊಸ ಸಮಾಜದ ನಿರ್ಮಾಣಕ್ಕೆ ತೊಡಗಿಕೊಳ್ಳುವ ಕೆಲಸ ಮಾಡಬೇಕಿದೆ. ಹೊಸ ಸಮಾಜದಂಥ ನಿರ್ಮಾಣದ ಕೆಲಸ ಯಾವತ್ತಿಗೂ ರಾಜಕೀಯ ಪಕ್ಷದ ಮೂಲಕ ಸಾಧ್ಯವಾಗುವುದಿಲ್ಲ.

ಆದ್ದರಿಂದ ಆಮ್ ಆದ್ಮಿ ಪಕ್ಷ, ಲೋಕಶಕ್ತಿಯನ್ನು ನಿರ್ಮಾಣ ಮಾಡುವ ಕೆಲಸದಲ್ಲಿ ತೊಡಗಬೇಕು. ಲೋಕಶಕ್ತಿ ನಿರ್ಮಾಣದ ಕೆಲಸ ರಾಜಕೀಯ ಕ್ರಿಯೆಯಲ್ಲ. ಅದೊಂದು ಪರಿಶುದ್ಧವಾದ ರಚನಾತ್ಮಕ ಕೆಲಸ. ಆಮ್ ಆದ್ಮಿ ಪಕ್ಷಕ್ಕೆ ಹೊಸದಾಗಿ ಸೇರಿಕೊಂಡಿರುವ ಮಾಹಿತಿ ತಂತ್ರಜ್ಞಾನ ಮತ್ತು ಕಾರ್ಪೊರೇಟ್ ಕ್ಷೇತ್ರದ ಹೊಸ ಪೀಳಿಗೆಯ ಯುವಕರು ಇದುವರೆಗಿನ ಎಲ್ಲ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ ಬಗ್ಗೆ ಅಸಮಾಧಾನಗೊಂಡಿದ್ದಾರೆ. ಅವರು ತಮ್ಮ ಆಧುನಿಕ ಪಾಶ್ಚಾತ್ಯ ಜೀವನಶೈಲಿಯಿಂದಲೂ ಬೇಸತ್ತಿದ್ದಾರೆ. ಅವರ ಮನದಲ್ಲಿ ಯಾವುದೋ ಒಂದು ತೀವ್ರ ತರನಾದ [illegible] ಅಸಂತೋಷ ಕುದಿಯುತ್ತಿದೆ. ಹೊಸ ಪೀಳಿಗೆಯ ಯುವಕರ ಮನದಲ್ಲಿರುವ ಈ ಕುದಿತದಿಂದ ಹೊರಬರಲು ಒಂದು ಸೂಕ್ತ ಮಾರ್ಗ ದೊರೆಯದೇ ಹೋದಲ್ಲಿ ದೇಶ ಇನ್ನೂ ಭಯಂಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. [illegible]

ಈ ಮೊದಲು 1975ರಲ್ಲಿ ತುರ್ತು ಪರಿಸ್ಥಿತಿಯನ್ನು ಸರ್ಕಾರ ಹೇರಿದಾಗ ಲೋಕನಾಯಕ ಜಯಪ್ರಕಾಶ ನಾರಾಯಣರು ಪ್ರಾರಂಭಿಸಿದ್ದ ನವ ನಿರ್ಮಾಣ ಮತ್ತು ಸಂಪೂರ್ಣ ಕ್ರಾಂತಿಯಂಥ [illegible] ಲೋಕಶಕ್ತಿಯ ನಿರ್ಮಾಣ ಮಾಡಿ ರಾಜ್ಯ ಮತ್ತು ದಂಡಗಳನ್ನು ನಿಯಂತ್ರಣದಲ್ಲಿರಿಸುವುದಾಗಿತ್ತು. ಈಗ ಅಂಥದೇ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯಶಕ್ತಿ ಬಹು ಕೇಂದ್ರಿತವಾಗಿದೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. [illegible] ರಾಜಕೀಯ ಪಕ್ಷಗಳು [illegible] ಅಭಿವೃದ್ಧಿ ನೀತಿ ಪರಿಸರ ವಿನಾಶ ಮಾಡುತ್ತಿದೆ. ಶಿಕ್ಷಣ ನೀತಿ ಗೊಂದಲಮಯವಾಗಿದೆ. ಕೃಷಿ [illegible] ಕೇಂದ್ರೀಕೃತ ಕೈಗಾರಿಕೆಗಳು ಪ್ರಾಕೃತಿಕ ಸಂಪನ್ಮೂಲ [illegible] ಕಬಳಿಸುತ್ತಿವೆ. ರಾಜಕೀಯ [illegible] ಜನತೆಯನ್ನು ಒಡೆದು ಆಳುವ [illegible] ಅನುಸರಿಸುತ್ತಿವೆ. ಚುನಾವಣೆಗಳು ಮತದಾರರಿಗೆ ಆಮಿಷಗಳನ್ನು ಒಡ್ಡುವ [illegible]ಗಳಾಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಎಲ್ಲ ಸದ್ವಿಚಾರಗಳನ್ನು ಮತ್ತು [illegible] ಸತ್ವಗಳನ್ನು ಸುಳ್ಳಾಗಿಸುತ್ತಿವೆ. ಮಹಿಳೆಯರು ಮತ್ತು ದಲಿತರ ಮೇಲೆ ದೌರ್ಜನ್ಯಗಳು [illegible] ಹತವಾಗಿ ನಡೆಯುತ್ತಿವೆ.

ಸ್ವಾತಂತ್ರ್ಯ [illegible] ಭಾರತದಲ್ಲಿ ರಾಜಕಾರಣ ಹೊಸರೀತಿಯ [illegible] ನಡೆಯಬೇಕೆಂದು ಗಾಂಧೀಜಿ ಬಯಸಿದ್ದರು. [illegible] ಲೋಕಸೇವಕ ಸಂಘವೆಂದು ಕಾಂಗ್ರೆಸ್ ಪಕ್ಷ ಪರಿವರ್ತನೆಗೊಂಡು ಅಹಿಂಸಾತ್ಮಕ [illegible] ಪ್ರಜಾಪ್ರಭುತ್ವವಾದಿ, ಸಮಾಜವಾದಿ [illegible] ನಿರ್ಮಾಣಕ್ಕಾಗಿ ಅದನ್ನು ಪುನರಚಿಸಲು 1948ರಲ್ಲಿ ಗಾಂಧೀಜಿ ಸೂಚಿಸಿದ್ದರು. ಆದರೆ ಕಾಂಗ್ರೆಸ್ ಪಕ್ಷ ಗಾಂಧೀಜಿ ಹೇಳಿದಂತೆ ತನ್ನನ್ನು ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ಪರಿವರ್ತಿಸಿಕೊಳ್ಳದೆ ಪರಂಪರಾಗತ ರಾಜಕಾರಣವನ್ನೇ [illegible] ಇಂದು ಅದು ಅಸ್ತಿತ್ವವಿಹೀನ [illegible] ಸೇರುತ್ತಿದೆ.

ಈಗ ಆರು ದಶಕಗಳ ನಂತರ ಅದು ಆಮ್ ಆದ್ಮಿ ಪಕ್ಷದ [illegible] ರೂಪ ತಳೆಯುತ್ತಿದೆ [illegible] ಗಾಂಧೀಜಿಯವರ ಲೋಕಸೇವಕ [illegible] ವಿಚಾರವನ್ನು ಆಮ್ ಆದ್ಮಿ ಪಕ್ಷ ಕೈಗೆತ್ತಿಕೊಂಡು ತನ್ನನ್ನು ಬದಲಾಯಿಸಿಕೊಳ್ಳುತ್ತಾ ಹೋದರೆ ಅದೊಂದು ಅದ್ಭುತ ಸಂಗತಿಯಾಗುತ್ತದೆ. ಅಧಿಕಾರಶಕ್ತಿಯ ಬದಲಾಗಿ ಲೋಕಶಕ್ತಿಯ ನಿರ್ಮಾಣವಾಗುತ್ತದೆ ಮತ್ತು ರಾಜನೀತಿಯ ಆಧ್ಯಾತ್ಮೀಕರಣದ ಅಧ್ಯಾಯ ಪ್ರಾರಂಭವಾಗುತ್ತದೆ. 2014ರ ಮೇ ತಿಂಗಳಲ್ಲಿ ನಡೆಯುವ ಚುನಾವಣೆಯನ್ನು ಎಲ್ಲರೂ ಒಂದು ಮಹಾಸಮರವೆಂದು ಭಾವಿಸುತ್ತಿದ್ದಾರೆ. ಕುರುಕ್ಷೇತ್ರದಂಥ ಯುದ್ಧಕ್ಕೂ ಅದನ್ನು ಹೋಲಿಸುತ್ತಿದ್ದಾರೆ. ಈ ಮಹಾಸಮರ ಭಾರತೀಯರ ರಾಜಕೀಯ ಪ್ರಬುದ್ಧತೆಯ ಅಗ್ನಿಪರೀಕ್ಷೆಯೂ ಹೌದು. ಇದು ರಾಜಕೀಯ ಪಕ್ಷಗಳ ಸಿಂಧುತ್ವವನ್ನು ಒರೆಗಲ್ಲಿಗೆ ಹಚ್ಚಲಿದೆ.

2014ರ ಚುನಾವಣೆ ಎಂದಿನಂತೆ ಬಹುಮತದ ಆಧಾರದಿಂದ ಜನರ ಪರವಾಗಿ ಹೊಣೆಗಾರಿಕೆ ವಹಿಸಿಕೊಳ್ಳುವ ಅಧಿಕಾರಾರೂಢ ಪಕ್ಷ ಮತ್ತು ವಿರೋಧ ಪಕ್ಷ ಎಂದು ಈ ಮಹಾ ಚುನಾವಣೆಯಿಂದ ಹೊರಬರುವುದಾದರೆ ಯಾವ ಸಾಮಾಜಿಕ ಕ್ರಾಂತಿಯೂ ಸಾಧ್ಯವಾಗುವುದಿಲ್ಲ; ಆಮ್ ಆದ್ಮಿ ಪಕ್ಷದಂಥ ಸಂಘಟನೆಗಳು ಇಟ್ಟುಕೊಂಡಿರುವ ಯಾವ ಧ್ಯೇಯಗಳೂ ಸಾಧಿತವಾಗುವುದಿಲ್ಲ.

ಆದ್ದರಿಂದ ಬದಲಾವಣೆ ತರುವ ಕೆಲಸ ಹೊಸ ರೀತಿಯಲ್ಲಿ ನಡೆಯಬೇಕು. ಅಧಿಕಾರ ನಡೆಸುವ ಪಕ್ಷ ಮತ್ತು ವಿರೋಧ ಪಕ್ಷ ಎಂಬ ಈ ಎರಡು ತೆರನಾದ ಪಕ್ಷಗಳ ಹೊರತಾಗಿ ಮೂರನೆಯ ನಿಷ್ಪಕ್ಷಪಾತ ಸಮೂಹ ಬಂದಿರಬೇಕು. ಆ ಸಮೂಹ ಅಧಿಕಾರದಲ್ಲಿರುವ ಪಕ್ಷದ್ದೂ ಆಗಿರುವುದಿಲ್ಲ, ವಿರೋಧ ಪಕ್ಷದ್ದೂ ಆಗಿರುವುದಿಲ್ಲ. ವಿನೋಬಾ ಹೇಳುವಂತೆ ಅದೇ ಒಂದು ತಟಸ್ಥ ಸಮೂಹವಾಗಿರುವುದು.

ಲೋಕಹಿತಸಾಧನೆಯೇ ಈ ಸಮೂಹದ ವೈಶಿಷ್ಟ್ಯ. ಈ ಸಮೂಹ ದೊಡ್ಡದಾದಷ್ಟೂ ಬಲಶಾಲಿಯಾದಷ್ಟೂ ಆಡಳಿತ ಮತ್ತು ಪ್ರಜಾತಂತ್ರ ಪರಿಶುದ್ಧವಾಗಿರುತ್ತವೆ. ಇಂಥ ನಿಷ್ಪಕ್ಷಪಾತ ಸಮೂಹವಾಗುವ ಪ್ರಯತ್ನವನ್ನು ಆಮ್ ಆದ್ಮಿ ಪಕ್ಷ ಮುಂದಿನ ಚುನಾವಣೆ ವೇಳೆಗೆ ಮಾಡಿಕೊಂಡಲ್ಲಿ ಅದು ಮತ್ತು ಅದರ ಪರವಾಗಿ ನಿಂತಿರುವ ಸಹಾನುಭೂತಿಯುಳ್ಳವರು ಬಯಸಿರುವ ಬದಲಾವಣೆಗಳನ್ನು ತರುವ ಸಾಧ್ಯತೆ ಇದೆ. ಇಲ್ಲವಾದರೆ ಇಲ್ಲ. ಪರಂಪರಾಗತ ರಾಜಕೀಯ ಬಿರುಗಾಳಿಯಲ್ಲಿ ಆಮ್ ಆದ್ಮಿ ಪಕ್ಷ ತರಗೆಲೆಯಂತೆ ಹಾರಿಹೋಗುವುದು.

ಆಮ್ ಆದ್ಮಿ ಪಕ್ಷಕ್ಕೆ ಇಂಥ ಒಂದು ದುರಂತ ಸಂಭವಿಸದಂತೆ ಮಾಡಲು ಮತ್ತು ಆಮ್ ಆದ್ಮಿ ಅಂದರೆ ಜನಸಾಮಾನ್ಯರ ಹಿತಸಾಧಿಸುವ ಸಂಘಟನೆಯಾಗಿ ಪರಿವರ್ತನೆಗೊಳ್ಳಲು ಕೇಜರಿವಾಲ್ ಇಟ್ಟುಕೊಂಡಿರುವ ಆದರ್ಶಗಳು ಸ್ಥಿರವಾಗಿ ನಿಲ್ಲಬೇಕು.

ವಿನೋಬಾಜಿ ಹೇಳುವಂತೆ ವಿಜ್ಞಾನ ನಮ್ಮನ್ನು ಪ್ರಬಲವಾದ ಜಗತ್ತಿನ ನಾಗರಿಕರನ್ನಾಗಿ ಮಾಡಿದೆ. ಇದೀ ವಿಶ್ವ ಸಮೀಪಕ್ಕೆ ಬಂದಿದೆ. ಆದುದರಿಂದ ವ್ಯಾಪಕ ವಿಶಾಲ ರಾಜನೀತಿಯೇ ಲೋಕನೀತಿ. ವಿಶ್ವ ಮಾನವರನ್ನಾಗಿ ಮಾಡುವಂಥ ರಾಜನೀತಿಗೆ ರಾಜನೀತಿ ಶಬ್ದ ಸರಿ ಹೋಗದು. ಇದನ್ನು ಲೋಕನೀತಿ ಎನ್ನಬೇಕು.

ಈ ಲೋಕನೀತಿಯು ಲೋಕಶಕ್ತಿಯಾಗಿ ಪರಿಣಮಿಸುವುದು ಚಿರಸ್ಥಾಯಿಯಾಗಿ ಸುಭದ್ರವಾಗಬಹುದಾಗ ಅಂಥ ಲೋಕಶಕ್ತಿ ಅಥವಾ ಸಜ್ಜನಶಕ್ತಿಯ ನಿರ್ಮಾಣದ ಕೆಲಸವನ್ನು ಸದ್ಯದ ಆಮ್ ಆದ್ಮಿ ಪಕ್ಷ ಮಾಡಬೇಕು. [illegible] ಇದೇ ಒಂದು ದೊಡ್ಡ ರಾಜಕಾರಣ.

ಸುರೇಂದ್ರ ಕೌಲಗಿ, ಮೇಲುಕೋಟೆ

ಆಯುಕ್ತರಿಗೆ ಅಂಟಿದ 'ತ್ಯಾಜ್ಯ'

ಪಾಲಿಕೆ ಸಭೆ

[illegible]

ಮೊಬೈಲ್‌ನಲ್ಲೂ ಅಕ್ರಮ

[illegible] ಅಧಿಕಾರಿಗಳಿಗೆ [illegible] ಲಕ್ಷ ರೂ. ವೆಚ್ಚದ ಮೊಬೈಲ್ [illegible] ನಡೆದಿದೆ

-ಕೆ.ಚಂದ್ರಶೇಖರ್

ಗುತ್ತಿಗೆ ನಿಯಮ ಉಲ್ಲಂಘನೆ ಆರೋಪ

ಮಗರತ್ ರಸ್ತೆ ಹಾಗೂ ರಿಚ್ಮಂಡ್ ರಸ್ತೆ ನಡುವಿನ 1,86,653 ಚ.ಅಡಿ ಭೂಮಿಯನ್ನು ವಾರ್ಷಿಕ 1000 ರೂ. ಬಾಡಿಗೆಯಂತೆ 99 ವರ್ಷಗಳಿಗೆ ಕರ್ನಾಟಕ ರಾಜ್ಯ ಫುಟ್‌ಬಾಲ್ ಅಸೋಸಿಯೇಷನ್‌ಗೆ (ಕೆಎಸ್ ಎಫ್‌ಎ) ನೀಡಲಾಗಿದೆ. ಈ ಪೈಕಿ ಸಾಕಷ್ಟು ಭೂಮಿಗೆ ಅಧಿಕಾರಿಗಳು ಅಕ್ರಮವಾಗಿ ಖಾತೆ ನೀಡಿದ್ದು, 375 ಕೋಟಿ ರೂ. ಮೌಲ್ಯದ ಭೂಮಿ ಒತ್ತುವರಿಯಾಗಿದೆ ಎಂದು ಬಿಜೆಪಿ ಸದಸ್ಯ ಎನ್.ಆರ್.ರಮೇಶ್ ಆರೋಪಿಸಿದರು.

ಕೌನ್ಸಿಲ್ ಸಭೆಯಲ್ಲಿ ಮಾತನಾಡಿದ ಅವರು, "ಅ[illegible] ಸಂಸ್ಥೆ ನಿಯಮಬಾಹಿರವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಿ ಖಾಸಗಿ ಕಾಲೇಜಿಗೆ ಬಾಡಿಗೆ ನೀಡಿದೆ. ಉಳಿದ ಪ್ರದೇಶಗಳಲ್ಲೂ ಪ್ರತಿಷ್ಠಿತ ವಾಣಿಜ್ಯ ಕಟ್ಟಡಗಳು ಅಕ್ರಮವಾಗಿ ನಿರ್ಮಾಣಗೊಂಡಿವೆ. ಪಾಲಿಕೆ ಭೂಮಿ ಒತ್ತುವರಿ ಮಾಡಿಕೊಂಡು ಮಾಸಿಕ 40 ಲಕ್ಷ ರೂ. ಬಾಡಿಗೆ ಪಡೆಯುತ್ತಿದ್ದಾರೆ. ಕೆಎಸ್‌ಎಫ್‌ಎ ಗುತ್ತಿಗೆ ರದ್ದುಪಡಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು," ಎಂದು ಆಗ್ರಹಿಸಿದರು.

ಪ್ರತಿಕ್ರಿಯಿಸಿದ ಆಯುಕ್ತ ರಜನೀಶ್ ಗೋಯಲ್, "ಸಂಸ್ಥೆಯೊಂದಿಗಿನ ಕರಾರು ರದ್ದತಿಗೆ ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು" ಎಂದು ಭರವಸೆ ನೀಡಿದರು.

ಪಾಲಿಕೆ ಆಡಳಿತಕ್ಕೆ ಬಿಜೆಪಿ ಸದಸ್ಯರ ಖಂಡನೆ

ಆಡಳಿತ ಪಕ್ಷದ ನಾಯಕ ಎನ್ ನಾಗರಾಜ್, "ಬಜೆಟ್ ಮಂಡನೆ ಯಾಗಿ 6 ತಿಂಗಳಾದರೂ ಈವರೆಗೆ ಅನುಷ್ಠಾನವಾಗಿಲ್ಲ, ಈಗಲಾದರೂ ಏಕ ಗವಾಕ್ಷಿ ಮೂಲಕ ಕಾರ್ಯಕ್ರಮ ಅನುಮೋದಿಸಬೇಕು. [illegible] ವರ್ಷಗಳ ಹಿಂದಿನ ಕಾರ್ಯಕ್ರಮಗಳಿಗೆ ಈವರೆಗೆ ಟೆಂಡರ್ ಆಹ್ವಾನಿಸಿಲ್ಲ, ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಈಗಲೇ ಕ್ರಮ ವಹಿಸಬೇಕಿದೆ" ಎಂದರು.

ಬಿಜೆಪಿಯ ಎನ್ ಹರೀಶ್, "ಪಾಲಿಕೆ ವ್ಯಾಪ್ತಿಯಲ್ಲಿ ಐದು ಲಕ್ಷ ಮಳಿಗೆಗಳಿದ್ದು, ಕೇವಲ 34,000 ಮಳಿಗೆಗಳಿಗಷ್ಟೇ ಅಧಿಕಾರಿಗಳು [illegible] ಪರವಾನಗಿ (ಟ್ರೇಡ್ ಲೈಸೆನ್ಸ್) [illegible] ನೂರಾರು ಮಳಿಗೆಗಳಿವೆ. [illegible] ಪರವಾನಗಿ ಪಡೆಯಲು ಮುಂದಾದರೂ ಅಧಿಕಾರಿಗಳು ಪರವಾನಗಿ ನೀಡಿಲ್ಲ" ಎಂದರು.

'ಬಿಬಿಎಂಪಿ ಅಧಿಕಾರಿಗಳನ್ನು [illegible] ಕಳಿಸಿ. ಅವರಿಗೆ ಮಾನ ಮರ್ಯಾದೆ ಇಲ್ಲ" ಎಂದು ಬಿಜೆಪಿ ಯ ಎಚ್.ಎಸ್.ಪದ್ಮರಾಜ್ ಹೇಳಿದರು.

(ಆಯುಕ್ತರನ್ನು [illegible]) '[illegible] ಆಗಿ ಗೆದ್ದು ಬನ್ನಿ, ಆಗ ಗೊತ್ತಾಗುತ್ತದೆ ನಮ್ಮ ಕಷ್ಟ ಏನು ಅಂತ,' [illegible] ಮಂಜುನಾಥರೆಡ್ಡಿ ಸವಾಲು [illegible].

ರಸ್ತೆ ಹೆಸರು ಗೊಂದಲ

ಬೆಂಗಳೂರು: ಮುಸ್ಲಿಂ ಎಂಬ ಕಾರಣಕ್ಕೆ ಇಂದಿರಾನಗರ 100 ಅಡಿ ರಸ್ತೆಗೆ ಡಾ ಎಸ್.ಕೆ.ಕರೀಂ ಖಾನ್ ಹೆಸರಿಡಲು ವಿಳಂಬ ಮಾಡಲಾಗುತ್ತಿದೆ ಎಂಬ ಶಾಸಕ ಎನ್.ಎ. ಹ್ಯಾರಿಸ್ ಹೇಳಿಕೆ [illegible] ಖಾನ್ ಹೆಸರನ್ನಿಡಲು [illegible] ಕೂಡಲೇ ಕ್ರಮ ಕೈಗೊಳ್ಳಬೇಕೆಂದರು. ಬಳಿಕ ಕಾಂಗ್ರೆಸ್- ಬಿಜೆಪಿ ನಡುವೆ ವಾಗ್ವಾದ ನಡೆಯಿತು.



Exclusively available at Abaran Jewellers: Mahalakshmi Layout - 2359 8600 C Krishniah Chetty & Sons: Main Guard Cross Road - 4000 1869 GRT Jewellers: Jayanagar - 2665 1515 Joy Alukkas: MG Road - 2558 9916 Malabar Gold & Diamonds: Dickenson Road - 4128 3916/4916 Nikhaar Jewels: Richmond Circle - 2210 3266/77/88

ವಿಜಯಕರ್ನಾಟಕ 1-12-12 Pg-3

ಆಯುಕ್ತರಿಗೆ ಅಂಟಿದ 'ತ್ಯಾಜ್ಯ'

[illegible] ಕಳುಹಿಸಬೇಕು ಎಂದು ಆಗ್ರಹಿಸಿದ ಪ್ರಸಂಗ [illegible]

ಪಾಲಿಕೆ ಸಭೆ

[illegible] 198 ಕಾರ್ಪೊರೇಟರ್‌ಗಳು ತಲೆ ತಗ್ಗಿಸುವಂತಾಗಿದೆ. ಪಾಲಿಕೆ ಸೂಪರ್ ಸೀಡ್ ಬಳಿಕವೂ [illegible] ಕಾರ್ಯ ನಿರ್ವಹಿಸದ ಆಯುಕ್ತರನ್ನು ವಾಪಸ್ ಕಳುಹಿಸಿ," ಎಂದು ಒತ್ತಾಯಿಸಿದರು.

[illegible] "ಕೆಎಂಸಿ ಕಾಯಿದೆ ಪ್ರಕಾರ ಎಲ್ಲ ಅಧಿಕಾರವೂ [illegible]

[illegible] ಇಲ್ಲದ ಕಾರಣ ಕಡತಗಳ ಚಲನೆ ಸ್ಥಗಿತವಾಗಿದೆ. ಬಡವರಿಗೆ [illegible] ತಾಗಿದೆ. ಹಾಗಾಗಿ, ಮೂರನೇ ಎರಡರಷ್ಟು ಬಹುಮತದ [illegible] ಅವಕಾಶ ಇರುವುದನ್ನು [illegible]

ಅನುಮತಿ ಕೇಳಿ [illegible] ಸಂಬಂಧಪಟ್ಟಂತೆ 32 ನಿರ್ಣಯಗಳಾಗಿವೆ [illegible] ವಿಚಾರಣೆ ವೇಳೆ ಈ ಮಾಹಿತಿ ನೀಡಲು [illegible]

[illegible]

ಮೊಬೈಲ್‌ನಲ್ಲೂ ಅಕ್ರಮ

[illegible] ಅಧಿಕಾರಿಗಳಿಗೆ [illegible] 75 ಲಕ್ಷ ರೂ. ವೆಚ್ಚದ ಮೊಬೈಲ್ ಖರೀದಿಯಲ್ಲೂ ಅಕ್ರಮ ನಡೆದಿದೆ

-ಕೆ.ಚಂದ್ರಶೇಖರ್

ಗುತ್ತಿಗೆ ನಿಯಮ ಉಲ್ಲಂಘನೆ ಆರೋಪ

ಮಗರತ್ ರಸ್ತೆ ಹಾಗೂ ರಿಚ್ಮಂಡ್ ರಸ್ತೆ ನಡುವಿನ 1,86,653 ಚ.ಅಡಿ ಭೂಮಿಯನ್ನು ವಾರ್ಷಿಕ 1000 ರೂ. ಬಾಡಿಗೆಯಂತೆ 99 ವರ್ಷಗಳಿಗೆ ಕರ್ನಾಟಕ [illegible] (ಕೆಎಸ್ಎಫ್ಎ) ನೀಡಲಾಗಿದೆ. ಈ ಪೈಕಿ ಸಾಕಷ್ಟು ಭೂಮಿಗೆ ಅಧಿಕಾರಿಗಳು ಅಕ್ರಮವಾಗಿ ಖಾತೆ ನೀಡಿದ್ದು, 375 ಕೋಟಿ ರೂ. ಮೌಲ್ಯದ ಭೂಮಿ ಒತ್ತುವರಿಯಾಗಿದೆ ಎಂದು ಬಿಜೆಪಿ ಸದಸ್ಯ ಎನ್.ಆರ್.ರಮೇಶ್ ಆರೋಪಿಸಿದರು.

ಸಿದ್ಧಗೊಳಿಸಿ ಭಾಷೆ ಬೆಸುಗೆ ಹಾಕಿ,
ಜಾಗತೀಕರಣಕ್ಕು ಏಕೀಕರಣ ದೀಕ್ಷೆ
ರೈತ, ಕಾರ್ಮಿಕ, ಕೂಲಿಗಗ್ರ ಪೂಜೆ



ನಮ್ಮೊಲುಮೆ ಸಂಸ್ಕೃತಿಯ ಬೇರು ಆಳಕ್ಕಿಳಿಯೆ
ಹತ್ತು ದಿಕ್ಕಿಗು ಕೊಂಬೆ ಚಾಚಬಹುದು,
ಭೋಗಲಾಲಸೆಯ ನವನಾಗರಿಕತೆಯ ಒಲಿಗೆ
ಬಿದ್ದು ಮೀಸಲಗಳೆದು ಬರಲಾರದು

ನಮ್ಮ ಬದುಕಿನ ಭಾಷೆ, ತಿಳಿಸಿ ತಿದ್ದುವ ಮೂಸೆ
ಜನ ಬದುಕಲೆಂದು ಕವಿ ಬರೆದ ಭಾಷೆ,
ವಚನ ಕೈ ವಚನಕೊಡು, ಗಿಲೀಟಿನ ಮಾತು ಬಿಡು
ಚೊಕ್ಕ ಚಿನ್ನವೆ ಬೇಕು ಕಾಯುಮುಡಿಗೆ

- ಚೆನ್ನವೀರ ಕಣವಿ

ಸುವರ್ಣ ಕರ್ನಾಟಕ ಸಂಭ್ರಮದ ಸಂದರ್ಭದಲ್ಲಿ ಹಿರಿಯ ಕವಿ

ನಿಜವಾಗಿ ಕನ್ನಡಿಗರ ನಾಡಾಗಲಿ

ಭವಿಷ್ಯದ ಕರ್ನಾಟಕ ಹೇಗಿರಬೇಕು ಎಂಬ ನಮ್ಮ ಪ್ರಶ್ನೆಗೆ ನಾಡಿನ ಗಣ್ಯರು ವ್ಯಕ್ತಪಡಿಸಿದ ಅನಿಸಿಕೆಗಳಿವು

ಭವಿಷ್ಯದ ಕರ್ನಾಟಕ ... [illegible]

ಎಂ.ಪಿ. ಪ್ರಕಾಶ್, ಗೃಹ ಸಚಿವರು



ಕರ್ನಾಟಕವು ... [illegible]

ಡಾ. ಎಂ. ಚಿದಾನಂದಮೂರ್ತಿ, ಸಂಶೋಧಕ

ದೇಶ ... [illegible]

ಬರಗೂರು ರಾಮಚಂದ್ರಪ್ಪ, ಸಾಹಿತಿ

ಭವಿಷ್ಯದ ಕರ್ನಾಟಕ ... [illegible]

ಪರಮಾಗಬೇಕು. ... ಮಂತ್ರಿಗಳೂ ... ನಿಜ ಸ್ಥಿತಿಯ ... [illegible]

ಜನರು ನೆಲ ಜಲ ಸಂಸ್ಕೃತಿಗೆ ... ಆದರ ಆಗುತ್ತಿದೆ ... ಸರಕಾರ ಮತ್ತು ... [illegible]

ಶ್ರೀಪತಿ, ... [illegible]

ಈಗ ... ಹಾಗೂ ಮೈಸೂರು ನಗರ ... [illegible]

ಕ್ಷೇತ್ರದ ... [illegible]

ಸದಕಲ್ಲಿ, ... [illegible]

ಭವಿಷ್ಯದಲ್ಲಿ ಕರ್ನಾಟಕ ... [illegible]

ರಮೇಶ್, ... [illegible]



ಭವಿಷ್ಯದ ಕರ್ನಾಟಕ ... [illegible]

ಎಚ್ಚೆಸ್ ದೊರೆಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರ

ವಿಜಯ ಕರ್ನಾಟಕ

ಕನ್ನಡಕ್ಕೆ ನಾವಲ್ಲದೆ ಮತ್ಯಾರು?

ಚಿನ್ನದಂಥ ಕರ್ನಾಟಕಕ್ಕೆ ಈಗ ಸುವರ್ಣ ಮಹೋತ್ಸವದ ಸಂಭ್ರಮ. ... [illegible]

ಕನ್ನಡ ... [illegible]

ಕರ್ನಾಟಕದ ಸುವರ್ಣ ಕಳಸಗಳು



'ಹಸಿವಿನಿಂದ ಸತ್ತವರು....' 'ಪ್ರತಿಭಟನೆ'ಗೆ

ಪ್ರತಿಭಟನೆ   ಕೆ.ಶಿವರಾಮು. ವಿಜಯಲಕ್ಷ್ಮಿ

ಶಿವಾಲಯ ಫಿಲಂಸ್ ಲಾಂಛನದಲ್ಲಿ ... ನಿರ್ಮಿಸುತ್ತಿರುವ 'ಪ್ರತಿಭಟನೆ' ಚಿತ್ರಕ್ಕೆ ... ಬರೆದಿರುವ ಹಸಿವಿನಿಂದ ಸತ್ತವರು, ಸೈಜುಗಲ್ಲು ಹೊತ್ತವರು ಒದೆಸಿಕೊಂಡು ಒರಗಿದವರು ನನ್ನ ಜನಗಳು / ಕಾಲು ಕೈಯ ಹಿಡಿದವರು, ಕೈ ಮುಗಿಸಿಕೊಳ್ಳುವವರು, ಭಕ್ತರೆಲ್ಲ ಭಕ್ತರೊ ನನ್ನ ಜನಗಳು' ಎಂಬ ಹಾಡಿನ ಚಿತ್ರೀಕರಣ ಶ್ರೀರಾಮಪುರದಲ್ಲಿ ಇತ್ತೀಚೆಗೆ ನಡೆಯಿತು.

ಹಳ್ಳಿ ಜೀವನದಲ್ಲಿ ನಡೆದ ಸತ್ಯ ಘಟನೆಯ ಸುತ್ತ ಹೆಣೆಯಲಾದ ಕಥೆಯನ್ನು ಕೆ ಶಿವರಾಮು ಅವರು ಬರೆದಿದ್ದಾರೆ.

ಚಿತ್ರಕಥೆ, ಸಂಭಾಷಣೆ ನಿರ್ದೇಶನ ಎಂ. ರಾಜೇಂದ್ರಕುಮಾರ್ ಆರ್ಯಾ ಅವರದು.

ಆರ್.ಸಿ. ಮಾಕಾಕ್ಷಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು. ಸಂಗೀತವನ್ನು ವಿ. ಮನೋಹರ್ ನೀಡಿದ್ದಾರೆ.

ಶೀಘ್ರವೇ ತೆರೆ ಕಾಣಲಿರುವ ಈ ಚಿತ್ರದ ಮುಖ್ಯ ತಾರಾಬಳಗದಲ್ಲಿ ಕೆ. ಶಿವರಾಮು, ವಿಜಯಲಕ್ಷ್ಮಿ, ಕಾಂಚನ, ಅರವಿಂದ್, ಕೀರ್ತಿ, ಬಿರಾದಾರ್, ಹೊನ್ನವಳ್ಳಿ ಕೃಷ್ಣ, ಕರಿಬಸವಯ್ಯ, ಕುಮುದದೇವಪ್ಪ, ಮಾಸ್ಟರ್ ಮಹಾಂತೇಶಯ್ಯ, ಜವಳಿ ಮಂತ್ರಿ ಎಂ.ಎಸ್ ಪಾಟೀಲ್ ಅವರು ಇದ್ದಾರೆ.

ಆಟೊ ಚಾಲಕನ ಪರ ದೇವರಾಜ್ ವಾದ

'ಒಂದು ಸಾರಿ ಒಂದೇ ಒಂದು ಸರ್ತಿ ಯೋಚನೆ ಮಾಡಿ. ಈ ವ್ಯಕ್ತಿ ಅಪರಾಧಿ ಆಗಿದ್ರೆ ಅವನು ಇವತ್ತು ಕಟಕಟೆಗೆ ಬಂದು ನಿಲ್ಲಿದ್ದಾ' ಆತನ ಹೆಂಡ್ತಿ, ಅಕ್ಕ ಹಾರ್‍ತಿದ್ರಾ' ಅಷ್ಟೆ ಯಾಕೆ ಈ ಕೋರ್ಟು ಮೆಟ್ಟಿಲು ಹತ್ತುತ್ತಾ ಇದ್ದಾ? ಸ್ವಲ್ಪ ನೀವೇ ಯೋಚಿಸಿ' ಎಂದು ದೇವರಾಜ್ ಅಪರಾಧಿ ಸ್ಥಾನದಲ್ಲಿದ್ದ ಆಟೋ ಡ್ರೈವರ್ ಒಬ್ಬನನ್ನು ನಿರಪರಾಧಿ ಎಂದು ಕೋರ್ಟಿನಲ್ಲಿ ವಾದಿಸುವ ದೃಶ್ಯವನ್ನು ... ಫಿಲಂಸ್ ಲಾಂಛನದಲ್ಲಿ ... ರಾಜ್ ನಿರ್ಮಿಸುತ್ತಿರುವ 'ಮಿಸ್ಟರ್ ಎಕ್ಸ್' ಚಿತ್ರಕ್ಕಾಗಿ ಹ.ಸೂ. ರಾಜಶೇಖರ್ ನಿರ್ದೇಶನದಲ್ಲಿ ರಮೇಶ್‌ಬಾಬು ಚಿತ್ರೀಕರಿಸಿದರು.

ಸಾಧುಕೋಕಿಲಾ ಸಂಗೀತ ನೀಡಿರುವ ಈ ಚಿತ್ರದ ಮುಖ್ಯ ಭೂಮಿಕೆಯಲ್ಲಿ ದೇವರಾಜ್, ರಾಜಾ, ಬಾವನಾ, ಸ್ವರ್ಣ, ಓಂಪ್ರಕಾಶ್, ಸತ್ಯಜಿತ್, ಸುನೀಲ್ ಪುರಾಣಿಕ್, ವೆಂಕಟೇಶ್, ಬ್ಯಾಂಕ್ ಜನಾರ್ಧನ್, ಎಂ.ಎಸ್ ಕಾರಂತ್, ಆಗ್ರೋ ಚಿಕ್ಕಣ್ಣ, ರಮ್ಯ, ಶಾಂತಮ್ಮ ಇದ್ದಾರೆ.

ಪ್ರಭಾಕರ್ ಹೊಡೆದಾಟ

ಪ್ರಭಾಕರ್ ಹೊಡೆದಾಟದಲ್ಲಿ ಪಾಲ್ಗೊಂಡಿದ್ದ ದೃಶ್ಯವನ್ನು ಶ್ರೀಮತಿ ಅನಿತಾ ಕೃಷ್ಣನ್ ನಿರ್ಮಿಸುತ್ತಿರುವ "ಗುಡ್ ಬ್ಯಾಡ್ ಅಗ್ಲಿ" ಚಿತ್ರಕ್ಕಾಗಿ ಆರ್ ಎಸ್ ಆರ್ ಪ್ರಭಾಕರ್ ಚಿತ್ರೀಕರಿಸಿಕೊಂಡರು. ಇದರಲ್ಲಿ ಪ್ರಭಾಕರ್‌ರದು ದ್ವಿಪಾತ್ರ

ಮಿಸ್ಟರ್ ಎಕ್ಸ್   ದೇವರಾಜ್ ಮತ್ತು ಸಹಕಲಾವಿದರು

ಚಿತ್ರಬಂಧ–288

ಎಡದಿಂದ ಬಲಕ್ಕೆ

1. ... ಬೇಕಾದಾಗ ... ಸ್ವಲ್ಪ ಬೇಕಾದಾಗ (2)
3. ಅಮೃತ – ... ನಡುವೆ ನಡೆದ ಯುದ್ಧ (3)
5. ಗೋಪಾಲನಿಂದ ಬಂದಿರ ಗೋಪಿಯಿಂದ ಹೀಗೆ ಅಕ್ಕ (2)
6. ... (4)
8. ... (4)
10. ... (2)
11. ... (2)
12. ... (2)
14. ... (2)
15. ... (2)
16. ... (2)
18. ... (3)
19. ... (2)
... (2)
22. ... (2)
23. ... (2)
25. ... (2)
26. ದೊರೆ – ಭಗವಾನ್ ಅವರ ಮಾತು ಕೇಳದ ವಾಯು (2)
27. ಸಂಗೀತಕ್ಕೆ ಬೇಕಾದ ಇವು ಜಯಮಾಲ ನಾಯಕಿಯಾದಾಗ ಬಂದವು (4)
28. ಜೀವನದಲ್ಲಿ ಬಾಳ್ವೆ ಹೀಗಿರಬೇಕು (4)
30. ಪ್ರೇಮದಿಂದ ಬಂದ ಮಗಳು (2)
31. ನಾನು ನಿನ್ನವಳಾದಾಗ ಏಕೆ ಅವಸರ (3)
32. ಹಾರುತಿರುವ ಹಕ್ಕಿ ಬಡಿದವು (2)

ಮೇಲಿನಿಂದ ಕೆಳಕ್ಕೆ

2. ಬೇಲೂರು ಬಾಲೆಯ ಪ್ರತಿನಿಧಿಯಾದ ಈ ಹೂವು ಇಲ್ಲಿದೆ (5)
3. ಇವಳ ಪತಿಗೋಳಿದದ್ದೇ ರತಿ ಪತಿ ಗಾನ (2)
4. ಮೂಡಣದಿಂದ ಮೂಡಿ ಬಂದಾತ (2)
5. 'ಧರ್ಮ' ಚಿತ್ರದಲ್ಲಿ ರಾಜ್‌ಕುಮಾರ್ ಹಾಡಿದಂತೆ ಜನ್ಮವೆತ್ತಿದ ವಾದದೊಂದಿಗಿನ ಗಂಗೆ ಮಾಡಿದ ಪವಿತ್ರ (5)
7. ಅರವಿಂದವನದಂತಹ ಮೊಗ (3)
9. ಟುಸ್ ಟುಸ್ ಎನ್ನುವಂತೆ ಇದ್ದ ಖಳನಟಿ (3)
13. ಎಚ್.ಎಲ್.ಎನ್. ಸಿಂಹ ನಿರ್ದೇಶನದ ಗುಬ್ಬಿ ವೀರಣ್ಣ ನಿರ್ಮಾಣದ ಚಿತ್ರ (5)
14. ರಾಜಾಶಂಕರ್–ಹರಿಣಿ ಅಭಿನಯದ ಚಿತ್ರ (5)
15. ಪರಶುರಾಮನಂತಹ ನಿರ್ದೇಶಕ (3)
17. ದೆವ್ವಗಳ ಪ್ರದೇಶ – ಸೋಮನಹಳ್ಳಿ ಜಾಡಿಗೆ ಹೀಗಾಯಿತು (3)
20. ವಿಷ್ಣುವರ್ಧನ್, ಭಾರತಿ, ಪದ್ಮಪ್ರಿಯ ಅಭಿನಯದ ಚಿತ್ರ (5)
21. ಮರವು ಬಳ್ಳಿಗಾಸರೆಯಾದರೆ ಬಳ್ಳಿ.... (5)
22. 'ಸಂಕ್ರಾಂತಿ' ಚಿತ್ರದ ನಾಯಕಿ (3)
24. ಓ ಅಯ್ಯ, ಅಮ್ಮಯ್ಯ ಎಂದಾಗ ಇದೇ ತಾಯಿ–ತಂದೆ (3)
28. ಕಡೆಗಣಿಸಿ ತಿರುಗಿದ ಈ ಒಳಮರ್ಮ ಅರಿತವರಿಲ್ಲ (2)
29. 'ಹೋಳಿಲ್ಲದ ಸರದಾರ' ಹಾಡಿಕೊಂಡ ಮಾಲೆ (2)

287ರ ಉತ್ತರ



'ಬಯಲುದೀಪ'   ಸಿತಾರಾ

ಮೈಸೂರಿನಲ್ಲಿ ಹಾಡಿದ 'ವೀರಣ್ಣ'

ತನುಚಿತ್ರ ಲಾಂಛನದಡಿ ನಿರ್ಮಾಪಕ ಸಾ.ರಾ. ಗೋವಿಂದು ನಿರ್ಮಿಸುತ್ತಿರುವ "ವೀರಣ್ಣ" ಚಿತ್ರಕ್ಕಾಗಿ ಮೈಸೂರು ಬಳಿಯಿರುವ ಚಿಕ್ಕಾಡೆಯಲ್ಲಿ ಚಿತ್ರೀಕರಣ ನಡೆಸಲಾಗುತ್ತಿದೆ ಇತ್ತೀಚೆಗೆ ಇಲ್ಲಿ ಎರಡು ಗೀತೆಗಳನ್ನು ಚಿತ್ರಿಸಿಕೊಳ್ಳಲಾಯಿತು.

ವೃಂದಾವನ, ಬಲಮುರಿ ಫಾಲ್ಸ್ ಹಾಗೂ ಮೈಸೂರು ಸುತ್ತಮುತ್ತ ಹಲವು ಪ್ರದೇಶಗಳಲ್ಲಿ ಜಗ್ಗೇಶ್, ರವಳಿ ಅಭಿನಯದಲ್ಲಿ ಪ್ರಸಾದ್ ನೃತ್ಯ ನಿರ್ದೇಶನದೊಂದಿಗೆ ಜೆ.ಜಿ. ಕೃಷ್ಣರ ಛಾಯಾಗ್ರಹಣದಲ್ಲಿ ನಿರ್ದೇಶಕ ವಾಸು ಚಿತ್ರಿಸಿಕೊಂಡರು. ಇದಲ್ಲದೆ ಚಿಕ್ಕಾಡೆಯಲ್ಲಿ ಜಗ್ಗೇಶ್, ರವಳಿ, ಶ್ರೀನಾಥ್, ಧೀರೇಂದ್ರ ಗೋಪಾಲ್ ಟೆನ್ನಿಸ್‌ಕೃಷ್ಣ ಹಾಗೂ ಸಾಹಸ ಕಲಾವಿದರನ್ನು ಬಳಸಿ ಕ್ಲೈಮ್ಯಾಕ್ಸ್ ಸನ್ನಿವೇಶವನ್ನೂ ಕೆ.ಡಿ. ವೆಂಕಟೇಶ್ ಸಾಹಸ ನಿರ್ದೇಶನದಲ್ಲಿ ಚಿತ್ರಿಸಿಕೊಳ್ಳಲಾಯಿತು. ಚಿತ್ರಕ್ಕೆ ಸದ್ಗುಣರಾಜ್ ಸಂಗೀತವಿದೆ.

ಮುಖ್ಯ ಭೂಮಿಕೆಯಲ್ಲಿ ಜಗ್ಗೇಶ್, ರವಳಿ, ಶ್ರೀನಾಥ್, ಧೀರೇಂದ್ರ ಗೋಪಾಲ್, ಲೋಕನಾಥ್, ಅನುರಾಧ, ಟೆನ್ನಿಸ್‌ಕೃಷ್ಣ, ಹೊನ್ನವಳ್ಳಿ ಕೃಷ್ಣ, ವೆಂಕಟೇಶ್, ಬ್ಯಾಂಕ್ ಜನಾರ್ಧನ್ ಇದ್ದಾರೆ.

ದ್ವಿತೀಯ ಹಂತ ಮುಗಿಸಿದ ಆರ್ಯಭಟ

ಅಂಬಳೆ ಆರ್ಟ್ಸ್ (ಮೈಸೂರು) ಲಾಂಛನದಡಿ ಶ್ರೀಮತಿ ಮತ್ತು ಶ್ರೀರಾಮನ್ (ಫಿಟ್ಸ್‌ಬರ್ಗ್) ಅರ್ಪಿಸಿ ಎ.ಎನ್. ಬಾಲು ನಿರ್ಮಿಸುತ್ತಿರುವ "ಆರ್ಯಭಟ" ಚಿತ್ರದ ದ್ವಿತೀಯ ಹಂತದ ಚಿತ್ರೀಕರಣ ಮುಗಿದಿದೆ.

ರಮೇಶ್, ಸೌಂದರ್ಯ, ಗಿರೀಶ್‌ಶೆಟ್ಟಿ, ರಮ್ಯ ಹಾಗೂ ಸಿ.ಬಿ.ಐ. ಅಧಿಕಾರಿ ಪಾತ್ರದಲ್ಲಿ ನಟಿಸಿರುವ ನಟ ದೇವರಾಜ್ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಬಿ.ಸಿ. ಗೌರಿಶಂಕರ್ ಛಾಯಾಗ್ರಹಣದಲ್ಲಿ ನಿರ್ದೇಶಕ ರಾಮನಾಥ್, ಸುಬ್ರಹ್ಮಣ್ಯ ನಗರ, ಬನ್ನೇರುಘಟ್ಟ ರಸ್ತೆ ಹಾಗೂ ನಗರದ ಮತ್ತಿಕೆರೆ ಕಡೆಗಳಲ್ಲಿ ಹಲವು ಸನ್ನಿವೇಶಗಳನ್ನು ಚಿತ್ರಿಸಿಕೊಂಡರು.

ಚಿತ್ರದ ಉಳಿದ ತಾರಾಗಣದಲ್ಲಿ ರಮ್ಯ, ಅವಿನಾಶ್, ಸುಧಾಕರ್ ಪಾಟೀಲ್, ಬ್ಯಾಂಕ್ ಜನಾರ್ಧನ್, ಗಿರೀಶ್‌ಶೆಟ್ಟಿ, ಭಾಗೀರಥಿ (ಅಸ್ಸಾಮಿ), ರಘುನಾಥ್ (ರಂಗಾಯಣ) ಮಾಸ್ಟರ್ ವಿನಾಯಕಜೋಶಿ ಇದ್ದಾರೆ.

'ಸಂಬರ್ ಒನ್'   ರಾಮ್‌ಕುಮಾರ್

'ಮಾರೀಕಣ್ಣು'.. ರೀರೆಕಾರ್ಡಿಂಗ್

ಬೆಸ್ಟ್ ಫಿಲಂಸ್ ಲಾಂಛನದಡಿ ನಾಗಮಣಿ, ಕೇಶವ, ನರಸಿಂಹ, ಡಿ.ಕೆ. ಕೇಶವಪ್ರಸಾದ್ ನಿರ್ಮಿಸುತ್ತಿರುವ "ಮಾರೀಕಣ್ಣು ಹೋರಿಮ್ಯಾಗೆ" ಚಿತ್ರಕ್ಕಾಗಿ ಇತ್ತೀಚೆಗೆ ನಗರದ ಪ್ರಸಾದ್ ರೆಕಾರ್ಡಿಂಗ್ ಥಿಯೇಟರ್‌ನಲ್ಲಿ ರಾಜೇಶ್ ಸಂಗೀತ ನಿರ್ದೇಶನದಲ್ಲಿ ರೀರೆಕಾರ್ಡಿಂಗ್ ಹಾಗೂ ಮಿಕ್ಸಿಂಗ್ ಕಾರ್ಯವು ಸಂಪೂರ್ಣಗೊಂಡಿತು.

ಚಿತ್ರವು ಈ ವಾರ ಸೆನ್ಸಾರ್ ವೀಕ್ಷಣೆಗೆ ಹೋಗಲಿದ್ದು, ಈ ತಿಂಗಳ ಅಂತ್ಯದಲ್ಲಿ ತೆರೆ ಕಾಣಲಿದೆ. ಜಗ್ಗೇಶ್, ಅರ್ಚನಾ, ಉತ್ತರಾ, ಧೀರೇಂದ್ರ ಗೋಪಾಲ್, ಪಾಪಮ್ಮ ಮುಖ್ಯ ಪಾತ್ರಗಳಲ್ಲಿದ್ದಾರೆ.

... ಕರೀಂ ಖಾನ್‌ಗೆ ಸನ್ಮಾನ

ಕರೀಂಖಾನ್ ಅವರಿಗೆ ಆತ್ಮೀಯ ಸನ್ಮಾನ

ಒಂದನೆಯ ಪುಟದಿಂದ

ನಿಮಗೆಲ್ಲಾ ಆ ಭಗವಂತ ಒಳ್ಳೆಯ ... ಬಿಕ್ಕಟ್ಟಿನ ... ಸ್ವಾತಂತ್ರ್ಯಕ್ಕೆ ಮುಳುವಾಗುವಂಥ ಕೆಲಸ ಮಾಡುತ್ತಿರುವವರ ನಿಗ್ರಹಕ್ಕೆ ... ಸಂಬಂಧವಾಗಿ ಮಾಡಿಕೊಂಡ ಅರಿಕೆ ಹೀಗಿತ್ತು. ' ದೇಶ ದ್ರೋಹಿಗಳನ್ನು ಕತ್ತಲಲ್ಲಿ ಇಡು. ಓದಿದರೆ ಅವರ ... ಮಾತು ದೇಶಪ್ರೇಮಿಗಳಿಗೆ ... ಕರೀಂ ಖಾನ್ ಹೆಚ್ಚು ... ಹೋರಾಟ ... ಬೆಳಗಿತು. ... ವಾಣಿಜ್ಯ ಮಂಡಳಿ ಪರವಾಗಿ ಅಧ್ಯಕ್ಷ ... ಈ ಹಿರಿಯ ... ಐದು ಸಾವಿರ ನಗದನ್ನು ನೀಡಿ ಗೌರವಿಸಿದರೆ ಕೆ.ವಿ. ಗುಪ್ತರು ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಲಿ ಪರವಾಗಿ ಶಾಲು ಹೊದಿಸಿ ಸನ್ಮಾನಿಸಿದರು. ಕರ್ನಾಟಕ ಚಲನಚಿತ್ರ ಕಾರ್ಮಿಕ, ತಂತ್ರಜ್ಞ, ಕಲಾವಿದರ ಒಕ್ಕೂಟದ ಪರವಾಗಿ ಅದರ ಅಧ್ಯಕ್ಷ ಅಶೋಕ್ ಅವರೂ ಗೌರವಿಸಿದರು. ಸಿದ್ದಲಿಂಗಯ್ಯ ಫಲಪುಷ್ಪ ಅರ್ಪಿಸಿ ತಮ್ಮ ಗೌರವವನ್ನು ವ್ಯಕ್ತಪಡಿಸಿದರು.

ವಂದನಾರ್ಪಣೆ ಹಂತದಲ್ಲಿ ಮಂಡಳಿ ಕಾರ್ಯದರ್ಶಿ ಥಾಮಸ್ ಡಿಸೋಜಾ ಆಡಿದ ಮಾತು. ... ಕರೀಂ ಖಾನರನ್ನು ಅವರ ಮನೆಗೇ ಹೋಗಿ ಸನ್ಮಾನಿಸುವ ಯೋಚನೆ ಇತ್ತು. ... ಈ ಯೋಚನೆಗೆ ಕಾರಣವಾಗಿತ್ತು. ... ಮೂರ್ತಿಗಳ ಪ್ರಯತ್ನದಿಂದ ಅವರು ... ಮಂಡಲಿ ಸದಾ ಋಣಿ' ಎಂಬ ಅವರ ಮಾತು ಮಾರ್ಮಿಕವಾಗಿತ್ತು.

–ಎಂಕೆಬಿ

ಪ್ರೇಕ್ಷಕ ದನಿ

ವಿಜಯಭಾಸ್ಕರ್‌ಗೆ ಅವಕಾಶ ಕೊಡಿ

ಸಂಗೀತ ನಿರ್ದೇಶಕ ವಿಜಯಭಾಸ್ಕರ ಅವರು ತಮ್ಮ ಮದರಾಸ್ ಮನೆಯನ್ನು ಬಿಟ್ಟು ಬೆಂಗಳೂರಿನಲ್ಲಿ ನೆಲೆಸಿರುವ ವಿಷಯ ಓದಿ ಸಂತೋಷವಾಯಿತು.

ಶಾಸ್ತ್ರೀಯ ಸಂಗೀತವನ್ನೊಳಗೊಂಡ, ಅವರ ಅನೇಕ ಗೀತೆಗಳು ಇಂದಿಗೂ ಕಿವಿಯಲ್ಲಿ ಗುಂಯ್‌ಗುಡುತ್ತಿವೆ. ರವಿ ಮತ್ತು ಪುಟ್ಟಣ್ಣನವರು ನಿರ್ದೇಶಿಸಿದ ಅನೇಕ ಚಿತ್ರಗಳಿಗೆ ಮನಮಿಡಿಯುವಂತಹ ಸಂಗೀತ ಒದಗಿಸಿದ ಈ ನಿರ್ದೇಶಕರನ್ನು ಅವಕಾಶ ವಂಚಿತರನ್ನಾಗಿ ನಿರ್ಮಾಪಕರು ಮಾಡಿದರೆ, ಇವರಿಂದ ಇನ್ನೂ ಅನೇಕ ಚಾರಿತ್ರಿಕ ಗೀತೆಗಳ ಮರುಹುಟ್ಟಿಗೆ ಕಾರಣರಾಗಬೇಕು. ಕೇವಲ ಬೆಂಗಳೂರಿನಲ್ಲಿ ನೆಲೆಸಿದಾಕ್ಷಣ ಅವರ ಹೊಟ್ಟೆ ತುಂಬುವುದಿಲ್ಲ.

ಈಗ ರವಿಯವರು ತಮ್ಮ 'ಎಡಬಿಡಂಗಿ' ಚಿತ್ರಕ್ಕೆ ಅವಕಾಶ ಕೊಟ್ಟಂತೆ ಉಳಿದ ನಿರ್ಮಾಪಕರು ಸಹ ಅವಕಾಶ ನೀಡಿದರೆ, ಕನ್ನಡಿಗರಿಗೆ ಕರ್ಣಾನಂದ ನೀಡುವಂತಹ ಗೀತೆಗಳನ್ನು ಕೇಳುವ ಸುಯೋಗ ಒದಗಿಸಿಕೊಟ್ಟಂತೆ ಆಗುತ್ತದೆ.

ಚಿಕ್ಕಮಗಳೂರು   –ಎಂ.ಸಿ. ಮಂಜುನಾಥ್

ಅಣ್ಣಾವ್ರ ಹೊಸ ಚಿತ್ರ

ಡಾ. ರಾಜ್‌ರವರ ಹೊಸ ಚಿತ್ರ ನವೆಂಬರ್‌ನಲ್ಲಿ ಸೆಟ್ಟೇರಲಿದೆ ಎಂಬ ಸುದ್ದಿ ಹರಡಿದೆ. ಇದು ತುಂಬಾ ಸಂತೋಷದ ವಿಷಯ.

ಅಣ್ಣಾವ್ರ ಚಿತ್ರವನ್ನು ನಿರ್ದೇಶಿಸುವ ಸದವಕಾಶ ಎಸ್ ನಾರಾಯಣ್, ಉಪೇಂದ್ರ ಅಥವಾ ಶಿವರಾಜ್‌ಕುಮಾರ್ ಇವರಲ್ಲಿ ಯಾರಿಗೆ ಲಭಿಸಲಿದೆ? ... ಕಾಯಬೇಕು.

ಬೆಂಗಳೂರು   –ಎ. ಗಿರೀಶ್ ಹರಿಪ್ರಸಾದ್ –ರೂಪಾ, ಸೋಮು

ಅನಂತ್‌ನಾಗ್ ಚಿತ್ರಕ್ಕೆ ಸ್ವಾಗತ

ಸಚಿವ ಅನಂತ್‌ನಾಗ್ ತಾವೇ ಕಥೆ ಬರೆದು ತಾವೇ ನಾಯಕರಾಗಿ ಮೂರು ವರ್ಷಗಳ ನಂತರ ಮತ್ತೆ ಬಣ್ಣದ ಲೋಕಕ್ಕೆ ಮರಳುತ್ತಿರುವುದು ಸಂತಸದ ಸಂಗತಿ. ಕೋಡ್ಲು ರಾಮಕೃಷ್ಣ ನಿರ್ಮಿಸಿ ನಿರ್ದೇಶಿಸುತ್ತಿರುವ 'ನಂದನವನ ಜೋಕಾಲಿ' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕರಾಗಿ ಅಭಿನಯಿಸುತ್ತಿರುವುದು ತುಂಬಾ ಸಂತೋಷದ ಸಂಗತಿ.

ಹೊಸದುರ್ಗ   –ಮೂರಬಗಟ್ಟ ಎಚ್. ಪರಮೇಶ್ವರಾಚಾರ್

ಹಂಸಲೇಖಗೆ ಸರ್ಕಾರದ ಪ್ರೋತ್ಸಾಹ ಏಕಿಲ್ಲ?

ಕರ್ನಾಟಕದಲ್ಲಿ ಹಂಸಲೇಖ ಮನೆ ಮಾತು ... ವರ್ಷಗಳಲ್ಲಿ ಇಷ್ಟೊಂದು ಜನಪ್ರಿಯತೆ ಗಳಿಸಲು ಅವರ ಶ್ರದ್ಧೆ, ಶ್ರಮ, ಸಾಧನೆಯೇ ಕಾರಣ ಎಂದರೆ ತಪ್ಪಿಲ್ಲ. ಕರ್ನಾಟಕ ಜನರ ಪ್ರೀತಿ–ಅಭಿಮಾನ ಗಳಿಸಿರುವ ರಾಗಬ್ರಹ್ಮ ಹಂಸಲೇಖ ಕರ್ನಾಟಕದ ವಾದ್ಯಗಾರರನ್ನೆಲ್ಲಾ ಕಲೆ ಹಾಕಿ ಒಂದು ಸಂಗೀತ ಸಂಘವನ್ನೂ ಮಾಡಿದ್ದಾರೆ. ಇಷ್ಟೆಲ್ಲಾ ಮಾಡುತ್ತಿರುವ ಅವರಿಗೆ ಸರ್ಕಾರದ ಪ್ರೋತ್ಸಾಹವೇಕಿಲ್ಲ?

ಹಂಸಲೇಖ

ಚೋಳಕೆರೆ   –ಬಿ.ಪಿ. ಅಣ್ಣಯ್ಯಾಚಾರ್

'ಕರಡಿಪುರ'ಕ್ಕೆ ಅಭಿನಂದನೆ

ಬರಗೂರು ರಾಮಚಂದ್ರಪ್ಪನವರ 'ಕರಡಿಪುರ' ಚಿತ್ರ ಬ್ರಿಟನ್ನಿನ 'ಲೀಡ್ಸ್' ಚಿತ್ರೋತ್ಸವಕ್ಕೆ ಆಯ್ಕೆಯಾಗಿರುವ ವಿಷಯ ತಿಳಿದು ಮನಸ್ಸಿಗೆ ಬಹಳ ಸಂತೋಷವಾಯಿತು. ಇಲ್ಲಿಯ ಬುಡಕಟ್ಟು ಜನಜೀವನ ಸಂಸ್ಕೃತಿಯ ವಸ್ತು ಇಳ್ಳ ಈ ಚಿತ್ರ ನಮ್ಮ ನಾಡು–ನುಡಿಗೆ ತೀರ ಅಪರಿಚಿತವಾದ ಮನಸುಗಳಿಗೆ ತಾಕಬೇಕಾಗಿದೆ. ಈ ಚಿತ್ರದ ಅನನ್ಯತೆಯನ್ನು ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ.

'ಕರಡಿಪುರ' ಚಿತ್ರ ತಯಾರಾಗಿ ಬಹಳ ದಿನಗಳು ಕಳೆದರೂ ಕನ್ನಡಿಗರು ಚಿತ್ರ ನೋಡುವ ಭಾಗ್ಯ ಪಡೆಯದಿರುವುದು ನಿಜಕ್ಕೂ ಖೇದನೀಯ. ಒಟ್ಟಿನಲ್ಲಿ ಕನ್ನಡ ಚಿತ್ರ ವಿದೇಶ ತಲುಪಿ ಮನ್ನಣೆ ಪಡೆಯುತ್ತಿರುವುದು ಕನ್ನಡಿಗರು ಹೆಮ್ಮೆ ಪಡುವ ವಿಚಾರವಾಗಿದೆ. 'ಕರಡಿಪುರ'ದ ಮುಖ್ಯ ನಿರ್ಮಾತೃ ಬರಗೂರು ರಾಮಚಂದ್ರಪ್ಪನವರಿಗೆ ಅಭಿನಂದನೆಗಳು.

ತಿಪ್ಪಸಂದ್ರ (ಮಾಗಡಿ)   –ನಾಗವಾಣಿ ಸತೀಶ್

'ಸಿಂಹಾದ್ರಿಯ ಸಿಂಹ'!

ವಿಷ್ಣುವರ್ಧನ್ ನಾಯಕತ್ವದಲ್ಲಿ ನಿರ್ದೇಶಕ ಎಸ್ ನಾರಾಯಣ್ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸುತ್ತಾರೆಂದು ತಿಳಿದು ಆನಂದವಾಯಿತು. ಈ ಹೊಸ ಚಿತ್ರಕ್ಕೆ 'ಸಿಂಹಾದ್ರಿಯ ಸಿಂಹ' ಎಂದು ಹೆಸರಿಡಲಿ. ಚಿತ್ರವು ಆದಷ್ಟು ಬೇಗ ನಿರ್ಮಾಣಗೊಳ್ಳಲಿ.

ಅಲ್ಲದೆ ವಿಷ್ಣುವರ್ಧನ್, ರಮೇಶ್ ಕನಿಷ್ಠ ಐದು ಚಿತ್ರಗಳಲ್ಲಿ ಒಟ್ಟಿಗೆ ಅಭಿನಯಿಸಲಿ. ಚಿತ್ರಗಳನ್ನು ದಿನೇಶ್‌ಬಾಬು, ಸುನಿಲ್‌ಕುಮಾರ್ ದೇಸಾಯಿ, ಎಸ್ ನಾರಾಯಣ್ ಮತ್ತು ಎಸ್ ಮಹೇಂದರ್ ಅವರುಗಳೇ ನಿರ್ದೇಶಿಸಲಿ.

ನಂಜನಗೂಡು   –ವಿ. ಉಮಾಮಹೇಶ್ವರನ್

ವಿಭಿನ್ನ ಚಿತ್ರ 'ಪುಟ್ಟಾಮಿ'

ವಿ. ಉಮಾಕಾಂತ್ ನಿರ್ದೇಶನದ ಮಿಸ್ಟರ್ ಪುಟ್ಸಾಮಿ ಚಿತ್ರ ವಿಭಿನ್ನವಾಗಿದೆ. ಚಿತ್ರಕಥೆಯೂ ವಿಭಿನ್ನವಾಗಿರುವುದರಿಂದ ಮೊದಲ ... ಚಿತ್ರ ... ಇಚ್ಛೆಗನುಗುಣವಾಗಿ ಸಾಮಾಜಿಕ ಕಥೆಯಲ್ಲಿ ... ಪ್ರಶ್ನೆಗಳನ್ನು ಎತ್ತಿರುವುದು ಆಕರ್ಷಣೀಯ.

ಚಿಕ್ಕಹನುಮೇನಹಳ್ಳಿ   –ಎಚ್ ಆರ್ ಪ್ರಭಾಕರ್

ನಿಜಜೀವನದ ಹೀರೊ ಓಂಪುರಿ

ಕಷ್ಟ–ಸುಖಗಳು ಮಾನವನ ಜೀವನದಲ್ಲಿ ಇದದ್ದೇ ಆದರೆ ಇವೆರಡು ಜೀವನದಲ್ಲಿ ಒಂದಾಗಿ ಹಂಚಿಕೊಳ್ಳಲು ಬೇರೊಬ್ಬರ ಸಹಕಾರ ಅನಿವಾರ್ಯ. ... ಅನುಕಂಪದ ಮಾತು ಅಥವಾ ಸಹಾಯ ನೀಡುವವರಲ್ಲಿ ಹೊಸ ಜೀವನೋತ್ಸಾಹವನ್ನು ತುಂಬುತ್ತದೆ ಅಲ್ಲವೆ?

ನಗರದ ಶಾಲೆಯ ಬಾಲಕಿಯೊಬ್ಬಳು ಶಿಕ್ಷಕಿಯ ಅಚಾತುರ್ಯದ ಶಿಕ್ಷೆಯಿಂದಾಗಿ ತನ್ನ ಕಣ್ಣನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ... ಪ್ರತಿಭಾವಂತ ನಟರೆನಿಸಿದ ಓಂಪುರಿಯವರು ಬಾಲಕಿಯ ಬಗ್ಗೆ ತೀರಾ ಕಾಳಜಿಯ ಚಿಕಿತ್ಸೆಗೆ ಹಣದ ಸಹಾಯ ಮಾಡಿ ಹೆತ್ತವರಿಗೆ ಸಾಂತ್ವನ ಹೇಳಿ ಬಂದ ಸುದ್ದಿ ಹೃದಯ ಮಿಡಿಸುವಂತಹುದು.

ಎಷ್ಟು ಜನರಿಗೆ ಈ ಸಹಾಯ ಮನೋಭಾವವಿದೆ? ಸಿನಿಮಾದಲ್ಲಿ ಸಾಮಾಜಿಕ ಕಳಕಳಿಯ ನಾಯಕನ ಪಾತ್ರಗಳಲ್ಲಿ ಮಿಂಚುವುದು ಸುಲಭ. ಆದರೆ ನಿಜ ಜೀವನದಲ್ಲಿ ಮೆರೆಯಬೇಕಾದರೆ ಮಾನವೀಯ ಗುಣಗಳು ಅಗತ್ಯ. ... ನಾಯಕರು, ಹಾಗು ಪ್ರತಿಷ್ಠಿತರೆನಿಸಿರುವ ಮಂದಿಗಳು ಈ ಬಗ್ಗೆ ಚಿಂತಿಸಲು ಕೂಡ ಸಮಯವಿಲ್ಲದವರಂತೆ ಇದ್ದಾಗ, ಮಾನವೀಯತೆ ಮೆರೆದ ಓಂಪುರಿಯವರು ಇವರೆಲ್ಲರಿಗಿಂತ ಭಿನ್ನವಾಗಿ ಕಾಣುತ್ತಾರಲ್ಲವೆ?. ಬಾಲಕಿಗೆ ಸಹಾಯ ಹಸ್ತ ನೀಡಿದ ಓಂಪುರಿಯವರಿಗೆ ಪ್ರಜಾವಾಣಿಯ ಮೂಲಕ ನನ್ನ ಅಭಿನಂದನೆಗಳು.

ಬೆಂಗಳೂರು   -ಸಂದೀಪ್ ದುಗಡಿಹಳ್ಳಿ



ಕರಗ   ...

ಸಿನಿಮಾ ರಂಜನೆ

'ಹಸಿವಿನಿಂದ ಸತ್ತವರು....' 'ಪ್ರತಿಭಟನೆ'ಗೆ

ಪ್ರತಿಭಟನೆ — ಕೆ.ಶಿವರಾಮು, ವಿಜಯಲಕ್ಷ್ಮಿ

ಶಿವಾಲಯ [illegible] ಲಾಂಛನದಲ್ಲಿ ಎ.ಪಿ. ರವಿ ನಿರ್ಮಿಸುತ್ತಿರುವ "ಪ್ರತಿಭಟನೆ" ಚಿತ್ರಕ್ಕೆ ಕವಿ [illegible] ರಚಿಸಿರುವ ಹಸಿವಿನಿಂದ ಸತ್ತವರು, ಕೈಜುಗ್ಗಿ ಹೊಡೆಸಿಕೊಂಡು ಒರಗಿದವರು ನನ್ನ ಜನಗಳು/ [illegible] ಕೈಯ ಹಿಡಿದವರು, ಕೈ ಮಡಗಿಸಿಕೊಳ್ಳುವವರು, ಭಕ್ತರಿದ್ದ ಭಕ್ತರೇ ನನ್ನ ಜನಗಳು' ಎಂಬ ಹಾಡಿನ ಚಿತ್ರೀಕರಣ [illegible]ದಲ್ಲಿ ಇತ್ತೀಚೆಗೆ ನಡೆಯಿತು.

[illegible]ಯೊಂದರಲ್ಲಿ ನಡೆದ ಸತ್ಯ ಘಟನೆಯ ಸುತ್ತ ಹೆಣೆಯಲಾದ ಕಥೆಯನ್ನು ಕೆ. ಶಿವರಾಮು ಅವರು ಬರೆದಿದ್ದಾರೆ.

ಚಿತ್ರಕಥೆ, ಸಂಭಾಷಣೆ ನಿರ್ದೇಶನ ಎಂ ರಾಜೇಂದ್ರಕುಮಾರ್ ಆರ್ಯ ಅವರದು.

ಆರ್.ಸಿ. ಮಾಕಾಕ್ಷಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು, ಸಂಗೀತವನ್ನು ವಿ. ಮನೋಹರ್ ನೀಡಿದ್ದಾರೆ.

ಶೀಘ್ರವೇ ತೆರೆ ಕಾಣಲಿರುವ ಈ ಚಿತ್ರದ ಮುಖ್ಯ ತಾರಾಬಳಗದಲ್ಲಿ ಕೆ. ಶಿವರಾಮು, ವಿಜಯಲಕ್ಷ್ಮಿ, ಕಾಂಚನ, ಅರವಿಂದ್, ಕೀರ್ತಿ, ಬಿರಾದಾರ್, ಹೊನ್ನವಳ್ಳಿ ಕೃಷ್ಣ, ಕರಿಬಸವಯ್ಯ, ಶನಿಮಹದೇವಪ್ಪ, ಮಾಸ್ಟರ್ ಮಹಾಂತೇಶಯ್ಯ, ಜವಳಿ ಮಂತ್ರಿ ಎಂ ಎಸ್ ಪಾಟೀಲ್ ಅವರು ಇದ್ದಾರೆ.

ಆಟೋ ಚಾಲಕನ ಪರ ದೇವರಾಜ್ ವಾದ

'ಒಂದು ಸಾರಿ ಒದೇ ಒಂದು ಸರ್ತಿ ಯೋಚನೆ ಮಾಡಿ. ಈ ವ್ಯಕ್ತಿ [illegible]. ಸಾಗಿದೋಷ್ಟೆ ಆಗಿದ್ರೇ ಅವನು ಇವತ್ತು [illegible] ಇರ್ತಿದ್ನಾ? ಅವನ ಹೆಂಡ್ತಿ, ಅಣ್ಣ [illegible] ಆಷ್ಟೆ ಯಾಕೆ ಈ ಕೋರ್ಟು ಮೆಟ್ಟಿಲು ಹತ್ತುತ್ತಾ [illegible] ಎಂದು ದೇವರಾಜ್ [illegible] ಆಟೋ ಡ್ರೈವರ್ ಒಬ್ಬನನ್ನು [illegible] ಎಂದು ಕೋರ್ಟನಲ್ಲಿ ವಾದಿಸುವ ದೃಶ್ಯವನ್ನು [illegible] ಲಾಂಛನದಲ್ಲಿ ಇಕ್ಬಾಲ್ ರಾಜ್ ನಿರ್ಮಿಸುತ್ತಿರುವ 'ಮಿಸ್ಟರ್ ಎಕ್ಸ್' ಚಿತ್ರಕ್ಕಾಗಿ ಹ.ಸೂ. ರಾಜಶೇಖರ್ ನಿರ್ದೇಶನದಲ್ಲಿ ರಮೇಶ್‌ಬಾಬು ಚಿತ್ರೀಕರಿಸಿದರು.

ಸಾಧುಕೋಕಿಲಾ ಸಂಗೀತ ನೀಡಿರುವ ಈ ಚಿತ್ರದ ಮುಖ್ಯ ಭೂಮಿಕೆಯಲ್ಲಿ ದೇವರಾಜ್, ರಾಜಾ, ದಾಮಿನಿ, ಸ್ವರ್ಣ, ಶೋಭರಾಜ್, ಸತ್ಯಜಿತ್, ಸುನೀಲ್ ಪುರಾಣಿಕ್, ವೆಂಕಟೇಶ್, ಬ್ಯಾಂಕ್ ಜನಾರ್ಧನ್, ಎಂ.ಎಸ್. ಕಾರಂತ್, ಅಗ್ರೋಚಿಕ್ಕಣ್ಣ, ರಮ್ಯ, ಶಾಂತಮ್ಮ ಇದ್ದಾರೆ.

ಪ್ರಭಾಕರ್ ಹೊಡೆದಾಟ

ಪ್ರಭಾಕರ್ ಹೊಡೆದಾಟದಲ್ಲಿ ಪಾಲ್ಗೊಂಡಿದ್ದ ದೃಶ್ಯವನ್ನು ಶ್ರೀಮತಿ ಅನಿತಾ ಕೃಷ್ಣನ್ ನಿರ್ಮಿಸುತ್ತಿರುವ "ಗುಡ್ ಬ್ಯಾಡ್ ಅಗ್ಲಿ" ಚಿತ್ರಕ್ಕಾಗಿ ಆರ್ ಇನ್ ಆರ್ ಪ್ರಭಾಕರ್ ಚಿತ್ರೀಕರಿಸಿಕೊಂಡರು. ಇದರಲ್ಲಿ ಪ್ರಭಾಕರ್‌ದು ದ್ವಿಪಾತ್ರ.

ಮಿ ಎಕ್ಸ್. — ದೇವರಾಜ್ ಮತ್ತು ಸಹಕಲಾವಿದರು

ಚಿತ್ರಬಂಧ—288



ಎಡದಿಂದ ಬಲಕ್ಕೆ

1. [illegible] (2)
3. [illegible] ಯುದ್ಧ (3)
5. [illegible] (2)
6. [illegible] (4)
8. [illegible] (4)
10. [illegible] (2)
11. [illegible] (2)
12. [illegible] (2)
14. [illegible] (2)
15. [illegible] (2)
16. [illegible] (2)
18. [illegible] (3)
19. [illegible] (2)
21. [illegible] (2)
22. [illegible] (2)
23. [illegible] (2)
25. [illegible] (2)
26. ದೊರೆ — ಭಗವಾನ್ ಅವರ ಮಾತು ಕೇಳದ ವಾಯು (2)
27. ಸಂಗೀತಕ್ಕೆ ಬೇಕಾದ ಇದು ಜಯಮಾಲ ನಾಯಕಿಯಾದಾಗ ಬಂದದ್ದು (4)
28. ಜೀವನದಲ್ಲಿ ಬಾಳ್ವೆ ಹೀಗಿರಬೇಕು (4)
30. ಪ್ರೇಮದಿಂದ ಬಂದ ಮಗಳು (2)
31. ನಾನು ನಿನ್ನ ವಶವಾದಾಗ ಏಕೇ ಅವಸರ (3)
32. ಹಾರುತಿರುವ ಹಕ್ಕಿ ಬಿಡಿದದ್ದು (2)

ಮೇಲಿನಿಂದ ಕೆಳಕ್ಕೆ

2. ಬೇಲೂರು ಬಾಲೆಯು ಪ್ರತಿನಿಧಿಯಾದ ಈ ಹೂವು ಇಲ್ಲಿದೆ ಕಕ್ಕ (5)
3. [illegible] (2)
4. ಮೂವತ್ತರಿಂದ ಮುಂದೆ ಬಂದಾತ (2)
5. 'ಧರ್ಮ' ಚಿತ್ರದಲ್ಲಿ ರಾಜ್‌ಕುಮಾರ್ ಹಾಡಿದಂತೆ ಜನ್ಮ ಪಡೆದ ವಾದದೊಂದಿಗಿನ ಗಂಗೆ ಮಾಡಿದ ಪವಿತ್ರ (5)
7. ಅರವಿಂದವಾದಂತಹ ಮೊಗ (3)
9. ಬುಸ್ ಬುಸ್ ಎನ್ನುವಂತೆ ಇದ್ದ ಖಳನಟ (3)
13. ಎಚ್.ಎಲ್.ಎನ್. ಸಿಂಹ ನಿರ್ದೇಶನದ ಗುಬ್ಬಿ ವೀರಣ್ಣ ನಿರ್ಮಾಣದ ಚಿತ್ರ (5)
14. ರಾಜಾಶಂಕರ್—ಹರಿಣಿ ಅಭಿನಯದ ಚಿತ್ರ (5)
15. ಪರಶುರಾಮ[illegible] ನಿರ್ದೇಶಕ (3)
17. ಬೆಟ್ಟಗಳ ಪ್ರದೇಶ — ಸೋಮನಹಳ್ಳಿ ಹಾಡಿಗೆ ಹೀಗಾಯಿತು (3)
20. ವಿಷ್ಣುವರ್ಧನ್, ಭಾರತಿ, ಪದ್ಮಪ್ರಿಯ ಅಭಿನಯದ ಚಿತ್ರ (5)
21. ಮರವು ಬಳ್ಳಿಗಾಸರೆಯಾದರೆ ಬಳ್ಳಿ— (5)
22. 'ಸಂಕ್ರಾಂತಿ' ಚಿತ್ರದ ನಾಯಕಿ (3)
24. [illegible] ಅಮ್ಮಯ್ಯ ಎಂದಾಗ ಇದೇ ತಾಯಿ—ತಂದೆ (3)
28. [illegible] (2)
29. [illegible] (2)

287ರ ಉತ್ತರ



'ಬಯಲುದೀಪ' — ಸಿತಾರಾ

ಮೈಸೂರಿನಲ್ಲಿ ಹಾಡಿದ 'ವೀರಣ್ಣ'

ತನುಚಿತ್ರ ಲಾಂಛನದಡಿ ನಿರ್ಮಾಪಕ ಸಾ.ರಾ. ಗೋವಿಂದು ನಿರ್ಮಿಸುತ್ತಿರುವ "ವೀರಣ್ಣ" ಚಿತ್ರಕ್ಕಾಗಿ ಮೈಸೂರು ಬಳಿಯಿರುವ ಚಿಕ್ಕಾಡೆಯಲ್ಲಿ ಚಿತ್ರೀಕರಣ ನಡೆಸಲಾಗುತ್ತಿದೆ. ಇತ್ತೀಚೆಗೆ ಇಲ್ಲಿ ಎರಡು ಗೀತೆಗಳನ್ನು ಚಿತ್ರಿಸಿಕೊಳ್ಳಲಾಯಿತು.

ವೃಂದಾವನ, ಬಲಮುರಿ ಫಾಲ್ಸ್ ಹಾಗೂ ಮೈಸೂರು-ಸುತ್ತಮುತ್ತ [illegible] ಪ್ರದೇಶಗಳಲ್ಲಿ ಜಗ್ಗೇಶ್, ರವಳಿ ಅಭಿನಯದಲ್ಲಿ ಪ್ರಸಾದ್ ನೃತ್ಯ ನಿರ್ದೇಶನದೊಂದಿಗೆ ಜೆ.ಜೆ. ಕೃಷ್ಣರ ಛಾಯಾಗ್ರಹಣದಲ್ಲಿ ನಿರ್ದೇಶಕ ವಾಸು ಚಿತ್ರಿಸಿಕೊಂಡರು. ಇದಲ್ಲದೆ ಚಿಕ್ಕಾಡೆಯಲ್ಲಿ ಜಗ್ಗೇಶ್, ರವಳಿ, ಶ್ರೀನಾಥ್, ಧೀರೇಂದ್ರ ಗೋಪಾಲ್ ಟೆನ್ನಿಸ್‌ಕೃಷ್ಣ ಹಾಗೂ ಸಾಹಸ ಕಲಾವಿದರನ್ನು ಬಳಸಿ ಕ್ಲೈಮ್ಯಾಕ್ಸ್ ಸನ್ನಿವೇಶವನ್ನೂ ಕೆ.ಡಿ. ವೆಂಕಟೇಶ್ ಸಾಹಸ ನಿರ್ದೇಶನದಲ್ಲಿ ಚಿತ್ರಿಸಿಕೊಳ್ಳಲಾಯಿತು. ಚಿತ್ರಕ್ಕೆ ಸದ್ಗುಣರಾಜ್ ಸಂಗೀತವಿದೆ.

ಮುಖ್ಯ ಭೂಮಿಕೆಯಲ್ಲಿ ಜಗ್ಗೇಶ್, ರವಳಿ, ಶ್ರೀನಾಥ್, ಧೀರೇಂದ್ರ ಗೋಪಾಲ್, ಲೋಕನಾಥ್, ಅನುರಾಧ, ಟೆನ್ನಿಸ್‌ಕೃಷ್ಣ, ಹೊನ್ನವಳ್ಳಿ ಕೃಷ್ಣ, ವೆಂಕಟೇಶ್, ಬ್ಯಾಂಕ್ ಜನಾರ್ಧನ್ ಇದ್ದಾರೆ.

ದ್ವಿತೀಯ ಹಂತ ಮುಗಿಸಿದ ಆರ್ಯಭಟ

ಅಂಟಳಿ ಆರ್ಟ್ಸ್ (ಮೈಸೂರು) ಲಾಂಛನದಡಿ ಶ್ರೀಮತಿ ಮತ್ತು ಶ್ರೀರಾಮನ್ (ಪಿಟ್ಸ್‌ಬರ್ಗ್) ಅರ್ಪಿಸಿ ಎ.ಎನ್. ಬಾಲು ನಿರ್ಮಿಸುತ್ತಿರುವ "ಆರ್ಯಭಟ" ಚಿತ್ರದ ದ್ವಿತೀಯ ಹಂತದ ಚಿತ್ರೀಕರಣ ಮುಗಿದಿದೆ.

ರಮೇಶ್, ಸೌಂದರ್ಯ, ಗಿರೀಶ್‌ಶೆಟ್ಟಿ, ರಮ್ಯ ಹಾಗೂ ಸಿ.ಬಿ.ಐ. ಅಧಿಕಾರಿ ಪಾತ್ರದಲ್ಲಿ ನಟಿಸಿರುವ ನಟ ದೇವರಾಜ್ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಬಿ.ಸಿ. ಗೌರಿಶಂಕರ್ ಛಾಯಾಗ್ರಹಣದಲ್ಲಿ ನಿರ್ದೇಶಕ ರಾಮನಾಥ್, ಸುಬ್ರಹ್ಮಣ್ಯ ನಗರ, ಬನ್ನೇರುಘಟ್ಟ ರಸ್ತೆ ಹಾಗೂ ನಗರದ ಮತ್ತಿಕೆರೆ ಕಡೆಗಳಲ್ಲಿ ಹಲವು ಸನ್ನಿವೇಶಗಳನ್ನು ಚಿತ್ರಿಸಿಕೊಂಡರು.

ಚಿತ್ರದ ಉಳಿದ ತಾರಾಗಣದಲ್ಲಿ ರಮ್ಯ, ಅವಿನಾಶ್, ಸುಧಾಕರ್ ಪಾಟೀಲ್, ಬ್ಯಾಂಕ್ ಜನಾರ್ಧನ್, ಗಿರೀಶ್‌ಶೆಟ್ಟಿ, ಭಾಗೀರಥಿ (ಅಸ್ಸಾಮಿ), ರಘುನಾಥ್ (ರಂಗಾಯಣ) ಮಾಸ್ಟರ್ ವಿನಾಯಕಜೋಶಿ ಇದ್ದಾರೆ.

'ನಂಬರ್ ಒನ್' — ರಾಮ್‌ಕುಮಾರ್

ಮಾರೀಕಣ್ಣು.. ರೀರೆಕಾರ್ಡಿಂಗ್

ಬೆಸ್ಟ್ ಫಿಲಂಸ್ ಲಾಂಛನದಡಿ ನಾಗಮಣಿ, ಕೇಶವ, ಸರಸಿಂತ, ವಿ.ಕೆ. ಕೇಶವಪ್ರಸಾದ್ ನಿರ್ಮಿಸುತ್ತಿರುವ "ಮಾರೀಕಣ್ಣು ಹೋರಿಮ್ಯಾಗೆ" ಚಿತ್ರಕ್ಕಾಗಿ ಇತ್ತೀಚೆಗೆ ನಗರದ ಪ್ರಸಾದ್ ರೆಕಾರ್ಡಿಂಗ್ ಥಿಯೇಟರ್‌ನಲ್ಲಿ ರಾಜೇಶ್ ಸಂಗೀತ ನಿರ್ದೇಶನದಲ್ಲಿ ರೀರೆಕಾರ್ಡಿಂಗ್ ಹಾಗೂ ಮಿಕ್ಸಿಂಗ್ ಕಾರ್ಯವು ಸಂಪೂರ್ಣಗೊಂಡಿತು.

ಚಿತ್ರವು ಈ ವಾರ ಸೆನ್ಸಾರ್ ವೀಕ್ಷಣೆಗೆ ಹೋಗಲಿದ್ದು, ಈ ತಿಂಗಳ ಅಂತ್ಯದಲ್ಲಿ ತೆರೆ ಕಾಣಲಿದೆ. ಜಗ್ಗೇಶ್, ಅರ್ಚನಾ, ಚಿತ್ರಾ, ಧೀರೇಂದ್ರ ಗೋಪಾಲ್, ಪಾಪಮ್ಮ ಮುಖ್ಯ ಪಾತ್ರಗಳಲ್ಲಿದ್ದಾರೆ.

... ಕರೀಂ ಖಾನ್‌ಗೆ ಸನ್ಮಾನ

ಕರೀಂಖಾನ್ ಅವರಿಗೆ ಆತ್ಮೀಯ ಸನ್ಮಾನ.

[illegible] "ನಮಗೆಲ್ಲಾ ಆ ಭಗವಂತ [illegible] ದಕ್ಕೇ [illegible] ಎಂದು ಮತ್ತೆ ಮತ್ತೆ [illegible] ಅವರು. [illegible] ದೇಶದ ಸ್ವಾತಂತ್ರ್ಯಕ್ಕೆ [illegible] ಭಗವಂತನ ಅವರು. ಈ [illegible] ಮಾಡಿಕೊಂಡ ಅವರಿಗೆ [illegible] ಇರುವ ಬೇಗೆ ಹಾಕಿ. [illegible] ಅವರ ಮಾತು [illegible] ಕೇಳಿಸುತ್ತಿತ್ತು.

ಕರೀಂ ಖಾನ್ ಹೆಚ್ಚು ಮಾತನಾಡಲಿಲ್ಲ. ಆದರೆ ಆಡಿದಷ್ಟು ಮಾತು ಅವರ ಸ್ವಾಭಿಮಾನ [illegible] ಬೀರಿತು.

ವಾಣಿಜ್ಯ ಮಂಡಲಿ ಪರವಾಗಿ ಅಧ್ಯಕ್ಷ [illegible] ಈ [illegible] ಜೊತೆಗೆ ಐದು ಸಾವಿರ ನಗದನ್ನು ನೀಡಿ ಗೌರವಿಸಿದರೆ ಕೆ.ವಿ. ಗುಪ್ತರು ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಲಿ ಪರವಾಗಿ ಶಾಲು ಹೊದಿಸಿ ಸನ್ಮಾನಿಸಿದರು. ಕರ್ನಾಟಕ ಚಲನಚಿತ್ರ ಕಾರ್ಮಿಕ, ತಂತ್ರಜ್ಞ, ಕಲಾವಿದರ ಒಕ್ಕೂಟದ ಪರವಾಗಿ ಅದರ ಅಧ್ಯಕ್ಷ ಅಶೋಕ್ ಅವರೂ ಗೌರವಿಸಿದರು. ಸಿದ್ದಲಿಂಗಯ್ಯ ಫಲಪುಷ್ಪ ಅರ್ಪಿಸಿ ತಮ್ಮ ಗೌರವವನ್ನು ವ್ಯಕ್ತಪಡಿಸಿದರು.

[illegible] ಸಂದರ್ಭದಲ್ಲಿ ಮಂಡಲಿ ಕಾರ್ಯದರ್ಶಿ ಥಾಮಸ್ ಡಿಸೋಜಾ ಆಡಿದ ಮಾತು ಉದ್ಯಮದ ಭಾವನೆಗೆ ನಾಲಗೆಯನ್ನು ನೀಡಿದಂತಿತ್ತು. 'ಕರೀಮ್ ಖಾನರನ್ನು ಅವರ ಮನೆಗೇ ಹೋಗಿ ಸನ್ಮಾನಿಸುವ ಯೋಚನೆ ಇತ್ತು. ಇಷ್ಟು [illegible] ಅವರ. ಬರುತ್ತಾರೋ ಇಲ್ಲವೋ ಎನ್ನುವುದು ಈ ಯೋಚನೆಗೆ ಕಾರಣವಾಗಿತ್ತು. ಆದರೆ [illegible] ಹಾಗೂ [illegible] ಅವರು. ಇಲ್ಲಿಗೆ [illegible] ವಾಣಿಜ್ಯ ಮಂಡಲಿ ಸದಾ ಋಣಿ' ಎಂಬ ಅವರ ಮಾತು [illegible]ವಾಗಿತ್ತು.

—ಎಂಕೆಬಿ

ಪ್ರೇಕ್ಷಕ ದನಿ

ವಿಜಯಭಾಸ್ಕರ್‌ಗೆ ಅವಕಾಶ ಕೊಡಿ

ಸಂಗೀತ ನಿರ್ದೇಶಕ ವಿಜಯಭಾಸ್ಕರ ಅವರು ತಮ್ಮ ಮದರಾಸ್ ಮನೆಯನ್ನು ಬಿಟ್ಟು ಬೆಂಗಳೂರಿನಲ್ಲಿ ನೆಲೆಸಿರುವ ವಿಷಯ ಓದಿ ಸಂತೋಷವಾಯಿತು.

ಶಾಸ್ತ್ರೀಯ ಸಂಗೀತವನ್ನೊಳಗೊಂಡ, ಅವರ ಅನೇಕ ಗೀತೆಗಳು ಇಂದಿಗೂ ಕಿವಿಯಲ್ಲಿ ಗುಂಯ್‌ಗುಡುತ್ತಿವೆ. ರವಿ ಮತ್ತು ಪುಟ್ಟಣ್ಣನವರು ನಿರ್ದೇಶಿಸಿದ ಅನೇಕ ಚಿತ್ರಗಳಿಗೆ ಮನಮಿಡಿಯುವಂತಹ ಸಂಗೀತ ಒದಗಿಸಿದ ಈ ನಿರ್ದೇಶಕರನ್ನು ಅವಕಾಶ ವಂಚಿತರನ್ನಾಗಿ ನಿರ್ಮಾಪಕರು ಮಾಡದೆ, ಇವರಿಂದ ಇನ್ನೂ ಅನೇಕ ಚಾರಿತ್ರಿಕ ಗೀತೆಗಳ ಮರುಹುಟ್ಟಿಗೆ ಕಾರಣರಾಗಬೇಕು. ಕೇವಲ ಬೆಂಗಳೂರಿನಲ್ಲಿ ನೆಲೆಸಿದಾಕ್ಷಣ ಅವರ ಹೊಟ್ಟೆ ತುಂಬುವುದಿಲ್ಲ.

ಈಗ ರವಿಯವರು ತಮ್ಮ 'ಎಡಬಿಡಂಗಿ' ಚಿತ್ರಕ್ಕೆ ಅವಕಾಶ ಕೊಟ್ಟಂತೆ ಉಳಿದ ನಿರ್ಮಾಪಕರು ಸಹ ಅವಕಾಶ ನೀಡಿದರೆ, ಕನ್ನಡಿಗರಿಗೆ ಕರ್ಣಾನಂದ ನೀಡುವಂತಹ ಗೀತೆಗಳನ್ನು ಕೇಳುವ ಸುಯೋಗ ಒದಗಿಸಿಕೊಟ್ಟಂತೆ ಆಗುತ್ತದೆ.

ಚಿಕ್ಕಮಗಳೂರು —ಎಂ.ಪಿ. ಮಂಜುನಾಥ್

ಅಣ್ಣಾವ್ರ ಹೊಸ ಚಿತ್ರ

ಡಾ. ರಾಜ್‌ರವರ ಹೊಸ ಚಿತ್ರ ನವೆಂಬರ್‌ನಲ್ಲಿ ಸೆಟ್ಟೇರಲಿದೆ ಎಂಬ ಸುದ್ದಿ ಹರಡಿದೆ. ಇದು ತುಂಬಾ ಸಂತೋಷದ ವಿಷಯ.

ಅಣ್ಣಾವ್ರ ಚಿತ್ರವನ್ನು ನಿರ್ದೇಶಿಸುವ ಸದವಕಾಶ ಎಸ್ ನಾರಾಯಣ್, ಉಪೇಂದ್ರ ಅಥವಾ ಶಿವರಾಜ್‌ಕುಮಾರ್ ಇವರಲ್ಲಿ ಯಾರಿಗೆ 'ಲಭಿಸಲಿದೆ' [illegible] ಕಾಯಬೇಕು.

ಬೆಂಗಳೂರು —ಆರ್. ಗಿರೀಶ್ [illegible]
—ರೂಪಾ. ಸೋಮು

ಅನಂತ್‌ನಾಗ್ ಚಿತ್ರಕ್ಕೆ ಸ್ವಾಗತ

[illegible] ಅನಂತ್‌ನಾಗ್ ತಾವೇ ಕಥೆ ಬರೆದು ತಾವೇ ನಾಯಕನಾಗಿ ಮೂರು ವರ್ಷಗಳ ನಂತರ ಮತ್ತೆ ಬಣ್ಣದ ಲೋಕಕ್ಕೆ ಮರಳುತ್ತಿರುವುದು ಹೊಸದ ಸಂಗತಿ. ಕೋಡ್ಲು ರಾಮಕೃಷ್ಣ ನಿರ್ದೇಶಿಸುತ್ತಿರುವ '[illegible]' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕರಾಗಿ ಅಭಿನಯಿಸುತ್ತಿರುವುದು ತುಂಬಾ ಸಂತೋಷದ ಸಂಗತಿ.

ಹೊಸದುರ್ಗ —ಮಾರಬಗಟ್ಟ ಎಚ್. ಪರಮೇಶ್ವರಾಚಾರ್

ಹಂಸಲೇಖಗೆ ಸರ್ಕಾರದ ಪ್ರೋತ್ಸಾಹ ಏಕಿಲ್ಲ?

ಕರ್ನಾಟಕದಲ್ಲಿ ಹಂಸಲೇಖ ಮನೆ ಮಾತು. ಅತ್ಯಂತ [illegible]. ವರ್ಷಗಳಲ್ಲಿ ಇಷ್ಟೊಂದು ಜನಪ್ರಿಯತೆ ಗಳಿಸಲು ಅವರ ಶ್ರದ್ಧೆ, ಶ್ರಮ ಸಾಧನೆಯೇ ಕಾರಣ ಎಂದರೆ ತಪ್ಪಿಲ್ಲ. ಕರ್ನಾಟಕ ಜನರ ಪ್ರೀತಿ—ಅಭಿಮಾನ ಗಳಿಸಿರುವ ರಾಗಬ್ರಹ್ಮ ಹಂಸಲೇಖ ಕರ್ನಾಟಕದ ವಾದ್ಯಗಾರರನ್ನೆಲ್ಲಾ ಕಲೆ ಹಾಕಿ ಒಂದು ಸಂಗೀತ ಸಂಘವನ್ನೂ ಮಾಡಿದ್ದಾರೆ. ಇಷ್ಟೆಲ್ಲಾ ಮಾಡುತ್ತಿರುವ ಅವರಿಗೆ ಸರ್ಕಾರದ ಪ್ರೋತ್ಸಾಹವೇನು?



ಹಂಸಲೇಖ

ಟೋಕಿರೆ —ಬಿ.ಪಿ. ಆದ್ಯಯ್ಯಚಾರ್

'ಕರಡಿಪುರ'ಕ್ಕೆ ಅಭಿನಂದನೆ

ಬರಗೂರು ರಾಮಚಂದ್ರಪ್ಪನವರ 'ಕರಡಿಪುರ' ಚಿತ್ರ ಬ್ರಿಟನ್ನಿನ 'ಲೀಡ್ಸ್' ಚಿತ್ರೋತ್ಸವಕ್ಕೆ ಆಯ್ಕೆಯಾಗಿರುವ ವಿಷಯ ತಿಳಿದು, ಮನಸಿಗೆ ಬಹಳ ಸಂತೋಷವಾಯಿತು. ಇಲ್ಲಿಯ [illegible] ಈ ಚಿತ್ರ ನಮ್ಮ ನಾಡು—ನುಡಿಗೆ ತೀರ ಅಪರಿಚಿತವಾದ ಮನಸುಗಳಿಗೆ ತಾಕಬೇಕಾದರೆ, ಈ ಚಿತ್ರದ ಅನನ್ಯತೆಯನ್ನು ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ.

'ಕರಡಿಪುರ' ಚಿತ್ರ ತಯಾರಾಗಿ ಬಹಳ ದಿನಗಳು 'ಕಳೆದರೂ' ಕನ್ನಡಿಗರು ಚಿತ್ರ ನೋಡುವ ಭಾಗ್ಯ ಪಡೆಯದಿರುವುದು ನಿಜಕ್ಕೂ ಖೇದನೀಯ. ಒಟ್ಟಿನಲ್ಲಿ ಕನ್ನಡ ಚಿತ್ರ ವಿದೇಶ ತಲುಪಿ ಮನ್ನಣೆ ಪಡೆಯುತ್ತಿರುವುದು ಕನ್ನಡಿಗರು ಹೆಮ್ಮೆ ಪಡುವ ವಿಚಾರವಾಗಿದೆ. 'ಕರಡಿಪುರ'ದ ಮುಖ್ಯ ನಿರ್ಮಾತೃ ಬರಗೂರು ರಾಮಚಂದ್ರಪ್ಪನವರಿಗೆ ಅಭಿನಂದನೆಗಳು.

ತಿಪ್ಪಸಂದ್ರ (ಮಾಗಡಿ) —ನಾಗವಾನಿ ಸತೀಶ್

'ಸಿಂಹಾದ್ರಿಯ ಸಿಂಹ'!

ವಿಷ್ಣುವರ್ಧನ್ ನಾಯಕತ್ವದಲ್ಲಿ ನಿರ್ದೇಶಕ ಎಸ್ ನಾರಾಯಣ್ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸುತ್ತಾರೆಂದು ತಿಳಿದು ಆನಂದವಾಯಿತು. ಈ ಹೊಸ ಚಿತ್ರಕ್ಕೆ 'ಸಿಂಹಾದ್ರಿಯ ಸಿಂಹ' ಎಂದು ಹೆಸರಿಡಲಿ. ಚಿತ್ರವು [illegible] ನಿರ್ಮಾಣಗೊಳ್ಳಲಿ.

ಅಲ್ಲದೆ ವಿಷ್ಣುವರ್ಧನ್, ರಮೇಶ್ [illegible] ಚಿತ್ರಗಳಲ್ಲಿ [illegible] ಚಿತ್ರಗಳನ್ನು ದಿನೇಶ್‌ಬಾಬು ಸುನಿಲ್‌ಕುಮಾರ್ ದೇಸಾಯಿ, ಎಸ್ ನಾರಾಯಣ್ ಮತ್ತು ಎಸ್ ಮಹೇಂದರ್ ಅವರುಗಳೇ ನಿರ್ದೇಶಿಸಲಿ.

ನಂಜನಗೂಡು —ವಿ. ಉಮಾಮಹೇಶ್ವರನ್

ವಿಭಿನ್ನ ಚಿತ್ರ 'ಪುಟ್ಟಾಮಿ'

ವಿ. ಉಮಾಕಾಂತ್ ನಿರ್ದೇಶನದ 'ಮಿಸ್ಟರ್ ಪುಟ್ಟಾಮಿ' ಚಿತ್ರ ವಿಭಿನ್ನವಾಗಿದೆ. ಚಿತ್ರಕಥೆಯೂ ವಿಭಿನ್ನವಾಗಿರುವುದರಿಂದ ಮೊದಲ ನೋಟದಲ್ಲೇ ಗಮನ ಸೆಳೆಯುವ ಚಿತ್ರ [illegible] ಪುರಸ್ಕಾರ [illegible] ಆರ್ಹವಾಗಿದೆ.

ಚಿಕ್ಕಹನುಮೇನಹಳ್ಳಿ —ಎಚ್ ಆರ್ ಪ್ರಭಾಕರ್

ನಿಜಜೀವನದ ಹೀರೊ ಹಿಂಪುರಿ

ಕಷ್ಟ-ಸುಖಗಳು ಮಾನವನ ಜೀವನದಲ್ಲಿ ಇದ್ದದ್ದೇ ಆದರೆ ಇವೆರಡು ಜೀವನದಲ್ಲಿ [illegible] ಅನುಕಂಪದ ಮಾತು, ಅಥವಾ ಸಹಾಯ ನೀಡುವವರಲ್ಲಿ [illegible] ತುಂಬುತ್ತದೆ ಹೌದಲ್ಲವೆ?

ನಗರದ ಶಾಲೆಯ ಬಾಲಕಿಯೊಬ್ಬಳು ಶಿಕ್ಷಕಿಯ ಅಚಾತುರ್ಯದ ಶಿಕ್ಷೆಯಿಂದಾಗಿ ತನ್ನ ಕಣ್ಣನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಹಿಂದಿ ಸಿನಿಮಾದ ಪ್ರತಿಭಾವಂತ ನಟ [illegible] ಬಾಲಕಿಯ ಚಿಕಿತ್ಸೆಗೆ ಹಣದ ಸಹಾಯ ಮಾಡಿ ಹೆತ್ತವರಿಗೆ ಸಾಂತ್ವನ ಹೇಳಿ ಬಂದ ಸುದ್ದಿ ಹೃದಯ ಮಿಡಿಯುವಂತಹದ್ದು.

[illegible] ಜನರಿಗೆ ಈ ಸಹಾಯ [illegible] ಸಾಮಾಜಿಕ ಕಳಕಳಿಯ ನಾಯಕನ ಪಾತ್ರಗಳಲ್ಲಿ ಮಿಂಚುವುದು [illegible] ಆದರೆ ನಿಜ ಜೀವನದಲ್ಲಿ [illegible] ಮಾನವೀಯ ಗುಣಗಳು [illegible] ನಾಯಕರು, ಹಾಗು ಪ್ರತಿಷ್ಠಿತರೆನಿಸಿರುವ [illegible] ಸಮಯಪ್ರಜ್ಞರಂತೆ ಇದ್ದಾಗ ಮಾನವೀಯತೆ ಮೆರೆದ [illegible] ಇವರೆಲ್ಲರಿಗಿಂತ ಭಿನ್ನವಾಗಿ ಕಾಣುತ್ತಾರಲ್ಲವೆ? [illegible] ಸಹಾಯ [illegible] ಪ್ರಜಾವಾಣಿಯ ಮೂಲಕ ನನ್ನ ಅಭಿನಂದನೆಗಳು.

ಬೆಂಗಳೂರು —ಸಂದೀಪ್ ದುಗಡಿಹಳ್ಳಿ



[illegible]

ಪ್ರಜಾವಾಣಿ

ಸಿನಿಮಾ ರಂಜನೆ

21–8–1998

ಕರೀಂ ಖಾನ್‌ಗೆ ಚಿತ್ರೋದ್ಯಮದ ಸನ್ಮಾನ



ದಕ್ಷಿಣ ಕನ್ನಡದಲ್ಲಿ ಡಿಸ್ಕವರಿ ಚಾನೆಲ್‌ನಿಂದ 'ಪವಾಡ ಬಯಲು'..

ಮೂರನೆಯ ಪುಟ ನೋಡಿ



ನಕ್ಕು ನಗಿಸುವ ಕುಬೇರ...ಶಿವಮಣಿ ಹೊಸ ಚಿತ್ರ.....

ಆರಂಭವಾಗಲಿರುವ 'ಅಂತ್ಯ'

-ಭಾಮ

ಪ್ರಜಾವಾಣಿ
ಸಿನಿಮಾ ರಂಜನೆ
21–8–1998

ಕರೀಂ ಖಾನ್‌ಗೆ ಚಿತ್ರೋದ್ಯಮದ ಸನ್ಮಾನ

[illegible]

ದಕ್ಷಿಣ ಕನ್ನಡದಲ್ಲಿ ಡಿಸ್ಕವರಿ ಚಾನೆಲ್‌ನಿಂದ 'ಪವಾಡ ಬಯಲು'..

[illegible]

ವಿಚಾರವಾದಿಗಳ ಪಡೆಯೇ ನಮ್ಮ ದೇಶದಲ್ಲಿದೆ. ಖ್ಯಾತ ವಿಚಾರವಾದಿ ಡಾ. [illegible] ಟಿ ಕೋವೂರ್ ಅವರ ಶಿಷ್ಯಪರಂಪರೆಗೆ ಸೇರಿದ ಪ್ರೊ ... ಬಿ. ಪ್ರೇಮಾನಂದ, ಮಂಗಳೂರಿನ ಡಾ. ನರೇಂದ್ರ ನಾಯಕ್ ಮೊದಲಾದವರು ನಿರಂತರವಾಗಿ ಈ ಕೆಲಸದಲ್ಲಿ ತೊಡಗಿದ್ದಾರೆ.

ಈ ವೈಚಾರಿಕ ಆಂದೋಲನವನ್ನು ಜಗತ್ತಿಗೆ ಪರಿಚಯಿಸುವ ದೃಷ್ಟಿಯಿಂದ 'ಡಿಸ್ಕವರಿ ಚಾನೆಲ್' ಅದನ್ನು ತನ್ನ ಕಾರ್ಯಕ್ರಮದ ಪಟ್ಟಿಗೆ ತೆಗೆದುಕೊಂಡಿದೆ. ಇತ್ತೀಚೆಗೆ ಮಂಗಳೂರಿಗೆ ಬಂದಿದ್ದ ಬ್ರಿಟಿಷ್ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಷನ್‌ನ ನಿರ್ಮಾಪಕ ಜಾನ್ ಗ್ಲೂಮ್ ಅವರ ನೇತೃತ್ವದ ನಾಲ್ವರು ತಂತ್ರಜ್ಞರ ತಂಡ 'ಡಿಸ್ಕವರಿ' ಗಾಗಿ ಅದನ್ನು ವ್ಯಾಪಕವಾಗಿ ಚಿತ್ರೀಕರಿಸಿಕೊಂಡಿತು. ವಿವಿಧ ಪವಾಡಗಳನ್ನು ಬಯಲು ಮಾಡುವ ಮತ್ತು 'ಧಾರ್ಮಿಕತೆ'ಯ ಹೆಸರಿನಲ್ಲಿ ಮುಗ್ಧ ಜನರನ್ನು ಅವೈಚಾರಿಕತೆಯಲ್ಲಿ ಬಂಧಿಸುವ ಆಚರಣೆಗಳ ನಿಜಸ್ವರೂಪವನ್ನು ಪರಿಚಯಿಸುವ ಕಾರ್ಯಕ್ರಮಗಳು ಅದಕ್ಕಾಗಿ ಪ್ರದರ್ಶಿತವಾದವು.

ಮೂರನೆಯ ಪುಟ ನೋಡಿ

[illegible]

ಶಿವಮಣಿ

ಚಿತ್ರದ ಹಾಡುಗಳ ರೆಕಾರ್ಡಿಂಗ್ ಕಾರ್ಯ ... ಸಂಗೀತ ನಿರ್ದೇಶನದಲ್ಲಿ ಇದೇ 22 ರಿಂದ ನಡೆಯಲಿದ್ದು ... ಸೆಪ್ಟೆಂಬರ್ 10ರಿಂದ [illegible]

—ಭಾಮ

ನಕ್ಕು ನಗಿಸುವ ಕುಬೇರ...ಶಿವಮಣಿ ಹೊಸ ಚಿತ್ರ.....

ಜಾಣ, ಜೀನಿಯಸ್ ಮತ್ತು ಸಿ.ಹೆಚ್. ಹನುಮಂತರಾಯರು

ನಮ್ಮ ವರದಿಗಾರರು ಮತ್ತು ವಕೀಲರೂ ಆಗಿರುವ ಶಾಮಣ್ಣನವರು ಮೊನ್ನೆ ಫೋನ್ ಮಾಡಿ "ಒಂದು ಸಂತೋಷದ ಸುದ್ದಿ. ಸಿ.ಎಚ್. ಹನುಮಂತರಾಯರು ಸ್ಪೆಷಲ್ ಸ್ಟೇಟ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡಿದ್ದಾರೆ. ಹನುಮಂತರಾಯರ ಜಾಣತನಕ್ಕೆ ಸಂದ ಗೌರವ ಇದು" ಎಂದರು.

ಶಾಮಣ್ಣನವರ ಧ್ವನಿಯಲ್ಲಿ ಹೆಮ್ಮೆ, ಮೆಚ್ಚುಗೆಗಳು ಮೇಳೈಸಿಕೊಂಡಿದ್ದವು. ನಾನು ಶಾಮಣ್ಣನವರಿಗೆ "ನಿಮ್ಮ ಸಂತೋಷದಲ್ಲಿ ನಾನೂ ಪಾಲ್ಗೊಳ್ಳುವೆ. ಸಿ.ಹೆಚ್.ಹೆಚ್ ಅವರ ಹೆಸರು ಅನೌನ್ಸ್ ಆಗುವುದಕ್ಕೆ ಮುಂಚೆಯೇ ನನಗೆ ಗೊತ್ತಾಯಿತು. ಆದರೆ ನೀವು ಒಂದು ಪದವನ್ನು ಬಳಸಿದಿರಿ. ಹನುಮಂತರಾಯರಿಗೆ ಅದು ತೀರಾ ಸಾಮಾನ್ಯ ಪದವೆನಿಸುತ್ತದೆ. ಅವರು ಬರೀ ಜಾಣರಲ್ಲ; ನಿಜಕ್ಕೂ ಜೀನಿಯಸ್. ಸಾಮಾನ್ಯ ಜ್ಞಾನದಲ್ಲಿ ವ್ಯವಹಾರ ಚುರುಕಾಗಿರುವವರಿಗೆ ಜಾಣರು ಎಂದು ಕರೆಯುತ್ತಾರೆ. ಜಾಣನಾದವನು ಏಕಕಾಲಕ್ಕೆ ಒಂದೇ ಸಂದರ್ಭದಲ್ಲಿ ಎಲ್ಲವನ್ನೂ ಅಬ್ಸರ್ವ್ ಮಾಡಿರುತ್ತಾನೆ. ಆದರೆ ಅದು ಮೇಲ್ಮೈ ಅಬ್ಸರ್ವೇಷನ್ ಮಾತ್ರ ಆಗಿರುತ್ತದೆ. ಒಂದನ್ನು ಇನ್ನೊಂದಕ್ಕೆ ಲಿಂಕ್ ಮಾಡುತ್ತಾ ಹೋಗುತ್ತಾನೆ. ಅದೊಂದು ಥರ ಸೀಟ್ ಆಗಿ ಸ್ಪೋಟಿಸುವ ಸರಮಾಲೆ ಆಗುತ್ತದೆ. ಆಭರಣವಾಗಿ ಕಣ್ಣಿಗೆ ನೋಡಲು ಚಂದವಾಗಿ ಕಾಣುತ್ತದೆ. ಜಾಣನಾದವನು ಇದನ್ನು ಮೀರಿ ಹೋಗಲಾರ. ಅಂದರೆ ಸೃಜನಶೀಲ ನಾಗರಿಕರ ಹಲವನ್ನು ಒಂದಕ್ಕೊಂದು ಯಾಂತ್ರಿಕವಾಗಿ ಸೇರಿಸಿದರೆ ಸೃಜನಾತ್ಮಕತೆಗೆ ಅವಕಾಶವಿರುವುದಿಲ್ಲ. ಹಲವನ್ನು ಸಂಯೋಜಿಸಿ ತೀರಾ ಹೊಸತಾದದ್ದನ್ನು ತಯಾರಿಸುವವ ಮಾತ್ರ ಜೀನಿಯಸ್: ವಿವಿಧ ಧಾತುಗಳನ್ನು ಸಂಯೋಜಿಸಿ ಬಂಗಾರ ತಯಾರಿಸುವ ಅಲ್‌ಕೆಮಿಸ್ಟ್ ಥರ..! ಹೀಗಾಗಿ ಜಾಣನದು ಚಮತ್ಕಾರಿಕವಾಗಿ ತೋರಿದರೆ ಜೀನಿಯಸ್ ವ್ಯಕ್ತಿಯದು ಮಾಂತ್ರಿಕತೆಯಾಗಿ ತೋರುತ್ತದೆ...

ಇನ್ನೊಂದು ಮಾತು; ಹನುಮಂತರಾಯರಿಗೆ ಸಂದ ಗೌರವವಿದು ಎನ್ನುವುದಕ್ಕಿಂತ ಇವರ ಯಕ್ಷಿಣಿ ವಿದ್ಯೆಯನ್ನು ಆಪತ್ಕಾಲದಲ್ಲಿ ಅರಸಿ ಬರುವುದು ಎಂದರೇನೇ ಹೆಚ್ಚು ಸೂಕ್ತ. ಹನುಮಂತರಾಯರು ಮನಸ್ಸು ಮಾಡಿದ್ದರೆ ಇಷ್ಟೊತ್ತಿಗೆ ಜಸ್ಟಿಸ್ ಆಗಿರುತ್ತಿದ್ದರು. ಅಡ್ವೋಕೇಟ್ ಜನರಲ್ ಸಹ ಆಗಿರುತ್ತಿದ್ದರು. ಸ್ಪೆಶಲ್ ಸ್ಟೇಟ್ ಪ್ರಾಸಿಕ್ಯೂಟರ್ ಸ್ಥಾನಕ್ಕಿಂತ ಹಿರಿದಾದುದನ್ನು ಅವರೇ ಬೇಡವೆಂದು ತಳ್ಳಿದ್ದಾರೆ...

ಈ ಹಿಂದೆ ರಷೀದ್ ಕೊಲೆ ಪ್ರಕರಣದಲ್ಲಿ ಹನುಮಂತರಾಯರು ಮುಂದಿನ ಎಂ.ಪಿ ಅಥವಾ ಎಂ.ಎಲ್.ಎ ಎಂದೇ ಖ್ಯಾತರಾಗಿದ್ದರು. ಅವರು ಮನಸ್ಸು ಮಾಡಿದ್ದರೆ ಅದು ದಕ್ಕಿಯೂ ಬಿಡುತ್ತಿತ್ತು. ರಷೀದ್ ಪ್ರಕರಣದಲ್ಲಿ ಆರೋಪಕ್ಕೆ ಗುರಿಯಾಗಿದ್ದ ಆರ್.ಎಲ್. ಜಾಲಪ್ಪನವರನ್ನು ಮುಗಿಸಿ ಹನುಮಂತರಾಯರು ರಾಜಕೀಯವಾಗಿ ಮಿಂಚುತ್ತಾರೆ ಎಂದು ಬಹಳಷ್ಟು ಜನ ಲೆಕ್ಕಾಚಾರ ಹಾಕಿದ್ದರು. ಆದರೆ ಅದೆಲ್ಲ ಸುಳ್ಳಾಯಿತು. ರಷೀದ್ ಕೊಲೆ ಪ್ರಕರಣದ ಚಳುವಳಿಯನ್ನು ಉತ್ತುಂಗಕ್ಕೆ ಒಯ್ದು ಯಥಾಪ್ರಕಾರ ತಮ್ಮ ವೃತ್ತಿಗೇ ವಾಪಸ್ಸಾದರು ಹನುಮಂತರಾಯರು; ಡಾ. ರಾಜ್ ಗೋಕಾಕ್ ಚಳುವಳಿಯನ್ನು ಉತ್ತುಂಗಕ್ಕೊಯ್ದು ಪುನಃ ಬೆಳ್ಳಿತೆರೆಗೇ ಮರಳಿದಂತೆ... ಅಂದು ರಾಜ್ ಮನಸ್ಸು ಮಾಡಿದ್ದರೆ ಮುಖ್ಯಮಂತ್ರಿಗಳೇ ಆಗಿ ಬಿಡುವ ಸಾಧ್ಯತೆಗಳಿದ್ದವು. ಖ್ಯಾತ ವಿಜ್ಞಾನಿ ಐನ್‌ಸ್ಟೀನ್‌ಗೆ ದೇಶದ ಅಧ್ಯಕ್ಷನಾಗು ಎಂದು ಕೇಳಿಕೊಂಡರು. ಅದಕ್ಕೆ ಆತ ನಗುತ್ತಲೇ, ನನ್ನನ್ನು ನಾಲ್ಕು ಗೋಡೆಗಳ ಮಧ್ಯೆ ಬಿಟ್ಟುಬಿಡಿ. ನನ್ನ ಫಾರ್ಮುಲಾಗಳ ಬಗ್ಗೆ ಇನ್ನೂ ಚಿಂತಿಸುವುದು ಬಾಕಿಯಿದೆ ಎಂದುಬಿಟ್ಟ...! ಹಾಗೆ ಜೀನಿಯಸ್ ಇರುವವರನ್ನು ಅವರ ವೃತ್ತಿ, ಪ್ರವೃತ್ತಿಗಳಿಂದ ವಿಚಲಿತಗೊಳಿಸುವುದು ದುಸ್ಸಾಧ್ಯವೇ ಸರಿ..." ನನ್ನ ಈ ಮಾತುಗಳು ಶಾಮಣ್ಣನವರಿಗೆ ಗಡುಸಾಗಿ ತೋರಿದವೇನೋ ಎಂದುಕೊಂಡು ಕ್ಷಣ ಕಾಲ ಸ್ತಬ್ಧನಾದೆ.



ಆಗ ಶಾಮಣ್ಣ "ಸಾರ್, ಏಕೆ ನಿಲ್ಲಿಸಿಬಿಟ್ಟಿರಿ? ನನಗೆ ಹನುಮಂತರಾಯರ ನಿಜವಾದ ದರ್ಶನವಾಗುತ್ತಿದೆ. ಅವರಿಂದ ನನ್ನನ್ನು ವಂಚಿತನನ್ನಾಗಿಸಬೇಡಿ. ನಾನೇನೂ ನಿಮ್ಮ ಮಾತುಗಳಿಂದ ತಪ್ಪು ಭಾವನೆಗೆ ಒಳಗಾಗಿಲ್ಲ. ಒಂದು ವಿಷಯ, ಭಾಷೆ, ಸಂಗತಿ ಯಾವುದನ್ನೇ ಆಗಲಿ ಹೇಗೆ ಕೂಡಲು ಸೀಳುವ ಸೂಕ್ಷ್ಮದೃಷ್ಟಿಯಿಂದ ನೋಡಬೇಕೆನ್ನುವುದನ್ನು ನಿಮ್ಮಿಂದ ಕಲಿತುಕೊಳ್ಳಬೇಕು..." ಎಂದರು.

"ಇಂದು ಮುಖ್ಯಮಂತ್ರಿಗಳಿಗೆ ಆಪತ್ತು ಎದುರಾಗಿರುವಾಗ ಹನುಮಂತರಾಯರ ನೆನಪಾಗಿದೆ. ಆದರೆ ಹನುಮಂತರಾಯರ ಬಳಿ ಯಾವುದೇ ಕೆಲಸಗಳಿಲ್ಲದಿದ್ದಾಗ, ತಮಗೆ ಆಪತ್ತುಗಳು ಎದುರಾಗದೇ ಇದ್ದಾಗ ಹನುಮಂತರಾಯರನ್ನು ಮುಖ್ಯಮಂತ್ರಿಗಳು ನೆನಪಿಸಿಕೊಂಡು ಏನಾದರೂ ಸ್ಥಾನಮಾನಗಳನ್ನು ನೀಡಿದ್ದರೆ ಸತ್ಪಾತ್ರ ಮನ್ನಣೆ ಅನ್ನಬಹುದಿತ್ತು. ಆದರೆ ಈಗ ಮುಖ್ಯಮಂತ್ರಿಗಳೇ ಕ್ಲೈಂಟ್ ಆಗಿ ಬಂದಿದ್ದಾರೆ ಹನುಮಂತರಾಯರ ಬಳಿಗೆ..." ಎಂದೆ.

ಅದೇನೋ ಕಾರಣಕ್ಕೆ ನನ್ನ ಹುಡುಗುತನದ ಸ್ನೇಹಿತ ಸೀನು ನೆನಪಾದ. ಅವನ ಪೂರ್ಣ ಹೆಸರು ಶ್ರೀನಿವಾಸಚಾರ್ಯ. ನಮ್ಮ ಕ್ರಿಕೆಟ್ ಟೀಮ್‌ನಲ್ಲಿದ್ದ ಅವನು ಆಲ್ ರೌಂಡರ್ ಆಗಿದ್ದ. ನಾನು ಅವನಿಗೆ ಆಗಾಗ ಹೇಳುತ್ತಿದ್ದೆ ; "ನೀನು ಆಲ್‌ರೌಂಡರ್ ಏಕೆ ಆಗಿದೀಯಾ ಗೊತ್ತೆ? ಈ ಸಂಕುಚಿತ ವಾತಾವರಣ ದಲ್ಲಿ ಚಾಲೆಂಜಿಂಗ್ ಎದುರಾಳಿ ನಿನಗೆ ಇಲ್ಲದುದಕ್ಕಾಗಿ. ಆಲ್‌ರೌಂಡರ್ ಆಗಿರುವುದಕ್ಕೆ ನಿಜಕ್ಕೂ ಪ್ರತಿಭೆ, ಪರಿಶ್ರಮಗಳು ಬೇಕು. ಆದರೆ ನಿನ್ನಲ್ಲಿ ಅವುಗಳ ಕೊರತೆ ನನಗೆ ಎದ್ದು ಕಾಣುತ್ತಿವೆ. ನೀನು ಬ್ಯಾಟಿಂಗ್‌ನಲ್ಲಿ ಮುಂದೆ ಬರಬಹುದು ಅದನ್ನೇ ಪ್ರಾಕ್ಟೀಸ್ ಮಾಡು. ಬೌಲಿಂಗ್‌ನಲ್ಲಿ ನಿನಗೆ ಗ್ರಿಪ್ ಇಲ್ಲ. ಬರೀ ಸ್ಪೀಡ್ ಎಸೆತದ ಮೂಲಕ ವಿಕೆಟ್ ಬೀಳಿಸಬೇಕು ಅಂತ ನೋಡ್ತೀ ಯಾ. ಸ್ಪಿಂಗ್ ನಿನಗೆ ದಕ್ಕುತ್ತಿಲ್ಲ" ಎಂದೆ. ನಾನು ಹೀಗೆ ಹೇಳಿದ್ದೇ ಅವನು ನನ್ನೊಡನೆ ಮಾತು ಬಿಟ್ಟ. ನನ್ನಿಂದ ಅವನು ದೂರವಾದಷ್ಟೂ ನಾನಾಡಿದ ಮಾತುಗಳು ಹತ್ತಿರ ವಾಗಿ ಅವನನ್ನು ಇರಿಯ ತೊಡಗಿದವು. ಒಂದೇ ವಾರದಲ್ಲಿ ರಿಸ್ಟ್‌ಗೆ ಒಂದು ಪಟ್ಟಿ ಬಿಗಿದುಕೊಂಡು ಬಂದ. ಡಾಕ್ಟರ್ ಹೆಚ್ಚು ಬೌಲಿಂಗ್ ಮಾಡಬೇಡ ಎಂದು ಅಡ್ವೈಜ್ ಮಾಡಿದ್ದಾರೆ ಎಂದು ಹೇಳಿದ. ಆದರೆ ನನಗೆ ಅವನ ಮಾತು ಸುಳ್ಳು ಎನಿಸಿದವು. ಟೀಮ್‌ನಲ್ಲಿ ವಿಚಿತ್ರ ಸೈಕಾಲಜಿ ಆಪರೇಟ್ ಆಗುತ್ತಿರುತ್ತದೆ. ಭಾರೀ ಬ್ಯಾಟ್ಸ್‌ಮನ್‌ಗಳೆಲ್ಲ ಸಿಂಗಲ್ ಡಿಜಿಟ್‌ನಲ್ಲೇ ಔಟ್ ಆಗಿ ಕೊನೆಗೆ ಬೌಲರ್‌ಗಳು ಬ್ಯಾಟ್ ಹಿಡಿದು ನಿಂತಿರುತ್ತಾರೆ. ಇಡೀ ತಂಡದ ಮಾನದ ಪ್ರಶ್ನೆ ಧುತ್ತೆನ್ನುತ್ತದೆ. ಆಗ ನೋಡಿ; ಬ್ಯಾಟಿಂಗ್ ಎಂದರೇ ನನಗೆ ಅಲರ್ಜಿ ಎನ್ನುವವ ಸೆಂಚುರಿ ಬಾರಿಸಿಬಿಡುತ್ತಾನೆ! ನಮ್ಮ ದೇಶದ ಕ್ರಿಕೆಟ್ ತಂಡ ಇಂಥ ಪ್ರದರ್ಶನಗಳನ್ನು ಅದೆಷ್ಟು ನೀಡಿಲ್ಲ! ಹಾಗೆಯೇ ಆಯಿತು. ಬೌಲಿಂಗ್‌ನಲ್ಲಿ ವೀಕ್ ಎಂದೇ ಪರಿಗಣಿಸಲ್ಪಟ್ಟವ ಬೌಲಿಂಗ್‌ಗೆ ನಿಂತ. ಸತತ ಪರಿಶ್ರಮದಿಂದ ಅದನ್ನು ಕರಗತಗೊಳಿಸಿಕೊಂಡ. ಅವನ ತಲೆಯಲ್ಲಿ, ನಮ್ಮ ಟೀಮಿನ ಆಲ್‌ರೌಂಡರ್ ಆಟಗಾರ ಕೈಗೆ ಪಟ್ಟಿ ಸುತ್ತಿಕೊಂಡಿದ್ದಾನೆ. ಇದರಿಂದಾಗಿ ನಮ್ಮ ಟೀಮ್ ಸೋಲಕೂಡದು ಎನ್ನುವ ಚಿಂತೆ... ಸರಿ, ಆಲ್‌ರೌಂಡರ್ ಸೀನುನನ್ನು ಮೀರಿಸಿಯೇ ಬಿಟ್ಟ ಬೌಲಿಂಗ್‌ನಲ್ಲಿ! ಆಗ ಸೀನು ಮತ್ತಷ್ಟು ಧೃತಿಗೆಟ್ಟ. ತಾನಿಲ್ಲದಿದ್ದರೆ ತಮ್ಮ ತಂಡ ಕಳಪೆ ಪ್ರದರ್ಶನ ನೀಡುವುದು ಎಂದು ಭ್ರಮಿಸಿಕೊಂಡಿದ್ದ. ಅದಕ್ಕೆ ತದ್ವಿರುದ್ಧವಾಗಿ ನಾವು ಇಡೀ ಟೀಮ್ ಆಗಿ ದಿಗ್ವಿಜಯ ಸಾಧಿಸಿಬಿಟ್ಟೆವು. ನಮ್ಮ ದಿಗ್ವಿಜಯದ ಮಾರನೇ ದಿನವೇ ಸೀನು ಕಾಲಿಗೂ ಒಂದು ಪಟ್ಟಿ ಹಾಕಿಕೊಂಡು ಬಂದ ಕಾಲೇಜ್‌ಗೆ ನಮ್ಮ ತಂದೆಯ ಕೆಲಸದಲ್ಲಿ ಸಹಾಯ ಮಾಡಲು ಹೋಗಿ ಕಾಲು ಉಳುಕಿಸಿಕೊಂಡೆ ಎಂದು ಸುಳ್ಳು ಹೇಳಿದ. ಆದರೆ ಬ್ಯಾಟಿಂಗ್ ಅನ್ನು ಯಾವಾಗಲೂ ಮಾಡು ವಂತೆಯೇ ಮಾಡಿದ. ಸ್ವಲ್ಪ ನಟನೆ ಸೇರಿಸಿ ರನ್‌ಗಳನ್ನು ಮಾಡಿದ. ತನಗೆ ಏನೆಲ್ಲ ನೋವು, ಪೆಟ್ಟುಗಳಿದ್ದರೂ ಇಷ್ಟು ರನ್ ಮಾಡಿದೆ ಎಂದು ತೋರಿಸುವ ಚಪಲ ಅವನದಾಗಿತ್ತು. ಮಾರನೆ ದಿನ ಬೆಳಗ್ಗೆ ಅವನ ಮನೆಯ ಮುಂದಿನಿಂದ ಹೋಗುತ್ತಿರುವಾಗ ಕಾಂಪೌಂಡ್‌ನಲ್ಲಿ ಸೀನು ಜಾಗಿಂಗ್ ಮಾಡುತ್ತಿದ್ದ. ಕೈ, ಕಾಲುಗಳಿಗೆ ಪಟ್ಟಿಗಳೇ ಇರಲಿಲ್ಲ! ನಾನು ಅಂದುಕೊಂಡಿದ್ದು ಸತ್ಯವಾಗಿತ್ತು. ತನ್ನ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳಲು ಏನೆಲ್ಲ ನಾಟಕಗಳನ್ನು ಆಡತೊಡಗಿದ್ದ ಸೀನು ಮಾನಸಿಕವಾಗಿ ಹೋಪ್‌ಲೆಸ್ ಆಗಿ ಹೋಗಿದ್ದ. ಸದಾ ಕಳ್ಳಭಾವನೆಯಲ್ಲಿ ಬಳಲುವಂತಾಗಿದ್ದ.

ತನ್ನ ಅಸಾಮರ್ಥ್ಯದಲ್ಲಿಯೂ ಅಧಿಪತ್ಯ ಉಳಿಸಿಕೊಳ್ಳುವುದಕ್ಕಾಗಿ ಮಾನಸಿಕ ಮೀಸಲಾತಿ ಬಯಸುತ್ತಿದ್ದ. ಏನೆಲ್ಲ ತೊಂದರೆಗಳಲ್ಲೂ ಇಷ್ಟು ಮಾಡುವುದೇ ಭಾರೀ ಮತ್ತು ಗ್ರೇಟ್ ಎನಿಸಿಕೊಳ್ಳುವುದಕ್ಕಾಗಿ... ಆದರೆ ಅವನು ಆರೇ ತಿಂಗಳಲ್ಲಿ ಆಟ ಮತ್ತು ಪಾಠ ಎರಡರಲ್ಲೂ ತೀರಾ ಹಿಂದುಳಿದ. ಇದು ಆಲ್‌ರೌಂಡರ್ ಸೀನನ ಕತೆ ಸುತ್ತಲಿನವರಿಗೆ ಮೋಸ ಮಾಡುತ್ತಿದ್ದೇನೆಂದು ತಿಳಿದುಕೊಂಡಿದ್ದ ಸೀನು ಸ್ವತಃ ತನಗೆ ತನ್ನ ಮನಸ್ಸಿಗೇ ಮೋಸ ಮಾಡಿಕೊಂಡಿದ್ದ. ಇರುವ ಸಾಮರ್ಥ್ಯವನ್ನೂ ಕಳೆದುಕೊಂಡು ಮೂಗನಂತಾಗಿದ್ದ.

-ಇಂದ್ರಜಿತ್ ಲಂಕೇಶ್

ಇವತ್ತಿನ ಸಾಹಿತಿಗಳಿಗೆ ಖಾನ್ ಬದುಕು ಒಂದು ಪಾಠ!

ಇತ್ತೀಚೆಗೆ ನಮ್ಮನ್ನಗಲಿದ ಜಾನಪದ ಸಾಹಿತಿ ಕರೀಂ ಖಾನರಿಂದ ಕನ್ನಡ ಸಾಹಿತ್ಯ, ಜಾನಪದ ಲೋಕದ ಒಂದು ಯುಗ ಅಂತ್ಯವಾದಂತಾಯ್ತು.

ಮೂಲತಃ ಅಫ್ಘಾನಿಸ್ತಾನದ ಸಾಂಪ್ರದಾಯಿಕ ಮುಸ್ಲಿಂ ಕುಟುಂಬದಿಂದ ಬಂದು ಮಡಿಕೇರಿಯ ಜೈನಾಬಿಯನ್ನು ವರಿಸಿ ಸಾಂಪ್ರದಾಯಿಕತೆಯ ಕಿರಿದಾದ ಕಟ್ಟುಪಾಡುಗಳಿಂದ ಹೊರಬಂದು ತಮ್ಮದೇ ಆದ ಹಾದಿಯಲ್ಲಿ ಸಾಗಿದವರು.



ನಿಜಾರ್ಥದಲ್ಲಿ ಕ್ಕೋಸ್ಕರ ಶಿಥಿಲಾವಸ್ಥೆಯಲ್ಲಿದ್ದು ಅವಸಾನದ ಹಾದಿ ಹಿಡಿದಿದ್ದ ಕನ್ನಡ ಜಾನಪದ ವ್ಯವಸ್ಥೆಗೆ ಜೀವ ತುಂಬಿದವರು.

ಕನ್ನಡ ಭಾಷೆ, ಜಾನಪದ ಸಾಹಿತ್ಯಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡು, ಗಾಂಧೀಜಿಯ ಮಾನವೀಯ ತತ್ವಗಳಿಗೆ ಮಾರುಹೋಗಿ ಸ್ವಾತಂತ್ರ್ಯ ಹೋರಾಟಗಾರರಾಗಿ ಕೊನೆಗೆ ಕನ್ನಡ ಜಾನಪದ ಲೋಕಕ್ಕೆ ಸಿಕ್ಕಿಹಾಕಿಕೊಂಡವರು. ಕನ್ನಡ ನಾಡ ಕನ್ನಡ ಜಾನಪದ ಪ್ರಕಾಶಕ್ಕೆ ಕೊನೆಯುಸಿರುವರೆಗೂ ತಮ್ಮನ್ನು ತಾವೇ ಅರ್ಪಿಸಿಕೊಂಡವರು.

ಸುಂದರ ಕನ್ನಡ ಭಾಷೆಗೆ, ಆ ಭಾಷೆಯಿಂದ ಬಸಿ ದಾದ ಅಷ್ಟೇ ಸುಂದರ, ಅಷ್ಟೇ ಶ್ರೀಮಂತ ಜಾನಪದ ಸಾಹಿತ್ಯದ ಹಾಗೆ ಯಾವುದೇ ಜಗಳಗಳಿಲ್ಲದ ಒಬ್ಬ ಸರಳ ಮನುಷ್ಯನ ಅರ್ಪಣಾ ಮನೋಭಾವ ಏನೊಂದು ಬದಲಾವಣೆ ತರಬಹುದು ಎಂಬುದಕ್ಕೆ ಖಾನರ ಬದುಕು, ತನ್ನನ್ನು ಅರ್ಪಿಸಿಕೊಂಡ ರೀತಿ ಒಂದು ನಿದರ್ಶನ.

ಹಿಂದಿನ ಮೈಸೂರು ಸಂಸ್ಥಾನಕ್ಕೆ ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳನ್ನು ಸೇರಿಸಲು ನಾಡಿನ ಉದ್ದಗಲಕ್ಕೂ ನಡೆದು ಜನಜಾಗೃತಿ ಮೂಡಿಸಿದವರು. (ಈ ಸಂದರ್ಭದಲ್ಲೇ ಅವರಿಗೆ ಕನ್ನಡ ಜಾನಪದ ಲೋಕದ ವಿರಾಟ್ ದರ್ಶನವಾಯಿತು)

ಭಾಷೆಯ ಅಭಿವೃದ್ಧಿಗೆ, ಜಾನಪದ ಸೌಂದರ್ಯಕ್ಕೆ ಗಂಟುಬಿದ್ದ ಖಾನರಿಗೆ ಬಡತನದಿಂದಾಗಿ ಬದುಕು ಸವಾಲಾಯಿತು. ತಮ್ಮ ಸ್ವಕೃತಿಗಳ ಮಾರಾಟದಿಂದ ಬರಕತ್ತಾಗದ ಖಾನರು ಬದುಕಿಗೊಂದು ನೆಲೆ ಕಾಣಲು ಮದರಾಸಿಗೆ ರೈಲು ಹತ್ತಬೇಕಾಯಿತು. ಅಲ್ಲಿ ಹಲವಾರು ಸುಪ್ರಸಿದ್ಧ ಕನ್ನಡ ಚಲನಚಿತ್ರಗಳಿಗೆ ಕಥೆ, ಸಾಹಿತ್ಯ, ಸಂಭಾಷಣೆ, ಗೀತೆ ಬರೆದು ಹೆಸರು ಗಳಿಸಿಕೊಂಡರು. ಅದರಲ್ಲೂ ಅವರ 'ಸ್ವರ್ಣಗೌರಿ' ಚಿತ್ರದ 'ನಟವರ ಗಂಗಾಧರ' ಎಂಬ ಸುಮಧುರ ಗೀತೆ ಕೇಳದ ಕನ್ನಡಿಗರೇ ಇಲ್ಲ ಎನ್ನಬಹುದು. ಇಂದು 'ಆಯಕಟ್ಟಿನ' ಜಾಗಗಳಲ್ಲಿ ಕುಳಿತು ಹವಾ ನಿಯಂತ್ರಿತ ಕೋಣೆಗಳಿಂದ ಹೊರಬರದಾಗದೆ ಕನ್ನಡ ಸೇವೆ ಮಾಡುತ್ತಿರುವ ಇಂದಿನ ಸಾಹಿತಿ ಅಧಿಕಾರಿಗಳಿಗೆ ಖಾನರ ಬದುಕೊಂದು ಪಾಠ.

ರಾಜ್‌ಕುಮಾರ್‌ರಿಂದ ಸನ್ಮಾನ ಮಾಡಿಸಿಕೊಳ್ಳುತ್ತಿರುವ ಕರೀಂ ಖಾನ್

ನಿಗಾ ವಹಿಸದಿದ್ದರೆ ಕಾಲಕ್ರಮೇಣ ಜನಮನದಿಂದ ಮರೆತೇ ಹೋಗುವ ಜಾನಪದ ಶಾಖೆಗೆ ಸಂರಕ್ಷಣೆ, ಪ್ರೋತ್ಸಾಹ ಬೇಕಿದೆ. ಸರಕಾರವನ್ನೇ ನಂಬಿ ಕುಳಿತರೆ ಜಾನಪದಕ್ಕೆ ಉಳಿಗಾಲವಿಲ್ಲ. ಇದು ಬೆಳಗಾವಿಯ ಮೇಲೆ ಮರಾಠಿಗರು ಜೇಕಾಬಿಟ್ಟಿ ಸವಾರಿ ಮಾಡಿ ಕನ್ನಡಿಗರ ಮೇಲೆ ದೌರ್ಜನ್ಯ, ವ್ಯವಸ್ಥಿತವಾಗಿ ಕನ್ನಡ ಭಾಷೆಯ ನಿರ್ಮೂಲನಾ ಕಾರ್ಯದಲ್ಲಿ ನಿರತರಾಗಿರುವಾಗ ನಮ್ಮ ನಾಡಿನ ನಾಯಕರುಗಳು ಬೆಂಗಳೂರಿನ ತಂಪು ನಗರಿಯಲ್ಲಿ ಬೆಳಗಾವಿಗೆ ಎಳ್ಳುನೀರು ಬಿಟ್ಟು ಬೆಚ್ಚಗಿದ್ದಾರೆ.

'ಗಣಿ'ಯಿಂದ ಹೊರಬರಲಾರದೆ ಏದುಸಿರು ಬಿಡುತ್ತಿರುವ ಸರಕಾರಕ್ಕೆ ಕನ್ನಡಭಾಷೆ, ಸಾಹಿತ್ಯ, ಸಾಹಿತಿಗಳು, ಜಾನಪದ ಎಂದೆಲ್ಲಾ ತಲೆಕೆಡಿಸಿಕೊಳ್ಳಲು ಸಮಯವಾದರೂ ಎಲ್ಲಿ?

ರಹಮತ್ ಅಲಿಬಾವ





ಜ್ಞಾಣಿ, ಜೀನಿಯಸ್ ಮತ್ತು ಸಿ.ಹೆಚ್. ಹನುಮಂತರಾಯರು

ನಮ್ಮ ವರದಿಗಾರರು ಮತ್ತು ವಕೀಲರೂ ಆಗಿರುವ ಶಾಮಣ್ಣನವರು ಮೊನ್ನೆ ಫೋನ್ ಮಾಡಿ "ಒಂದು ಸಂತೋಷದ ಸುದ್ದಿ ಸಿ.ಎಚ್. ಹನುಮಂತರಾಯರು ಸ್ಪೆಷಲ್ ಸ್ಟೇಟ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡಿದ್ದಾರೆ. ಹನುಮಂತರಾಯರ ಜ್ಞಾಣತನಕ್ಕೆ ಸಂದ ಗೌರವ ಇದು" ಎಂದರು.

ಶಾಮಣ್ಣನವರ ಧ್ವನಿಯಲ್ಲಿ ಹೆಮ್ಮೆ, ಮೆಚ್ಚುಗೆಗಳು ಮೇಳೈಸಿಕೊಂಡಿದ್ದವು. ನಾನು ಶಾಮಣ್ಣನವರಿಗೆ "ನಿಮ್ಮ ಸಂತೋಷದಲ್ಲಿ ನಾನೂ ಪಾಲ್ಗೊಳ್ಳುವೆ. ಸಿ.ಹೆಚ್.ಹೆಚ್ ಅವರ ಹೆಸರು ಅನೌನ್ಸ್ ಆಗುವುದಕ್ಕೆ ಮುಂಚೆಯೇ ನನಗೆ ಗೊತ್ತಾಯಿತು. ಆದರೆ ನೀವು ಒಂದು ಪದವನ್ನು ಬಳಸಿದಿರಿ. ಹನುಮಂತರಾಯರಿಗೆ ಅದು ತೀರಾ ಸಾಮಾನ್ಯ ಪದವೆನಿಸುತ್ತದೆ. ಅವರು ಬರೀ ಜ್ಞಾಣರಲ್ಲ; ನಿಜಕ್ಕೂ ಜೀನಿಯಸ್. ಸಾಮಾನ್ಯ ಜ್ಞಾನದಲ್ಲಿ ವ್ಯವಹಾರ ಚುರುಕಾಗಿರುವವರಿಗೆ ಜ್ಞಾಣರು ಎಂದು ಕರೆಯುತ್ತಾರೆ. ಜ್ಞಾಣನಾದವನು ಏಕಕಾಲಕ್ಕೆ ಒಂದೇ ಸಂದರ್ಭದಲ್ಲಿ ಎಲ್ಲವನ್ನೂ ಅಬ್ಸರ್ವ್ ಮಾಡಿರುತ್ತಾನೆ ಆದರೆ ಅದು ಮೇಲ್ಮೈ ಅಬ್ಸರ್ವೇಷನ್ ಮಾತ್ರ ಆಗಿರುತ್ತದೆ. ಒಂದನ್ನು ಇನ್ನೊಂದಕ್ಕೆ ಲಿಂಕ್ ಮಾಡುತ್ತಾ ಹೋಗುತ್ತಾನೆ. ಅದೊಂದು ಥರ ನೀಟ್ ಆಗಿ ಪೋಣಿಸಿದ ಸರದಂತೆ ಆಗುತ್ತದೆ. ಆಭರಣವಾಗಿ ಕಣ್ಣಿಗೆ ನೋಡಲು ಚಂದವಾಗಿ ಕಾಣಿಸುತ್ತದೆ. ಜ್ಞಾಣನಾದವನು ಇದನ್ನು ಮೀರಿ ಹೋಗಲಾರ. ಅಂದರೆ ಸೃಜನಶೀಲನಾಗಲಾರದವ ಹಲವನ್ನು ಒಂದಕ್ಕೊಂದು ಯಾಂತ್ರಿಕವಾಗಿ ಸೇರಿಸಿದರೆ ಸೃಜನಾತ್ಮಕತೆಗೆ ಅವಕಾಶವಿರುವುದಿಲ್ಲ. ಹಲವನ್ನು ಸಂಯೋಜಿಸಿ ತೀರಾ ಹೊಸತಾದದನ್ನು ತಯಾರಿಸುವವ ಮಾತ್ರ ಜೀನಿಯಸ್; ವಿವಿಧ ಧಾತುಗಳನ್ನು ಸಂಪೋಜಿಸಿ ಬಂಗಾರ ತಯಾರಿಸುವ ಅಲ್‌ಕೆಮಿಸ್ಟ್ ಥರ...! ಹೀಗಾಗಿ ಜ್ಞಾಣನದು ಚಮತ್ಕಾರಿಕೆಯಾಗಿ ತೋರಿದರೆ ಜೀನಿಯಸ್ ವ್ಯಕ್ತಿಯದು ಮಾಂತ್ರಿಕತೆಯಾಗಿ ತೋರುತ್ತದೆ...

ಇನ್ನೊಂದು ಮಾತು; ಹನುಮಂತರಾಯರಿಗೆ ಸಂದ ಗೌರವವಿದು ಎನ್ನುವುದಕ್ಕಿಂತ ಇವರ ಪ್ರತಿಭೆ ವಿದ್ವತ್ತನ್ನು ಆಪತ್ಕಾಲದಲ್ಲಿ ಅರಸಿ ಬರುವುದು ಎಂದರೇನೇ ಹೆಚ್ಚು ಸೂಕ್ತ. ಹನುಮಂತರಾಯರು ಮನಸ್ಸು ಮಾಡಿದ್ದರೆ ಇಷ್ಟೊತ್ತಿಗೆ ಜಸ್ಟಿಸ್ ಆಗಿರುತ್ತಿದ್ದರು. ಅಡ್ವೋಕೇಟ್ ಜನರಲ್ ಸಹ ಆಗಿರುತ್ತಿದ್ದರು. ಸ್ಪೆಶಲ್ ಸ್ಟೇಟ್ ಪ್ರಾಸಿಕ್ಯೂಟರ್ ಸ್ಥಾನಕ್ಕಿಂತ ಮಿಗಿಲಾದುದನ್ನು ಅವರೇ ಬೇಡವೆಂದು ತಳ್ಳಿದ್ದಾರೆ...

ಈ ಹಿಂದೆ ರಷೀದ್ ಕೊಲೆ ಪ್ರಕರಣದಲ್ಲಿ ಹನುಮಂತರಾಯರು ಮುಂದಿನ ಎಂ.ಪಿ ಅಥವಾ ಎಂ.ಎಲ್.ಎ ಎಂದೇ ಖ್ಯಾತರಾಗಿದ್ದರು. ಅವರು ಮನಸ್ಸು ಮಾಡಿದ್ದರೆ ಅದು ದಕ್ಕಿಯೂ ಬಿಡುತ್ತಿತ್ತು. ರಷೀದ್ ಪ್ರಕರಣದಲ್ಲಿ ಆರೋಪಕ್ಕೆ ಗುರಿಯಾಗಿದ್ದ ಆರ್.ಎಲ್. ಜಾಲಪ್ಪನವರನ್ನು ಮುಗಿಸಿ ಹನುಮಂತರಾಯರು ರಾಜಕೀಯವಾಗಿ ಮಿಂಚುತ್ತಾರೆ ಎಂದು ಬಹಳಷ್ಟು ಜನ ಲೆಕ್ಕಾಚಾರ ಹಾಕಿದ್ದರು. ಆದರೆ ಅದೆಲ್ಲ ಸುಳ್ಳಾಯಿತು. ರಷೀದ್ ಕೊಲೆ ಪ್ರಕರಣದ ಚಳುವಳಿಯನ್ನು ಉತ್ತುಂಗಕ್ಕೆ ಒಯ್ದು ಯಥಾಪ್ರಕಾರ ತಮ್ಮ ವೃತ್ತಿಗೇ ವಾಪಸ್ಸಾದರು ಹನುಮಂತರಾಯರು; ಡಾ. ರಾಜ್ ಗೋಕಾಕ್ ಚಳುವಳಿಯನ್ನು ಉತ್ತುಂಗಕ್ಕೊಯ್ದು ಪುನಃ ಬೆಳ್ಳಿತೆರೆಗೇ ಮರಳಿದಂತೆ... ಅಂದು



ರಾಜ್ ಮನಸ್ಸು ಮಾಡಿದ್ದರೆ ಮುಖ್ಯಮಂತ್ರಿಗಳೇ ಆಗಿ ಬಿಡುವ ಸಾಧ್ಯತೆಗಳಿದ್ದವು. ಖ್ಯಾತ ವಿಜ್ಞಾನಿ ಐನ್‌ಸ್ಟೀನ್‌ಗೆ ದೇಶದ ಅಧ್ಯಕ್ಷನಾಗು ಎಂದು ಕೇಳಿಕೊಂಡರು. ಅದಕ್ಕೆ ಆತ ನಗುತ್ತಲೇ, ನನ್ನನ್ನು ನಾಲ್ಕು ಗೋಡೆಗಳ ಮಧ್ಯೆ ಬಿಟ್ಟುಬಿಡಿ. ನನ್ನ ಫಾರ್ಮುಲಾಗಳ ಬಗ್ಗೆ ಇನ್ನೂ ಚಿಂತಿಸುವುದು ಬಾಕಿಯಿದೆ ಎಂದುಬಿಟ್ಟ...! ಹಾಗೆ ಜೀನಿಯಸ್ ಇರುವವರನ್ನು ಅವರ ವೃತ್ತಿ, ಪ್ರವೃತ್ತಿಗಳಿಂದ ವಿಚಲಿತಗೊಳಿಸುವುದು ದುಸ್ಸಾಧ್ಯವೇ ಸರಿ..." ನನ್ನ ಈ ಮಾತುಗಳು ಶಾಮಣ್ಣನವರಿಗೆ ಗಡುಸಾಗಿ ತೋರಿದವೇನೋ ಎಂದುಕೊಂಡು ಕ್ಷಣ ಕಾಲ ಸ್ತಬ್ದನಾದೆ.

ಆಗ ಶಾಮಣ್ಣ "ಸಾರ್, ಏಕೆ ನಿಲ್ಲಿಸಿಬಿಟ್ಟಿರಿ? ನನಗೆ ಹನುಮಂತರಾಯರ ನಿಜವಾದ ದರ್ಶನವಾಗುತ್ತಿದೆ. ಆದರಿಂದ ನನ್ನನ್ನು ವಂಚಿತನನ್ನಾಗಿಸಬೇಡಿ. ನಾನೇನೂ ನಿಮ್ಮ ಮಾತುಗಳಿಂದ ತಪ್ಪು ಭಾವನೆಗೆ ಒಳಗಾಗಿಲ್ಲ. ಒಂದು ವಿಷಯ, ಭಾಷೆ, ಸಂಗತಿ ಯಾವುದನ್ನೇ ಆಗಲಿ ಹೇಗೆ ಕೂದಲು ಸೀಳುವ ಸೂಕ್ಷ್ಮದೃಷ್ಟಿಯಿಂದ ನೋಡಬೇಕೆನ್ನುವುದನ್ನು ನಿಮ್ಮಿಂದ ಕಲಿತುಕೊಳ್ಳಬೇಕು..." ಎಂದರು.

"ಇಂದು ಮುಖ್ಯಮಂತ್ರಿಗಳಿಗೆ ಆಪತ್ತು ಎದುರಾಗಿರುವಾಗ ಹನುಮಂತರಾಯರ ನೆನಪಾಗಿದೆ. ಆದರೆ ಹನುಮಂತರಾಯರ ಬಳಿ ಯಾವುದೇ ಕೆಲಸಗಳಿಲ್ಲದಿದ್ದಾಗ, ತಮಗೆ ಆಪತ್ತುಗಳು ಎದುರಾಗದೇ ಇದ್ದಾಗ ಹನುಮಂತರಾಯರನ್ನು ಮುಖ್ಯಮಂತ್ರಿಗಳು ನೆನಪಿಸಿಕೊಂಡು ಏನಾದರೂ ಸ್ಥಾನಮಾನಗಳನ್ನು ನೀಡಿದ್ದರೆ ಸತ್ಪಾತ್ರ ಮನ್ನಣೆ ಅನ್ನಬಹುದಿತ್ತು. ಆದರೆ ಈಗ ಮುಖ್ಯಮಂತ್ರಿಗಳೇ ಕ್ಲೈಂಟ್ ಆಗಿ ಬಂದಿದ್ದಾರೆ ಹನುಮಂತರಾಯರ ಬಳಿಗೆ..." ಎಂದೆ.

ಅದೇನೋ ಕಾರಣಕ್ಕೆ ನನ್ನ ಹುಡುಗುತನದ ಸ್ನೇಹಿತ ಸೀನು ನೆನಪಾದ. ಅವನ ಪೂರ್ಣ ಹೆಸರು ಶ್ರೀನಿವಾಸಾಚಾರ್ಯ. ನಮ್ಮ ಕ್ರಿಕೆಟ್ ಟೀಮ್‌ನಲ್ಲಿದ್ದ ಅವನು ಆಲ್ ರೌಂಡರ್ ಆಗಿದ್ದ. ನಾನು ಅವನಿಗೆ ಆಗಾಗ ಹೇಳುತ್ತಿದ್ದೆ ; "ನೀನು ಆಲ್‌ರೌಂಡರ್ ಏಕೆ ಆಗಿದೀಯಾ ಗೊತ್ತೆ? ಈ ಸಂಕುಚಿತ ವಾತಾವರಣ ದಲ್ಲಿ ಚಾಲೆಂಜಿಂಗ್ ಎದುರಾಳಿ ನಿನಗೆ ಇಲ್ಲದುದಕ್ಕಾಗಿ. ಆಲ್‌ರೌಂಡರ್ ಆಗಿರುವುದಕ್ಕೆ ನಿಜಕ್ಕೂ ಪ್ರತಿಭೆ, ಪರಿಶ್ರಮಗಳು ಬೇಕು. ಆದರೆ ನಿನ್ನಲ್ಲಿ ಅವುಗಳ ಕೊರತೆ ನನಗೆ ಎದ್ದು ಕಾಣುತ್ತಿವೆ. ನೀನು ಬ್ಯಾಟಿಂಗ್‌ನಲ್ಲಿ ಮುಂದೆ ಬರಬಹುದು ಅದನ್ನೇ ಪ್ರಾಕ್ಟೀಸ್ ಮಾಡು. ಬೌಲಿಂಗ್‌ನಲ್ಲಿ ನಿನಗೆ ಗ್ರಿಪ್ ಇಲ್ಲ. ಬರೀ ಸ್ಪೀಡ್ ಎಸೆತದ ಮೂಲಕ ವಿಕೆಟ್ ಬೀಳಿಸಬೇಕು ಅಂತ ನೋಡ್ತೀ ಯಾ. ಸ್ಪಿಂಗ್ ನಿನಗೆ ದಕ್ಕುತ್ತಿಲ್ಲ" ಎಂದೆ. ನಾನು ಹೀಗೆ ಹೇಳಿದ್ದೇ ಅವನು ನನ್ನೊಡನೆ ಮಾತು ಬಿಟ್ಟ. ನನ್ನಿಂದ ಅವನು ದೂರವಾದಷ್ಟೂ ನಾನಾಡಿದ ಮಾತುಗಳು ಹತ್ತಿರ ವಾಗಿ ಅವನನ್ನು ಇರಿಯ ತೊಡಗಿದವು. ಒಂದೇ ವಾರದಲ್ಲಿ ರಿಸ್ಟ್‌ಗೆ ಒಂದು ಪಟ್ಟಿ ಬಿಗಿದುಕೊಂಡು ಬಂದ. ಡಾಕ್ಟರ್ ಹೆಚ್ಚು ಬೌಲಿಂಗ್ ಮಾಡಬೇಡ ಎಂದು ಅಡ್ವೈಜ್ ಮಾಡಿದ್ದಾರೆ ಎಂದು ಹೇಳಿದ. ಆದರೆ ನನಗೆ ಅವನ ಮಾತು ಸುಳ್ಳು ಎನಿಸಿದವು. ಟೀಮ್‌ನಲ್ಲಿ ವಿಚಿತ್ರ ಸೈಕಾಲಜಿ ಆಪರೇಟ್ ಆಗುತ್ತಿರುತ್ತದೆ. ಭಾರೀ ಬ್ಯಾಟ್ಸ್‌ಮನ್‌ಗಳೆಲ್ಲ ಸಿಂಗಲ್ ಡಿಜಿಟ್‌ನಲ್ಲೇ ಔಟ್ ಆಗಿ ಕೊನೆಗೆ ಬೌಲರ್‌ಗಳು ಬ್ಯಾಟ್ ಹಿಡಿದು ನಿಂತಿರುತ್ತಾರೆ. ಇಡೀ ತಂಡದ ಮಾನದ ಪ್ರಶ್ನೆ ಧುತ್ತೆನ್ನುತ್ತದೆ. ಆಗ ನೋಡಿ; ಬ್ಯಾಟಿಂಗ್ ಎಂದರೇ ನನಗೆ ಅಲರ್ಜಿ ಎನ್ನುವವ ಸೆಂಚುರಿ ಬಾರಿಸಿಬಿಡುತ್ತಾನೆ! ನಮ್ಮ ದೇಶದ ಕ್ರಿಕೆಟ್ ತಂಡ ಇಂಥ ಪ್ರದರ್ಶನಗಳನ್ನು ಅದೆಷ್ಟು ನೀಡಿಲ್ಲ! ಹಾಗೆಯೇ ಆಯಿತು. ಬೌಲಿಂಗ್‌ನಲ್ಲಿ ವೀಕ್ ಎಂದೇ ಪರಿಗಣಿಸಲ್ಪಟ್ಟವ ಬೌಲಿಂಗ್‌ಗೆ ನಿಂತ. ಸತತ ಪರಿಶ್ರಮದಿಂದ ಅದನ್ನು ಕರಗತಗೊಳಿಸಿಕೊಂಡ. ಅವನ ತಲೆಯಲ್ಲಿ, ನಮ್ಮ ಟೀಮಿನ ಆಲ್‌ರೌಂಡರ್ ಆಟಗಾರ ಕೈಗೆ ಪಟ್ಟಿ ಸುತ್ತಿಕೊಂಡಿದ್ದಾನೆ. ಇದರಿಂದಾಗಿ ನಮ್ಮ ಟೀಮ್ ಸೋಲಕೂಡದು ಎನ್ನುವ ಚಿಂತೆ... ಸರಿ, ಆಲ್‌ರೌಂಡರ್ ಸೀನುನನ್ನು ಮೀರಿಸಿಯೇ ಬಿಟ್ಟ ಬೌಲಿಂಗ್‌ನಲ್ಲಿ! ಆಗ ಸೀನು ಮತ್ತಷ್ಟು ಧೃತಿಗೆಟ್ಟ. ತಾನಿಲ್ಲದಿದ್ದರೆ ತಮ್ಮ ತಂಡ ಕಳಪೆ ಪ್ರದರ್ಶನ ನೀಡುವುದು ಎಂದು ಭ್ರಮಿಸಿಕೊಂಡಿದ್ದ. ಅದಕ್ಕೆ ತದ್ವಿರುದ್ಧವಾಗಿ ನಾವು ಇಡೀ ಟೀಮ್ ಆಗಿ ದಿಗ್ವಿಜಯ ಸಾಧಿಸಿಬಿಟ್ಟೆವು. ನಮ್ಮ ದಿಗ್ವಿಜಯದ ಮಾರನೇ ದಿನವೇ ಸೀನು ಕಾಲಿಗೂ ಒಂದು ಪಟ್ಟಿ ಹಾಕಿಕೊಂಡು ಬಂದ ಕಾಲೇಜ್‌ಗೆ. ನಮ್ಮ ತಂದೆಯ ಕೆಲಸದಲ್ಲಿ ಸಹಾಯ ಮಾಡಲು ಹೋಗಿ ಕಾಲು ಉಳುಕಿಸಿಕೊಂಡೆ ಎಂದು ಸುಳ್ಳು ಹೇಳಿದ. ಆದರೆ ಬ್ಯಾಟಿಂಗ್ ಅನ್ನು ಯಾವಾಗಲೂ ಮಾಡು ವಂತೆಯೇ ಮಾಡಿದ. ಸ್ವಲ್ಪ ನಟನೆ ಸೇರಿಸಿ ರನ್‌ಗಳನ್ನು ಮಾಡಿದ. ತನಗೆ ಏನೆಲ್ಲ ನೋವು, ಪೆಟ್ಟುಗಳಿದ್ದರೂ ಇಷ್ಟು ರನ್ ಮಾಡಿದೆ ಎಂದು ತೋರಿಸುವ ಚಪಲ ಅವನದಾಗಿತ್ತು. ಮಾರನೆ ದಿನ ಬೆಳಗ್ಗೆ ಅವನ ಮನೆಯ ಮುಂದಿನಿಂದ ಹೋಗುತ್ತಿರುವಾಗ ಕಾಂಪೌಂಡ್‌ನಲ್ಲಿ ಸೀನು ಜಾಗಿಂಗ್ ಮಾಡುತ್ತಿದ್ದ. ಕೈ, ಕಾಲುಗಳಿಗೆ ಪಟ್ಟಿಗಳೇ ಇರಲಿಲ್ಲ! ನಾನು ಅಂದುಕೊಂಡಿದ್ದು ಸತ್ಯವಾಗಿತ್ತು. ತನ್ನ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳಲು ಏನೆಲ್ಲ ನಾಟಕಗಳನ್ನು ಆಡತೊಡಗಿದ್ದ ಸೀನು ಮಾನಸಿಕವಾಗಿ ಹೋಪ್‌ಲೆಸ್ ಆಗಿ ಹೋಗಿದ್ದ. ಸದಾ ಕಳ್ಳಭಾವನೆಯಲ್ಲಿ ಬಳಲುವಂತಾಗಿದ್ದ.

ತನ್ನ ಅಸಾಮರ್ಥ್ಯದಲ್ಲಿಯೂ ಅಧಿಪತ್ಯ ಉಳಿಸಿಕೊಳ್ಳುವುದಕ್ಕಾಗಿ ಮಾನಸಿಕ ಮೀಸಲಾತಿ ಬಯಸುತ್ತಿದ್ದ. ಏನೆಲ್ಲ ತೊಂದರೆಗಳಲ್ಲೂ ಇಷ್ಟು ಮಾಡುವುದೇ ಭಾರೀ ಮತ್ತು ಗ್ರೇಟ್ ಎನಿಸಿಕೊಳ್ಳುವುದಕ್ಕಾಗಿ... ಆದರೆ ಅವನು ಆರೇ ತಿಂಗಳಲ್ಲಿ ಆಟ ಮತ್ತು ಪಾಠ ಎರಡರಲ್ಲೂ ತೀರಾ ಹಿಂದುಳಿದ. ಇದು ಆಲ್‌ರೌಂಡರ್ ಸೀನನ ಕತೆ ಸುತ್ತಲಿನವರಿಗೆ ಮೋಸ ಮಾಡುತ್ತಿದ್ದೇನೆಂದು ತಿಳಿದುಕೊಂಡಿದ್ದ ಸೀನು ಸ್ವತಃ ತನಗೇ; ತನ್ನ ಮನಸ್ಸಿಗೇ ಮೋಸ ಮಾಡಿಕೊಂಡಿದ್ದ. ಇರುವ ಸಾಮರ್ಥ್ಯವನ್ನೂ ಕಳೆದುಕೊಂಡು ಮಂಗನಂತಾಗಿದ್ದ.

-ಇಂದ್ರಜಿತ್ ಲಂಕೇಶ್

ಇವತ್ತಿನ ಸಾಹಿತಿಗಳಿಗೆ ಖಾನ್ ಬದುಕು ಒಂದು ಪಾಠ!

ಇತ್ತೀಚೆಗೆ ನಮ್ಮನ್ನಗಲಿದ ಜಾನಪದ ಸಾಹಿತಿ ಕರೀಂ ಖಾನರಿಂದ ಕನ್ನಡ ಸಾಹಿತ್ಯ, ಜಾನಪದ ಲೋಕದ ಒಂದು ಯುಗ ಅಂತ್ಯವಾದಂತಾಯ್ತು.

ಮೂಲತಃ ಅಫ್ಘಾನಿಸ್ತಾನದ ಸಾಂಪ್ರದಾಯಿಕ ಮುಸ್ಲಿಂ ಕುಟುಂಬದಿಂದ ಬಂದು ಮಡಿಕೇರಿಯ ಪ್ರೇಮಾಮಯನ್ನು ವರಿಸಿ ಸಾಂಪ್ರದಾಯಿಕತೆಯ ಕಿರಿದಾದ ಕಟ್ಟುಪಾಡುಗಳಿಂದ ಹೊರಬಂದು ತಮ್ಮದೇ ಆದ ಹಾದಿಯಲ್ಲಿ ಸಾಗಿದವರು.

ಸಿರಿಗನ್ನಡಕ್ಕೋಸ್ಕರ ಶಿಥಿಲಾವಸ್ಥೆಯಲ್ಲಿದ್ದ ಅವಸಾನದ ಹಾದಿ ಹಿಡಿದಿದ್ದ ಕನ್ನಡ ಜಾನಪದ ವ್ಯವಸ್ಥೆಗೆ ಜೀವ ತುಂಬಿದವರು.

ಕನ್ನಡ ಭಾಷೆ, ಜಾನಪದ ಸಾಹಿತ್ಯಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡು, ಗಾಂಧೀಜಿಯ ಮಾನವೀಯ ತತ್ವಗಳಿಗೆ ಮಾರುಹೋಗಿ ಸ್ವಾತಂತ್ರ್ಯ ಹೋರಾಟಗಾರರಾಗಿ ಕೊನೆಗೆ ಕನ್ನಡ ಜಾನಪದ ಜೊತೆಗೆ ಸಿಂ ಹಾಕಿಕೊಂಡವರು. ಸಮೃದ್ಧವಾದ ಕನ್ನಡ ಜಾನಪದ ಪ್ರಪಂಚಕ್ಕೆ ಕೊನೆಯುಸಿರವರೆಗೂ ತಮ್ಮನ್ನು ತಾವೇ ಅರ್ಪಿಸಿಕೊಂಡವರು.

ಸುಂದರ ಕನ್ನಡ ಭಾಷೆಗೆ, ಆ ಭಾಷೆಯಿಂದ ಬಿಡಿ 'ಸುಂದರ ಚಿತ್ರ' 'ಸುಂದರ ಚಿತ್ರ' ಪ್ರಮುಖ ಜಾನಪದ ಸಾಹಿತ್ಯ ಸಂಸ್ಕೃತಿಗೆ, ಯಾವುದೇ ಬಿಗ್ರಗಳಿಲ್ಲದ ಬದ್ಧ ಸರಳ ಮನುಷ್ಯನ ಅರ್ಪಣಾ ಮನೋಭಾವ ಎಷ್ಟೊಂದು ಬದಲಾವಣೆ ತರಬಹುದು ಎಂಬುದಕ್ಕೆ ಖಾನರ ಬದುಕು, ತನ್ನನ್ನು ಅರ್ಪಿಸಿಕೊಂಡ ರೀತಿ ಒಂದು ನಿದರ್ಶನ.

ಒಂದಿನ ಮೈಸೂರು ಸಂಸ್ಥಾನಕ್ಕೆ ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳನ್ನು ಸೇರಿಸಲು ನಾಡಿನ ಉದ್ದಗಲಕ್ಕೂ ನಡೆದು ಜನಜಾಗೃತಿ ಮೂಡಿಸಿದವರು. (ಈ ಸಂದರ್ಭದಲ್ಲೇ ಅವರಿಗೆ ಕನ್ನಡ ಜಾನಪದ ಲೋಕದ ವಿರಾಟ್ ದರ್ಶನವಾಯಿತು)

ಭಾಷೆಯ ಅಭಿವೃದ್ಧಿಗೆ, ಜಾನಪದ ಸೌಂದರ್ಯಕ್ಕೆ ಗಂಟುಬಿದ್ದ ಖಾನರಿಗೆ ಬಿಡತನದಿಂದಾಗಿ ಬದುಕು ಸವಾಲಾಯಿತು. ತಮ್ಮ ಸ್ವಕೃತಿಗಳ ಮಾರಾಟದಿಂದ ಬರಕತ್ತಾಗದ ಖಾನರು ಬದುಕಿಗೊಂದು ನೆಲೆ ಕಾಣಲು ಮದರಾಸಿಗೆ ರೈಲು ಹತ್ತಬೇಕಾಯಿತು. ಅಲ್ಲಿ ಹಲವಾರು ಸುಪ್ರಸಿದ್ಧ ಕನ್ನಡ ಚಲನಚಿತ್ರಗಳಿಗೆ ಕಥೆ, ಸಾಹಿತ್ಯ, ಸಂಭಾಷಣೆ, ಗೀತೆ ಬರೆದು ಸೈ ಎನಿಸಿಕೊಂಡರು. ಅದರಲ್ಲೂ ಅವರ 'ಸ್ವರ್ಣಗೌರಿ' ಚಿತ್ರದ 'ನಟವರ ಗಂಗಾಧರ' ಎಂಬ ಸುಮಧುರ ಗೀತೆ ಕೇಳದ ಕನ್ನಡಿಗರೇ ಇಲ್ಲ ಎನ್ನಬಹುದು. ಇಂದು 'ಆಯಕಟ್ಟಿನ' ಜಾಗಗಳಲ್ಲಿ ಕುಳಿತು ಹವಾ ನಿಯಂತ್ರಿತ ಕೋಣೆಗಳಿಂದ ಹೊರಬರಲಾಗದೆ ಕನ್ನಡ ಸೇವೆ ಮಾಡುತ್ತಿರುವ ಇಂದಿನ ಸಾಹಿತೀ ಅಧಿಕಾರಿಗಳಿಗೆ ಖಾನರ ಬದುಕೊಂದು ಪಾಠ.

ನಿಗಾ ವಹಿಸದಿದ್ದರೆ ಕಾಲಕ್ರಮೇಣ ಜನಮನದಿಂದ

ರಾಜ್‌ಕುಮಾರ್‌ರಿಂದ ಸನ್ಮಾನ ಮಾಡಿಸಿಕೊಳ್ಳುತ್ತಿರುವ ಕರೀಂ ಖಾನ್

ಮರೆತು ಹೋಗುವ ಜಾನಪದ ಶಾಖೆಗೆ ಸಂರಕ್ಷಣೆ, ಪ್ರೋತ್ಸಾಹ ಬೇಕಿದೆ. ಸರಕಾರವನ್ನೇ ನಂಬಿ ಕುಳಿತರೆ ಜಾನಪದಕ್ಕೆ ಉಳಿಗಾಲವಿಲ್ಲ. ಇಂದು ಬೆಳಗಾವಿಯ ಮೇಲೆ ಮರಾಠಿಗರು ಬೇಕಾಬಿಟ್ಟಿ ಸವಾರಿ ಮಾಡಿ ಕನ್ನಡಿಗರ ಮೇಲೆ ದೌರ್ಜನ್ಯ, ವ್ಯವಸ್ಥಿತವಾಗಿ ಕನ್ನಡ ಭಾಷೆಯ ನಿರ್ಮೂಲನಾ ಕಾರ್ಯದಲ್ಲಿ ನಿರತರಾಗಿರುವಾಗ ನಮ್ಮ ನಾಡಿನ ನಾಯಕರುಗಳು ಬೆಂಗಳೂರೆಂಬ ತಂಪು ನಗರಿಯಲ್ಲಿ ಬೆಳಗಾವಿಗೆ ವಿಳಾಸವೇ ಬಿಟ್ಟು ಬೆಚ್ಚಗಿದ್ದಾರೆ.

'ಗಣಿ'ಯಿಂದ ಹೊರಬರಲಾರದೆ ಏದುಸಿರು ಬಿಡುತ್ತಿರುವ ಸರಕಾರಕ್ಕೆ ಕನ್ನಡಭಾಷೆ, ಸಾಹಿತ್ಯ, ಸಾಹಿತಿಗಳು, ಜಾನಪದ ಎಂದೆಲ್ಲಾ ತಲೆಕೆಡಿಸಿಕೊಳ್ಳಲು ಸಮಯವಾದರೂ ಎಲ್ಲಿ?

ರಹಮತ್ ಅಲಿಬಾವ

ಕ್ರೂರ ಕ್ರಮಗಳನ್ನು ತಡೆಯಲು ನಾವು ಕ್ರಿಮಿನಲ್
ಕ್ರಮ ಕೈಗೊಳ್ಳಬೇಕು
ಅದೇ ಕ್ರಮದ ಎದುರು
ಗಾಬರಿಯ ಮೌನ ಬೆತ್ತಲೆ ಕಾಲುಗಳು
- ನ/ಉ



ಕೊನೆಗಾಲದಲ್ಲಿ ನಿನ್ನ ಗತಿ ಏನು ಎಂದು ಕೇಳಿದ ಅಜ್ಜಿಗೆ ಆತ ಹೇಳಿದ್ದು

[illegible] ವಯೋವೃದ್ಧ ಸಾಹಿತಿ ಕರೀಂಖಾನ್ ಸಾಹೇಬ ರಿಗೆ ಮೂಗಿನೊಳಗೆ ತಲೆಯಿಟ್ಟು ಪ್ರಜ್ಞೆತಪ್ಪಿದ್ದಾರೆ. ಈ ಬಾರಿ ಅವರು ಬದುಕುಳಿದಾರೆಂಬ ಭರವಸೆಯಿಲ್ಲ. ಮೊನ್ನೆ ತಾನೆ ನನ್ನ ಸೋದರಮಾವ ಬೆಳಗೆರೆ ಕೃಷ್ಣ ಶಾಸ್ತ್ರಿಗಳು ಹೋಗಿ ಕರೀಂಖಾನ್‌ರನ್ನು ಮಾತಾಡಿಸಿ ಕೊಂಡು ಬಂದರು. ಬಂದವರ ಕಣ್ಣುಗಳಲ್ಲಿ ಉಲ್ಲಾಸವಿರಲಿಲ್ಲ. ಅವರಿಬ್ಬರದೂ ಮುಕ್ಕಾಲು ಶತಮಾನದ ಗೆಳೆತನ. ಇಬ್ಬರು ನೂರರ ಆಚೆಗಿದ್ದಾರೆ. ಇನ್ನೊಬ್ಬರು ಕೊಂಚ ಈಚೆ. ಆಸ್ಪತ್ರೆಯಿಂದ ಬಂದವರು ಕರೀಂಖಾನ್‌ರ ಬಗ್ಗೆ ತುಂಬ ಹೊತ್ತು ಮಾತನಾಡಿದರು.

ಆ ಮಾತುಗಳೆಲ್ಲ ಇಲ್ಲಿವೆ.

●●●

ಜಾನಪದ ಲೋಕದ ದಿಗ್ಗಜರೂ, ಸ್ವಾತಂತ್ರ್ಯ ಹೋರಾಟಗಾರರೂ, ಕಾದಂಬರಿಕಾರರೂ, ನಾಟಕಕಾರರೂ, ಚಲನಚಿತ್ರ ಸಾಹಿತಿಗಳೂ ಆದ ಎಸ್.ಕೆ. ಕರೀಂಖಾನ್ ನಮ್ಮ ನಡುವಿನ ಅಪರೂಪದ ವ್ಯಕ್ತಿ. ಅವರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ದ್ದಾಗ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಪ್ರಚಲಿತವಿದ್ದ ಹಾಡು ಗಳನ್ನು ಧ್ವನಿ ಮುದ್ರಿಸಿಕೊಂಡು, ಪುಸ್ತಕರೂಪದಲ್ಲಿ ಪ್ರಕಟಿಸಿದರು. ತಾವೇ ಆ ಹಾಡುಗಳನ್ನು ಹಾಡಿ ಜನರಲ್ಲಿ ಅ ಬಗೆಗೆ ಆಸಕ್ತಿ ಮೂಡಿಸಿದ್ದನ್ನು ಯಾರೂ ಮರೆಯಲಾರರು. ಕೇವಲ ನಾಲ್ಕು ನೂರು ರುಪಾಯಿಗಳ ಮಾಸಾಶನದಲ್ಲಿ ಬುಲ್‌ಟೆಂಪಲ್ ರಸ್ತೆಯ ದ್ವಾರಕಾ ಹೋಟೆಲ್‌ನಲ್ಲಿ ಯಾರ ನೆರವೂ ಇಲ್ಲದೆ ತಮ್ಮ ಜೀವನದ ವೃದ್ಧಾಪ್ಯವನ್ನು ಕಳೆದ ಕರೀಂಖಾನರನ್ನು ಅನೇಕ ಬಾರಿ ನೋಡಿ, ಮಾತನಾಡಿಸುವ ಭಾಗ್ಯ ನನಗೆ ಒದಗಿ ಬಂದಿದೆ. [illegible] ಬೆಳಗೆರೆಗೂ ಕರೆಸಿ ಸನ್ಮಾನಿಸುವ ಯೋಗಾಯೋಗವೂ ಒದಗಿ ಬಂದಿತ್ತೆಂಬುದು ಸಂತೋಷದ ವಿಚಾರ.



ನಾನೇ ಸ್ವತಃ ಅವರನ್ನು ಬೆಳಗೆರೆಗೆ ಆಹ್ವಾನಿಸಲು ಹೋಗಿದ್ದೆ. ಆ ಹೊತ್ತಿಗೆ ನಾವು ಭೇಟಿಯಾಗಿ ಬಹಳ ವರ್ಷಗಳಾಗಿತ್ತು. ನಾನು ಬಾಗಿಲಿನಲ್ಲಿಯೇ ನಿಂತು 'ನಮಸ್ಕಾರ ಸಾರ್' ಎಂದೆ. 'ನಮಸ್ಕಾರ ಒಳಗೆ ಬನ್ನಿ' ಎಂದರು. 'ಬಹಳ ದಿವಸಗಳ ತರುವಾಯ ಬಂದು ನಿಮ್ಮನ್ನು ನೋಡುತ್ತಿದ್ದೇನೆ ತಮಗೆ ಜ್ಞಾಪಕವಿರಬಹುದು...' ಎಂದು ಮಾತು ನಿಲ್ಲಿಸಿದೆ. ಅಂತಹ ದಿಗ್ಗಜರು ನನ್ನ ಹೆಸರನ್ನೇಕೆ ನೆನಪಿಡುತ್ತಾರೆ ಎಂದುಕೊಂಡು. 'ಬೆಳಗೆರೆ ಕೃಷ್ಣಶಾಸ್ತ್ರಿ' ಎಂದೆ. ಕೂಡಲೇ ಕರೀಂಖಾನರು 'ನಿಮ್ಮ ಅಕ್ಕನವರ ಕವನ ಸಂಕಲನ...' ಎಂದು ನೆನಪಿಸಿಕೊಳ್ಳತೊಡಗಿದರು. 'ಜಾನಕಮ್ಮ' ಎಂದೆ. 'ಹೌದುದು. ಜಾನಕಮ್ಮನವರ ಕವನ ಸಂಕಲನ ನನ್ನ ಹತ್ತಿರ ಇದೆ. ಹೀಗಾಗಿ ನಿಮ್ಮನ್ನು ಮರೆಯಲಾದೀತೆ?' ಎಂದರು. 'ನೀವು 1967ನೇ ಇಸವಿಯಲ್ಲಿ [illegible] ಕವಿಯ ಜಯಂತಿ ಸಂದರ್ಭದಲ್ಲಿ ದೇವನೂರಿಗೆ [illegible] ಜನರೆಲ್ಲ ಮೆಚ್ಚಿ ಹೊಗಳಿದ್ದರು' ಎಂದು ಹಿಂದಿನ ನೆನಪು ಹೇಳಿದೆ. 'ಹೌದು ಆ ದಿನ ಬರಬೇಕಾದ ಮುಖ್ಯ ಅತಿಥಿಗಳು ಬಂದಿರಲಿಲ್ಲ' ಎಂದರು (ಅವತ್ತು ಅ.ನ. ಕೃಷ್ಣರಾಯರು ಅನಾರೋಗ್ಯದ ಕಾರಣದಿಂದ ಬಂದಿರಲಿಲ್ಲ.)

'ನಾನು ಅವತ್ತು ಸುಧನ್ವನ ವಿಚಾರವಾಗಿ ಮಾತನಾಡಿದೆ. ಆಗ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯಾಗಿದ್ದ ಅನಂತರಾಮಯ್ಯ ಅವರು 'ನೋ ಟೈಂ ಲಿಮಿಟ್ ಫಾರ್ ಯೂ' ಎಂದದ್ದೆ ಸುಮಾರು ಒಂದೂವರೆ ಗಂಟೆ ಮಾತನಾಡಿದೆ ಅನ್ನಿಸುತ್ತೆ' ಎಂದರು. ಎಷ್ಟು ಕರಾರುವಾಕ್ಕಾದ ನೆನಪು ಎಂದು ಆಶ್ಚರ್ಯವಾಯಿತು. ನಂತರ 'ಅನಂತ ರಾಮಯ್ಯನವರು ಎಲ್ಲಿಂದ ಕರೆದುಕೊಂಡು ಬಂದಿರಿ ಇವರನ್ನು? ಎಷ್ಟೊಂದು ಸೊಗಸಾಗಿ ಮಾತನಾಡುತ್ತಾರಲ್ಲ. ಎಷ್ಟು ಶಬ್ದ ಭಂಡಾರ ಇದೆ ಇವರ ಹತ್ತಿರ ಎಂದು ಮೆಚ್ಚಿಗೆ ಸೂಚಿಸಿದ್ದರು' ಎಂದೆಲ್ಲ ಹೇಳಿದೆ. ಅವರೇ ಮಾರನೆಯ ದಿನದ ಜಾನಪದ ಕಾರ್ಯಕ್ರಮದ ವಿವರವನ್ನು ನೆನಪಿಸಿ ಕೊಂಡರು.

ಬಳ್ಳಾರಿಯಲ್ಲಿ ಬೀಚಿ, ಗವಿಸಿದ್ಧಪ್ಪ, ಕೋ. ಚೆನ್ನಬಸಪ್ಪ ಮುಂತಾದವರು ನಡೆಸುತ್ತಿದ್ದ ನಾಡಹಬ್ಬಕ್ಕೆ 'ಹೊಸಬರನ್ಯಾರಾದರೂ ತಿಳಿಸು ಕರೆಸುತ್ತೇವೆ ಎಂದಿದ್ದರು. ನಾನು ನಿಮ್ಮ ಹೆಸರನ್ನು ಸೂಚಿಸಿದ್ದೆ. ಆ ದಿನ ನಾನೂ ಆ ಸಭೆಯಲ್ಲಿದ್ದೆ. ನೀವು ಬೀದರ್‌ಗೆ ಹೋಗುವವರಿದ್ದಿರಿ. ಆ ಕಾರ್ಯಕ್ರಮ ಮುಗಿಸಿಕೊಂಡು ಹೊರಟಿರಿ. ಮಾರನೆಯ ಬೆಳಗ್ಗೆ ನನ್ನ ಸ್ನೇಹಿತರೆಲ್ಲ 'ಒಳ್ಳೆಯವರನ್ನು ಸೂಚಿಸಿದೆ ಕಣಯ್ಯ' ಎಂದು ನನ್ನ ಬೆನ್ನು ತಟ್ಟಿದ್ದರು- ನಿಮ್ಮಿಂದ ನನಗೂ ಹೆಸರು ಬಂತು' ಎಂದು ನಕ್ಕೆ.

ಕರೀಂಖಾನರಿಗೂ ಬಹಳ ಸಂತೋಷವಾಯಿತು. ಆ ಹೊತ್ತಿಗೆ ಕರೀಂಖಾನರು ನನಗೆ ಹತ್ತಿರದಿಂದ ಪರಿಚಿತರಾಗಿದ್ದರೂ [illegible] ಬಾಲ್ಯ, ವಿದ್ಯಾಭ್ಯಾಸ ಮುಂತಾದ ವಿವರಗಳು ಅಷ್ಟಾಗಿ ಗೊತ್ತಿರಲಿಲ್ಲ. ಆ ಕುರಿತು ಅವರನ್ನು ಕೇಳಿದೆ. ಅದಕ್ಕವರು ಬಹಳ ವಿಸ್ತಾರವಾಗಿ ಹೇಳಿದರು: 'ನನ್ನ ತಂದೆ ಅಫ್ಘಾನಿಸ್ತಾನದವರು. (ಕಾಬೂಲ್) ರಹಮಾನ್ ಖಾನ್ ಎಂದು. ಮೂರನೆಯ ಅಫ್ಘಾನ್ ಯುದ್ಧದ ಸಂದರ್ಭದಲ್ಲಿ ನಮ್ಮ ತಂದೆಯವರಿಗೆ 16 ವರ್ಷ ವಯಸ್ಸು. ಆಗ ಅದು ಬ್ರಿಟಿಷರ ಅಧೀನದಲ್ಲಿತ್ತು. ದೋಸ್ತ್ ಮಹಮದ್ ಎಂಬುವವನು ಬ್ರಿಟಿಷರಿಗೆ ವಿರುದ್ಧವಾಗಿದ್ದ. ಆ ಹಿನ್ನೆಲೆಯಲ್ಲಿ ಕ್ರಾಂತಿ ನಡೆದಾಗ ಇಪ್ಪತ್ತು ಸಾವಿರ ಜನರನ್ನು ಕೊಂದು ಹಾಕಿದ್ದರು. ಈ ವಿಷಯವನ್ನು ಭಾರತದಲ್ಲಿದ್ದ ಒಬ್ಬ ಜನರಲ್ ಬೋರ್ಡ್ ಎನ್ನುವ ಡಾಕ್ಟರನಿಗೆ ತಿಳಿಸಲೆಂದು ನಮ್ಮ ತಂದೆಯವರನ್ನು ಭಾರತಕ್ಕೆ ಕಳಿಸಿದರು. ಈ ಮಧ್ಯೆ ಅವರ ಅಣ್ಣತಮ್ಮಂದಿರಲ್ಲಿ ಕಲಹ ನಡೆದು ನಮ್ಮ ತಂದೆ ಇಲ್ಲಿಯೇ ಉಳಿದರು. ನಮ್ಮ ತಾಯಿ ಅರಬ್ ದೇಶದವರು- ಜೈನಬಿ ಎಂದು. ನಮ್ಮ ಅಜ್ಜ ಸೈಯದ್, ಪತ್ನಿ ಸಹಿತ ಭಾರತದಲ್ಲಿರುವಾಗಲೇ ನಮ್ಮ ತಾಯಿ ಹುಟ್ಟಿದ್ದು. ಆಗ ನನ್ನಜ್ಜಿ ತೀರಿಕೊಂಡ ಕಾರಣದಿಂದ ಆ ಮಗುವನ್ನು ಸಾಕಲು ಬೇರೊಬ್ಬರಿಗೆ ಕೊಟ್ಟುಬಿಟ್ಟರಂತೆ. ಹೀಗೆ ನಮ್ಮ ತಂದೆ ಸಕಲೇಶಪುರದಲ್ಲಿ ನೆಲೆ ನಿಂತರು. ನಾನು ಅಲ್ಲಿಯೇ ಹುಟ್ಟಿದೆ. ಮಲೆನಾಡಿನ ಪ್ರಕೃತಿ, ಹೇಮಾವತಿ ನದಿಯ ತೀರ ಇವುಗಳ ಮಧ್ಯೆ ನನ್ನ ಬಾಲ್ಯ ಕಳೆಯಿತು' ಎಂದು ಮಾತು ನಿಲ್ಲಿಸಿದರು ಕರೀಂಖಾನ್.

ಬಾಲ್ಯದ ಬಗ್ಗೆ ತಿಳಿದುಕೊಂಡ ನನಗೆ ಅವರ ವಿದ್ಯಾಭ್ಯಾಸದ ಬಗೆಗೆ ಏನೂ ಹೇಳಲಿಲ್ಲವಲ್ಲ ಎನಿಸಿ 'ಸರ್ ನಿಮ್ಮ ವಿದ್ಯಾಭ್ಯಾಸ ನಡೆದದ್ದು ಸಕಲೇಶಪುರದಲ್ಲಿಯೇ?' ಎಂದು ಕೇಳಿದೆ. ಅದಕ್ಕವರು 'ಹೌದು. ಆಗ ಸಕಲೇಶಪುರದಲ್ಲಿ ಹೈಸ್ಕೂಲುಗಳಿರಲಿಲ್ಲ. ಹೊಳೆನರಸೀಪುರದಲ್ಲಿ ಒಂದು, ಹಾಸನದಲ್ಲಿ ಇನ್ನೊಂದು ಇತ್ತು. ನಾನು ಹಾಸನಕ್ಕೆ ಹೋಗಿ ಹೈಸ್ಕೂಲು ಕಲಿತೆ. ತುಂಬಾ ಬಡತನ ಇದ್ದುದರಿಂದ ವ್ಯಾಸಂಗ ಮುಂದುವರೆಸಲಾಗಲಿಲ್ಲ' ಎಂದರು.

'ಶಾಲೆಯಲ್ಲಿ ಕಲಿತ ವಿದ್ಯಾಭ್ಯಾಸದ ರೀತಿ ಬೇರೆ. ಆದರೆ ನೀವು ಸಾಧಿಸಿರುವ ವಿದ್ಯೆಯ ಪ್ರೌಢಿಮೆ ಅಪ್ರತಿಮವಾದದ್ದು. ಅದನ್ನು ನೀವು ಸಾಧಿಸಿದ್ದು ಹೇಗೆ?' ಕುತೂಹಲದಿಂದ ಕೇಳಿದೆ.

ಬಹಳ ಸ್ವಾರಸ್ಯಕರವಾದ ವಿಷಯವೊಂದನ್ನು ಪ್ರಸ್ತಾಪಿಸಿ ಹೇಳಿದರು: 'ನನ್ನ ಗುರುಗಳು ಆಚಂಗಿ ನಾರಾಯಣ ಶಾಸ್ತ್ರಿ ಎಂಬುವವರು. ಅವರು ಮಹಾ ವಿದ್ವಾಂಸರು. ಕನ್ನಡ, ಸಂಸ್ಕೃತ, ಇಂಗ್ಲಿಷ್‌ಗಳಲ್ಲಿ ಅಸಾಧಾರಣ ಪಾಂಡಿತ್ಯವಿತ್ತು. ಹಾಗೆಯೇ ಸಂಗೀತ, ಜ್ಯೋತಿಷ್ಯಗಳಲ್ಲಿಯೂ ಸಹ. ಅವರಿಂದ ನನಗೂ ಸ್ವಲ್ಪ ಲಭ್ಯವಾಯ್ತು. ಅದನ್ನೇ ನಾನು ಬಂಡವಾಳವನ್ನಾಗಿ ಬಳಸಿಕೊಂಡೆ.'

'ನಾರಾಯಣ ಶಾಸ್ತ್ರಿಗಳು ಊರ ಹೊರಗೆ ಒಂದು ತೋಟ ಮಾಡಿಕೊಂಡಿದ್ದರು. ನಾನು ಸಾಮಾನ್ಯವಾಗಿ ಅವರ ಜೊತೆಯಲ್ಲಿಯೇ ಇರುತ್ತಿದ್ದೆ. ಆಗೆಲ್ಲ ಬಹಳ ಷ್ಟನ್ನು ಹೇಳಿಕೊಟ್ಟರು. ನಾನು ಅದನ್ನು ಛಲದಿಂದ ಸಾಧನೆಯಾಗಿ ಕಲಿತೆ.. ಒಂದು ನೆಲೆಯಲ್ಲಿ ಅದು ಹುಟ್ಟುಗುಣವೂ ಆಗಿರಬಹುದು... ನನ್ನಲ್ಲಿ ಅವರಿಗೆ ಸಂಪೂರ್ಣ ಮಮತೆ ಬಂದು 'ನನ್ನ ವಿದ್ಯೆನೆಲ್ಲಾ ನಿಂಗೆ ಧಾರೆ ಎರಿತೀನಿ' ಎಂದರು. ಅದಕ್ಕಿಂತ ಭಾಗ್ಯಬೇಕೇ? ನನಗೆ ಆಗ ಈ ವಿದ್ಯೆ ಇಷ್ಟು ಉಜ್ವಲವಾಗುತ್ತದೆ ಎಂಬ ಆಲೋಚನೆಯೇನೂ ಇರಲಿಲ್ಲ. ಏನೋ ಸಾಧ್ಯವಾದಷ್ಟು ಅವರಿಂದ ಕಲಿತೆ' ಎಂದು ಒಂದು ಕ್ಷಣ ಮಾತು ನಿಲ್ಲಿಸಿದರು.

ಮತ್ತೆ ಅವರೇ 'ಮುಖ್ಯವಾಗಿ ಹೇಳಬೇಕೆಂದರೆ ಅವರು ತೀರಿಕೊಂಡ ಸುದ್ದಿ ತಿಳಿದು ಅವರ ಮನೆಗೆ ಹೋದೆ. ಅಲ್ಲಿಂದ ಶವಾನ ಸಂಸ್ಕಾರಕ್ಕಾಗಿ ನದೀ ಹತ್ರ ತಗೊಂಡು ಹೋಗಿದ್ರು. ನಾನು ಅಲ್ಲಿಗೇ ಓಡಿದೆ. ಇನ್ನೂ ಸಂಸ್ಕಾರ ನಡೆಯುತ್ತಿತ್ತು. ಅವರ ದೇಹವನ್ನು ಚಿತೆಯ ಮೇಲೆ ಇಟ್ಟಾಗ ನಾನು ಕೇಳಿಕೊಂಡೆ- 'ಗುರುಗಳೇ ಹೊರಟು ಹೋಗ್ತಾ ಇದ್ದೀರಿ. ಏನಾದ್ರೂ ಒಂದಷ್ಟು ಅನುಗ್ರಹ ಮಾಡಿ ಹೋಗಿ' ಎಂದು. ಕೊನೆ ಘಳಿಗೆಯಲ್ಲಿ ಬಹಳ ವೇದನೆಯಾಯ್ತು. ಗುರು ಇದ್ದಾಗ ಏನು ಬೇಕಾದರೂ ತಿಳಿದುಕೊಳ್ಳಬಹುದು. ಆದರೆ ಗುರು ಹೊರಟು ಹೋದರೆ ತಿಳಿದುಕೊಳ್ಳುವುದು ಎಲ್ಲಿಂದ? ಎಂದುಕೊಂಡು ಹಾಗೆ ಕೇಳಿದೆ' ಕರೀಂಖಾನರ ಮನಸ್ಸು ತುಂಬಿ ಬಂದಿತ್ತು. ಅನಂತರದ ಮಾತುಗಳು ಸಂಪೂರ್ಣವಾಗಿ ಆಧ್ಯಾತ್ಮಕ್ಕೆ ತಿರುಗಿದವು.

ಒಮ್ಮೆ ಮಾಸ್ತಿಯವರಿಗೆ ಕರೀಂಖಾನರು ಕಷ್ಟದಲ್ಲಿರುವುದು ಗೊತ್ತಾಗಿ ಸ್ವತಃ ಅವರೇ ಕರೀಂಖಾನರ ರೂಮಿಗೆ ಮೆಟ್ಟಿಲು ಹತ್ತಿ ಬಂದು ಕೇಳಿದರಂತೆ 'ಹೇಗೆ ನಡೀತಾ ಇದೆ?' ಎಂದು. ಅದಕ್ಕೆ ಕರೀಂಖಾನರು 'ದೇವ್ರು ನಡೆಸ್ತಾ ಇದಾರೆ' ಎಂದರಂತೆ.

'ಹೌದು ದೇವ್ರೇ ನಡೆಸೋದು. ಬ್ಯಾಂಕಿನಲ್ಲಿ ಸ್ವಲ್ಪ ಹಣ ಇಟ್ಕೊಂಡಿದೀನಿ. ಅದ್ರಲ್ಲಿ ಒಂದು ಭಾಗ ನಿಮಗೆ ಕೊಡೋಣ ಎಂದು ಬಂದಿದ್ದೇವೆ' ಎಂದರಂತೆ ಮಾಸ್ತಿ.

ಅದಕ್ಕೆ ಕರೀಂಖಾನರು 'ಬೇಡ' ಎಂದರಂತೆ. ಮಾಸ್ತಿಯವರಿಗೆ ಗಾಬರಿ!

'ಹಣ ಕೊಡ್ತೀನಿ ಅಂದ್ರೆ ಯಾರಾದ್ರೂ ಬೇಡ ಅಂತಾರೆಯೇ? ನೀವೇನೂ ಕೇಳ್ತಿಲ್ಲವಲ್ಲ? ಆತ್ಮಪೂರ್ವಕವಾ ನಾನು ಕೊಡ್ತಾ ಇದ್ದೇನೆ. ಈ ವೃದ್ಧಾಪ್ಯದಲ್ಲಿ ಹೊಂದ ಅನುಭವಿಸ್ತೀರಿ. ನಾನು ಕೊಟ್ಟಿದ್ದನ್ನು ಬ್ಯಾಂಕಿನಲ್ಲಿ ಇಟ್ಕೊಳ್ಳಿ. ನಿಮಗೆ ಕಷ್ಟವಾದಾಗ ಉಪಯೋಗಿಸಿಕೊಳ್ಳಿ ಎಂದು ಹೇಳಿದರಂತೆ. ಅದಕ್ಕೆ ಕರೀಂಖಾನರು 'ನೀವು ಅನೇಕರಿಗೆ ಸಹಾಯ ಮಾಡಿದ್ದೀರ. ನನಗೆ ಗೊತ್ತಿದೆ. ಅಗತ್ಯ ಇದ್ದಾಗ ಕೇಳ್ತೀನಿ' ಎಂದು ಹೇಳಿದರಂತೆ. ಮತ್ತೆ ಮತ್ತೆ ಬಲವಂತ ಮಾಡಿದ್ದಾರೆ ಮಾಸ್ತಿ. ಕರೀಂಖಾನರದು ಅಷ್ಟೇ ವಿನಯದ ನಿರ್ಧಾರ. ಆ ದಿನ ಈ ವಿಷಯಗಳನ್ನೆಲ್ಲ ಕರೀಂಖಾನರು ನೆನೆಯುವಾಗ ಕರೀಂಖಾನರು ಹೇಳಿದರು- 'ಈ ಹೊತ್ತಿಗೂ ಅವರನ್ನು ನೆನೆಯುತ್ತೇನೆ. ಯಾಕೆಂದರೆ, ಅವರ ವಿಶಾಲ ಹೃದಯಕ್ಕಾಗಿ. ಕಷ್ಟದಲ್ಲಿದ್ದರೆ ಇದ್ಕೊಳ್ಳಿ ನನಗೇನು ಎಂದುಕೊಳ್ಳದೆ ಸಹಾಯಕ್ಕೆ ಮುಂದಾಗಬೇಕಾದರೆ ಅವರ ಹೃದಯ ವೈಶಾಲ್ಯ ಎಷ್ಟಿರಬೇಕು. ಸ್ವಜಾತಿಯವರಲ್ಲ, ಜೊತೆಗಾರರಲ್ಲ. ಏನೋ ಪಾಪ ಕಷ್ಟದಲ್ಲಿದ್ದಾನೆ ಸಹಾಯ ಮಾಡಬೇಕೆಂಬ ಮರುಕ ಹುಟ್ಟಬೇಕಾದರೆ ಸಣ್ಣ ಮಾತಲ್ಲ. ಹಿಂದೂ ಮುಸ್ಲಿಂ ದ್ವೇಷ ಹರಡುತ್ತಿರುವ ಈ ದಿನಗಳಲ್ಲಿ ಅವರು ನನ್ನನ್ನು ಹುಡುಕಿಕೊಂಡು ಬಂದು 'ನನ್ನಹತ್ತಿರ ಇದೆ ತಗೋ' ಎನ್ನಬೇಕಾದರೆ ಅದು ಸಾರ್ವಭೌಮಿಕ ಹೃದಯ.'

⇨ 14

ಪ್ರೀತಿಯ ಹುಡುಗ ರವಿ ಶ್ರೀ[illegible] 'ಗಂಡ ಹೆಂಡತಿ' ಸಿನೆಮಾದ ಹಾಡುಗಳ [illegible] [illegible] ಸಂಖ್ಯೆಯಲ್ಲಿ [illegible] ಮಾತು, ನೋಟ, ಸ್ಪರ್ಶ, ಕಲ್ಪನೆಗಳಲ್ಲ ಎಷ್ಟೊಂದು [illegible] ಅಲ್ಲವೆ? ಬರೆಯುವವನು ರಸಿಕನಾದರೆ ಮಾತ್ರ ಕೃತಿ ಶೃಂಗಾರಮಯವಾಗುತ್ತದೆ.

ನಾಗರ ಸಮ್ಮುಖದಲ್ಲಿ ಗಂಡ ಹೆಂಡತಿಯ ಮಿತಿ ಮಾತು

[illegible] ಮಾಡುವುದಿಲ್ಲ. ನನ್ನ ಬೈಗಳು harsh ಅನ್ನಿಸ [illegible] ಹಾಗಾಗದಂತೆ ನೋಡಿಕೊಂಡಿದ್ದೀಯಾದರೆ 'ಗಂಡ ಹೆಂಡತಿ' ಅದ್ಭುತವಾಗೇ ಇರುತ್ತದೆ. ನಾನು [illegible] Un faithful ನೋಡಿದ್ದೇನೆ. [illegible] ನನಗೆ [illegible] ನಾನು ಶೃಂಗಾರದ ವಿರೋಧಿಯಲ್ಲ. [illegible]

[illegible] ರಾಜ್‌ಕಪೂರನ ಸಿನೆಮಾಗಳು, ದೇವಾನಂದ್‌ನ [illegible] ನಿನ್ನ 'ಗಂಡ ಹೆಂಡತಿ'ಯೂ ಹಾಗಿರಬೇಕು ಅಂದೆ. ರವಿ ಶ್ರೀವತ್ಸನ ಮುಖದಲ್ಲಿ [illegible] ಜೂನ್ 18, ಭಾನುವಾರ ಬೆಳಗ್ಗೆ ನಮ್ಮ [illegible] ಎಂಬುದನ್ನ ಮತ್ತೆ ನೆನಪಿಸುತ್ತಿದ್ದೇನೆ. ತಪ್ಪದೆ ಬನ್ನಿ. ಹಾಗೇ ನಾಲ್ಕು [illegible]

- ಬೆಳ[illegible]

ಕೊನೆಗಾಲದಲ್ಲಿ ನಿನ್ನ ಗತಿ ಏನು ಎಂದು ಕೇಳಿದ ಅಜ್ಜಿಗೆ ಆತ ಹೇಳಿದ್ದು

ಲಿವರ್ ವೈಫಲ್ಯದಿಂದ ಸಾಹಿತಿ ಕರೀಂಖಾನ್ ಸಾವಿನ ಅಂಗೈ ಬೊಗಸೆಯೊಳಗೆ ತಲೆಯಿಟ್ಟು ಪ್ರಶ್ನೆತಪ್ಪಿದ್ದಾರೆ. ಈ ಬಾರಿ ಅವರು ಬದುಕುಳಿದಾರೆಂಬ ಭರವಸೆಯಿಲ್ಲ. ಮೊನ್ನೆ ತಾನೆ ನನ್ನ ಸೋದರಮಾವ ಬೆಳಗೆರೆ ಕೃಷ್ಣ ಶಾಸ್ತ್ರಿಗಳು ಹೋಗಿ ಕರೀಂಖಾನ್‌ರನ್ನು ಮಾತಾಡಿಸಿ ಕೊಂಡು ಬಂದರು. ಬಂದವರ ಕಣ್ಣುಗಳಲ್ಲಿ ಉಲ್ಲಾಸವಿರಲಿಲ್ಲ. ಅವರಿಬ್ಬರದೂ ಮುಕ್ಕಾಲು ಶತಮಾನದ ಗೆಳೆತನ. ಒಬ್ಬರು ನೂರರ ಆಚೆಗಿದ್ದಾರೆ. ಇನ್ನೊಬ್ಬರು ಕೊಂಚ ಈಚೆ. ಆಸ್ಪತ್ರೆಯಿಂದ ಬಂದವರು ಕರೀಂಖಾನ್‌ರ ಬಗ್ಗೆ ತುಂಬ ಹೊತ್ತು ಮಾತನಾಡಿದರು

ಆ ಮಾತುಗಳಿಲ್ಲಿ ಇಲ್ಲಿವೆ.

●●●

ಜಾನಪದ ಲೋಕದ ದಿಗ್ಗಜರೂ, ಸ್ವಾತಂತ್ರ್ಯ ಹೋರಾಟಗಾರರೂ, ಕಾದಂಬರಿಕಾರರೂ, ನಾಟಕಕಾರರೂ, ಚಲನಚಿತ್ರ ಸಾಹಿತಿಗಳೂ ಆದ ಎಸ್.ಕೆ. ಕರೀಂಖಾನ್ ನಮ್ಮ ನಡುವಿನ ಅಪರೂಪದ ವ್ಯಕ್ತಿ. ಅವರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಪ್ರಚಲಿತವಿದ್ದ ಹಾಡುಗಳನ್ನು ಧ್ವನಿ ಮುದ್ರಿಸಿಕೊಂಡು, ಪುಸ್ತಕರೂಪದಲ್ಲಿ ಪ್ರಕಟಿಸಿದರು. ತಾವೇ ಆ ಹಾಡುಗಳನ್ನು ಹಾಡಿ ಜನರಲ್ಲಿ ಆ ಬಗೆಗೆ ಆಸಕ್ತಿ ಮೂಡಿಸಿದ್ದನ್ನು ಯಾರೂ ಮರೆಯಲಾರರು. ಕೇವಲ ನಾಲ್ಕು ನೂರು ರುಪಾಯಿಗಳ ಮಾಸಾಶನದಲ್ಲಿ ಬುಲ್‌ಟೆಂಪಲ್ ರಸ್ತೆಯ ದ್ವಾರಕಾ ಹೋಟೆಲ್‌ನಲ್ಲಿ ಯಾರ ನೆರವೂ ಇಲ್ಲದೆ ತಮ್ಮ ಜೀವನದ ವೃದ್ಧಾಪ್ಯವನ್ನು ಕಳೆದ ಕರೀಂಖಾನರನ್ನು ಅನೇಕ ಬಾರಿ ನೋಡಿ, ಮಾತನಾಡುವ ಭಾಗ್ಯ ನನಗೆ ಒದಗಿ ಬಂದಿದೆ. [illegible] ಬೆಳಗೆರೆಗೂ ಕರೆಸಿ ಸನ್ಮಾನಿಸುವ ಯೋಗಾಯೋಗವೂ ಒದಗಿ ಬಂದಿತ್ತೆಂಬುದು ಸಂತೋಷದ ವಿಚಾರ.

ನಾನೇ ಸ್ವತಃ ಅವರನ್ನು ಬೆಳಗೆರೆಗೆ ಆಹ್ವಾನಿಸಲು ಹೋಗಿದ್ದೆ. ಆ ಹೊತ್ತಿಗೆ ನಾವು ಭೇಟಿಯಾಗಿ ಬಹಳ ವರ್ಷಗಳಾಗಿತ್ತು. ನಾನು ಬಾಗಿಲಿನಲ್ಲಿಯೇ ನಿಂತು 'ನಮಸ್ಕಾರ ಸಾರ್' ಎಂದೆ. 'ನಮಸ್ಕಾರ ಒಳಗೆ ಬನ್ನಿ' ಎಂದರು. 'ಬಹಳ ದಿವಸಗಳ ತರುವಾಯ ಬಂದು ನಿಮ್ಮನ್ನು ನೋಡುತ್ತಿದ್ದೇನೆ ತಮಗೆ ಜ್ಞಾಪಕವಿರಬಹುದು...' ಎಂದು ಮಾತು ನಿಲ್ಲಿಸಿದೆ. ಅಂತಹ ದಿಗ್ಗಜರು ನನ್ನ ಹೆಸರನ್ನೇಕೆ ನೆನಪಿಡುತ್ತಾರೆ ಎಂದುಕೊಂಡು. 'ಬೆಳಗೆರೆ ಕೃಷ್ಣಶಾಸ್ತ್ರಿ' ಎಂದೆ. ಕೂಡಲೇ ಕರೀಂಖಾನರು 'ನಿಮ್ಮ ಅಕ್ಕನವರ ಕವನ ಸಂಕಲನ...' ಎಂದು ನೆನಪಿಸಿಕೊಳ್ಳತೊಡಗಿದರು. 'ಜಾನಕಮ್ಮ' ಎಂದೆ. 'ಹೌದುದು. ಜಾನಕಮ್ಮನವರ ಕವನ ಸಂಕಲನ ನನ್ನ ಹತ್ತಿರ ಇದೆ. ಹೀಗಾಗಿ ನಿಮ್ಮನ್ನು ಮರೆಯಲಾದೀತೆ?' ಎಂದರು. 'ನೀವು 1967ನೆಯ ಇಸವಿಯಲ್ಲಿ ಲಕ್ಷ್ಮೀಶ ಕವಿಯ ಜಯಂತಿ ಸಂದರ್ಭದಲ್ಲಿ ದೇವನೂರಿಗೆ ಬಂದಿದ್ದಿರಿ. ಜನರೆಲ್ಲ ಮುಗಿಬಿದ್ದಿದ್ದರು' ಎಂದು ನೆನಪಿಸಿ ನಕ್ಕರು. ಹೇಳಿದ 'ಹೌದು ಆ ದಿನ ಬರಬೇಕಾದ ಮುಖ್ಯ ಅತಿಥಿಗಳು ಬಂದಿರಲಿಲ್ಲ [illegible] ...ದರು.

(ಅವತ್ತು ತಿ.ನ. ಕೃಷ್ಣರಾಯರು ಅನಾನುಕೂಲದ ಕಾರಣದಿಂದ ಬಂದಿರಲಿಲ್ಲ.)

'ನಾನು ಅವತ್ತು ಸುಧನ್ವನ ವಿಚಾರವಾಗಿ ಮಾತನಾಡಿದೆ. ಆಗ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯಾಗಿದ್ದ ಅನಂತರಾಮಯ್ಯ ಅವರು 'ನೋ ಟೈಂ ಲಿಮಿಟ್ ಫಾರ್ ಯೂ' ಎಂದದ್ದೆ ಸುಮಾರು ಒಂದೂವರೆ ಗಂಟೆ ಮಾತನಾಡಿದೆ ಅನ್ನಿಸುತ್ತೆ' ಎಂದರು. ಎಷ್ಟು ಕರಾರುವಾಕ್ಕಾದ ನೆನಪು ಎಂದು ಆಶ್ಚರ್ಯವಾಯಿತು. ನಂತರ 'ಅನಂತರಾಮಯ್ಯನವರು ಎಲ್ಲಿಂದ ಕರೆದುಕೊಂಡು ಬಂದಿರಿ ಇವರನ್ನು? ಎಷ್ಟೊಂದು ಸೊಗಸಾಗಿ ಮಾತನಾಡುತ್ತಾರಲ್ಲ. ಎಷ್ಟು ಶಬ್ದ ಭಂಡಾರ ಇದೆ ಇವರ ಹತ್ತಿರ ಎಂದು ಮೆಚ್ಚಿಗೆ ಸೂಚಿಸಿದ್ದರು' ಎಂದೆಲ್ಲ ಹೇಳಿದೆ. ಅವರೇ ಮಾರನೆಯ ದಿನದ ಜಾನಪದ ಕಾರ್ಯಕ್ರಮದ ವಿವರವನ್ನು ನೆನಪಿಸಿಕೊಂಡರು.

ಬಳ್ಳಾರಿಯಲ್ಲಿ ಬೀಚಿ, ಗವಿಸಿದ್ದಪ್ಪ, ಕೋ. ಚೆನ್ನಬಸಪ್ಪ ಮುಂತಾದವರು ನಡೆಸುತ್ತಿದ್ದ ನಾಡಹಬ್ಬಕ್ಕೆ 'ಹೊಸಬರನ್ಯಾರಾದರೂ ತಿಳಿಸು ಕರೆಸುತ್ತೇವೆ ಎಂದಿದ್ದರು. ನಾನು ನಿಮ್ಮ ಹೆಸರನ್ನು ಸೂಚಿಸಿದ್ದೆ. ಆ ದಿನ ನಾನೂ ಆ ಸಭೆಯಲ್ಲಿದ್ದೆ. ನೀವು ಬೀದರ್‌ಗೆ ಹೋಗುವವರಿದ್ದಿರಿ. ಆ ಕಾರ್ಯಕ್ರಮ ಮುಗಿಸಿಕೊಂಡು ಹೊರಟಿರಿ. ಮಾರನೆಯ ಬೆಳಗ್ಗೆ ನನ್ನ ಸ್ನೇಹಿತರೆಲ್ಲ 'ಒಳ್ಳೆಯವರನ್ನು ಸೂಚಿಸಿದೆ ಕಣಯ್ಯ' ಎಂದು ನನ್ನ ಬೆನ್ನು ತಟ್ಟಿದ್ದರು- ನಿಮ್ಮಿಂದ ನನಗೂ ಹೆಸರು ಬಂತು' ಎಂದು ನಕ್ಕೆ.

ಕರೀಂಖಾನರಿಗೂ ಬಹಳ ಸಂತೋಷವಾಯಿತು. ಆ ಹೊತ್ತಿಗೆ ಕರೀಂಖಾನರು ನನಗೆ ಹತ್ತಿರದಿಂದ ಪರಿಚಿತರಾಗಿದ್ದರೂ [illegible] ಬಾಲ್ಯ, ವಿದ್ಯಾಭ್ಯಾಸ ಮುಂತಾದ ವಿವರಗಳು ಅಷ್ಟಾಗಿ ಗೊತ್ತಿರಲಿಲ್ಲ. ಆ ಕುರಿತು ಅವರನ್ನು ಕೇಳಿದೆ. ಅದಕ್ಕವರು ಬಹಳ ವಿಸ್ತಾರವಾಗಿ ಹೇಳಿದರು: 'ನನ್ನ ತಂದೆ ಅಫ್ಘಾನಿಸ್ತಾನದವರು. (ಕಾಬೂಲ್) ರೆಹಮಾನ್ ಖಾನ್ ಎಂದು. ಮೂರನೆಯ ಅಫ್ಘಾನ್ ಯುದ್ಧದ ಸಂದರ್ಭದಲ್ಲಿ ನಮ್ಮ ತಂದೆಯವರಿಗೆ 16 ವರ್ಷ ವಯಸ್ಸು. ಆಗ ಅದು ಬ್ರಿಟಿಷರ ಅಧೀನದಲ್ಲಿತ್ತು. ದೋಸ್ತ್ ಮಹಮದ್ ಎಂಬುವವನು ಬ್ರಿಟಿಷರಿಗೆ ವಿರುದ್ಧವಾಗಿದ್ದ. ಆ ಹಿನ್ನೆಲೆಯಲ್ಲಿ ಕ್ರಾಂತಿ ನಡೆದಾಗ ಇಪ್ಪತ್ತು ಸಾವಿರ ಜನರನ್ನು ಕೊಂದು ಹಾಕಿದ್ದರು. ಈ ವಿಷಯವನ್ನು ಭಾರತದಲ್ಲಿದ್ದ ಒಬ್ಬ ಜನರಲ್ ಚೋರ್ಡ್ ಎನ್ನುವ ಡಾಕ್ಟರನಿಗೆ ತಿಳಿಸಲೆಂದು ನಮ್ಮ ತಂದೆಯವರನ್ನು ಭಾರತಕ್ಕೆ ಕಳಿಸಿದರು. ಈ ಮಧ್ಯೆ ಅವರ ಅಣ್ಣ

ತಮ್ಮಂದಿರಲ್ಲಿ ಕಲಹ ನಡೆದು ನಮ್ಮ ತಂದೆ ಇಲ್ಲಿಯೇ ಉಳಿದರು. ನಮ್ಮ ತಾಯಿ ಅರಬ್ ದೇಶದವರು- ಜೈನಬಿ ಎಂದು. ನಮ್ಮ ಅಜ್ಜ ಸೈಯದ್, ಪತ್ನಿ ಸಹಿತ ಭಾರತದಲ್ಲಿರುವಾಗಲೇ ನಮ್ಮ ತಾಯಿ ಹುಟ್ಟಿದ್ದು. ಆಗ ನನ್ನಜ್ಜಿ ತೀರಿಕೊಂಡ ಕಾರಣದಿಂದ ಆ ಮಗುವನ್ನು ಸಾಕಲು ಬೇರೊಬ್ಬರಿಗೆ ಕೊಟ್ಟುಬಿಟ್ಟರಂತೆ. ಹೀಗೆ ನಮ್ಮ ತಂದೆ ಸಕಲೇಶಪುರದಲ್ಲಿ ನೆಲೆ ನಿಂತರು. ನಾನು ಅಲ್ಲಿಯೇ ಹುಟ್ಟಿದೆ. ಮಲೆನಾಡಿನ ಪ್ರಕೃತಿ, ಹೇಮಾವತಿ ನದಿಯ ತೀರ ಇವುಗಳ ಮಧ್ಯೆ ನನ್ನ ಬಾಲ್ಯ ಕಳೆಯಿತು' ಎಂದು ಮಾತು ನಿಲ್ಲಿಸಿದರು ಕರೀಂಖಾನ್.

ಬಾಲ್ಯದ ಬಗ್ಗೆ ತಿಳಿದುಕೊಂಡ ನನಗೆ ಅವರ ವಿದ್ಯಾಭ್ಯಾಸದ ಬಗೆಗೆ ಏನೂ ಹೇಳಲಿಲ್ಲವಲ್ಲ ಎನಿಸಿ 'ಸರ್ ನಿಮ್ಮ ವಿದ್ಯಾಭ್ಯಾಸ ನಡೆದದ್ದು ಸಕಲೇಶಪುರದಲ್ಲಿಯೇ?' ಎಂದು ಕೇಳಿದೆ. ಅದಕ್ಕವರು 'ಹೌದು. ಆಗ ಸಕಲೇಶಪುರದಲ್ಲಿ ಹೈಸ್ಕೂಲುಗಳಿರಲಿಲ್ಲ. ಹೊಳೆನರಸೀಪುರದಲ್ಲಿ ಒಂದು, ಹಾಸನದಲ್ಲಿ ಇನ್ನೊಂದು ಇತ್ತು. ನಾನು ಹಾಸನಕ್ಕೆ ಹೋಗಿ ಹೈಸ್ಕೂಲು ಕಲಿತೆ. ತುಂಬಾ ಬಡತನ ಇದ್ದುದರಿಂದ ವ್ಯಾಸಂಗ ಮುಂದುವರಿಸಲಾಗಲಿಲ್ಲ' ಎಂದರು.

'ಶಾಲೆಯಲ್ಲಿ ಕಲಿತ ವಿದ್ಯಾಭ್ಯಾಸದ ರೀತಿ ಬೇರೆ. ಆದರೆ ನೀವು ಸಾಧಿಸಿರುವ ವಿದ್ಯೆಯ ಪ್ರೌಢಿಮೆ ಅಪ್ರತಿಮವಾದದ್ದು. ಅದನ್ನು ನೀವು ಸಾಧಿಸಿದ್ದು ಹೇಗೆ?' ಕುತೂಹಲದಿಂದ ಕೇಳಿದೆ.

ಬಹಳ ಸ್ವಾರಸ್ಯಕರವಾದ ವಿಷಯವೊಂದನ್ನು ಪ್ರಸ್ತಾಪಿಸಿ ಹೇಳಿದರು: 'ನನ್ನ ಗುರುಗಳು ಆಚಂಗಿ ನಾರಾಯಣ ಶಾಸ್ತ್ರಿ ಎಂಬುವವರು. ಅವರು ಮಹಾ ವಿದ್ವಾಂಸರು. ಕನ್ನಡ, ಸಂಸ್ಕೃತ, ಇಂಗ್ಲಿಷ್‌ಗಳಲ್ಲಿ ಅಸಾಧಾರಣ ಪಾಂಡಿತ್ಯವಿತ್ತು. ಹಾಗೆಯೇ ಸಂಗೀತ, ಜ್ಯೋತಿಷ್ಯಗಳಲ್ಲಿಯೂ ಸಹ. ಅವರಿಂದ ನನಗೂ ಸ್ವಲ್ಪ ಲಭ್ಯವಾಯ್ತು. ಅದನ್ನೇ ನಾನು ಬಂಡವಾಳವನ್ನಾಗಿ ಬಳಸಿಕೊಂಡೆ.'

'ನಾರಾಯಣ ಶಾಸ್ತ್ರಿಗಳು ಊರ ಹೊರಗೆ ಒಂದು ತೋಟ ಮಾಡಿಕೊಂಡಿದ್ದರು. ನಾನು ಸಾಮಾನ್ಯವಾಗಿ ಅವರ ಜೊತೆಯಲ್ಲಿಯೇ ಇರುತ್ತಿದ್ದೆ. ಆಗೆಲ್ಲ ಬಹಳ ಶ್ಲೋಕಗಳನ್ನು ಹೇಳಿಕೊಟ್ಟರು. ನಾನು ಅದನ್ನು ಛಲದಿಂದ ಸಾಧನೆಯಾಗಿ ಕಲಿತೆ.. ಒಂದು ನೆಲೆಯಲ್ಲಿ ಅದು ಹುಟ್ಟುಗುಣವೂ ಆಗಿರಬಹುದು... ನನ್ನಲ್ಲಿ ಅವರಿಗೆ ಸಂಪೂರ್ಣ ಮಮತೆ ಬಂದು 'ನನ್ನ ವಿದ್ಯೆನೆಲ್ಲಾ ನಿಂಗೆ ಧಾರೆ ಎರೆತೀನಿ' ಎಂದರು. ಅದಕ್ಕಿಂತ ಭಾಗ್ಯಬೇಕೇ? ನನಗೆ ಆಗ ಈ ವಿದ್ಯೆ ಇಷ್ಟು ಉಜ್ವಲವಾಗುತ್ತದೆ ಎಂಬ ಆಶೋತ್ತರವೇನೂ ಇರಲಿಲ್ಲ. ಏನೋ ಸಾಧ್ಯವಾದಷ್ಟು ಅವರಿಂದ ಕಲಿತೆ' ಎಂದು ಒಂದು ಕ್ಷಣ ಮಾತು ನಿಲ್ಲಿಸಿದರು.

ಮತ್ತೆ ಅವರೇ 'ಮುಖ್ಯವಾಗಿ ಹೇಳಬೇಕೆಂದರೆ ಅವರು ತೀರಿಕೊಂಡ ಸುದ್ದಿ ತಿಳಿದು ಅವರ ಮನೆಗೆ ಹೋದೆ. ಅಲ್ಲಿಂದ ಶವವನ್ನು ಸಂಸ್ಕಾರಕ್ಕಾಗಿ ನದೀ ಹತ್ರ ತಗೊಂಡು ಹೋಗಿದ್ರು. ನಾನು ಅಲ್ಲಿಗೇ ಓಡಿದೆ. ಇನ್ನೂ ಸಂಸ್ಕಾರ ನಡೆಯುತ್ತಿತ್ತು. ಅವರ ದೇಹವನ್ನು ಚಿತೆಯ ಮೇಲೆ ಇಟ್ಟಾಗ ನಾನು ಕೇಳಿಕೊಂಡೆ-'ಗುರುಗಳೇ ಹೊರಟು ಹೋಗ್ತಾ ಇದ್ದೀರಿ. ಏನಾದ್ರೂ ಒಂದಷ್ಟು ಅನುಗ್ರಹ ಮಾಡಿ ಹೋಗಿ' ಎಂದು. ಕೊನೆ ಘಳಿಗೆಯಲ್ಲಿ ಬಹಳ ವೇದನೆಯಾಯ್ತು. ಗುರು ಇದ್ದಾಗ ಏನು ಬೇಕಾದರೂ ತಿಳಿದುಕೊಳ್ಳಬಹುದು. ಆದರೆ ಗುರು ಹೊರಟು ಹೋದರೆ ತಿಳಿದುಕೊಳ್ಳುವುದು ಎಲ್ಲಿಂದ? ಎಂದುಕೊಂಡು ಹಾಗೆ ಕೇಳಿದೆ' ಕರೀಂಖಾನರ ಮನಸ್ಸು ತುಂಬಿ ಬಂದಿತ್ತು. ಆನಂತರದ ಮಾತುಗಳು ಸಂಪೂರ್ಣವಾಗಿ ಆಧ್ಯಾತ್ಮಕ್ಕೆ ತಿರುಗಿದವು.

ಪ್ರಾಚೀನ ಬೌದ್ಧ ದೇವಾಲಯಕ್ಕೆ ಶಿಂಜೊಅಬೆ - ಪ್ರಧಾನಿ ಮೋದಿ ಭೇಟಿ

[illegible] ಜಪಾನ್‌ಗೆ 5 ದಿನಗಳ ಪ್ರವಾಸದ [illegible] ಇಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಲ್ಲಿನ ಪ್ರಸಿದ್ಧ ತೋಜಿ ದೇವಾಲಯಕ್ಕೆ ಭೇಟಿ ನೀಡಿದರು.

ಪ್ರಾಚೀನ ಬೌದ್ಧ ದೇವಾಲಯದ ಸಮುಚ್ಚಯದ ಸುತ್ತ ಅವರು ಪ್ರದಕ್ಷಿಣೆ ಹಾಕಿದರು. ಅವರೊಂದಿಗೆ ಜಪಾನ್ ಪ್ರಧಾನ ಮಂತ್ರಿ ಶಿಂಜೊಅಬೆ ಇದ್ದರು.

ಇಬ್ಬರು ನಾಯಕರು ಸುಮಾರು ಅರ್ಧಗಂಟೆ ಕಾಲ ದೇವಾಲಯದಲ್ಲಿದ್ದರು. ದೇವಾಲಯದ ಪ್ರಧಾನ ಭಿಕ್ಕು ಮೋರಿ ಅವರು, ದೇವಾಲಯದ ಕುರಿತು ಮಾಹಿತಿ ನೀಡಿದರು. ನಗರದಲ್ಲಿನ ಹಲವು ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳ ಪೈಕಿ ತೋಜಿ ದೇವಾಲಯವೂ ಒಂದಾಗಿದೆ.

ಇದಾದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು, ಕ್ಯೋಟೊ ನಗರದ ಗೌರ್ನರ್ ಹಾಗೂ ಮೇಯರ್‌ಗಳನ್ನು ಭೇಟಿ ಮಾಡಿ, ನಗರದ ಪರಿಣಾಮಕಾರಿ ಆಡಳಿತ ಹಾಗೂ ನಿರ್ವಹಣೆ ಕುರಿತು ಮಾಹಿತಿ ಪಡೆದುಕೊಂಡರು. ನಂತರ ಮೋದಿ ಅವರು, ಕೋಬ್ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಭೇಟಿ (2ನೇ ಪುಟ ನೋಡಿ)

ಭುಗಿಲೆದ್ದ ಹಿಂಸಾಚಾರ ಅಶಾಂತಿಯ ಗೂಡಾದ ಪಾಕಿಸ್ತಾನ

ಇಸ್ಲಾಮಾಬಾದ್ [illegible] ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ರಾಜೀನಾಮೆಗಾಗಿ ಆಗ್ರಹಿಸಿ ನಡೆಸುತ್ತಿರುವ ಪ್ರತಿಭಟನೆ ಹಿಂಸಾಚಾರದ ಸ್ವರೂಪ ತಳೆದಿದ್ದು, ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ನಡೆದ ಘರ್ಷಣೆಯಲ್ಲಿ 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಇಸ್ಲಾಮಾಬಾದ್‌ನಲ್ಲಿ ನಡೆದಿದೆ.

ಪ್ರಧಾನಮಂತ್ರಿಗಳ ಅಧಿಕೃತ ನಿವಾಸದ ಹೊರಗೆ 25 ಸಾವಿರಕ್ಕೂ ಅಧಿಕ ಮಂದಿ ರಾಜೀನಾಮೆಗಾಗಿ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರಿಂದ ಉಂಟಾದ ಗದ್ದಲ, ಗಲಾಟೆ ಹಿಂಸಾಚಾರ ಸ್ವರೂಪಕ್ಕೆ ತಿರುಗಿದ್ದರಿಂದ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ವಾದ-ವಿವಾದ ನಡೆದಿದ್ದರಿಂದ ಅಶ್ರುವಾಯು, ರಬ್ಬರ್ ಬುಲೆಟ್ ಹಾಕಿ ಗುಂಡಿನ ದಾಳಿ ನಡೆಸಿದ್ದರಿಂದ 300ಕ್ಕೂ ಹೆಚ್ಚು ಮಂದಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.



[illegible]

ಪ್ರಧಾನಿ ನವಾಜ್ ಷರೀಫ್ ರಾಜೀನಾಮೆಗಾಗಿ ಆಗ್ರಹಿಸಿ ನಡೆಸುತ್ತಿರುವ ಪ್ರತಿಭಟನೆ ದಿನದಿಂದ ದಿನಕ್ಕೆ ಉಗ್ರ ಸ್ವರೂಪ ತಾಳುತ್ತಿದೆ. ಪ್ರತಿಭಟನಾಕಾರರ ಬೇಡಿಕೆಯನ್ನು [illegible] ಪ್ರತಿಭಟನೆಯ [illegible] (2ನೇ ಪುಟ ನೋಡಿ)

ಪ್ರಿಯಾಕೃಷ್ಣ - ಉಮೇಶ್ ಶೆಟ್ಟಿ ಜಟಾಪಟಿ

ಆರೋಪ ಪ್ರತ್ಯಾರೋಪ

ಬೆಂಗಳೂರು, ಆ. ೩೧- ಚಂದ್ರಗಿರಿ ಪಾರ್ಕ್ ಮತ್ತು 'ಪಾಲಿಕೆ ಸೌಧ' ಉದ್ಘಾಟನೆ [illegible] ಕಾಂಗ್ರೆಸ್ ಶಾಸಕ ಪ್ರಿಯಾಕೃಷ್ಣ ಚಿತಾವಣೆ ನಡೆಸಿದ್ದಾರೆ ಎಂದು ಬಿಬಿಎಂಪಿ ಬಿಜೆಪಿ ಸದಸ್ಯ ಕೆ. ಉಮೇಶ್ ಶೆಟ್ಟಿ ಆರೋಪಿಸಿದ್ದಾರೆ. ಪಾರ್ಕ್ ಹಾಗೂ ಸೌಧದ ಉದ್ಘಾಟನೆಯನ್ನು ಬೇಕಂತಲೇ ಮುಂದೂಡುವ ಪ್ರಯತ್ನ ನಡೆಸಿದ್ದಾರೆ. ಇದಕ್ಕಿಂತ ದೊಡ್ಡ ದುರಂತ ಇಲ್ಲ ಎಂದು ಹರಿಹಾಯ್ದರು.

[illegible] ನನ್ನ ಏಳಿಗೆಯನ್ನು ಸಹಿಸದ ಕಾಂಗ್ರೆಸ್ ಶಾಸಕರು ಇಂತಹ ಕಾರ್ಯಕ್ಕೆ ಕೈಹಾಕಿದ್ದಾರೆ. ಅವರಿಗೆ ಜನತೆಯೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದ್ದಾರೆ. ಕಾರ್ಯಕ್ರಮ ಮುಂದೂಡುತ್ತಿರುವುದು ಇದು ಮೂರನೇ ಬಾರಿ [illegible] ಶಾಸಕ ಪ್ರಿಯಾಕೃಷ್ಣ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವ [illegible] ಅವರು ತಮ್ಮ ನಿರ್ಧಾರ ಕೈಗೊಂಡಿದ್ದಾರೆ ಎಂದು ಆಪಾದಿಸಿದರು.

ಕಣ್ಣೀರಿಟ್ಟ ಉಮೇಶ್ ಶೆಟ್ಟಿ

ಪಾರ್ಕ್ ಮತ್ತು ಸೌಧ ನಿರ್ಮಾಣಕ್ಕಾಗಿ 4 ವರ್ಷಗಳಿಂದ (2ನೇ ಪುಟ ನೋಡಿ)

ಪಾಲಿಕೆ ಸೌಧ ಉದ್ಘಾಟನೆ ರದ್ದು

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಆ. ೩೧- ಕಾಂಗ್ರೆಸ್ ಶಾಸಕ ಪ್ರಿಯಾಕೃಷ್ಣ ಮತ್ತು ಬಿಜೆಪಿ ಬಿಬಿಎಂಪಿ ಸದಸ್ಯ ಕೆ. ಉಮೇಶ್ ಶೆಟ್ಟಿರವರ ನಡುವಿನ ರಾಜಕೀಯ ಭಿನ್ನಾಭಿಪ್ರಾಯ ತಾರಕಕ್ಕೇರಿದ್ದು, ನಾಗರಭಾವಿ ವಾರ್ಡ್‌ನಲ್ಲಿಂದು "ಚಂದ್ರಗಿರಿ ಪಾರ್ಕ್" ಮತ್ತು "ಪಾಲಿಕೆ ಸೌಧ" ಉದ್ಘಾಟನಾ ಕಾರ್ಯಕ್ರಮ ಮತ್ತೊಮ್ಮೆ ರದ್ದಾಗಿದೆ.

ಚಂದ್ರಗಿರಿ ಪಾರ್ಕ್, ಪಾಲಿಕೆ ಸೌಧದ ಆವರಣದಲ್ಲಿ ಬಿಗುವಿನ ವಾತಾವರಣ ಉಂಟಾಗಿದ್ದು, ಇಡೀ ದಿನ 144ನೇ ಸೆಕ್ಷನ್ ಅನ್ನು ಜಾರಿಗೊಳಿಸಲಾಗಿದೆ.

ಹೆಚ್ಚುವರಿ ಪೊಲೀಸ್ ಆಯುಕ್ತ ಅಲೋಕ್ ಕುಮಾರ್ ಡಿಸಿಪಿ ಸಂದೀಪ್ ಪಾಟೀಲ್ ಜಂಟಿ ಪೊಲೀಸ್ ಆಯುಕ್ತ ಎಸ್. ರವಿ ಅವರು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಇದೇ ತಿಂಗಳ 16 ಮತ್ತು 24 ರಂದು ಉದ್ಘಾಟನಾ ಕಾರ್ಯಕ್ರಮ ನಿಗದಿಯಾಗಿದ್ದರೂ, ಕೆಲಕಾರಣಗಳಿಂದ ಇಂದಿಗೆ ಮುಂದೂಡಲಾಗಿತ್ತು. ಆದರೆ ಇಂದೂ ಸಹ ಶಾಸಕ ಮತ್ತು ಸದಸ್ಯರ ನಡುವಿನ ಭಿನ್ನಾಭಿಪ್ರಾಯದಿಂದಾಗಿ ರದ್ದಾಗಿದೆ.

ಇಂದು ಬೆಳಗ್ಗೆ 9.30ಕ್ಕೆ ಪಾರ್ಕ್ ಮತ್ತು ಪಾಲಿಕೆ ಸೌಧ ಉದ್ಘಾಟನಾ ಕಾರ್ಯಕ್ರಮವಿತ್ತು. ಕೇಂದ್ರ ರಸಗೊಬ್ಬರ ಸಚಿವ ಅನಂತ್ ಕುಮಾರ್ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಪ್ರಿಯಾಕೃಷ್ಣ, ಮಾಜಿ ಉಪಮುಖ್ಯಮಂತ್ರಿ ಆರ್ ಅಶೋಕ್ ಮೇಯರ್ ಕಟ್ಟೆ ಸತ್ಯನಾರಾಯಣ. (2ನೇ ಪುಟ ನೋಡಿ)

ನಾಗರಭಾವಿ [illegible] ಪಾರ್ಕ್ [illegible] ಜಂಟಿ ಪೊಲೀಸ್ ಆಯುಕ್ತ ಎಸ್ ರವಿ, ಡಿಸಿಪಿ ಸಂದೀಪ ಪಾಟೀಲ್ ಪ್ರತ್ಯಕ್ಷ [illegible] ಪರಿಶೀಲನೆ ನಡೆಸಿದರು.

ವೃದ್ಧೆಯ 3 ಲಕ್ಷ ರೂ. ಮಾಂಗಲ್ಯಸರ ಕದ್ದು ಪರಾರಿ

ಬೆಂಗಳೂರು, ಆ. ೩೧- ಮನೆಗೆ ನಡೆದು ಹೋಗುತ್ತಿದ್ದ ವೃದ್ಧೆಯೊಬ್ಬರ 3 ಲಕ್ಷ [illegible] ಮಾಂಗಲ್ಯಸರವನ್ನು ಹಿಂದಿನಿಂದ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು [illegible] ಘಟನೆ ಇಂದು ಬೆಳಿಗ್ಗೆ ರಾಜಾಜಿನಗರದ [illegible] ನಡೆದಿದೆ.

[illegible] (65) ಅವರು ಬೆಳಿಗ್ಗೆ 7.30 ರ ವೇಳೆ ಹೊರಗೆ [illegible] ಮನೆಗೆ ನಡೆದು ಬರುತ್ತಿದ್ದಾಗ ಹಿಂದಿನಿಂದ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಅವರ ಕತ್ತಿನಲ್ಲಿದ್ದ 120 ಗ್ರಾಂ ತೂಕದ ಮಾಂಗಲ್ಯಸರವನ್ನು [illegible]

ರಾಜಾಜಿನಗರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಈ ನಡುವೆ ಹೆಬ್ಬಾಳ [illegible] ಮಹಿಳೆಯರ ಚಿನ್ನದ ಸರ ಕಸಿಯುವ ವಿಫಲಯತ್ನ [illegible] ನಡೆದಿದೆ. ಕಳೆದ ಮೂರ್‍ನಾಲ್ಕು ದಿನಗಳಿಂದ ಮಹಿಳೆಯರ ಚಿನ್ನದ ಸರ ಕಳವು ಪ್ರಕರಣಗಳು ಹೆಚ್ಚಾಗತೊಡಗಿದ್ದು, ಇದಾನಿ (2ನೇ ಪುಟ ನೋಡಿ)

ಕುಡಿದು ವಾಹನ ಚಾಲನೆ 317 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು, ಆ. ೩೧- ನಗರದ ವಿವಿಧೆಡೆ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಚಾಲಕರ ವಿರುದ್ಧ ನಿನ್ನೆ ರಾತ್ರಿ ವಿಶೇಷ ಕಾರ್ಯಾಚರಣೆ [illegible] 317 ಮಂದಿಯ ವಿರುದ್ಧ [illegible] ದಾಖಲಿಸಿದ್ದಾರೆ.

[illegible] ಸ್ಥಳಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ 3896 [illegible] 317 [illegible] (2ನೇ ಪುಟ ನೋಡಿ)

ಇಂದಿರಾನಗರ [illegible] ರಸ್ತೆಗೆ ಜಾನಪದ ತಜ್ಞ ಎಸ್.ಕೆ. ಕರೀಂಖಾನ್ ಹೆಸರನ್ನು ನಾಮಕರಣ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯರೊಂದಿಗೆ ಶಾಸಕ ಎನ್ ಎ ಹ್ಯಾರಿಸ್, ಮೇಯರ್ ಸತ್ಯನಾರಾಯಣ ಕನ್ನಡ ಚಳವಳಿ ಹೋರಾಟಗಾರ ವಾಟಾಳ್ ನಾಗರಾಜ್, ಶಾಸಕ ಎಸ್. ರಘು, ಪಾಲಿಕೆ ಪ್ರತಿಪಕ್ಷದ ನಾಯಕ ಮಂಜುನಾಥರೆಡ್ಡಿ, ಕಾಂಗ್ರೆಸ್ ಮುಖಂಡ ಸಿ. ರಮೇಶ್ ಇದ್ದಾರೆ.

ರಾಜ್ಯಪಾಲರ ನೇಮಕ ಸಿದ್ದರಾಮಯ್ಯ ಅಸಮಾಧಾನ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಆ. ೩೧- ರಾಜ್ಯದ ರಾಜ್ಯಪಾಲರ ನೇಮಕದ ವಿಚಾರದಲ್ಲಿ ಕೇಂದ್ರಸರ್ಕಾರ ತಮ್ಮ [illegible] ಅಭಿಪ್ರಾಯ ಪಡೆದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

[illegible] ರಾಜ್ಯಪಾಲರ [illegible] ಕೇಂದ್ರ ಸರ್ಕಾರ ಏಕಪಕ್ಷೀಯ ನೇಮಕ ಮಾಡಲಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಯಾವುದೇ ರಾಜ್ಯಗಳಿಗೆ ರಾಜ್ಯಪಾಲರನ್ನು ನೇಮಕ ಮಾಡುವಾಗ ಆಯಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸುವುದು ವಾಡಿಕೆ-ಸಂಪ್ರದಾಯ. ಆದರೆ ರಾಜ್ಯದ ರಾಜ್ಯಪಾಲರ ನೇಮಕ ವಿಚಾರದಲ್ಲಿ ಕೇಂದ್ರ ಸರ್ಕಾರ [illegible] ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಇಂದಿರಾನಗರ ನೂರಡಿ ರಸ್ತೆಗೆ ಜಾನಪದ ತಜ್ಞ ಎಸ್.ಕೆ. ಕರೀಂಖಾನ್ ಅವರ (2ನೇ ಪುಟ ನೋಡಿ)

ವೇಶ್ಯಾವಾಟಿಕೆ ಕಾನೂನುಬದ್ಧಗೊಳಿಸಿ

ನಿಸಾರ್ ಅಹಮದ್

ಬೆಂಗಳೂರು, ಆ. ೩೧- ವೇಶ್ಯಾವಾಟಿಕೆಯನ್ನು ಕಾನೂನು ಬದ್ಧಗೊಳಿಸಿ ವೃತ್ತಿಯಲ್ಲಿ ತೊಡಗಿಸಿಕೊಳ್ಳುವವರಿಗೆ ಪ್ರತ್ಯೇಕ ಜಾಗ ನೀಡಿ ಎಂದು ಹಿರಿಯ ಸಾಹಿತಿ, ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಸರ್ಕಾರವನ್ನು ಇಂದಿಲ್ಲಿ ಆಗ್ರಹಿಸಿದ್ದಾರೆ.

ವೇಶ್ಯಾವಾಟಿಕೆ ನಡೆಸುವವರೂ ಸಹ ಈ ಭಾರತದ ಪ್ರಜೆಗಳಾಗಿದ್ದು, ಅವರಿಗೂ ಬದುಕುವ ಹಕ್ಕಿದೆ. ಅವರನ್ನು ಸಮಾಜ ನಿಕೃಷ್ಟವಾಗಿ ಕಾಣುವ ಹಿನ್ನಲೆಯಲ್ಲಿ ಗುಪ್ತವಾಗಿ ವೇಶ್ಯಾವಾಟಿಕೆ ನಡೆಸುವ ಮೂಲಕ ಹಲವು ಸೋಂಕುಗಳಿಗೆ ಕಾರಣರಾಗಿ ಇತರರಿಗೂ ಅದನ್ನು ಹರಡಲು ಕಾರಣರಾಗಿದ್ದಾರೆ. ಹಾಗಾಗಿ ಸರ್ಕಾರ ಇಂತಹವರಿಗೆ ಪ್ರತ್ಯೇಕ ಸ್ಥಳ ನೀಡಿ ಅವರ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡುವಂತೆ ಅವರು ಒತ್ತಾಯಿಸಿದರು.

ವಿಶ್ವ ಛಾಯಾಗ್ರಾಹಕರ ದಿನಾಚರಣೆ ಅಂಗವಾಗಿ ಛಾಯಾಗ್ರಾಹಕ ಸುಧೀರ್ ಶೆಟ್ಟಿ ಅವರು ಚಿತ್ರಕಲಾ ಪರಿಷತ್ತಿನಲ್ಲಿಂದು ಬೃಹತ್ ಮಹಾನಗರಗಳಲ್ಲಿ ಅತ್ಯಾಚಾರವೇಕೆ? ಕಾನೂನಿನ ಚೌಕಟ್ಟಿನಲ್ಲಿ ವೇಶ್ಯಾ ವೃತ್ತಿ ಬೇಕೆ? ಎಂಬ ಶೀರ್ಷಿಕೆಯಡಿ ಮುಂಬೈ ಪುಣೆ ಮತ್ತು ಬುಧವಾರ್ ಪೇಟೆಯ ವೇಶ್ಯಾಗೃಹಗಳ ಮೇಲೆ ಒಂದು ಕಣ್ನೋಟ ಬೀರುವ ಛಾಯಾಚಿತ್ರ ಪ್ರದರ್ಶನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಸರ್ಕಾರ ಬಹುದೊಡ್ಡ ಯೋಜನೆಗಳನ್ನೇ ರೂಪಿಸುತ್ತಿದೆ. ಆದರೆ ಇಂತಹ ಮಂದಿಗೆ ಯಾವುದೇ ಯೋಜನೆಗಳಿಲ್ಲ ಎಂದು ವಿಷಾದಿಸಿದ ಅವರು, ಇವರೂ ಈ ಭಾರತದ ಪ್ರಜೆಗಳಾಗಿದ್ದು, (2ನೇ ಪುಟ ನೋಡಿ)

ಅತ್ಯಾಚಾರ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರ ರಚಿಸಿರುವ ಸದನ ಸಮಿತಿಯ ಅಧ್ಯಕ್ಷರಾಗಿರುವ ಎಂ.ಸಿ.ನಾಣಯ್ಯ ಅವರಿಗೆ ವೇಶ್ಯಾವಾಟಿಕೆ ಕಾನೂನು ಬದ್ಧಗೊಳಿಸುವಂತೆ ಮನವಿ ಸಲ್ಲಿಸುವುದಾಗಿ ಛಾಯಾಗ್ರಾಹಕ ಸುಧೀಂದ್ರ ಶೆಟ್ಟಿ ಅವರು ತಿಳಿಸಿದರು.

ವೇಶ್ಯಾವಾಟಿಕೆಯನ್ನು ಕಾನೂನು ಬದ್ಧಗೊಳಿಸಿದರೆ ಮಾನವ ಕಳ್ಳಸಾಗಣೆ, ಮಕ್ಕಳ ಮಾರಾಟ, [illegible] ನಿಯಂತ್ರಣ ಮಾತ್ರವಲ್ಲದೇ ಅತ್ಯಾಚಾರವನ್ನೂ ತಡೆಯಬಹುದಾಗಿದೆ ಎಂದು ಅವರ ಹೇಳಿದರು.

ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಇಂದು ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವುದು ಅನಿವಾರ್ಯವಾಗಿದೆ. ಪ್ರತಿದಿನ ಬೆಂಗಳೂರಿಗೆ 70 ಲಕ್ಷ [illegible] ಈ ಪೈಕಿ 40 ಲಕ್ಷ ಮಂದಿಗೆ ಸಂಸಾರ [illegible] ಮಕ್ಕಳ ಮತ್ತು ಮಹಿಳೆಯರ ಮೇಲೆ ಅತ್ಯಾಚಾರಕ್ಕೆ ಮುಂದಾಗುತ್ತಿದ್ದಾರೆ. ಇದನ್ನು ತಡೆಯಲು ವೇಶ್ಯಾವಾಟಿಕೆಯನ್ನು (2ನೇ ಪುಟ ನೋಡಿ)

ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಗುಲ್ಬರ್ಗ - ಬಳ್ಳಾರಿ - ಮೈಸೂರು - ಮಂಗಳೂರು - ದಾವಣಗೆರೆ - ತುಮಕೂರು - ರಾಯಚೂರು - ಶಿವಮೊಗ್ಗ

ಮೊಬೈಲ್: m.sanjevani.com

ಬೆಂಗಳೂರು ಭಾನುವಾರ 31-8-2014 ಕನ್ನಡ ದಿನಪತ್ರಿಕೆ ಸಂಪುಟ 32 ಸಂಚಿಕೆ 261 ಪುಟ 8 ಬೆಲೆ ₹ 3.00 RNI NO.36667/82 Ph: 22868882 Fax: 080-22868484 http://www.sanjevani.com



ಪ್ರಾಚೀನ ಬೌದ್ಧ ದೇವಾಲಯಕ್ಕೆ ಶಿಂಜೊಅಬೆ - ಪ್ರಧಾನಿ ಮೋದಿ ಭೇಟಿ

ಕ್ಯೋಟೊ, ಆ. ೩೧- ಜಪಾನ್‌ಗೆ ೫ ದಿನಗಳ ಪ್ರವಾಸದ [illegible] ಇಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಲ್ಲಿನ ಪ್ರಸಿದ್ಧ ತೋಜಿ ದೇವಾಲಯಕ್ಕೆ [illegible]

ಪ್ರಾಚೀನ ಬೌದ್ಧ ದೇವಾಲಯದ ಸಮುಚ್ಚಯದ ಸುತ್ತ ಅವರು ಪ್ರದಕ್ಷಿಣೆ ಹಾಕಿದರು. ಅವರೊಂದಿಗೆ ಜಪಾನ್ ಪ್ರಧಾನ ಮಂತ್ರಿ, ಶಿಂಜೊಅಬೆ ಇದ್ದರು

ಇಬ್ಬರು ನಾಯಕರು ಸುಮಾರು ಅರ್ಧಗಂಟೆ ಕಾಲ ದೇವಾಲಯದಲ್ಲಿದ್ದರು. ದೇವಾಲಯದ ಪ್ರಧಾನ ಬಿಕ್ಕು ಮೋರಿ ಅವರು, ದೇವಾಲಯದ ಕುರಿತು ಮಾಹಿತಿ ನೀಡಿದರು. ನಗರದಲ್ಲಿನ ಹಲವು ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳ ಪೈಕಿ ತೋಜಿ ದೇವಾಲಯವೂ ಒಂದಾಗಿದೆ.

ಇದಾದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು, ಕ್ಯೋಟೊ ನಗರದ ಗೌರ್ನರ್ ಹಾಗೂ ಮೇಯರ್‌ಗಳನ್ನು ಭೇಟಿ ಮಾಡಿ, ನಗರದ ಪರಿಣಾಮಕಾರಿ ಆಡಳಿತ ಹಾಗೂ ನಿರ್ವಹಣೆ ಕುರಿತು ಮಾಹಿತಿ ಪಡೆದುಕೊಂಡರು. ನಂತರ ಮೋದಿ ಅವರು, ಕೋಬ್ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಭೇಟಿ (2ನೇ ಪುಟ ನೋಡಿ)

ಭುಗಿಲೆದ್ದ ಹಿಂಸಾಚಾರ ಅಶಾಂತಿಯ ಗೂಡಾದ ಪಾಕಿಸ್ತಾನ

ಇಸ್ಲಾಮಾಬಾದ್ [illegible] ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ರಾಜೀನಾಮೆಗಾಗಿ [illegible] ನಡೆಸುತ್ತಿರುವ ಪ್ರತಿಭಟನೆ ಹಿಂಸಾಚಾರದ ಸ್ವರೂಪ ತಳೆದಿದ್ದು, ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ನಡೆದ ಘರ್ಷಣೆಯಲ್ಲಿ 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಇಸ್ಲಾಮಾಬಾದ್‌ನಲ್ಲಿ ನಡೆದಿದೆ

ಪ್ರಧಾನಮಂತ್ರಿಗಳ ಅಧಿಕೃತ ನಿವಾಸದ ಹೊರಗೆ 25 ಸಾವಿರಕ್ಕೂ ಅಧಿಕ ಮಂದಿ ರಾಜೀನಾಮೆಗಾಗಿ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರಿಂದ ಉಂಟಾದ ಗದ್ದಲ, ಗಲಾಟೆ ಹಿಂಸಾಚಾರ ಸ್ವರೂಪಕ್ಕೆ ತಿರುಗಿದ್ದರಿಂದ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ವಾದ ವಿವಾದ ನಡೆದಿದ್ದರಿಂದ ಅಶ್ರು

ಪಾಕ್‌ನಲ್ಲಿ ಭುಗಿಲೆದ್ದಿರುವ ಸರ್ಕಾರ ವಿರೋಧಿ ಪ್ರತಿಭಟನೆ

ವಾಯು, ರಬ್ಬರ್ ಬುಲೆಟ್ ಹಾಕಿ ಗುಂಡಿನ ದಾಳಿ ನಡೆಸಿದ್ದರಿಂದ 300ಕ್ಕೂ ಹೆಚ್ಚು ಮಂದಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಪ್ರಧಾನಿ ನವಾಜ್ ಷರೀಫ್ ರಾಜೀನಾಮೆಗಾಗಿ ಆಗ್ರಹಿಸಿ ನಡೆಸುತ್ತಿರುವ ಪ್ರತಿಭಟನೆ ದಿನದಿಂದ ದಿನಕ್ಕೆ ಉಗ್ರ ಸ್ವರೂಪ ಪಡೆಯುತ್ತಿದೆ [illegible] ಪ್ರತಿಭಟನೆಯ [illegible] (2ನೇ ಪುಟ ನೋಡಿ)

ಪ್ರಿಯಾಕೃಷ್ಣ - ಉಮೇಶ್ ಶೆಟ್ಟಿ ಜಟಾಪಟಿ

ಆರೋಪ ಪ್ರತ್ಯಾರೋಪ

ಬೆಂಗಳೂರು, ಆ. ೩೧- ಚಂದ್ರಗಿರಿ ಪಾರ್ಕ್ ಮತ್ತು "ಪಾಲಿಕೆ ಸೌಧ" ಉದ್ಘಾಟನೆ ಆಗದಂತೆ ಕಾಂಗ್ರೆಸ್ ಶಾಸಕ ಪ್ರಿಯಾಕೃಷ್ಣ ಪಿತಾವರ್ಗ ನಡೆಸಿದ್ದಾರೆ ಎಂದು ಬಿಬಿಎಂಪಿ ಬಿಜೆಪಿ ಸದಸ್ಯ ಕೆ ಉಮೇಶ್ ಶೆಟ್ಟಿ ಆರೋಪಿಸಿದ್ದಾರೆ ಪಾರ್ಕ್ ಹಾಗೂ ಸೌಧದ ಉದ್ಘಾಟನೆಯನ್ನು ಬೇಕೆಂತಲೇ ಮುಂದೂಡುವ [illegible] ನಡೆಸಿದ್ದಾರೆ. ಇದಕ್ಕಿಂತ ದೊಡ್ಡ ದುರಂತ ಇಲ್ಲ ಎಂದು ಹರಿಹಾಯ್ದಿದ್ದಾರೆ

ರಾಜಕೀಯವಾಗಿ ನನ್ನ ಏಳಿಗೆಯನ್ನು ಸಹಿಸದ ಕಾಂಗ್ರೆಸ್ ಶಾಸಕರು ಇಂತಹ ಕಾರ್ಯಕ್ಕೆ ಕೈಹಾಕಿದ್ದಾರೆ ಅವರಿಗೆ ಜನತೆಯೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದ್ದಾರೆ ಕಾರ್ಯಕ್ರಮ ಮುಂದೂಡುತ್ತಿರುವುದು ಇದು ಮೂರನೇ ಬಾರಿ [illegible] ಶಾಸಕ ಪ್ರಿಯಾಕೃಷ್ಣ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವ [illegible] ಕಾರ್ಯಕ್ರಮ ನಡೆಯುವಂತೆ ಮಾಡುವಲ್ಲಿ ಯತ್ನಿಸಿದ್ದೇನೆ. ಆದರೆ ಅವರು ತಪ್ಪು ನಿರ್ಧಾರ ಕೈಗೊಂಡಿದ್ದಾರೆ ಎಂದು ಆಪಾದಿಸಿದರು.

ಕಣ್ಣೀರಿಟ್ಟ ಉಮೇಶ್ ಶೆಟ್ಟಿ

ಪಾರ್ಕ್ ಮತ್ತು ಸೌಧ ನಿರ್ಮಾಣಕ್ಕಾಗಿ 4 ವರ್ಷಗಳಿಂದ (2ನೇ ಪುಟ ನೋಡಿ)

ಪಾಲಿಕೆ ಸೌಧ ಉದ್ಘಾಟನೆ ರದ್ದು

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಆ ೩೧ ಕಾಂಗ್ರೆಸ್ ಶಾಸಕ ಪ್ರಿಯಾಕೃಷ್ಣ ಮತ್ತು ಬಿಜೆಪಿ ಬಿಬಿಎಂಪಿ ಸದಸ್ಯ ಕೆ ಉಮೇಶ್ ಶೆಟ್ಟಿ ನಡುವಿನ ರಾಜಕೀಯ ಭಿನ್ನಾಭಿಪ್ರಾಯ ತಾರಕಕ್ಕೇರಿದ್ದು, ನಾಗರಭಾವಿ ವಾರ್ಡ್‌ನಲ್ಲಿಂದು "ಚಂದ್ರಗಿರಿ ಪಾರ್ಕ್" ಮತ್ತು "ಪಾಲಿಕೆ ಸೌಧ" ಉದ್ಘಾಟನಾ ಕಾರ್ಯಕ್ರಮ ಮತ್ತೊಮ್ಮೆ ರದ್ದಾಗಿದೆ.

ಚಂದ್ರಗಿರಿ ಪಾರ್ಕ್, ಪಾಲಿಕೆ ಸೌಧದ ಆವರಣದಲ್ಲಿ ಬಿಗುವಿನ ವಾತಾವರಣ ಉಂಟಾಗಿದ್ದು, ಇಡೀ ದಿನ 144ನೇ ಸೆಕ್ಷನ್ ಅನ್ನು ಜಾರಿಗೊಳಿಸಲಾಗಿದೆ.

ಹೆಚ್ಚುವರಿ ಪೊಲೀಸ್ ಆಯುಕ್ತ ಅಲೋಕ್ ಕುಮಾರ್, ಡಿಸಿಪಿ ಸಂದೀಪ್ ಪಾಟೀಲ್ ಜಂಟಿ ಪೊಲೀಸ್ ಆಯುಕ್ತ ಎಸ್. ರವಿ ಅವರು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಇದೇ ತಿಂಗಳ 16 ಮತ್ತು 24 ರಂದು ಉದ್ಘಾಟನಾ ಕಾರ್ಯಕ್ರಮ ನಿಗದಿಯಾಗಿದ್ದರೂ, ಕೆಲಕಾರಣಗಳಿಂದ ಇಂದಿಗೆ ಮುಂದೂಡಲಾಗಿತ್ತು. ಆದರೆ ಇಂದೂ ಸಹ ಶಾಸಕ ಮತ್ತು ಸದಸ್ಯರ ನಡುವಿನ ಭಿನ್ನಾಭಿಪ್ರಾಯದಿಂದಾಗಿ ರದ್ದಾಗಿದೆ

ಇಂದು ಬೆಳಿಗ್ಗೆ 9.30ಕ್ಕೆ ಪಾರ್ಕ್ ಮತ್ತು ಪಾಲಿಕೆ ಸೌಧ ಉದ್ಘಾಟನಾ ಕಾರ್ಯಕ್ರಮವಿತ್ತು, ಕೇಂದ್ರ ರಸಗೊಬ್ಬರ ಸಚಿವ ಅನಂತ್ ಕುಮಾರ್ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಪ್ರಿಯಾಕೃಷ್ಣ, ಮಾಜಿ ಉಪಮುಖ್ಯಮಂತ್ರಿ ಆರ್ ಅಶೋಕ್ ಮೇಯರ್ ಕಟ್ಟೆ ಸತ್ಯನಾರಾಯಣ. (2ನೇ ಪುಟ ನೋಡಿ)

ನಾಗರಭಾವಿಯ ಚಂದ್ರಗಿರಿ ಪಾರ್ಕ್ ಬಳಿ ಮೊಕ್ಕಾಂ ಹೂಡಿರುವ ಹೆಚ್ಚುವರಿ ಪೊಲೀಸ್ ಆಯುಕ್ತ ಅಲೋಕ್ ಕುಮಾರ್, ಜಂಟಿ ಪೊಲೀಸ್ ಆಯುಕ್ತ ಎಸ್. ರವಿ ಡಿಸಿಪಿ ಸಂದೀಪ್ ಪಾಟೀಲ್ ಭದ್ರತಾ ಕಾರ್ಯದ ಪರಿಶೀಲನೆ ನಡೆಸಿದರು.

ವೃದ್ಧೆಯ 3 ಲಕ್ಷ ರೂ. ಮಾಂಗಲ್ಯಸರ ಕದ್ದು ಪರಾರಿ

ಬೆಂಗಳೂರು, ಆ. ೩೧- ಮನೆಗೆ ನಡೆದು ಹೋಗುತ್ತಿದ್ದ ವೃದ್ಧೆಯೊಬ್ಬರ 3 ಲಕ್ಷ [illegible] ಸರವನ್ನು [illegible] ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು [illegible] ದುರ್ಘಟನೆ ಇಂದು ಬೆಳಿಗ್ಗೆ ರಾಜಾಜಿನಗರದ [illegible] ನಡೆದಿದೆ

[illegible] (65) ಅವರು ಬೆಳಿಗ್ಗೆ 7.30 ರ ವೇಳೆ ಹೊರಗೆ [illegible] ಮನೆಗೆ ನಡೆದು ಬರುತ್ತಿದ್ದಾಗ ಹಿಂದಿನಿಂದ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು, ಅವರ ಕತ್ತಿನಲ್ಲಿದ್ದ 120 ಗ್ರಾಂ ತೂಕದ ಮಾಂಗಲ್ಯಸರವನ್ನು ಕಿತ್ತು ಪರಾರಿಯಾಗಿದ್ದಾರೆ

[illegible] ಪ್ರಕರಣ ದಾಖಲಿಸಿದ್ದಾರೆ ಈ ನಡುವೆ ಹೆಬ್ಬಾಳ [illegible] ಮಹಿಳೆಯರ ಚಿನ್ನದ ಸರ ಕಸಿಯುವ ವಿಫಲಯತ್ನ [illegible] ನಡೆದಿದೆ ಕಳೆದ ಮೂರ್‍ನಾಲ್ಕು ದಿನಗಳಿಂದ [illegible] ಚಿನ್ನದ ಸರ ಕಳವು ಪ್ರಕರಣಗಳು ಹೆಚ್ಚಾಗತೊಡಗಿದ್ದು, ಇದಾನಿ (2ನೇ ಪುಟ ನೋಡಿ)

ಇಂದಿರಾನಗರ ನೂರಡಿ ರಸ್ತೆಗೆ ಜಾನಪದ ತಜ್ಞ ಎಸ್.ಕೆ. ಕರೀಂಖಾನ್ ಹೆಸರನ್ನು ನಾಮಕರಣ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯರೊಂದಿಗೆ ಶಾಸಕ ಎನ್.ಎ. ಹ್ಯಾರಿಸ್, ಮೇಯರ್ ಸತ್ಯನಾರಾಯಣ, ಕನ್ನಡ ಚಳವಳಿ ಹೋರಾಟಗಾರ ವಾಟಾಳ್ ನಾಗರಾಜ್, ಶಾಸಕ ಎಸ್. ರಘು, ಪಾಲಿಕೆ ಪ್ರತಿಪಕ್ಷದ ನಾಯಕ ಮಂಜುನಾಥರೆಡ್ಡಿ, ಕಾಂಗ್ರೆಸ್ ಮುಖಂಡ ಸಿ. ರಮೇಶ್ ಇದ್ದಾರೆ.

ವೇಶ್ಯಾವಾಟಿಕೆ ಕಾನೂನುಬದ್ಧಗೊಳಿಸಿ

ನಿಸಾರ್ ಅಹಮದ್

ಬೆಂಗಳೂರು, ಆ. ೩೧. ವೇಶ್ಯಾವಾಟಿಕೆಯನ್ನು ಕಾನೂನು ಬದ್ಧಗೊಳಿಸಿ ವೃತ್ತಿಯಲ್ಲಿ ತೊಡಗಿಸಿಕೊಳ್ಳುವವರಿಗೆ ಪ್ರತ್ಯೇಕ ಜಾಗ ನೀಡಿ ಎಂದು ಹಿರಿಯ ಸಾಹಿತಿ, ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಸರ್ಕಾರವನ್ನು ಇಂದಿಲ್ಲಿ ಆಗ್ರಹಿಸಿದಾರೆ

ವೇಶ್ಯಾವಾಟಿಕೆ ನಡೆಸುವವರೂ ಸಹ ಈ ದೇಶದ ಪ್ರಜೆಗಳಾಗಿದ್ದು, ಅವರಿಗೂ ಬದುಕುವ ಹಕ್ಕಿದೆ. ಅವರನ್ನು ಸಮಾಜ ನಿಕೃಷ್ಟವಾಗಿ ಕಾಣುವ ಹಿನ್ನೆಲೆಯಲ್ಲಿ ಗುಪ್ತವಾಗಿ ವೇಶ್ಯಾವಾಟಿಕೆ ನಡೆಸುವ ಮೂಲಕ ಹಲವು ಸೋಂಕುಗಳಿಗೆ ಕಾರಣರಾಗಿ ಇತರರಿಗೂ ಅದನ್ನು ಹರಡಲು ಕಾರಣರಾಗಿದ್ದಾರೆ ಹಾಗಾಗಿ ಸರ್ಕಾರ ಇಂತಹವರಿಗೆ ಪ್ರತ್ಯೇಕ ಸ್ಥಳ ನೀಡಿ ಅವರ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡುವಂತೆ ಅವರು ಒತ್ತಾಯಿಸಿದರು

ವಿಶ್ವ ಛಾಯಾಗ್ರಾಹಕರ ದಿನಾಚರಣೆ ಅಂಗವಾಗಿ ಛಾಯಾಗ್ರಾಹಕ ಸುಧೀರ್ ಶೆಟ್ಟಿ ಅವರು ಚಿತ್ರಕಲಾ ಪರಿಷತ್ತಿನಲ್ಲಿಂದು ಏಷ್ಯಾ ಮಹಾನಗರಗಳಲ್ಲಿ ಅತ್ಯಾಚಾರವೇಕೆ? ಕಾನೂನಿನ ಚೌಕಟ್ಟಿನಲ್ಲಿ ವೇಶ್ಯಾ ವೃತ್ತಿ ಬೇಕೆ? ಎಂಬ ಶೀರ್ಷಿಕೆಯಡಿ ಮುಂಬೈ, ಪುಣೆ ಮತ್ತು ದೆಹಲಿಯ [illegible] ವೇಶ್ಯಾಗೃಹಗಳ ಮೇಲೆ ಒಂದು ಕಣ್ನೋಟ ಬೀರುವ ಛಾಯಾಚಿತ್ರ ಪ್ರದರ್ಶನದಲ್ಲಿ ಭಾಗವಹಿಸಿ ಅವರು ಮಾತನಾಡಿದರು

ರಾಜ್ಯದಲ್ಲಿ ಸರ್ಕಾರ ಬಹುದೊಡ್ಡ ಯೋಜನೆಗಳನ್ನೇ ರೂಪಿಸುತ್ತಿದೆ. ಆದರೆ ಇಂತಹ ಮಂದಿಗೆ ಯಾವುದೇ ಯೋಜನೆಗಳಿಲ್ಲ ಎಂದು ವಿಷಾದಿಸಿದ ಅವರು, ಇವರೂ ಈ ಭಾರತದ ಪ್ರಜೆಗಳಾಗಿದ್ದು, (2ನೇ ಪುಟ ನೋಡಿ)

ಅತ್ಯಾಚಾರ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರ ರಚಿಸಿರುವ ಸದನ ಸಮಿತಿಯ ಅಧ್ಯಕ್ಷರಾಗಿರುವ [illegible] ಅವರಿಗೆ ವೇಶ್ಯಾವಾಟಿಕೆ ಕಾನೂನು ಬದ್ಧಗೊಳಿಸುವಂತೆ ಮನವಿ ಸಲ್ಲಿಸುವುದಾಗಿ ಛಾಯಾಗ್ರಾಹಕ ಸುಧೀಂದ್ರ ಶೆಟ್ಟಿ ಅವರು ತಿಳಿಸಿದರು

ವೇಶ್ಯಾವಾಟಿಕೆಯನ್ನು ಕಾನೂನು ಬದ್ಧಗೊಳಿಸಿದರೆ ಭ್ರೂಣಹತ್ಯೆ, ಮಕ್ಕಳ ಮಾರಾಟ, ಏಡ್ಸ್ ನಿಯಂತ್ರಣ ಮಾತ್ರ ವಲ್ಲದೇ ಅತ್ಯಾಚಾರವನ್ನೂ ತಡೆಯಬಹುದಾಗಿದೆ ಎಂದು ಅವರು ಹೇಳಿದರು

ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಇಂದು ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವುದು ಅನಿವಾರ್ಯವಾಗಿದೆ. ಪ್ರತಿದಿನ ಬೆಂಗಳೂರಿಗೆ 70 ಲಕ್ಷ ಮಂದಿ ಭೇಟಿ ನೀಡುತ್ತಿದ್ದು, ಈ ಪೈಕಿ 40 ಲಕ್ಷ ಮಂದಿಗೆ ಸಂಸಾರ ಇರುವುದಿಲ್ಲ. ಇಂತವರು ತಮ್ಮ ಲೈಂಗಿಕ ವಾಮಧೆ ತೀರಿಸಿಕೊಳ್ಳಲು ಮಕ್ಕಳ ಮತ್ತು ಮಹಿಳೆಯರ ಮೇಲೆ ಅತ್ಯಾಚಾರಕ್ಕೆ ಮುಂದಾಗುತ್ತಿದ್ದಾರೆ ಇದನ್ನು ತಡೆಯಲು ವೇಶ್ಯಾವಾಟಿಕೆಯನ್ನು (2ನೇ ಪುಟ ನೋಡಿ)

ಕುಡಿದು ವಾಹನ ಚಾಲನೆ 317 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು ಆ ೩೧- ನಗರದ ವಿವಿಧೆಡೆ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಚಾಲಕರ ವಿರುದ್ಧ ನಿನ್ನೆ ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು ಕುಡಿದು ವಾಹನ ಚಲಾಯಿಸಿದ 317 ಮಂದಿಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ

ರಾತ್ರಿ 9 ರಿಂದ ಮುಂಜಾನೆ 2ರವರೆಗೆ ನಗರದಾದ್ಯಂತ 39 [illegible] ವಿಶೇಷ ಕಾರ್ಯಾಚರಣೆ ನಡೆಸಿ 3896 [illegible] ತಪಾಸಣೆ [illegible] ವಾಹನ ಚಾಲಕರು ಮದ್ಯಪಾನ (2ನೇ ಪುಟ ನೋಡಿ)

ರಾಜ್ಯಪಾಲರ ನೇಮಕ ಸಿದ್ದರಾಮಯ್ಯ ಅಸಮಾಧಾನ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಆ ೩೧- ರಾಜ್ಯದ ರಾಜ್ಯಪಾಲರ ನೇಮಕದ ವಿಚಾರದಲ್ಲಿ ಕೇಂದ್ರಸರ್ಕಾರ ತಮ್ಮ ಸಲಹೆ ಮತ್ತು ಅಭಿಪ್ರಾಯ ಪಡೆದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ

ನೂತನ ರಾಜ್ಯಪಾಲ ವಜುಭಾಯಿ ರೂಡಾಭಾಯಿ ವಾಲಾ ಅವರ ನೇಮಕ ಸಂಬಂಧ [illegible] ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಾಏಕಿ ನೇಮಕ ಮಾಡಲಾಗಿದೆ ಎಂದು ತೀವ್ರ ವ್ಯಕ್ತಪಡಿಸಿದ್ದಾರೆ

ಯಾವುದೇ ರಾಜ್ಯಗಳಿಗೆ ರಾಜ್ಯಪಾಲರನ್ನು ನೇಮಕ ಮಾಡುವಾಗ ಆಯಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸುವುದು ವಾಡಿಕೆ-ಸಂಪ್ರದಾಯ. ಆದರೆ ರಾಜ್ಯದ ರಾಜ್ಯಪಾಲರ ನೇಮಕ ವಿಚಾರದಲ್ಲಿ ಕೇಂದ್ರಸರ್ಕಾರ ಎಡವಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಇಂದಿರಾನಗರ ನೂರಡಿ ರಸ್ತೆಗೆ ಜಾನಪದ ತಜ್ಞ ಎಸ್.ಕೆ. ಕರೀಂಖಾನ್ ಅವರ (2ನೇ ಪುಟ ನೋಡಿ)

ಸಮಿತಿ ಮೂಲಕ ವಸ್ತುಸ್ಥಿತಿ ಅಧ್ಯಯನಕ್ಕೆ ನಿರ್ಧಾರ

ತದಡಿ ವಿದ್ಯುತ್ ಸ್ಥಾವರ

ಬೆಂಗಳೂರು, ಮೇ 20- ಉತ್ತರ ಕನ್ನಡ ಜಿಲ್ಲೆಯ ತದಡಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಸಂಬಂಧಿಸಿದಂತೆ ಸ್ಥಳೀಯರು ಹಾಗೂ ಅಧಿಕಾರಿಗಳ ಸಮಿತಿಯೊಂದರ ಮೂಲಕ ವಸ್ತುಸ್ಥಿತಿ ಅಧ್ಯಯನ ನಡೆಸಿದ ನಂತರ ಅಂತಿಮ ನಿರ್ಧಾರ ಕೈಗೊಳ್ಳಲು ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಉಪ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಡಾ. ವಿ.ಎಸ್. ಆಚಾರ್ಯ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸಂಸದ ಅನಂತ ಕುಮಾರ ಹೆಗಡೆ, ಶಾಸಕರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಮೋಹನ್ ಶೆಟ್, ಶಿವಾನಂದ ನಾಯಕ ಮೊದಲಾದವರು ಪಾಲ್ಗೊಂಡಿದ್ದ ಸಭೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ... ತದಡಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಯ ಬಗ್ಗೆ ತದ್ವಿರುದ್ಧ ಅಭಿಪ್ರಾಯಗಳು ವ್ಯಕ್ತವಾದವು. ಪರಿಸರವಾದಿಗಳು ಹಾಗೂ ...

ಈ ಯೋಜನೆಯಿಂದ ಉಂಟಾಗುವ ಪರಿಣಾಮಗಳನ್ನು ... ಸರ್ಕಾರದ ಪರವಾಗಿ ಅಧಿಕಾರಿಗಳು ಈ ಸ್ಥಾವರದ ಸ್ಥಾಪನೆಯಿಂದ ಆಗುವ ಅನುಕೂಲಗಳ ಬಗ್ಗೆ ... ಸಭೆಯಲ್ಲಿ ಸರ್ವಸಮ್ಮತ ಅಭಿಪ್ರಾಯ ಮೂಡಿ ಬರಲಿಲ್ಲ. ಆಗ ಸ್ಥಳೀಯರು ಹಾಗೂ

(6ನೇ ಪುಟ ನೋಡಿ)

ಸೋಮವಾರ ಪಿಯುಸಿ ಫಲಿತಾಂಶ

ಬೆಂಗಳೂರು, ಮೇ 20- ... ಮಾರ್ಚ್ 11 ... 11.30ರ ನಂತರ ಫಲಿತಾಂಶ ...

(6ನೇ ಪುಟ ನೋಡಿ)

ಪಟ್ಟಣ ಪ್ರದೇಶಗಳ ವ್ಯಾಪ್ತಿಯಲ್ಲಿ ಖಾಸಗಿ ಬಸ್ ಸಂಚಾರಕ್ಕೆ ನಿರ್ಬಂಧ

ಬೆಂಗಳೂರು, ಮೇ 20- ನಗರ ಮತ್ತು ಪಟ್ಟಣ ಪ್ರದೇಶಗಳ 20 ಕಿ.ಮೀ ವ್ಯಾಪ್ತಿಯಲ್ಲಿ ಖಾಸಗಿ ಬಸ್ ಸಂಚಾರ ನಿರ್ಬಂಧಿಸಲು, ಕಾಂಟ್ರ್ಯಾಕ್ಟ್ ಕ್ಯಾರೇಜ್ ಕಾಯಿದೆ ತಿದ್ದುಪಡಿ ಮಾಡಲು ಸರ್ಕಾರ ಚಿಂತನೆ ನಡೆಸುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಗಳಿಗೆ ಕಾಂಟ್ರ್ಯಾಕ್ಟ್ ಕ್ಯಾರೇಜ್ ವ್ಯವಸ್ಥೆಯಿಂದ ನಷ್ಟ ಉಂಟಾಗುತ್ತಿರುವುದರಿಂದ ಕಾನೂನು ತಿದ್ದುಪಡಿ ತಂದು ಖಾಸಗಿ ಗುತ್ತಿಗೆ ಬಸ್ ಸಂಚಾರವನ್ನು ನಿರ್ಬಂಧಿಸಲು ಸರ್ಕಾರ ಗಂಭೀರ ಪರಿಶೀಲನೆ ನಡೆಸುತ್ತಿದೆ ಈ ವಿಷಯವನ್ನು ಇಂದಿಲ್ಲಿ ಸುದ್ದಿಗಾರರಿಗೆ ತಿಳಿಸಿದ ಸಾರಿಗೆ ಸಚಿವ ಎನ್. ಚೆಲುವರಾಯಸ್ವಾಮಿ, 'ಖಾಸಗಿ ಗುತ್ತಿಗೆ ಬಸ್ ಸಂಚಾರವನ್ನು ನಿರ್ಬಂಧಿಸುವುದರಿಂದ ಸಾರ್ವಜನಿಕರಿಗೆ ತೊಂದರೆ ಏನೂ ಆಗುವುದಿಲ್ಲ. ಕೆಎಸ್ಆರ್‌ಟಿಸಿ, ಈ ಸಮಸ್ಯೆ ಬಗೆಹರಿಸಲು ಸೂಕ್ತ ಬಸ್ ಸಂಚಾರ ಸೌಲಭ್ಯ ಕಲ್ಪಿಸುವ ಸಾಮರ್ಥ್ಯ ಹೊಂದಿದೆ' ಎಂದು ತಿಳಿಸಿದರು.

ಎಸ್.ಎಂ. ಕೃಷ್ಣ ಸರ್ಕಾರ ಅಧಿಕಾರದಲ್ಲಿದ್ದಾಗ ಕಾಂಟ್ರ್ಯಾಕ್ಟ್ ಕ್ಯಾರೇಜ್ ವ್ಯವಸ್ಥೆ ಜಾರಿಗೆ ಬಂದಿತು. ಇದರಿಂದ ಸರ್ಕಾರಿ ರಸ್ತೆ ಸಾರಿಗೆ ಸಂಸ್ಥೆಗಳಿಗೆ ತೀವ್ರ ನಷ್ಟವಾಗುತ್ತಿದೆ ಆದ್ದರಿಂದ ಈ ಪದ್ಧತಿ ಮುಂದುವರೆಸುವುದಿಲ್ಲ ಎಂದು ಕೆಎಸ್ಆರ್‌ಟಿಸಿ, ವಾಯುವ್ಯ ಸಾರಿಗೆ ಸಂಸ್ಥೆಗಳು ಇತ್ತೀಚೆಗೆ ಕಾನೂನು ಸಚಿವ ಬಸವರಾಜ ಹೊರಟ್ಟಿ ಅವರ ಸಮಕ್ಷಮದಲ್ಲಿ ನಡೆದ ಸಭೆಯಲ್ಲಿ ಆಕ್ಷೇಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಹೊಸ ಬಸ್ ಸಂಚಾರ: ಗ್ರಾಮೀಣ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಕಳೆದ ಸಾಲಿನಲ್ಲಿ 1200 ಹೊಸ ಬಸ್‌ಗಳನ್ನು ಸಂಚಾರಕ್ಕೆ ಕೆಎಸ್ಆರ್‌ಟಿಸಿ ನಿಯೋಜಿಸಿತ್ತು, ಪ್ರಸಕ್ತ ಸಾಲಿನಲ್ಲಿ ಈ ಸಂಖ್ಯೆಯನ್ನು 1500ಕ್ಕೆ

(6ನೇ ಪುಟ ನೋಡಿ)

KCA ಧಾರವಾಡ
M 9448379245 Ph (0836 2742655
MBA-Ent VTU
ಉಚಿತ ಉಪನ್ಯಾಸಕ್ಕೆ ಸ್ವಾಗತ
VTU MBA-Ent ಪರೀಕ್ಷೆಯಲ್ಲಿ ಯಶಸ್ವಿಯಾಗುವುದು ಹೇಗೆ?
Attend Test for KCA admission & get MBA-Ent Notes FREE
ದಿ. 21-05-06 ಭಾನುವಾರ ಬೆಳಿಗ್ಗೆ 11-00ಕ್ಕೆ

ಜಾನಪದ ಗಾರುಡಿಗ ಜತೆ ಮಾತು-ಹಾಡು...

ಜಾನಪದ ಗಾರುಡಿಗ ಡಾ. ಕರೀಂಖಾನ್ ಅವರು ಇಳಿದ ಆರಿಸಿಲದೇ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಹಾಸಿಗೆಯ ಮೇಲೆ ಪವಡಿಸಿದ ಸ್ಥಿತಿಯಲ್ಲಿ ಮಲಗಿದ್ದಾರೆ ಎನ್ನುವ ಊಹಾಪೋಹ ಹರಡಿರುವ ಬೆನ್ನಲ್ಲೇ ತಾವು ಆ ಹಿರಿಯನನ್ನು ಮಾತನಾಡಿಸಿದಂದ ಹೃದಯಂಗಮ ವರದಿ ಇಲ್ಲಿದೆ

"ವಿಂಚತ ... ಬೌರಿಂಗ್ ಆಸ್ಪತ್ರೆಯ ...

...

ಅವರಿಗೀಗ ವಯೋಸಹಜ ನಿಶ್ಶಕ್ತಿ. ... "ಡಾ. ರಾಜ್‌ಕುಮಾರ್ ಹೋದರಲ್ಲ?" ಎಂದು ಪ್ರಶ್ನಿಸಿದರೆ ತಕ್ಷಣ

(6ನೇ ಪುಟ ನೋಡಿ)

ಸೋದರನ ಮಗ ಹಸೀಬ್ ದೊಡ್ಡಪ್ಪನೊಂದಿಗೆ ಮಾತಾಡುವ ಶೈಲಿ.

ಸಮಿತಿ ಮೂಲಕ ವಸ್ತುಸ್ಥಿತಿ ಅಧ್ಯಯನಕ್ಕೆ ನಿರ್ಧಾರ

ತದಡಿ ವಿದ್ಯುತ್ ಸ್ಥಾವರ

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಡಾ. ವಿ.ಎಸ್. ಆಚಾರ್ಯ ಹಾಗೂ ಉತ್ತರ ...

(6ನೇ ಪುಟ ನೋಡಿ)

ಸೋಮವಾರ ಪಿಯುಸಿ ಫಲಿತಾಂಶ

(6ನೇ ಪುಟ ನೋಡಿ)

ಪಟ್ಟಣ ಪ್ರದೇಶಗಳ ವ್ಯಾಪ್ತಿಯಲ್ಲಿ ಖಾಸಗಿ ಬಸ್ ಸಂಚಾರಕ್ಕೆ ನಿರ್ಬಂಧ

ಬೆಂಗಳೂರು, ಮೇ 20- ನಗರ ಮತ್ತು ಪಟ್ಟಣ ಪ್ರದೇಶಗಳ 20 ... ಸರ್ಕಾರ ಗಂಭೀರ ಪರಿಶೀಲನೆ ನಡೆಸುತ್ತಿದೆ ಈ ವಿಷಯವನ್ನು ಇಂದಿಲ್ಲಿ ... ಎನ್. ಚಲುವರಾಯಸ್ವಾಮಿ, 'ಖಾಸಗಿ ... ನಷ್ಟವಾಗುತ್ತಿದೆ. ಆದ್ದರಿಂದ ಈ ಪದ್ಧತಿ ... ಮುಂದುವರೆಸಬಹುದು ಎಂದು ...

ಹೊಸ ಬಸ್ ಸಂಚಾರ: ಗ್ರಾಮೀಣ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಕಳೆದ ಸಾಲಿನಲ್ಲಿ 1200 ಹೊಸ ಬಸ್‌ಗಳನ್ನು ಸಂಚಾರಕ್ಕೆ ... ಪ್ರಸಕ್ತ ಸಾಲಿನಲ್ಲಿ ಈ ಸಂಖ್ಯೆಯನ್ನು 1500ಕ್ಕೆ

(6ನೇ ಪುಟ ನೋಡಿ)

KCA
M 94483 79245 Ph (0836) 2742655
MBA-Ent VTU
VTU MBA-Ent ಪರೀಕ್ಷೆಯಲ್ಲಿ
Attend Test for KCA admission
& get MBA-Ent Notes FREE

ಜಾನಪದ ಗಾರುಡಿಗ ಜತೆ ಮಾತು-ಹಾಡು...

ಜಾನಪದ ಗಾರುಡಿಗ ಡಾ. ಕರೀಂಖಾನ್ ಅವರು ಇಹದ ಅರಿವಿಲ್ಲದೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಹಾಸಿಗೆಯ ಮೇಲೆ ಪವಡಿಸಿದ ಸ್ಥಿತಿಯಲ್ಲಿ ಮಲಗಿದ್ದಾರೆ ...

ಸೋದರನ ಮಗ ಹಸೀಬ್, ದೊಡ್ಡಪ್ಪನೊಂದಿಗೆ ಮಾತಾಡುವ ಶೈಲಿ.

"ಡಾ. ರಾಜ್‌ಕುಮಾರ್ ಹೋದರಲ್ಲಾ?" ಎಂದು ಪ್ರಶ್ನಿಸಿದರೆ ...

(6ನೇ ಪುಟ ನೋಡಿ)

ಹೃದಯಪೂರ್ವಕ ಸ್ವಾಗತ

ಇಂದು ದಿ. 21-05-2006 ರಂದು ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ... ನೀರಾವರಿ ಯೋಜನೆಯ ಅಡಿಗಲ್ಲು ಸಮಾರಂಭಕ್ಕೆ ಆಗಮಿಸುತ್ತಿರುವ ಎಲ್ಲ ಗಣ್ಯರಿಗೂ ಹೃದಯ ಪೂರ್ವಕ ಸ್ವಾಗತ

ಸನ್ಮಾನ್ಯ ಶ್ರೀ. ಬಿ. ಎಸ್. ಯಡಿಯೂರಪ್ಪ
ಸನ್ಮಾನ್ಯ ಶ್ರೀ. ಕೆ. ಎಸ್. ಈಶ್ವರಪ್ಪ
ಸನ್ಮಾನ್ಯ ಶ್ರೀ. ಜಗದೀಶ ಶೆಟ್ಟರ
ಸನ್ಮಾನ್ಯ ಶ್ರೀ. ಸಿ. ಎಂ. ಉದಾಸಿ
ಸನ್ಮಾನ್ಯ ಶ್ರೀ. ಬಸವರಾಜ ಹೊರಟ್ಟಿ

CORAMANDEL PRESTCRETE
Mfs. Of Prestressed Concrete Pipes & Spl. Class Contractor
Head Office : HYDERABAD. Project Office : BELGAUM.
Shri. Dr. L. V. Subba Reddy
Chairman
Shri. B. Sunil Kumar
Chief Projects

ಅಧಿಕಾರ ಸ್ವೀಕಾರ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಧಾನ ವ್ಯವಸ್ಥಾಪಕರಾಗಿ ಸಿ.ಆರ್ ಚಂದ್ರಮೌಳಿ ಅಧಿಕಾರ ಸ್ವೀಕರಿಸಿದ್ದಾರೆ.

ಮೌಳಿ ಪ್ರೊಬೇಷನರಿ ಅಧಿಕಾರಿಯಾಗಿ ಬ್ಯಾಂಕ್ ಸೇವೆ ಆರಂಭಿಸಿದರು. ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್‌ನಲ್ಲಿ ಪ್ರಧಾನ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಹೈದರಾಬಾದ್ ವಲಯದ ಉಪ ಪ್ರಧಾನ ವ್ಯವಸ್ಥಾಪಕರಾಗಿ ಮತ್ತು ಮುಖ್ಯ ಡೀಲರ್ ಆಗಿ ಕಾರ್ಯ ನಿರ್ವಹಿಸಿದ ಅನುಭವ ಅವರಿಗಿದೆ

ಎಚ್ಎಎಲ್‌ನ ಏರೋಸ್ಪೇಸ್ ವಿಭಾಗ ಗುರುವಾರ ಏರ್ಪಡಿಸಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಗಿಡ ನೆಡುವುದರ ಮೂಲಕ ಪರಿಸರ ಜಾಗೃತಿ ಮೂಡಿಸಿದರು



ಹೋಟೆಲ್‌ನಲ್ಲಿ ಬಿಇಎಂಎಲ್ ಅಧಿಕಾರಿ ಆತ್ಮಹತ್ಯೆ

ಬಿಇಎಂಎಲ್ ಹಿರಿಯ ಅಧಿಕಾರಿಯೊಬ್ಬರು ಹೋಟೆಲ್‌ವೊಂದರಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ [illegible] ... ನಾಯಕ್ (55) ಆತ್ಮಹತ್ಯೆ [illegible]

[illegible]

ಆಗಾಗ್ಗೆ ಎದೆ ನೋವು ಬರುತ್ತಿದ್ದರಿಂದ ಸ್ವಯಂ ನಿವೃತ್ತಿ ಬಯಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಾಯಕ್ ಹಿಂದೆ ಮನವಿ ಮಾಡಿಕೊಂಡಿದ್ದರು. [illegible]

ಮತ್ತೆ ಕೆಲ ತಿಂಗಳಲ್ಲಿ ನಾಯಕ್ ಕೆಲಸದಲ್ಲಿ ಮುಂದುವರೆಯಲು [illegible] ಬಂದು ರಾಜೀನಾಮೆ ಕೊಟ್ಟಿದ್ದರು. [illegible] ಆದರೆ ಮಂಡಳಿ ಅವರ ಕೋರಿಕೆಗೆ ಅಮಾನವೀಯಗಿದೆ, ಹಿಂದಿನ ಸಂಸ್ಥೆ ಸಾಕಷ್ಟು ಏಳಿಗೆ ಹೊಂದಿದೆ ಎಂದು ರಾಜೀನಾಮೆ [illegible] ಸಹೋದ್ಯೋಗಿಗಳು ಅವರ [illegible] ಮುಕ್ತಕಂಠದಿಂದ ಪ್ರಶಂಸಿಸುತ್ತಿದ್ದಾರೆ.

ಆತ್ಮಹತ್ಯೆ ಮುನ್ನ ನಾಯಕ್ ಮೂರು ಪುಟಗಳ ದೀರ್ಘ ಪತ್ರ ಬರೆದಿದ್ದು ವಿವರ ಹೀಗಿದೆ:

[illegible]

ಅವರ ಆತ್ಮಹತ್ಯೆಗೆ ಕಾರಣ ಏನೆಂಬುದು ಕುತೂಹಲ ಮೂಡಿಸಿದೆ. ಎದೆ ನೋವೇ ಕಾರಣವಾಗಿರದು ಎಂದು ಅನೇಕ ಸಹೋದ್ಯೋಗಿಗಳು [illegible]

[illegible] ವ್ಯಕ್ತಪಡಿಸುತ್ತಿದ್ದಾರೆ. ಸಂಪಂಗಿರಾಮನಗರ ಪೊಲೀಸರು ಆತ್ಮಹತ್ಯೆ ಪ್ರಕರಣ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ

ವಕೀಲರೊಬ್ಬರಿಗೆ ಚಾಕು ತೋರಿಸಿ ಸುಲಿಗೆ

ವಕೀಲರೊಬ್ಬರಿಗೆ ಚಾಕು ತೋರಿಸಿ ಬೆದರಿಸಿದ ದುಷ್ಕರ್ಮಿಗಳು ನಗದು ಹಾಗೂ ಇತರೆ ವಸ್ತು ಸುಲಿಗೆ ಮಾಡಿದ ಘಟನೆ ಹಲಸೂರುಗೇಟ್ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ನಡೆದಿದೆ.

ಗಾಂಧಿನಗರದಲ್ಲಿ ಕಚೇರಿ ಹಾಗೂ ಮನೆ ಹೊಂದಿರುವ [illegible] ಎಂಬುವವರು [illegible] ಹಳೆ ಪೋಸ್ಟ್ ಆಫೀಸ್ ರಸ್ತೆಯಲ್ಲಿ ಇವರನ್ನು ಅಡ್ಡಗಟ್ಟಿದ ನಾಲ್ವರು ಚಾಕು ತೋರಿಸಿ ಮೊಬೈಲ್, ನಗದು 600 ರು ಮತ್ತು ಅವರು ಧರಿಸಿದ್ದ ಜರ್ಕಿನ್ ಕಿತ್ತುಕೊಂಡು ಪರಾರಿಯಾಗಿದ್ದಾರೆ

ಹಲಸೂರುಗೇಟ್ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ

ಸರ ಅಪಹರಣ: ಅಳುತ್ತಿದ್ದ ಮಗುವನ್ನು ಸಮಾಧಾನಿಸಲು ಮನೆ ಸಮೀಪವೇ ನಿಂತಿದ್ದ ಮಹಿಳೆಯಿಂದ ಚಿನ್ನದ ಸರ ಅಪಹರಿಸಿದ ಘಟನೆ ವಿದ್ಯಾರಣ್ಯಪುರದಲ್ಲಿ ಬುಧವಾರ ರಾತ್ರಿ ನಡೆದಿದೆ

ದೊಡ್ಡಬೊಮ್ಮಸಂದ್ರದ ವಾಸಿ ಪ್ರಭಾವತಿ ಎಂಬುವರ ಮಗು [illegible] ಸಮಾಧಾನಿಸುತ್ತಿದ್ದಾಗ ಮೂವರು ವ್ಯಕ್ತಿಗಳು ಚಾಕು ತೋರಿಸಿ ಬೆದರಿಸಿ 45 ಸಾವಿರ ರು. ಬೆಲೆಯ ಚಿನ್ನದ ಸರ ಅಪಹರಿಸಿದ್ದಾರೆ ವಿದ್ಯಾರಣ್ಯಪುರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ

[illegible]

ಆರ್‌ಟಿಓ, ಇಸ್ಕಾನ್ ದೇವಾಲಯಕ್ಕೆ ಬಾಂಬ್ ಕರೆ

ಕಳೆದೆರಡು ವಾರಗಳಿಂದ ನಗರದ ಶಾಲಾ-ಕಾಲೇಜುಗಳಿಗೆ ವ್ಯಾಪಿಸಿದ್ದ ಹುಸಿ ಬಾಂಬ್ ಕರೆಗಳು ಗುರುವಾರ ದೇವಾಲಯ ಮತ್ತು ಆರ್ ಟಿ ಓ ಕಚೇರಿಗಳಿಗೂ ಬಂದಿತು.

ಬುಧವಾರ ಪತ್ರಿಕಾಲಯವೊಂದಕ್ಕೆ 'ಪಿ.ಡಬ್ಲ್ಯು ಜಿ.' ಹೆಸರಿನಲ್ಲಿ ಬರೆದಿರುವ ಪತ್ರದಲ್ಲಿ 'ನ್ಯಾಯಮೂರ್ತಿ ವೆಂಕಟಾಚಲ ಅವರನ್ನು ಲೋಕಾಯುಕ್ತ ನ್ಯಾಯಮೂರ್ತಿ ಆಗಿ ಮುಂದುವರಿಸಬೇಕು, ಇಲ್ಲವೇ ಭ್ರಷ್ಟ ಸಾರಿಗೆ ಇಲಾಖೆಯನ್ನು ಸ್ಫೋಟಗೊಳಿಸಲಾಗುವುದೆಂದು ಎಚ್ಚರಿಸಲಾಗಿತ್ತು

ಕಬ್ಬನ್‌ಪಾರ್ಕ್ ಪೊಲೀಸರು ತನಿಖೆ ನಡೆಸಿದರು. ಈ ಹಿನ್ನೆಲೆಯಲ್ಲಿ ನಗರ ಪೊಲೀಸ್ ಕಮಿಷನರ್ ನಗರದ ಎಲ್ಲಾ ಆರ್.ಟಿ.ಓ. ಕಚೇರಿಗಳಲ್ಲಿ ಕೂಡಲೇ ತಪಾಸಣೆ ನಡೆಸಲು ಆದೇಶಿಸಿದರು.

ಗುರುವಾರ ಇಂದಿರಾನಗರ, ಯಶವಂತಪುರ ಸೇರಿದಂತೆ ಎಲ್ಲಾ ಆರ್ ಟಿ ಓ. ಕಚೇರಿಗಳಿಗೆ ತಮ್ಮ ಅಗತ್ಯ ಕೆಲಸದಲ್ಲಿ ಬಂದವರಿಗೆ ಮಾತ್ರ ತಪಾಸಣೆ ನಡೆಸಿ ಕಚೇರಿಯೊಳಗೆ ಬಿಡಲಾಯಿತು

ಈ ತಪಾಸಣೆ ಮುಗಿಯುತ್ತಿದ್ದಂತೆ ಗುರುವಾರ ಮಧ್ಯಾಹ್ನ ಇಸ್ಕಾನ್ ದೇವಾಲಯಕ್ಕೆ ಕಿಡಿಗೇಡಿಯೊಬ್ಬ ಕರೆ ಮಾಡಿ ದೇವಾಲಯದಲ್ಲಿ ಬಾಂಬ್ ಇಡಲಾಗಿದೆ ಎಂದು ತಿಳಿಸಿದ್ದರಿಂದ ಪೊಲೀಸರು ಕೂಡಲೇ ಸ್ಥಳಕ್ಕೆ ದಾವಿಸಿ ತಪಾಸಣೆ ನಡೆಸಿದರು ನಂತರ ಹುಸಿ ಕರೆ ಎಂಬುದು ತಿಳಿದುಬಂತು

ಗುರುವಾರ ಹುಸಿ ಬಾಂಬ್ ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ ಆರ್‌ಟಿಓ ಕಚೇರಿಯನ್ನು ಶೋಧಿಸುತ್ತಿರುವ ಪೊಲೀಸರು

ಆದರೆ ಈ ಕರೆಯಿಂದಾಗಿ ದೇವಾಲಯಕ್ಕೆ [illegible]

[illegible]

ಕಮಿಷನರ್ [illegible]

[illegible]

ಇಬ್ಬರು ಅಧಿಕಾರಿಗಳು ಲೋಕಾಯುಕ್ತ ಬಲೆಗೆ

[illegible] 2000 ರು. ಲಂಚ [illegible]

[illegible] 150 ರು. ಲಂಚ [illegible] ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಬಲೆಗೆ [illegible]

ಉಪಲೋಕಾಯುಕ್ತರ ಹೆಸರಲ್ಲಿ ವಸೂಲಿ: ಬಂಧನ

ಉಪಲೋಕಾಯುಕ್ತರ ಹೆಸರು ಹೇಳಿ ಹೆದರಿಸಿ ಹಣ ವಸೂಲಿ ಮಾಡುತ್ತಿದ್ದ [illegible] ಪೊಲೀಸರು ಬಂಧಿಸಿದ್ದಾರೆ

[illegible] ಉಪಲೋಕಾಯುಕ್ತ [illegible] ದೂರವಾಣಿ ಮೂಲಕ ಸಂಪರ್ಕಿಸಿ, ನಿಮ್ಮ ಪ್ರಕರಣ ಲೋಕಾಯುಕ್ತ ಕಚೇರಿಗೆ [illegible]

[illegible] 10,000 ರು. [illegible] ಕೊಡಬೇಕು [illegible]

ಏಡ್ಸ್ ಸೋಂಕಿನಿಂದ ದಂಪತಿ ಸಾವು, ತಬ್ಬಲಿಯಾದ ಮಗು

[illegible] (30) [illegible]

[illegible]

ಕರೀಂಖಾನ್ ಹೆಸರಲ್ಲಿ ಕ್ರಿಯಾ ಯೋಜನೆ: ಬರಗೂರು ಸಲಹೆ

[illegible]

ಅವರು ಸಂಕಟದ ಬದುಕು ಬದುಕಿದರೂ, ಹಿಂದೂ - ಮುಸ್ಲಿಂ ಸಾಮರಸ್ಯದ ಸಂಕೇತವಾಗಿದ್ದರು [illegible]

[illegible]

ಬಾಬ್ಬಾ ಅಣುಶಕ್ತಿ ಕೇಂದ್ರಕ್ಕೆ ಉಗ್ರರಿಂದ ಬೆದರಿಕೆ

ಕೈಗಾ ಅಣುಸ್ಥಾವರಕ್ಕೆ ಮತ್ತಷ್ಟು ಭದ್ರತೆ

ಕಾರವಾರ: ಮುಂಬಯಿಯ ಬಾಬಾ ಅಣುಶಕ್ತಿ ಕೇಂದ್ರಕ್ಕೆ ಉಗ್ರರಿಂದ ಬಾಂಬ್ ದಾಳಿ ಭೀತಿಯ ಹಿನ್ನೆಲೆಯಲ್ಲಿ ದೇಶದ ಆರು ಅಣು ವಿದ್ಯುತ್ ಸ್ಥಾವರಗಳಿಗೆ ಹೆಚ್ಚಿನ ಭದ್ರತೆ ಒದಗಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ ಇದರನ್ವಯ ಕೈಗಾ ಅಣು ವಿದ್ಯುತ್ ಸ್ಥಾವರಕ್ಕೂ ಮತ್ತಷ್ಟು ಬಿಗಿ ಭದ್ರತೆ ಒದಗಿಸಲಾಗಿದೆ

ಕೈಗಾ ಅಣು ವಿದ್ಯುತ್ ಸ್ಥಾವರದಲ್ಲಿ [illegible] ರಕ್ಷಣಾ ಪಡೆ ಕಾವಲು ಕಾಯುತ್ತಿದ್ದು, ರಾಜ್ಯಸರ್ಕಾರವು 25 ಪೊಲೀಸರುಳ್ಳ ವಿಶೇಷ ಪಡೆಯನ್ನು ಸ್ಥಾವರದ ರಕ್ಷಣೆಗೆ ನಿಯೋಜಿಸಿದೆ ಇದರ ಜೊತೆಗೆ ಕೈಗಾ ವಸತಿ [illegible] ರಕ್ಷಣಾ ವ್ಯವಸ್ಥೆಯೂ ಇದೆ [illegible] ಬಿಗಿ ಭದ್ರತೆ [illegible]

[illegible] ಕೈಗಾಕ್ಕೆ [illegible] ಭದ್ರತಾ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸಲಿದ್ದಾರೆ ಎಂದು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ [illegible] ತಿಳಿಸಿದ್ದಾರೆ

ರೈಲಿನಲ್ಲಿ ವಿದ್ಯಾರ್ಥಿನಿ ಆತ್ಮಹತ್ಯೆಗೆ ಯತ್ನ

ಮಂಡ್ಯ [illegible]

[illegible] (21) [illegible] ಬೆಂಗಳೂರು [illegible] ಬುಧವಾರ [illegible] 11 [illegible]

[illegible]

ಅವಧಿ ವಿಸ್ತರಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2006-07ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹ ಧನ ಮಂಜೂರು ಮಾಡುವ ಸಲುವಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕವನ್ನು ಆ31ರವರೆಗೆ ವಿಸ್ತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ರಾಯಚೂರಿಗೆ ಆಲ್ಕೋಡ್

ಯುವಜನ ಸೇವೆ ಮತ್ತು ಕ್ರೀಡಾ ಸಚಿವ ಹನುಮಂತಪ್ಪ ಆಲ್ಕೋಡ್ ಅವರು ಆ4ರಿಂದ 7ರವರೆಗೆ ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು

ನಾಳೆ ಸಾರಿಗೆ ಅದಾಲತ್

ಇಂದಿರಾನಗರದ ಪ್ರಾದೇಶಿಕ ಸಾರಿಗೆ ಆಯುಕ್ತರ ಕಚೇರಿಯಲ್ಲಿ ಆ5ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

>>>> ಮೊದಲ ಪುಟದಿಂದ...

ರೆಡ್ಡಿ ವಿರುದ್ಧ ಮತ್ತೊಂದು ಖಟ್ಲೆ

ಸದನದಿಂದ ಹೊರಬಂದ ನಂತರವೂ [illegible]

[illegible] ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ [illegible] ಹನುಮಂತರಾಯ [illegible]

ದಿನಚರಿ

ಶುಕ್ರವಾರ

4-8-2006

ಶ್ರೀ ಮುನೇಶ್ವರಸ್ವಾಮಿ ದೇವಸ್ಥಾನ: ಮೂರ್ತಿ ಪ್ರತಿಷ್ಠಾಪನೆ ಸಮಾರಂಭ, ಪಂಚಾಮೃತ ಅಭಿಷೇಕ, ರುದ್ರಹೋಮ, ಪ್ರಸಾದ ವಿನಿಯೋಗ. ಸ್ಥಳ- ಶ್ರೀ ಮುನೇಶ್ವರಸ್ವಾಮಿ ದೇವಸ್ಥಾನ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಗ್ಗೆ 6ಕ್ಕೆ

ಬೆಂಗಳೂರು ವಿಶ್ವವಿದ್ಯಾಲಯ: [illegible] ಸ್ಥಳ- ಡಾ [illegible] ಸಭಾಂಗಣ, ಜ್ಞಾನಭಾರತಿ ಬೆಳಗ್ಗೆ 10.30ಕ್ಕೆ

ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ: ಪತ್ರಿಕಾವೇತ [illegible] ಪುಸ್ತಕ ಮಾಲಿಕೆ [illegible] ಸಮಾರಂಭ. [illegible] ಕೃಷ್ಣ ಪುಸ್ತಕಗಳ [illegible] ಹಾಗೂ ಬರಹಗಾರರಿಗೆ ಸನ್ಮಾನ – ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ, ಪ್ರತಿ ಪಕ್ಷದ ನಾಯಕ ಎನ್. ಧರ್ಮಸಿಂಗ್, ಉನ್ನತ ಶಿಕ್ಷಣ ಸಚಿವ ಡಿ. ಎಚ್. ಶಂಕರಮೂರ್ತಿ, [illegible] ವಿಧಾನಸೌಧ ಸಂಜೆ 4ಕ್ಕೆ

ಎಫ್‌ಕೆಸಿಸಿಐ: [illegible]

ಸ್ಥಳ- ದಿ ಗ್ರಾಂಡ್ ಅಶೋಕ, ಕುಮಾರ ಕೃಪ ಹೈಗ್ರೌಂಡ್ಸ್, ಸಂಜೆ 4ಕ್ಕೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕನ್ನಡ ಸಂಘ: [illegible]

ಬೆನೆವೊಲೆಂಟ್ ಬುಕ್ ಸ್ಟಾಳ್ಸ್: [illegible] ಜನತಾ ಬಜಾರ್ ಎದುರು, 4 ನೇ ಬ್ಲಾಕ್, ಜಯನಗರ ಸಂಜೆ 5.30ಕ್ಕೆ

[illegible]

2006 [illegible]

ರಷ್ಮಿ ಕಲ್ಚರಲ್ ಅಕಾಡೆಮಿ [illegible]

ಶ್ರೀ ರಾಮ ಲಲಿತ ಕಲಾ ಮಂದಿರ [illegible]

ಶ್ರೀ ವ್ಯಾಸರಾಜ ಮಠ [illegible]



ರಂಗ ಶಂಕರ [illegible] ಪ್ರದರ್ಶನ, ಸ್ಥಳ- ರಂಗ ಶಂಕರ, ಜೆಪಿ ನಗರ, ಸಂಜೆ 7.30ಕ್ಕೆ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ವಿಷಯ, ವಸ್ತುಗಳ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಯಾ ಜಾಹೀರಾತುದಾರರೇ ಜವಾಬ್ದಾರರು [illegible] ಅದಕ್ಕೆ ಪತ್ರಿಕೆ ಹೊಣೆಯಲ್ಲ.

ಅಧಿಕಾರ ಸ್ವೀಕಾರ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಧಾನ ವ್ಯವಸ್ಥಾಪಕರಾಗಿ [illegible] ಅಧಿಕಾರ ಸ್ವೀಕರಿಸಿದ್ದಾರೆ.

ಮೌಳಿ ಪ್ರೊಬೇಷನರಿ ಅಧಿಕಾರಿಯಾಗಿ ಬ್ಯಾಂಕ್ ಸೇವೆ ಆರಂಭಿಸಿದರು. ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್‌ನಲ್ಲಿ ಪ್ರಧಾನ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಹೈದರಾಬಾದ್ ವಲಯದ ಉಪ ಪ್ರಧಾನ ವ್ಯವಸ್ಥಾಪಕರಾಗಿ ಮತ್ತು ಮುಖ್ಯ ಡೀಲರ್ ಆಗಿ ಕಾರ್ಯ ನಿರ್ವಹಿಸಿದ ಅನುಭವ ಅವರಿಗಿದೆ.

ಎಚ್‌ಎಎಲ್‌ನ ಏರೋಸ್ಪೇಸ್ ವಿಭಾಗ ಗುರುವಾರ ಏರ್ಪಡಿಸಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಗಿಡ ನೆಡುವುದರ ಮೂಲಕ ಪರಿಸರ ಜಾಗೃತಿ ಮೂಡಿಸಿದರು



ಹೋಟೆಲ್‌ನಲ್ಲಿ ಬಿಇಎಂಎಲ್ ಅಧಿಕಾರಿ ಆತ್ಮಹತ್ಯೆ

ಬಿಇಎಂಎಲ್ ಹಿರಿಯ ಅಧಿಕಾರಿಯೊಬ್ಬರು ಹೋಟೆಲ್ ರೂಮಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ [illegible] ನಗರದಲ್ಲಿ ನಡೆದಿದೆ.

[illegible] ಮನೆಯಲ್ಲಿ ಸ್ನಾನ-ತಿಂಡಿ ಮುಗಿಸಿ [illegible]

ಆಗಾಗ್ಗೆ ಎದೆ ನೋವು ಬರುತ್ತಿದ್ದರಿಂದ ಸ್ವಯಂ ನಿವೃತ್ತಿ ಬಯಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಾಯಕ್ ಹಿಂದೆ ಮನವಿ ಮಾಡಿಕೊಂಡಿದ್ದರು. ಅವರೊಬ್ಬ ಪ್ರಾಮಾಣಿಕ ಅಧಿಕಾರಿ, ಸಾಕಷ್ಟು ಯೋಜನೆಗಳಿಗೆ ಉತ್ತಮ ಪ್ರತಿಕ್ರಿಯೆ ದೊರಕಿತ್ತು ಎಂಬ ಹಿನ್ನೆಲೆಯಲ್ಲಿ ಸಂಸ್ಥೆ ಅವರ ಮನವಿಗೆ ಸ್ಪಂದಿಸಿರಲಿಲ್ಲವೆಂದು ಗೊತ್ತಾಗಿದೆ.

ಮತ್ತೆ ಕೆಲ ತಿಂಗಳಲಿ ನಾಯಕ್ ಕೆಲಸದಲ್ಲಿ ಮುಂದುವರೆಯಲು ಸಾಧ್ಯವಾಗದು ಎಂಬ ನಿಲುವಿಗೆ ಬಂದು ರಾಜೀನಾಮೆ ಕೊಟ್ಟಿದ್ದರು. [illegible] ಅವರ ಕೊಡುಗೆ ಅಪಾರವಾಗಿದೆ, ಅವರಿಂದ ಸಂಸ್ಥೆ ಸಾಕಷ್ಟು ಏಳಿಗೆ ಹೊಂದಿದೆ ಎಂದು ರಾಜೀನಾಮೆ ಸ್ವೀಕರಿಸಿರಲಿಲ್ಲವೆಂದು ಹೇಳುತ್ತಿರುವ ಸಹೋದ್ಯೋಗಿಗಳು ಅವರ ಗುಣವನ್ನು ಇಂದಿಗೂ ಮುಕ್ತಕಂಠದಿಂದ ಪ್ರಶಂಸಿಸುತ್ತಿದ್ದಾರೆ.

ಆತ್ಮಹತ್ಯೆ ಮುನ್ನ ನಾಯಕ್ ಮೂರು ಪುಟಗಳ ದೀರ್ಘ ಪತ್ರ ಬರೆದಿದ್ದು ವಿವರ ಹೀಗಿದೆ.

ತಾವು ಯಾರು, ಎಲ್ಲಿ ಕೆಲಸ ಮಾಡುತ್ತಿರುವುದು, ತಮ್ಮ [illegible] ದೂರವಾಣಿ ಸಂಪರ್ಕದ ಸಂಖ್ಯೆಗಳು [illegible]

ಎರಡನೇ ಪುಟದಲ್ಲಿ ತನ್ನ ಸಾವಿಗೆ ಯಾರೂ ಕಾರಣರಲ್ಲ [illegible]

ಮೂರನೇ ಪುಟದಲ್ಲಿ ತಮ್ಮ ಪತ್ನಿ ಹಾಗೂ ಮಗಳಿಗೆ ತಮಗೆ [illegible] ಎಲ್ಲಾ ಬಾಬತ್ತಿನ ಹಣ ಮತ್ತು ಸೌಕರ್ಯವನ್ನು [illegible] ಮನವಿ ಮಾಡಿಕೊಂಡಿರುವ ಅವರು ಯಾವ ಕಾರಣಕ್ಕೂ ಕುಟುಂಬದವರನ್ನು ಅಲೆದಾಡಿಸದಂತೆ ಕೆಲಸ ಮಾಡಿಕೊಡಿ ಎಂದು ಕೇಳಿಕೊಂಡಿದ್ದಾರೆ.

ಇವರ ಆತ್ಮಹತ್ಯೆ ಸುದ್ದಿ ಕೇಳಿ ಬಂದ ನೌಕರರೆಲ್ಲರೂ ಇವರೊಬ್ಬ ಪ್ರಾಮಾಣಿಕ-ದಕ್ಷ ಅಧಿಕಾರಿಯಾಗಿ ಕೆಲಸ ಮಾಡಿದವರು. ಯಾರೊಬ್ಬರಿಗೂ ನೋವುಂಟು ಮಾಡಿದವರಲ್ಲ ಎಲ್ಲರ ಪ್ರೀತಿ ವಿಶ್ವಾಸಗಳಿಸಿದ್ದರು ಎಂದು ಅವರನ್ನು ಸ್ಮರಿಸಿದರು.

ಇವರ ಆತ್ಮಹತ್ಯೆಗೆ ಕೆಲಸದ ಒತ್ತಡ ಕಾರಣವಾಗಿರದು ಎಂದು ಅನೇಕ ಸಹೋದ್ಯೋಗಿಗಳು [illegible]

ಅಪಮಾನ ವ್ಯಕ್ತಪಡಿಸುತ್ತಿದ್ದಾರೆ. ಸಂಪಂಗಿರಾಮನಗರ ಪೊಲೀಸರು ಆತ್ಮಹತ್ಯೆ ಪ್ರಕರಣ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಕೀಲರೊಬ್ಬರಿಗೆ ಚಾಕು ತೋರಿಸಿ ಸುಲಿಗೆ

ವಕೀಲರೊಬ್ಬರಿಗೆ ಚಾಕು ತೋರಿಸಿ ಬೆದರಿಸಿದ ದುಷ್ಕರ್ಮಿಗಳು ನಗದು ಹಾಗೂ ಇತರೆ ವಸ್ತು ಸುಲಿಗೆ ಮಾಡಿದ ಘಟನೆ ಹಲಸೂರುಗೇಟ್ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ನಡೆದಿದೆ.

ಗಾಂಧಿನಗರದಲ್ಲಿ ಕಚೇರಿ ಹಾಗೂ ಮನೆ ಹೊಂದಿರುವ ಶರಣಪ್ಪಪಾಟೀಲ್ ಎಂಬುವರು ಸೆಂಚುರಿಕ್ಲಬ್‌ನಲ್ಲಿ ಸ್ನೇಹಕೂಟಕ್ಕೆಂದು ತೆರಳುತ್ತಿದ್ದಾಗ ಹಳೆ ಪೋಸ್ಟ್ ಆಫೀಸ್ ರಸ್ತೆಯಲ್ಲಿ ಇವರನ್ನು ಅಡ್ಡಗಟ್ಟಿದ ನಾಲ್ವರು ಚಾಕು ತೋರಿಸಿ ಮೊಬೈಲ್, ನಗದು 600 ರು. ಮತ್ತು ಅವರು ಧರಿಸಿದ್ದ ಜರಕಿನ್ ಕಿತ್ತುಕೊಂಡು ಪರಾರಿಯಾಗಿದ್ದಾರೆ

ಹಲಸೂರುಗೇಟ್ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಸರ ಅಪಹರಣ: ಅಳುತ್ತಿದ್ದ ಮಗುವನ್ನು ಸಮಾಧಾನಿಸಲು ಮನೆ ಸಮೀಪವೇ ನಿಂತಿದ್ದ ಮಹಿಳೆಯಿಂದ ಚಿನ್ನದ ಸರ ಅಪಹರಿಸಿದ ಘಟನೆ ವಿದ್ಯಾರಣ್ಯಪುರದಲ್ಲಿ ಬುಧವಾರ ರಾತ್ರಿ ನಡೆದಿದೆ.

ದೊಡ್ಡಬೊಮ್ಮಸಂದ್ರದ ವಾಸಿ ಪ್ರಭಾವತಿ ಎಂಬುವರ ಮಗು ಗ್ರೀಷ್ಮಾಳಿಗೆ ಸಮಾಧಾನಿಸುತ್ತಿದ್ದಾಗ ಮೂವರು ವ್ಯಕ್ತಿಗಳು ಚಾಕು ತೋರಿಸಿ ಬೆದರಿಸಿ 45 ಸಾವಿರ ರು. ಬೆಲೆಯ ಚಿನ್ನದ ಸರ ಅಪಹರಿಸಿದ್ದಾರೆ ವಿದ್ಯಾರಣ್ಯಪುರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ

ಕಳವು: [illegible] ಉದ್ಯೋಗಿ ರತ್ನಂ ಎಂಬುವರ ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಸೇರಿದಂತೆ ಸುಮಾರು ಒಂದು ಲಕ್ಷರು ಬೆಲೆಯ ವಸ್ತುಗಳನ್ನು ಕಳವು ಮಾಡಲಾಗಿದ

ಅವರು ಕೆಲಸ ಮುಗಿಸಿ ಬಂದಾಗ ಕಳವು ನಡೆದಿದ್ದು ಗೊತ್ತಾಗಿದೆ. ಜೈಪುಂರಸ್ವಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ

ಹೆಣ್ಣೂರು ವ್ಯಾಪ್ತಿಯ ಕೊತ್ತನೂರು ವಾಸಿ ಕೆ.ಎಸ್. ಗೋಪಾಲ್‌ರೆಡ್ಡಿ ಅವರ ಕೆ. ನಾರಾಯಣ್‌ಪುರದಲ್ಲಿದ್ದ ಅಂಗಡಿಯ ಬೀಗ ಮುರಿದು ಮೊಬೈಲ್ ಕರೆನ್ಸಿ ಹಾಗೂ ಮೊಬೈಲ್ ಕಳವು ಮಾಡಿರುವ ಘಟನೆ ಬುಧವಾರ ರಾತ್ರಿ ನಡೆದಿದೆ. ಕಳವಿನ ನಿಖರ ಮೊತ್ತ ತಿಳಿದುಬಂದಿಲ್ಲ.

ಬೆಂಕಿ: ರಾಜರಾಜೇಶ್ವರಿನಗರ ವ್ಯಾಪ್ತಿಯಲ್ಲಿರುವ ಥರ್ಮೋಕೋಲ್ 'ಇನ್ಸುಲೇಶನ್' ಎಂಬ ಖಾಸಗಿ ಫ್ಯಾಕ್ಟರಿಯಲ್ಲಿ ಗುರುವಾರ ಸಂಜೆ ಬೆಂಕಿ ಕಾಣಿಸಿಕೊಂಡು ಸಹಸ್ರಾರು ರು ನಷ್ಟ ಸಂಭವಿಸಿದೆ.

ಬೆಂಕಿಗೆ ರೂಮೊಂದರಲ್ಲಿದ್ದ ವಸ್ತುಗಳು ಸುಟ್ಟುಹೋಗಿವೆ [illegible] ಶಾರ್ಟ್‌ಸರ್ಕ್ಯೂಟ್ ಘಟನೆಗೆ ಕಾರಣವಾಗಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ

ಆರ್‌ಟಿಓ, ಇಸ್ಕಾನ್ ದೇವಾಲಯಕ್ಕೆ ಬಾಂಬ್ ಕರೆ

ಕಳೆದೆರಡು ವಾರಗಳಿಂದ ನಗರದ ಶಾಲಾ-ಕಾಲೇಜುಗಳಿಗೆ ವ್ಯಾಪಿಸಿದ್ದ ಹುಸಿ ಬಾಂಬ್ ಕರೆಗಳು ಗುರುವಾರ ದೇವಾಲಯ ಮತ್ತು ಆರ್.ಟಿ.ಓ ಕಚೇರಿಗಳಿಗೂ ಬಂದಿತು.

ಬುಧವಾರ ಪತ್ರಿಕಾಲಯವೊಂದಕ್ಕೆ 'ಪಿ.ಡಬ್ಲ್ಯು.ಜಿ' ಹೆಸರಿನಲ್ಲಿ ಬರೆದಿರುವ ಪತ್ರದಲ್ಲಿ 'ನ್ಯಾಯಮೂರ್ತಿ ವೆಂಕಟಾಚಲ ಅವರನ್ನು ಲೋಕಾಯುಕ್ತ ನ್ಯಾಯಮೂರ್ತಿ ಆಗಿ ಮುಂದುವರಿಸಬೇಕು, ಇಲ್ಲವೇ ಭ್ರಷ್ಟ ಸಾರಿಗೆ ಇಲಾಖೆಯನ್ನು ಸ್ಫೋಟಗೊಳಿಸಲಾಗುವುದೆಂದು ಎಚ್ಚರಿಸಲಾಗಿತ್ತು

ಕಬ್ಬನ್‌ಪಾರ್ಕ್ ಪೊಲೀಸರು ತನಿಖೆ ನಡೆಸಿದರು. ಈ ಹಿನ್ನೆಲೆಯಲ್ಲಿ ನಗರ ಪೊಲೀಸ್ ಕಮಿಷನರ್ ನಗರದ ಎಲ್ಲಾ ಆರ್.ಟಿ.ಓ. ಕಚೇರಿಗಳಲ್ಲಿ ಕೂಡಲೇ ತಪಾಸಣೆ ನಡೆಸಲು ಆದೇಶಿಸಿದರು.

ಗುರುವಾರ ಇಂದಿರಾನಗರ, ಯಶವಂತಪುರ ಸೇರಿದಂತೆ ಎಲ್ಲಾ ಆರ್.ಟಿ.ಓ. ಕಚೇರಿಗಳಿಗೆ ತಮ್ಮ ಅಗತ್ಯ ಕೆಲಸದಲ್ಲಿ ಬಂದವರಿಗೆ ಮಾತ್ರ ತಪಾಸಣೆ ನಡೆಸಿ ಕಚೇರಿಯೊಳಗೆ ಬಿಡಲಾಯಿತು.

ಈ ತಪಾಸಣೆ ಮುಗಿಯುತ್ತಿದ್ದಂತೆ ಗುರುವಾರ ಮಧ್ಯಾಹ್ನ ಇಸ್ಕಾನ್ ದೇವಾಲಯಕ್ಕೆ ಕಿಡಿಗೇಡಿಯೊಬ್ಬ ಕರೆ ಮಾಡಿ ದೇವಾಲಯದಲ್ಲಿ ಬಾಂಬ್ ಇಡಲಾಗಿದೆ ಎಂದು ತಿಳಿಸಿದ್ದರಿಂದ ಪೊಲೀಸರು ಕೂಡಲೇ ಸ್ಥಳಕ್ಕೆ ದಾವಿಸಿ ತಪಾಸಣೆ ನಡೆಸಿದರು ನಂತರ ಹುಸಿ ಕರೆ ಎಂಬುದು ತಿಳಿದುಬಂತು

ಗುರುವಾರ ಹುಸಿ ಬಾಂಬ್ ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ ಆರ್‌ಟಿಓ ಕಚೇರಿಯನ್ನು ಶೋಧಿಸುತ್ತಿರುವ ಪೊಲೀಸರು.

ಆದರೆ ಈ ಕರೆಯಿಂದಾಗಿ ದೇವಾಲಯಕ್ಕೆ ಬಂದಿದ್ದ ಭಕ್ತಾದಿಗಳಿಗೆ [illegible]

ಕಮಿಷನರ್ ಎಚ್ಚರಿಕೆ: ಈ ಎಲ್ಲಾ ಕರೆಗಳ ಹಿನ್ನೆಲೆಯಲ್ಲಿ ನಗರದ ಎಲ್ಲಾ ಸಾರಿಗೆ ಇಲಾಖೆ [illegible] ಇಲಾಖೆಗಳಲ್ಲೂ ತಪಾಸಣೆ ನಡೆಸಲಾಯಿತು.

ಗುರುವಾರ ಇಸ್ಕಾನ್ ದೇವಾಲಯಕ್ಕೆ ಸುಮಾರು 5 ಗಂಟೆ ಸಮಯದಲ್ಲಿ ಪೊಲೀಸ್ ಕಂಟ್ರೋಲ್‌ರೂಮಿಗೆ ಕರೆ ಬಂದಿತು. ಆದರೆ ಕರೆ ಎಲ್ಲಿಂದ ಬಂತೆಂಬುದು ದಾಖಲಾಗದಂತೆ ದುಷ್ಕರ್ಮಿಗಳು ಎಚ್ಚರ ವಹಿಸಿದ್ದಾರೆ

ಈಗಾಗಲೇ ಈ ರೀತಿ ಬೆದರಿಕೆ ಬರುತ್ತಿರುವ ಹುಸಿಕರೆ ಹಿನ್ನೆಲೆಯಲ್ಲಿ ನಗರ ಪೊಲೀಸರು ಕ್ರಮ ಕೈಗೊಂಡಿದ್ದು, ಈಗಾಗಲೇ ಎರಡು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಿದ್ದಾರೆ

ಇಂತಹ ಕರೆ ಮಾಡುವವರ ವಿರುದ್ಧ ಸೂಕ್ತ ತನಿಖೆ ನಡೆದಿದೆ

[illegible]

ಇಬ್ಬರು ಅಧಿಕಾರಿಗಳು ಲೋಕಾಯುಕ್ತ ಬಲೆಗೆ

[illegible]

ಉಪಲೋಕಾಯುಕ್ತರ ಹೆಸರಲ್ಲಿ ವಸೂಲಿ: ಬಂಧನ

[illegible]

ಈ ಎಸ್‌ಐ ಕುಂತಿ ಚಾರ್ಜ್‌ಶೀಟ್ ಅಧಿಕಾರಿ ಬಂದಾಗ 10,000 ರು ಉಪಲೋಕಾಯುಕ್ತ [illegible] ಕೊಡಬೇಕು [illegible] ಪ್ರಕರಣ ಮುಚ್ಚಿ ಹಾಕುತ್ತೇವೆ ಎಂದು [illegible] ಉಪಲೋಕಾಯುಕ್ತರಿಗೆ ವಿಷಯ ತಿಳಿಸಿದ [illegible] ವಿಧಾನಸೌಧ ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ

ಲೋಕಾಯುಕ್ತ [illegible] ಹೆಸರಿನಲ್ಲಿಯಾದರೂ ಭ್ರಷ್ಟಾಚಾರ ನಡೆಸಿದರೆ, ಕೂಡಲೇ ತಿಳಿಸುವಂತೆ ಲೋಕಾಯುಕ್ತ ಸಂತೋಷ ಹೆಗ್ಡೆ ಅವರು [illegible] ಮನವಿ ಮಾಡಿಕೊಂಡಿದ್ದಾರೆ

ಏಡ್ಸ್ ಸೋಂಕಿನಿಂದ ದಂಪತಿ ಸಾವು, ತಬ್ಬಲಿಯಾದ ಮಗು

[illegible]

ಕೋಣೆಯೊಳಗೆ ಹೋದ ಆಶಾ ಮನೆಯ ಉಪಯೋಗಕ್ಕೆ [illegible] ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಳು. ಕಿಟಕಿಯಿಂದ ಹೊಗೆ ಬರುತ್ತಿತ್ತು ಅಕ್ಕ-ಪಕ್ಕದ ದವರು ನೋಡಿ ತಿಳಿಸಿದರು. ತಕ್ಷಣವೆ [illegible] ಹೋದಾಗ ಬೆಂಕಿ ಸಿಡಿದು ಅವರ ಹುಬ್ಬಿಗೆ [illegible] ಆಸ್ಪತ್ರೆಗೆ ಹೋಗಿದ್ದರು. ಎಲ್ಲರೂ ಬರುವಷ್ಟರಲ್ಲಿ [illegible] ಏಡ್ಸ್ ಇದೆ ಎಂದು ವೈದ್ಯರು ತಿಳಿಸಿದ್ದರೂ [illegible] ಆವಳ ಬದುಕಿಗೆ ತೊಂದರೆಯಿಲ್ಲವೆಂದು [illegible] ವಾಸಿಸುತ್ತಿದ್ದ ಕೋಣೆಯಲ್ಲಿ ಆಶಾ ಈ [illegible]

[illegible] ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ

ಕರೀಂಖಾನ್ ಹೆಸರಲ್ಲಿ ಕ್ರಿಯಾ ಯೋಜನೆ: ಬರಗೂರು ಸಲಹೆ

[illegible]

ಅವರು ಸಾಕಷ್ಟು ಬದುಕು ಬದುಕಿದರೂ, ಹಿಂದೂ - ಮುಸ್ಲಿಂ [illegible]

[illegible]

ಅನವರ ಸಮುದಾಯ, ಆರ್ಥಿಕ ಸಮಸ್ಯೆ ಸಹಿತ [illegible]

ಬಾಬಾ ಅಣುಶಕ್ತಿ ಕೇಂದ್ರಕ್ಕೆ ಉಗ್ರರಿಂದ ಬೆದರಿಕೆ
ಕೈಗಾ ಅಣುಸ್ಥಾವರಕ್ಕೆ ಮತ್ತಷ್ಟು ಭದ್ರತೆ

ಕಾರವಾರ: ಮುಂಬಯಿಯ ಬಾಬಾ ಅಣು ಶಕ್ತಿ ಕೇಂದ್ರಕ್ಕೆ ಉಗ್ರರಿಂದ ಬಾಂಬ್ ದಾಳಿ ಭೀತಿಯ ಹಿನ್ನೆಲೆಯಲ್ಲಿ ದೇಶದ ಆರು ಅಣು ವಿದ್ಯುತ್ ಸ್ಥಾವರಗಳಿಗೆ ಹೆಚ್ಚಿನ ಭದ್ರತೆ ಒದಗಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ ಇದರನ್ವಯ ಕೈಗಾ ಅಣು ವಿದ್ಯುತ್ ಸ್ಥಾವರಕ್ಕೂ ಮತ್ತಷ್ಟು ಬಿಗಿ ಭದ್ರತೆ ಒದಗಿಸಲಾಗಿದೆ.

ಕೈಗಾ ಅಣು ವಿದ್ಯುತ್ ಸ್ಥಾವರದಲ್ಲಿ ಕೇಂದ್ರೀಯ ಕೈಗಾರಿಕಾ ರಕ್ಷಣಾ ಪಡೆ ಕಾವಲು ಕಾಯುತ್ತಿದ್ದು, ರಾಜ್ಯಸರ್ಕಾರವೂ 25 ಪೊಲೀಸರಿರುವ ವಿಶೇಷ ಪಡೆಯನ್ನು ಸ್ಥಾವರದ ರಕ್ಷಣೆಗೆ ನಿಯೋಜಿಸಿದೆ ಇದರ ಜೊತೆಗೆ ಕೈಗಾ ದವರದ್ದೇ ವಿಶೇಷ ರಕ್ಷಣಾ ವ್ಯವಸ್ಥೆಯೂ ಇದೆ [illegible] ಅಧಿಕಾರಿಗಳ ನೇತೃತ್ವದಲ್ಲಿ ಭದ್ರತೆ ಪರಿಶೀಲನೆಗೆ ಉನ್ನತ ಸಮಿತಿಯೊಂದನ್ನು ರಚಿಸಿದೆ

ಕೈಗಾರಿಕಾ ರಕ್ಷಣಾ ಪಡೆಯ ಮಹಾ ನಿರ್ದೇಶಕ [illegible] ಅವರು ಶುಕ್ರವಾರ ಕೈಗಾಕ್ಕೆ ಆಗಮಿಸಿ ಅಣುಶಕ್ತಿ ಕೇಂದ್ರದ ಭದ್ರತಾ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸಲಿದ್ದಾರೆ ಎಂದು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ [illegible] 'ಉಷಾಕಿರಣ'ಕ್ಕೆ ತಿಳಿಸಿದ್ದಾರೆ

ರೈಲಿನಲ್ಲಿ ವಿದ್ಯಾರ್ಥಿನಿ ಆತ್ಮಹತ್ಯೆಗೆ ಯತ್ನ

[illegible] (21) [illegible] ಬುಧವಾರ ರಾತ್ರಿ 11 ಗಂಟೆ ಸಮಯದಲ್ಲಿ [illegible] ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ

ಅವಧಿ ವಿಸ್ತರಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2006-07ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹ ಧನ ಮಂಜೂರು ಮಾಡುವ ಸಲುವಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕವನ್ನು ಆ.31ರವರೆಗೆ ವಿಸ್ತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ

ಇಂದು ರಾಯಚೂರಿಗೆ ಆಲ್ಕೋಡ್

ಯುವಜನ ಸೇವೆ ಮತ್ತು ಕ್ರೀಡಾ ಸಚಿವ ಹನುಮಂತಪ್ಪ ಆಲ್ಕೋಡ್ ಅವರು ಆ.4ರಿಂದ 7ರವರೆಗೆ ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು.

ನಾಳೆ ಸಾರಿಗೆ ಅದಾಲತ್

ಇಂದಿರಾನಗರದ ಪ್ರಾದೇಶಿಕ ಸಾರಿಗೆ ಆಯುಕ್ತರ ಕಚೇರಿಯಲ್ಲಿ ಆ.5ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ

▸▸▸ ಮೊದಲ ಪುಟದಿಂದ....

ರೆಡ್ಡಿ ವಿರುದ್ಧ ಮತ್ತೊಂದು ಖಟ್ಲೆ

ಸದನದಿಂದ ಹೊರಬಂದ ನಂತರವೂ ಆರೋಪ ಗಳನ್ನು ಪುನರುಚ್ಚರಿಸಿದ್ದರು.

ಈಗಾಗಲೇ ಮುಖ್ಯಮಂತ್ರಿ ವತಿಯಿಂದ ಸರ್ಕಾರ ಮಾನನಷ್ಟ ಮೊಕದ್ದಮೆ ಹೂಡಿದ್ದು, ಇದೀಗ ಗೃಹ ಸಚಿವರ ವತಿಯಿಂದಲೂ ಹೂಡಲು ಮುಂದಾಗಿದೆ. ಆರೋಪಗಳಿಂದಾಗಿ ಸರ್ಕಾರದ ಕೆಲಸಕ್ಕೆ ತೊಂದರೆಯಾಗಿರ[illegible] ಸರ್ಕಾರದ ವತಿಯಿಂದಲೇ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ [illegible] ಹೂಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಿನಚರಿ

ಶುಕ್ರವಾರ 4-8-2006

ಶ್ರೀ ಮುನೇಶ್ವರಸ್ವಾಮಿ ದೇವಸ್ಥಾನ: [illegible]

ಬೆಂಗಳೂರು ವಿಶ್ವವಿದ್ಯಾಲಯ, [illegible] ಉಪನ್ಯಾಸ, ವಿಷಯ- ಸಮಕಾಲೀನ ಸವಾಲುಗಳು. [illegible] ಸ್ಥಳ- [illegible] ಸಭಾಂಗಣ, ಜ್ಞಾನಭಾರತಿ ಬೆಳಗ್ಗೆ 10.30ಕ್ಕೆ

ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ: ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಮಾಲಿಕೆ ಬಿಡುಗಡೆ ಸಮಾರಂಭ, ಉದ್ಘಾಟನೆ- ವಿಧಾನಸಭಾಧ್ಯಕ್ಷ ಕೃಷ್ಣ, ಪುಸ್ತಕಗಳ ಬಿಡುಗಡೆ ಹಾಗೂ ಬರಹಗಾರರಿಗೆ ಸನ್ಮಾನ – ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ, ಪ್ರತಿ ಪಕ್ಷದ ನಾಯಕ ಎನ್. ಧರ್ಮಸಿಂಗ್, ಉನ್ನತ ಶಿಕ್ಷಣ ಸಚಿವ ಡಿ. ಎಚ್ ಶಂಕರಮೂರ್ತಿ, ಸಂಸದೀಯ ವ್ಯವಹಾರಗಳ ಸಚಿವ ಎಂ. ಪಿ. ಪ್ರಕಾಶ್, ಅಧ್ಯಕ್ಷತೆ- ವಿಧಾನ ಪರಿಷತ್ ಸಭಾಪತಿ [illegible] ಸ್ಥಳ- ಸಮ್ಮೇಳನ ಸಭಾಂಗಣ, ಮೂರನೇ ಮಹಡಿ, ವಿಧಾನಸೌಧ ಸಂಜೆ 4ಕ್ಕೆ.

ಎಫ್‌ಕೆಸಿಸಿಐ: 'ಅಭಿವದಿ ಪಕ್ಷ [illegible] ಮಹಾನಗರ ಪಾಲಿಕೆ ಕಮಿಷನರ್ ಕೆ. ಜೈರಾಜ್, ಅಡ್ವೋಕೇಟ್ ಅನೂಪ್ ಶಾ,

[illegible] ಆನಂದ್, ಅಧ್ಯಕ್ಷತೆ- ವಿದ್ಯುತ್ ಪ್ರಸರಣ ನಿಗಮ [illegible] ಸ್ಥಳ- [illegible] ಸಭಾಂಗಣ, ಸಂಜೆ 4ಕ್ಕೆ

ವೇಟರ್ ಆಫ್ ಓಕ್ ಪಾರಡೈಸ್. [illegible] ಉದ್ಘಾಟನೆ - ಉನ್ನತ ಶಿಕ್ಷಣ ಸಚಿವ ಡಿ. ಎಚ್ ಶಂಕರಮೂರ್ತಿ, ಮತ್ತು ಸತ್ಯವತಿ ಶಂಕರಮೂರ್ತಿ, ಮುಖ್ಯ ಅತಿಥಿಗಳು- ಮಹಾನಗರ ಪಾಲಿಕೆ ಕಮಿಷನರ್ ಜೈರಾಜ್, [illegible] ಅಧ್ಯಕ್ಷ ಜಿತೇಂದರ್ ಪಾಲ್ [illegible] ಸ್ಥಳ- [illegible] ಜನತಾ ಬಜಾರ್ ಎದುರು, 4 ನೇ ಬ್ಲಾಕ್, ಜಯನಗರ ಸಂಜೆ 5.30ಕ್ಕೆ.

ಬಸವ ಸಮಿತಿ: ಮನೆಯಿಂದ ಮನೆಗೆ 'ಅನುಭವ ಮನೆ' [illegible] 2006 'ಬಸವ ಜರ್ನಲ್' ಪ್ರಧಾನ ಸಂಪಾದಕ [illegible]

ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ: ಚಾತುರ್ಮಾಸ್ಯ-

2006, [illegible] ಸಭಾಂಗಣ, 9 ನೇ ಮುಖ್ಯ ರಸ್ತೆ, [illegible] 2 ನೇ ಹಂತ, ಸಂಜೆ 6.15ಕ್ಕೆ

ಶ್ರೀ ವ್ಯಾಸರಾಜ ಮಠ: [illegible] ಉಪನ್ಯಾಸ ವಿಷಯ- ಶ್ರೀ ಭಾಗವತ [illegible] ಸ್ಥಳ- ಶ್ರೀ ವ್ಯಾಸರಾಜ ಮಠ (ಸೋಸಲೆ), [illegible] ಶಾಖೆ, ನಂ 1160, 5 ನೇ ಮುಖ್ಯರಸ್ತೆ, 'ಎ' ಬ್ಲಾಕ್, 2 ನೇ ಹಂತ, ರಾಜಾಜಿನಗರ, ಸಂಜೆ 7ಕ್ಕೆ

ರಂಗ ಶಂಕರ: ಪ್ರಮೋದ್ ಶಿಗ್ಗಾಂವ್ [illegible] ನಾಟಕ ಪ್ರದರ್ಶನ, ಸ್ಥಳ ರಂಗ ಶಂಕರ, ಜೆಪಿ ನಗರ, ಸಂಜೆ 7.30ಕ್ಕೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದ್ದರಿಂದ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

ಡಾ.ಎಸ್.ಕೆ.ಕರೀಂಖಾನ್ ಹೆಸರಿನಲ್ಲಿ ಪ್ರಶಸ್ತಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಆ.31: ಜಾನಪದ ಜಂಗಮ, ಸ್ವಾತಂತ್ರ್ಯ ಹೋರಾಟಗಾರ ಡಾ.ಎಸ್.ಕೆ.ಕರೀಂಖಾನ್ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕು. ಈ ಹಿನ್ನೆಲೆಯಲ್ಲಿ ಅವರ ಹೆಸರಿನ ಪ್ರಶಸ್ತಿಯನ್ನು ಸ್ಥಾಪಿಸುವ ಕುರಿತು ಸರಕಾರದ ಮಟ್ಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರವಿವಾರ ಇಂದಿರಾನಗರದ 100 ಅಡಿ ರಸ್ತೆಗೆ ಡಾ.ಎಸ್.ಕೆ.ಕರೀಂಖಾನ್ ರಸ್ತೆ ಎಂದು ಮರು ನಾಮಕರಣ ಮಾಡಿದ ಬಳಿಕ ಸಮಾರಂಭದಲ್ಲಿ ಉದ್ದೇಶಿಸಿ ಮಾತನಾಡಿದ ಅವರು, ಕರೀಂಖಾನ್ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪನೆ ಕುರಿತು ಚರ್ಚಿಸಿ, ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಜಾನಪದ ಸಾಹಿತ್ಯವನ್ನು ಪ್ರೀತಿಸುತ್ತಿದ್ದ ಕರೀಂಖಾನ್ ಓರ್ವ ಜಾತ್ಯತೀತ ವ್ಯಕ್ತಿ. ಇಂತಹ ಮೇರು ವ್ಯಕ್ತಿತ್ವದ ಮಹನೀಯರ ಹೆಸರನ್ನು ರಸ್ತೆಗೆ ನಾಮಕರಣ ಮಾಡುವ ವಿಚಾರದಲ್ಲಿ ಜಿಜ್ಞಾಸೆ ಪ್ರಾರಂಭವಾದದ್ದೇ ತಪ್ಪು. 2006ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ರಸ್ತೆಗೆ ನಾಮಕರಣ ಮಾಡಲು ತೀರ್ಮಾನಿಸಲಾಗಿತ್ತು. ಆದರೆ, ಎಂಟು ವರ್ಷಗಳಿಂದ ನಿರ್ಣಯ ಕಾರ್ಯರೂಪಕ್ಕೆ ಬರದೆ ಇದ್ದದ್ದು ವಿಷಾದನೀಯ ಎಂದು ಅವರು ಹೇಳಿದರು.

ಇಂದಿರಾನಗರದ ರಸ್ತೆಗೆ ಕರೀಂಖಾನ್ ಹೆಸರನ್ನು ನಾಮಕರಣ ಮಾಡುವ ಸೌಭಾಗ್ಯ ನನ್ನ ಪಾಲಿಗೆ ಲಭ್ಯವಾಗಿದ್ದು ಸಂತಸದ ವಿಷಯ. ಸರಳ ಜೀವನ ನಡೆಸುವ ಮೂಲಕ ಕರೀಂಖಾನ್ ಎಲ್ಲರಿಗೂ ಆದರ್ಶ ವ್ಯಕ್ತಿಯಾಗಿದ್ದರು. ಇಸ್ಲಾಮ್ ಧರ್ಮದ ಅನುಯಾಯಿಯಾಗಿದ್ದರೂ ಹಿಂದೂ ಧರ್ಮದ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದರು ಎಂದು ಅವರು ಹೇಳಿದರು.

ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ಕರೀಂಖಾನ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದ್ದರು. ಕನ್ನಡ ನಾಡಿನ ಏಕೀಕರಣ ಚಳವಳಿಯಲ್ಲೂ ಸಕ್ರಿಯರಾಗಿದ್ದರು. ಜಾನಪದ, ಕನ್ನಡ ಚಲನಚಿತ್ರ, ಸಾಹಿತ್ಯ, ನಾಟಕ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ತಮ್ಮ ಛಾಪನ್ನು ಮೂಡಿಸಿದ್ದರು. ಇಂತಹವರನ್ನು ಗೌರವಿಸಿದರೆ, ಕನ್ನಡಿಗರಾದ ನಾವು ನಮ್ಮನ್ನೆ ಗೌರವಿಸಿಕೊಂಡಂತೆ ಎಂದು ಅವರು ಅಭಿಪ್ರಾಯಪಟ್ಟರು.



ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಮಾತನಾಡಿ, ಕನ್ನಡ ಒಕ್ಕೂಟದ ಆಶ್ರಯದಲ್ಲಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ್‌ಶೆಟ್ಟಿ ಬಣ), ದಲಿತ ಸಂಘರ್ಷ ಸಮಿತಿ ಸೇರಿದಂತೆ ಇನ್ನಿತರ ಸಂಘ ಸಂಸ್ಥೆಗಳ ಹಮ್ಮಿಕೊಂಡ ಹೋರಾಟದಿಂದ ಎಚ್ಚೆತ್ತುಕೊಂಡ ಬಿಬಿಎಂಪಿ, ಇಂದು ಇಂದಿರಾನಗರದ ರಸ್ತೆಗೆ ಡಾ.ಎಸ್.ಕೆ.ಕರೀಂಖಾನ್ ಹೆಸರನ್ನು ನಾಮಕರಣ ಮಾಡುತ್ತಿರುವುದು ನಮ್ಮ ಹೋರಾಟಕ್ಕೆ ತಂದ ಜಯ ಎಂದರು.

ಡಾ.ಎಸ್.ಕೆ.ಕರೀಂಖಾನ್ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಲು ಸರಕಾರ ಕರೀಂಖಾನ್ ಹೆಸರಲ್ಲಿ 5 ಲಕ್ಷ ರೂ.ನಗದು ಬಹುಮಾನವನ್ನು ಒಳಗೊಂಡ ಪ್ರಶಸ್ತಿಯನ್ನು ಸ್ಥಾಪಿಸಬೇಕು ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರು.

ಸಿದ್ದರಾಮಯ್ಯ ಪೂರ್ಣಾವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಆದರೆ, ಇತ್ತೀಚೆಗೆ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಯತ್ನಗಳು ನಡೆಯುತ್ತಿರುವುದು ಕಂಡು ಬಂದಿದೆ. ಒಂದು ವೇಳೆ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಕೆಲಸಕ್ಕೆ ಯಾರಾದರೂ ಮುಂದಾದರೆ ರಾಜ್ಯಾದ್ಯಂತ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸ್ಥಳೀಯ ಶಾಸಕ ಎಸ್.ರಘು ಮಾತನಾಡಿ, 2006ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಈ ರಸ್ತೆಗೆ ಕರೀಂಖಾನ್ ಹೆಸರನ್ನು ನಾಮಕರಣ ಮಾಡಬೇಕು ಎಂದು ನಿರ್ಣಯ ಕೈಗೊಂಡಿದ್ದು, ನಮ್ಮ ಗಮನಕ್ಕೆ ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಈ ರಸ್ತೆಗೆ ಮಾಜಿ ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿ ಹೆಸರಿಡುವಂತೆ ಸರಕಾರಕ್ಕೆ ಮನವಿ ಮಾಡಲಾಗಿತ್ತು ಎಂದರು.

ಆದರೆ, ಈ ರಸ್ತೆಗೆ ಈಗಾಗಲೇ ಡಾ.ಎಸ್.ಕೆ.ಕರೀಂಖಾನ್ ಹೆಸರನ್ನು ನಾಮಕರಣ ಮಾಡುವ ಕುರಿತು ನಿರ್ಣಯ ಕೈಗೊಂಡ ವಿಚಾರ ಗಮನಕ್ಕೆ ಬರುತ್ತಿದ್ದಂತೆ ನಮ್ಮ ಮನವಿಯನ್ನು ಹಿಂಪಡೆದುಕೊಂಡೆವು. ಸಂವಹನ ಕೊರತೆಯಿಂದಾಗಿ ರಸ್ತೆಗೆ ಮರು ನಾಮಕರಣ ಮಾಡುವುದು ಇಷ್ಟು ತಡವಾಯಿತು ಎಂದು ಅವರು ಹೇಳಿದರು.

ಸಮಾರಂಭದಲ್ಲಿ ಶಾಸಕರಾದ ಎನ್.ಎ.ಹಾರೀಸ್, ಶಿವಮೂರ್ತಿ, ಬಿಬಿಎಂಪಿ ಮೇಯರ್ ಎನ್.ಶಾಂತಕುಮಾರಿ, ವಿಧಾನಪರಿಷತ್ ಸದಸ್ಯರಾದ ಭೈರತಿ ಸುರೇಶ್, ಗೋವಿಂದರಾಜು, ಡಾ.ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು, ಕನ್ನಡ ಸೇನೆ ಅಧ್ಯಕ್ಷ ಕೆ.ಆರ್.ಕುಮಾರ್, ದಲಿತ ಸಂಘರ್ಷ ಸಮಿತಿ ಸಂಚಾಲಕ ಎನ್.ಮೂರ್ತಿ, ಯುವ ಕಾಂಗ್ರೆಸ್ ಅಧ್ಯಕ್ಷ ರಿಝ್ವಾನ್ ಅರ್ಶದ್, ಡಾ.ಎಸ್.ಕೆ.ಕರೀಂಖಾನ್ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

■ ಕಂಬಾಲಪಲ್ಲಿ ಪ್ರಕರಣದಲ್ಲಿ ದಲಿತ ಸಮುದಾಯಕ್ಕೆ ದ್ರೋಹ

ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಒತ್ತಾಯ

ಬೆಂಗಳೂರು, ಆ.31: ಚಿಂತಾಮಣಿ ತಾಲೂಕಿನ ಕಂಬಾಲಪಲ್ಲಿಯಲ್ಲಿ ಮೇಲ್ಜಾತಿ ಸಮುದಾಯ ಏಳು ಮಂದಿ ದಲಿತರನ್ನು ಸಜೀವವಾಗಿ ಸುಟ್ಟು ಹಾಕಿದರು. ಆದರೆ ಈ ಪ್ರಕರಣದ ಆರೋಪಿಗಳನ್ನು ಜಿಲ್ಲಾ ಹಾಗೂ ಉಚ್ಚ ನ್ಯಾಯಾಲಯ ನಿರಪರಾಧಿಗಳೆಂದು ಖುಲಾಸೆ ಮಾಡಿದೆ. ದಲಿತ ಸಮುದಾಯಕ್ಕೆ ಮಾಡುವ ಇದಕ್ಕಿಂತ ದೊಡ್ಡ ವಂಚನೆ, ದ್ರೋಹ ಮತ್ತೊಂದಿದೆಯೆ ಎಂದು ಕರುನಾಡಗ ತಮಿಳ್ ಮಕ್ಕಳ್ ಇಯಕ್ಕಮ್‌ನ ಅಧ್ಯಕ್ಷ ಪನ್‌ಮುರುಗನ್ ಸರಕಾರವನ್ನು ಪ್ರಶ್ನಿಸಿದ್ದಾರೆ.

ಕಂಬಾಲಪಲ್ಲಿ ದಲಿತರಿಗೆ ಜಿಲ್ಲಾ ಮತ್ತು ಹೈಕೋರ್ಟ್ ನ್ಯಾಯಾಲಯದಲ್ಲಿ ನಿರಾಕರಿಸಲ್ಪಟ್ಟ ನ್ಯಾಯವನ್ನು ಸುಪ್ರೀಂ ಕೋರ್ಟ್‌ನಲ್ಲಿ ದೊರಕಿಸಿಕೊಡಲು ಸರಕಾರ ಮೇಲ್ಮನವಿ ಸಲ್ಲಿಸಬೇಕೆಂದು ಒತ್ತಾಯಿಸಿ ಕರುನಾಡುಗ ತಮಿಳ್ ಮಕ್ಕಳ್ ಇಯಕ್ಕಮ್ ನಗರದ ಪ್ರೆಸ್‌ಕ್ಲಬ್ ಮುಂದೆ ಪ್ರತಿಭಟನೆಯನ್ನು ಹಮ್ಮಿಕೊಂಡಿತ್ತು.

ಈ ವೇಳೆ ಕರುನಾಡಗ ತಮಿಳ್ ಮಕ್ಕಳ್ ಇಯಕ್ಕಮ್ ಅಧ್ಯಕ್ಷ ಪನ್‌ಮುರುಗನ್ ಮಾತನಾಡಿ, ಸಾವಿರಾರು ವರ್ಷಗಳಿಂದ ಭಾರತದಲ್ಲಿ ದಲಿತರನ್ನು ಸಣ್ಣ ಸಣ್ಣ ವಿಷಯಗಳಿಗೆ ಭೀಕರವಾಗಿ ಹಾಗೂ ಬಹಿರಂಗವಾಗಿ ಸಾಮೂಹಿಕ ಹತ್ಯೆ ಮಾಡಲಾಗುತ್ತಿತ್ತು. ಅಂತಹ ಘಟನೆಗಳು ಪ್ರಜಾಸತ್ತಾತ್ಮಕ ಭಾರತದಲ್ಲೂ ಮುಂದುವರಿಯುತ್ತಿವೆ. ಹಾಗಾಗಿ ದಲಿತ ಸಮುದಾಯಕ್ಕೆ ಇಂದಿಗೂ ಪ್ರಜಾಪ್ರಭುತ್ವ ಸಿಕ್ಕಿಲ್ಲವೆಂಬುದು ಕಂಬಾಲಪಲ್ಲಿ ಪ್ರಕರಣದಲ್ಲಿ ಹೈಕೋರ್ಟ್ ನೀಡಿದ ತೀರ್ಪಿನಿಂದ ಮತ್ತೊಮ್ಮೆ ಸ್ಪಷ್ಟವಾಗಿದೆ ಎಂದು ಅವರು ತಿಳಿಸಿದರು.

ಬೇಡಿಕೆಗಳು

ದಲಿತರ ಮೇಲೆ ನಡೆಯುವ ಜಾತಿ ದೌರ್ಜನ್ಯ ತಡೆಯಬೇಕಾದರೆ ಪ್ರತಿ ದಲಿತ ಕುಟುಂಬಕ್ಕೆ 5 ಎಕರೆ ಜಮೀನು ನೀಡಿ, ಅವರನ್ನು [illegible] ಘಟನೆ ನಡೆದ ಮಾ.7ರ ದಿನಾಂಕವನ್ನು [illegible] ಧರಣಿನಿರತರು ಆಗ್ರಹಿಸಿದ್ದಾರೆ.

ಪೊಲೀಸ್ ಠಾಣೆ, ನ್ಯಾಯಾಲಯ ಹಾಗೂ ನಗರಕ್ಕೆ ತೀರ ಹತ್ತಿರವಿರುವ ಊರಿನಲ್ಲಿ ದಲಿತ ಸಮುದಾಯವನ್ನು ಗುಡಿಸಲಿನಲ್ಲಿ ಬಲವಂತವಾಗಿ ಕೂಡಿಹಾಕಿ, ಸೀಮೆಎಣ್ಣೆ ಸುರಿದು ಸಜೀವವಾಗಿ ಸುಡಲಾಗುತ್ತದೆ. ಸುಟ್ಟು ಕರಕಲಾದ ದೇಹಗಳು ಸಾಕ್ಷಿಯಾಗಿ ಚಿತ್ರಿತವಾಗಿವೆ. ಈ ಪ್ರಕರಣದ ಕುರಿತು ಹಲವು ಮಂದಿ ಪೊಲೀಸ್ ಠಾಣೆಗೆ ದೂರು ನೀಡಿ, ನ್ಯಾಯಾಲಯದಲ್ಲಿ ಸಾಕ್ಷಿ ನೀಡಿದ್ದಾರೆ. ಆದರೂ ಆರೋಪಿಗಳು ಖುಲಾಸೆಯಾಗಿದ್ದಾರೆಂದರೆ ಅಂಬೇಡ್ಕರ್‌ರವರ ಸಂವಿಧಾನಕ್ಕೆ ದೇಶದ ಪ್ರಜಾಪ್ರಭುತ್ವಕ್ಕೆ ಎಲ್ಲಿದೆ ಅರ್ಥವೆಂದು ಅವರು ಪ್ರಶ್ನಿಸಿದರು.

ಕಂಬಾಲಪಲ್ಲಿ ಪ್ರಕರಣದಲ್ಲಿ ಜನಪ್ರತಿನಿಧಿಗಳು ಹಾಗೂ ಪೊಲೀಸ್ ಇಲಾಖೆ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಹಾಗಾಗಿ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ, ಸುಪ್ರೀಮ್‌ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು. ಅದೊಂದು ದಲಿತರು ನ್ಯಾಯಪಡೆಯಲು ಕೊನೆಯ ಅವಕಾಶವಿದೆ. ಅದನ್ನು ಸರಕಾರ ಈ ಕೂಡಲೇ ಮಾಡಬೇಕೆಂದು ಕರುನಾಡಗ ತಮಿಳ್ ಮಕ್ಕಳ್ ಇಯಕ್ಕಮ್‌ನ ಸಾವಿರಾರು ಕಾರ್ಯಕರ್ತರು ಒತ್ತಾಯಿಸಿದರು.

ಮಾಫಿಯಾ ನಿಯಂತ್ರಣಕ್ಕೆ 'ಸರಕಾರಿ ಕೇಬಲ್'

ಸಚಿವ ರೋಷನ್ ಬೇಗ್

ಬೆಂಗಳೂರು, ಆ.31: ಗ್ರಾಹಕರಿಂದ ಹೆಚ್ಚಿನ ಹಣ ವಸೂಲಿ ಮಾಡುವ ಕೇಬಲ್ ಮಾಫಿಯಾ ನಿಯಂತ್ರಣಕ್ಕೆ ತಮಿಳುನಾಡು ಮಾದರಿಯಲ್ಲೇ ಸರಕಾರದಿಂದಲೇ ಕೇಬಲ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ವಾರ್ತಾ ಸಚಿವ ಆರ್.ರೋಷನ್ ಬೇಗ್ ತಿಳಿಸಿದ್ದಾರೆ.

ರವಿವಾರ ಇಲ್ಲಿನ ಗಾಂಧಿ ನಗರದಲ್ಲಿ ಬೆಂಗಳೂರು ಮೂವೀಸ್ ಸಿನಿ ಮೀಡಿಯಾ ಡಿಜಿಟಲ್ ಫಿಲ್ಮ್ ಲ್ಯಾಬ್ ಮತ್ತು ನೂತನ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ತಮಿಳುನಾಡು ಸರಕಾರದಿಂದಲೇ ಅಳವಡಿಸಲಾಗಿರುವ ಕೇಬಲ್ ವ್ಯವಸ್ಥೆ ಯಶಸ್ವಿಯಾಗಿದೆ. ಈ ಸಂಬಂಧ ಅಲ್ಲಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ ಎಂದರು.

ಅದೇ ಮಾದರಿಯಲ್ಲೆ ಬೆಂಗಳೂರು ನಗರದಲ್ಲಿಯೂ ಸರಕಾರದಿಂದಲೇ ಕೇಬಲ್ ಅಳವಡಿಸಲು ಉದ್ದೇಶಿಸಲಾಗಿದೆ ಎಂದ ಅವರು, ಕಾಯ್ದೆ ಅನ್ವಯ ನೂರು ಚಾನೆಲ್‌ಗಳಿಗೆ 100 ರೂ.ಶುಲ್ಕ ವಸೂಲಿ ಮಾಡಬೇಕು. ಆದರೆ, ಕೇಬಲ್ ಆಪರೇಟರ್‌ಗಳು ಹೆಚ್ಚಿನ ಚಾನಲ್ ಒದಗಿಸುತ್ತೇವೆಂದು 400ರಿಂದ 500 ರೂ.ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಬಡ ಜನರಿಗೆ ಇದರಿಂದ ದೊಡ್ಡ ಹೊಡೆತ ಬಿದ್ದಿದ್ದು, ಕೇಬಲ್ ಬೇಕಾಬಿಟ್ಟಿ ಎಳೆದಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿದೆ. ಇದರಿಂದ ಆ ವೈಯರ್‌ಗಳನ್ನು ತೆರವು ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಬೇಕಾಬಿಟ್ಟಿ ಕೇಬಲ್ ವ್ಯವಸ್ಥೆಗೆ ಕಡಿವಾಣ ಹಾಕಲು ತೀರ್ಮಾನಿಸಲಾಗಿದೆ ಎಂದು ರೋಷನ್ ಬೇಗ್ ತಿಳಿಸಿದರು.

ಸರಕಾರಿ ಕೇಬಲ್ ಜಾಲ ಆರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದು, ಈ ಸಂಬಂಧ ಸಾಧಕ-ಬಾಧಕಗಳನ್ನು ಪರಿಶೀಲಿಸಿದ ಬಳಿಕ ರಾಜ್ಯದಲ್ಲಿ ಹಂತ-ಹಂತವಾಗಿ ಕೇಬಲ್ ಮಾಫಿಯಾಗೆ ಕಡಿವಾಣ ಹಾಗೂ ಸರಕಾರಿ ಕೇಬಲ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ಫಿಲ್ಮ್ ಸಿಟಿ: ನಗರದ ಹೆಸರುಘಟ್ಟ ಪ್ರದೇಶದಲ್ಲಿ ಫಿಲ್ಮ್ ಸಿಟಿ ನಿರ್ಮಾಣದ ಬಹುದಿನಗಳ ಬೇಡಿಕೆಯಾಗಿದ್ದು, ಈ ಸಂಬಂಧದ ಪ್ರಕರಣ ನ್ಯಾಯಾಲಯದಲ್ಲಿದೆ. ಅದರ ತೆರವಿಗೆ ರಾಜ್ಯದ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ಅವರೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದರು.

ಅಮೆರಿಕಾ ಮತ್ತು ಇಂಗ್ಲೆಂಡ್ ಹಾಲಿವುಡ್ ಫಿಲ್ಮ್ ಸಿಟಿ ಮಾದರಿಯಲ್ಲೆ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ, ಬೆಂಗಳೂರಿನಲ್ಲಿ ಫಿಲ್ಮ್ ಸಿಟಿಯನ್ನು ನಿರ್ಮಿಸಲಾಗುವುದು ಎಂದ ಅವರು, ಖ್ಯಾತ ನಟ ಕಮಲಹಾಸನ್ ಮತ್ತು ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಗಂಗರಾಜು ಅವರೊಂದಿಗೆ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ಮೂವೀಸ್ ಸಿನಿ ಮೀಡಿಯಾ ಡಿಜಿಟಲ್ ಫಿಲ್ಮ್ ಲ್ಯಾಬ್ ಚಲನಚಿತ್ರ ನಿರ್ಮಾಣಕ್ಕೆ ಅಗತ್ಯ ಎಲ್ಲ ತಂತ್ರಜ್ಞಾನ ಒಳಗೊಂಡಿದೆ. ಅಲ್ಲದೆ ಮಿನಿ ಥಿಯೇಟರ್ ಕೂಡ ಇದೆ. ಇದರಿಂದ ಚಲನಚಿತ್ರ ನಿರ್ಮಾಣಕ್ಕೆ ಚೆನ್ನೈ ಮತ್ತು ಮುಂಬೈ ಆಶ್ರಯಿಸುವ ಸಂಪ್ರದಾಯ ಕೊನೆಗೊಳ್ಳಲಿದೆ ಎಂದು ಅವರು ತಿಳಿಸಿದರು.

ಸಮಾರಂಭದಲ್ಲಿ ಶಾಸಕ ಭೈರತಿ ಬಸವರಾಜ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಚ್.ಡಿ.ಗಂಗರಾಜ್, ಮೂವೀಸ್ ಸಿನಿ ಮೀಡಿಯಾ ಸಂಸ್ಥೆಯ ಮ್ಯಾಥ್ಯೂ ಉಪಸ್ಥಿತರಿದ್ದರು.

ಅರಿಷಡ್ವರ್ಗ ಮನುಷ್ಯನ ಜೀವಂತಿಕೆಯ ಸಂಕೇತ

'ಆವರ್ತ' ಕಾದಂಬರಿ ಬಿಡುಗಡೆ



> "ಅನ್ಯಾಯದ ವಿರುದ್ಧ ಕೋಪಗೊಳ್ಳುವುದು, ಪ್ರಕೃತಿಯ ಸೊಬಗನ್ನು ನೋಡಿ ಮೋಹಗೊಳ್ಳುವುದು, ಕಾಮದ ಮೂಲಕ ಜೀವ ಸಂಕುಲದ ವೃದ್ಧಿ ಇವುಗಳೆಲ್ಲವೂ ನಿಸರ್ಗದ ಸಹಜವಾದ ಕ್ರಿಯೆ. ಇವುಗಳನ್ನು ನಿರಾಕರಿಸುವಂತಹ ಆಧ್ಯಾತ್ಮಿಕವಾದ ಬದುಕು ಅರ್ಥವಿಲ್ಲ.
>
> ★ ಡಾ.ಪಿ.ವಿ.ನಾರಾಯಣ
> ಹಿರಿಯ ಸಾಹಿತಿ ಹಾಗೂ ಚಿಂತಕ

ಬೆಂಗಳೂರು, ಆ.31: ಮನುಷ್ಯನಲ್ಲಿರುವ ಅರಿಷಡ್ವರ್ಗಗಳು ಜೀವಂತಿಕೆ ಹಾಗೂ ಸಾಮರ್ಥ್ಯದ ಸಂಕೇತಗಳಾಗಿವೆ. ಆದರೆ, ಮಠ-ಮಾನ್ಯಗಳು ಇವುಗಳನ್ನು ಅಪಾಯಕಾರಿ ಪಟ್ಟಿಗೆ ಸೇರಿಸಿವೆ ಎಂದು ಹಿರಿಯ ಸಾಹಿತಿ ಹಾಗೂ ಚಿಂತಕ ಡಾ.ಪಿ.ವಿ.ನಾರಾಯಣ ಬೇಸರ ವ್ಯಕ್ತಪಡಿಸಿದ್ದಾರೆ.

ರವಿವಾರ ನಗರದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಆಯೋಜಿಸಿದ್ದ ಆಶಾ ರಘು ರಚಿಸಿರುವ 'ಆವರ್ತ' ಕಾದಂಬರಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಅರಿಷಡ್ವರ್ಗಗಳು ಮನುಷ್ಯನ ವಿನಸ್ತ್ರದ ಬದುಕಿನ ಚಲನಶೀಲತೆ ಹಾಗೂ ಅಭಿವೃದ್ಧಿಗೆ ಸ್ಫೂರ್ತಿ ಎಂದು ತಿಳಿಸಿದರು.

ಅನ್ಯಾಯದ ವಿರುದ್ಧ ಕೋಪಗೊಳ್ಳುವುದು, ಪ್ರಕೃತಿಯ ಸೊಬಗನ್ನು ನೋಡಿ ಮೋಹಗೊಳ್ಳುವುದು, ಕಾಮದ ಮೂಲಕ ಜೀವ ಸಂಕುಲದ ವೃದ್ಧಿ ಇವುಗಳೆಲ್ಲವೂ ನಿಸರ್ಗದ ಸಹಜವಾದ ಕ್ರಿಯೆ. ಇವುಗಳನ್ನು ನಿರಾಕರಿಸುವಂತಹ ಆಧ್ಯಾತ್ಮಿಕವಾದ ಬದುಕು ಅರ್ಥವಿಲ್ಲದ್ದೆಂದು ಪಿ.ವಿ.ನಾರಾಯಣ ಅಭಿಪ್ರಾಯಿಸಿದರು.

ಆಶಾರಘು ಬರೆದಿರುವ 'ಆವರ್ತ' ಕಾದಂಬರಿಯಲ್ಲಿ 150 ಪಾತ್ರಗಳು ಬರುತ್ತವೆ. ಇವೆಲ್ಲ ಪಾತ್ರಗಳಲ್ಲಿ ಮನುಷ್ಯನ ತೊಳಲಾಟಗಳು ಕಾಮ, ಮೋಹ, ಮದ, ಮತ್ಸರ, ಕ್ರೋಧಗಳಾಗಿ ಬಿಂಬಿತವಾಗುವುದನ್ನು ತಮ್ಮ ಕೃತಿಯಲ್ಲಿ ಸೃಜನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಮನುಷ್ಯ ಸಹಜ ಬದುಕು, ಚಿಂತನೆಗಳ ಪ್ರತಿರೂಪವಾಗಿ ಆವರ್ತ ಕಾದಂಬರಿ ಹೊರಹೊಮ್ಮಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಗತೀಕರಣದ ಹಿನ್ನೆಲೆಯಲ್ಲಿ ಮಹಿಳೆಯನ್ನು ಮಾರುಕಟ್ಟೆಯ ವಸ್ತುವಾಗಿ ಪ್ರದರ್ಶಿಸಲಾಗುತ್ತಿದೆ. ಈ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಪುರುಷ ಎಂದಿಗೂ ಮಹಿಳೆಗೆ ಸಮಾನವಾದ ಅವಕಾಶವನ್ನು ಸೃಷ್ಟಿಸಲಾರ. ಹಾಗಾಗಿ ಆಶಾರಘುರವರು ತಮ್ಮ ಮುಂದಿನ ಕಾದಂಬರಿಗಳಲ್ಲಿ ಮಹಿಳಾ ಕೇಂದ್ರಿತ ಪಾತ್ರಗಳನ್ನು ಸೃಷ್ಟಿಸಿ, ಮಹಿಳೆಯರ ತುಮುಲಗಳನ್ನು ಸಶಕ್ತವಾಗಿ ಅಭಿವ್ಯಕ್ತಿಸಲಿ ಎಂದು ಅವರು ಆಶಿಸಿದರು.

ಕೃತಿಕಾರ್ತಿ ಆಶಾರಘು ಮಾತನಾಡಿ, ಆವರ್ತ ಕಾದಂಬರಿಯಲ್ಲಿ ಬರುವ 150 ಪಾತ್ರಗಳು ಐದು ವರ್ಷಗಳ ಕಾಲ ನನ್ನೊಳಗೆ ಒಡನಾಡಿಗಳಾಗಿ ಜೀವಿಸಿದ್ದವು. ಈಗ ಆ ಪಾತ್ರಗಳ ವೈಶಿಷ್ಟಗಳನ್ನು ಕಾದಂಬರಿಗಳ ಮೂಲಕ ಸಾರ್ವಜನಿಕರಿಗೆ ತೆರೆದಿಟ್ಟಿದ್ದೇನೆ. ಓದುಗರ ಜೊತೆ ಈ ಪಾತ್ರಗಳು ಹೇಗೆ ಸಂವಾದಿಸುತ್ತವೆ ಎಂಬುದರ ನಿರೀಕ್ಷೆಯಲ್ಲಿದ್ದೇನೆಂದು ತಿಳಿಸಿದರು.

ಆವರ್ತ ಕಾದಂಬರಿಯಲ್ಲಿ ಮಹಿಳೆಯರ ಒಳ ತೋಟಗಳಿಗೆ ಪುರುಷ ಹೇಗೆ ಪ್ರತಿಕ್ರಿಯಿಸುತ್ತಾನೆ, ಅವನ ದೃಷ್ಟಿಕೋನವೇನು ಎಂಬುದರ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸಲು ಪ್ರಯತ್ನಿಸಿದ್ದೇನೆ. ಲೌಕಿಕ ಬದುಕಿನಲ್ಲಿಯೆ ಆಧ್ಯಾತ್ಮಿಕತೆಯನ್ನು ಕಂಡುಕೊಳ್ಳಲು ಸಾಧ್ಯವೆಂಬುದು ಈ ಕೃತಿಯ ಒಟ್ಟು ಸಾರಾಂಶವೆಂದು ಅವರು ತಿಳಿಸಿದರು.

ಹಿರಿಯ ಸಾಹಿತಿ ಸಾ.ಶಿ.ಮರುಳಯ್ಯ ಮಾತನಾಡಿ, ಇದ್ದದ್ದನ್ನು ಇದ್ದಹಾಗೆ ಹೇಳದೆ, ಸಾಧ್ಯತೆಗಳನ್ನು ಹುಡುಕುವುದೇ ನಿಜವಾದ ಸಾಹಿತ್ಯದ ಸಾರ. ಹಾಗಾಗಿ ಆಶಾರಘುರವರು ಆವರ್ತ ಕಾದಂಬರಿಯ ಮೂಲಕ ಹೊಸ ಸಾಧ್ಯತೆಗಳನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆಂದು ಅಭಿನಂದಿಸಿದರು.

ದೇಶದ ಸಾಹಿತ್ಯ, ಸಂಸ್ಕೃತಿ ಅತ್ಯಂತ ಶ್ರೀಮಂತ ಹಾಗೂ ಮಹತ್ವದಾಗಿದೆ. ಇದು ವಿಶ್ವಾದ್ಯಂತ ಹರಡಬೇಕಾಗಿರುವುದರಿಂದ ಬೇರೆ ದೇಶಗಳ ಭಾಷೆಗಳಿಗೆ ಅನುವಾದಗೊಳ್ಳಬೇಕು. ಇದರ ಜೊತೆಗೆ ಬೇರೆ ದೇಶಗಳ ಸಂಸ್ಕೃತಿ ಹಾಗೂ ಸಾಹಿತ್ಯವು ಸಹ ದೇಶಕ್ಕೆ ಮುಕ್ತವಾಗಿ ಹರಿದುಬರಬೇಕಾಗಿದೆ. ಇದಕ್ಕಾಗಿ ವಿವಿಧ ದೇಶಗಳ ಸಾಹಿತ್ಯ ವಿದ್ವಾಂಸರು ಅನುವಾದ ಪ್ರಕ್ರಿಯೆ ತೊಡಗಿಕೊಳ್ಳುವಂತಾಗಲಿ ಎಂದು ಆಶಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಇತ್ತೀಚೆಗೆ ನಿಧನರಾದ ಸಾಹಿತಿ ಯು.ಆರ್.ಅನಂತಮೂರ್ತಿರವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ

3 ವರ್ಣಗಳ ಪ್ರವಾಸೋದ್ಯಮ ಪಾಸ್‌ಪೋರ್ಟ್ ಬಿಡುಗಡೆ

> **ಆನ್‌ಲೈನ್ ಬುಕ್ಕಿಂಗ್**
>
> ಪ್ರವಾಸೋದ್ಯಮ ಪಾಸ್‌ಪೋರ್ಟ್‌ನ್ನು [illegible] ಆನ್‌ಲೈನ್ ಬುಕ್ಕಿಂಗ್ ಮೂಲಕವೂ ಪಡೆಯಬಹುದು. ಇದರಿಂದ ಎಲ್ಲೆಡೆ [illegible] ಟಿಕೆಟ್ ಪಡೆಯುವುದು ತಪ್ಪಲಿದೆ.
>
> ★ [illegible] ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ.

ಮೈಸೂರು, ಆ.31: ಜಗತ್ಪ್ರಸಿದ್ಧ ಪ್ರವಾಸಿಗರು ಹಾಗೂ [illegible] ಮೈಸೂರು ದಸರಾ ಮಹೋತ್ಸವ [illegible]

ಅದರಂತೆ ಪ್ರವಾಸಿಗರ ಅನುಕೂಲಕ್ಕೆ ಪ್ರವಾಸೋದ್ಯಮ ಪಾಸ್‌ಪೋರ್ಟ್ [illegible]

ಪ್ರವಾಸಿಗರು ತಮಗೆ ಇಷ್ಟವಾದ ಪ್ರವಾಸಿ ತಾಣಗಳಿಗೆ [illegible] ಪಾಸ್‌ಪೋರ್ಟ್‌ಗಳ ವ್ಯವಸ್ಥೆ ಮಾಡಲಾಗಿದೆ. ಹಸಿರು ಬಣ್ಣದ ಪಾಸ್‌ಪೋರ್ಟ್‌ನಲ್ಲಿ ಮೃಗಾಲಯ ಹಾಗೂ ಅರಮನೆ ವೀಕ್ಷಿಸಬಹುದಾಗಿದ್ದು, ಸ್ವದೇಶಿ ವಯಸ್ಕರಿಗೆ 80 ರೂ., ಮಕ್ಕಳಿಗೆ 40ರೂ. ವಿದೇಶಿಯರಿಗೆ 220ರೂ. ಹಾಗೂ ವಿದೇಶಿ ಮಕ್ಕಳಿಗೆ 110 ರೂ. ದರ ನಿಗದಿಪಡಿಸಲಾಗಿದೆ.

ಹಳದಿ ಬಣ್ಣದ ಪಾಸ್‌ಪೋರ್ಟ್‌ನಿಂದ ಮೃಗಾಲಯ, ಅರಮನೆ, ಕಾರಂಜಿಕೆರೆ ಹಾಗೂ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಬಹುದಾಗಿದ್ದು, ವಯಸ್ಕರಿಗೆ 120, ಮಕ್ಕಳಿಗೆ 75, ವಿದೇಶಿಯರಿಗೆ 260 ಹಾಗೂ ಮಕ್ಕಳಿಗೆ 150 ರೂ. ನಿಗದಿಪಡಿಸಲಾಗಿದೆ. ನೀಲಿ ಬಣ್ಣದ ಪಾಸ್‌ಪೋರ್ಟ್‌ನಿಂದ ಮೃಗಾಲಯ, ಅರಮನೆ, ಕಾರಂಜಿಕೆರೆ, ಚಾಮುಂಡಿಬೆಟ್ಟ, ಕೃಷ್ಣರಾಜಸಾಗರ(ಕೆಆರ್‌ಎಸ್) ಹಾಗೂ ರಂಗನತಿಟ್ಟು ಪಕ್ಷಿಧಾಮ ವೀಕ್ಷಿಸಬಹುದಾಗಿದ್ದು, ವಯಸ್ಕರಿಗೆ 160, ಮಕ್ಕಳಿಗೆ 100, ವಿದೇಶಿಯರಿಗೆ 510 ಹಾಗೂ ಮಕ್ಕಳಿಗೆ 170 ರೂ. ದರ ನಿಗದಿಪಡಿಸಲಾಗಿದೆ.

ಈ ಸಂದರ್ಭದಲ್ಲಿ ಶಾಸಕ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಉಪಾಧ್ಯಕ್ಷ ಎಲ್.ಮಾದಪ್ಪ, ಜಿಲ್ಲಾಧಿಕಾರಿ ಸಿ.ಶಿಖಾ, ಅಪರ ಜಿಲ್ಲಾಧಿಕಾರಿ ಎಂ.ಎಸ್.ಅರ್ಚನಾ, ಮುಡಾ ಆಯುಕ್ತ ಪಿ.ಎಸ್.ಕಾಂತರಾಜು, ನಗರಪಾಲಿಕೆ ಆಯುಕ್ತ ಪಿ.ಜಿ.ರಮೇಶ್, ರಾಜ್ಯ ಒಣ ಭೂಮಿ ಮಂಡಳಿ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್, ನೆಹರು ಯುವ ಕೇಂದ್ರದ ಅಧಿಕಾರಿ ಎಂ.ಎನ್.ನಟರಾಜು, ಅರಮನೆ ಮಂಡಳಿ ನಿರ್ದೇಶಕಿ ಗಾಯತ್ರಿ ಹಾಗೂ ಉಪ ನಿರ್ದೇಶಕ ಸುಬ್ರಹ್ಮಣ್ಯ ಮುಂತಾದವರು [illegible]

ಭಾರ ಹೊತ್ತು ಹೆಜ್ಜೆ ಹಾಕಿದ ಅರ್ಜುನ

ಮೈಸೂರು, ಆ.31: ನಾಡಹಬ್ಬ ದಸರಾ ಮಹೋತ್ಸವದ ಕೇಂದ್ರ ಬಿಂದು ಗಜಪಡೆ ನಾಯಕ ಅರ್ಜುನ ರವಿವಾರ ಬೆಳಗ್ಗೆ ಸುಮಾರು ಮುನ್ನೂರು ಕೆ.ಜಿ.ತೂಕದ ಮರಳು ಮೂಟೆ ಹೊತ್ತು ಜಂಬೂ ಸವಾರಿ ಮಾರ್ಗದಲ್ಲಿ ರಾಜ ಗಾಂಭೀರ್ಯದ ಹೆಜ್ಜೆ ಹಾಕಿ ಎಲ್ಲರ ಗಮನ ಸೆಳೆದನು.

ಭಾರ ಹೊತ್ತು ಅರ್ಜುನ ಮುಂದೆ ಸಾಗಿದರೆ, ಆತನ ಹಿಂದೆ ಬಲರಾಮ, ಅಭಿಮನ್ಯು, ಗಜೇಂದ್ರ, ಗೌರಿ ಹಾಗೂ ವರಲಕ್ಷ್ಮಿ ಆನೆಗಳು ಸಾಲಾಗಿ ಹೆಜ್ಜೆ ಹಾಕಿದವು. ನಿತ್ಯ ಬೆಳಗ್ಗೆ ಹಾಗೂ ಸಂಜೆ ಯಾವುದೇ ಭಾರ ಹೊರದೆ ತಾಲೀಮು ನಡೆಸುತ್ತಿದ್ದ ಗಜಪಡೆ, ಇಂದಿನಿಂದ ಬೆಳಗಿನ ತಾಲೀಮಿನಲ್ಲಿ ಭಾರ ಹೊರಲಿವೆ.

750 ಕೆ.ಜಿ.ತೂಕದ ಚಿನ್ನದ ಅಂಬಾರಿ ಹೊರಲಿರುವ ಅರ್ಜುನನಿಗೆ ಭಾರ ಹೊರುವ ತಾಲೀಮು ಅತೀ ಮುಖ್ಯ. ಅರ್ಜುನ 300 ಕೆ.ಜಿ. ಮರಳು ಮೂಟೆ ಹೊತ್ತು ಪೈರೇ ವೃತ್ತದವರೆಗೆ ಸಾಗಿದ್ದು, ಸೋಮವಾರ ಬಲರಾಮ ಮೂಟೆ ಹೊರುವ ಸಾಧ್ಯತೆ ಇದೆ.

Printed, Published and Owned by A.S.Puthige on behalf of The Community Media Trust,Hameed Shah Compound,Main Road Cubbonpet, Bangalore-02 Tel:080-22102676/78, Fax 22102677 e-mail bengaluru@vbnewsonline.com, Printed at DPD, No 11/2 Honey House, Queens Road, Bangalore-52. Posted daily at MBC Bangalore GPO

ಡಾ.ಎಸ್.ಕೆ.ಕರೀಂಖಾನ್ ಹೆಸರಿನಲ್ಲಿ ಪ್ರಶಸ್ತಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಆ.31: ಜಾನಪದ ಜಂಗಮ, ಸ್ವಾತಂತ್ರ್ಯ ಹೋರಾಟಗಾರ ಡಾ.ಎಸ್.ಕೆ.ಕರೀಂಖಾನ್ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕು. ಈ ದಿಸೆಯಲ್ಲಿ ಅವರ ಹೆಸರಿನ ಪ್ರಶಸ್ತಿಯನ್ನು ಸ್ಥಾಪಿಸುವ ಕುರಿತು ಸರಕಾರದ ಮಟ್ಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರವಿವಾರ ಇಂದಿರಾನಗರದ 100 ಅಡಿ ರಸ್ತೆಗೆ 'ಡಾ.ಎಸ್.ಕೆ.ಕರೀಂಖಾನ್ ರಸ್ತೆ' ಎಂದು ಮರು ನಾಮಕರಣ ಮಾಡಿದ ಬಳಿಕ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ಕರೀಂಖಾನ್ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪನೆ ಕುರಿತು ಚರ್ಚಿಸಿ, ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಜನಪದ, ಸಾಹಿತ್ಯವನ್ನು ಪ್ರೀತಿಸುತ್ತಿದ್ದ ಕರೀಂಖಾನ್ ಓರ್ವ ಜಾತ್ಯತೀತ ವ್ಯಕ್ತಿ. ಇಂತಹ ಮೇರು ವ್ಯಕ್ತಿತ್ವದ ಮಹನೀಯರ ಹೆಸರನ್ನು ರಸ್ತೆಗೆ ನಾಮಕರಣ ಮಾಡುವ ವಿಚಾರದಲ್ಲಿ ಜಿಜ್ಞಾಸೆ ಪ್ರಾರಂಭವಾದದ್ದೇ ತಪ್ಪು. 2006ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ರಸ್ತೆಗೆ ನಾಮಕರಣ ಮಾಡಲು ತೀರ್ಮಾನಿಸಲಾಗಿತ್ತು. ಆದರೆ, ಎಂಟು ವರ್ಷಗಳಿಂದ ನಿರ್ಣಯ ಕಾರ್ಯರೂಪಕ್ಕೆ ಬರದೆ ಇದ್ದದ್ದು ವಿಷಾದನೀಯ ಎಂದು ಅವರು ಹೇಳಿದರು.

ಇಂದಿರಾನಗರದ ರಸ್ತೆಗೆ ಕರೀಂಖಾನ್ ಹೆಸರನ್ನು ನಾಮಕರಣ ಮಾಡುವ ಸೌಭಾಗ್ಯ ನನ್ನ ಪಾಲಿಗೆ ಲಭ್ಯವಾಗಿದ್ದು ಸಂತಸದ ವಿಷಯ. ಸರಳ ಜೀವನ ನಡೆಸುವ ಮೂಲಕ ಕರೀಂಖಾನ್ ಎಲ್ಲರಿಗೂ ಆದರ್ಶ ವ್ಯಕ್ತಿಯಾಗಿದ್ದರು. ಇಸ್ಲಾಮ್ ಧರ್ಮದ ಅನುಯಾಯಿಯಾಗಿದ್ದೂ ಹಿಂದೂ ಧರ್ಮದ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದರು ಎಂದು ಅವರು ಹೇಳಿದರು.

ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ಕರೀಂಖಾನ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದರು. ಕನ್ನಡ ನಾಡಿನ ಏಕೀಕರಣ ಚಳವಳಿಯಲ್ಲೂ ಸಕ್ರಿಯರಾಗಿದ್ದರು. ಜಾನಪದ, ಕನ್ನಡ ಚಲನಚಿತ್ರ, ಸಾಹಿತ್ಯ, ನಾಟಕ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ತಮ್ಮ ಛಾಪನ್ನು ಮೂಡಿಸಿದ್ದರು. ಇಂತಹವರನ್ನು ಗೌರವಿಸಿದರೆ, ಕನ್ನಡಿಗರಾದ ನಾವು ನಮ್ಮನ್ನೆ ಗೌರವಿಸಿಕೊಂಡಂತೆ ಎಂದು ಅವರು ಅಭಿಪ್ರಾಯಪಟ್ಟರು.

ಇಂದಿರಾನಗರದ 100 ಅಡಿ ರಸ್ತೆಗೆ ಮರು ನಾಮಕರಣ

ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಮಾತನಾಡಿ, ಕನ್ನಡ ಒಕ್ಕೂಟದ ಆಶ್ರಯದಲ್ಲಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ್‌ಶೆಟ್ಟಿ ಬಣ), ದಲಿತ ಸಂಘರ್ಷ ಸಮಿತಿ ಸೇರಿದಂತೆ ಇನ್ನಿತರ ಸಂಘ ಸಂಸ್ಥೆಗಳ ಹಮ್ಮಿಕೊಂಡ ಹೋರಾಟದಿಂದ ಎಚ್ಚೆತ್ತುಕೊಂಡ ಬಿಬಿಎಂಪಿ, ಇಂದು ಇಂದಿರಾನಗರದ ರಸ್ತೆಗೆ ಡಾ.ಎಸ್.ಕೆ.ಕರೀಂಖಾನ್ ಹೆಸರನ್ನು ನಾಮಕರಣ ಮಾಡುತ್ತಿರುವುದು ನಮ್ಮ ಹೋರಾಟಕ್ಕೆ ಸಂದ ಜಯ ಎಂದರು.

ಡಾ.ಎಸ್.ಕೆ.ಕರೀಂಖಾನ್ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಲು ಸರಕಾರ ಕರೀಂಖಾನ್ ಹೆಸರಲ್ಲಿ 5 ಲಕ್ಷ ರೂ.ನಗದು ಬಹುಮಾನವನ್ನು ಒಳಗೊಂಡ ಪ್ರಶಸ್ತಿಯನ್ನು ಸ್ಥಾಪಿಸಬೇಕು ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರು.

ಸಿಎಂಗೆ ಬೆಂಬಲ: ಸಿದ್ದರಾಮಯ್ಯ ಪೂರ್ಣಾವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಆದರೆ, ಇತ್ತೀಚೆಗೆ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಯತ್ನಗಳು ನಡೆಯುತ್ತಿರುವುದು ಕಂಡು ಬಂದಿದೆ. ಒಂದು ವೇಳೆ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಕೆಲಸಕ್ಕೆ ಯಾರಾದರೂ ಮುಂದಾದರೆ ರಾಜ್ಯಾದ್ಯಂತ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸೌದಿ ಅರೇಬಿಯಾ ಶಿಕ್ಷಣ ಸಚಿವ ಡಾ.ಅಬ್ದುಲ್ಲಾ ಬಿನ್ ಸಾಲಿಹ್ ಒಬೇದ್ ಅವರನ್ನೂ ಭೇಟಿ ಮಾಡಿದ ಅರ್ಜುನ್ ಸಿಂಗ್ ಎರಡೂ ರಾಷ್ಟ್ರಗಳ ಶೈಕ್ಷಣಿಕ ಸಂಬಂಧ ವೃದ್ಧಿಸುವ ಕುರಿತು ಮಾತುಕತೆ ನಡೆಸಿದರು.

ರೈಲು ಮಾರ್ಗ ಬದಲಾವಣೆ

ಬೆಂಗಳೂರು ಸಿಟಿ-ಗೋರಖ್‌ಪುರ್ ಎಕ್ಸ್‌ಪ್ರೆಸ್ ರೈಲು (5091/ 5092) ಬರಬಂಕಿ, ಮಲ್‌ಹೌರ್, ದಿಲ್‌ಕುಶ್‌ಕಬಿನ್, ಲಖನೌ ಮಾರ್ಗದ ಬದಲಾಗಿ, ಬರಬಂಕಿ, ಮಲ್‌ಹೌರ್, ಬಾದ್‌ಶಾನಗರ ಹಾಗೂ ಲಖನೌ ಮೂಲಕ ಹಾಯ್ದು ಗೋರಖ್‌ಪುರ ಸೇರುತ್ತದೆ. ಈ ಸೇವೆ ಜೂ. 12ರಿಂದ ಆರಂಭವಾಗಲಿದೆ. ಮರಳಿ ಗೋರಕ್‌ಪುರದಿಂದ ಜೂ. 17 ಕ್ಕೆ ಪ್ರಾರಂಭವಾಗಲಿದೆ.

ಹೆಚ್ಚಿನ ಬೋಗಿ ಜೋಡಣೆ: ದಾದರ್-ಬೆಂಗಳೂರು ಸಿಟಿ-ದಾದರ್ ಎಕ್ಸ್‌ಪ್ರೆಸ್ (1017/ 1018) ಹಾಗೂ ದಾದರ್-ಮೈಸೂರು-ದಾದರ್ ಎಕ್ಸ್‌ಪ್ರೆಸ್ (1035-1036) ರೈಲುಗಳಿಗೆ ಜುಲೈ 1ರಿಂದ ಜಾರಿಗೆ ಬರುವಂತೆ ಒಂದು ತ್ರೀ ಟೈರ್ ಸೆಕೆಂಡ್ ಕ್ಲಾಸ್ ಸ್ಲೀಪರ್‌ಕೋಚ್ ಬೋಗಿ ಅಳವಡಿಸಲಾಗಿದೆ.

ಹೌರಾ-ಯಶವಂತಪುರ-ಹೌರಾ ಎಕ್ಸ್‌ಪ್ರೆಸ್ (8003-8004) ರೈಲಿಗೆ ಜುಲೈ 1 ರಿಂದ ಜಾರಿಗೆ ಬರುವಂತೆ ಒಂದು ತ್ರೀ ಟೈರ್ ಎಸಿ ಕೋಚ್ ಅಳವಡಿಸಲಾಗಿದೆ ಎಂದು ನೈರುತ್ಯ ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

ಜೂ.4: ಪಿಗ್ಮಿ ಸಂಗ್ರಹಕಾರರ ಸಭೆ

ಅಖಿಲ ಭಾರತ ಬ್ಯಾಂಕ್ ಠೇವಣಿ ಸಂಗ್ರಹಕಾರರ ಕಾರ್ಮಿಕರ ಒಕ್ಕೂಟ ಜೂ.4 ರಂದು ಭಾನುವಾರ ಬೆಂಗಳೂರಿನ ಕೆ.ಆರ್.ರಸ್ತೆಯಲ್ಲಿನ ಒಕ್ಕಲಿಗರ ಸಂಘದ ಬಿಐಟಿ ಕ್ಯಾಂಟೀನ್‌ನಲ್ಲಿ ಪಿಗ್ಮಿ ಸಂಗ್ರಹಕಾರರ ಸಭೆ ಏರ್ಪಡಿಸಿದೆ. ನ್ಯಾಯವಾದಿ ಶಾಂತಕುಮಾರ್ ಮಹಲೆ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಮಾಹಿತಿ ಒದಗಿಸಲಿದ್ದು, ಎಲ್ಲಾ ಬ್ಯಾಂಕಿನ ಠೇವಣಿ ಸಂಗ್ರಹಕಾರರು ಇದರಲ್ಲಿ ಪಾಲ್ಗೊಳ್ಳುವಂತೆ ಒಕ್ಕೂಟದ ಸಹಕಾರ್ಯದರ್ಶಿ ಎಂ.ಎನ್.ನರೇಂದ್ರ ಕೋರಿದ್ದಾರೆ.

ಚಿತ್ರಕಲಾ ಡಿಪ್ಲೋಮಾ

ಎಸ್ಸೆಸ್ಸೆಲ್ಸಿ ಪಾಸಾದ ಆಸಕ್ತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರಥಮ ವರ್ಷದ ಚಿತ್ರಕಲಾ ಫೌಂಡೇಷನ್ ತರಗತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಬಸವನಗುಡಿಯ ಗಾಂಧೀಬಜಾರ್‌ನಲ್ಲಿರುವ ಹಿರಿಯ 'ಕಲಾಮಂದಿರ ಕಲಾಶಾಲೆ' ಡಿಪ್ಲೋಮಾ ತರಗತಿಗಳನ್ನು ನಡೆಸುತ್ತದೆ. ಚಿತ್ರಕಲೆಯ ಎಲ್ಲ ಪ್ರಕಾರಗಳಲ್ಲೂ ತರಬೇತಿ ನೀಡುವ ಪೂರ್ಣಾವಧಿ ಚಿತ್ರಕಲಾ ಡಿಪ್ಲೋಮಾ ಇದಾಗಿದೆ. ವಿಳಾಸ: ಕಲಾಮಂದಿರ ಕಲಾಶಾಲೆ, ಡಾ. ಡಿ.ವಿ.ಜಿ. ರಸ್ತೆ ಗಾಂಧಿಬಜಾರ್, ಬಸವನಗುಡಿ, ಬೆಂಗಳೂರು - 560 004. ದೂರವಾಣಿ: 2660 6861, ಮೊಬೈಲ್: 99450 78746.

ಸ್ಟ್ರೈಕರ್ಸ್: ಬೈಚುಂಗ್ ಭುಟಿಯ, ರಹಿಮ್ ನಬಿ, ಅಲ್ ವಿನೋ ಡಿ ಕುನ್ಹಾ, ಮುರ್ತಾಕ್ ಅಹಮದ್, ಅಭಿಷೇಕ್ ಯಾದವ್, ಸುರಜಿತ್ ಬೋಸ್, ಅಬ್ದುಲ್ ಹಕೀಮ್, ಸುನಿಲ್ ಛೆಟ್ರಿ ಮತ್ತು ಜಿಜಿಯಾನೊ ಫೆರ್ನಾಂಡೀಸ್.

ಚೆಸ್: ಭಾರತಕ್ಕೆ ಮತ್ತೆ ಮಿಶ್ರಫಲ

ಟುರಿನ್: ಕೊನೇರು ಹಂಪಿ ನೇತೃತ್ವದ ಭಾರತದ ಮಹಿಳಾ ತಂಡ 37ನೇ ಚೆಸ್ ಒಲಿಂಪಿಯಾಡ್‌ನ 10ನೇ ಸುತ್ತಿನಲ್ಲಿ ಬಲ್ಗೇರಿಯಾ ವಿರುದ್ಧ 3-1 ರಿಂದ ಭರ್ಜರಿ ಜಯ ಸಾಧಿಸಿದೆ. ಆದರೆ ವಿಶ್ವನಾಥನ್ ಆನಂದ್ ಮುಂದಾಳತ್ವದ ಪುರುಷರ ತಂಡ ಹತ್ತನೇ ಸುತ್ತಿನಲ್ಲಿಯೂ ಕ್ಯೂಬಾ ವಿರುದ್ಧ 2-2 ರಿಂದ ಸಿಲಸ ಡ್ರಾಗೆ ತೃಪ್ತಿಪಟ್ಟುಕೊಂಡಿದೆ.

ಭಾರತದ ಮಹಿಳಾ ತಂಡ 19.5 ಅಂಕಗಳೊಂದಿಗೆ 6ನೇ ಸ್ಥಾನಕ್ಕೆ ಏರಿದೆ. ಪುರುಷರ ತಂಡ 24.5 ಅಂಕಗಳೊಂದಿಗೆ 12ನೇ ಸ್ಥಾನ ಅಲಂಕರಿಸಿದೆ.

ಭಾರತ ಮಹಿಳಾ ತಂಡ 9ನೇ ಸುತ್ತಿನಲ್ಲಿ ಕಜಕಿಸ್ತಾನ ವಿರುದ್ಧ 2-1 ರಿಂದ ಜಯ ದಾಖಲಿಸಿತ್ತು. ಆದರೆ ಪುರುಷರ ತಂಡ 2-2 ರಿಂದ ಉಜ್ಬೇಕಿಸ್ತಾನ ವಿರುದ್ಧ ಡ್ರಾ ಮಾಡಿಕೊಂಡಿತ್ತು.

ಟೂರ್ನಿಯಲ್ಲಿ ಸೋಲು ಕಾಣದ ಅರ್ಮೇನಿಯಾ ಪುರುಷರ ತಂಡ 29 ಅಂಕಗಳೊಂದಿಗೆ ಅಗ್ರಸ್ಥಾನ ಅಲಂಕರಿಸಿದೆ. ಉಕ್ರೇನಿನ ಮಹಿಳಾ ತಂಡ 23 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಕಪ್ಪು ಕಾಯಿಗಳೊಂದಿಗೆ ಆಡಿದ ಕೊನೇರು ಹಂಪಿ, ಮಂಗೋಲಿಯಾದ ಬಾತುಯಾಗ್ ಮೊಂಗೊಂಟುಲ್ ವಿರುದ್ಧ ಜಯ ದಾಖಲಿಸಿದರು. ಹೋದ್ದರಲ್ಲಿ ಹರಿಕಾ, ದುಲಾಮಸುರೆನ್ ಯಾಂಜಿಂದುಲಾಮ್ ವಿರುದ್ಧ ಹಾಗೂ ಸ್ವಾತಿ ಘಾಟೆ, ಜೊರಿಜ್ ಬಯಾರ ವಿರುದ್ಧ ಜಯ ಸಾಧಿಸಿದ್ದಾರೆ.

ಗುರುವಾರ ವಿಶ್ರಾಂತಿ ದಿನವಾಗಿದ್ದು, 11ನೇ ಸುತ್ತಿನ ಪಂದ್ಯಗಳು ಶುಕ್ರವಾರ ನಡೆಯಲಿವೆ.

ಆಯ್ಕೆಗಾರರ ಅವಧಿ ವಿಸ್ತರಣೆ

ಮುಂಬೈ: ಭಾರತೀಯ ಕ್ರಿಕೆಟ್ ಮಂಡಳಿಯ ರಾಷ್ಟ್ರೀಯ ಆಯ್ಕೆಗಾರರು ಹಾಗೂ ಇತರೆ ಪದಾಧಿಕಾರಿಗಳ ಸೇವಾವಧಿಯನ್ನು ಮುಂಬರುವ ಸೆಪ್ಟೆಂಬರ್‌ನಿಂದ ಅನ್ವಯವಾಗುವಂತೆ ಎರಡು ವರ್ಷಗಳಿಗೆ ವಿಸ್ತರಿಸಲಾಗಿದೆ.

ಇಲ್ಲಿಯತನಕ ಇವರ ಸೇವಾವಧಿ ಒಂದು ವರ್ಷವಿತ್ತು. ಬಿಸಿಸಿಐಯ ವಾರ್ಷಿಕ ಚುನಾವಣೆ ಸೆಪ್ಟೆಂಬರ್‌ನಲ್ಲಿ ನಡೆಯಲಿರುವುದರಿಂದ, ಪದಾಧಿಕಾರಿಗಳು ಅಥವಾ ಆಯ್ಕೆಗಾರರ ಸೇವಾವಧಿಯನ್ನು ಅಗತ್ಯ ಬಿದ್ದಲ್ಲಿ, ಎರಡು ವರ್ಷದ ಅವಧಿಗೆ ವಿಸ್ತರಿಸಲು ಇದರಿಂದ ಅನುಕೂಲವಾಗಲಿದೆ.

ಮುಂಬೈಯಲ್ಲಿ ಗುರುವಾರ ಏರ್ಪಡಿಸಲಾಗಿದ್ದ ವಿಶೇಷ ಮಹಾ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.

ಎಲೈಟ್ ಪುನರ್ ರಚನೆಗೆ ಬಿಸಿಸಿಐ ನಿರ್ಧಾರ

ಮುಂಬೈ: ಭಾರತದ ಕಳಪೆ ಅಂಪೈರ್‌ಗಳ ಬಗ್ಗೆ ಐಸಿಸಿ ಟೀಕೆಯಿಂದ ಮುಜುಗರಕ್ಕೆ ಸಿಲುಕಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ದೇಶಿ ಅಂಪೈರ್‌ಗಳ ಎಲೈಟ್ ಸಮಿತಿಯನ್ನು ಪುನರ್ ರಚಿಸಲು ನಿರ್ಧರಿಸಿದೆ

ಈ ಸಂಬಧ ಮಂಡಳಿ ಎಸ್. ವೆಂಕಟರಾಘವನ್, ಎನ್.ಕೆ. ಜನ್ನಾಲಿ ಮತ್ತು ವಿ.ಕೆ. ರಾಮಸ್ವಾಮಿ ಅವರನ್ನು ಒಳಗೊಂಡ ಮೂರು ಸದಸ್ಯರ ವಿಶೇಷ ಸಮಿತಿಯನ್ನು ರಚಿಸಿದೆ.

ಈ ಸಮಿತಿಯು ಹಾಲಿ 8 ಅಂಪೈರ್‌ಗಳಿರುವ ಎಲೈಟ್ ಸಮಿತಿಯಿಂದ 6 ಮಂದಿಯನ್ನು ಪರಿಷ್ಕೃತ ಸಮಿತಿಗೆ ಆಯ್ಕೆ ಮಾಡಿ, ಏಷ್ಯಾ ಕ್ರಿಕೆಟ್ ಕೌನ್ಸಿಲ್ ಹಾಗೂ ಐಸಿಸಿಗೆ ಶಿಫಾರಸು ಮಾಡಲಿದೆ. ದೇಶಿ ಪಂದ್ಯಗಳಿಗೆ 40 ಮ್ಯಾಚ್ ರೆಫ್ರಿಗಳ ಅಖಿಲ ಭಾರತ ಸಮಿತಿ ರಚಿಸಲು ನಿರ್ಧರಿಸಲಾಗಿದೆ

ಚಾಪೆಲ್ ಸೋಲಿನ ರೂವಾರಿ: ದಾಲ್ಮಿಯ

ಕೋಲ್ಕತ್ತ ಭಾರತ ಕ್ರಿಕೆಟ್ ತಂಡದ ಕೋಚ್ ಗ್ರೆಗ್ ಚಾಪೆಲ್ ವಿರುದ್ಧ ಜಗಮೋಹನ್ ದಾಲ್ಮಿಯಾ ಕಟುವಾಗಿ ಟೀಕಾಪ್ರಹಾರ ಮಾಡಿದ್ದಾರೆ. ಅವರ ಪ್ರಯೋಗಗಳಿಂದ ಭಾರತ ತಂಡಕ್ಕೆ ಒಳಿತಿಗಿಂತ ಹೆಚ್ಚು ಕೆಡುಕಾಗಿದೆ ಎಂದಿದ್ದಾರೆ

ಅವರ ಒಂದು ವರ್ಷದ ಅವಧಿ ಭಾರತಕ್ಕೆ ಹೆಚ್ಚು ಕೆಡುಕಾಗಿದೆ. ವಿಂಡೀಸ್ ವಿರುದ್ಧ ತಂಡ 4 ಪಂದ್ಯ ಸೋಲುವುದಕ್ಕೆ ಬೇರೆ ವಿವರಣೆ ಕೊಡಲು ಸಾಧ್ಯವಿಲ್ಲ. ಆಟಗಾರರು ನಿರ್ದಿಷ್ಟ ದಿಕ್ಕಿನಲ್ಲಿ ಸ್ಥಿರಗೊಳ್ಳಲು ಬಿಡುತ್ತಿಲ್ಲ. ಯಾರು ಆರಂಭಿಕರು ಇರುವಾಗ ಹಿಂದೆ ಯಾವತ್ತೂ ಇನಿಂಗ್ಸ್ ಆರಂಭ ಮಾಡದವರು ಆರಂಭಿಕರಾದರು ಎಂದು ದಾಲ್ಮಿಯಾ ಟೀಕಿಸಿದರು.

ಚಾಪೆಲ್‌ರನ್ನು ಆಯ್ಕೆಮಾಡಿದ ಬಿಸಿಸಿಐ ಸಮಿತಿಯಲ್ಲಿ ದಾಲ್ಮಿಯ ಸಹ ಇದ್ದರು

ಉಷಾಕಿರಣ 2-06-2006

'ತಾಜಮಹಲ್' ಕೊಟ್ಟರೂ ತನಗೆ ಬೇಡವೆಂದ ಕರೀಂಖಾನ್

ಸ್ವಂತ ಮನೆಯಲ್ಲಿ ಆರೆ ತಾಸಾದರೂ ಕಾಲ ಕಳೆಯುವ ಕನಸು. ನಾಡಿನಲ್ಲಿ ಅತ್ಯುತ್ತಮ ಪುಸ್ತಕ ಭಂಡಾರ ತೆರೆಯುವ ಆಸೆ ನನಸಾಗದೆ ಕಮರಿ ಹೋಗುತ್ತಿದೆ ಎಂದು ಗುನುಗಿದವರು 'ಕನ್ನಡ ಜಾನಪದ ಕಣ್ಮಣಿ' ಡಾ.ಎಸ್.ಕೆ.ಕರೀಂಖಾನ್.

ಕಳೆದ ಹದಿನೈದು ದಿನಗಳಿಂದ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕರೀಂಖಾನ್ ಅವರು ಅಂತರಂಗದ ನೋವನ್ನು 'ಉಷಾ ಕಿರಣ'ದೊಂದಿಗೆ ಹಂಚಿಕೊಂಡರು.

ಸ್ವಂತ ಮನೆಯ ಆಸೆ ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರದ ಜಾಗ ಪಡೆದೆ. ಆದರೆ, ಮನೆ ಮಾತ್ರ ಮರೀಚಿಕೆಯಾಯಿತು. ಇನ್ನು ನನಗೆ 'ತಾಜ್ ಮಹಲ್' ತಂದು ಕೊಟ್ಟರೂ ಬೇಕಾಗಿಲ್ಲ. ಹಲ್ಲಿದ್ದಾಗ ಕಡಲೆ ತಿನ್ನಬೇಕೇ ವಿನಹ, ಹಲ್ಲು ಉದುರಿ ಹೋದ ಮೇಲೆ ಕಡಲೆ ಸಿಕ್ಕರೆ ಏನು ಪ್ರಯೋಜನಾ ಎಂದು [illegible]

[illegible]. ದೇಶ ಪ್ರೇಮ ಮತ್ತು ಐಕ್ಯತೆ ಸಾರುವ ಬೃಹತ್ ಪುಸ್ತಕ ಭಂಡಾರ ತೆರೆಯುವ ಮಹತ್ತರ ಆಸೆಯಿತ್ತು. ಪುಸ್ತಕ ಭಂಡಾರದ ಮೂಲಕ ಹಿಂದೂ, ಮುಸಲ್ಮಾನ ಮತ್ತು ಕ್ರೈಸ್ತರು ಒಬ್ಬರಿಗೊಬ್ಬರು ಅರಿತು ಪೂರಕ ಬದುಕು ನಡೆಸುಲು ಸಹಕಾರಿಯಾಗುವ ಸಾಹಿತ್ಯಗಳ ಸೃಷ್ಟಿಯ ಉದ್ದೇಶವಿತ್ತು. ಇಂದು ಅವೆಲ್ಲಾ ನನ್ನೊಟ್ಟಿಗೆ ಮಣ್ಣಾಗುತ್ತಿದೆ ಎಂದು ಮರುಗಿದರು.

ಆರ್ಥಿಕ ಮುಗ್ಗಟ್ಟಿನಿಂದ ಪುಸ್ತಕ ಭಂಡಾರ ತೆರೆಯಲಾಗಲಿಲ್ಲ. ಈ ಕುರಿತು ನಿರಾಶೆಯಿಂದ ಉಡುಪಿ ಸನ್ಮಿತ್ರ ಕೆ.ಹೈದರ್ ಅವರಿಗೆ ಪತ್ರ ಬರೆದಿದ್ದೆ. ಅವರು ನಿರಾಶರಾಗಬೇಡಿ ಕಾಲಕೂಡಿ ಬಂದೀತು ಎಂದು ಸಾಂತ್ವಾನ ಹೇಳಿದ್ದರು. ಕೊನೆಗೂ ಪುಸ್ತಕ ಭಂಡಾರ ತೆರೆಯುವ ಕಾಲ ಕೂಡಿಬರಲಿಲ್ಲ ಎಂದು ಕಣ್ಣೀರಾದರು.

ಇನ್ನು ಸಾಹಿತ್ಯ ರಚನೆ ಕೂಡದ ಮಾತು. ಮಾಜಿ ಮುಖ್ಯಮಂತ್ರಿ ವೀರಪ್ಪ ಮೋಯಿಲಿ, ದಿವಂಗತ ಡಾ.ಕೋಟಾ ಶಿವರಾಮ ಕಾರಂತ ಮತ್ತು ಅ.ನಾ.ಕೃಷ್ಣರಾಯರು ಉತ್ತಮ ಸಾಹಿತಿಗಳು ಎಂದ ಅವರು, ದೇಹದ ಮೇಲಿನ ಆಸೆ ಕಡಿಮೆಯಾಗುತ್ತಿದೆ. ವಯಸ್ಸು ಮನಸ್ಸಿನ ಮೇಲೆ ಪರಿಣಾಮ ಬೀರಿದ ಕಾರಣ ನೆನಪುಗಳು ಮಾಸುತ್ತಿದೆ ಎಂದರು. ಜೀವನದಲ್ಲಿ ಅನೇಕ ನೋವುಂಡಿದ್ದೇನೆ.

ಹಿತಶತ್ರುಗಳು ಬೆನ್ನಿಗೆ ಚೂರಿ ಹಾಕಿದ್ದಾರೆ. ಕೊನೆಗಾಲದಲ್ಲಿ ಅವರ ಹೆಸರು ಹೇಳಿ ನಾಲಿಗೆ ಹೊಲಸು ಮಾಡಿಕೊಳ್ಳಲು ಇಷ್ಟವಿಲ್ಲ. ಅವರಿಗೆ ದೇವರು ಒಳ್ಳೆಯದು ಮಾಡಲಿ ಎಂದು ಹರಸಿದರು.

ನನ್ನ ಹೆಸರನ್ನು ಬಳಸಿಕೊಂಡು ನನ್ನವರಾರು ಸರ್ಕಾರದ ಮುಂದೆ ಕೈಯೊಡ್ಡಲಿಲ್ಲ. ಆದರೂ, ಕೆಲವರು ಕರೀಂಖಾನ್ ಹೆಸರು ಬಳಸಿಕೊಂಡು ಅವರ ಕುಟುಂಬದವರು ಪ್ರತಿಫಲ ಪಡೆಯುವ ಹುನ್ನಾರ ನಡೆಸಿದ್ದಾರೆ ಎಂದು ಆರೋಪಿಸಿ, ಅವರಿಗೆ ನೋವು ನೀಡಿದರು.

ಕಳೆದ ಒಂದು ದಶಕದಿಂದ ಫಲಾಪೇಕ್ಷೆಯಿಲ್ಲದೆ ಸೇವೆ ಮಾಡಿದ ಅವರಿಗೆ ನಾನು ಋಣಿ ಎಂದ ಅವರು ಮಣ್ಣಿಂದ ತಯಾರಾದ ದೇಹ ಮಣ್ಣಾಗುವುದು ಆಶ್ಚರ್ಯವಲ್ಲ ಎಂದರು. ವಿರನಿತ ವೀಣಾ ನುಡಿ ಝೇಂಕಾರ ಎನ್ನುವ ಹಾಡಿನ ಮೂಲಕ ತಮ್ಮ ಮಾತಿಗೆ ವಿರಾಮ ಹಾಕಿದರು.

ಉಷಾಕಿರಣ 2-6-2006

[illegible] ಕಂಪನಿಯೇ ಧನಸಹಾಯ ನೀಡಲಿದೆ ಎಂದು ಎಚ್ಚಯು ಕುಲಪತಿ ಡಾ.ಕೆ.ಬಲವೀರರೆಡ್ಡಿ ಹೇಳಿದ್ದಾರೆ.

ಪಾಲಿಕೆ ಮತ್ತು ಇಸ್ಕಾನ್ ವತಿಯಿಂದ ಶ್ರೀನಿವಾಸ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಧ್ಯಾಹ್ನದ ಊಟ ವಿತರಣೆ ಕಾರ್ಯಕ್ರಮದಲ್ಲಿ ಊಟ ವಿತರಿಸುತ್ತಿರುವ ಆಯೋಜಕರು.

ರಾಜ್ಯಮಟ್ಟದ ನಾಟಕ ಸ್ಪರ್ಧೆ

ದಯಾನಂದ ಸಾಗರ್ ಸ್ಮರಣಾರ್ಥ ರಾಜ್ಯಮಟ್ಟದ ನಾಟಕ ಸ್ಪರ್ಧೆ ಜು. 13ರಿಂದ 27ರವರೆಗೆ ರವೀಂದ್ರ ಕಲಾಕ್ಷೇತ್ರ ಹಾಗೂ ಟೌನ್‌ಹಾಲ್‌ನಲ್ಲಿ ನಡೆಯುತ್ತದೆ.

ಏಕಪಾತ್ರಾಭಿನಯ, ರಂಗಗೀತೆ, ಜನಪದಗೀತೆ, ಚಿತ್ರಗೀತೆ, ಭರತನಾಟ್ಯ, ಜನಪದ ಹಾಗೂ ಚಲನಚಿತ್ರನೃತ್ಯ ಸ್ಪರ್ಧೆಯನ್ನೂ ನಡೆಸಲಾಗುತ್ತದೆ. ಪ್ರವೇಶ ಪತ್ರ ಸಲ್ಲಿಸಲು ಕೊನೆ ದಿನಾಂಕ ಜೂನ್ 15. ಸರಣಿಯ ಶ್ರೇಷ್ಠ ನಾಟಕ ದಯಾನಂದ ಸಾಗರ ಪ್ರಶಸ್ತಿ, ರು. 15,000 ಮೊತ್ತ, ನಿರ್ಣಾಯ ಪಾರಿತೋಷಕ ಒಳಗೊಂಡಿದೆ. ಅತ್ಯುತ್ತಮ ನಾಟಕ ಡಾ. ರಾಜ್‌ಕುಮಾರ್ ಪ್ರಶಸ್ತಿ, ರು. 10,000 ಮೊತ್ತ, ಪಾರಿತೋಷಕ, ಉತ್ತಮ ನಾಟಕ ನಟಭೈರವ ವಜ್ರಮುನಿ ಪ್ರಶಸ್ತಿ, ರು. 5,000 ಮೊತ್ತ, ಪಾರಿತೋಷಕ ಒಳಗೊಂಡಿದೆ.

ಜಿಲ್ಲೆಗಳಿಂದ ಬರುವ ತಂಡಗಳಿಗೆ ವಸತಿ, ಊಟದ ವ್ಯವಸ್ಥೆ ಮಾಡಲಾಗುವುದು. ಭಾಗವಹಿಸುವ ತಂಡಗಳು, ರಂಗಶ್ರೀ ಎಂಟರ್‌ಪ್ರೈಸಸ್, 15 'ಇ', ಬಿಎಂಟಿಸಿ ಬಸ್ ನಿಲ್ದಾಣ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು - 560 078. ಮೊಬೈಲ್: ರಂಗಶ್ರೀ ರಂಗಸ್ವಾಮಿ: 93412 51320, ನಾಗರಾಜ್: 98453 98006. ಶ್ರೀನಿವಾಸ್: 93425 90734.

ಸೌದಿಯೊಂದಿಗೆ ಶೈಕ್ಷಣಿಕ ಸಹಯೋಗಕ್ಕೆ ಕ್ರಮ

ಭಾರತ ಸೌದಿ ಅರೇಬಿಯಾ ದೇಶದೊಂದಿಗೆ ಸ್ನೇಹಪೂರ್ಣ ಸಂಬಂಧವನ್ನು ಕಾಯ್ದುಕೊಳ್ಳುತ್ತದೆ ಎನ್ನುವ

ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ ಪತ್ರವನ್ನು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಅರ್ಜುನ್‌ಸಿಂಗ್ ಸೌದಿ ರಾಜ ಅಬ್ದುಲ್ಲಾ ಬಿನ್ ಅಬ್ದುಲಾಜೀಜ್ ಅಲ್-ಸೌದ್ ಅವರಿಗೆ ಹಸ್ತಾಂತರಿಸಿದರು.

ನಂತರ ಅವರಿಬ್ಬರ ನಡುವೆ ಅತ್ಯಂತ ಸೌಹಾರ್ದಯುತ ಮಾತುಕತೆ ನಡೆದು ಅರ್ಜುನ್‌ಸಿಂಗ್ ಸೌದಿ ಅರೇಬಿಯಾ ದೇಶವನ್ನು ತಮ್ಮ ಎರಡನೇ ಮನೆ ಎಂದುಕೊಳ್ಳುವಂತೆ ಹೇಳಿದರು. ಭಾರತದೊಂದಿಗೆ ಶೈಕ್ಷಣಿಕ ಸಹಕಾರಕ್ಕೆ ತಮ್ಮ ಪೂರ್ಣ ಸಹಕಾರವಿದೆ ಎಂದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಭಾರತದ ಪೂರ್ಣ ಸಹಕಾರ ಸೌದಿ ಅರೇಬಿಯಾ ದೇಶಕ್ಕಿದೆ ಎಂದ ಸಚಿವ ಅರ್ಜುನ್‌ಸಿಂಗ್ ಸೌದಿ ಅರೇಬಿಯಾದಲ್ಲಿ ಐಸಿಟಿ ಸೆಂಟರ್ ಆಫ್ ಎಕ್ಸಲೆನ್ಸ್ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಲರ್ನಿಂಗ್ ಸ್ಥಾಪಿಸಲು ಸಹಕಾರ ನೀಡುವುದಾಗಿ ಹೇಳಿದರು.

ಭಾರತದಲ್ಲಿ ಜಾಗತಿಕ ಮಟ್ಟದ ಗ್ರಂಥಾಲಯ ಸ್ಥಾಪನೆಗೆ ಬದ್ಧರಾಗಿರುವುದಾಗಿ ಸೌದಿ ರಾಜ ಅಬ್ದುಲ್ಲಾ ಬಿನ್ ಅಬ್ದುಲಜೀಜ್ ಅಲ್-ಸೌದ್ ಹೇಳಿದರು. ಇದರಿಂದ ಎರಡೂ ರಾಷ್ಟ್ರಗಳ ನಡುವೆ ಸೌಹಾರ್ದ ಸಂಬಂಧ ವೃದ್ಧಿಸುವುದಾಗಿಯೂ ಹೇಳಿದರು. ಸೌದಿ ಅರೇಬಿಯಾ ಚೀನಾ ಮತ್ತು ಮಲೇಷಿಯಾಗಳಲ್ಲಿ ಸ್ಥಾಪಿಸಿರುವ ಗ್ರಂಥಾಲಯಗಳ ನಂತರ ಇದು ಮೂರನೆಯದು.

ಸೌದಿ ಅರೇಬಿಯಾ ಶಿಕ್ಷಣ ಸಚಿವ ಡಾ.ಅಬ್ದುಲ್ಲಾ ಬಿನ್ ಸಾಲಿಹ್ ಒಬೇದ್ ಅವರನ್ನೂ ಭೇಟಿ ಮಾಡಿದ ಅರ್ಜುನ್ ಸಿಂಗ್ ಎರಡೂ ರಾಷ್ಟ್ರಗಳ ಶೈಕ್ಷಣಿಕ ಸಂಬಂಧ ವೃದ್ಧಿಸುವ ಕುರಿತು ಮಾತುಕತೆ ನಡೆಸಿದರು.

ರೈಲು ಮಾರ್ಗ ಬದಲಾವಣೆ

ಬೆಂಗಳೂರು ಸಿಟಿ-ಗೋರಖ್‌ಪುರ್ ಎಕ್ಸ್‌ಪ್ರೆಸ್ ರೈಲು (5091/ 5092) ಬರಬಂಕಿ, ಮಲ್‌ಹೌರ್, ದಿಲ್‌ಕುಶ್‌ಕಬಿನ್, ಲಖನೌ ಮಾರ್ಗದ ಬದಲಾಗಿ, ಬರಬಂಕಿ, ಮಲ್‌ಹೌರ್, ಬಾದ್‌ಶಾನಗರ ಹಾಗೂ ಲಖನೌ ಮೂಲಕ ಹಾಯ್ದು ಗೋರಖ್‌ಪುರ ಸೇರುತ್ತದೆ. ಈ ಸೇವೆ ಜೂ. 12ರಿಂದ ಆರಂಭವಾಗಲಿದೆ. ಮರಳಿ ಗೋರಕ್‌ಪುರದಿಂದ ಜೂ. 17 ಕ್ಕೆ ಪ್ರಾರಂಭವಾಗಲಿದೆ.

ಹೆಚ್ಚಿನ ಬೋಗಿ ಜೋಡಣೆ: ದಾದರ್-ಬೆಂಗಳೂರು ಸಿಟಿ-ದಾದರ್ ಎಕ್ಸ್‌ಪ್ರೆಸ್ (1017/ 1018) ಹಾಗೂ ದಾದರ್-ಮೈಸೂರು-ದಾದರ್ ಎಕ್ಸ್‌ಪ್ರೆಸ್ (1035-1036) ರೈಲುಗಳಿಗೆ ಜುಲೈ 1 ರಿಂದ ಜಾರಿಗೆ ಬರುವಂತೆ ಒಂದು ತ್ರೀ ಟೈರ್ ಸೆಕೆಂಡ್ ಕ್ಲಾಸ್ ಸ್ಲೀಪರ್‌ಕೋಚ್ ಬೋಗಿ ಅಳವಡಿಸಲಾಗಿದೆ.

ಹೌರಾ-ಯಶವಂತಪುರ-ಹೌರಾ ಎಕ್ಸ್‌ಪ್ರೆಸ್ (8003-8004) ರೈಲಿಗೆ ಜುಲೈ 1 ರಿಂದ ಜಾರಿಗೆ ಬರುವಂತೆ ಒಂದು ತ್ರೀ ಟೈರ್ ಎಸಿ ಕೋಚ್ ಅಳವಡಿಸಲಾಗಿದೆ ಎಂದು ನೈರುತ್ಯ ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

ಜೂ.4: ಪಿಗ್ಮಿ ಸಂಗ್ರಹಕಾರರ ಸಭೆ

ಅಖಿಲ ಭಾರತ ಬ್ಯಾಂಕ್ ಠೇವಣಿ ಸಂಗ್ರಹಕಾರರ ಕಾರ್ಮಿಕರ ಒಕ್ಕೂಟ ಜೂ.4 ರಂದು ಭಾನುವಾರ ಬೆಂಗಳೂರಿನ ಕೆ.ಆರ್.ರಸ್ತೆಯಲ್ಲಿನ ಒಕ್ಕಲಿಗರ ಸಂಘದ ಬಿಐಟಿ ಕ್ಯಾಂಟೀನ್‌ನಲ್ಲಿ ಪಿಗ್ಮಿ ಸಂಗ್ರಹಕಾರರ ಸಭೆ ಏರ್ಪಡಿಸಿದೆ. ನ್ಯಾಯವಾದಿ ಶಾಂತಕುಮಾರ್ ಮಹಲೆ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಮಾಹಿತಿ ಒದಗಿಸಲಿದ್ದು, ಎಲ್ಲಾ ಬ್ಯಾಂಕಿನ ಠೇವಣಿ ಸಂಗ್ರಹಕಾರರು ಇದರಲ್ಲಿ ಪಾಲ್ಗೊಳ್ಳುವಂತೆ ಒಕ್ಕೂಟದ ಸಹಕಾರ್ಯದರ್ಶಿ ಎಂ.ಎಸ್.ನರೇಂದ್ರ ಕೋರಿದ್ದಾರೆ.

ಚಿತ್ರಕಲಾ ಡಿಪ್ಲೋಮಾ

ಎಸ್ಸೆಸ್ಸೆಲ್ಸಿ ಪಾಸಾದ ಆಸಕ್ತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರಥಮ ವರ್ಷದ ಚಿತ್ರಕಲಾ ಫೌಂಡೇಷನ್ ತರಗತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಬಸವನಗುಡಿಯ ಗಾಂಧೀಬಜಾರ್‌ನಲ್ಲಿರುವ ಹಿರಿಯ 'ಕಲಾಮಂದಿರ ಕಲಾಶಾಲೆ' ಡಿಪ್ಲೋಮಾ ತರಗತಿಗಳನ್ನು ನಡೆಸುತ್ತದೆ. ಚಿತ್ರಕಲೆಯ ಎಲ್ಲ ಪ್ರಕಾರಗಳಲ್ಲೂ ತರಬೇತಿ ನೀಡುವ ಪೂರ್ಣಾವಧಿ ಚಿತ್ರಕಲಾ ಡಿಪ್ಲೋಮಾ ಇದಾಗಿದೆ. ವಿಳಾಸ: ಕಲಾಮಂದಿರ ಕಲಾಶಾಲೆ, ಡಾ. ಡಿ.ವಿ.ಜಿ. ರಸ್ತೆ ಗಾಂಧಿಬಜಾರ್, ಬಸವನಗುಡಿ, ಬೆಂಗಳೂರು - 560 004. ದೂರವಾಣಿ: 2660 6861, ಮೊಬೈಲ್: 99450 78746.

ಉಷಾಕಿರಣ 2-06-2006

'ತಾಜಮಹಲ್' ಕೊಟ್ಟರೂ ತನಗೆ ಬೇಡವೆಂದ ಕರೀಂಖಾನ್

ಸ್ವಂತ ಮನೆಯಲ್ಲಿ ಆರೆ ತಾಸಾದರೂ ಕಾಲ ಕಳೆಯುವ ಕನಸು. [illegible] ಪುಸ್ತಕ ಭಂಡಾರ ತೆರೆಯುವ ಆಸೆ ನನಸಾಗದೆ ಕನಸಾಗಿ ಹೋಗುತ್ತಿದೆ ಎಂದು ಗುನುಗಿದವರು 'ಕನ್ನಡ ಜಾನಪದ ಕಣಜ' ಡಾ.ಎಸ್.ಕೆ.ಕರೀಂಖಾನ್.

ಕಳೆದ ಹದಿನೈದು ದಿನಗಳಿಂದ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕರೀಂಖಾನ್ ಅವರು ಅಂತರಂಗದ ನೋವನ್ನು 'ಉಷಾಕಿರಣ'ದೊಂದಿಗೆ ಹಂಚಿಕೊಂಡರು.

ಸ್ವಂತ ಮನೆಯ ಆಸೆ ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ [illegible] ಪಟ್ಟೆ. ಆದರೆ, ಮನೆ ಮಾತ್ರ ಮರೀಚಿಕೆಯಾಯಿತು. ಇನ್ನು ನನಗೆ 'ತಾಜ್ ಮಹಲ್' ತಂದು ಕೊಟ್ಟರೂ ಬೇಕಾಗಿಲ್ಲ. ಹಲ್ಲಿದ್ದಾಗ [illegible]. ಹಲ್ಲು ಉದುರಿ ಹೋದ ಮೇಲೆ [illegible] ಏನು ಪ್ರಯೋಜನ ಎಂದು [illegible].

[illegible], ದೇಶ ಪ್ರೇಮ ಮತ್ತು ಐಕ್ಯತೆ ಸಾರುವ ಬೃಹತ್ ಪುಸ್ತಕ ಭಂಡಾರ ತೆರೆಯುವ ಮಹತ್ತರ ಆಸೆಯಿತ್ತು. ಪುಸ್ತಕ ಭಂಡಾರದ ಮೂಲಕ ಹಿಂದೂ, ಮುಸಲ್ಮಾನ ಮತ್ತು ಕ್ರೈಸ್ತರು ಒಬ್ಬರಿಗೊಬ್ಬರು ಅರಿತು ಪೂರಕ ಬದುಕು ನಡೆಸಲು ಸಹಕಾರಿಯಾಗುವ ಸಾಹಿತ್ಯಗಳ ಸೃಷ್ಟಿಯ ಉದ್ದೇಶವಿತ್ತು. ಇಂದು ಅವೆಲ್ಲಾ ನನ್ನೊಟ್ಟಿಗೆ ಮಣ್ಣಾಗುತ್ತಿದೆ ಎಂದು ಮರುಗಿದರು.



ಆರ್ಥಿಕ ಮುಗ್ಗಟ್ಟಿನಿಂದ ಪುಸ್ತಕ ಭಂಡಾರ ತೆರೆಯಲಾಗಲಿಲ್ಲ. ಈ ಕುರಿತು ನಿರಾಶೆಯಿಂದ ಉಡುಪಿ ನನ್ನ ಮಿತ್ರ ಕೆ.ಹೈದರ್ ಅವರಿಗೆ ಪತ್ರ ಬರೆದಿದ್ದೆ. ಅವರು ನಿರಾಶರಾಗಬೇಡಿ ಕಾಲಕೂಡಿ ಬಂದೀತು ಎಂದು ಸಾಂತ್ವಾನ ಹೇಳಿದ್ದರು. ಕೊನೆಗೂ ಪುಸ್ತಕ ಭಂಡಾರ ತೆರೆಯುವ ಕಾಲ ಕೂಡಿಬರಲಿಲ್ಲ ಎಂದು ಕಣ್ಣೀರಾದರು.

ಇನ್ನು ಸಾಹಿತ್ಯ ರಚನೆ ಕೂಡದ ಮಾತು. ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ದಿವಂಗತ ಡಾ.ಕೋಟಾ ಶಿವರಾಮ ಕಾರಂತ ಮತ್ತು ಅ.ನಾ.ಕೃಷ್ಣರಾಯರು ಉತ್ತಮ ಸಾಹಿತಿಗಳು ಎಂದ ಅವರು, ದೇಹದ ಮೇಲಿನ ಆಸೆ ಕಡಿಮೆಯಾಗುತ್ತಿದೆ. ವಯಸ್ಸು ಮನಸ್ಸಿನ ಮೇಲೆ ಪರಿಣಾಮ ಬೀರಿದ ಕಾರಣ ನೆನಪುಗಳು ಮಾಸುತ್ತಿವೆ ಎಂದರು. ಜೀವನದಲ್ಲಿ ಅನೇಕ ನೋವುಂಡಿದ್ದೇನೆ.

ಹಿತಶತೃಗಳು ಬೆನ್ನಿಗೆ ಚೂರಿ ಹಾಕಿದ್ದಾರೆ. ಕೊನೆಗಾಲದಲ್ಲಿ ಅವರ ಹೆಸರು ಹೇಳಿ ನಾಲಿಗೆ ಹೊಲಸು ಮಾಡಿಕೊಳ್ಳಲು ಇಷ್ಟವಿಲ್ಲ. ಅವರಿಗೆ ದೇವರು ಒಳ್ಳೆಯದು ಮಾಡಲಿ ಎಂದು ಹರಸಿದರು.

ನನ್ನ ಹೆಸರನ್ನು ಬಳಸಿಕೊಂಡು ನನ್ನವರಾರು ಸರ್ಕಾರದ ಮುಂದೆ ಕೈಯೊಡ್ಡಲಿಲ್ಲ. ಆದರೂ, ಕೆಲವರು ಕರೀಂಖಾನ್ ಹೆಸರು ಬಳಸಿಕೊಂಡು ಅವರ ಕುಟುಂಬದವರು ಪ್ರತಿಫಲ ಪಡೆಯುವ ಹುನ್ನಾರ ನಡೆಸಿದ್ದಾರೆ ಎಂದು ಆರೋಪಿಸಿ, ಅವರಿಗೆ ನೋವು ನೀಡಿದರು.

ಕಳೆದ ಒಂದು ದಶಕದಿಂದ ಫಲಾಪೇಕ್ಷೆಯಿಲ್ಲದೆ ಸೇವೆ ಮಾಡಿದ ಅವರಿಗೆ ನಾನು ಋಣಿ ಎಂದ ಅವರು ಮಣ್ಣಿಂದ ತಯಾರಾದ ದೇಹ ಮಣ್ಣಾಗುವುದು ಆಶ್ಚರ್ಯವಲ್ಲ ಎಂದರು. ವಿರಮಿತ ವೀಣಾ ನುಡಿ ಝೇಂಕಾರ ಎನ್ನುವ ಹಾಡಿನ ಮೂಲಕ ತಮ್ಮ ಮಾತಿಗೆ ವಿರಾಮ ಹಾಕಿದರು.

ಸ್ಟ್ರೈಕರ್ಸ್: ಬೈಚುಂಗ್ ಭುಟಿಯಾ, ರಹಿಮ್ ನಬಿ, ಅಲ್ವಿನೊ ಡಿ ಕುನ್ಹಾ, ಮಹ್ತಾಬ್ ಅಹಮದ್, ಅಭಿಷೇಕ್ ಯಾದವ್, ಸುರಜಿತ್ ಬೋಸ್, ಅಬ್ದುಲ್ ಹಕೀಮ್, ಸುನಿಲ್ ಚೆಟ್ರಿ ಮತ್ತು ಬಿಬಿಯಾನೊ ಫರ್ನಾಂಡೀಸ್.

ಚೆಸ್: ಭಾರತಕ್ಕೆ ಮತ್ತೆ ಮಿಶ್ರಫಲ

ಟುರಿನ್: ಕೊನೇರು ಹಂಪಿ ನೇತೃತ್ವದ ಭಾರತದ ಮಹಿಳಾ ತಂಡ 37ನೇ ಚೆಸ್ ಒಲಿಂಪಿಯಾಡ್‌ನ 10ನೇ ಸುತ್ತಿನಲ್ಲಿ ಮಂಗೋಲಿಯಾ ವಿರುದ್ಧ 3-0 ರಿಂದ ಭರ್ಜರಿ ಜಯ ಸಾಧಿಸಿದೆ. ಆದರೆ ವಿಶ್ವನಾಥನ್ ಆನಂದ್ ಮುಂದಾಳತ್ವದ ಪುರುಷರ ತಂಡ ಹತ್ತನೇ ಸುತ್ತಿನಲ್ಲಿಯೇ ಕ್ಯೂಬಾ ವಿರುದ್ಧ 2-2 ರಿಂದ ಸೆಣಸಿ ಡ್ರಾಗೆ ತೃಪ್ತಿಪಟ್ಟುಕೊಂಡಿದೆ.

ಭಾರತದ ಮಹಿಳಾ ತಂಡ 19.5 ಅಂಕಗಳೊಂದಿಗೆ 6ನೇ ಸ್ಥಾನಕ್ಕೆ ಏರಿದೆ. ಪುರುಷರ ತಂಡ 24.5 ಅಂಕಗಳೊಂದಿಗೆ 12ನೇ ಸ್ಥಾನ ಅಲಂಕರಿಸಿದೆ.

ಭಾರತ ಮಹಿಳಾ ತಂಡ 9ನೇ ಸುತ್ತಿನಲ್ಲಿ ಕಜಕಿಸ್ತಾನ ವಿರುದ್ಧ 2-1 ರಿಂದ ಜಯ ದಾಖಲಿಸಿತ್ತು. ಆದರೆ ಪುರುಷರ ತಂಡ 2-2 ರಿಂದ ಉಜ್ಬೇಕಿಸ್ತಾನ ವಿರುದ್ಧ ಡ್ರಾ ಮಾಡಿಕೊಂಡಿತ್ತು.

ಟೂರ್ನಿಯಲ್ಲಿ ಸೋಲು ಕಾಣದ ಅರ್ಮೇನಿಯಾ ಪುರುಷರ ತಂಡ 29 ಅಂಕಗಳೊಂದಿಗೆ ಅಗ್ರಸ್ಥಾನ ಅಲಂಕರಿಸಿದೆ. ಉಕ್ರೇನಿನ ಮಹಿಳಾ ತಂಡ 23 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಕಪ್ಪು ಕಾಯಿಗಳೊಂದಿಗೆ ಆಡಿದ ಕೊನೇರು ಹಂಪಿ, ಮಂಗೋಲಿಯಾದ ಬಾತುಯಾಗ್ ಮೊಂಗೊಂಟುಲ್ ವಿರುದ್ಧ ಜಯ ದಾಖಲಿಸಿದರು. ದ್ರೋಣವಲ್ಲಿ ಹರಿಕಾ, ದುಲಾಮಸುರೆನ್ ಯಾಂಜಿಂದುಲಾಮ್ ವಿರುದ್ಧ ಹಾಗೂ ಸ್ವಾತಿ ಘಾಟೆ, ಜೊರಿಗ್ ಬಯಾರ ವಿರುದ್ಧ ಜಯ ಸಾಧಿಸಿದ್ದಾರೆ.

ಗುರುವಾರ ವಿಶ್ರಾಂತಿ ದಿನವಾಗಿದ್ದು, 11ನೇ ಸುತ್ತಿನ ಪಂದ್ಯಗಳು ಶುಕ್ರವಾರ ನಡೆಯಲಿವೆ.

ಆಯ್ಕೆಗಾರರ ಅವಧಿ ವಿಸ್ತರಣೆ

ಮುಂಬೈ: ಭಾರತೀಯ ಕ್ರಿಕೆಟ್ ಮಂಡಳಿಯ ರಾಷ್ಟ್ರೀಯ ಆಯ್ಕೆಗಾರರು ಹಾಗೂ ಇತರೆ ಪದಾಧಿಕಾರಿಗಳ ಸೇವಾವಧಿಯನ್ನು ಮುಂಬರುವ ಸೆಪ್ಟೆಂಬರ್‌ನಿಂದ ಅನ್ವಯವಾಗುವಂತೆ ಎರಡು ವರ್ಷಗಳಿಗೆ ವಿಸ್ತರಿಸಲಾಗಿದೆ.

ಇಲ್ಲಿಯತನಕ ಇವರ ಸೇವಾವಧಿ ಒಂದು ವರ್ಷವಿತ್ತು. ಬಿಸಿಸಿಐ ವಾರ್ಷಿಕ ಚುನಾವಣೆ ಸೆಪ್ಟೆಂಬರ್‌ನಲ್ಲಿ ನಡೆಯಲಿರುವುದರಿಂದ, ಪದಾಧಿಕಾರಿಗಳು ಅಥವಾ ಆಯ್ಕೆಗಾರರ ಸೇವಾವಧಿಯನ್ನು ಅಗತ್ಯ ಬಿದ್ದಲ್ಲಿ ಇನ್ನೊಂದು ವರ್ಷದ ಅವಧಿಗೆ ವಿಸ್ತರಿಸಲು ಇದರಿಂದ ಅನುಕೂಲವಾಗಲಿದೆ.

ಮುಂಬೈಯಲ್ಲಿ ಗುರುವಾರ ಏರ್ಪಡಿಸಲಾಗಿದ್ದ ವಿಶೇಷ ಮಹಾ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.

ಎಲೈಟ್ ಪುನರ್ ರಚನೆಗೆ ಬಿಸಿಸಿಐ ನಿರ್ಧಾರ

ಮುಂಬೈ: ಭಾರತದ ಕಳಪೆ ಅಂಪೈರ್‌ಗಳ ಬಗ್ಗೆ ಐಸಿಸಿ ಟೀಕೆಯಿಂದ ಮುಜುಗರಕ್ಕೆ ಸಿಲುಕಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ದೇಶಿ ಅಂಪೈರ್‌ಗಳ ಎಲೈಟ್ ಸಮಿತಿಯನ್ನು ಪುನರ್ ರಚಿಸಲು ನಿರ್ಧರಿಸಿದೆ.

ಈ ಸಂಬಧ ಮಂಡಳಿ ಎಸ್. ವೆಂಕಟರಾಘವನ್, ಎಸ್.ಕೆ. ಬನ್ಸಾಲ್ ಮತ್ತು ವಿ.ಕೆ. ರಾಮಸ್ವಾಮಿ ಅವರನ್ನು ಒಳಗೊಂಡ ಮೂರು ಸದಸ್ಯರ ವಿಶೇಷ ಸಮಿತಿಯನ್ನು ರಚಿಸಿದೆ.

ಈ ಸಮಿತಿಯು ಹಾಲಿ 8 ಅಂಪೈರ್‌ಗಳಿರುವ ಎಲೈಟ್ ಸಮಿತಿಯಿಂದ 6 ಮಂದಿಯನ್ನು ಪರಿಷ್ಕೃತ ಸಮಿತಿಗೆ ಆಯ್ಕೆ ಮಾಡಿ, ಏಷ್ಯಾ ಕ್ರಿಕೆಟ್ ಕೌನ್ಸಿಲ್ ಹಾಗೂ ಐಸಿಸಿಗೆ ಶಿಫಾರಸ್ಸು ಮಾಡಲಿದೆ. ದೇಶಿ ಪಂದ್ಯಗಳಿಗೆ 40 ಮ್ಯಾಚ್ ರೆಫ್ರಿಗಳ ಅಖಿಲ ಭಾರತ ಸಮಿತಿ ರಚಿಸಲು ನಿರ್ಧರಿಸಲಾಗಿದೆ.

ಚಾಪೆಲ್ ಸೋಲಿನ ರೂವಾರಿ: ದಾಲ್ಮಿಯ

ಕೋಲ್ಕತ್ತ: ಭಾರತ ಕ್ರಿಕೆಟ್ ತಂಡದ ಕೋಚ್ ಗ್ರೆಗ್ ಚಾಪೆಲ್ ವಿರುದ್ಧ ಜಗಮೋಹನ್ ದಾಲ್ಮಿಯಾ ಕಟುವಾಗಿ ಟೀಕಾಪ್ರಹಾರ ಮಾಡಿದ್ದಾರೆ. ಅವರ ಅತಿಯಾದ ಪ್ರಯೋಗದಿಂದ ಭಾರತ ತಂಡಕ್ಕೆ ಒಳಿತಿಗಿಂತ ಹೆಚ್ಚು ಕೆಡುಕಾಗಿದೆ ಎಂದಿದ್ದಾರೆ.

ಅವರ ಒಂದು ವರ್ಷದ ಅವಧಿ ಭಾರತಕ್ಕೆ ಹೆಚ್ಚು ಕೆಡುಕಾಗಿದೆ. ವಿಂಡೀಸ್ ವಿರುದ್ಧ ತಂಡ 4 ಪಂದ್ಯ ಸೋಲುವುದಕ್ಕೆ ಬೇರೆ ವಿವರಣೆ ಕೊಡಲು ಸಾಧ್ಯವಿಲ್ಲ. ಅವರು ತಂಡ ನಿರ್ದಿಷ್ಟ ದಿಕ್ಕಿನಲ್ಲಿ ಸ್ಥಿರಗೊಳ್ಳಲು ಬಿಡುತ್ತಿಲ್ಲ. ಹಾಯು ಆರಂಭಿಕರು ಇರುವಾಗ ಹಿಂದೆ ಯಾವತ್ತೂ ಇನಿಂಗ್ಸ್ ಆರಂಭ ಮಾಡದವರು ಆರಂಭಿಕರಾದರು ಎಂದು ದಾಲ್ಮಿಯಾ ಟೀಕಿಸಿದರು.

ಚಾಪೆಲ್‌ರನ್ನು ಆಯ್ಕೆಮಾಡಿದ ಬಿಸಿಸಿಐ ಸಮಿತಿಯಲ್ಲಿ ದಾಲ್ಮಿಯ ಸಹ ಇದ್ದರು.

ಉಷಾಕಿರಣ 2-6-2006

ಹೊಸ ಪುಸ್ತಕ

ಕವಿತೆಯ ಓದು

- ಹೂರಣ: ಕವಿತೆಯ ಓದು ಹೇಗಿರಬೇಕು ಎಂಬ ವಿಚಾರ ಮುಖ್ಯವಾಗಿ ಈ ಕೃತಿಯಲ್ಲಿದೆ. ಕವಿತೆ ಓದುವ ಮನಸ್ಸು ಸೂಕ್ಷ್ಮ ಸಂವೇದಿಯಾಗಿರಬೇಕು; ಸಮಾನ ಹೃದಯರಾಗಿ ಕವನ, ಕಾವ್ಯಗಳಿಗೆ ಸ್ಪಂದಿಸುವವರಿಗೆ ಈ ಕೃತಿ ನಿಜಕ್ಕೂ ಹೆಚ್ಚು ಉಪಯುಕ್ತ.
- ಲೇಖಕರು: ಪ್ರಭಾಕರ ಆಚಾರ್ಯ
- ಪುಟ: 202 ಬೆಲೆ:150 ರೂ
- ಪ್ರಕಾಶಕರು: ದೇಸೀ ಪುಸ್ತಕ, ಬೆಂಗಳೂರು

ಕನ್ನಡ ಸಂತ ಎಸ್.ಕೆ.ಕರೀಂಖಾನ್



- ಹೂರಣ: ಕರೀಂಖಾನ್ ತಮ್ಮ ಅಲೆಮಾರಿ ಬದುಕಿನಲ್ಲಿ ಲೋಕಸತ್ಯ ಕಂಡುಕೊಂಡರು. ನಿಂತ ನೆಲ, ಜಲ, ಸಮಾಜದ ಪ್ರೀತಿಯ ಸೆಳೆತಕ್ಕೆ ಒಳಗಾದರು. ಈ ದೇಶ, ಭಾಷೆ, ಸಮಾಜ ನನ್ನದು ಎಂಬ ಗಾಢ ಅರಿವು ಅವರನ್ನು ಆವರಿಸಿಕೊಂಡಿತು. ಅವುಗಳಿಗಾಗೇ ಬದುಕಿ ಬಾಳಿದರು. ಇಂತಹ ಮಹಾಚೇತನದ ಜೀವನಗಾಥೆ ಈ ಕೃತಿ.
- ಲೇಖಕರು : ಪ್ರೊ. ಡಿ. ಲಿಂಗಯ್ಯ
- ಪುಟ: 488 ಬೆಲೆ: 300 ರೂ
- ಪ್ರಕಾಶಕರು: ಗೋಧೂಳಿ ಪ್ರಕಾಶನ, ತುಂಗಾನಗರ, ಬೆಂಗಳೂರು

ಅನುಸರಣ



- ಹೂರಣ: ಮೂಲತ: ಕಥೆಗಾರರಾದರೂ ಸೃಜನಶೀಲ ವಿಮರ್ಶೆ ಲೇಖಕರ ಕೈ ಬಿಟ್ಟಿಲ್ಲ. ಇಲ್ಲಿಯ ಲೇಖನಗಳು ನಾಲ್ಕು ಭಾಗಗಳಲ್ಲಿ ವಿಂಗಡಿತವಾಗಿವೆ. ಕಾವ್ಯ, ಕಥೆ, ಕಾದಂಬರಿ, ಲೇಖನ, ಒಡನಾಟ, ಸಂವಾದ, ಚಿಂತನ ಕುರಿತ ಬರಹಗಳನ್ನು ಒಳಗೊಂಡ ಈ ಕೃತಿ ಸಾಕಷ್ಟು ವೈವಿಧ್ಯಮಯವಾಗಿದೆ.
- ಲೇಖಕರು: ಪ್ರಹ್ಲಾದ ಅಗಸನಕಟ್ಟೆ
- ಪ್ರಕಾಶಕರು: ಕಾಲ ಪ್ರಕಾಶನ, ರಾಜಾಜಿನಗರ ಬೆಂಗಳೂರು.
- ಬೆಲೆ; 165 ರೂ. ಪುಟಗಳು: 240

ರಾಜಲಕ್ಷ್ಮಿಯವರ ಕಥೆಗಳು



- ಹೂರಣ: ಬೆಳಕು ಬೆಳಕಿಂಡಿಯಿಂದ ಬರುತ್ತದೆಯೋ, ಕಿಟಕಿಯಿಂದ ಬರುತ್ತದೆಯೋ ಮುಖ್ಯವಲ್ಲ. ಬೆಳಕು ಚೇತನದ ಸಂಕೇತ. ಅಂತಹ ಬೆಳಕಿನೊಂದು ಗೆರೆಯನ್ನು ಮಲೆಯಾಳಿ ಸಾಹಿತ್ಯದಿಂದ ಕನ್ನಡಕ್ಕೆ ಮೂಡಿಸಲಾಗಿದೆ. ಭಾಷೆಯ ಪರಿಧಿಯನ್ನು ಮೀರಿದ

ಪುಟ್ಟ ಪುಸ್ತಿಕೆಯನ್ನು ರಾಜೇಶ್ವರಿ ಮೇಡಂಗೆ ಕೊಡಲು ಹ್ಯಾಂಡ್‌ಪೋಸ್ಟ್‌ನ ಅವರ ನಿರುತ್ತರ ತೋಟದ ಮನೆಗೆ ಹೋದಾಗ ಅವರು ಕೇಳಿದ ಪ್ರಶ್ನೆ: ತೇಜಸ್ವಿ ಅಂದ್ರೇ ನಿಮಗ್ಯಾಕೆ ಅಷ್ಟು ಇಷ್ಟ? ಅವರ ಕಣ್ಣುಗಳಲ್ಲಿ ನೀರ ಹನಿಗಳು... ದುಃಖವೋ? ಆನಂದ ಬಾಷ್ಪವೋ? ಒಟ್ಟಾರೆ ತುಂಬಿ ತೊಟ್ಟಿಕ್ಕಲು ಅಣಿಯಾದವು. ಆ ಕ್ಷಣ ಉತ್ತರ ಹೇಳಬೇಕೆಂದಿದ್ದ ನನ್ನ ಗಂಟಲು ಕಟ್ಟಿ ಮೌನವಹಿಸಿತು.

ಮನದ ಮರೆಯಲ್ಲಿ ತೇಜಸ್ವಿ..

ಏಪ್ರಿಲ್ ಐದು; ತೇಜಸ್ವಿಯವರ ಆಪ್ತ ಜೀವ ಹಕ್ಕಿ ಬಳಗದೊಂದಿಗೆ ವಿಹಾರಕ್ಕೆ ಹೊರಟದಿನ. ಆದರೆ ನಮ್ಮಂತ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಸರದ ಮೇಷ್ಟರೊಬ್ಬರು ಇಹಲೋಕದ ತರಗತಿಯಿಂದ ಸುದೀರ್ಘ ರಜೆಯ ಮೇಲೆ ತೆರಳಿದ ಸಂದರ್ಭವಾಗಿ ಕಾಡುತ್ತದೆ. ಹೀಗಾಗಿ ಅವರೊಂದಿಗೆ ಹಂಚಿಕೊಂಡ ಪುಟ್ಟ ಕ್ಷಣವನ್ನು ಕೂಡ ದೊಡ್ಡದು ಎಂಬಂತೆ ಹೇಳಿಕೊಳ್ಳಬೇಕೆನಿಸುತ್ತದೆ.

ಎರಡು ಸಾವಿರದ ಏಳನೇ ಇಸವಿ. ನಾನಾಗ ಸ್ನಾತಕೋತ್ತರ ಪದವಿ ವಿದ್ಯಾರ್ಥಿ. ಹೀಗೊಂದು ದಿನ ಮೂಡಿಗೆರೆ ಜನತೆಗೆ ಸಾಹಿತ್ಯ ಸಮ್ಮೇಳನ ಆಯೋಜಿಸುವ ಆಲೋಚನೆ ಹೊಳೆಯುತ್ತದೆ. ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ಡಿ.ಎಸ್.ಜಯಪ್ಪಗೌಡರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ. ತಾಲ್ಲೂಕಿಗೆ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಇದಾದುದ್ದರಿಂದ ಪ್ರೀತಿಯ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರನ್ನು ಸತಾಯ ಗತಾಯ ಪ್ರಯತ್ನಪಟ್ಟು ಮನವೊಲಿಸಿ ಕಾರ್ಯಕ್ರಮ ಉದ್ಘಾಟನೆಗೆ ಒಪ್ಪಿಸಲಾಗುತ್ತದೆ.

ಮೂಡಿಗೆರೆಯ ಯುವ ಕವಿಯೆನಿಸಿದ ನಾನು ಮತ್ತು ನನ್ನಂತಹ ಗೆಳೆಯರಿಗೆ ತೇಜಸ್ವಿಯವರೇನು ಹೊಸಬರಲ್ಲ. ಅವರೊಂದಿಗೆ ಅನೇಕ ಸಲ ಮೂಡಿಗೆರೆಯ ತರಕಾರಿ ಮಾರ್ಕೆಟ್, ಹಣ್ಣಿನ ಅಂಗಡಿಯಲ್ಲಿ 'ಸಾರ್ ನಾನೊಂದು ಕವನ ಬರೆದಿದ್ದೀನಿ ನೋಡಿ ಸಾ' ಎಂತಲೂ, 'ನಮಸ್ತೆ ಸಾ..!' ಎಂದು ಎದೆ ಮುಟ್ಟಿಕೊಂಡು ಧನ್ಯ ನಗೆ ಬೀರುತ್ತಿದ್ದ ಪ್ರಸಂಗಗಳು ಅನೇಕ. ಕೆಲವರು ಇಂತಹ ಸಂಗತಿಗಳಿಂದ ಅವರಿಂದ ಬೈಸಿಕೊಂಡವರೇ ಹೆಚ್ಚು. ಈ ವಿಚಾರದಲ್ಲಿ ನಾನು ಒಮ್ಮೆಯೂ ಬೈಸಿಕೊಂಡಿಲ್ಲ. ಈ ಧೈರ್ಯದ ಮೇಲೆಯೇ ಸಾಹಿತ್ಯ ಸಮ್ಮೇಳನದ ವೇದಿಕೆ ಮೇಲೇರಿದೆ. 'ಸಾರ್ ನಿಮ್ಮ ಜೊತೆ ಒಂದೇ ಒಂದು ಫೋಟೋ ತೆಗೆಸುವ ಆಸೆ, ಮುಂದೆ ನೋಡಿ ಸಾ..' ಎಂದು ಅವರು ಕುಳಿತಿದ್ದ ವೇದಿಕೆಯ ಹಿಂದೆ ಕುರ್ಚಿ ಹಿಡಿದು ಕ್ಯಾಮಾರದವರ ಕಡೆ ನೋಡುತ್ತಾ ಹಲ್ಲು ಕಿರಿದು ನಿಂತೆ!

ಅಪರೂಪವೆಂಬಂತೆ ಚಿತ್ರನಟ ಪುನೀತ್ ರಾಜ್‌ಕುಮಾರ್ ಕೂಡ ತೇಜಸ್ವಿಯವರ ಪಕ್ಕದಲ್ಲಿ ಕುಳಿತು ಅಭಿಮಾನಿಗಳ ಕಣ್ಣಿಗೆ ಸಂಭ್ರಮದ ಹಬ್ಬ ಉಣಬಡಿಸುತ್ತ ನಗೆ ಚಿಲುಮೆ ಚಿಮ್ಮಿಸುತ್ತಿದ್ದರು. ನನ್ನ ಹಿಂದುರಿಗಿ ನೋಡಿದವರೆ 'ನನ್ನ ಮತ್ತು ತೇಜಸ್ವಿಯವರ ಕುರ್ಚಿ ಮಧ್ಯೆ ನಿಂತುಕೊಳ್ಳಿ' ಎಂಬ ಪ್ರೀತಿ ತೋರಿದರು ಪುನೀತ್. ಯಾರಿಗುಂಟು ಯಾರಿಗಿಲ್ಲ ಈ ಸೌಭಾಗ್ಯ? ನಿಂತಲ್ಲೆ ಪುಳಕಿತನಾದ ನಾನು 'ಆಯ್ತು ಸಾರ್!' ಎಂದೆ. ಆನಂದಭಾಷ್ಪ ತುಂಬಿ ಹರಿಯಲು ಅಣಿಯಾದವು. ಮೂಡಿಗೆರೆಯ ಫೋಟೋ ಸ್ಟುಡಿಯೊಂದರ ಪ್ರತಿನಿಧಿಯು ಕ್ಯಾಮಾರದ ಕಣ್ಣು ನಮ್ಮನ್ನು ಸೆರೆಹಿಡಿಯಿತು ಎಂಬುದಕ್ಕೆ ಖಾತರಿಯಾಗಿ ಬೆಳಕು ನನ್ನ ಮುಖದ ಮೇಲೆಲ್ಲ ಫಳಕ್.. ಫಳಕ್ ಎಂದಿತು. ಪುನೀತ್ ರಾಜ್‌ಕುಮಾರ್‌ರವರ ಕೈಗೆ ನನ್ನ 'ಕಾಲಗರ್ಭ' ಪುಸ್ತಿಕೆ ಕೈಗಿಟ್ಟು 'ಆಯ್ತು ಸಾರ್, ಥ್ಯಾಂಕ್ಯೂ ಸಾರ್' ಎಂದೆ. ಓಕೆ ಗುಡ್‌ಲಕ್ ಎಂದರವರು. ಸಂತೋಷ ಅಧಿಕವಾಗಿ ಗಂಟಲು ತುಂಬಿ ಮಾತು ಹೊರಡಲಿಲ್ಲವೇನೋ. ತೇಜಸ್ವಿಯವರ ಬೆನ್ನು ಸ್ಪರ್ಶಿಸಿ ಮೂಕ ಭಾಷೆಯಲ್ಲಿ ನನ್ನ ಎದೆ ಮುಟ್ಟಿಕೊಂಡು ನಮಸ್ಕರಿಸಿ ವೇದಿಕೆಯಿಂದ ಕೆಳಗಿಳಿದೆ.

ಮರುದಿನ ಸ್ಟುಡಿಯೋಕ್ಕೆ ಹೋಗಿ ಫೋಟೋ ಕೇಳಿದರೆ 'ಮೆಮೋರಿ ಕಾರ್ಡ್‌ನಿಂದ ಕಾಪಿ ಮಾಡಿ ಎಡಿಟ್ ಮಾಡುವಾಗ ಡಿಲಿಟ್ ಆಗಿರಬೇಕು ಸಾರ್, ಸಾರಿ!' ಎಂದು ನಗಾಡಿದರು ಆ ಸ್ಟುಡಿಯದ ಮಾಲೀಕರು. ಆಗ ಹರ್ಷ ಚಿತ್ತ ಹೃದಯದ ದಾಹ ತುಸು ಕುಗ್ಗಿ ಕಂಪಿಸಿತು. ರೋಲ್ ಕ್ಯಾಮಾರವಾಗಿದ್ದರೆ ಸಾಕ್ಷಿಯಾಗಿ ನೆಗೆಟೀವ್ ಆದರೂ ಇರುತ್ತಿತ್ತಲ್ಲ! ಎಂಬ ದುಃಖ ಒತ್ತರಿಸಿ ಬಂತು. ನಿಜ. ಕವಿ ಬಿ.ಆರ್. ಲಕ್ಷ್ಮಣರಾವ್ ಅವರ 'ಕ್ಯಾಮಾರ ಕಣ್ಣು' ಕವಿತೆಯ ಆಲಾಪವೂ ಇದೆ ಅಲ್ಲವೇ?! ಇದು ನಿಜ. ಈಗ ಫೋಟೋ ತೆಗೆಸಿಕೊಳ್ಳುವ ಹುಚ್ಚು ಭ್ರಮೆಯಿಂದ ಹೊರ ಬಂದಿದ್ದೇನೆ ಎಂದೆನಿಸಿದರೂ ಒಮ್ಮೊಮ್ಮೆ ಮತ್ತದೆ ಸಾಹಸಕ್ಕೆ ಬಲಿಯಾಗುತ್ತಿರುತ್ತೇನೆ.

ಮೊನ್ನೆಯಷ್ಟೇ ಮೂಡಿಗೆರೆ ಚರ್ಚ್ ಎದುರಿಗಿನ ರಸ್ತೆಯಲ್ಲಿ ನಾನು, ನನ್ನ ಸಹೋದರಿ ನಡೆದು ಹೋಗುತ್ತಿದ್ದಾಗ ಅವಳು ಹೇಳಿದಳು. "ಸಂಪತ್ತಣ್ಣ, ಅವತ್ತೊಂದು ದಿನ ನಾನು ಮತ್ತೆ ಅಮ್ಮ ಇದೇ ರಸ್ತೆಯಲ್ಲಿ ಸಾಗುವಾಗ ತೇಜಸ್ವಿಯವರು ಸ್ಕೂಟರ್‌ನಲ್ಲಿ ಹೋಗ್ತಾ ಇದ್ರು! ನಾನಾಗ ಅಮ್ಮ ತೇಜಸ್ವಿ ಅಂತ ಕಿರುಚಿಕೊಂಡೆ. ಅಮ್ಮ ಎಲ್ಲಿ? ಎಲ್ಲಿ? ಎಂದರೆ. ನಾನು 'ಅಲ್ಲಿ! ಅಲ್ಲಿ!' ಎಂದು ಕೈತೋರಿಸಿದೆ. ತೇಜಸ್ವಿಯವರು ಒಮ್ಮೆ ಹಿಂದಿರುಗಿ ನೋಡಿದರು. ಭಯವಾಯ್ತು ನನಗೆ ಬೈಯ್ತಾರೆ ಅಂತ. ನಮ್ಮ ಪುಣ್ಯ. ಆದರೂ ಅವರು ಏನೂ ಅನ್ನಲಿಲ್ಲ. ಮುಂದೆ ಹೋದರು..'ಹೌದು ಇಂತಹ ನೂರೊಂದು ಹೃದಯಕತೆಗಳನ್ನು ಮೂಡಿಗೆರೆಯ ಪ್ರತಿ ರಸ್ತೆಗಳೂ ಪಿಸುಗುಟ್ಟಿ ಹೇಳುತ್ತವೆ. ಆಗ ತೇಜಸ್ವಿ ನೆನಪಾಗುತ್ತಾರೆ.ಎರಡು ಸಾವಿರದ ಏಳು. ಪೂರ್ಣಚಂದ್ರ ಇಹಲೋಕಕ್ಕೆ ರಜೆ ಹಾಕಿದ ವರ್ಷ ಅದು. ಎರಡು ಸಾವಿರದ ಎಂಟನೇ ಇಸವಿಯಲ್ಲಿ ಅವರ ಬದುಕು ಮತ್ತು ಬರಹದ ಕುರಿತಾದ 'ಮೂಡಿಗೆರೆಯ ಮುದ್ದು ಹಕ್ಕಿ' ಎಂಬ ಕೃತಿಯೊಂದನ್ನು ಬೆಂಗಳೂರಿನ ಸುಮುಖ ಪ್ರಕಾಶನದ ಸಹಯೋಗದೊಂದಿಗೆ ಹೊರತಂದೆ. ಈ ಪುಟ್ಟ ಪುಸ್ತಿಕೆಯನ್ನು ರಾಜೇಶ್ವರಿ ಮೇಡಂಗೆ ಕೊಡಲು ಹ್ಯಾಂಡ್‌ಪೋಸ್ಟ್‌ನ ಅವರ ನಿರುತ್ತರ ತೋಟದ ಮನೆಗೆ ಹೋದಾಗ ಅವರು ಕೇಳಿದ ಪ್ರಶ್ನೆ: 'ತೇಜಸ್ವಿ ಅಂದ್ರೆ ನಿಮಗ್ಯಾಕೆ ಅಷ್ಟು ಇಷ್ಟ?' ಅವರ ಕಣ್ಣುಗಳಲ್ಲಿ ನೀರ ಹನಿಗಳು... ದುಃಖವೋ? ಆನಂದ ಭಾಷ್ಪವೋ? ಒಟ್ಟಾರೆ ತುಂಬಿ ತೊಟ್ಟಿಕ್ಕಲು ಅಣಿಯಾದವು. ಆ ಕ್ಷಣ ಉತ್ತರ ಹೇಳಬೇಕೆಂದಿದ್ದ ನನ್ನ ಗಂಟಲು ಕಟ್ಟಿ ಮೌನವಹಿಸಿತು. ನಿಜ. ತೇಜಸ್ವಿ ಎಂದರೆ ಮಾತು ಮೌನವಾಗಿ ಉಳಿಯುತ್ತೆ. ಆ ಮೌನ ನೆನಪಾಗಿ ಕಾಡುತ್ತದೆ.

■ ಸಂಪತ್ ಬೆಟ್ಟಗೆರೆ. ಬೆಟ್ಟಗೆರೆ.
8762267491

ಕವಿತೆಯ ಓದು

- ಹೂರಣ: ಕವಿತೆಯ ಓದು ಹೇಗಿರಬೇಕು ಎಂಬ ವಿಚಾರ ಮುಖ್ಯವಾಗಿ ಈ ಕೃತಿಯಲ್ಲಿದೆ. ಕವಿತೆ ಓದುವ ಮನಸ್ಸು ಸೂಕ್ಷ್ಮ ಸಂವೇದಿಯಾಗಿರಬೇಕು; ಸಮಾನ ಹೃದಯರಾಗಿ ಕವನ, ಕಾವ್ಯಗಳಿಗೆ ಸ್ಪಂದಿಸುವವರಿಗೆ ಈ ಕೃತಿ ನಿಜಕ್ಕೂ ಹೆಚ್ಚು ಉಪಯುಕ್ತ.
- ಲೇಖಕರು: ಪ್ರಭಾಕರ ಆಚಾರ್ಯ
- ಪುಟ: 202 ಬೆಲೆ:150 ರೂ
- ಪ್ರಕಾಶಕರು: ದೇಸೀ ಪುಸ್ತಕ, ಬೆಂಗಳೂರು

ಕನ್ನಡ ಸಂತ ಎಸ್.ಕೆ.ಕರೀಂಖಾನ್



- ಹೂರಣ: ಕರೀಂಖಾನ್ ತಮ್ಮ ಅಲೆಮಾರಿ ಬದುಕಿನಲ್ಲಿ ಲೋಕಸತ್ಯ ಕಂಡುಕೊಂಡರು. ನಿಂತ ನೆಲ, ಜಲ, ಸಮಾಜದ ಪ್ರೀತಿಯ ಸೆಳೆತಕ್ಕೆ ಒಳಗಾದರು. ಈ ದೇಶ, ಭಾಷೆ, ಸಮಾಜ ನನ್ನದು ಎಂಬ ಗಾಢ ಅರಿವು ಅವರನ್ನು ಆವರಿಸಿಕೊಂಡಿತು. ಅವುಗಳಿಗಾಗೇ ಬದುಕಿ ಬಾಳಿದರು. ಇಂತಹ ಮಹಾಚೇತನದ ಜೀವನಗಾಥೆ ಈ ಕೃತಿ.
- ಲೇಖಕರು : ಪ್ರೊ. ಡಿ. ಲಿಂಗಯ್ಯ
- ಪುಟ: 488 ಬೆಲೆ: 300 ರೂ
- ಪ್ರಕಾಶಕರು: ಗೋಧೂಳಿ ಪ್ರಕಾಶನ, ತುಂಗಾನಗರ, ಬೆಂಗಳೂರು

ಅನುಸರಣ



- ಹೂರಣ: ಮೂಲತಃ ಕಥೆಗಾರರಾದರೂ ಸೃಜನಶೀಲ ವಿಮರ್ಶೆ ಲೇಖಕರ ಕೈ ಬಿಟ್ಟಿಲ್ಲ. ಇಲ್ಲಿಯ ಲೇಖನಗಳು ನಾಲ್ಕು ಭಾಗಗಳಲ್ಲಿ ವಿಂಗಡಿತವಾಗಿವೆ. ಕಾವ್ಯ, ಕಥೆ, ಕಾದಂಬರಿ, ಲೇಖನ, ಒಡನಾಟ, ಸಂವಾದ, ಚಿಂತನ ಕುರಿತ ಬರಹಗಳನ್ನು ಒಳಗೊಂಡ ಈ ಕೃತಿ ಸಾಕಷ್ಟು ವೈವಿಧ್ಯಮಯವಾಗಿದೆ.
- ಲೇಖಕರು: ಪ್ರಹ್ಲಾದ ಅಗಸನಕಟ್ಟೆ
- ಪ್ರಕಾಶಕರು: ಕಾಲ ಪ್ರಕಾಶನ, ರಾಜಾಜಿನಗರ ಬೆಂಗಳೂರು.
- ಬೆಲೆ; 165 ರೂ. ಪುಟಗಳು: 240

ರಾಜಲಕ್ಷ್ಮಿಯವರ ಕಥೆಗಳು



- ಹೂರಣ: ಬೆಳಕು ಬೆಳಕಿಂಡಿಯಿಂದ ಬರುತ್ತದೆಯೋ, ಕಿಟಕಿಯಿಂದ ಬರುತ್ತದೆಯೋ ಮುಖ್ಯವಲ್ಲ. ಬೆಳಕು ಚೇತನದ ಸಂಕೇತ. ಅಂತಹ ಬೆಳಕಿನೊಂದು ಗೆರೆಯನ್ನು ಮಲೆಯಾಳಿ ಸಾಹಿತ್ಯದಿಂದ ಕನ್ನಡಕ್ಕೆ ಮೂಡಿಸಲಾಗಿದೆ. ಭಾಷೆಯ ಪರಿಧಿಯನ್ನು ಮೀರಿದ



ಪುಟ್ಟ ಪುಸ್ತಿಕೆಯನ್ನು ರಾಜೇಶ್ವರಿ ಮೇಡಂಗೆ ಕೊಡಲು ಹ್ಯಾಂಡ್‌ಪೋಸ್ಟ್‌ನ ಅವರ ನಿರುತ್ತರ ತೋಟದ ಮನೆಗೆ ಹೋದಾಗ ಅವರು ಕೇಳಿದ ಪ್ರಶ್ನೆ: ತೇಜಸ್ವಿ ಅಂದ್ರೇ ನಿಮಗ್ಯಾಕೆ ಅಷ್ಟು ಇಷ್ಟ? ಅವರ ಕಣ್ಣುಗಳಲ್ಲಿ ನೀರ ಹನಿಗಳು... ದುಃಖವೋ? ಆನಂದ ಬಾಷ್ಪವೋ? ಒಟ್ಟಾರೆ ತುಂಬಿ ತೊಟ್ಟಿಕ್ಕಲು ಅಣಿಯಾದವು. ಆ ಕ್ಷಣ ಉತ್ತರ ಹೇಳಬೇಕೆಂದಿದ್ದ ನನ್ನ ಗಂಟಲು ಕಟ್ಟಿ ಮೌನವಹಿಸಿತು.

ಮನದ ಮರೆಯಲ್ಲಿ ತೇಜಸ್ವಿ..

ಏಪ್ರಿಲ್ ಐದು; ತೇಜಸ್ವಿಯವರ ಆಪ್ತ ಜೀವ ಹಕ್ಕಿ ಬಳಗದೊಂದಿಗೆ ವಿಹಾರಕ್ಕೆ ಹೊರಟದಿನ. ಆದರೆ ನಮ್ಮಂತ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಸರದ ಮೇಷ್ಟರೊಬ್ಬರು ಇಹಲೋಕದ ತರಗತಿಯಿಂದ ಸುದೀರ್ಘ ರಜೆಯ ಮೇಲೆ ತೆರಳಿದ ಸಂದರ್ಭವಾಗಿ ಕಾಡುತ್ತದೆ. ಹೀಗಾಗಿ ಅವರೊಂದಿಗೆ ಹಂಚಿಕೊಂಡ ಪುಟ್ಟ ಕ್ಷಣವನ್ನು ಕೂಡ ದೊಡ್ಡದು ಎಂಬಂತೆ ಹೇಳಿಕೊಳ್ಳಬೇಕೆನಿಸುತ್ತದೆ.

ಎರಡು ಸಾವಿರದ ಏಳನೇ ಇಸವಿ. ನಾನಾಗ ಸ್ನಾತಕೋತ್ತರ ಪದವಿ ವಿದ್ಯಾರ್ಥಿ. ಹೀಗೊಂದು ದಿನ ಮೂಡಿಗೆರೆ ಜನತೆಗೆ ಸಾಹಿತ್ಯ ಸಮ್ಮೇಳನ ಆಯೋಜಿಸುವ ಆಲೋಚನೆ ಹೊಳೆಯುತ್ತದೆ. ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ಡಿ.ಎಸ್.ಜಯಪ್ಪಗೌಡರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ. ತಾಲ್ಲೂಕಿಗೆ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಇದಾದುದರಿಂದ ಪ್ರೀತಿಯ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರನ್ನು ಸತಾಯ ಗತಾಯ ಪ್ರಯತ್ನಪಟ್ಟು ಮನವೊಲಿಸಿ ಕಾರ್ಯಕ್ರಮ ಉದ್ಘಾಟನೆಗೆ ಒಪ್ಪಿಸಲಾಗುತ್ತದೆ.

ಮೂಡಿಗೆರೆಯ ಯುವ ಕವಿಯೆನಿಸಿದ ನಾನು ಮತ್ತು ನನ್ನಂತಹ ಗೆಳೆಯರಿಗೆ ತೇಜಸ್ವಿಯವರೇನು ಹೊಸಬರಲ್ಲ. ಅವರೊಂದಿಗೆ ಅನೇಕ ಸಲ ಮೂಡಿಗೆರೆಯ ತರಕಾರಿ ಮಾರ್ಕೆಟ್, ಹಣ್ಣಿನ ಅಂಗಡಿಯಲ್ಲಿ 'ಸಾರ್ ನಾನೊಂದು ಕವನ ಬರೆದಿದ್ದೀನಿ ನೋಡಿ ಸಾ' ಎಂತಲೂ, 'ನಮಸ್ತೆ ಸಾ..!' ಎಂದು ಎದೆ ಮುಟ್ಟಿಕೊಂಡು ಧನ್ಯ ನಗೆ ಬೀರುತ್ತಿದ್ದ ಪ್ರಸಂಗಗಳು ಅನೇಕ. ಕೆಲವರು ಇಂತಹ ಸಂಗತಿಗಳಿಂದ ಅವರಿಂದ ಬೈಸಿಕೊಂಡವರೇ ಹೆಚ್ಚು. ಈ ವಿಚಾರದಲ್ಲಿ ನಾನು ಒಮ್ಮೆಯೂ ಬೈಸಿಕೊಂಡಿಲ್ಲ. ಈ ಧೈರ್ಯದ ಮೇಲೆಯೇ ಸಾಹಿತ್ಯ ಸಮ್ಮೇಳನದ ವೇದಿಕೆ ಮೇಲೇರಿದೆ. 'ಸಾರ್ ನಿಮ್ಮ ಜೊತೆ ಒಂದೇ ಒಂದು ಫೋಟೋ ತೆಗೆಸುವ ಆಸೆ, ಮುಂದೆ ನೋಡಿ ಸಾ..' ಎಂದು ಅವರು ಕುಳಿತಿದ್ದ ವೇದಿಕೆಯ ಹಿಂದೆ ಕುರ್ಚಿ ಹಿಡಿದು ಕ್ಯಾಮಾರದವರ ಕಡೆ ನೋಡುತ್ತಾ ಹಲ್ಲು ಕಿರಿದು ನಿಂತೆ!

ಅಪರೂಪವೆಂಬಂತೆ ಚಿತ್ರನಟ ಪುನೀತ್ ರಾಜ್‌ಕುಮಾರ್ ಕೂಡ ತೇಜಸ್ವಿಯವರ ಪಕ್ಕದಲ್ಲಿ ಕುಳಿತು ಅಭಿಮಾನಿಗಳ ಕಣ್ಣಿಗೆ ಸಂಭ್ರಮದ ಹಬ್ಬ ಉಣಬಡಿಸುತ್ತ ನಗೆ ಚಿಲುಮೆ ಚಿಮ್ಮಿಸುತ್ತಿದ್ದರು. ನನ್ನ ಹಿಂದುರಿಗಿ ನೋಡಿದವರೆ 'ನನ್ನ ಮತ್ತು ತೇಜಸ್ವಿಯವರ ಕುರ್ಚಿ ಮಧ್ಯೆ ನಿಂತುಕೊಳ್ಳಿ' ಎಂಬ ಪ್ರೀತಿ ತೋರಿದರು ಪುನೀತ್. ಯಾರಿಗುಂಟು ಯಾರಿಗಿಲ್ಲ ಈ ಸೌಭಾಗ್ಯ? ನಿಂತಲ್ಲೆ ಪುಳಕಿತನಾದ ನಾನು 'ಆಯ್ತು ಸಾರ್!' ಎಂದೆ. ಆನಂದಭಾಷ್ಪ ತುಂಬಿ ಹರಿಯಲು ಅಣಿಯಾದವು. ಮೂಡಿಗೆರೆಯ ಫೋಟೋ ಸ್ಟುಡಿಯೊಂದರ ಪ್ರತಿನಿಧಿಯು ಕ್ಯಾಮಾರದ ಕಣ್ಣು ನಮ್ಮನ್ನು ಸೆರೆಹಿಡಿಯಿತು ಎಂಬುವಕ್ಕೆ ಖಾತರಿಯಾಗಿ ಬೆಳಕು ನನ್ನ ಮುಖದ ಮೇಲೆಲ್ಲ ಫಳಕ್.. ಫಳಕ್ ಎಂದಿತು. ಪುನೀತ್ ರಾಜ್‌ಕುಮಾರ್‌ರವರ ಕೈಗೆ ನನ್ನ 'ಕಾಲಗರ್ಭ' ಪುಸ್ತಿಕೆ ಕೈಗಿಟ್ಟು 'ಆಯ್ತು ಸಾರ್, ಥ್ಯಾಂಕ್ಯೂ ಸಾರ್' ಎಂದೆ. ಓಕೆ ಗುಡ್‌ಲಕ್ ಎಂದರವರು. ಸಂತೋಷ ಅಧಿಕವಾಗಿ ಗಂಟಲು ತುಂಬಿ ಮಾತು ಹೊರಡಲಿಲ್ಲವೇನೋ, ತೇಜಸ್ವಿಯವರ ಬೆನ್ನು ಸ್ಪರ್ಶಿಸಿ ಮೂಕ ಭಾಷೆಯಲ್ಲೆ ನನ್ನ ಎದೆ ಮುಟ್ಟಿಕೊಂಡು ನಮಸ್ಕರಿಸಿ ವೇದಿಕೆಯಿಂದ ಕೆಳಗಿಳಿದೆ.

ಮರುದಿನ ಸ್ಟುಡಿಯೋಕ್ಕೆ ಹೋಗಿ ಫೋಟೋ ಕೇಳಿದರೆ 'ಮೆಮೋರಿ ಕಾರ್ಡ್‌ನಿಂದ ಕಾಪಿ ಮಾಡಿ ಎಡಿಟ್ ಮಾಡುವಾಗ ಡಿಲೀಟ್ ಆಗಿರಬೇಕು ಸಾರ್. ಸಾರಿ!' ಎಂದು ನಗಾಡಿದರು ಆ ಸ್ಟುಡಿಯೋದ ಮಾಲೀಕರು. ಆಗ ಹರ್ಷ ಚಿತ್ತ ಹೃದಯದ ವಾತ ತುಸು ಕುಗ್ಗಿ ಕಂಪಿಸಿತು. ರೋಲ್ ಕ್ಯಾಮಾರವಾಗಿದ್ದರೆ ಸಾಕ್ಷಿಯಾಗಿ ನೆಗೆಟೀವ್ ಆದರೂ ಇರುತ್ತಿತ್ತಲ್ಲ! ಎಂಬ ಮನಃ ಒತ್ತರಿಸಿ ಬಂತು. ನಿಜ, ಕವಿ ಬಿ.ಆರ್. ಲಕ್ಷ್ಮಣರಾವ್ ಅವರ 'ಕ್ಯಾಮಾರ ಕಣ್ಣು' ಕವಿತೆಯ ಆಶಾಪದ್ಧ ಇದೆ ಅಲ್ಲವೇ?! ಇದು ನಿಜ. ಈಗ ಫೋಟೋ ತೆಗೆಸಿಕೊಳ್ಳುವ ಹುಚ್ಚು ಭ್ರಮೆಯಿಂದ ದೂರ ಬಂದಿದ್ದೇನೆ ಎಂದೆನಿಸಿದರೂ ಒಮ್ಮೊಮ್ಮೆ ಮತ್ತದೇ ಸಾಹಸಕ್ಕೆ ಬಲಿಯಾಗುತ್ತಿರುತ್ತೇನೆ.

ಮೊನ್ನೆಯಷ್ಟೇ ಮೂಡಿಗೆರೆ ಚರ್ಚ್ ಎದುರುಗಿನ ರಸ್ತೆಯಲ್ಲಿ ನಾನು, ನನ್ನ ಸಹೋದರಿ ನಡೆದು ಹೋಗುತ್ತಿದ್ದಾಗ ಅವಳು ಹೇಳಿದಳು. "ಸಂಪತ್ತಣ್ಣ, ಅವತ್ತೊಂದು ದಿನ ನಾನು ಮತ್ತೆ ಅಮ್ಮ ಇದೇ ರಸ್ತೆಯಲ್ಲಿ ಸಾಗುವಾಗ ತೇಜಸ್ವಿಯವರು ಸ್ಕೂಟರ್‌ನಲ್ಲಿ ಹೋಗ್ತಾ ಇದ್ರು! ನಾನಾಗ ಅಮ್ಮ ತೇಜಸ್ವಿ ಅಂತ ಕಿರುಚಿಕೊಂಡೆ. ಅಮ್ಮ ಎಲ್ಲಿ? ಎಲ್ಲಿ? ಎಂದರೆ. ನಾನು 'ಅಲ್ಲಿ! ಅಲ್ಲಿ!' ಎಂದು ಕೈತೋರಿಸಿದೆ. ತೇಜಸ್ವಿಯವರು ಒಮ್ಮೆ ಹಿಂದಿರುಗಿ ನೋಡಿದರು. ಭಯವಾಯ್ತು ನನಗೆ ಬೈಯ್ತಾರೆ ಅಂತ. ನಮ್ಮ ಪುಣ್ಯ.. ಅವರೂ ಅವರು ಏನೂ ಅನ್ನಲಿಲ್ಲ. ಮುಂದೆ ಹೋದರು..'ಹೌದು ಇಂತಹ ನೂರೊಂದು ಹೃದಯಕತೆಗಳನ್ನು ಮೂಡಿಗೆರೆಯ ಪ್ರತಿ ರಸ್ತೆಗಳೂ ಪಿಸುಗುಟ್ಟಿ ಹೇಳುತ್ತವೆ. ಆಗ ತೇಜಸ್ವಿ ನೆನಪಾಗುತ್ತಾರೆ. ಎರಡು ಸಾವಿರದ ಏಳು. ಪೂರ್ಣಚಂದ್ರ ಇಹಲೋಕಕ್ಕೆ ರಜೆ ಹಾಕಿದ ವರ್ಷ ಅದು. ಎರಡು ಸಾವಿರದ ಎಂಟನೇ ಇಸವಿಯಲ್ಲಿ ಅವರ ಬದುಕು ಮತ್ತು ಬರಹದ ಕುರಿತಾದ 'ಮೂಡಿಗೆರೆಯ ಮುದ್ದು ಹಕ್ಕಿ' ಎಂಬ ಕೃತಿಯೊಂದನ್ನು ಬೆಂಗಳೂರಿನ ಸುಮುಖ ಪ್ರಕಾಶನದ ಸಹಕಾರದೊಂದಿಗೆ ಹೊರತಂದೆ. ಈ ಪುಟ್ಟ ಪುಸ್ತಿಕೆಯನ್ನು ರಾಜೇಶ್ವರಿ ಮೇಡಂಗೆ ಕೊಡಲು ಹ್ಯಾಂಡ್‌ಪೋಸ್ಟ್‌ನ ಅವರ ನಿರುತ್ತರ ತೋಟದ ಮನೆಗೆ ಹೋದಾಗ ಅವರು ಕೇಳಿದ ಪ್ರಶ್ನೆ. 'ತೇಜಸ್ವಿ ಅಂದ್ರೆ ನಿಮಗ್ಯಾಕೆ ಅಷ್ಟು ಇಷ್ಟ?' ಅವರ ಕಣ್ಣುಗಳಲ್ಲಿ ನೀರ ಹನಿಗಳು... ದುಃಖವೋ? ಆನಂದ ಭಾಷ್ಪವೋ? ಒಟ್ಟಾರೆ ತುಂಬಿ ತೊಟ್ಟಿಕ್ಕಲು ಅಣಿಯಾದವು. ಆ ಕ್ಷಣ ಉತ್ತರ ಹೇಳಬೇಕೆಂದಿದ್ದ ನನ್ನ ಗಂಟಲು ಕಟ್ಟಿ ಮೌನವಹಿಸಿತು. ನಿಜ. ತೇಜಸ್ವಿ ಎಂದರೆ ಮಾತು ಮೌನವಾಗಿ ಉಳಿಯುತ್ತೆ. ಆ ಮೌನ ನೆನಪಾಗಿ ಕಾಡುತ್ತದೆ.

■ ಸಂಪತ್ ಬೆಟ್ಟಗೆರೆ. ಬೆಟ್ಟಗೆರೆ,
8762267491

ಕರೀಂಖಾನ್‌ಗೆ ಜಾನಪದ ಭೀಷ್ಮ ಜೀಶಂಪ ಪ್ರಶಸ್ತಿ

ಗ್ರಾಮೀಣ ಕಲೆ ಸಾಹಿತ್ಯಕ್ಕೆ ಜೀವಮಾನವನ್ನೇ ಅರ್ಪಿಸಿಕೊಂಡ ಡಾ. ಜೀ.ಶಂ. ಪರಮಶಿವಯ್ಯ ಮಂಡ್ಯ ಜಿಲ್ಲೆ ನಾಗಮಂಗಲದ ಆದಿಚುಂಚನಗಿರಿಯ ತಪ್ಪಲಿನಲ್ಲಿರುವ ಅಂಚಲಿ ಜೀರಹಳ್ಳಿಯ ರೈತ ಕುಟುಂಬದಲ್ಲಿ ಹುಟ್ಟಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ಜಾನಪದ ವಿದ್ವಾಂಸರು.

ಬಾಲ್ಯದಲ್ಲಿಯೇ ಗ್ರಾಮೀಣ ಕಲೆ ಸಾಹಿತ್ಯದ ಬಗ್ಗೆ ಆಸಕ್ತಿ ಕುದುರಿಸಿಕೊಂಡ ಜೀಶಂಪ ಅವರು ಎಂ.ಎ. ಪದವಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದರು. ಗುಮಾಸ್ತರಾಗಿ ಕಾಲೇಜು ಶಿಕ್ಷಕರಾಗಿ, ಕುಲಪತಿಗಳ ಆಪ್ತ ಕಾರ್ಯದರ್ಶಿಗಳಾಗಿ, ಜಾನಪದ ಮತ್ತು ಯಕ್ಷಗಾನ ಅಕಾಡಮಿ ಅಧ್ಯಕ್ಷರಾಗಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿ ದುಡಿದರು. ಜಾನಪದ ತಿಮಿಂಗಿಲ, ಜಾನಪದ ಭೀಷ್ಮ, ಜಾನಪದ ಜಂಪ ಇತ್ಯಾದಿ ಬಿರುದು ಪಡೆದವರು.

ಸೃಜನ ಸಾಹಿತಿಯಾಗಿ, ಜನಪದ ಸಂಗ್ರಹಕರಾಗಿ ಸಂಪಾದಕರಾಗಿ 85 ಕೃತಿಗಳನ್ನು ಪ್ರಕಟಿಸಿದ ಜೀಶಂಪ ವಿದ್ಯಾರ್ಥಿ ದಸೆಯಲ್ಲಿಯೇ 'ದಿಬ್ಬದಾಚೆ' ಎಂಬ ಕವನ ಸಂಕಲನ ಪ್ರಕಟಿಸಿದರು.

ಬುನಾದಿ

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಭದ್ರವಾದ ಬುನಾದಿ ಹಾಕಿದ ಕೀರ್ತಿ ಡಾ.ದೇ. ಜವರೇಗೌಡರಿಗೆ, ಮೈಸೂರು ವಿಶ್ವವಿದ್ಯಾನಿಲಯಕ್ಕೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲಬೇಕು. 1967 ರಲ್ಲಿ ಕನ್ನಡ ಎಂ.ಎ. ತರಗತಿಯ ಪತ್ರದಲ್ಲಿ ಐಚ್ಛಿಕವಾಗಿ ಜಾನಪದ ಪತ್ರಿಕೆ ಸೇರಿಸಿದ್ದು, ಭಾರತದಲ್ಲಿ ಮೊಟ್ಟಮೊದಲ ಬಾರಿಗೆ 1974 ರಲ್ಲಿ ಪೂರ್ಣ ಪ್ರಮಾಣದಲ್ಲಿ ಜಾನಪದ ಎಂ.ಎ. ತರಗತಿಯನ್ನು ಪ್ರಾರಂಭಿಸಲಾಯಿತು. ಜಾನಪದ . ಡಿಪ್ಲಮೊ ಜೊತೆಗೆ ಜಾನಪದ ಸಂಶೋಧನಾ ವಿಭಾಗದಲ್ಲಿ ಜೀಶಂಪ ಅವರ ಶ್ರದ್ಧೆ, ಕಾರ್ಯತತ್ಪರತೆ ಕಾಣಬಹುದಾಗಿದೆ.

ಜಿ.ಶಂ.ಪರಮಶಿವಯ್ಯ

ಕಥೆ, ಪ್ರಬಂಧ, ಕಾದಂಬರಿ, ಜೀವನ ಚಿತ್ರಗಳ ಜೊತೆಗೆ ಮಕ್ಕಳ ಪುಸ್ತಕ ರಚನೆಯಲ್ಲಿಯೂ ಕೈಯಾಡಿಸಿರುವ ಜೀಶಂಪ, ಕಲಾವಿದರ ಒಡನಾಟದಲ್ಲಿ ಮನೆ ಮಠವನ್ನೇ ಮರೆತವರು. ಕಂಸಾಳೆ, ಕಿನ್ನರಿ, ತಂಬೂರಿ ಹಿಡಿದವರ ಹಿಂದೆ ಬಿದ್ದವರು. ಅವರ ಸಾಹಿತ್ಯ ಸಂಗ್ರಹದ ಜೊತೆಗೆ ಕಲಾವಿದರ ಬದುಕು ಹಸನಾಗಲು ಪ್ರಯತ್ನಿಸಿದವರು.

ಡಾ. ಜೀಶಂಪ ಅವರ ಶಿಷ್ಯರು ಅಭಿಮಾನಿಗಳು ಜನ್ಮದಿನವಾದ ನವೆಂಬರ್ 12 ರಂದು ಪ್ರತಿವರ್ಷ ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ಮಹನೀಯರಿಗೆ 'ಜೀಶಂಪ ಜಾನಪದ ಪ್ರಶಸ್ತಿ' ನೀಡಲು ಮುಂದಾಗಿರುವುದು ಶ್ಲಾಘನೀಯ.

ನ. 12 ರಂದು ಕರೀಂಖಾನ್ ಅವರಿಗೆ ಪ್ರಶಸ್ತಿ ವಿತರಣೆ

'ಸ್ವಾತಂತ್ರ್ಯ ಹೋರಾಟಗಾರ, ಜಾನಪದ ಸಂಗ್ರಾಹಕ, ಹಾಡುಗಾರ 95 ವರ್ಷದ ಡಾ. ಎಸ್.ಕೆ. ಕರೀಂಖಾನ್ ಅವರಿಗೆ 'ಡಾ. ಜೀಶಂಪ ಜಾನಪದ ಪ್ರಶಸ್ತಿ' ನೀಡುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಕಥೆ, ಪ್ರಬಂಧ, ಕಾದಂಬರಿ, ಜೀವನ ಚಿತ್ರಗಳ ಜೊತೆಗೆ ಮಕ್ಕಳ ಪುಸ್ತಕ ರಚನೆಯಲ್ಲಿಯೂ ಕೈಯಾಡಿಸಿರುವ ಜೀಶಂಪ, ಕಲಾವಿದರ ಒಡನಾಟದಲ್ಲಿ ಮನೆ ಮಠವನ್ನೇ ಮರೆತವರು. ಕಂಸಾಳೆ, ಕಿನ್ನರಿ, ತಂಬೂರಿ ಹಿಡಿದವರ ಹಿಂದೆ ಬಿದ್ದವರು. ಅವರ ಸಾಹಿತ್ಯಸಂಗ್ರಹದ ಜೊತೆಗೆ ಕಲಾವಿದರ ಬದುಕು ಹಸನಾಗಲು ಪ್ರಯತ್ನಿಸಿದವರು.

ಮೂರನೆಯ ಆಫ್ಘಾನಿಸ್ತಾನದ ಯುದ್ಧದಲ್ಲಿ ಯೋಧರಾಗಿದ್ದ ಅಬ್ದುಲ್ ರೆಹಮಾನ್ ಖಾನ್ ಭಾರತಕ್ಕೆ ಬಂದರು. ಹಾಸನ ಜಿಲ್ಲೆ ಸಕಲೇಶಪುರದ ಪ್ರಕೃತಿಗೆ ಬೆಳಗಾಗಿ ನೆಲೆ ನಿಂತರು. ಬಾಲ್ಯದಲ್ಲಿಯೇ ಕರೀಂಖಾನರು ಭಾರತೀಯತೆಯನ್ನು ಮೈಗೂಡಿಸಿಕೊಂಡರು ನಾರಾಯಣ ಶಾಸ್ತ್ರಿಗಳಿಂದ ಸಂಸ್ಕೃತ ಕಲಿತರು. ಉರ್ದು ಹಿಂದಿ ಇಂಗ್ಲಿಷ್ ಕನ್ನಡ ವಿದ್ವಾಂಸರಾದ ಇವರಿಗೆ ಬಾಣಭಟ್ಟನ ಕಾದಂಬರಿ, ವ್ಯಾಸ ವಾಲ್ಮೀಕಿಗಳ ಭಾರತ ರಾಮಾಯಣ ಬಹಳ ಪ್ರಿಯವಾಗಿದ್ದು ಸ್ವಾತಂತ್ರ್ಯ ಪೂರ್ವದಲ್ಲಿ

ಎಸ್.ಕೆ.ಕರೀಂಖಾನ್

ಜನಪದ ಲಾವಣಿ ರಚಿಸಿ ಜನರಿಗೆ ಸ್ವಾತಂತ್ರ್ಯದ ಮಹತ್ವ ತಿಳಿಸಿದರು.

1921 ರಲ್ಲಿ ನಡೆದ ಖಿಲಾಫತ್ ಚಳುವಳಿ ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿಸಿತು. ದೇಶಭಕ್ತಿ ಗೀತೆ ರಚಿಸಿ ಹಾಡುವಾಗ ಜನ ಸಂತೆ ಸೇರುತ್ತಿದ್ದರು. ಬ್ರಿಟೀಷರ ಕೆಂಗಣ್ಣಿಗೆ ಬಿದ್ದ ಕರೀಂಖಾನರು 7 ಸಲ ಸೆರೆಮನೆ ಸೇರಿದರು. ನಂದಿಬೆಟ್ಟದಲ್ಲಿ ಒಂದು ತಿಂಗಳು ಗಾಂಧೀಜಿ ವಾಸ್ತವ್ಯ ಹೂಡಿದಾಗ ಅವರ ಸಹವಾಸ ಪ್ರೇರಣೆಯಿಂದ ಮತ್ತಷ್ಟು ಹುರುಪು ಬಂತು.

ರಾಷ್ಟ್ರ ಪ್ರಶಸ್ತಿ

ಶಾಸ್ತ್ರೀಯ ಸಂಗೀತವನ್ನು [illegible] ಜನಪದ ಸಾಹಿತ್ಯ ಸಂಗ್ರಹ ಮಾಡಿ ಪ್ರಕಟಿಸಿದ್ದ ಕರೀಂಖಾನರು ಚಿತ್ರ ಜಗತ್ತಿನಲ್ಲಿ ಪಾದ ಬೆಳೆಸಿದರು. 'ಸ್ವರ್ಣಗೌರಿ' ಚಿತ್ರಕ್ಕೆ ಸಾಹಿತ್ಯ ಸಂಭಾಷಣೆ ಗೀತೆ ರಚಿಸಿದರು. ಮೊದಲ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂತು.

ಕರೀಂಖಾನರಿಗೆ ಸರ್ಕಾರ ಮಾಸಿಕ 500 ರೂ. ಗೌರವ ಧನ ಮಂಜೂರು ಮಾಡಿತು. ಗುಲಬರ್ಗಾ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿತು. ಸರ್ಕಾರ ರಾಜ್ಯ ಜಾನಪದ ಅಕಾಡಮಿಗೆ ಅಧ್ಯಕ್ಷರನ್ನಾಗಿ ಮಾಡಿತು.

ಡಾ. ಎಸ್.ಕೆ. ಕರೀಂಖಾನ್ ಅವರಿಗೆ ಡಾ. ಜೀಶಂಪ ಜಾನಪದ ಪ್ರಶಸ್ತಿ ಬಂದಿರುವುದು ಕನ್ನಡಿಗರಿಗೆಲ್ಲ ಹರ್ಷದಾಯಕ ಸಂಗತಿ ಆಗಿದೆ.

– ಡಾ. ಅರ್ಜುನಪುರಿ ಅಪ್ಪಾಜಿಗೌಡ
ಮದ್ದೂರು

10th Nov 1995 PRAJAVANI

ಕರೀಂಖಾನ್‌ಗೆ ಜಾನಪದ ಭೀಷ್ಮ ಜೀಶಂಪ ಪ್ರಶಸ್ತಿ

ಗ್ರಾಮೀಣ ಕಲೆ ಸಾಹಿತ್ಯಕ್ಕೆ ಜೀವಮಾನವನ್ನೇ ಅರ್ಪಿಸಿಕೊಂಡ ಡಾ. ಜೀ.ಶಂ. ಪರಮಶಿವಯ್ಯ ಮಂಡ್ಯ ಜಿಲ್ಲೆ ನಾಗಮಂಗಲದ ಆದಿಚುಂಚನಗಿರಿಯ ತಪ್ಪಲಿನಲ್ಲಿರುವ ಅಂಬಲ ಜೇರಹಳ್ಳಿಯ ರೈತ ಕುಟುಂಬದಲ್ಲಿ ಹುಟ್ಟಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ಜಾನಪದ ವಿದ್ವಾಂಸರು.

ಬಾಲ್ಯದಲ್ಲಿಯೇ ಗ್ರಾಮೀಣ ಕಲೆ ಸಾಹಿತ್ಯದ ಬಗ್ಗೆ ಆಸಕ್ತಿ ಕುದುರಿಸಿಕೊಂಡ ಜೀಶಂಪ ಅವರು ಎಂ.ಎ. ಪದವಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದರು. ಗುಮಾಸ್ತರಾಗಿ ಕಾಲೇಜು ಶಿಕ್ಷಕರಾಗಿ, ಕುಲಪತಿಗಳ ಆಪ್ತ ಕಾರ್ಯದರ್ಶಿಗಳಾಗಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿ ದುಡಿದರು. ಜಾನಪದ ತಿಮಿಂಗಿಲ, ಜಾನಪದ ಭೀಷ್ಮ, ಜಾನಪದ ಪಂಪ ಇತ್ಯಾದಿ ಬಿರುದು ಪಡೆದವರು.

ಸೃಜನ ಸಾಹಿತಿಯಾಗಿ, ಜನಪದ ಸಂಗ್ರಹಕರಾಗಿ ಸಂಪಾದಕರಾಗಿ 85 ಕೃತಿಗಳನ್ನು ಪ್ರಕಟಿಸಿದ ಜೀಶಂಪ ವಿದ್ಯಾರ್ಥಿ ದಸೆಯಲ್ಲಿಯೇ '[illegible]' ಎಂಬ ಕವನ ಸಂಕಲನ ಪ್ರಕಟಿಸಿದರು.

ಬುನಾದಿ

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಭದ್ರವಾದ ಬುನಾದಿ ಹಾಕಿದ ಕೀರ್ತಿ ಡಾ.ದೇ. ಜವರೇಗೌಡರಿಗೆ, ಮೈಸೂರು ವಿಶ್ವವಿದ್ಯಾನಿಲಯಕ್ಕೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲಬೇಕು. 1967 ರಲ್ಲಿ ಕನ್ನಡ ಎಂ.ಎ. ತರಗತಿಯ ಪಠ್ಯದಲ್ಲಿ ಐಚ್ಛಿಕವಾಗಿ ಜಾನಪದ ಪತ್ರಿಕೆ ಸೇರಿಸಿದ್ದು, ಭಾರತದಲ್ಲಿ ಮೊಟ್ಟಮೊದಲ ಬಾರಿಗೆ 1974 ರಲ್ಲಿ ಪೂರ್ಣ ಪ್ರಮಾಣದಲ್ಲಿ ಜಾನಪದ ಎಂ.ಎ. ತರಗತಿಯನ್ನು ಪ್ರಾರಂಭಿಸಲಾಯಿತು. ಜಾನಪದ ಡಿಪ್ಲೊಮೊ ಜೊತೆಗೆ ಜಾನಪದ ಸಂಶೋಧನಾ ವಿಭಾಗದಲ್ಲಿ ಜೀಶಂಪ ಅವರ ಶ್ರದ್ಧೆ, ಕಾರ್ಯತತ್ಪರತೆ ಕಾಣಬಹುದಾಗಿದೆ.

ಜಿ.ಶಂ.ಪರಮಶಿವಯ್ಯ

ಕಥೆ, ಪ್ರಬಂಧ, ಕಾದಂಬರಿ, ಜೀವನ ಚಿತ್ರಗಳ ಜೊತೆಗೆ ಮಕ್ಕಳ ಪುಸ್ತಕ ರಚನೆಯಲ್ಲಿಯೂ ಕೈಯಾಡಿಸಿರುವ ಜೀಶಂಪ, ಕಲಾವಿದರ ಒಡನಾಟದಲ್ಲಿ ಮನೆ ಮಠವನ್ನೇ ಮರೆತವರು. ಕಂಸಾಳೆ, ಕಿನ್ನರಿ, ತಂಬೂರಿ ಹಿಡಿದವರ ಹಿಂದೆ ಬಿದ್ದವರು. ಅವರ ಸಾಹಿತ್ಯ ಸಂಗ್ರಹದ ಜೊತೆಗೆ ಕಲಾವಿದರ ಬದುಕು ಹಸನಾಗಲು ಪ್ರಯತ್ನಿಸಿದವರು

ಡಾ. ಜೀಶಂಪ ಅವರ ಶಿಷ್ಯರು ಅಭಿಮಾನಿಗಳೂ ಜನ್ಮದಿನವಾದ ನವೆಂಬರ್ 12 ರಂದು ಪ್ರತಿವರ್ಷ ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ಮಹನೀಯರಿಗೆ 'ಜೀಶಂಪ ಜಾನಪದ ಪ್ರಶಸ್ತಿ' ನೀಡಲು ಮುಂದಾಗಿರುವುದು ಶ್ಲಾಘನೀಯ.

ನ. 12 ರಂದು ಕರೀಂಖಾನ್ ಅವರಿಗೆ ಪ್ರಶಸ್ತಿ ವಿತರಣೆ

'ಸ್ವಾತಂತ್ರ್ಯ ಹೋರಾಟಗಾರ, ಜಾನಪದ ಸಂಗ್ರಾಹಕ, ಹಾಡುಗಾರ 95 ವರ್ಷದ ಡಾ. ಎಸ್.ಕೆ. ಕರೀಂಖಾನ್ ಅವರಿಗೆ 'ಡಾ. ಜೀಶಂಪ ಜಾನಪದ ಪ್ರಶಸ್ತಿ' ನೀಡುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಕಥೆ, ಪ್ರಬಂಧ, ಕಾದಂಬರಿ, ಜೀವನ ಚಿತ್ರಗಳ ಜೊತೆಗೆ ಮಕ್ಕಳ ಪುಸ್ತಕ ರಚನೆಯಲ್ಲಿಯೂ ಕೈಯಾಡಿಸಿರುವ ಜೀಶಂಪ, ಕಲಾವಿದರ ಒಡನಾಟದಲ್ಲಿ ಮನೆ ಮಠವನ್ನೇ ಮರೆತವರು. ಕಂಸಾಳೆ, ಕಿನ್ನರಿ, ತಂಬೂರಿ ಹಿಡಿದವರ ಹಿಂದೆ ಬಿದ್ದವರು. ಅವರ ಸಾಹಿತ್ಯಸಂಗ್ರಹದ ಜೊತೆಗೆ ಕಲಾವಿದರ ಬದುಕು ಹಸನಾಗಲು ಪ್ರಯತ್ನಿಸಿದವರು.

ಮೂರನೆಯ ಆಫ್ಘಾನಿಸ್ತಾನದ ಯುದ್ಧದಲ್ಲಿ ಯೋಧರಾಗಿದ್ದ ಅಬ್ದುಲ್ ರೆಹಮಾನ್ ಖಾನ್ ಭಾರತಕ್ಕೆ ಬಂದರು. ಹಾಸನ ಜಿಲ್ಲೆ ಸಕಲೇಶಪುರದ ಪ್ರಕೃತಿಗೆ ಬೆರಗಾಗಿ ನೆಲೆ ನಿಂತರು. ಬಾಲ್ಯದಲ್ಲಿಯೇ ಕರೀಂಖಾನರು ಭಾರತೀಯತೆಯನ್ನು ಮೈಗೂಡಿಸಿಕೊಂಡರು. ನಾರಾಯಣ ಶಾಸ್ತ್ರಿಗಳಿಂದ ಸಂಸ್ಕೃತ ಕಲಿತರು. ಉರ್ದು ಹಿಂದಿ ಇಂಗ್ಲಿಷ್ ಕನ್ನಡ ವಿದ್ವಾಂಸರಾದ ಇವರಿಗೆ ಬಾಣಭಟ್ಟನ ಕಾದಂಬರಿ, ವ್ಯಾಸ ವಾಲ್ಮೀಕಿಗಳ ಭಾರತ ರಾಮಾಯಣ ಬಹಳ ಪ್ರಿಯವಾಗಿದ್ದು ಸ್ವಾತಂತ್ರ್ಯ ಪೂರ್ವದಲ್ಲಿ

ಎಸ್.ಕೆ.ಕರೀಂಖಾನ್

ಜನಪದ ಲಾವಣಿ ರಚಿಸಿ ಜನರಿಗೆ ಸ್ವಾತಂತ್ರ್ಯದ ಮಹತ್ವ ತಿಳಿಸಿದರು.

1921 ರಲ್ಲಿ ನಡೆದ ಖಿಲಾಫತ್ ಚಳುವಳಿ ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿಸಿತು. ದೇಶಭಕ್ತಿ ಗೀತೆ ರಚಿಸಿ ಹಾಡಿದಾಗ ಜನ ಸಂತೆ ಸೇರುತ್ತಿದ್ದರು. ಬ್ರಿಟಿಷರ ಕೆಂಗಣ್ಣಿಗೆ ಬಿದ್ದ ಕರೀಂಖಾನರು 7 ಸಲ ಸೆರೆಮನೆ ಸೇರಿದರು. [illegible] ಒಂದು ತಿಂಗಳು ಗಾಂಧೀಜಿ ವಾಸ್ತವ್ಯ ಹೂಡಿದಾಗ ಅವರ ಸಹವಾಸ ಪ್ರೇರಣೆಯಿಂದ ಮತ್ತಷ್ಟು ಹುರುಪು ಬಂತು.

ರಾಷ್ಟ್ರ ಪ್ರಶಸ್ತಿ

ಶಾಸ್ತ್ರೀಯ ಸಂಗೀತವನ್ನು [illegible] ಜನಪದ ಸಾಹಿತ್ಯ ಸಂಗ್ರಹ ಮಾಡಿ ಪ್ರಕಟಿಸಿದ್ದ ಕರೀಂಖಾನರು ಚಿತ್ರ ಜಗತ್ತಿನಲ್ಲಿ ಪಾದ ಬೆಳೆಸಿದರು. 'ಸ್ವರ್ಣಗೌರಿ' ಚಿತ್ರಕ್ಕೆ ಸಾಹಿತ್ಯ, ಸಂಭಾಷಣೆ ಗೀತೆ ರಚಿಸಿದರು. ಮೊದಲ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂತು.

ಕರೀಂಖಾನರಿಗೆ ಸರ್ಕಾರ ಮಾಸಿಕ 500 ರೂ. ಗೌರವ ಧನ ಮಂಜೂರು ಮಾಡಿತು. ಗುಲಬರ್ಗಾ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿತು. ಸರ್ಕಾರ ರಾಜ್ಯ ಜಾನಪದ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ಮಾಡಿತು.

ಡಾ. ಎಸ್.ಕೆ. ಕರೀಂಖಾನ್ ಅವರಿಗೆ ಡಾ. ಜೀಶಂಪ ಜಾನಪದ ಪ್ರಶಸ್ತಿ ಬಂದಿರುವುದು ಕನ್ನಡಿಗರಿಗೆಲ್ಲ ಹರ್ಷದಾಯಕ ಸಂಗತಿ ಆಗಿದೆ.

– ಡಾ. ಅರ್ಜುನಪುರಿ ಅಪ್ಪಾಜಿಗೌಡ
ಮದ್ದೂರು

10th Nov 1995 PRAJAVANI

ಎಂಜಲಿಗೆ ಓಟು ಮಾರಿದ ಮೇಲೆ ರಾಜಕಾರಣಿಗಳನ್ನು ದೂರುವುದು ಹೇಗೆ?

ಕರೀಂಖಾನ್ ವ್ಯಥೆ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಶನಿವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಡಾ. ಎಸ್.ಕೆ. ಕರೀಂಖಾನ್ ಭಾಗವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಆ.ರಾ. ಚಂದ್ರಹಾಸಗುಪ್ತ ಚಿತ್ರದಲ್ಲಿದ್ದಾರೆ.

ಬೆಂಗಳೂರು, ಮೇ 19-ಒಂದು ಚೂರು ಮಾಂಸ...ಚೂರು ಸಾರಾಯಿ... ಬಿಡಿಗಾಸಿಗೆ ಓಟು ಪಡೆದು ಜನಪ್ರತಿನಿಧಿಗಳಾಗುವ ಈಗಿನ ರಾಜಕಾರಣಿಗಳಿಂದ ನಾವು ಏನನ್ನು ನಿರೀಕ್ಷಿಸಲು ಸಾಧ್ಯ? ಸ್ವಾತಂತ್ರ್ಯಕ್ಕೆ ಮೊದಲು ಒಂದು ರೂ.ಗೆ 16 ಸೇರು ಸಣ್ಣಕ್ಕಿ ಸಿಗುತ್ತಿತ್ತು, ಒಂದು ರೂ.ಗೆ ಎಂಟು ಸೇರು ತೊಗರಿಬೇಳೆ ಸಿಗುತ್ತಿತ್ತು. ಆದರೆ ಈಗ.... ಸ್ವಾತಂತ್ರ್ಯಪೂರ್ವ ಹಾಗೂ ಈಗಿನ ವ್ಯವಸ್ಥೆ ನಡುವಿನ ಅಂತರವನ್ನು ಹೀಗೆ ಬಿಡಿಸಿಟ್ಟವರು ಖ್ಯಾತ ಜಾನಪದ ತಜ್ಞ ಡಾ. ಎಸ್.ಕೆ. ಕರೀಂಖಾನ್.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇಂದು ಇಲ್ಲಿ ಏರ್ಪಡಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ ನಾಗರಿಕರೊಂದಿಗೆ ಸಂವಾದ ನಡೆಸಿದ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಆಡಳಿತ ವ್ಯವಸ್ಥೆ ಹಾಗೂ ಈಗಿನ ವ್ಯವಸ್ಥೆಯ ಬಗ್ಗೆ ತಮ್ಮದೆ ಆದ ಧಾಟಿಯಲ್ಲಿ ವರ್ಣಿಸಿದರು.

ನಮ್ಮ ಶತ್ರುಗಳು ಆಳುತ್ತಿದ್ದ ಸ್ವಾತಂತ್ರ್ಯದ ಪೂರ್ವದ ದಿನಗಳಲ್ಲಿ 1 ರೂ.ಗೆ 16 ಸೇರು ಸಣ್ಣಕ್ಕಿ ಸಿಗುತ್ತಿದ್ದರೆ, ಅಕ್ಬರ್‌ನ ಕಾಲದಲ್ಲಿ ಒಂದು ರೂ.ಗೆ 60 ಸೇರು ಹಾಲು, 40 ಸೇರು ತುಪ್ಪ ಸಿಗುತ್ತಿತ್ತು. ಜಹಾಂಗೀರನ ಕಾಲದಲ್ಲಿ ರಸ್ತೆಗಳಲ್ಲಿಯೇ ಸಾಮೂಹಿಕ ಊಟದ ವ್ಯವಸ್ಥೆ ಇರುತ್ತಿತ್ತು. ಅಂದು ನಮ್ಮ ಶತ್ರುಗಳಾದ ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಇಂತಹ ವ್ಯವಸ್ಥೆ ಇತ್ತು. ಆದರೆ ಇಂದು ನಮ್ಮವರೆ ಆಳುತ್ತಿದ್ದಾರೆ. ಪುಡಿಗಾಸಿಗೆ, ಚೂರು ಸಾರಾಯಿಗೆ, ಚೂರು ಮಾಂಸದ ಆಸೆಯನ್ನು ಜನರಿಗೆ ತೋರಿಸಿ ಇವರೆಲ್ಲ ಆರಿಸಿ ಬಂದಿದ್ದಾರೆ. ಇಂತಹವರಿಂದ ಸಮಾಜ ಏನನ್ನು ನಿರೀಕ್ಷಿಸಲು ಸಾಧ್ಯ? ಎಂದು ಹೇಳುವಾಗ ಅವರ ಮನಸ್ಸಿನಲ್ಲಿ ಈಗಿನ ವ್ಯವಸ್ಥೆ ಬಗ್ಗೆ ತೀವ್ರ ಅಸಮಾಧಾನ ಕಂಡುಬಂದಿತು.

ರಾಜಕೀಯವಾಗಿ ನನಗೆ ಸಿಗಬೇಕಾದುದು ಸಿಗಲಿಲ್ಲ: ರಾಜಕೀಯದಲ್ಲಿಯೂ ಭಾಗವಹಿಸಿದ್ದೇನೆ. ಕೆ.ಸಿ. ರೆಡ್ಡಿ, ಟಿ. ಸಿದ್ದಲಿಂಗಯ್ಯ, ಟಿ. ಮರಿಯಪ್ಪ, ಭೀಮಾನಾಯಕ್ ಮೊದಲಾದವರ ಪರವಾಗಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿ ಅವರ ಗೆಲುವಿಗೆ ಶ್ರಮಿಸಿದ್ದೇನೆ. ಆದರೆ ರಾಜಕೀಯವಾಗಿ ನನಗೆ ಏನು ಸಿಗಬೇಕಾಗಿತ್ತೋ ಅದು ಸಿಗಲಿಲ್ಲ, ನನಗೆ ಒಂದು ಸೂರು ಲಭ್ಯವಾಗಲಿಲ್ಲ. ಬಹುಶಃ ದೇವರು ಇವರಿಗೆ (ರಾಜಕಾರಣಿಗಳಿಗೆ) ಕೊಟ್ಟಿಲ್ಲ ಅಂಥಾ ಕಾಣುತ್ತೆ, ಆದ್ದರಿಂದ ಇವರು ನನಗೆ ಕೊಟ್ಟಿಲ್ಲ... ಸರ್ಕಾರ ತಮಗೆ ಮನೆ ನೀಡುವುದಾಗಿ ಹಲವಾರು ಬಾರಿ ಹೇಳಿದ್ದರೂ ಅದು ಈಡೇರದೆ ಇರುವ ಬಗ್ಗೆ ಅವರ ಮಾತಿನಲ್ಲಿ ಬೇಸರವಿತ್ತು.

ಯಾವುದರ ಬಗ್ಗೆಯೂ ಚಿಂತೆ ಮಾಡದೆ ನಿಶ್ಚಿಂತೆಯಿಂದ ಇರುವುದೇ ನನ್ನ ಕ್ರಿಯಾಶೀಲತೆಯ ಗುಟ್ಟು. ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದ ಅಣ್ಣನೆ ನನಗೆ ಸ್ಫೂರ್ತಿ. ರಾಜಕಾರಣಿಗಳ ಹಾಗೆ ಯಾರೊಬ್ಬರನ್ನು ಬಲಿ ಹಾಕಬೇಕೆಂಬ ಭಾವನೆ ನನಗೆ ಇಲ್ಲ. ಆ ಭಾವನೆ ಇರುವವರಿಗೆ ಬುದ್ಧಿಶಕ್ತಿಯೂ ಬೆಳೆಯುವುದಿಲ್ಲ. ಆರೋಗ್ಯ ಕಾಪಾಡಿಕೊಳ್ಳಲು ಆಗುವುದಿಲ್ಲ. ಬೇರೆಯವರ ಬಗ್ಗೆ ಯೋಚಿಸುವುದನ್ನು ಬಿಟ್ಟು ಯಾವುದಾದರೂ ಗೀತೆಗಳನ್ನು ರಚಿಸುತ್ತೇನೆ. ಈ ಅಂಶಗಳೇ ನನ್ನನ್ನು ಇನ್ನೂ ಕ್ರಿಯಾಶೀಲವಾಗಿಸಿವೆ ಎಂದರು.

ಜಾನಪದ ಸಾಹಿತ್ಯ-ಸಂಸ್ಕೃತಿ ಉಳಿಸುವದು ನಮ್ಮ ಕೈಯಲ್ಲಿದೆ: ಸಾಮಾನ್ಯ ಜನತೆ ಅಶ್ಲೀಲವಾದಂತಹ ಜಾನಪದ ಕ್ಯಾಸೆಟ್‌ಗಳ ಬಗ್ಗೆ ಆಸಕ್ತಿ ತೋರಿಸದೆ ಇದ್ದರೆ ಅಂತಹ ಕ್ಯಾಸೆಟ್‌ಗಳು ತನ್ನಷ್ಟಕ್ಕೆ ತಾನೆ ನಾಶವಾಗುತ್ತವೆ. ವ್ಯಾಪಾರಿ ಮನೋಭಾವದಿಂದ ಕೆಲವರು ಇಂತಹ ಕ್ಯಾಸೆಟ್‌ಗಳನ್ನು ತಯಾರಿಸುತ್ತಿದ್ದಾರೆ. ಜನರು ಇವುಗಳ ಬಗ್ಗೆ ನಿರ್ಲಕ್ಷ್ಯ ತಾಳಿದರೆ ಸಹಜವಾಗಿಯೇ ಅವುಗಳ ತಯಾರಕರು ಸಹ ಉತ್ತಮ ಕ್ಯಾಸೆಟ್‌ಗಳನ್ನೆ ತರುತ್ತಾರೆ ಎಂದು ಅವರು ಅಭಿಪ್ರಾಯಪಟ್ಟರು.

ಚಲನಚಿತ್ರಗಳಲ್ಲಿ ಅಶ್ಲೀಲತೆ ಹೆಚ್ಚುತ್ತಿರುವ ಬಗ್ಗೆ ರಮಾದೇವಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಅಂಗಡಿಯಲ್ಲಿ ಯಾವ ವಸ್ತುವಿಗೆ ಬೇಡಿಕೆ ಇರುತ್ತದೋ ಆ ವಸ್ತುವನ್ನೆ ತಂದಿಡುತ್ತಾರೆ. ಎಲ್ಲಿಯವರೆಗೆ ಅಶ್ಲೀಲತೆಯನ್ನು ಪ್ರೀತಿಸುವ ಜನ ಇರುತ್ತಾರೊ ಅಲ್ಲಿಯವರೆಗೆ ಅಶ್ಲೀಲ ಚಿತ್ರಗಳ ನಿರ್ಮಾಣ ಆಗುತ್ತಲೇ ಇರುತ್ತದೆ. ಇವುಗಳನ್ನು ತಡೆಯುವುದು ಜನರ ಕೈಯಲ್ಲೇ ಇದೆ ಎಂದು ಕರೀಂಖಾನ್ ಹೇಳಿದರು.

ಎಲ್ಲಿಯವರೆಗೆ ಜನರ ಮನಸ್ಸಿನಲ್ಲಿ ಜಾನಪದ ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಬೇಕು ಎಂಬ ಧೀರೋದಾತ್ತವಾದ ಮನೋಭಾವ ಇರುತ್ತದೋ ಅಲ್ಲಿಯವರೆಗೆ ನಮ್ಮ ಸಂಸ್ಕೃತಿಗೆ ಯಾವುದೇ ತೊಂದರೆ ಇಲ್ಲ.

ಜಾನಪದ ಸಾಹಿತ್ಯ, ಸಂಸ್ಕೃತಿ ಹಳ್ಳಿಗಳಲ್ಲಿಯೇ ಬೇರೂರಿರುವುದರಿಂದ ಹಳ್ಳಿಗಳು ನಾಶವಾದಂತೆ ಆ ಸಂಸ್ಕೃತಿಯೂ ನಾಶವಾಗುತ್ತದೆ ಎಂಬುದು ಸರಿಯಲ್ಲ.

ಮುಖ್ಯವಾಗಿ ನಮ್ಮಲ್ಲಿ ಮುಂದಿನ ಪೀಳಿಗೆಗೆ ಜನಪದ ಸಾಹಿತ್ಯ, ಸಂಸ್ಕೃತಿಯನ್ನು ಬಿಟ್ಟು ಹೋಗಬೇಕು ಎಂಬ ಉದಾತ್ತವಾದ ಮನೋಭಾವ ಇರುವವರೆಗೆ ಸಂಸ್ಕೃತಿಗೆ ಯಾವುದೆ ಧಕ್ಕೆ ಇಲ್ಲ ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದೆ ಬ್ರಹ್ಮಚಾರಿಯಾಗಿರಲು ಕಾರಣ: ಬಾರೆನೀ ಚೆಲುವೆ, ಬಂದಳೋ ಬಿಟ್ಟಳೋ ಎಂದೆಲ್ಲ ಬರೆದಿರುವ ನೀವು ಬ್ರಹ್ಮಚಾರಿಯಾಗಿರುವುದು ಯಾಕೆ? ಎಂಬ ಕೆ.ಎಸ್. ಲಿಂಗಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಕರೀಂಖಾನ್, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಕಾರಣ ಆಗಿಂದಾಗ್ಗೆ ಕಾರಾಗೃಹಕ್ಕೆ ಹೋಗುತ್ತಿದ್ದೆ, ಮದುವೆಯಾದರೆ ಅವಳನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ ಎಂಬ ಕಾರಣಕ್ಕೆ ಮದುವೆ ಆಗಲಿಲ್ಲ. ಸ್ವಾತಂತ್ರ್ಯ ಹೋರಾಟ, ಸಾಹಿತ್ಯದಲ್ಲಿ ಮುಳುಗಿದ್ದ ನನಗೆ ಯಾರದೋ ಮನೆಯ ಹೆಣ್ಣನ್ನು ತಂದು ಆಕೆಗೆ ಮನೆ ಮಾಡಿ ಸರಿಯಾಗಿ ಊಟ ಹಾಕದಿದ್ದರೆ ಹೇಗೆ? ಎಂಬ ಪ್ರಶ್ನೆಯೂ ನನ್ನ ಮುಂದೆ ಇತ್ತು. ಹಾಗಾಗಿ ಬ್ರಹ್ಮಚಾರಿಯಾಗಿಯೇ ಉಳಿದೆ ಎಂದರು.

ಭಕ್ತಿಗೀತೆ, ಜಾನಪದ ಗೀತೆಗಳನ್ನು ಬರೆಯುತ್ತಿದ್ದ ನಿಮಗೆ ಮುಸ್ಲಿಂ ಮೂಲಭೂತವಾದಿಗಳಿಂದ ವಿರೋಧ ಕಂಡುಬರಲಿಲ್ಲವೆ? ಎಂಬುದಕ್ಕೆ ಉತ್ತರಿಸಿದ ಖಾನ್, ರಾಜಕೀಯವಾಗಿ ವಿರೋಧ ಬರುತ್ತಿತ್ತು. ಅದನ್ನು ಕಹಿಯಾಗಿ ಕಂಡವರು ವಿರುದ್ಧವಾಗಿ ಹೇಳುತ್ತಿದ್ದರು ಎಂದು ಅವರು ತಿಳಿಸಿದರು.

ಮೈಸೂರಿನ ಹತ್ತು ವರ್ಷದ ವಿಜಯ, ನಿಮ್ಮ ಬಾಲ್ಯದ ಸವಿ ನೆನಪುಗಳು ಏನು ಎಂದು ಪ್ರಶ್ನಿಸಿದಾಗ ಅಷ್ಟೇ ಚುಟುಕಾಗಿ ಉತ್ತರಿಸಿದ ಖಾನ್, ಆ ವಯಸ್ಸಿನಲ್ಲಿಯೇ ಕನ್ನಡ ಭಾಷೆಯ ಬಗ್ಗೆ ಮಮತೆ ಬೆಳೆಯಿತು. ಸಂಕೀರ್ತನೆಗಳನ್ನು ಹೇಳುತ್ತಿದ್ದೆ. ಯಕ್ಷಗಾನ, ಜಾನಪದ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದೆ ಎಂದು ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿದರು.

ಪ್ರೇಕ್ಷಕರ ಪ್ರಶ್ನೆಗಳಿಗೆ ಖಾನ್ ಸರಳವಾಗಿ, ಚುಟುಕಾಗಿ ಉತ್ತರಿಸುತ್ತಿದ್ದರೆ, ಪ್ರಶ್ನೆ ಕೇಳುವವರು ಮಾತ್ರ ಅನಾವಶ್ಯಕವಾಗಿ ಉದ್ದದ ಪ್ರಶ್ನೆ ಹಾಕುತ್ತಿದ್ದರಲ್ಲದೆ, ತಮ್ಮದೆ ವಿಚಾರಗಳನ್ನು ಹೇಳಿಕೊಳ್ಳಲು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಿದ್ದರು.

ಕರೀಂಖಾನ್ ಅವರ ಜೊತೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ನಯನ ಸಭಾಂಗಣದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಹಲವಾರು ಜನ ನಿಂತೇ ಕಾರ್ಯಕ್ರಮ ವೀಕ್ಷಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಆ.ರಾ. ಚಂದ್ರಹಾಸಗುಪ್ತ, ಇಲಾಖೆಯ ನಿರ್ದೇಶಕ ಕೆ.ಸಿ. ರಾಮಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ, ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ್ ಸೇರಿದಂತೆ ಹಲವಾರು ಸಾಹಿತಿಗಳು, ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಧಾರ್ಮಿಕ ಅಸಹನೆ ಅಲ್ಲ

ಬೆಂಗಳೂರು, ಮೇ 19- ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಮತಾಂಧರು ಬುದ್ಧನ ವಿಗ್ರಹಗಳನ್ನು ನಾಶಪಡಿಸಿದ್ದು ಧಾರ್ಮಿಕ ಅಸಹನೆಯಿಂದಲ್ಲ, ಸ್ಥಳೀಯವಾಗಿ ಅಲ್ಲಿರುವ ಎರಡು ಪಕ್ಷಗಳ ಮಧ್ಯೆ ಇರುವ ಅಸಹನೆಯಿಂದ ಎಂದು ಖ್ಯಾತ ಜಾನಪದ ತಜ್ಞ ಡಾ.ಎಸ್.ಕೆ. ಕರೀಂಖಾನ್ ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇಂದು ಇಲ್ಲಿ ಏರ್ಪಡಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೇಕ್ಷಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, ತಾಲಿಬಾನ್ ಪಕ್ಷ, ಮಸೂದಿನ ಪಕ್ಷ ಎಂಬ ಎರಡು ಪಕ್ಷಗಳ ಮಧ್ಯೆ ಇರುವ ಅಸಹನೆಯೇ ಬುದ್ಧನ ವಿಗ್ರಹಗಳ ನಾಶಕ್ಕೆ ಮೂಲ ಕಾರಣ ಎಂದರು.

ಚೆನ್ನಮ್ಮ ಎಕ್ಸ್‌ಪ್ರೆಸ್‌ಗೆ ಹೆಚ್ಚುವರಿ ಹವಾನಿಯಂತ್ರಿತ ಕೋಚ್

ಬೆಂಗಳೂರು, ಮೇ 19- ಬೆಂಗಳೂರು-ಮೀರಜ್ ನಡುವಣ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ರೈಲಿಗೆ ತಾತ್ಕಾಲಿಕವಾಗಿ ಹೆಚ್ಚುವರಿ ಹವಾನಿಯಂತ್ರಿತ (ತ್ರಿ-ಟೈಯರ್) ಕೋಚ್ ಸೌಲಭ್ಯ ದೊರೆಯಲಿದೆ.

ಜುಲೈ 2ರವರೆಗೆ ಈ ಸೌಲಭ್ಯವು ದಿನ ಬಿಟ್ಟು ದಿನ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ರೈಲಿನಲ್ಲಿ ಇರುತ್ತದೆ. ಇದರಿಂದಾಗಿ ಈ ರೈಲಿನಲ್ಲಿ ಪ್ರಥಮ ದರ್ಜೆ ಹವಾನಿಯಂತ್ರಿತ [illegible], ಒಂದು 2 ಟೈಯರ್ ಹವಾನಿಯಂತ್ರಿತ ಕೋಚ್, ಒಂದು ತ್ರಿ ಟೈಯರ್ ಹವಾನಿಯಂತ್ರಿತ ಕೋಚ್, ಒಂದು ಪ್ರಥಮ ದರ್ಜೆ [illegible] ಸ್ಲೀಪರ್ ಶ್ರೇಣಿಯ ಕೋಚ್ ದಿನದ ಆಧಾರದ ಮೇರೆಗೆ ಮೇ 18 ರಿಂದ ಜಾರಿಗೆ ಬರುವಂತೆ ಬೆಂಗಳೂರು ರೈಲು ನಿಲ್ದಾಣದಿಂದ ಈ ಹೆಚ್ಚುವರಿ ಎ.ಸಿ. ಕೋಚ್ ಸೌಲಭ್ಯ ಇರುತ್ತದೆ. ಜುಲೈ 2ರವರೆಗೆ ಮಾತ್ರ ಈ ಸೌಲಭ್ಯ ಇರುವುದು. ಅದೇ ರೀತಿ, ಮೀರಜ್‌ನಿಂದ ಮೇ 19 ರಿಂದ ಜುಲೈ 2ರವರೆಗೆ ದಿನಬಿಟ್ಟು ದಿನದ ಆಧಾರದ ಮೇರೆಗೆ ಇದೇ ಸೌಲಭ್ಯ ದೊರೆಯುವುದು.

ಸಾರ್ವಜನಿಕ ಒತ್ತಾಯದ ಮೇರೆಗೆ ಬೆಂಗಳೂರು, ಮೈಸೂರು ಹಾಗೂ ಬೆಂಗಳೂರು-ಅರಸೀಕೆರೆ ವಲಯದಲ್ಲಿ ಹೆಚ್ಚಿನ ಬೋಗಿಗಳನ್ನು ರೈಲಿಗೆ ಜೋಡಿಸಲಾಗುವುದು. ಮೇ 25 ರಿಂದ ಈ ವಲಯದಲ್ಲಿ ಸಂಚರಿಸುವ

ಸಚಿವರ ವಿರುದ್ಧ ಸಂಸದರ ಅಸಮಾಧಾನ

ಬೆಂಗಳೂರು, ಮೇ 19-ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶದ ಹಿನ್ನೆಲೆಯಲ್ಲಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಇಂದು ಇಲ್ಲಿ ಸೇರಿದ್ದ ರಾಜ್ಯ ಬಿಜೆಪಿ ಮುಖಂಡರ ಸಭೆಯಲ್ಲಿ ಕೇಂದ್ರದ ಕೆಲವು ಸಚಿವರುಗಳ ವಿರುದ್ಧ ಇಬ್ಬರು ಸಂಸತ್ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರೆಂದೂ ಗೊತ್ತಾಗಿದೆ.

ನಗರದ ಹೊರವಲಯದ ಡೊಮಿನಿಯನ್ ಕ್ಲಬ್‌ನಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ನಡೆದ ಬಿಜೆಪಿ ಮುಖಂಡರ ಆತ್ಮಾವಲೋಕನ ಸಭೆಯಲ್ಲಿ ಪ್ರಮುಖವಾಗಿ ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆ ಕಚೇರಿ ಸ್ಥಾಪನೆ ವಿಚಾರದಲ್ಲಿ ಕೇಂದ್ರ ಸರ್ಕಾರ ಗಮನ ಹರಿಸುತ್ತಿಲ್ಲ ಎಂದುದರು. ಇದನ್ನು ವಿಜಾಪುರದ ಸಂಸದ ಬಸವನಗೌಡ ಪಾಟೀಲ್ ಯತ್ನಾಳ್ ಬೆಂಬಲಿಸಿ ಕೇಂದ್ರ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರೆಂದೂ ಗೊತ್ತಾಗಿದೆ.

ಈ ಹಂತದಲ್ಲಿ ಸಂಸದರು ಕೇಂದ್ರದಲ್ಲಿನ ರಾಜ್ಯ ಸಚಿವರ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದರೆನ್ನಲಾಗಿದ್ದು ಸಂಸದರ ಬೇಡಿಕೆಗೆ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರೂ ಧ್ವನಿಗೂಡಿಸಿ ರೈಲ್ವೆ ವಲಯ ಕಚೇರಿ ವಿಚಾರದಲ್ಲಿ ಜನತೆಗೆ ಉತ್ತರಿಸಲಾಗದ ಸ್ಥಿತಿ ನಮ್ಮದಾಗಿದೆ ಎಂದೂ ಅತೃಪ್ತಿ ಡಿಸಿ ಸಭೆಗೆ ಕರೆತರಲಾಯಿತು.

ನೈರುತ್ಯ ರೈಲ್ವೆ ವಲಯ

ಸಭೆ ಮುಂದುವರಿದಾಗ ಕೆಲವು ಶಾಸಕರು-ಸಂಸದರು ಕೇಂದ್ರದ ಗ್ರಾಮೀಣ ಅಭಿವೃದ್ಧಿ ಖಾತೆ ಸಚಿವ ವೆಂಕಯ್ಯನಾಯ್ಡು ಅವರ ವಿರುದ್ಧ ಕೆಂಡ ಕಾರಿದರು ಎಂದೂ ಗೊತ್ತಾಗಿದೆ.

ಸಂಸದರು ಶಾಸಕರ ಜೊತೆ ನಾಯ್ಡು ಸೌಹಾರ್ದದಿಂದ ನಡೆದುಕೊಳ್ಳುತ್ತಿಲ್ಲ ಎಂದೂ ಕೆಲವರು ದೂರಿದರೆಂದೂ ಗೊತ್ತಾಗಿದೆ.

ಅನಂತಕುಮಾರ್ ವಿವರಣೆ: ಪಕ್ಷದ ಸಂಸದರು ಇತರೆ ಮುಖಂಡರಿಂದ ಸರ್ಕಾರದ [illegible] ಟೀಕೆಗಳಿಗೆ ಉತ್ತರಿಸಿದ ಕೇಂದ್ರ [illegible] ಕುಮಾರ್ ಹೇಳಿದರೆಂದೂ ಮೂಲಗಳು ತಿಳಿಸಿವೆ.

ಹುಬ್ಬಳ್ಳಿಗೆ ನೈರುತ್ಯ ರೈಲ್ವೆ ವಲಯ ಕಚೇರಿಯನ್ನು ಸ್ಥಳಾಂತರಿಸಲು ಒತ್ತಾಯ ತಂದಿದ್ದಕ್ಕೆ ತಾವು ಬೆಂಗಳೂರಿನ ಕನ್ನಡ ಪರ ಸಂಘಟನೆಗಳ ವಿರೋಧ ಎದುರಿಸಬೇಕಾಯಿತು ಎಂದು ಅನಂತಕುಮಾರ್ ಹೇಳಿದರೆಂದೂ ಗೊತ್ತಾಗಿದೆ.

ಸಂಜೆ ಐದು ಗಂಟೆಯವರೆಗೆ ನಡೆದ ಸಭೆಯಲ್ಲಿ ಕೇಂದ್ರ ಸರ್ಕಾರ ರಾಜ್ಯದ ನದಿ ನೀರು ವಿವಾದಗಳನ್ನು ಬಗೆಹರಿಸಿದ ಸಂಗತಿಗಳನ್ನು ಎಳೆ ಎಳೆಯಾಗಿ ಅನಂತಕುಮಾರ್ ಬಿಡಿಸಿಟ್ಟರು.

ಇಷ್ಟೆಲ್ಲ ಕೆಲಸ ಮಾಡಿಯೂ

ಎಂಜಲಿಗೆ ಓಟು ಮಾರಿದ ಮೇಲೆ ರಾಜಕಾರಣಿಗಳನ್ನು ದೂರುವುದು ಹೇಗೆ?

ಬೆಂಗಳೂರು, ಮೇ 19-ಒಂದು ಚೂರು ಮಾಂಸ...ಚೂರು ಸಾರಾಯಿ... ಬಿಡಿಗಾಸಿಗೆ ಓಟು ಪಡೆದು ಜನಪ್ರತಿನಿಧಿಗಳಾಗುವ ಈಗಿನ ರಾಜಕಾರಣಿಗಳಿಂದ ನಾವು ಏನನ್ನು ನಿರೀಕ್ಷಿಸಲು ಸಾಧ್ಯ? ಸ್ವಾತಂತ್ರ್ಯಕ್ಕೆ ಮೊದಲು ಒಂದು ರೂ.ಗೆ 16 ಸೇರು ಸಣ್ಣಕ್ಕಿ ಸಿಗುತ್ತಿತ್ತು, ಒಂದು ರೂ.ಗೆ ಎಂಟು ಸೇರು ತೊಗರಿಬೇಳೆ ಸಿಗುತ್ತಿತ್ತು. ಆದರೆ ಈಗ... ಸ್ವಾತಂತ್ರ್ಯಪೂರ್ವ ಹಾಗೂ ಈಗಿನ ವ್ಯವಸ್ಥೆ ನಡುವಿನ ಅಂತರವನ್ನು ಹೀಗೆ ಬಿಡಿಸಿಟ್ಟವರು ಖ್ಯಾತ ಜಾನಪದ ತಜ್ಞ ಡಾ. ಎಸ್.ಕೆ. ಕರೀಂಖಾನ್.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇಂದು ಇಲ್ಲಿ ಏರ್ಪಡಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ ನಾಗರಿಕರೊಂದಿಗೆ ಸಂವಾದ ನಡೆಸಿದ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಆಡಳಿತ ವ್ಯವಸ್ಥೆ ಹಾಗೂ ಈಗಿನ ವ್ಯವಸ್ಥೆಯ ಬಗ್ಗೆ ತಮ್ಮದೆ ಆದ ಧಾಟಿಯಲ್ಲಿ ವರ್ಣಿಸಿದರು.

ನಮ್ಮ ಶತ್ರುಗಳು ಆಳುತ್ತಿದ್ದ ಸ್ವಾತಂತ್ರ್ಯದ ಪೂರ್ವದ ದಿನಗಳಲ್ಲಿ 1 ರೂ.ಗೆ 16 ಸೇರು ಸಣ್ಣಕ್ಕಿ ಸಿಗುತ್ತಿದ್ದರೆ, ಅಕ್ಬರ್‌ನ ಕಾಲದಲ್ಲಿ ಒಂದು ರೂ.ಗೆ 60 ಸೇರು ಹಾಲು, 40 ಸೇರು ತುಪ್ಪ ಸಿಗುತ್ತಿತ್ತು. ಜಹಾಂಗೀರನ ಕಾಲದಲ್ಲಿ ರಸ್ತೆಗಳ ಪಕ್ಕದಲ್ಲೇ ಸಾಮೂಹಿಕ ಊಟದ ವ್ಯವಸ್ಥೆ ಇರುತ್ತಿತ್ತು. ಅಂದು ನಮ್ಮ ಶತ್ರುಗಳಾದ ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಇಂತಹ ವ್ಯವಸ್ಥೆ ಇತ್ತು. ಆದರೆ ಇಂದು ನಮ್ಮವರ ಆಳುತ್ತಿದ್ದಾರೆ. ಪುಡಿಗಾಸಿಗೆ, ಚೂರು ಸಾರಾಯಿಗೆ, ಚೂರು ಮಾಂಸದ ಆಸೆಯನ್ನು ಜನರಿಗೆ ತೋರಿಸಿ ಇವರೆಲ್ಲ ಆರಿಸಿ ಬಂದಿದ್ದಾರೆ. ಇಂತಹವರಿಂದ ಸಮಾಜ ಏನನ್ನು ನಿರೀಕ್ಷಿಸಲು ಸಾಧ್ಯ? ಎಂದು ಹೇಳುವಾಗ ಅವರ ಮನಸ್ಸಿನಲ್ಲಿ ಈಗಿನ ವ್ಯವಸ್ಥೆ ಬಗ್ಗೆ ತೀವ್ರ ಅಸಮಾಧಾನ ಕಂಡುಬಂದಿತು.

ರಾಜಕೀಯವಾಗಿ ನನಗೆ ಸಿಗಬೇಕಾದುದು ಸಿಗಲಿಲ್ಲ: ರಾಜಕೀಯದಲ್ಲಿಯೂ ಭಾಗವಹಿಸಿದ್ದೇನೆ. ಕೆ.ಸಿ. ರೆಡ್ಡಿ, ಟಿ. ಸಿದ್ದಲಿಂಗಯ್ಯ, ಟಿ. ಮರಿಯಪ್ಪ, ಭೀಮಾನಾಯಕ್ ಮೊದಲಾದವರ ಪರವಾಗಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿ ಅವರ ಗೆಲುವಿಗೆ ಶ್ರಮಿಸಿದ್ದೇನೆ. ಆದರೆ ರಾಜಕೀಯವಾಗಿ ನನಗೆ ಏನು ಸಿಗಬೇಕಾಗಿತ್ತೋ ಅದು ಸಿಗಲಿಲ್ಲ. ನನಗೆ ಒಂದು ಸೂರು ಲಭ್ಯವಾಗಲಿಲ್ಲ. ಬಹುಶಃ ದೇವರು ಇವರಿಗೆ (ರಾಜಕಾರಣಿಗಳಿಗೆ) ಕೊಟ್ಟಿಲ್ಲ ಅಂಥಾ ಕಾಣುತ್ತೆ, ಆದ್ದರಿಂದ ಇವರು ನನಗೆ ಕೊಟ್ಟಿಲ್ಲ... ಸರ್ಕಾರ ತಮಗೆ ಮನೆ ನೀಡುವುದಾಗಿ ಹಲವಾರು ಬಾರಿ ಹೇಳಿದ್ದರೂ ಅದು ಈಡೇರದೆ ಇರುವ ಬಗ್ಗೆ ಅವರ ಮಾತಿನಲ್ಲಿ ಬೇಸರವಿತ್ತು.

ಯಾವುದರ ಬಗ್ಗೆಯೂ ಚಿಂತೆ ಮಾಡದೆ ನಿಶ್ಚಿಂತೆಯಿಂದ ಇರುವುದೇ ನನ್ನ ಕ್ರಿಯಾಶೀಲತೆಯ ಗುಟ್ಟು. ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದ ಅಣ್ಣನೆ ನನಗೆ ಸ್ಫೂರ್ತಿ. ರಾಜಕಾರಣಿಗಳ ಹಾಗೆ ಯಾರೊಬ್ಬರನ್ನು ಬಲಿ ಹಾಕಬೇಕೆಂಬ ಭಾವನೆ ನನಗೆ ಇಲ್ಲ. ಆ ಭಾವನೆ ಇರುವವರಿಗೆ ಬುದ್ಧಿಶಕ್ತಿಯೂ ಬೆಳೆಯುವುದಿಲ್ಲ. ಆರೋಗ್ಯ ಕಾಪಾಡಿಕೊಳ್ಳಲು ಆಗುವುದಿಲ್ಲ. ಬೇರೆಯವರ ಬಗ್ಗೆ ಯೋಚಿಸುವುದನ್ನು ಬಿಟ್ಟು ಯಾವುದಾದರೂ ಗೀತೆಗಳನ್ನು ರಚಿಸುತ್ತೇನೆ. ಈ ಅಂಶಗಳೇ ನನ್ನನ್ನು ಇನ್ನೂ ಕ್ರಿಯಾಶೀಲವಾಗಿಸಿವೆ ಎಂದರು.

ಜಾನಪದ ಸಾಹಿತ್ಯ-ಸಂಸ್ಕೃತಿ ಉಳಿಸುವದು ನಮ್ಮ ಕೈಯಲ್ಲಿದೆ: ಸಾಮಾನ್ಯ ಜನತೆ ಅಶ್ಲೀಲವಾದಂತಹ ಜಾನಪದ ಕ್ಯಾಸೆಟ್‌ಗಳ ಬಗ್ಗೆ ಆಸಕ್ತಿ ತೋರಿಸದೆ ಇದ್ದರೆ ಅಂತಹ ಕ್ಯಾಸೆಟ್‌ಗಳು ತನ್ನಷ್ಟಕ್ಕೆ ತಾನೆ ನಾಶವಾಗುತ್ತವೆ. ವ್ಯಾಪಾರಿ ಮನೋಭಾವದಿಂದ ಕೆಲವರು ಇಂತಹ ಕ್ಯಾಸೆಟ್‌ಗಳನ್ನು ತಯಾರಿಸುತ್ತಿದ್ದಾರೆ. ಜನರು ಇವುಗಳ ಬಗ್ಗೆ ನಿರ್ಲಕ್ಷ್ಯ ತಾಳಿದರೆ ಸಹಜವಾಗಿಯೇ ಅವುಗಳ ತಯಾರಕರು ಸಹ ಉತ್ತಮ ಕ್ಯಾಸೆಟ್‌ಗಳನ್ನೆ ತರುತ್ತಾರೆ ಎಂದು ಅವರು ಅಭಿಪ್ರಾಯಪಟ್ಟರು.

ಕರೀಂಖಾನ್ ವ್ಯಥೆ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಶನಿವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಡಾ. ಎಸ್.ಕೆ. ಕರೀಂಖಾನ್ ಭಾಗವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಆ.ರಾ. ಚಂದ್ರಹಾಸಗುಪ್ತ ಚಿತ್ರದಲ್ಲಿದ್ದಾರೆ.

ಧಾರ್ಮಿಕ ಅಸಹನೆ ಅಲ್ಲ

ಬೆಂಗಳೂರು, ಮೇ 19- ಆಫ್ಘಾನಿಸ್ತಾನದಲ್ಲಿ ತಾಲಿಬಾನ್ ಮತಾಂಧರು ಬುದ್ಧನ ವಿಗ್ರಹಗಳನ್ನು ನಾಶಪಡಿಸಿದ್ದು ಧಾರ್ಮಿಕ ಅಸಹನೆಯಿಂದಲ್ಲ, ಸ್ಥಳೀಯವಾಗಿ ಅಲ್ಲಿರುವ ಎರಡು ಪಕ್ಷಗಳ ಮಧ್ಯೆ ಇರುವ ಅಸಹನೆಯಿಂದ ಎಂದು ಖ್ಯಾತ ಜಾನಪದ ತಜ್ಞ ಡಾ.ಎಸ್.ಕೆ. ಕರೀಂಖಾನ್ ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇಂದು ಇಲ್ಲಿ ಏರ್ಪಡಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೇಕ್ಷಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, ತಾಲಿಬಾನ್ ಪಕ್ಷ, ಮಸೂದಿನ ಪಕ್ಷ ಎಂಬ ಎರಡು ಪಕ್ಷಗಳ ಮಧ್ಯೆ ಇರುವ ಅಸಹನೆಯೇ ಬುದ್ಧನ ವಿಗ್ರಹಗಳ ನಾಶಕ್ಕೆ ಮೂಲ ಕಾರಣ ಎಂದರು.

ಚಲನಚಿತ್ರಗಳಲ್ಲಿ ಅಶ್ಲೀಲತೆ ಹೆಚ್ಚುತ್ತಿರುವ ಬಗ್ಗೆ ರಮಾದೇವಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಅಂಗಡಿಯಲ್ಲಿ ಯಾವ ವಸ್ತುವಿಗೆ ಬೇಡಿಕೆ ಇರುತ್ತದೋ ಆ ವಸ್ತುವನ್ನೆ ತಂದಿಡುತ್ತಾರೆ. ಎಲ್ಲಿಯವರೆಗೆ ಅಶ್ಲೀಲತೆಯನ್ನು ಪ್ರೀತಿಸುವ ಜನ ಇರುತ್ತಾರೊ ಅಲ್ಲಿಯವರೆಗೆ ಅಶ್ಲೀಲ ಚಿತ್ರಗಳ ನಿರ್ಮಾಣ ಆಗುತ್ತಲೇ ಇರುತ್ತದೆ. ಇವುಗಳನ್ನು ತಡೆಯುವುದು ಜನರ ಕೈಯಲ್ಲೇ ಇದೆ ಎಂದು ಕರೀಂಖಾನ್ ಹೇಳಿದರು.

ಎಲ್ಲಿಯವರೆಗೆ ಜನರ ಮನಸ್ಸಿನಲ್ಲಿ ಜಾನಪದ ಸಾಹಿತ್ಯ ಸಂಸ್ಕೃತಿಯನ್ನು ಉಳಿಸಬೇಕು ಎಂಬ ಧೀರೋದಾತ್ತವಾದ ಮನೋಭಾವ ಇರುತ್ತದೋ ಅಲ್ಲಿಯವರೆಗೆ ನಮ್ಮ ಸಂಸ್ಕೃತಿಗೆ ಯಾವುದೇ ತೊಂದರೆ ಇಲ್ಲ.

ಜಾನಪದ ಸಾಹಿತ್ಯ ಸಂಸ್ಕೃತಿ ಹಳ್ಳಿಗಳಲ್ಲಿಯೇ ಬೇರೂರಿರುವುದರಿಂದ ಹಳ್ಳಿಗಳು ನಾಶವಾದಂತೆ ಆ ಸಂಸ್ಕೃತಿಯೂ ನಾಶವಾಗುತ್ತದೆ ಎಂಬುದು ಸರಿಯಲ್ಲ.

ಮುಖ್ಯವಾಗಿ ನಮ್ಮಲ್ಲಿ ಮುಂದಿನ ಪೀಳಿಗೆಗೆ ಜನಪದ ಸಾಹಿತ್ಯ ಸಂಸ್ಕೃತಿಯನ್ನು ಬಿಟ್ಟು ಹೋಗಬೇಕು ಎಂಬ ಉದಾತ್ತವಾದ ಮನೋಭಾವ ಇರುವವರೆಗೆ ಸಂಸ್ಕೃತಿಗೆ ಯಾವುದೆ ಧಕ್ಕೆ ಇಲ್ಲ ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದೆ ಬ್ರಹ್ಮಚಾರಿಯಾಗಿರಲು ಕಾರಣ: ಬಾರೆ ನೀ ಚೆಲುವೆ, ಬಂದಳೋ ಬಿಟ್ಟಳೋ ಎಂದೆಲ್ಲ ಬರೆದಿರುವ ನೀವು ಬ್ರಹ್ಮಚಾರಿಯಾಗಿರುವುದು ಯಾಕೆ? ಎಂಬ ಕೆ.ಎಸ್. ಲಿಂಗಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಕರೀಂಖಾನ್, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಕಾರಣ ಆಗಿಂದಾಗ್ಗೆ ಕಾರಾಗೃಹಕ್ಕೆ ಹೋಗುತ್ತಿದ್ದೆ, ಮದುವೆಯಾದರೆ ಅವಳನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ ಎಂಬ ಕಾರಣಕ್ಕೆ ಮದುವೆ ಆಗಲಿಲ್ಲ. ಸ್ವಾತಂತ್ರ್ಯ ಹೋರಾಟ, ಸಾಹಿತ್ಯದಲ್ಲಿ ಮುಳುಗಿದ್ದ ನನಗೆ ಯಾರದೋ ಮನೆಯ ಹೆಣ್ಣನ್ನು ತಂದು ಆಕೆಗೆ ಮನೆ ಮಾಡಿ ಸರಿಯಾಗಿ ಊಟ ಹಾಕದಿದ್ದರೆ ಹೇಗೆ? ಎಂಬ ಪ್ರಶ್ನೆಯೂ ನನ್ನ ಮುಂದೆ ಇತ್ತು. ಹಾಗಾಗಿ ಬ್ರಹ್ಮಚಾರಿಯಾಗಿಯೇ ಉಳಿದೆ ಎಂದರು.

ಭಕ್ತಿಗೀತೆ, ಜಾನಪದ ಗೀತೆಗಳನ್ನು ಬರೆಯುತ್ತಿದ್ದ ನಿಮಗೆ ಮುಸ್ಲಿಂ ಮೂಲಭೂತವಾದಿಗಳಿಂದ ವಿರೋಧ ಕಂಡುಬರಲಿಲ್ಲವೆ? ಎಂಬುದಕ್ಕೆ ಉತ್ತರಿಸಿದ ಖಾನ್, ರಾಜಕೀಯವಾಗಿ ವಿರೋಧ ಬರುತ್ತಿತ್ತು. ಅದನ್ನು ಕಟಿಯಾಗಿ ಕಂಡವರು ವಿರುದ್ಧವಾಗಿ ಹೇಳುತ್ತಿದ್ದರು ಎಂದು ಅವರು ತಿಳಿಸಿದರು.

ಮೈಸೂರಿನ ಹತ್ತು ವರ್ಷದ ವಿಜಯ, ನಿಮ್ಮ ಬಾಲ್ಯದ ಸವಿ ನೆನಪುಗಳು ಏನು ಎಂದು ಪ್ರಶ್ನಿಸಿದಾಗ ಅಷ್ಟೇ ಚುಟುಕಾಗಿ ಉತ್ತರಿಸಿದ ಖಾನ್, ಆ ವಯಸ್ಸಿನಲ್ಲಿಯೇ ಕನ್ನಡ ಭಾಷೆಯ ಬಗ್ಗೆ ಮಮತೆ ಬೆಳೆಯಿತು. ಸಂಕೀರ್ತನೆಗಳನ್ನು ಹೇಳುತ್ತಿದ್ದೆ. ಯಕ್ಷಗಾನ, ಜಾನಪದ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದೆ ಎಂದು ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿದರು.

ಪ್ರೇಕ್ಷಕರ ಪ್ರಶ್ನೆಗಳಿಗೆ ಖಾನ್ ಸರಳವಾಗಿ, ಚುಟುಕಾಗಿ ಉತ್ತರಿಸುತ್ತಿದ್ದರೆ, ಪ್ರಶ್ನೆ ಕೇಳುವವರು ಮಾತ್ರ ಅನಾವಶ್ಯಕವಾಗಿ ಉದ್ದದ ಪ್ರಶ್ನೆ ಹಾಕುತ್ತಿದ್ದರಲ್ಲದೆ, ತಮ್ಮದೆ ವಿಚಾರಗಳನ್ನು ಹೇಳಿಕೊಳ್ಳಲು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಿದ್ದರು.

ಕರೀಂಖಾನ್ ಅವರ ಜೊತೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ನಯನ ಸಭಾಂಗಣದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಹಲವಾರು ಜನ ನಿಂತೇ ಕಾರ್ಯಕ್ರಮ ವೀಕ್ಷಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಆ.ರಾ. ಚಂದ್ರಹಾಸಗುಪ್ತ, ಇಲಾಖೆಯ ನಿರ್ದೇಶಕ ಕೆ.ವಿ. ರಾಮಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ, ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ್ ಸೇರಿದಂತೆ ಹಲವಾರು ಸಾಹಿತಿಗಳು, ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಚೆನ್ನಮ್ಮ ಎಕ್ಸ್‌ಪ್ರೆಸ್‌ಗೆ ಹೆಚ್ಚುವರಿ ಹವಾನಿಯಂತ್ರಿತ ಕೋಚ್

ಬೆಂಗಳೂರು, ಮೇ 19- ಬೆಂಗಳೂರು-ಮೀರಜ್ ನಡುವಣ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ರೈಲಿಗೆ ತಾತ್ಕಾಲಿಕವಾಗಿ ಹೆಚ್ಚುವರಿ ಹವಾನಿಯಂತ್ರಿತ (ತ್ರಿ-ಟೈಯರ್) ಕೋಚ್ ಸೌಲಭ್ಯ ಹೊಂದಲಿದೆ.

ಜುಲೈ 2ರವರೆಗೆ ಈ ಸೌಲಭ್ಯವು ದಿನ ಬಿಟ್ಟು ದಿನ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ರೈಲಿನಲ್ಲಿ ಇರುತ್ತದೆ. ಇದರಿಂದಾಗಿ ಈ ರೈಲಿನಲ್ಲಿ ಪ್ರಥಮ ದರ್ಜೆ ಹವಾನಿಯಂತ್ರಿತ [illegible], ಒಂದು 2 ಟೈಯರ್ ಹವಾನಿ[illegible] ಕೋಚ್, ಒಂದು ತ್ರಿ ಟೈಯರ್ ಹವಾ[illegible]ತ ಕೋಚ್, ಒಂದು ಪ್ರಥಮ ದರ್ಜೆ [illegible] ಸ್ಲೀಪರ್ [illegible] ಕೋಚ್ ದಿನದ ಆಧಾರದ ಮೇರೆಗೆ ಮೇ 18 ರಿಂದ ಜಾರಿಗೆ ಬರುವಂತೆ ಬೆಂಗಳೂರು ರೈಲು ನಿಲ್ದಾಣದಿಂದ ಈ ಹೆಚ್ಚುವರಿ ಎ.ಸಿ. ಕೋಚ್ ಸೌಲಭ್ಯ ಇರುತ್ತದೆ. ಜುಲೈ 2ರವರೆಗೆ ಮಾತ್ರ ಈ ಸೌಲಭ್ಯ ಇರುವುದು. ಅದೇ ರೀತಿ, ಮೀರಜ್‌ನಿಂದ ಮೇ 19 ರಿಂದ ಜುಲೈ 2ರವರೆಗೆ ದಿನಬಿಟ್ಟು ದಿನದ ಆಧಾರದ ಮೇರೆಗೆ ಇದೇ ಸೌಲಭ್ಯ ದೊರೆಯುವುದು.

ಸಾರ್ವಜನಿಕ ಒತ್ತಾಯದ ಮೇರೆಗೆ ಬೆಂಗಳೂರು, ಮೈಸೂರು ಹಾಗೂ ಬೆಂಗಳೂರು-ಅರಸೀಕೆರೆ ವಲಯದಲ್ಲಿ ಹೆಚ್ಚಿನ ಬೋಗಿಗಳನ್ನು ರೈಲಿಗೆ ಜೋಡಿಸಲಾಗುವುದು. ಮೇ 25 ರಿಂದ ಈ ವಲಯದಲ್ಲಿ ಸಂಚರಿಸುವ

ಸಚಿವರ ವಿರುದ್ಧ ಸಂಸದರ ಅಸಮಾಧಾನ

ಬೆಂಗಳೂರು, ಮೇ 19-ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶದ ಹಿನ್ನೆಲೆಯಲ್ಲಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಇಂದು ಇಲ್ಲಿ ಸೇರಿದ್ದ ರಾಜ್ಯ ಬಿಜೆಪಿ ಮುಖಂಡರ ಸಭೆಯಲ್ಲಿ ಕೇಂದ್ರದ ಕೆಲವು ಸಚಿವರುಗಳ ವಿರುದ್ಧ ಇಬ್ಬರು ಸಂಸತ್ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರೆಂದೂ ಗೊತ್ತಾಗಿದೆ.

ನಗರದ ಹೊರವಲಯದ ಡೊಮಿನಿಯನ್ ಕ್ಲಬ್‌ನಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ನಡೆದ ಬಿಜೆಪಿ ಮುಖಂಡರ ಆತ್ಮಾವಲೋಕನ ಸಭೆಯಲ್ಲಿ ಪ್ರಮುಖವಾಗಿ ಹುಬ್ಬಳ್ಳಿಯಲ್ಲಿ ನೈಋತ್ಯ ರೈಲ್ವೆ ಕಚೇರಿ ಸ್ಥಾಪನೆ ವಿಚಾರದಲ್ಲಿ ಕೇಂದ್ರ ಸರ್ಕಾರ ಗಮನ ಹರಿಸುತ್ತಿಲ್ಲ ಎಂದು ದರು. ಇದನ್ನು ವಿಜಾಪುರದ ಸಂಸದ ಬಸವನಗೌಡ ಪಾಟೀಲ್ ಯತ್ನಾಳ್ ಬೆಂಬಲಿಸಿ ಕೇಂದ್ರ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರೆಂದೂ ಗೊತ್ತಾಗಿದೆ.

ಈ ಹಂತದಲ್ಲಿ ಸಂಸದರು ಕೇಂದ್ರದಲ್ಲಿನ ರಾಜ್ಯ ಸಚಿವರ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದರೆನ್ನಲಾಗಿದ್ದು ಸಂಸದರ ಬೇಡಿಕೆಗೆ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರೂ ಧ್ವನಿಗೂಡಿಸಿ ರೈಲ್ವೆ ವಲಯ ಕಚೇರಿ ವಿಚಾರದಲ್ಲಿ ಜನತೆಗೆ ಉತ್ತರಿಸಲಾಗದ ಸ್ಥಿತಿ ನಮ್ಮದಾಗಿದೆ ಎಂದೂ ಅತೃಪ್ತಿ

ನೈಋತ್ಯ ರೈಲ್ವೆ ವಲಯ

ಸಂಸದರು ಇತರೆ ಮುಖಂಡರಿಂದ ಸರ್ಕಾರದ [illegible] ಟೀಕೆಗಳಿಗೆ ಉತ್ತರಿಸಿದ ಕೇಂದ್ರ ಡಿಸಿ ಸಭೆಗೆ ಕರೆತರಲಾಯಿತು.

ಸಭೆ ಮುಂದುವರಿದಾಗ ಕೆಲವು ಶಾಸಕರು-ಸಂಸದರು ಕೇಂದ್ರದ ಗ್ರಾಮೀಣ ಅಭಿವೃದ್ಧಿ ಖಾತೆ ಸಚಿವ ವೆಂಕಯ್ಯನಾಯ್ಡು ಅವರ ವಿರುದ್ಧ ಕೆಂಡ ಕಾರಿದರು ಎಂದೂ ಗೊತ್ತಾಗಿದೆ.

ಸಂಸದರು ಶಾಸಕರ ಜೊತೆ ನಾಯ್ಡು ಸೌಹಾರ್ದದಿಂದ ನಡೆದುಕೊಳ್ಳುತ್ತಿಲ್ಲ ಎಂದೂ ಕೆಲವರು ದೂರಿದರೆಂದೂ ಗೊತ್ತಾಗಿದೆ.

ಅನಂತಕುಮಾರ್ ವಿವರಣೆ: ಪಕ್ಷದ [illegible] ಕುಮಾರ್ ಹೇಳಿದರೆಂದೂ ಮೂಲಗಳು ತಿಳಿಸಿವೆ.

ಹುಬ್ಬಳ್ಳಿಗೆ ನೈಋತ್ಯ ರೈಲ್ವೆ ವಲಯ ಕಚೇರಿಯನ್ನು ಸ್ಥಳಾಂತರಿಸಲು ಒತ್ತಾಯ ತಂದಿದ್ದಕ್ಕಾಗಿ ತಾವು ಬೆಂಗಳೂರಿನ ಕನ್ನಡ ಪರ ಸಂಘಟನೆಗಳ ವಿರೋಧ ಎದುರಿಸಬೇಕಾಯಿತು ಎಂದೂ ಅನಂತಕುಮಾರ್ ಹೇಳಿದರೆಂದೂ ಗೊತ್ತಾಗಿದೆ.

ಸಂಜೆ ಬಹುಹೊತ್ತಿನವರೆಗೆ ನಡೆದ ಸಭೆಯಲ್ಲಿ ಕೇಂದ್ರ ಸರ್ಕಾರ ರಾಜ್ಯದ [illegible] ವಿವಾದಗಳನ್ನು ಬಗೆಹರಿಸಿದ ಸಂಗತಿಗಳನ್ನು ಎಳೆ ಎಳೆಯಾಗಿ ಅನಂತಕುಮಾರ್ ಬಿಡಿಸಿಟ್ಟರು.

ಇಷ್ಟೆಲ್ಲ ಕೆಲಸ ಮಾಡಿಯೂ

ಆರು ಮಂದಿಗೆ 'ಸಂಚಾರ ಶ್ರೀ' ಪ್ರಶಸ್ತಿ

ಬೆಂಗಳೂರು, ಮೇ 17– ವಿಶ್ವ ದೂರಸಂಪರ್ಕ ದಿನಾಚರಣೆ ಅಂಗವಾಗಿ ದೂರಸಂಪರ್ಕ ಗುಣಮಟ್ಟ ಆಶ್ವಾಸನಾ ವೃತ್ತ ಕಾರ್ಯಾಲಯದ ಆಶ್ರಯದಲ್ಲಿ ಇಂದು ಇಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ 1999– 2000 ಸಾಲಿನಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಆರು ಉದ್ಯೋಗಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನ ಪಿ.ಜೆ.ಗೀತಾ, ವಿ.ಪ್ರಪ್ತ ರಾಜ್ ಅವರಿಗೆ 'ಸಂಚಾರ ಶ್ರೀ', ಕೆ.ಎನ್.ಸರೋಜಾ, ಇ.ರಾಜುಲು ನಾಯ್ಡು, ಸೈಯದ್ ಸಂಜಯ್ ಕುಮಾರ್, ನವದೆಹಲಿಯ ಪಿ.ಬಿ.ಪಾಂಡೆ ಅವರಿಗೆ 'ಸಂಚಾರ ಸಾರಥಿ' ಪ್ರಶಸ್ತಿಯನ್ನು ವಿತರಿಸಲಾಯಿತು. ಗುಣಮಟ್ಟ ವೃತ್ತದ ಪ್ರಧಾನ ವ್ಯವಸ್ಥಾಪಕ ಆರ್.ಸಿ.ವೈರ್, ಮುಖ್ಯ ಕಚೇರಿಯ ಆರ್.ಕೆ.ಅರ್ಸೋಲ್, ಭಾರತೀಯ ದೂರವಾಣಿ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಮೋತಿಯಾಲ್, ಎನ್.ಗೋಪಾಲಕೃಷ್ಣನ್ ಅವರು ಭಾಗವಹಿಸಿದ್ದರು.

ಕರ್ನಾಟಕ ದೂರಸಂಪರ್ಕ ವೃತ್ತ ಬೆಂಗಳೂರಿನಲ್ಲಿ ಬುಧವಾರ ಏರ್ಪಡಿಸಿದ್ದ 'ವಿಶ್ವ ದೂರಸಂಪರ್ಕ ದಿನ'ದ ಸಮಾರಂಭದಲ್ಲಿ ಸಂಚಾರ ಶ್ರೀ ಪ್ರಶಸ್ತಿ ಪಡೆದ ಕೆ.ಸಂಜೀವ, ಗುರುರಾಜ ಎಸ್.ಬಿದರಹಳ್ಳಿ, ಪಿ.ಜೆ.ಗೀತ, ನಿಜಗುಣ ಬಿ.ಹಳಿಯಾಳ್ ಹಾಗೂ ಟಿ.ಆರ್.ದೊಡ್ಡಂಗಡಿ ಪರಸ್ಪರ ಅಭಿನಂದಿಸುತ್ತಿದ್ದಾರೆ.

ಜನತೆಯ 'ನಿಜವಾದ' ಸಮಸ್ಯೆ ನಿವಾರಣೆಗೆ ನಮ್ಮ ಹೋರಾಟ- ಸೋನಿಯಾ

ನವದೆಹಲಿ, ಮೇ 17 (ಪಿಟಿಐ)–ಜನಗಳು ಎದುರಿಸುತ್ತಿರುವ 'ನಿಜವಾದ' ಸಮಸ್ಯೆಗಳ ವಿರುದ್ಧ ತಮ್ಮ ಪಕ್ಷ ಹೋರಾಡುತ್ತಲೇ ಇರುವುದಾಗಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಇಂದು ಹೇಳಿದರು. ಆದರೆ ಸರ್ಕಾರ ತಮ್ಮ ಪಕ್ಷದ ಬೇಡಿಕೆಗಳನ್ನು ಈಡೇರಿಸಿಲ್ಲ ಎಂದು ವಿಷಾದಿಸಿದರು.

ಬಜೆಟ್ ಅಧಿವೇಶನದ ಕೊನೆಯ ದಿನವಾದ ಇಂದು ಸಂಸದೀಯ ಕಾಂಗ್ರೆಸ್ ಪಕ್ಷವನ್ನು ಉದ್ದೇಶಿಸಿ ಮಾತನಾಡಿದ ಸೋನಿಯಾ ಗಾಂಧಿ ಬಿಜೆಪಿಯ ರಹಸ್ಯ ಕಾರ್ಯಸೂಚಿಯ ಬಗ್ಗೆ ಎಚ್ಚರದಿಂದಿರಲು ಪಕ್ಷದ ಸದಸ್ಯರಿಗೆ ಕರೆ ನೀಡಿದರು.

'ಬಿಜೆಪಿಯ ಶೇ 50 ರಷ್ಟು ನಾಯಕರು ಆರ್‌ಎಸ್‌ಎಸ್‌ನಿಂದ ಸೂಚನೆ ಪಡೆಯುತ್ತಿದ್ದು ಆರ್‌ಎಸ್‌ಎಸ್ ಕಾರ್ಯಸೂಚಿ ಏನೆಂಬುದು ಎಲ್ಲರಿಗೂ ಗೊತ್ತಿದೆ' ಎಂದು ಸೋನಿಯಾ ಹೇಳಿದರು.

ಮಾಹಿತಿ ತಂತ್ರಜ್ಞಾನ ಮಸೂದೆಗೆ ಸಂಸತ್ತಿನ ಒಪ್ಪಿಗೆ

ನವದೆಹಲಿ, ಮೇ 17 (ಪಿಟಿಐ)- ಮಾಹಿತಿ ತಂತ್ರಜ್ಞಾನ ಮಸೂದೆಯನ್ನು ಇಂದು ರಾಜ್ಯಸಭೆ ಅಂಗೀಕರಿಸುವುದರೊಂದಿಗೆ ಎಲೆಕ್ಟ್ರಾನಿಕ್ ವ್ಯಾಪಾರಕ್ಕೆ ಕಾನೂನಿನ ಚೌಕಟ್ಟು ನೀಡುವ ಯತ್ನಕ್ಕೆ ಸಂಸತ್ತಿನ ಒಪ್ಪಿಗೆ ದೊರೆತಂತಾಗಿದೆ.

ಲೋಕಸಭೆ ಮಸೂದೆಯನ್ನು ನಿನ್ನೆ ಅಂಗೀಕರಿಸಿತ್ತು. ಈ ಮೂಲಕ ಜಗತ್ತಿನಲ್ಲಿ ಇ- ವ್ಯಾಪಾರಕ್ಕೆ ಕಾನೂನು ರೂಪಿಸಿದ ಕೆಲವೇ ಕೆಲವು ದೇಶಗಳ ಪಟ್ಟಿಗೆ ಭಾರತ ಸೇರಿತು.

ದಕ್ಷಿಣ ಏಷ್ಯಾದಲ್ಲಿ ಈ ರೀತಿಯ ಕಾನೂನು ರೂಪಿಸಿದ ಮೊದಲ ದೇಶ ಭಾರತ. ಏಷ್ಯಾ ಖಂಡದಲ್ಲಿ ಸಿಂಗಪುರವನ್ನು ಬಿಟ್ಟರೆ ಈ ರೀತಿಯ ಕಾನೂನು ಇರುವ ದೇಶ ಭಾರತ ಮಾತ್ರ.

ಪೊಲೀಸರಿಗೆ ಅಧಿಕಾರ: ಇ- ವ್ಯಾಪಾರಕ್ಕೆ ಕಾನೂನಿನ ಚೌಕಟ್ಟು ನೀಡುವುದಲ್ಲದೆ ಸೈಬರ್ ಲೋಕದ ಅಪರಾಧಗಳನ್ನು ಪತ್ತೆಹಚ್ಚುವುದಕ್ಕೂ ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಡಿವೈಎಸ್‌ಪಿ ಮತ್ತು ಅವರ ಮೇಲಿನ ಮಟ್ಟದ ಪೊಲೀಸ್ ಅಧಿಕಾರಿಗಳು ಸಾರ್ವಜನಿಕ ಸ್ಥಳಗಳ ಮೇಲೆ ಯಾವುದೇ ವಾರಂಟ್ ಇಲ್ಲದೆ ದಾಳಿ ಮಾಡಿ ಸೈಬರ್ ಅಪರಾಧದ ಆರೋಪದ ಮೇಲೆ ವ್ಯಕ್ತಿಗಳನ್ನು ಬಂಧಿಸುವ ಅವಕಾಶವನ್ನೂ ಈ ಮಸೂದೆ ಕಲ್ಪಿಸುತ್ತದೆ.

ಸೈಬರ್ ಅಪರಾಧದ ಪ್ರಕರಣಗಳನ್ನು ಕೈಗೆತ್ತಿಕೊಳ್ಳುವ ಅಧಿಕಾರ ಇರುವ ಡಿವೈಎಸ್‌ಪಿ ಹಾಗೂ ಅವರಿಗಿಂತ ಮೇಲಿನ ಮಟ್ಟದ ಪೊಲೀಸ್ ಅಧಿಕಾರಿಗಳಿಗೆ ಕಂಪ್ಯೂಟರ್ ಜ್ಞಾನ ಒದಗಿಸುವಂತೆ ಎಲ್ಲ ರಾಜ್ಯಗಳ ಗೃಹ ಸಚಿವರಿಗೆ ಪತ್ರ ಬರೆಯುವುದಾಗಿ ಮಾಹಿತಿ ತಂತ್ರಜ್ಞಾನ ಸಚಿವ ಪ್ರಮೋದ್ ಮಹಾಜನ್ ತಿಳಿಸಿದರು.

ನಿಷ್ಕರುಣವಾಗಿಲ್ಲ: ಈ ಮಸೂದೆ 'ನಿಷ್ಕರುಣವಾಗಿದೆ' ಎಂಬ ವಿರೋಧ ಪಕ್ಷಗಳ ಆರೋಪವನ್ನು ಅವರು ಸಾರಾಸಗಟಾಗಿ ತಳ್ಳಿಹಾಕಿದರು. [illegible]

ಮುಂಜಾಗರೂಕತೆ: [illegible]

ಕಬ್ಬನ್ ರಸ್ತೆಯಲ್ಲಿ ಭಾನುವಾರ ಅಪಾಯಕಾರಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬಳಿಯೇ ನಿದ್ರಿಸುತ್ತಿದ್ದ ವ್ಯಕ್ತಿ. ವಾರದ ಕೊನೆಯ ದಿನ ಪಬ್ಲಿಮ್ಮಾಲಿನ್ಯದ ಗೊಡವೆ ಇಲ್ಲದೆ ಈತ ನಿದ್ರಿಸುತ್ತಿದ್ದ.

ಸದ್ಭಾವನಾ ವತಿಯಿಂದ 115 ಜೋಡಿಗಳ ಸಾಮೂಹಿಕ ವಿವಾಹ

ನೀರಿನ ಬಕೆಟ್‌ನಲ್ಲಿ ಮುಳುಗಿ ಮಗು ಸಾವು



ಸ್ವರ್ಣಗೌರಿಗೆ ಕರೀಂ ಖಾನ್ ಅಕ್ಷರದಾರತಿ

ಇದು 5[illegible] ವರ್ಷಗಳ ಹಿಂದಿನ ಕಥೆ. [illegible] ಪ್ರತಾಪ್ [illegible] ಬ್ಯಾನರ್‌ನಲ್ಲಿ ವಿ.ಆರ್. ಸ್ವಾಮಿ [illegible] 'ಸ್ವರ್ಣಗೌರಿ' ಎಂಬ ಪುರಾಣ ಪುಣ್ಯಕಥೆಯ ಚಿತ್ರ [illegible] ನಿರ್ದೇಶಕರಾಗಿ [illegible] ಮಾಡಿಕೊಂಡದ್ದು ವೈ. ಆರ್. ಸ್ವಾಮಿ ಅವರನ್ನು [illegible] ಮೊದಲ ಕಥೆ, ಸಂಭಾಷಣೆ ಮತ್ತು [illegible] ವೈ. ಆರ್. ಸ್ವಾಮಿ [illegible] ಎಸ್.ಕೆ. ಕರೀಂ ಖಾನ್‌ರನ್ನು! ಈ [illegible] ಕಾಲದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. [illegible] ಕರೀಂ ಖಾನರ ಮೇಲೆ ವೈ. ಆರ್. ಸ್ವಾಮಿ ಅವರಿಗೆ ಅದೇನೋ ನಂಬಿಕೆ. ಇಟ್ಟ ಹೆಜ್ಜೆಯನ್ನು [illegible] ನಿರ್ಮಾಪಕರಾದ [illegible] ಅವರನ್ನು ಒಪ್ಪಿಸಿ, ನಿರ್ದೇಶನದ ಹೊರತಾದ ಎಲ್ಲ [illegible] ಕರೀಂ ಖಾನ್ ಹೆಗಲಿಗೇರಿಸಿದರು.

'ಸ್ವರ್ಣಗೌರಿ' ಚಿತ್ರದ [illegible] ಪಾತ್ರದಲ್ಲಿ ರಾಜ್‌ಕುಮಾರ್, ಮಣಿಪುರ ರಾಜನ ಪಾತ್ರದಲ್ಲಿ [illegible] ಪಾತ್ರದಲ್ಲಿ ನರಸಿಂಹರಾಜು, ನಾರದ ಪಾತ್ರದಲ್ಲಿ ಕೆ.ಎಸ್. ಅಶ್ವತ್ಥ್, [illegible] ಪಾತ್ರದಲ್ಲಿ ಜಯಲಲಿತಾ ತಾಯಿ [illegible], ಗೌರಿ ಪಾತ್ರದಲ್ಲಿ ಕೃಷ್ಣಕುಮಾರಿ, ಸಾಂಬಯ್ಯ ಪಾತ್ರದಲ್ಲಿ [illegible] ಮೊದಲಾದವರು ನಟಿಸಿದ್ದಾರೆ. ಈ ಚಿತ್ರದ ಹೈಲೈಟ್ ಅಂದರೆ ಕರೀಂ ಖಾನ್ ಅವರ ಅಮೋಘವಾದ ಐದು ಹಾಡುಗಳು. ಎಂ. ವೆಂಕಟರಾಜು ಅವರ ಸಂಗೀತ ಸಂಯೋಜನೆಯ ಈ ಚಿತ್ರದ ಸಂಭಾಷಣೆ ಕೂಡ ಜನಾಕರ್ಷಕವಾಗಿತ್ತು ಮತ್ತು ಇದನ್ನು ಬರೆದವರು ಒಬ್ಬ [illegible] ಎಂಬುದನ್ನು ತಿಳಿದು [illegible] ಪಟ್ಟವರೇ ಜಾಸ್ತಿ ಮಂದಿ!

ಕರೀಂ ಖಾನ್ ಬರೆದ ಐದು ಹಾಡುಗಳ ಆಕರ್ಷಕ ಸಾಲುಗಳು ಹೀಗಿವೆ. 'ನುಡಿಮನ [illegible]', '[illegible] ಗಂಗಾಧರ ಉಮಾಶಂಕರ..', 'ಬಾರೇ ನೀ ಚೆಲುವೇ..', '[illegible]', '[illegible] ಚಂದ್ರಮಾ...'- ಈ ಐದೂ ಹಾಡುಗಳನ್ನು ಪಿ.ಬಿ. ಶ್ರೀನಿವಾಸ್, ಎಸ್. ಜಾನಕಿ, ಬಾಲಮುರಳೀಕೃಷ್ಣ ಮತ್ತು ಚಿತ್ತರಂಜನ್ ಸೊಗಸಾಗಿ ಹಾಡಿದ್ದಾರೆ. [illegible] ಈ ಕಪ್ಪು-ಬಿಳುಪು ಚಿತ್ರ 196[illegible]ರಲ್ಲಿ ತೆರೆಕಂಡಿತು.

ಕರೀಂ ಖಾನ್

'ಸ್ವರ್ಣಗೌರಿ' ಚಿತ್ರದ [illegible] ಮೇಲೆ [illegible] ಜಾನಪದ [illegible] ಈ ಚಿತ್ರಕ್ಕೆ [illegible] ಜತೆಗೆ [illegible] ಮತ್ತು [illegible] ಮಾನಸಿಕ [illegible] ಹೇಳಬೇಕೆಂದರೆ ಆ ಕಾಲದಲ್ಲಿ [illegible] ಕರೆಯುತ್ತಿದ್ದರಂತೆ! ಹಿಂದು [illegible] ಕನ್ನಡ ಚಿತ್ರರಂಗದಲ್ಲಿ [illegible] ಮೂಡಿ ಅಕ್ಷರಗಳಲ್ಲಿ [illegible] ಒಂದು ಮುಸ್ಲಿಂ ಕುಟುಂಬ [illegible] ಕರ್ನಾಟಕದ ಸಕಲೇಶಪುರದಲ್ಲಿ ನೆಲೆ ನಿಂತದ್ದು [illegible] ಕರೀಂ ಖಾನರಿಗೆ ಅದು ಕಬ್ಬಿಣದ [illegible] ಅವರ ಕನ್ನಡ ಪ್ರೇಮ ಮತ್ತು [illegible] ಇದುವೇ ಕಾರಣವಾಯಿತು [illegible] ಕನ್ನಡ ಚಿತ್ರರಂಗದತ್ತ [illegible] ಗೊತ್ತಿಲ್ಲ.

ಅಂತೂ ಅವರು ಇಲ್ಲಿ ಮೂಡಿಸಿದ ಹೆಜ್ಜೆ ಗುರುತು ಸುಲಭವಾಗಿ ಅಳಿಸುವಂಥದ್ದಲ್ಲ.

'ಸ್ವರ್ಣಗೌರಿ' ಚಿತ್ರದ ಮೊದಲ ಅವಕಾಶದಲ್ಲೇ ಸಿಕ್ಸರ್ ಬಾರಿಸಿದ ಕರೀಂ ಖಾನ್ ನಿರೀಕ್ಷೆಯಂತೆ ಅವಕಾಶಗಳ ಮಹಾಪೂರ ಅವರ ಕಡೆ ಹರಿದು ಬರಲಿಲ್ಲ, ರೆಡ್ ಕಾರ್ಪೆಟ್ ಹಾಸಿ ಸ್ವಾಗತಿಸಲಿಲ್ಲ. ಕನ್ನಡ ಚಿತ್ರರಂಗ ಅವರನ್ನು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲಿಲ್ಲ. ಈ ಬಗ್ಗೆ 'ಕನ್ನಡ ಚಲನಚಿತ್ರ ಇತಿಹಾಸ' ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. 'ಜಾನಪದ ವಿದ್ವಾಂಸರಾದ ಎಸ್.ಕೆ. ಕರೀಂ ಖಾನರು 'ಸ್ವರ್ಣಗೌರಿ' ಚಿತ್ರಕ್ಕೆ ಕಥೆ, ಸಂಭಾಷಣೆ ಮತ್ತು ಹಾಡುಗಳನ್ನು ಬರೆದು ಇಡೀ ಚಿತ್ರಕ್ಕೊಂದು ಶೋಭೆ ತಂದು ಕೊಟ್ಟರು. ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿಯೂ ಬಂತು. ಹಾಡುಗಳೂ ಜನಪ್ರಿಯವಾದವು. ಆದರೆ ಚಿತ್ರರಂಗಕ್ಕೆ ಕರೀಂ ಖಾನರ ಪ್ರತಿಭೆ ಬೇಕಾಗಿರಲಿಲ್ಲ. ಅವರಿಗೆ ಆ ನಂತರ ಉತ್ತಮ ಅವಕಾಶವೇ ಸಿಗಲಿಲ್ಲ. ಸಿಕ್ಕ ಅವಕಾಶಗಳಲ್ಲೂ ಸಣ್ಣತನದ ಉಪಟಳ ಹೆಚ್ಚಾಯಿತು. ಇದರ ಗೊಡವೆಯೇ ಬೇಡವೆಂದು ತಮ್ಮ ಪ್ರೀತಿಯ ಜಾನಪದ ಲೋಕಕ್ಕೆ ಹಿಂದಿರುಗಿದರು. ಅವರು ಈ ಚಿತ್ರಕ್ಕಾಗಿ ಬರೆದ ಹಾಡುಗಳು ಸಾಹಿತ್ಯಿಕವಾಗಿ ಪ್ರಬುದ್ಧ ರಚನೆಗಳು. ನಾದಮಯತೆ ಜತೆ ಅನುಪ್ರಾಸಗಳ ಅಂತರಿಕ ಬಲುಕನ್ನು ಹೊಂದಿದ್ದ ಈ ರಚನೆಗಳು ಸಾಕಷ್ಟು ಕ್ರಿಯಾಶಾಲಿಯಾದ ಅರ್ಥ ಪರಂಪರೆ ಹೊಂದಿದ್ದವು. ಇಂತಹ ಇನ್ನಷ್ಟು ರಚನೆಗಳನ್ನು ಪಡೆಯಲಾರದ ದುರಂತ ಚಿತ್ರರಂಗದ್ದು...'

'ಸ್ವರ್ಣಗೌರಿ' ಚಿತ್ರದ ನಂತರ 'ಗಂಗೆಗೌರಿ', 'ಶಿವಲಿಂಗ ಸಾಕ್ಷಿ', 'ಜೀವನತರಂಗ', 'ಬೇವು ಬೆಲ್ಲ', 'ರಾಜೇಶ್ವರಿ', 'ಡೊಂಬರ ಕೃಷ್ಣ' ಮೊದಲಾದ ಚಿತ್ರಗಳಿಗೆ ಹಾಡುಗಳನ್ನು ಬರೆದರು. ಕರ್ನಾಟಕದ ಹಿರಿಯ ಜಾನಪದ ಸಾಹಿತಿಗಳಾಗಿರುವ ಕರೀಂ ಖಾನರು ಸ್ವಾತಂತ್ರ್ಯ ಯೋಧರು. ಅವರ ಜೋಳಿಗೆಯಲ್ಲಿ ಸಿಗುವುದು ಜಾನಪದ ನುಡಿಮುತ್ತುಗಳು, ಹಿಂದೂ ಪುರಾಣಗಳು, ಉಪಕಥೆಗಳು...

ಅಪ್ಪಟ ಬ್ರಹ್ಮಚಾರಿ ಬದುಕನ್ನು ಬಾಳಿದ ಕರೀಂ ಖಾನ್ ನಂತರ ಅವರ ಪೀಳಿಗೆಯ ಬೇರೆ ಯಾರೂ ಚಿತ್ರರಂಗವನ್ನು ನಂಬಿಕೊಳ್ಳಲಿಲ್ಲ! ವ್ಯಾಪಾರ ವ್ಯವಹಾರದಲ್ಲಿ ತೊಡಗಿಕೊಂಡಿರುವ ಅವರ ಕೊನೆಯ ಸೋದರನ ಮಗಳ ಮಗ ತನ್ವೀರ್ ಅಹಮದ್, ತಾತನ ವಿದ್ವತ್ ಬಗ್ಗೆ ಅಭಿಮಾನದಿಂದ ಮಾತಾಡಿದ್ದಾರೆ ಇಲ್ಲಿ, 'ಎಸ್.ಕೆ. ಕರೀಂ ಖಾನ್ ಅಂದರೆ ಸಕಲೇಶಪುರದ ಖಾನ್ ಮನೆತನದ ಕರೀಂ ಖಾನ್! ಅಲ್ಲಿನ ನಕ್ಷತ್ರಾಕಾರದ ಮಂಜಿರಾಬಾದ್ ಕೋಟೆಯಿಂದ ಬೆಂಗಳೂರಿಗೆ ಬಂದು ಕನ್ನಡ ಜಾನಪದ ಸಾಹಿತ್ಯ ಕ್ಷೇತ್ರದ ನಕ್ಷತ್ರವಾಗಿ ಮಿನುಗಿದವರು ನನ್ನ ತಾತ. ರಾಜ್ಯ ಸರ್ಕಾರದ ಮಹತ್ವದ ಎಲ್ಲ ಪ್ರಶಸ್ತಿಗಳನ್ನು ಪಡೆದುಕೊಂಡರೂ ಬೇರೆ ಯಾವ ಸಹಾಯಕ್ಕಾಗಿಯೂ ಮಹಾ ಸ್ವಾಭಿಮಾನಿಯಾದ ನನ್ನ ತಾತ ಕೈ ಚಾಚಲಿಲ್ಲ. ಅವರ ಹೆಸರನ್ನು ಬಳಸಿಕೊಂಡು ಮೆರೆದವರಿದ್ದಾರೆ, ದುಡ್ಡು ಮಾಡಿಕೊಂಡವರಿದ್ದಾರೆ. ಆದರೆ ಇವ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ನನ್ನ ತಾತ ಕೊನೆಯ ಉಸಿರಿರುವ ತನಕ ಕನ್ನಡದ ಮಂತ್ರ ಜಪಿಸಿದರು. ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿದರು. ಅಂಥವರ ಮೊಮ್ಮಗ ಅಂತ ಹೇಳಿಕೊಳ್ಳಲು ನಾನು ಹೆಮ್ಮೆ ಪಟ್ಟುಕೊಳ್ಳುತ್ತೇನೆ...' - ತನ್ವೀರ್ ಅಹಮದ್ ಇಷ್ಟು ಹೇಳಿ ಮೌನವಾದರು. ಅದು ಮೌನ ಮಾತಾಗುವ ಹೊತ್ತು...

(ಲೇಖಕರು ಹಿರಿಯ ಸಿನಿಮಾ ಪತ್ರಕರ್ತರು)
(ಪ್ರತಿಕ್ರಿಯೆ: ganesh.kasaragod@gmail.com, feedback@vijayavani.in)

ದೂರ ಸಾಗಿಬಂದ ಟ್ರೇಲರ್

ಅಪೇಕ್ಷಾ, ಯಶ್

ಹಲವು ವರ್ಷಗಳಿಂದ ಚಿತ್ರರಂಗದಲ್ಲಿ ತೊಡಗಿಕೊಂಡಿರುವ ನಟ/ನಿರ್ದೇಶಕ ರವಿತೇಜ ಈಗ 'ಸಾಗುತ ದೂರ ದೂರ' ಚಿತ್ರಕ್ಕೆ ಆ್ಯಕ್ಷನ್-ಕಟ್ ಹೇಳಿದ್ದಾರೆ. ಇತ್ತೀಚೆಗೆ ಈ ಸಿನಿಮಾದ ಟ್ರೇಲರ್ ಮತ್ತು ಹಾಡುಗಳನ್ನು ಬಿಡುಗಡೆ ಮಾಡಲಾಯಿತು. ಆ ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಗಮಿಸಿದವರು 'ರಾಕಿಂಗ್ ಸ್ಟಾರ್' ಯಶ್. ಈ ಹಿಂದೆ 'ರಾಜಧಾನಿ' ಸಿನಿಮಾದಲ್ಲಿ ಯಶ್ ಮತ್ತು ರವಿತೇಜ ಜತೆಯಾಗಿ ನಟಿಸಿದ್ದರು. ಅಂದಿನಿಂದಲೂ ಅವರಿಬ್ಬರ ನಡುವೆ ಒಳ್ಳೆಯ ಗೆಳೆತನವಿದೆ. ಹಾಗಂತ ಸ್ನೇಹದ ಮುಲಾಜಿನಿಂದ ಯಶ್ ಆ ಕಾರ್ಯಕ್ರಮಕ್ಕೆ ಬಂದಿರಲಿಲ್ಲ. 'ರವಿತೇಜ ಬಂದು ಕೇಳಿಕೊಂಡಾಗ ನಾನೊಂದು ಷರತ್ತು ಹಾಕಿದ್ದೆ. ಟ್ರೇಲರ್ ಮತ್ತು ಸಿನಿಮಾ ಕಂಟೆಂಟ್ ಚೆನ್ನಾಗಿದ್ದರೆ ಮಾತ್ರ ಬಂದು ರಿಲೀಸ್ ಮಾಡಿಕೊಡುತ್ತೇನೆ ಎಂದಿದ್ದೆ. ಯಾಕೆಂದರೆ ಸ್ನೇಹವೇ ಬೇರೆ ಸಿನಿಮಾನೇ ಬೇರೆ. ನನ್ನ ನಿರೀಕ್ಷೆಯಂತೆ ಟ್ರೇಲರ್ ಚೆನ್ನಾಗಿ ಮೂಡಿಬಂದಿದೆ. ಹಾಗಾಗಿ ಒಪ್ಪಿಕೊಂಡೆ. ಮಣಿಕಾಂತ್ ಕದ್ರಿ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ ಎಂಬುದು ಕೇಳಿ ಖುಷಿಯಾಯಿತು' ಎಂದರು ಯಶ್. ಹೀಗೆ 'ರಾಕಿಂಗ್ ಸ್ಟಾರ್' ಕಡೆಯಿಂದ ಮೆಚ್ಚುಗೆ ಕೇಳಿಬಂದಿದ್ದಕ್ಕೆ ಇಡೀ 'ಸಾಗುತ ದೂರ ದೂರ' ಬಳಗಕ್ಕೆ ಸಂಭ್ರಮವೋ ಸಂಭ್ರಮ.

ಗೆಳೆಯನ ಚಿತ್ರಕ್ಕೆ ಯಶ್ ಸಾಥ್

[illegible] ಚಿತ್ರತಂಡ ತುಂಬ ದೂರ ಸಾಗಿಬಂದಿದೆ. ಅಂದರೆ, ನಾಲ್ಕು ವರ್ಷಗಳ ಹಿಂದೆ ಸೆಟ್ಟೇರಿದ ಈ ಚಿತ್ರ ಈಗ ಬಿಡುಗಡೆ ಹಂತಕ್ಕೆ ಬಂದು ನಿಂತಿದೆ. ಅಪೇಕ್ಷಾ ಪುರೋಹಿತ್, ಜಾನ್ವಿ ಜ್ಯೋತಿ, ಮಹೇಶ್, ಮಾಸ್ಟರ್ ಅತೀಕ್ ಮುಂತಾದವರು ನಟಿಸಿರುವ ಈ ಚಿತ್ರಕ್ಕೆ 200ಕ್ಕೂ ಹೆಚ್ಚು ಊರುಗಳಲ್ಲಿ ಚಿತ್ರೀಕರಣ ಮಾಡಲಾಗಿದೆಯಂತೆ. ಎಲ್ಲದಕ್ಕೂ ಸಹಕಾರ ನೀಡಿದ ನಿರ್ಮಾಪಕರಾದ ಅಮಿತ್ ಪೂಜಾರಿ ಅವರಿಗೆ ವಿಶ್ವಾಸದ ಅರ್ಪಿಸುತ್ತಾರೆ ನಿರ್ದೇಶಕ ರವಿತೇಜ.

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, [illegible] ಮತ್ತು [illegible] ಹಾಡಿದ್ದಾರೆ. 'ನಾನು ನಟಿಸಿದ್ದ 'ಕಾಫಿ ತೋಟ' ಚಿತ್ರದ ಟ್ರೇಲರ್ ಅನ್ನು ಯಶ್ ಬಿಡುಗಡೆ ಮಾಡಿದ್ದರು. ಈಗ ಈ ಚಿತ್ರದ ಟ್ರೇಲರ್ ಕೂಡ ಅವರ ಕೈಯಿಂದಲೇ ಲಾಂಚ್ ಆಗುತ್ತಿರುವುದು ಸಂತಸ ತಂದಿದೆ' ಎಂಬುದು ಅಪೇಕ್ಷಾ ಮಾತು. 'ನಾವೆಲ್ಲ ಚಿತ್ರಕ್ಕಾಗಿ [illegible] ಮಾಡಿದ್ದೇವೆ. ಫ್ಯಾಮಿಲಿ ಪ್ರೇಕ್ಷಕರು ಕುಳಿತು ನೋಡುವಂತಹ ಅಪ್ಡೇಟ್ ಕಥೆ ಇದೆ. ಎಲ್ಲರಿಗೂ ನಮ್ಮ ಚಿತ್ರ ಇಷ್ಟ ಆಗಲಿದೆ' ಎಂದು ನಿರ್ದೇಶಕರು ಭರವಸೆ ವ್ಯಕ್ತಪಡಿಸುತ್ತಾರೆ.



ಉಷಾ ಕಿರಣ

ಸಮಾಧಾನಕರ ವಿವರಣೆ

[illegible] ಯೋಜಿತ ಕಾರ್ಯಕ್ರಮಗಳನ್ನು [illegible] ಎಂದು ಹಣಕಾಸು ಸಚಿವರೂ ಆಗಿರುವ [illegible] ಹೇಳಿದರೆಂಬ ಪತ್ರಿಕಾ ವರದಿಗಳಿಗೆ [illegible] ಕಾರಣವೆನ್ನುವಂತೆ ಯಡಿಯೂರಪ್ಪ [illegible]

[illegible] ಜನತಾದಳ-ಬಿಜೆಪಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ [illegible] ಕೊಡುಗೆಗಳನ್ನು ದಿಢೀರ್ ಪ್ರಕಟಿಸುತ್ತಿದ್ದ ವೈಖರಿ, [illegible] ಪತ್ರದಲ್ಲಿ ನಾನಾ ಹೊಸ ಕಾರ್ಯಕ್ರಮಗಳು [illegible] ಪ್ರಕಟಿಸಿದ ಧಾರಾಳತನ ಕಂಡು ಇವೆಲ್ಲ ಸಾಧ್ಯವೇ [illegible]

[illegible] ಯಡಿಯೂರಪ್ಪ ಖಜಾನೆಯಲ್ಲಿ ಹಣವಿಲ್ಲವೆಂದು [illegible] ಪ್ರತಿಪಕ್ಷ ಮತ್ತು ಟೀಕಾಕಾರರಿಗಂತೂ ಪ್ರಬಲ [illegible]

[illegible] ''ಹಾಗೇನೂ ಇಲ್ಲವಲ್ಲ'' ಎಂದು ಖಚಿತ ಮತ್ತು [illegible] ಅದು ರಾಜಕೀಯ ನಾಯಕರ ಮಾಮೂಲಿ [illegible]

[illegible] ಯಡಿಯೂರಪ್ಪನವರು ಹೇಳಿಕೆ-ಗ್ರಹಿಕೆ ನಡುವಿನ ಸಂವಹನ [illegible] ಪ್ರಯತ್ನ ಮಾಡಿರುವರಲ್ಲದೆ ಹೊಸ ಸರ್ಕಾರದ [illegible] ವರ್ಷದ ಮೂರು ತಿಂಗಳ ಸಾಧನೆಯೊಂದಿಗೆ ಹೋಲಿಸಿ, [illegible]

> **ಜಾತ್ಯತೀತ ಜನತಾದಳ-ಬಿಜೆಪಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಜನರ ಬೇಡಿಕೆಗಳಿಗೆ ಸ್ಪಂದಿಸಿ, ಕೊಡುಗೆಗಳನ್ನು ದಿಢೀರ್ ಪ್ರಕಟಿಸುತ್ತಿದ್ದ ವೈಖರಿ, • 2006-2007ರ ಆಯವ್ಯಯ ಪತ್ರದಲ್ಲಿ ನಾನಾ ಹೊಸ ಕಾರ್ಯಕ್ರಮಗಳು ಮತ್ತು ಕೊಡುಗೆಗಳನ್ನು ಪ್ರಕಟಿಸಿದ ಧಾರಾಳತನ ಕಂಡು ಇವೆಲ್ಲ ಸಾಧ್ಯವೇ ಎನ್ನುವಂತಾಗಿತ್ತು.**

[illegible] ಸಂಗ್ರಹವೂ [illegible] 2004-05ರ [illegible] .31ರಷ್ಟು [illegible] ಸಂಗ್ರಹ 2005- [illegible] 13ರಷ್ಟು ಏರಿದೆ. [illegible] 18,533.59 [illegible] ಸಂಗ್ರಹ ಗುರಿ ಹೊಂದಲಾಗಿತ್ತು. 2006ರ ಮಾರ್ಚ್ ಅಂತ್ಯದ [illegible] ಕೋಟಿ ರು. ಸಂಗ್ರಹವಾಗಿದೆ.

[illegible] 2005ರ ಏಪ್ರಿಲ್‌ನಲ್ಲಿ 374.55 ಕೋಟಿ ರು. ಸಂಗ್ರಹವಾಗಿತ್ತು. [illegible] ಕೋಟಿ ರು. ಸಂಗ್ರಹವಾಗಿದ್ದು ಶೇ.63.43 ಹೆಚ್ಚಳವಾಗಿದೆ.

[illegible] ಸಂಗ್ರಹದಲ್ಲಿಯೂ ಏರಿಕೆಯಾಗಿದೆ. 2004ರ ಏಪ್ರಿಲ್‌ನಲ್ಲಿ 132.33 [illegible] ಕೋಟಿ ರು. ಹಾಗೂ 2006ರಲ್ಲಿ 257.47 ಕೋಟಿ [illegible] 2004-05ರಲ್ಲಿ ಶೇ.27.21ರಷ್ಟು ತೆರಿಗೆ ಸಂಗ್ರಹವಾದರೆ, [illegible] ಅಧಿಕ ಸಂಗ್ರಹವಾಗಿದೆ.

[illegible] ತೆರಿಗೆ ಸಂಗ್ರಹ 2003-04ರಲ್ಲಿ 828.88 ಕೋಟಿ ರು, [illegible] ಕೋಟಿ ರು. ಆಗಿತ್ತು 2005-06ರಲ್ಲಿ 1166.86 ಕೋಟಿ [illegible]

[illegible] ತೆರಿಗೆ ಸಂಗ್ರಹದಲ್ಲಿ ಸ್ವಲ್ಪ [illegible] 2004-05ರ ಏಪ್ರಿಲ್‌ನಲ್ಲಿ ಶೇ.80.36 ರಷ್ಟಿದ್ದ ತೆರಿಗೆ [illegible] ಬಿಟ್ಟಾರೆ [illegible] ತೆರಿಗೆ ಸಂಗ್ರಹ [illegible] ಎಂದು [illegible] ಅನುಮೋದನೆಯ [illegible]

ಚಿಮ್ಮಲಗಿಯವರ ಕನ್ನಡಾಭಿಮಾನದ ಪಟ್ಟು

ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಉಳಿಸಿ ಬೆಳೆಸಿಕೊಳ್ಳುವಲ್ಲಿ ಮತ್ತು ಸಾಮಾಜಿಕ ಸಂಘಟನೆಗಾಗಿ ಲೋಕಮಾನ್ಯ ಟಿಲಕರು ಗಣೇಶೋತ್ಸವವನ್ನು ಸಾರ್ವಜನಿಕವಾಗಿ ಮಹಾರಾಷ್ಟ್ರದಲ್ಲಿ ಸಂಘಟಿಸಿದ್ದರು. ಅದು ನೆರೆಯ ರಾಜ್ಯಗಳಿಗೂ ಹಬ್ಬಿದಾಗ ನಿಜಾಮನ ರಾಜ್ಯದಲ್ಲೂ ಹಬ್ಬಿತು. ಬಹು ಸಂಖ್ಯಾತ ಮರಾಠಿಗರಿದ್ದ ಹೈದರಾಬಾದ ನಗರದಲ್ಲೂ ಇಂಥ ಉತ್ಸವಗಳು ಪ್ರಾರಂಭವಾಗುವುದು ಸಹಜವಾಗಿತ್ತು. ಮೊದಲ ದಿನಗಳಲ್ಲಿ ಕನ್ನಡಿಗರೂ ಅದರಲ್ಲಿ ಪಾಲುಗೊಂಡು ಗುಂಪಿನಲ್ಲಿ ಗೋವಿಂದ ಎನ್ನುತ್ತಿದ್ದರು. ಅವರುಗಳಲ್ಲಿ ಕೆಲವು ಕನ್ನಡಿಗರು 'ಕರ್ನಾಟಕ ಸಮಾಜ ಗಣಪತಿ ಉತ್ಸವ' ಆರಂಭಿಸಿದ್ದರು. ಆದರೆ ಅದು ನಾಮ ಮಾತ್ರ ಮಂಡಳಿಯಾಗಿದ್ದಿತು. ಅದರಲ್ಲಿ ವಿಶೇಷ ಕಾರ್ಯಕ್ರಮಗಳೇ ಇರದಿದ್ದರಿಂದ ಕನ್ನಡಿಗರು ಮರಾಠಿ ಜನರೊಂದಿಗೆಯೇ ಕೈ ಜೋಡಿಸಿದ್ದರು.

ಚಿಮ್ಮಲಗಿ ಭೀಮಾಚಾರ್ಯರು ಅದನ್ನು ಕಂಡದ್ದು 'ಕರ್ನಾಟಕ ಸಮಾಜ ಗಣಪತಿ ಉತ್ಸವ'ದಲ್ಲಿ ತಾವೆ ಸಕ್ರಿಯವಾಗಿ ಭಾಗವಹಿಸಿ ಅದಕ್ಕೆ ಒಂದು ವ್ಯಾಪಕವಾದ, ವ್ಯವಸ್ಥಿತವಾದ ರೂಪವನ್ನು ಕೊಟ್ಟರು. ಮೊದಲನೆಯ ವರ್ಷವೆ ಅಂದರೆ 1933ರಲ್ಲಿ ಉತ್ಸವಕ್ಕೆ ಪ್ರೊ. ಡಿ. ಕೆ. ಭೀಮಸೇನರಾಯರನ್ನು ಮುಖ್ಯ ಅತಿಥಿಯನ್ನಾಗಿ ಬರಮಾಡಿಕೊಂಡರು, ಭೀಮಸೇನರಾಯರು ಮೈಸೂರಿನಲ್ಲಿ ಕನ್ನಡ ಎಂ.ಎ. ಪದವಿಯನ್ನು ಪಡೆದು ಆದೇ ಆಗ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದರು. ಜತೆಗೆ ಆ ಸಲದ ಉತ್ಸವದ ವಿಶೇಷ ಆಕರ್ಷಣೆಯಾಗಿ 'ಕನ್ನಡ ಸಂಗೀತ ಮೇಳೆ' ಏರ್ಪಟ್ಟಿತ್ತು. ಜೀವಣರಾವ ಮಾಸ್ತರರು ಹಾರ್ಮೋನಿಯಮ್ ಶಿಕ್ಷಕರಾಗಿ ದೊರೆತರು. 3/4 ದಿನಗಳ ಕಾರ್ಯಕ್ರಮವು ಅಧಿಕ ಸಂಖ್ಯೆಯ ಕನ್ನಡಿಗರನ್ನು ಆಕರ್ಷಿಸಿತು.

ಎರಡನೆಯ ವರುಷ ಬೆಂಗಳೂರಿನಿಂದ ತಿ.ತಾ.ಶರ್ಮರು ಮುಖ್ಯ ಅತಿಥಿಗಳಾಗಿ ಬಂದರು. . ಅನಂತರದ ವರುಷದಲ್ಲಿ ಕೆ. ಸಂಪದ್ಗಿರಿರಾಯರು ಬಂದಿದ್ದರು. ಪ್ರಾರಂಭದಲ್ಲಿ ಉತ್ಸವವು ಇಸಾಮಿಯಾ ಬಜಾರಿನ ಒಂದು ಕೊಠಡಿಯಲ್ಲಿ ನಡೆಯುತ್ತಿದ್ದಿತು. ವರುಷ- ವರುಷಕ್ಕೂ ಕಾರ್ಯಕ್ರಮಗಳ ಆಕರ್ಷಣೆಯಿಂದ ಕೊಠಡಿ ಸಾಲದಾಯಿತು. ಸಂಪದ್ಗಿರಿರಾಯರು ಬಂದ ವರುಷ ಒಂದು ವಿಶಾಲ ಮೈದಾನದಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕಾಯಿತು. ಸಂಪದ್ಗಿರಿರಾಯರ ವಾಗ್ವೈಖರಿ ಅಸದೃಶವಾಗಿತ್ತು. ಮರುದಿನ ವಾಮನ ನಾಯಕರು ತಮ್ಮ ವಿವೇಕ ವರ್ಧಿನಿ ಶಾಲೆಯಲ್ಲಿ ಭಾಷಣ ಮಾಡಲು ಆಮಂತ್ರಿಸಿದರು. ಅವರ ಅಸ್ಖಲಿತ ವಾಣಿಯಿಂದ ಬೆಚ್ಚಿ ಬಿದ್ದ ಮರಾಟಿಗರು 'ಅರೆ ಕಾನಡಿ ಲೋಕಾಮಧೆ ಇತಕೆ ಚಾಂಗಲೆ ಬೋಲಣಾರೆ ವಕ್ತಾ ಆಹೇತ್ ಕಾಯ್' (ಅರೆ ಕನ್ನಡಿಗರಲ್ಲೂ ಇಂಥ ಒಳ್ಳೆಯ ವಾಗ್ಮಿಗಳಿದ್ದಾರೆಯೆ. ಎಂದು ಉದ್ಗಾರ ತೆಗೆದರಂತೆ! ಈ ಎಲ್ಲ ಕಾರ್ಯಕ್ರಮಗಳ ಹಿಂದಿನ ಸೂತ್ರಧಾರರು ಚಿಮ್ಮಲಗಿ ಭೀಮಾಚಾರ್ಯರು ಎಂದು ಬೇರೆ ಹೇಳಬೇಕಾಗಿಲ್ಲ. ಈ ಕಾರ್ಯಕ್ರಮಗಳಿಗೆ ಅಧಿಕ ಸಂಖ್ಯೆಯ ಕನ್ನಡಿಗರು ಬರುವುದನ್ನು ಕಂಡು ಅವರಿಗೆ ತುಂಬ ಸಂತೋಷವಾಯಿತು. ನಾಲ್ಕನೆಯ ವರುಷದ ಗಣೇಶೋತ್ಸವವನ್ನು ಅವರು ಗೌಳಿಗುಡಾ ಉಪನಗರದಲ್ಲಿ ಹಮ್ಮಿಕೊಳ್ಳಬೇಕೆಂದು ಯೋಚಿಸಿದಾಗ ವಾಮನ ನಾಯಕರು ಬಂದು ಚಿಮ್ಮಲಗಿಯವರನ್ನು ಕಂಡು ಹೇಳಿದರಂತೆ.

"ನಾವು ಈಗಾಗಲೇ ಇಲ್ಲಿ ಗಣೇಶೋತ್ಸವವನ್ನು ಆಚರಿಸುತ್ತಿದ್ದೇವೆ. ನಮ್ಮೊಂದಿಗೆ 'ಕಾನಡಿ' ಬಂಧುಗಳೂ ಇದ್ದಾರೆ. ನೀವೂ ಬೇಕಾದರೆ ಬಂದು ಸೇರಿಕೊಳ್ಳಿ. ಗಣೇಶನು ಎಲ್ಲರಿಗೂ ದೇವರು. ನೀವು ಪ್ರತ್ಯೇಕವಾಗಿ ಆಚರಿಸುವುದಾದರೆ, ಕನ್ನಡ - ಮರಾಠಿ ಭೇದದ ಬೀಜವನ್ನು ಬಿತ್ತಿದಂತಾಗುವುದು. ಇದನ್ನು ನಡೆಯಗೊಡುವುದಿಲ್ಲ. ಪರಸ್ಪರ ಜಗಳಗಳಾಗಿ ಏನಾದರೂ ವಿಕೋಪಕ್ಕೆ ಹೋದರೆ ಅದಕ್ಕೆ ನೀವೇ ಜವಾಬುದಾರರು'' ಎಂದು ಮುಂತಾಗಿ ಬೆದರಿಕೆ ಹಾಕುವ ರೀತಿಯಲ್ಲಿ ಹೇಳಿದರು.



■ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಚಿಮ್ಮಲಗಿಯವರು ಶಾಂತವಾಗಿಯೇ ಅದನ್ನು ಆಲಿಸಿದರು. ಕ್ಷಣ ಹೊತ್ತು ವಿಚಾರಿಸಿದರು. ಗಣೇಶನೇನೋ ಎಲ್ಲರ ಪಾಲಿನ ಸಮಾನ ದೇವರು ನಿಜ. ಆದರೆ ಕನ್ನಡತ್ವವನ್ನು ಬಿಂಬಿಸಿ, ಕನ್ನಡಿಗರಲ್ಲಿ ಜಾಗೃತಿಯನ್ನು ಉಂಟು ಮಾಡಲು ಅವರನ್ನು ಒಂದೆಡೆ ಸೇರಿಸಲು ಈ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವಷ್ಟೆ. ಗಣವನೊಬ್ಬನೇ ಬೇಕಾಗಿದ್ದರೆ ಎಲ್ಲಿಯೂ ಹೋಗಿ ನಮಸ್ಕಾರ ಮಾಡಬಹುದಿತ್ತು ಎಂದು ಮುಂತಾಗಿ ಯೋಚಿಸಿದರು. ವಾಮನ ನಾಯಕರ ಬೆದರಿಕೆಗೆ ಜಗ್ಗಲಿಲ್ಲ. ಅವರ ವಿರೋಧವನ್ನು ಗಣಿಸದೆ ತಾವು ಪ್ರತ್ಯೇಕವಾಗಿ ಗಣೇಶೋತ್ಸವವನ್ನು ಏರ್ಪಡಿಸಿದರು. ಈ ಬಾರಿಗೆ ಸುಪ್ರಸಿದ್ಧ ಕೀರ್ತನಕಾರರಾದ ಕೊಪ್ಪಳ ಜಯರಾಮಾಚಾರ್ಯರನ್ನು ಕಾರ್ಯಕ್ರಮಕ್ಕೆ ಆಮಂತ್ರಿಸಲಾಗಿತ್ತು. ಹೈದರಾಬಾದ ಕರ್ನಾಟಕದಲ್ಲಿ ಕನ್ನಡವನ್ನು ಪ್ರಚಾರಗೊಳಿಸುವಲ್ಲಿ ದೇಶಭಕ್ತಿಯನ್ನು ಬೆಳೆಸುವಲ್ಲಿ ಕೊಪ್ಪಳ ಜಯರಾಮಾಚಾರ್ಯರ ಮೂರು- ನಾಲ್ಕು ದಶಕಗಳ ಕಾರ್ಯ ಅವಿಸ್ಮರಣೀಯವಾಗಿದೆ. ಅವುವೆ ಒಂದು ಪ್ರತ್ಯೇಕ ಉಲ್ಲೇಖನಕ್ಕೆ ಕಾರಣವಾದೀತು. ಕೊಪ್ಪಳ ಜಯರಾಮಾಚಾರ್ಯರು ಹೈದರಾಬಾದಿಗೆ ಬರುವ ಮುನ್ನ ಮುಳಗುಂದ ರಾಮಶಾಸ್ತ್ರಿಗಳು ಎಂಬುವರು ಹೈದರಾಬಾದಿನಲ್ಲಿ ಕನ್ನಡ ಹರಿಕೀರ್ತನೆಗಳಿಗೆ ಪ್ರಸಿದ್ಧರಾಗಿದ್ದರು. ಅವರದು ಹೆಸರಿಗೆ ಕನ್ನಡ ಹರಿಕೀರ್ತನ, ಆದರೆ ಮಾತು ಮಾತಿಗೆ ಮಹಾರಾಷ್ಟ್ರದ ಸಂತರ ಅಭಂಗಗಳನ್ನು ಉದ್ಧರಿಸಬೇಕು. ಅದು ಚಿಮ್ಮಲಗಿಯವರಿಗೆ ಮೊಸರಿನಲ್ಲಿ ಕಲ್ಲಿನಂತೆ ಕಂಡಿತ್ತು. ಒಂದು ಸಲ ಅವರು ಕೇಳಿಯೂ ಬಿಟ್ಟರು. ಪ್ರತಿಯಾಗಿ ರಾಮಶಾಸ್ತ್ರಿಗಳು ಕರ್ನಾಟಕದಲ್ಲಿ ಅಂಥ ಮಹಾನುಭಾವರು ಎಲ್ಲಿದ್ದಾರೆ? ಏನು ಬರೆದಿದ್ದಾರೆ, ಎಂದು ಕೇಳಿದ್ದರಂತೆ. ಅದಕ್ಕೆ ಉತ್ತರವೆಂಬಂತೆ ಜಯರಾಮಾಚಾರ್ಯರು ಕೀರ್ತನೆಯುದ್ದಕ್ಕೂ ಹರಿದಾಸರ ಕನ್ನಡ ಕೀರ್ತನೆಗಳನ್ನು ಸುಮಧುರವಾಗಿ ಹಾಡುತ್ತ ಹೋದಂತೆ ಕನ್ನಡ, ಮರಾಟಿ ಶ್ರೋತೃಗಳೆಲ್ಲ ಚಕಿತರಾದರು.

'ಜಯರಾಮಾಚಾರ್ಯರ ಕೀರ್ತನೆಯಿಂದ ಸ್ಫೂರ್ತಿಗೊಂಡ ಹೈದರಾಬಾದಿನ ಕನ್ನಡಿಗರು ನಗರದಲ್ಲಿ ಕರ್ನಾಟಕ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಿದರು. ಅದುವೆ 1925ರಲ್ಲಿ ಸ್ಥಾಪಿತವಾದ 'ಕರ್ನಾಟಕ ಸಾಹಿತ್ಯ ಮಂದಿರ'. ಚಿಮ್ಮಲಗಿ ಅವರ ಮನೆಯೇ ಕರ್ನಾಟಕ ಸಾಹಿತ್ಯ ಮಂದಿರದ ಸ್ಥಳವಾಯಿತು. ಅದರ ಸ್ಥಾಪನೆಗೆ ಆ ಹೊತ್ತಿಗೆ ಹೈದರಾಬಾದಿಗೆ ಬಂದು ನೆಲೆಸಿದ್ದ ಸಿದ್ದವಘಹಳ್ಳಿ ಕೃಷ್ಣಶರ್ಮರು ವಿಶೇಷವಾಗಿ ಶ್ರಮಿಸಿದ್ದರು. ಸಾಹಿತ್ಯ ಮಂದಿರದ ಬೆಳವಣಿಗೆಗೆ ಚಿಮ್ಮಲಗಿಯವರು ಅನನ್ವಿತವಾಗಿ ಸಹಾಯ ಸಲ್ಲಿಸಿದರು. ಅದು ಬೆಳೆದು ದೊಡ್ಡದಾದ ಮೇಲೆ ಬೇರೆಡೆ ಸ್ಥಳಾಂತರಗೊಂಡಿತು. ಸಾಹಿತ್ಯ ಮಂದಿರದ ಅನಂತರ ಕನ್ನಡ ಬುಕ್ ಡಿಪೋ, ಕನ್ನಡ ಮುದ್ರಣಾಲಯಗಳ ಅವಶ್ಯಕತೆ ಕಂಡು ಬಂದಿತು. ಅದಕ್ಕೂ ಚಿಮ್ಮಲಗಿ ಅವರು ಮುಂದಾದರು. ಬುಕ್ ಡಿಪೋ ಕೆಲವು ವರುಷ ನಡೆಯಿತು. ಮುದ್ರಣಾಲಯವೂ ಅದನ್ನು ನಡೆಸಿಕೊಂಡು ಹೋಗುವವರಿಲ್ಲದೆ ನಿಂತು ಹೋಯಿತು.

ನಿಜವಾಗಿ ನಮ್ಮಲ್ಲಿ ಕನ್ನಡದ ಅಭಿಮಾನವಿದ್ದರೆ, ಅದು ಸಣ್ಣ- ಪುಟ್ಟ ಸಂಗತಿಗಳಲ್ಲೂ ಎದ್ದು ಕಾಣಬೇಕು. ಅದಕ್ಕೆ ಚಿಮ್ಮಲಗಿ ಅವರು ಮಾದರಿಯಾಗಿದ್ದಾರೆ. ಒಂದು ಸಲ ಕನ್ನಡ ಕೈಂಕರ್ಯವನ್ನು ಕೈಗೊಂಡಮೇಲೆ ಅದರಲ್ಲಿ ಎಳ್ಳುಕಾಳಿನಷ್ಟೂ ಅಂತ ಬೀಳಬಾರದು. ಚಿಮ್ಮಲಗಿ ಅವರ ಬಾಳಿನಲ್ಲಿ ಇಂಥ ಹತ್ತಾರು ಸಂಗತಿಗಳು ಜರುಗಿದವು. ಪ್ರಾರಂಭದಲ್ಲಿ ಅವರ ಅಂಗಡಿಯ ಹೆಸರು 'ಚಿಮ್ಮಲಗಿಕರದ ಬ್ರದರ್ಸ್' ಎಂದು ಇದ್ದಿತು. ಚಿಮ್ಮಲಗಿಯ ಮುಂದೆ ಬಂದ 'ಕರ್' ಇದು ಮರಾಠಿ ಸಂಕೇತ ಎಂದು ತಿಳಿದೊಡನೆ 'ಕರ್' ಎಂಬುದನ್ನು ಹೊಡೆದುಹಾಕಿದರು. ಅದರಿಂದ ಅವರ ವ್ಯವಹಾರಕ್ಕೆ ಧಕ್ಕೆ ಬರುವಂತೆ ಮರಾಟಿಗರು ಅಪಪ್ರಚಾರವನ್ನು ಮಾಡಿದರು. ಆದರೆ ಅವರು ಅದಕ್ಕೆ ಬಗ್ಗಲಿಲ್ಲ. ಮರಾಟಿಗರ ಅಪಪ್ರಚಾರದಿಂದ ಯಾವ ದುಷ್ಪರಿಣಾಮವೂ ಆಗಲಿಲ್ಲ.

ಪಿ.ಕೆ. ಕರೀಂಖಾನ್ ಆತ್ಮಕಥನ

ನಾನು ಜಂಗಮ, ಅನಿಕೇತನ...

ಹುಟ್ಟಿದ ಸ್ಥಳ-ಸಕಲೇಶಪುರ.

ತಂದೆತಾಯಿ ಅವಿದ್ಯಾವಂತರಾದ್ದರಿಂದ ಹುಟ್ಟಿದ ತಾರೀಖು ವರ್ಷ ಗುರುತಿಸಿಲ್ಲ. ತಂದೆ ರೆಹಮಾನ್ ಖಾನ್ ಆಫ್ಘನ್ ಯೋಧರು. ಸೋದರ ಕಲಹದಿಂದಾಗಿ ದೇಶ ಬಿಟ್ಟು ಬಂದರು. ತಾಯಿಯ ತಂದೆ ಸೈಯದ್ ಜೈವರ್ ಅರಬ್ ದೇಶದವರು.

ವಿದ್ಯಾಭ್ಯಾಸ ಎಂಟನೇ ತರಗತಿಯವರೆಗೆ ಈ ಅವಧಿಯಲ್ಲೇ ಇಸ್ಲಾಂ ಧರ್ಮಾದ [illegible] ಹಿಂದೂ ಪುರಾಣಗಳ ಪರಿಚಯವೂ [illegible]

ಶಾಸ್ತ್ರೀಯ ಸಂಗೀತದ [illegible] ಆಕರ್ಷಣ [illegible] ಜಾನಪದ ಗೀತೆಗಳು ಹೆಚ್ಚು ಪ್ರಿಯವಾದವು. ಜಾನಪದ ಗೀತೆಗಳ ಸಂಗ್ರಹ- ಪ್ರಚಾರದಲ್ಲಿ ಆಸಕ್ತಿ [illegible]

ಇದೇ ಅವಧಿಯಲ್ಲಿ ಸ್ವಾತಂತ್ರ್ಯದ ಕೂಗು, ಗಾಂಧೀಜಿಯವರ ಅನನ್ಯ ಸದೃಢವಾದ ವ್ಯಕ್ತಿತ್ವ ಸುಪ್ತಚೇತನವನ್ನು [illegible] ಕಾಂಗ್ರೆಸ್ ಪ್ರಚಾರ ಹವ್ಯಾಸವೂ, ಕರ್ಮವೂ [illegible] 1932 ನೇ ಆಗಸ್ಟ್ ತಿಂಗಳ 'ತಾಯಿನಾಡು' ಪತ್ರಿಕೆಯಲ್ಲಿ ನನ್ನ ವಿಚಾರ ಪ್ರಕಟವಾಗಿದೆ.

ಕಾಂಗ್ರೆಸ್ ಪ್ರಚಾರಕ್ಕಾಗಿ ನಾನು ಅನುಸರಿಸುತ್ತಿದ್ದ ವಿಧಾನ ವೆಂದರೆ ರಸ್ತೆಯ ಪಕ್ಕದಲ್ಲಿ ನಿಂತು ಜಾನಪದ ಗೀತೆಗಳನ್ನು ಹಾಡುವುದು. ಕೇಳುವುದಕ್ಕೆಂದು ಬಂದು ಸೇರಿದ ಜನರನ್ನು ಕಾಂಗ್ರೆಸ್ಸಿನ [illegible] ಮಾಡುವುದು ಇದನ್ನು ಟಿ. ಸಿದ್ದಲಿಂಗಯ್ಯನವರು ತನ್ನ ಸನ್ಮಾನ ಗ್ರಂಥದಲ್ಲಿ ಅಂಕಿಸಿದ್ದಾರೆ.

1940- 41 ರ ಅವಧಿಯಲ್ಲಿ ಧಾರವಾಡದ 'ಲೋಕಮಿತ್ರ' ಪತ್ರಿಕೆಯ ಉಪಸಂಪಾದಕನಾಗಿದ್ದ ಬಿಡುವಿನ ವೇಳೆಯಲ್ಲಿ ಗ್ರಂಥ ರಚನೆಯೂ ನಿರತನಾಗಿರುತ್ತಿದ್ದೆ. ಸಾವಿರ ಕಥಾ ಸಂಕಲನಗಳನ್ನೂ ಸಮೀರ, ಮುಷೀರ ಬಲಿವಾನಿ ಹುಸೇನ್ ಕಾದಂಬರಿಗಳನ್ನೂ [illegible] ಬೆಂಗಳೂರು ಕೆಂಪೇಗೌಡ [illegible]

(...ಮುಂದುವರೆಯುವುದು

ಪತ್ರ ವಾಚನ

ಎಫ್ ಡಿ ಎ ಹುದ್ದೆಗೆ ಹಣಕಾಸು ಅನುಮೋದನೆ ನೀಡಿ

ವಿದ್ಯಾರ್ಥಿಗಳ [illegible] - ಬೇಕು ಮಾನಸಿಕ ಸ್ಥಿರತೆ

ಮೊದಲು ಫಲಿತಾಂಶ

ಉಷಾ ಕಿರಣ

ಈ ಸಮಸ್ಯೆಗೆ ಪರಿಹಾರ ಏಕಿಲ್ಲ?

ಕರಾವಳಿಯಲ್ಲಿ ಕಡಲ್ಕೊರೆತ ತಡೆಯಲು ಸರ್ಕಾರ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಲಿದೆ [illegible] ಮಂಗಳೂರಿನಲ್ಲಿ [illegible] ಹೇಳಿದ್ದಾರೆ.

[illegible] ಶಾಶ್ವತ ತಡೆಗೋಡೆ [illegible] ಹೊಸದಲ್ಲ. [illegible] ಕೋಟಿ ಮೊತ್ತದ ಪ್ರಸ್ತಾವನೆಯೊಂದನ್ನು [illegible] ಮಳೆಗಾಲ ಬಂದು [illegible] ಈ ವಿಷಯ ಮಾತಾಡುವುದೂ ಅನಂತರ [illegible] ಸಾರ್ವಜನಿಕ ಸ್ಮೃತಿಯಿಂದ ಈ ವಿಷಯ ಮರೆಯಾಗುವುದೂ [illegible]

[illegible] ಮುಖ್ಯಮಂತ್ರಿಯಾದರೋ 'ವಿಧಾನಸೌಧದ ಒಳಗಡೆ ಕುಳಿತು [illegible] ಪ್ರತ್ಯಕ್ಷವಾಗಿ ನೋಡಿದರೆ ಉತ್ತಮ ಎಂಬ ಭಾವನೆಯಿಂದ [illegible] ಸಂಪೂರ್ಣ ಮಾಹಿತಿ ಸಂಗ್ರಹಿಸಿದ್ದೇನೆ [illegible] ತೊಂದರೆಯಾಗದಂತೆ ರಕ್ಷಣೆ ಒದಗಿಸಲು ಅಧಿಕಾರಿಗಳಿಗೆ [illegible]

[illegible] ಪ್ರಮುಖ ಹಾನಿಯೆಂದರೆ ಕಡಲ್ಕೊರೆತ, [illegible] ಜನ ಮತ್ತು ಜಾನುವಾರು ಬಲಿ. ಮೀನುಗಾರಿಕೆಗೆ ಹೋದ ಜನರು [illegible] ಈ ಹಾನಿಗಳೆಲ್ಲ ಪ್ರತಿವರ್ಷ ಪುನರಾವರ್ತನೆಯಾಗುವಂಥ [illegible] ಜ್ವಾಲಾಮುಖಿ, ಸುನಾಮಿಗಳಂಥ ಹಠಾತ್ ಪ್ರಕೃತಿ ವಿಕೋಪಗಳಲ್ಲ. [illegible]

[illegible]

> ಸುಸಜ್ಜಿತ ಹವಾಮಾನ ಕೇಂದ್ರ ಇದ್ದಿದ್ದರೆ ಇಂಥ ಹಾನಿ ಸಂಭವಿಸುತ್ತಿರಲಿಲ್ಲ

[illegible]

ಪರೀಕ್ಷೆಗೆ ಪರ್ಯಾಯವೇನು?

ಸುಮ್ಮನಿರಲಾರದೆ...

> ಪರೀಕ್ಷೆ ಎನ್ನುವಂಥದ್ದು ಯಾವುದೆ ಶಾಲೆಯ ಯಾವುದೆ ವಿದ್ಯಾರ್ಥಿಯನ್ನು ಆ ಒಂದು ವಿಚಾರದ ಮಟ್ಟಿಗೆ ಸಮಾನತೆಯನ್ನು ತಂದುಬಿಡುತ್ತದೆ. ಪರೀಕ್ಷೆಯ ಒತ್ತಡವಿಲ್ಲದೆಯೇ ಕಲಿಕೆಯ ಕ್ರಮದ ಮುಖಾಂತರ ಪರೀಕ್ಷೆಯ ಉದ್ದೇಶ

ಒಬ್ಬ ವಿದ್ಯಾರ್ಥಿ ಶಾಲೆ ಕಲಿತುದರಿಂದ ಬದುಕುವ ಶಕ್ತಿಯನ್ನು ಪಡೆಯಬೇಕು. ಆ ದೃಷ್ಟಿಯಿಂದಲೇ ಎಲ್ಲರಿಗೂ ಶಿಕ್ಷಣ ಎನ್ನುವ ಅಪೇಕ್ಷಣೀಯ ಯೋಜನೆ ಜಾರಿಗೊಳ್ಳುತ್ತಿದೆ. ಆದರೆ ಶಾಲೆ ಕಲಿತದ್ದರಿಂದಾಗಿ ತನಗೆ ಸೂಕ್ತವಾದ ಯಾವ ಕೆಲಸವೂ ಸಿಗ್ತಾ ಇಲ್ಲ. ಬದುಕುವುದು ಹೇಗೆ ? ಎನ್ನುವ ಪ್ರಶ್ನೆ ಬೃಹದಾಕಾರದಲ್ಲಿ ಬೆಳೆಯುತ್ತಿರುವುದು ಕ್ರೂರ ವಾಸ್ತವವಾಗಿದೆ.

ಮಕ್ಕಳಲ್ಲಿ ಮತ್ತು ಪಾಲಕರಲ್ಲಿ ಶಿಕ್ಷಣದ ಬಗ್ಗೆ, ಪರೀಕ್ಷೆಯ ಬಗ್ಗೆ ಭವಿಷ್ಯವನ್ನು ಕುರಿತಾದ ಆತಂಕಗಳಿವೆ ಹೊರತು ಭಯವಲ್ಲ. ಪರೀಕ್ಷೆಯ ಭಯ ಬಹುಮಟ್ಟಿಗೆ ಹೊರಟುಹೋಗಿದೆ. ಫೇಲ್ ಮಾಡಿದರೆ ಮಕ್ಕಳ ಮನಸ್ಸಿಗೆ ನೋವಾಗುತ್ತದೆಂದು ಸರಕಾರ ತೀರ್ಮಾನಿಸಿರುವುದರಿಂದ ಶಿಕ್ಷಕರು ತಾವೇ ಎಡಗೈಯಲ್ಲಿ ಬರೆದಾದರೂ ತಮ್ಮನ್ನು ಪಾಸ್ ಮಾಡುತ್ತಾರೆ ಎನ್ನುವುದು ಮಕ್ಕಳಿಗೂ ಗೊತ್ತಾಗಿದೆ. ನಿಜ. ಮಕ್ಕಳಲ್ಲಿ ಒತ್ತಡವನ್ನು ಸೃಷ್ಟಿಸುವ ಭಯವನ್ನು ಹುಟ್ಟಿಸುವ ಪರೀಕ್ಷೆ ಖಂಡಿತವಾಗಿಯೂ ಒಳ್ಳೆಯದಲ್ಲ. ಹಾಗಾಗಿಯೇ ಪರೀಕ್ಷೆಗಳ ತೀವ್ರತೆ ಹೊರಟುಹೋಗುವಂತೆ ಮಾಡಲಾಗಿದೆ ಮತ್ತು ಆ ನಿಟ್ಟಿನಲ್ಲಿ ಇನ್ನಷ್ಟು ಸಾರ್ಥಕ ಪ್ರಯತ್ನಗಳು ನಡೆಯುತ್ತಿವೆ.

ಆದರೆ ಪರ್ಯಾಯ ಏನು ? ಪರೀಕ್ಷೆಯ ಮುಖೇನ ಯಾವ ಉದ್ದೇಶವನ್ನು ಸಾಧಿಸುವ ಗುರಿ ಇತ್ತೋ ಅದನ್ನು ಪರೀಕ್ಷೆ ಇಲ್ಲದೆ ಅಥವಾ ಪರೀಕ್ಷೆಯ ತೀವ್ರತೆ ಇಲ್ಲವಾದಾಗಲೂ ಸಾಧಿಸಲು ಒಂದು ಸಮರ್ಥ ಪರ್ಯಾಯಬೇಕು. ತ್ರೈಮಾಸಿಕ ಶಿಕ್ಷಣದಲ್ಲಿ ಹಾಗೆ ಪಾಠ ಬೋಧಿಸಿದರೆ ..ಹೀಗೆ ಕಲಿಕೆ ನಡೆದರೆ ಅನ್ನುವುದೆಲ್ಲ ಆಗಲು ಸಾಧ್ಯವಾದರೆ ಪರೀಕ್ಷೆ ಬೇಕಾಗಿಲ್ಲ

ಆದರೆ ಅದೆಲ್ಲ ಆಗುವ ಸಾಧ್ಯತೆ ಎಷ್ಟು? ಮೊದಲನೆಯದಾಗಿ ನಮ್ಮ ಶಿಕ್ಷಕರು ಆ ಮಟ್ಟಿನ ನೈಪುಣ್ಯ ಹೊಂದಿದವರಲ್ಲ. ಅವರು ನೈಪುಣ್ಯತೆ ಗಳಿಸಬೇಕೆಂದು ತರಬೇತಿಗಳನ್ನು ಕೊಡಲಾಗುತ್ತದೆ. ಆದರೆ ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ತೀರಾ ಭಿನ್ನ ರೂಪದ ಹೊಸ ಕಲಿಕೆಯನ್ನು 30-35 ವರ್ಷಗಳ ನಂತರ ಕಲಿಯಲು ಕಷ್ಟ. ಶಿಕ್ಷಕರು ನೈಪುಣ್ಯತೆ ಪಡೆದ ಹಾಗೆ ಕಾಣುತ್ತದೆ. ಆದರೆ ಪಡೆದಿರುವುದಿಲ್ಲ. ಆದರೆ ಹೊಸ ತಲೆಮಾರಿನ ಶಿಕ್ಷಕರು ಕಲಿಯಬಲ್ಲರು. ಕಲಿತ ಅವರು ಹಳಬರೊಂದಿಗೆ ಕೆಲಸ ಮಾಡಬೇಕು. ಸಹಜವಾಗಿ ಸೀನಿಯಾರಿಟಿಯ ಪ್ರಶ್ನೆ ಎದುರಾಗಿರುವಾಗ ಹೊಸ ತಲೆಮಾರಿನ ಶಿಕ್ಷಕರು ಅಷ್ಟು ಸುಲಭವಾಗಿ ಹಳಬರನ್ನು ನಿರಾಕರಿಸಲು ಬರುವುದಿಲ್ಲ. ಒಂದು ವೇಳೆ ನಿರಾಕರಿಸಿ ಮುನ್ನಡೆದರೂ ಭಿನ್ನ ರೂಪದ ಮೆಥಡ್‌ಗಳ ಮುಖಾಮುಖಿ ಮಕ್ಕಳಲ್ಲಿ ಗೊಂದಲ ಹುಟ್ಟಿಸುತ್ತದೆ.

ಇದಾಗಿಯೂ ಇನ್ನೊಂದು ವಿಚಿತ್ರವನ್ನು ಗಮನಿಸಬೇಕು. ನಮ್ಮಲ್ಲಿ ನಿವೃತ್ತ ಶಿಕ್ಷಕರ ಸೇವೆಯನ್ನು ಪಡೆಯುವ ಸರಕಾರಿ ಶಾಲೆಗಳೇ ಬೇಕಾದಷ್ಟಿವೆ. ವಿಪರ್ಯಾಸವೇನೆಂದರೆ, ಪ್ರಶಸ್ತಿ ಕೊಡಬೇಕಾದ್ದು ಹಿರಿಯರಿಗೆ. ಅದರದನ್ನು ಹುಡುಗರಿಗೆ ಕೊಡಲಾಗುತ್ತದೆ! ಉದ್ಯೋಗ ಕೊಡಬೇಕಾದ್ದು ಹುಡುಗರಿಗೆ. ಅದರದನ್ನು ಮುದುಕರಿಗೆ ಕೊಡಲಾಗುತ್ತದೆ! ಈ ಸಮಸ್ಯೆಯನ್ನು ಇನ್ನೊಂದು ದಿಕ್ಕಿನಿಂದಲೂ ನೋಡಬೇಕು. ಹೊಸ ತಲೆಮಾರಿನ ಶಿಕ್ಷಕರು ಹೊಸದನ್ನು ಕಲಿಯಬಲ್ಲರು ನಿಜ. ಆದರೆ ಹೊಸದನ್ನು ಕಲಿಯಬೇಕೆಂಬ ಮನೋಧರ್ಮ ಅವರಲ್ಲಿರಬೇಕಾಗುತ್ತದೆ. ಆ ಮನೋಧರ್ಮವನ್ನು ಡಿಎಡ್, ಬಿಎಡ್ ಕಾಲೇಜುಗಳು ರೂಪಿಸಬೇಕು. ಆದರೆ ಅಲ್ಲಿನ ಉಪನ್ಯಾಸಕರದ್ದು ಇದೇ ಸಮಸ್ಯೆ. ಪ್ರತಿಷ್ಠಿತ ಡಿಎಡ್, ಬಿಎಡ್ ಕಾಲೇಜುಗಳಲ್ಲೇ ಇಂತಹ ಮನೋಧರ್ಮವನ್ನು ಎಷ್ಟರ ಮಟ್ಟಿಗೆ ಮೂಡಿಸಲಾಗುತ್ತಿದೆಯೆಂದು ನಮಗೆಲ್ಲ ಗೊತ್ತಿದೆ. ಅಂಥಲ್ಲಿ ಈಗಂತೂ ಗೂಡಂಗಡಿ ತೆರೆಯಲು ಅನುಮತಿ ಸಿಗುವುದಕ್ಕಿಂತ ಸುಲಭವಾಗಿ ಡಿಎಡ್-ಬಿಎಡ್ ಕಾಲೇಜು ತೆರೆಯಲು ಅನುಮತಿ ಸಿಗುತ್ತಿದೆ. ಆ ಕಾಲೇಜುಗಳು ಎಷ್ಟರ 'ಮಟ್ಟಿಗೆ ಹೊಸತನ್ನು ಕಲಿಯುವ ಹಂಬಲವನ್ನು ಮೂಡಿಸಬಲ್ಲವು?

ಆಯಿತು, ಅಂತಹ ಹಂಬಲ ಇಟ್ಟುಕೊಂಡೇ ಹೊಸ ತಲೆಮಾರಿನ ಶಿಕ್ಷಕ ಹೊರಬರುತ್ತಾನೆ ಎಂದು ಭಾವಿಸೋಣ ಉದ್ಯೋಗಕ್ಕಾಗಿ ಅಲೆದೂ ಅಲೆದೂ ಇನ್ನು ಉದ್ಯೋಗ ಸಿಗುವುದಿಲ್ಲ ಎಣಿಸುವ ಹತಾಶ ಸಂದರ್ಭದಲ್ಲಿ ಅರ್ಧ ಸಂಬಳದ್ದೋ, ಕಾಲು ಸಂಬಳದ್ದೋ ಅಪರೂಪದಲ್ಲಿ ಇಡೀ ಸಂಬಳದ್ದೋ ಕೆಲಸ ಸಿಗುತ್ತದೆ. ಅಲ್ಲಿ ಸೀನಿಯರ್‌ಗಳ ಜೊತೆ ಏಗುವುದರಲ್ಲಿ ಹೈರಾಣಾಗುವ ಆತನಲ್ಲಿ ಉಳಿಯುವ ಹಂಬಲ ಎಷ್ಟು?

ಎರಡನೆಯ ಮತ್ತು ಮಹತ್ವದ್ದಾದ ಸಂಗತಿ ಶಾಲಾ ವ್ಯವಸ್ಥೆಯದ್ದು. ಪರೀಕ್ಷೆ ಎನ್ನುವಂಥದ್ದು ಯಾವುದೆ ಶಾಲೆಯ ಯಾವುದೆ ವಿದ್ಯಾರ್ಥಿಯನ್ನು ಆ ಒಂದು ವಿಚಾರದ ಮಟ್ಟಿಗೆ ಸಮಾನತೆಯನ್ನು ತಂದುಬಿಡುತ್ತದೆ. ಪರೀಕ್ಷೆಯ ಒತ್ತಡವಿಲ್ಲದೆಯೇ ಕಲಿಕೆಯ ಕ್ರಮದ ಮುಖಾಂತರ ಪರೀಕ್ಷೆಯ ಉದ್ದೇಶ ಸಾಧಿಸಲ್ಪಡಬೇಕಾದಾಗ ಇಡೀ ಕಲಿಕಾ ವ್ಯವಸ್ಥೆಯಲ್ಲೆ ಸಮಾನತೆ ಇರಬೇಕಾಗುತ್ತದೆ. ಆದರೆ ನಮ್ಮಲ್ಲಿ ಇದೆಯಾ? ಉತ್ತರ ನಿಮಗೇ ಗೊತ್ತಿದೆ. ಆಗ ಪರೀಕ್ಷೆಗಾಗಿಯಾದರೂ ಓದುವ ವಿದ್ಯಾರ್ಥಿಗಳು ಓದುವುದನ್ನು ಬಿಟ್ಟುಬಿಡುತ್ತಾರೆ ಅಥವಾ ಕಡಿಮೆ ಮಾಡುತ್ತಾರೆ. ಹಾಗಾದರೂ ನಡೆಯುವ ಒಂದಷ್ಟು ಕಲಿಕೆ ಇಲ್ಲವಾಗುತ್ತದೆ.

ಅಂದರೆ ಯಾವುದೇ ಒಂದು ಸ್ಥಾಪಿತ ವ್ಯವಸ್ಥೆಯನ್ನು ಕದಲಿಸಿದಷ್ಟು ಸುಲಭವಾಗಿ ಅದಕ್ಕೆ ಸಮರ್ಥ ಪರ್ಯಾಯವನ್ನು ಕಂಡುಕೊಳ್ಳಲು ಆಗುವುದಿಲ್ಲ. ಹಾಗಂತ ಕದಲಿಸಬಾರದೆಂದಲ್ಲ. ಆದರೆ ಇರುವ ವ್ಯವಸ್ಥೆಯನ್ನು ಕದಲಿಸುವುದು ಮೊದಲ ಆದ್ಯತೆಯಾಗಬಾರದು. ಬದಲು ಯಾವ ವ್ಯವಸ್ಥೆಯು ನಮಗೆ ಬೇಡವೆನಿಸುತ್ತದೋ ಅದಕ್ಕೆ ಸಮರ್ಥ ಪರ್ಯಾಯವನ್ನು ಕಂಡುಕೊಳ್ಳುವುದು ಮೊದಲ ಆದ್ಯತೆಯಾಗಬೇಕು. ಪರೀಕ್ಷೆಗೆ ಸಮರ್ಥ ಪರ್ಯಾಯವೇನು? ಮಕ್ಕಳಿಗೆ ಪುಸ್ತಕ ಕೊಟ್ಟು ಪರೀಕ್ಷೆ ಬರೆಯಲು ಹೇಳೋಣವೋ ? ಅದು ಆಗದ್ದಲ್ಲ. ಯಾಕೆಂದರೆ ಪರೀಕ್ಷೆ ಹಾಲ್‌ನಲ್ಲಿ ಪುಸ್ತಕ ಕೈಗೆ ಸಿಕ್ಕಿದ ತಕ್ಷಣ ಉತ್ತರಿಸಲು ಬರುವುದಿಲ್ಲ. ಪುಸ್ತಕದ ಮೇಲೆ ಪ್ರಭುತ್ವ ಇರಬೇಕಾಗುತ್ತದೆ. ಆ ಮಟ್ಟಿನ ಪ್ರಭುತ್ವ ಪಡೆಯಬೇಕಾದರೆ ಕಲಿಕೆ ಪರಿಣಾಮಕಾರಿಯಾಗಿ ನಡೆದಿರಲೇ ಬೇಕು. ಅಥವಾ ಮಕ್ಕಳಿಗೆ ಯಾವ ಯಾವ ನಮೂನೆಯ ಪ್ರಶ್ನೆಗಳು ಎಷ್ಟಿರಬೇಕೆಂದು ತಿಳಿಸಿ ಅವರೇ ಪ್ರಶ್ನೆಗಳನ್ನು ತಯಾರಿಸಿ ಉತ್ತರವನ್ನು ಬರೆಯಲು ಹೇಳೋಣವೋ? ಇಲ್ಲಿ ಕಲಿಕೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಡೆದಿರಬೇಕಾಗುತ್ತದೆ. ಯಾಕೆಂದರೆ ಚೆನ್ನಾಗಿ ಓದಿಕೊಂಡಿದ್ದರೆ ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭ. ಆದರೆ ಪ್ರಶ್ನೆ ತೆಗೆಯಲು ಕಷ್ಟವಿದೆ. ಅದಕ್ಕೆ ವಿಷಯದ ಮೇಲೆ ಜ್ಞಾನ ಇರಬೇಕಾಗುತ್ತದೆ. ಅದರ ಬಹುಮುಖಿ ಆಯಾಮಗಳ ಪರಿಚಯವಿರಬೇಕಾಗುತ್ತದೆ. ಅಂತೂ ಒಟ್ಟಾರೆಯಾಗಿ ಪರೀಕ್ಷೆಯ ಒತ್ತಡ ನಿವಾರಿಸಲು ಹೊರಟಿರುವಾಗ ಅದಕ್ಕೆ ಸಮರ್ಥ ಪರ್ಯಾಯವೊಂದನ್ನು ಕಂಡುಕೊಳ್ಳುವುದು ಅತ್ಯಗತ್ಯವಾಗಿದೆ.

ಅರವಿಂದ ಚೊಕ್ಕಾಡಿ

ಎಸ್. ಸಿ. [illegible] ಆತ್ಮಕಥನ-2

ಕ್ವಿಟ್ ಇಂಡಿಯಾ ನೆನಪು

(ನಿನ್ನೆಯಿಂದ)

ಕ್ವಿಟ್ ಇಂಡಿಯಾ ಚಳುವಳಿಯ ವೇಳೆಯಲ್ಲಿ ನನ್ನ ವೇಷದಿಂದಾಗಿ ನಮ್ಮ ಮನೆಯವರ ಜವಳಿ ಲೈಸನ್ಸ್ ರದ್ದಾಯಿತು. ಇದರಿಂದ ಮನೆಯವರಿಗೆ ನನ್ನ ಮೇಲೆ ಕೋಪವುಂಟಾಯಿತು. ಜೈಲಿನಿಂದ ಬಿಡುಗಡೆಯಾದ ಮೇಲೆ ಮನೆಗೆ ಹೋಗಬಾರದೆಂದು ತೀರ್ಮಾನಿಸಿಕೊಂಡೆನು. ಬೊಂಬಾಯಿಗೆ ಹೋಗಿ 'ರಾಯಲ್ ಇಂಡಿಯನ್ ನೇವಿ' ಯಲ್ಲಿ ವೈರ್‌ಲೆಸ್ ಟೆಲಿಗ್ರಾಫರ್ ಆಗಿ ಕೆಲಸಕ್ಕೆ ಸೇರಿಕೊಂಡೆನು. ಒಂದು ವರ್ಷ ಚೆನ್ನಾಗಿ ಕಳೆಯಿತು. ಅನಂತರ ಸಕಲೇಶಪುರದ ಪೊಲೀಸ್ ಠಾಣೆಯಿಂದ ನಾನು ಕಾಂಗ್ರೆಸ್ ಚಳುವಳಿಯಲ್ಲಿದ್ದ ವಿಚಾರ ನೌಕಾದಳಕ್ಕೆ ತಿಳಿಯಿತು. ನನ್ನನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಆದರೂ ನೌಕಾದಳದವರು ಪದಕ, ನಕ್ಷತ್ರ ಮತ್ತು ಅರ್ಹತಾ ಪತ್ರವನ್ನು ನೀಡಿದರು.

ಅನಂತರ ಕಷ್ಟ ಜೀವನ ಸಾಗುತ್ತಿರುವಂತೆಯೇ ಸ್ವಾತಂತ್ರ್ಯ ಬಂತು. ಮೈಸೂರ್ ಚಲೋ ಚಳುವಳಿಯೂ ಪ್ರಾರಂಭವಾಯಿತು. ನನ್ನನ್ನು ಬಂಧಿಸಿ [illegible] ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರ ಜೊತೆಯಲ್ಲಿ ಚಿಕ್ಕಮಗಳೂರು ಜೈಲಿನಲ್ಲಿಡಲಾಯಿತು. ನನ್ನನ್ನು ಅಲ್ಲಿಂದ ಬೆಂಗಳೂರಿಗೆ ತಂದು ಕೃಷ್ಣರಾಜಪುರ ಜೈಲಿನಲ್ಲಿಟ್ಟರು. ಅಂದಿನ ಜೊತೆಗಾರರ ಪೈಕಿ ಈಗ ಉಳಿದಿರುವವರೆಂದರೆ ಮಾಜಿ ಮೇಯರ್ ಜೆ. ಲಿಂಗಯ್ಯನವರೊಬ್ಬರೆ. ಸ್ವಾತಂತ್ರ್ಯ ನಂತರದ ವಿಪರ್ಯಾಸವೆಂದರೆ ಕಾಂಗ್ರೆಸ್ಸಿನ ಪರ [illegible] ಹೋರಾಡಿದ ನಾಲ್ವರು ಮುಸ್ಲಿಮರನ್ನು ಹಿಂದಕ್ಕೆ ದೂಡಿ ಕಾಂಗ್ರೆಸ್ಸಿಗರು ಮುಸ್ಲಿಂಲೀಗಿನವರನ್ನು ಆಲಂಗಿಸಿಕೊಂಡರು. [illegible] ನಾನು 1952 ರಲ್ಲಿ ನಡೆದ ಪ್ರಥಮ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳ ಪರವಾಗಿ ಪಾದಚಾರಿಯಾಗಿ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಪ್ರಚಾರ ಕಾರ್ಯ ನಡೆಸಿದೆನು. ಪ್ರತಿಫಲ ಸೊನ್ನೆ.

ಸ್ವಾತಂತ್ರ್ಯ ಲಭ್ಯವಾದೊಡನೆಯೇ ಆರ್ ಎಸ್ ಎಸ್‌ನವರು ಬೃಹತ್ ಸಮ್ಮೇಳನ ನಡೆಸಲು ಇಚ್ಛಿಸಿದರು. ಅವರಿಗೆ ಭಾರತದ ಯಾವ ಭಾಗದಲ್ಲಿಯೂ ಅವಕಾಶ ಸಿಗಲಿಲ್ಲ.

ಆದರೆ ಅಂದಿನ ಮೈಸೂರ್ ಕಾಂಗ್ರೆಸ್ ಮಂತ್ರಿಮಂಡಲ ಅವಕಾಶವನ್ನು ನೀಡಿತು. ಬೆಂಗಳೂರಿನಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಹಿಂದೂ ಮಹಾಸಭೆಯ ಮುಖಂಡ ಗಾಂಧೀಜಿಯವರನ್ನು ವಾಚಾಮಗೋಚರವಾಗಿ ಬೈದರು. ಆದರೆ ಯಾವ ಕಾಂಗ್ರೆಸ್ಸಿಗನೂ ಚಕಾರವೆತ್ತಲಿಲ್ಲ. [illegible] ಚನ್ನಬಸಪ್ಪನವರು ಮಾತ್ರ [illegible] ಒಂದು ಉತ್ತರವನ್ನು ಬರೆದರು. ಆರ್ ಎಸ್ ಎಸ್ ರ್‍ಯಾಲಿ ನಡೆದ ಅನತಿಕಾಲದಲ್ಲೇ ಗಾಂಧೀಜಿಯವರ ಕೊಲೆ ನಡೆದುಹೋಯಿತು.

ಜಾತಿವಾದಿಗಳು ಮಕ್ಕಳ ಮನಸ್ಸನ್ನು ಕೆಡಿಸುತ್ತಿರುವುದನ್ನು ನೋಡಿ ಗಾಬರಿಗೊಂಡ ಡಾಕ್ಟರ್ ಹರ್ಡಿಕರ್ ಕಾಂಗ್ರೆಸ್ ಸೇವಾದಳದ ಪುನರುಜ್ಜೀವನಕ್ಕೆ ಪ್ರಯತ್ನಿಸಿದರು

(ಮುಂದುವರಿಯುವುದು)

ಪತ್ರ ವಾಚನ [illegible]

ಶಾಶ್ವತ ಪರಿಹಾರವೆಂದು?

ಫಲಿತಾಂಶ ನಂತರ

ಕಾವಲುಗಾರರನ್ನು

ಚಿಕೂನ್ ಗುನ್ಯಾ ನಿಯಂತ್ರಿಸಿ

ಮೇ 22ರಿಂದ ನಗರದಾದ್ಯಂತ ಆರಂಭ

ಮ್ಯಾನ್‌ಹೋಲ್ ಸ್ವಚ್ಛತೆ

[illegible]

[illegible] 74 ನೇ ಹುಟ್ಟುಹಬ್ಬವನ್ನು [illegible] ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು [illegible] ಎಚ್.ಡಿ ಕುಮಾರಸ್ವಾಮಿ ಅವರಿಗೆ ಕೇಕ್ ತಿನ್ನಿಸಿದರು. [illegible] (ಮಧ್ಯದಲ್ಲಿ), ಪತ್ನಿ ಚನ್ನಮ್ಮ ದೇವೇಗೌಡ ಅವರೂ ಚಿತ್ರದಲ್ಲಿದ್ದಾರೆ

ಚಿನಕುರಳಿ

ಪಿ.ಮಹಮ್ಮದ್



ಗೋಧ್ರಾ: ನಾಲ್ವರಿಗೆ ಜೀವಾವಧಿ ಶಿಕ್ಷೆ

ಅಹ್ಮದಾಬಾದ್: [illegible]

ಕಿಡಿನುಡಿ

[illegible] ಈಗ ಬಿಜೆಪಿ ಜತೆಗೂಡಿ [illegible]

-ಕುಮಾರಸ್ವಾಮಿ

[illegible] ಮಕ್ಕಳು ಗಾಯಗೊಂಡಿದ್ದಾರೆ.

[illegible] (35) [illegible] (32) ಮತ್ತು [illegible] (30) ಮೃತಪಟ್ಟಿದ್ದಾರೆ.

ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಭಾರತಿ, [illegible]

ಕಲ್ಲಿಕೋಟೆಯ ಕುಟುಂಬವೊಂದು ಪ್ರವಾಸದ ಮೇಲೆ ಕಳೆದ ಮೂರು ದಿನಗಳ ಹಿಂದೆ ಮೈಸೂರಿಗೆ ಆಗಮಿಸಿತ್ತು. ಗುರುವಾರ ನಗರದಿಂದ ಕಲ್ಲಿಕೋಟೆಗೆ ಟಾಟಾ ಸುಮೋದಲ್ಲಿ [illegible] ಹಾರ್ಡಿಂಗ್ ವೃತ್ತದ ಬಳಿ [illegible]

[illegible] ವಾಗಿದೆ. ಸಂಜೆ 6 ಗಂಟೆಯ ನಂತರ ಯಾವುದೇ ರೈಲುಗಳು ಮೈಸೂರಿಗೆ ಆಗಮಿಸಲಿಲ್ಲ.

[illegible] ಯಿಂದಾಗಿ ಅನೇಕ ಮನೆಗಳಿಗೆ ಹಾನಿಯಾಗಿದೆ. ಮಾಯಸಂದ್ರ ಹೋಬಳಿ ಮಲ್ಲೇನಹಳ್ಳಿಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ [illegible]

ಬೆಂಗಳೂರು ವರದಿ: ನಗರದಲ್ಲಿ ವರುಣ ಆರ್ಭಟ ಮತ್ತೆ ಜೋರಾಗಿದ್ದು ಗುರುವಾರ ಸಂಜೆ ಗುಡುಗು [illegible] ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತು. [illegible] ರಸ್ತೆಯ ಕೆ.ಪಿ. ಅಗ್ರಹಾರದ [illegible] ಕಟ್ಟಡದ [illegible] ಮಕ್ಕಳು ಗಾಯಗೊಂಡಿದ್ದು [illegible] ಆಸ್ಪತ್ರೆಗೆ ಸೇರಿಸಲಾಗಿದೆ

ಇನ್ನಷ್ಟು ಚಿತ್ರ-ಸುದ್ದಿ ಪುಟ 3

[illegible]

ಜಾನಪದ ಗಾರುಡಿಗ ಕರೀಂಖಾನ್ ಬದುಕು

'ಇದು ಬೊಂಬೆಯಾಟವಯ್ಯಾ...'

ಉ.ಮ.ಮಹೇಶ್

ಪ್ರಜಾವಾಣಿ ವಾರ್ತೆ



ನಾಲ್ಕು ದಿನಗಳಿಂದ ಆಸ್ಪತ್ರೆಯಲ್ಲಿರುವ 'ಜಾನಪದ ಗಾರುಡಿಗ' ಎಸ್.ಕೆ. ಕರೀಂ ಖಾನ್ ಅವರಿಗೆ ಇಹದ ಅರಿವಿಲ್ಲ. ರಾಜ್ಯ ಸರ್ಕಾರ ಕೊಡುತ್ತೇನೆಂದು ಭರವಸೆ ನೀಡಿದ್ದ ಮನೆ ಇನ್ನೂ ಸಿಕ್ಕಿಲ್ಲ. ಮನೆ ಮಾತು ಒತ್ತಟ್ಟಿಗಿರಲಿ. ಅವರನ್ನು ನೋಡಿ ಕೊಳ್ಳಲು ನಿಯೋಜಿಸಿದ್ದ ನೌಕರನಿಗೆ 14 ತಿಂಗಳಿಂದ ವೇತನವೂ ಬಿಡುಗಡೆಯಾಗಿಲ್ಲ.

ಬೆಂಗಳೂರು: ಜೀವನದ ಸಂಜೆಯಲ್ಲಿರುವ ಆ ಅಜ್ಜನಿಗೆ ಈಗ ಇಹದ ಅರಿವಿಲ್ಲ. ನಾಲ್ಕು ಗೋಡೆಗಳ ನಡುವೆ ಮಲಗಿರುವ ಅವರು ಆಗೀಗ ಪ್ರಯಾಸದಿಂದ [illegible]

ಆ ಅಜ್ಜನ ಹೆಸರು ಎಸ್.ಕೆ. ಕರೀಂಖಾನ್ ಜಾನಪದ ಗಾರುಡಿಗ. ಚಿತ್ರ ಸಾಹಿತಿ. ಸ್ವಾತಂತ್ರ್ಯ ಹೋರಾಟಗಾರ. ರಾಷ್ಟ್ರಪ್ರಶಸ್ತಿ ಗಳಿಸಿಕೊಟ್ಟ 'ನಟವರ ಗಂಗಾಧರ..' ಸೇರಿದಂತೆ ಅನೇಕ [illegible] ಗೀತೆಗಳಿಗೆ ಸಾಹಿತ್ಯ [illegible]

ಒಂದೆರಡು ದಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಬಳಿಕ, ಈಗ ಕಳೆದ ನಾಲ್ಕು ದಿನಗಳಿಂದ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಂಬಂಧಿಗಳಿಗೆ ವೈದ್ಯರು ತಿಳಿಸಿದ ಪ್ರಕಾರ, [illegible] ಅವರನ್ನು ಈಗ ನೋಡಿಕೊಳ್ಳುತ್ತಿರುವ ಸಂಬಂಧಿಕರಾದ ರಿಯಾನಾ ಅಖ್ತರ್, ಮುಸೀರ್ ಅಹ್ಮದ್, ತನ್ವೀರ್ ಅವರ ಪ್ರಕಾರ, ಬಾಹ್ಯ ಪ್ರಪಂಚದ ಯಾವ ಬೆಳವಣಿಗೆಗಳು ಕರೀಂ ಖಾನ್ ಅವರ ಅರಿವಿಗೆ ಬರುತ್ತಿಲ್ಲ.

ಮನೆ ಸಿಕ್ತಾ ?: ಕರೀಂಖಾನ್ ಹೆಸರು ಕೇಳಿದಾಕ್ಷಣ ಕೇಳಿ ಬರುವ ಪ್ರಶ್ನೆ 'ಸರ್ಕಾರ ಭರವಸೆ [illegible] ಆ ಪ್ರಕಾರ ಅವರಿಗೆ ಮನೆ ಸಿಕ್ತಾ?'

ಈ ಪ್ರಶ್ನೆಗೆ ಉತ್ತರ 'ಇಲ್ಲ' [illegible] ಕರೀಂ ಖಾನ್‌ರನ್ನು ನೋಡಿಕೊಳ್ಳಲು ಸರ್ಕಾರವೇ [illegible] ಕಳೆದ [illegible] ತಿಂಗಳಿಂದ ಪತ್ತೆ [illegible] ಕಾರಣ, ಆತನಿಗಾಗಿ ನಿಗದಿ ಪಡಿಸಿದ್ದ ಮಾಸಿಕ 750 ರೂಪಾಯಿ ವೇತನ 14 ತಿಂಗಳಿಂದ ಬಿಡುಗಡೆಯಾಗಿಲ್ಲ.

'ಜಾನಪದ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಪರಿಗಣಿಸಿ [illegible] ಅವರಿಗೆ ಸರ್ಕಾರ [illegible] ಪ್ರತಿ ಸರಿಯೇ' ಎಂಬುದು ಈಗ [illegible] ಕರೀಂಖಾನ್‌ರ ಸಹೋದರ ಗಫಾರ್ ಖಾನ್ ಅವರ ಮಗಳು ರಿಯಾನಾ ಪ್ರಶ್ನೆ.

'ಖಾನ್‌ರನ್ನು ನೋಡಿಕೊಳ್ಳಲು ನೇಮಿಸಿದ್ದ ನೌಕರನಿಗೆ ವೇತನ ಬಿಡುಗಡೆ ಆಗಿದೆಯಾ, ಅವರನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿದೆಯಾ' ಎಂದು ತಿಳಿಯುವ ಆಸಕ್ತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ಇದ್ದಂತಿಲ್ಲ' ಎನ್ನುತ್ತಾರೆ.

'ಮನೆ ಕೊಡಿ ಎಂದು ನಾವು (ಸಂಬಂಧಿಕರು) ಕೋರಿಲ್ಲ. ಆದರೆ, ಕರೀಂಖಾನ್‌ಗೆ ಮನೆ ಬೇಕಿಲ್ಲ. ಅವರ ಸಂಬಂಧಿಕರಿಗೆ ಬೇಕಾಗಿದೆ ಎಂದು ಹಿಂದಿನ ಸಚಿವರೊಬ್ಬರು ಹೇಳಿದರು' ಎಂದು ಬೇಸರದಿಂದ ನೆನಪಿಸಿಕೊಳ್ಳುತ್ತಾರೆ.

'ಅವರಿಗೆ ಯಾವ ಸಂಬಂಧಿಕರು ಕೇಳಿದರು? ಕರೀಂಖಾನ್ ಅವಿವಾಹಿತರಾಗಿದ್ದು, [illegible] (ಗಫಾರ್ ಖಾನ್) ಅವರ [illegible] ಮನೆಯಲ್ಲಿ ವಾಸವಿದ್ದರು. ಗಫಾರ್ ಖಾನ್ [illegible] ಹಿಂದೆ ತೀರಿಕೊಂಡರು. [illegible] ಎರಡು ತಿಂಗಳ ಬಳಿಕ ಆ ಸಚಿವರು ಸಂಬಂಧಿಕರಿಗೆ ಮನೆ ಬೇಕಾಗಿದೆ ಎಂದು ಹೇಳಿಕೆ ನೀಡಿದರು' ಎಂದು ರಿಯಾನಾ ಬೇಸರ ವ್ಯಕ್ತಪಡಿಸುತ್ತಾರೆ.

'ಸ್ವಾತಂತ್ರ್ಯ ಸಿಕ್ಕಾಗ ಬಯಸಿದ್ದರೆ ಇವರು ಯಾವ ಸ್ಥಾನವಾದರೂ ಗಳಿಸಬಹುದಿತ್ತು. ಎರಡು ಬಾರಿ ಎಂಎಲ್‌ಸಿ ಆಗುವ ಅವಕಾಶವು ಸಿಕ್ಕಿತ್ತು. ಅದನ್ನು ತಿರಸ್ಕರಿಸಿ ನಾಡು-ನುಡಿಗೆ ಬದುಕು ಮೀಸಲಿಟ್ಟರು. ಇವರನ್ನು ಸರ್ಕಾರ ಹೀಗೆ ನಡೆಸಿಕೊಳ್ಳಬಹುದಾ?' ಎಂಬುದು ಮೊಮ್ಮಗ (ರಿಯಾನಾ ಅಖ್ತರ್ ಪುತ್ರ) ಎಂಜಿನಿಯರ್ ಆಗಿರುವ ತನ್ವೀರ್ ಪ್ರಶ್ನೆ.

ಭರವಸೆ ನೀಡಿದ್ದಂತೆ ಸರ್ಕಾರ ಮನೆಯ ಕೀ ಅನ್ನೂ ನೀಡಿತ್ತಲ್ಲ? ಎಂದು ಪ್ರಶ್ನಿಸಿದರೆ, 'ಸಮಾರಂಭದಲ್ಲಿ ಹಾಗೇ ಪ್ರಕಟಿಸಿದ್ದು ನಿಜ. ಅಲ್ಲೆಲ್ಲೋ ಬನಶಂಕರಿಯಲ್ಲಿ ಭೋಗ್ಯಕ್ಕೆ ಮನೆ ಮಾಡಿದರಂತೆ. ಆ ಮನೆಯನ್ನು ಕರೀಂ ಖಾನ್ ಅಥವಾ ಕುಟುಂಬದ ಸದಸ್ಯರಾದ ನಾವ್ಯಾರೂ ಈವರೆಗೂ ನೋಡಿಲ್ಲ' ಎಂದು ತನ್ವೀರ್ ಸ್ಪಷ್ಟಪಡಿಸುತ್ತಾರೆ.

ಕರೀಂಖಾನ್ ಅವರು ಬದುಕಿನ ಸಂಜೆಯಲ್ಲಿ ಇರುವ ಈ ಹೊತ್ತಿನಲ್ಲಿ ಸರ್ಕಾರ ಭರವಸೆ ನೀಡಿದ ಮನೆ ಸಿಗುತ್ತದೆ ಎಂಬ ಭರವಸೆಯೂ ಮನೆ ಮಂದಿಗೆ ಇಲ್ಲ. ಬದಲಾಗಿ ಬೇಸರವಿದೆ.

5ನೇ ಪುಟ ನೋಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಬೆಂಗಳೂರು ಫೋ: 9243199732, 9243199213, 9243199215, 9243199775, 9243199983, 9243199842, 9243199848, 9243199304, 9243199880, 08056789755; ಹುಬ್ಬಳ್ಳಿ: ಫೋ. - 9243199657, ಮಂಗಳೂರು: ಫೋ. - 9243199924, 9243199670, ಮೈಸೂರು: ಫೋ. - 9243199433, 9243199745, ಬೆಳಗಾವಿ: ಫೋ. - 9243199568; ಗುಲ್ಬರ್ಗ: ಫೋ. - 9243199591, ಉಡುಪಿ: ಫೋ. - 9243199577; ಬಳ್ಳಾರಿ: ಫೋ. - 9243199896; ದಾವಣಗೆರೆ: ಫೋ. - 9243199130; ಶಿವಮೊಗ್ಗ: ಫೋ. - 9243199565

ಬೆಂಗಳೂರು: ಶುದ್ಧ ಬೆಳ್ಳಿ ಕೆಜಿಗೆ ರೂ 21,000; ಸ್ಟ್ಯಾಂಡರ್ಡ್ ಚಿನ್ನ ಹತ್ತು ಗ್ರಾಂಗೆ ರೂ 10,441; ಆಭರಣ ಚಿನ್ನ ಒಂದು ಗ್ರಾಂಗೆ ರೂ 998; ಡಾಲರ್ ವಿನಿಮಯ ದರ ರೂ 45.52

ಉಷಾ ಕಿರಣ

ಲಘು ಪ್ರವೃತ್ತಿ

ನ[illegible] ಉಡಾಫೆ ಧೋರಣೆ ಬಂದಿರುತ್ತದೆ. ಜನತಾ [illegible] ಸರ್ಕಾರ ರಚನೆಯಾದ ಮೇಲೆ ಶಾಸನ [illegible] ಸರ್ವಾಧಿಕಾರ ಕೈಗೆ ಬಂದಂತೆ ವರ್ತಿಸಲಾರಂಭಿಸುವುದು [illegible] ತಮಗೆ ಇಷ್ಟವೋ, ಯಾವುದರಿಂದ ತಮಗೆ [illegible] ಹೆಚ್ಚುವುದೋ ಅದನ್ನು ಶಾಸನದ [illegible] ಮುಂದಿನದಕ್ಕೆ ಬೇಕಿಲ್ಲವೆಂಬಂತೆ ಸರ್ಕಾರಗಳು [illegible] ಮಾಡುತ್ತವೆ.

[illegible] ನಿರ್ವಹಣೆಯಲ್ಲಿ ಮಾಡಲೇಬೇಕಾದ್ದನ್ನು ಮಾಡದಿರುವುದು, [illegible] ಮಾಡುವುದು, ಮಾಡುವುದನ್ನು ಸಮರ್ಪಕವಾಗಿ [illegible] ಸರ್ಕಾರದ ಮುಖಭಂಗದ ಸಂಗತಿಗಳೆಂದು ಭಾವಿಸುವುದೇ [illegible] ಕೆಲವು ವಿಷಯಗಳಲ್ಲಿ ಸರ್ಕಾರದ ಮೂಲಭೂತ ಕರ್ತವ್ಯ [illegible] ನ್ಯಾಯಾಲಯಗಳು ತಲೆಹಾಕಿ ಆದೇಶ ನೀಡಬೇಕಾದ ಸಂದರ್ಭಗಳು [illegible] ಹೊಸತೇನಲ್ಲ. ಸರ್ಕಾರದ ಆದೇಶಗಳಿಗಿಂತ ನ್ಯಾಯಾಲಯದ ಆದೇಶಗಳೇ [illegible] ದಾರಿಯನ್ನು ನಿರ್ದೇಶಿಸುತ್ತಿರುವ ನಿದರ್ಶನಗಳುಂಟು. ಸರ್ಕಾರಗಳು [illegible] ಎಣಿಸುತ್ತಿರುವಾಗಲೇ ಸರ್ಕಾರದ ಬದಲು ಸುಪ್ರೀಂ ಕೋರ್ಟ್ ಮುನ್ನುಗ್ಗಿ [illegible] ಉದಾಹರಣೆಗಳಿವೆ.

[illegible] ಹೊರಡಿಸಿದ ಆದೇಶವೋ, ಅಂಗೀಕರಿಸಿದ ವಿಧೇಯಕವೋ ರಾಷ್ಟ್ರಪತಿ [illegible] ನ್ಯಾಯಾಲಯಗಳಿಂದಲೋ ರದ್ದಾಗುವುದು ಕಾರ್ಯಾಂಗ/ [illegible] ಸಂಗತಿಯೆಂದು ಭಾವಿಸಲಾಗುತ್ತಿಲ್ಲ.

ಕೆಲವು ವಿಷಯಗಳಲ್ಲಿ ಸರ್ಕಾರದ ಮೂಲಭೂತ ಕರ್ತವ್ಯ ನಿರ್ವಹಣೆಗೂ ನ್ಯಾಯಾಲಯಗಳು ತಲೆಹಾಕಿ ಆದೇಶ ನೀಡಬೇಕಾದ ಸಂದರ್ಭಗಳು ಒಂದಿರುವುದು ಹೊಸತೇನಲ್ಲ. ಸರ್ಕಾರದ ಆದೇಶಗಳಿಗಿಂತ ನ್ಯಾಯಾಲಯದ ಆದೇಶಗಳೇ ಆಡಳಿತ ನಿರ್ವಹಣೆಯ ದಾರಿಯನ್ನು ನಿರ್ದೇಶಿಸುತ್ತಿರುವ ನಿದರ್ಶನಗಳುಂಟು. ಸರ್ಕಾರಗಳು ಮೀನಮೇಷ ಎಣಿಸುತ್ತಿರುವಾಗಲೇ ಸರ್ಕಾರದ ಬದಲು ಸುಪ್ರೀಂ ಕೋರ್ಟ್ ಮುನ್ನುಗ್ಗಿ ಆದೇಶ ನೀಡಿದ ಉದಾಹರಣೆಗಳಿವೆ.

[illegible] ಈಗಿರುವಂತೆಯೇ ಪುನಃ ಸಲ್ಲಿಸುವುದೋ ಸೂಕ್ತ ಬದಲಾವಣೆ ಮಾಡಿ [illegible] ಈಗಿನ್ನೂ ನಿರ್ಧರಿಸಿಲ್ಲ' ಎಂದು ಕೇಂದ್ರ ಕಾನೂನು ಮಂತ್ರಿ [illegible] ಹೇಳಿರುವ ಮಾತು ಉಡಾಫೆ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. [illegible] ಮಸೂದೆಯಲ್ಲಿ ಏನೇನೂ ಲೋಪದೋಷಗಳಿಲ್ಲ; ಆದರೂ [illegible] ವಾಪಸು ಕಳುಹಿಸಿರುವುದರಿಂದ ನಾವು "ಪುನರ್ ಪರಿಶೀಲನಾ [illegible] ಗಂಭೀರವಾಗಿಯೇ ನಿರ್ವಹಿಸುತ್ತೇವೆ ಎಂದು ಕಾನೂನು ಮಂತ್ರಿ [illegible]

[illegible] ಬೇರೆ ಸಾರ್ವಜನಿಕ ಹುದ್ದೆಗಳನ್ನು ಹೊಂದಿರುವುದರಿಂದ [illegible] ಸಂವಿಧಾನ ನಿಯಮ ಹಲವು ಹುದ್ದೆಗಳಿಗೆ [illegible] ವಿಧೇಯಕಕ್ಕೆ ರಾಷ್ಟ್ರಪತಿಯವರು ಅಂಗೀಕಾರ [illegible] ವಾಪಸು ಕಳುಹಿಸಿದರು. ರಾಷ್ಟ್ರಪತಿಯವರ ಕ್ರಮದಿಂದ [illegible] ಕಾನೂನು ಸಚಿವರು "ಹಾಗೇನೂ [illegible] ಪ್ರಕಾರ [illegible] ನ್ಯಾಯಾಲಯದ [illegible] ಕಾನೂನು ಸಚಿವರು [illegible] ತಮಗೆ [illegible] ಅದು [illegible] ಸರ್ಕಾರ ರಚಿಸಿರುವ [illegible] ಶಾಸನವನ್ನೋ [illegible] ಸರ್ಕಾರಗಳ [illegible]



ಯುಪಿಎ ಸರ್ಕಾರದ ಸಾಧನೆಯ ಹಾದಿ

ಪ್ರಕೃತಿ-ಪ್ರಗತಿ

ಎಂ. ವೀರಪ್ಪ ಮೊಯಿಲಿ
ಅಧ್ಯಕ್ಷರು, ರಾಷ್ಟ್ರೀಯ ಆಡಳಿತ ಸುಧಾರಣಾ ಆಯೋಗ

ರಾಷ್ಟ್ರದ ಪ್ರಗತಿಪರ ಐಕ್ಯರಂಗ (ಯುಪಿಎ)ದ ಆಡಳಿತ ಸಾರ್ಥಕ ಎರಡು ವರ್ಷ ಮುಗಿಸಿ ಮೂರನೆ ವರ್ಷಕ್ಕೆ ಕಾಲಿಟ್ಟಿದೆ.

ಎರಡು ವರ್ಷದಲ್ಲಿ ಯು.ಪಿ. ಎ ಸರಕಾರ ಹಲವಾರು ಮಹತ್ವದ ಹೆಜ್ಜೆಗಳನ್ನಿಟ್ಟಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಶನ್, ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಶನ್, ಸರ್ವಶಿಕ್ಷಣ ಅಭಿಯಾನ. ರಾಷ್ಟ್ರೀಯ ಮಧ್ಯಾಹ್ನ ಊಟದ ಕಾರ್ಯಕ್ರಮ ಮತ್ತು ಭಾರತ ನಿರ್ಮಾಣ ಯೋಜನೆಯನ್ವಯ ಸದ್ಯ 200 ಅನುಷ್ಠಾನಕ್ಕೆ ಅತ್ಯಂತ ಶಿಥಿಲವಾಗಿರುವ ಆಡಳಿತ ಇರುವ ಜಿಲ್ಲೆಗಳಲ್ಲಿ ಸುಮಾರು 13 ಸಾವಿರ ಕೋಟಿ ರುಪಾಯಿಗಳನ್ನು ಒದಗಿಸಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಕಾರ್ಯಕ್ರಮ ಏಪ್ರಿಲ್ 2005 ರಿಂದ ಜಾರಿಗೆ ಬಂತು. ಬಹುಶಃ ಜನನಿಯಂತ್ರಣ ಮತ್ತು ಆರೋಗ್ಯ ರಕ್ಷಣೆಯಲ್ಲಿ ಕ್ರಾಂತಿಕಾರಿ ಸೌಲಭ್ಯಗಳು ಲಭಿಸುತ್ತವೆ. ಸಮಗ್ರ ಆರೋಗ್ಯ ಯೋಜನೆ, ಜನನಿ ಸುರಕ್ಷಾ ಯೋಜನೆ, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಮತ್ತು ಅಂಗನವಾಡಿಗಳ ಬೃಹತ್ ವಿಸ್ತರಣೆ ಮತ್ತು ಪುಷ್ಟಿದಾಯಕ ಆಹಾರ ಸಾಮಗ್ರಿಗಳನ್ನು ಒದಗಿಸಲು ಎಂದೂ ಕಂಡರಿಯದ ಅನುದಾನವನ್ನು ಒದಗಿಸಲಾಯಿತು.

ಶಿಕ್ಷಣ ಕ್ಷೇತ್ರ ಅಭೂತಪೂರ್ವವಾದ ಹೊಸ ಮನ್ವಂತರವನ್ನು ಪಡೆಯಿತು. ಶಿಕ್ಷಣದ ಅಧಿಕಾರವನ್ನು ಸರ್ವರ ಪಾಲಿಗೆ ದಕ್ಕುವ ಶಿಕ್ಷಣದ ಹಕ್ಕಿನ ಬಗ್ಗೆ ಈಗಾಗಲೇ ಕರಡು ಮಸೂದೆ ಸಿದ್ಧವಾಗಿ ಅದಕ್ಕೆ ಸಮಾನಾದ ಮಸೂದೆಯನ್ನು ರಾಜ್ಯವೂ ಸ್ವೀಕರಿಸುವಂತೆ ಕೇಂದ್ರ ಸರ್ಕಾರ ಆಗ್ರಹಪಡಿಸಿದೆ. ಮಧ್ಯಾಹ್ನ ಊಟದ ಬಗ್ಗೆ 12 ಕೋಟಿ ವಿದ್ಯಾರ್ಥಿ ಸಮುದಾಯವನ್ನು ಒಳಗೊಂಡ ಒಂಬತ್ತೂವರೆ ಲಕ್ಷ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸುವ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಉನ್ನತ ಶಿಕ್ಷಣ ಎಲ್ಲರ ಪಾಲಿಗೆ ದಕ್ಕುವಂತೆ ಸ್ಕಾಲರ್‌ಶಿಪ್ ಯೋಜನೆಯನ್ನು ಜಾರಿಗೊಳಿಸಲಾಯಿತು. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತೆಯ ನೀಡುವ ಪ್ರಕ್ರಿಯೆಗೆ ಚಾಲನೆಯನ್ನು ನೀಡಲಾಗಿದೆ. ರಾಷ್ಟ್ರೀಯ ಶಿಕ್ಷಣ ಆಯೋಗವನ್ನು ರಚಿಸುವುದಕ್ಕೆ ಈಗಾಗಲೇ ಸಜ್ಜುಗೊಳಿಸಲಾಗಿದೆ

ಆಹಾರ ಭದ್ರತಾ ಯೋಜನೆಯ ನವಮನ್ವಂತರದ ಹಾದಿಯಲ್ಲಿ ಭಾರತವನ್ನು ತೊಡಗಿಸಲಾಗಿದ್ದೆ. ಬಾಲಕರ ಹಕ್ಕು ಸಂರಕ್ಷಣಾ ಕಾಯಿದೆಯ ಜೊತೆಯಲ್ಲಿ ಅವರ ಏಳ್ಗೆಗಾಗಿ ಆಯೋಗದ ರಚನೆಯಾಗುತ್ತಿದೆ. ರಾಷ್ಟ್ರದ ಭಾವೈಕ್ಯದ ದೃಷ್ಟಿಯಿಂದ ಪ್ರತ್ಯೇಕ ಮಸೂದೆಯ ಜತೆಯಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಅಧಿಕಾರ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿದೆ.

ಮಹಿಳಾ ಸಂರಕ್ಷಣಾ ವಿಧಾನದಲ್ಲಿ ಮಹಿಳಾಪರ ಆರ್ಥಿಕ ಸಂಯೋಜನೆಯ ಅಂದಾಜು ಆಸ್ತಿ ಕ್ರಮಗಳಲ್ಲದೆ ಮನೆಯಲ್ಲಿ ನಡೆಯುವ ಹಿಂಸೆ ದೌರ್ಜನ್ಯದ ಬಗ್ಗೆ ಹೊಸ ಮಸೂದೆಯನ್ನು ಕೂಡಾ ಜಾರಿಗೊಳಿಸಲಾಗಿದೆ

ಪರಿಶಿಷ್ಟ ವರ್ಗ ಜನಾಂಗದ ಮತ್ತು ಹಿಂದುಳಿದ ವರ್ಗಕ್ಕೆ ಅನುದಾನೇತರ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯ ಒದಗಿಸುವ ಬಗ್ಗೆ 93 ನೇ ಸಂವಿಧಾನದ ತಿದ್ದುಪಡಿ. ಜನವರಿ 2006 ರಿಂದ ಚಾಲನೆ ಸಿಕ್ಕಿದೆ. ಉದ್ಯೋಗ ಖಾತರಿ ಯೋಜನೆಯನ್ನು ಶಾಸನಾತ್ಮಕವಾಗಿ ಜಾರಿಗೆ ತಂದು ಗ್ರಾಮೀಣ ಪ್ರದೇಶದ ಪ್ರತಿಯೊಂದು ಮನೆಗೂ ಒಬ್ಬನಿಗೆ ಉದ್ಯೋಗವನ್ನೊದಗಿಸುವ ಕಾಯ್ದೆ ರಾಷ್ಟ್ರದ ಇತಿಹಾಸದಲ್ಲಿ ಕ್ರಾಂತಿಕಾರೀ ಮಾತ್ರವಲ್ಲ ಬಡತನ ನಿರ್ಮೂಲನ ಮತ್ತು ಉದ್ಯೋಗ ನಿರ್ಮಾಣದಲ್ಲಿ ಹೊಸ ಪರ್ವವನ್ನು ಪ್ರಾರಂಭಿಸಿದೆ.

ಬ್ರಿಟಿಷರ ಸಾಮ್ರಾಜ್ಯಶಾಹಿ ಆಡಳಿತೆಯ ಬಿಗಿಮುಷ್ಟಿಯನ್ನು ಭದ್ರಪಡಿಸಲು ನೆರವಾದ ಅಧಿಕಾರ ಗೌಪ್ಯ ಕಾಯ್ದೆಯ (ಅಫಿಷಿಯಲ್ ಸೀಕ್ರೆಟ್ಸ್ ಆಕ್ಟ್ 1923) ಕಾನೂನನ್ನು ಪೂರ್ತಿ ಆರಿಸಿ, ಮಾಹಿತಿ ಹಕ್ಕಿನ ಕಾನೂನು ಜಾರಿಗೊಳಿಸಿ ಪಾರದರ್ಶಕ ಜವಾಬ್ದಾರಿ ಆಡಳಿತ ಪ್ರಕ್ರಿಯೆಗೆ ನಾಂದಿಯನ್ನು ಹಾಡಿದೆ. ಅಧಿಕಾರಿಶಾಹಿ ಆಡಳಿತದ ದಬ್ಬಾಳಿಕೆಯಿಂದ ಭ್ರಷ್ಟಾಚಾರ ಮತ್ತು ಗೌಪ್ಯತೆಯ ಲೋಕದಿಂದ ಪಾರದರ್ಶಕ ಮತ್ತು ಜನಪರ ಪ್ರಜಾಪ್ರಭುತ್ವದ ಮುಕ್ತ ಆಡಳಿತ ವಾತಾವರಣಕ್ಕೆ ದಾಪುಗಾಲು ಇಡುವ ಈ ಕಾಯ್ದೆ ದೇಶದ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು.

ಅನೇಕ ದಶಕಗಳಿಂದ ರಾಜ್ಯ ಸರ್ಕಾರದ ಹಣಕಾಸಿನ ಮತ್ತು ತೆರಿಗೆಯ ವ್ಯವಸ್ಥೆಯನ್ನು ಬಾಧಿಸುತ್ತಿರುವ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಮೌಲ್ಯವರ್ಧಿತ ತೆರಿಗೆಯನ್ನು ದೇಶದ ಬಹುತೇಕ ರಾಜ್ಯಗಳಲ್ಲಿ ಜಾರಿಗೊಳಿಸಿತು. ಇದರಿಂದ ತೆರಿಗೆ ಸೋರಿಕೆಯ ಮತ್ತು ಭ್ರಷ್ಟಾಚಾರದ ನಿರ್ಮೂಲನದ ದಾರಿಯಲ್ಲಿ ಹೊಸ ಹೆಜ್ಜೆಯನ್ನು ಹಾಕಿದಂತಾಯಿತು. ರಾಜ್ಯಗಳ ಸಂಪನ್ಮೂಲ ಸಂಯೋಜನೆಯಲ್ಲಿ ಮಹತ್ವದ ಪರಿವರ್ತನೆಯಾಯಿತು. ರಾಜ್ಯಗಳಿಗೆ ಆಗಬಹುದಾದ ನಷ್ಟದ ಪರಿಹಾರ ಸೂತ್ರದಿಂದ ತೆರಿಗೆ ಸುಧಾರಣೆಗಳ ಪ್ರಕ್ರಿಯೆಯಲ್ಲಿ ಅನುಕೂಲ ವಾತಾವರಣ ಒದಗಿತು.

ಆಡಳಿತ ಸುಧಾರಣೆಯ ಕ್ರಾಂತಿಯ ದೃಷ್ಟಿಯಿಂದ 39 ವರ್ಷಗಳ ಅನಂತರ ಎರಡನೇ ಆಡಳಿತ ಸುಧಾರಣಾ ಆಯೋಗವನ್ನು ರಚಿಸಿ ಜಗತ್ತಿನ ಮುಂದುವರಿದ ರಾಷ್ಟ್ರಗಳ ಜೊತೆಜೊತೆಯಾಗಿ ಭಾರತವನ್ನು ನೆಲೆಗೊಳಿಸುವ ನಿಟ್ಟಿನಲ್ಲಿ ಮಹತ್ಕಾರ್ಯ ನಡೆದಿದೆ. ಈಗಾಗಲೇ ರಾಷ್ಟ್ರದ ವರಮಾನದಲ್ಲಿ ಅಭೂತಪೂರ್ವ ಶೇ. 8 ರಷ್ಟು ಜಿಡಿಪಿಯ ಸಾಧನೆಯ ಹಂತವನ್ನು ತಲುಪಿದ್ದು ಮಾತ್ರವಲ್ಲ, ರಫ್ತು, ಕೈಗಾರಿಕೆ, ಕೃಷಿ ಮತ್ತು ಸೇವಾ ಕ್ಷೇತ್ರದಲ್ಲಿ ದಾಖಲೆಯ ಸಾಧನೆಯತ್ತ ಸಾಗುತ್ತಿದೆ. ಬೆಲೆ ಏರಿಕೆ ಕೂಡ ಹದ್ದುಬಸ್ತಿನಲ್ಲಿದ್ದು ಆರ್ಥಿಕ ಅಭಿವೃದ್ಧಿಯ ಜೊತೆಯಲ್ಲಿ ಸಾಮಾಜಿಕ ನ್ಯಾಯದ ಕ್ಷೇತ್ರವನ್ನು ಸಂಪನ್ನಗೊಳಿಸಿದೆ. ಇದೇ ವೇಗದಲ್ಲಿ ಸಾಗಿದಾಗ ಇನ್ನೊಂದು ಹತ್ತು ವರ್ಷಗಳಲ್ಲಿ ಜಗತ್ತಿನ ಮಹಾನ್ ದೇಶಗಳ ಸಾಲಿನಲ್ಲಿ ಭಾರತ ಕ್ಷಿತಿಜವನ್ನು ಏರುವುದರಲ್ಲಿ ಅನುಮಾನವಿಲ್ಲ. ಬಡತನ ನಿರ್ಮೂಲನದ ದಿಸೆಯಲ್ಲಿ ಕೂಡ ಗಣನೀಯ ಮುನ್ನಡೆಯನ್ನು ಸಲ್ಲಿಸುತ್ತಿದೆ. ಒಟ್ಟಿನಲ್ಲಿ ರಾಷ್ಟ್ರದ ಎರಡನೇ ವರ್ಷದ ಸಾಧನೆ ಮುಂದಿನ ಬೆಳವಣಿಗೆಗೆ ಬುನಾದಿಯಾಗಿದೆ.

ಮುಂದೆ ಬರುವ ಮೂರು ವರ್ಷಗಳು ಅನುಶಾಸನದ ಹೊಸ ಮನ್ವಂತರಗಳನ್ನು ಬಿಗಿ, ಪಾರದರ್ಶಕ ಮತ್ತು ಭ್ರಷ್ಟಾಚಾರ ರಹಿತ ಜನಪರ ಆಡಳಿತೆಯಿಂದ ಅನುಗೊಳಿಸುವ ಅಗ್ನಿಪರೀಕ್ಷೆ ಡಾ. ಮನಮೋಹನ್ ಸಿಂಗ್ ರವರ ನೇತೃತ್ವದ ಸರಕಾರಕ್ಕೆ ಒದಗಿದೆ ■

ಎಸ್. ಕೆ. ಕರೀಂಖಾನ್ ಆತ್ಮಕಥನ-3

ನಾನು ಅನಿಕೇತನ

(ನಿನ್ನೆಯಿಂದ)

ಅವರಿಗೆ ಬೆಂಬಲವಾಗಿ ರುಮಾಲೆ ಚನ್ನಬಸಪ್ಪ, ಟಿ.ಸಿದ್ದಲಿಂಗಯ್ಯ, ಕರೀಂಖಾನ್, ಹಾರನಹಳ್ಳಿ ರಾಮಸ್ವಾಮಿ, ಸರ್ದಾರ್ ವೆಂಕಟರಾಮಯ್ಯ ಬೆಂಬಲವಾಗಿ ನಿಂತರು.

ಸೇವಾದಳ ಬೆಳೆಯ ಲಾರಂಭಿಸಿತು ಆದರೆ ಹಣಕಾಸಿನ ಕೊರತೆಯಿಂದಾಗಿ ನೊರಗುತ್ತಿತ್ತು. ಕೊನೆಗೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು ಪಕ್ಷದ ಹೆಸರನ್ನು ಬದಲಿಸಿ ನಾನು ಹಣ ಮಂಜೂರು ಮಾಡುತ್ತೇನೆಂದರು. ಆಗ ಪಕ್ಷಾತೀತವಾದ, ಜಾತ್ಯತೀತವಾದ 'ಭಾರತ ಸೇವಾದಳ' ಎಂದು ಹೆಸರಿಡಲಾಯಿತು. ಕೆ.ಸಿ ರೆಡ್ಡಿಯವರು ಐವತ್ತು ಸಾವಿರ ರುಪಾಯಿ ಮಂಜೂರು ಮಾಡಿದರು. ಭಾರತ ಸೇವಾದಳದ ಬೃಹತ್ ರ‍್ಯಾಲಿ ಬೆಂಗಳೂರಿನಲ್ಲಿ ನಡೆವಾಗ ಆಗಿನ ಭಾರತದ ಪ್ರಧಾನಿ ನೆಹರು ಆಗಮಿಸಿದ್ದರು. ಅನಂತರ ಜಯಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಧಾನಿ ನೆಹರು ಭಾರತ ಸೇವಾದಳದ ಮಾದರಿಯಲ್ಲೇ 'ಭಾರತ ಸೇವಕ್ ಸಮಾಜ್' ಸ್ಥಾಪಿಸಿದರು.

ಅವರಿಗೆ ಬೆಂಬಲವಾಗಿ ರುಮಾಲೆ ಚನ್ನಬಸಪ್ಪ, ಟಿ.ಸಿದ್ದಲಿಂಗಯ್ಯ, ಕರೀಂಖಾನ್, ಹಾರನಹಳ್ಳಿ ರಾಮಸ್ವಾಮಿ, ಸರ್ದಾರ್ ವೆಂಕಟರಾಮಯ್ಯ ಬೆಂಬಲವಾಗಿ ನಿಂತರು ಸೇವಾದಳ ಬೆಳೆಯಲಾರಂಭಿಸಿತು. ಆದರೆ ಹಣಕಾಸಿನ ಕೊರತೆಯಿಂದಾಗಿ ನೊರಗುತ್ತಿತ್ತು. ಕೊನೆಗೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು ಪಕ್ಷದ ಹೆಸರನ್ನು ಬದಲಿಸಿ ನಾನು ಹಣ ಮಂಜೂರು ಮಾಡುತ್ತೇನೆಂದರು. ಆಗ ಪಕ್ಷಾತೀತವಾದ, ಜಾತ್ಯತೀತವಾದ 'ಭಾರತ ಸೇವಾದಳ' ಎಂದು ಹೆಸರಿಡಲಾಯಿತು. ಕೆ.ಸಿ ರೆಡ್ಡಿಯವರು ಐವತ್ತು ಸಾವಿರ ರುಪಾಯಿ ಮಂಜೂರು ಮಾಡಿದರು. ಭಾರತ ಸೇವಾದಳದ ಬೃಹತ್ ರ‍್ಯಾಲಿ ಬೆಂಗಳೂರಿನಲ್ಲಿ ನಡೆವಾಗ ಆಗಿನ ಭಾರತದ ಪ್ರಧಾನಿ ನೆಹರು ಆಗಮಿಸಿದ್ದರು. ಅನಂತರ ಜಯಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಧಾನಿ ನೆಹರು ಭಾರತ ಸೇವಾದಳದ ಮಾದರಿಯಲ್ಲೇ 'ಭಾರತ ಸೇವಕ್ ಸಮಾಜ್' ಸ್ಥಾಪಿಸಿದರು.

ಮೂರೂವರೆ ವರ್ಷ ಪರಿಹಾರವಿಲ್ಲದೆ ಭಾರತ ಸೇವಾದಳಕ್ಕಾಗಿ ದುಡಿದು ಹಿಂತಿರುಗಿದೆನು. ಭಾಷಾವಾರು ಪ್ರಾಂತ್ಯಗಳ ಕೂಗು ಪ್ರಾರಂಭವಾಗಿತ್ತು. ಬಳ್ಳಾರಿ, ಬೀದರ್ ಜಿಲ್ಲೆಗಳು ಕರ್ನಾಟಕದಿಂದ ಕೈಬಿಟ್ಟುಹೋಗುವ ಅಪಾಯ ತಲೆದೋರಿತ್ತು. ಬಳ್ಳಾರಿ ನೆರೆಯ ಆಂಧ್ರದಲ್ಲಿ ಸೇರಿಹೋಗಿತ್ತು. ಆ ಸಂದರ್ಭದಲ್ಲಿ ವಿಶ್ರಾಂತಿಯಿಲ್ಲದೆ ಎರಡು ಜಿಲ್ಲೆಗಳ ಮೂಲೆಮೂಲೆಯಲ್ಲೂ ಸಂಚರಿಸಿ ಉರ್ದು ಕನ್ನಡ ಭಾಷೆಗಳಲ್ಲಿ ಉಪನ್ಯಾಸ ಮಾಡುತ್ತ, ಗೀತೆಗಳನ್ನು ಹಾಡುತ್ತ ಜನರ ಮನವನ್ನು ವಿಶಾಲ ಮೈಸೂರಿನ ಕಡೆಗೆ ತಿರುಗಿಸಲು ಪ್ರಯತ್ನಪಟ್ಟೆನು.

1957 ರ ಚುನಾವಣೆಯಲ್ಲೂ ಕಾಂಗ್ರೆಸ್ ಪರ ಕಾಲ್ನಡಿಗೆ ಪ್ರವಾಸ ಮಾಡಿದೆನು. ನನ್ನ ಪುಸ್ತಕಗಳನ್ನು ನನ್ನ ಅಪ್ಪಣೆಯಿಲ್ಲದೆ ಬೇರೆಯವರು ಮುದ್ರಣ ಮಾಡಿ ಮಾರಲಾರಂಭಿಸಿದ ಕಾರಣ -ನಾನು ಪುಸ್ತಕ ಪ್ರಕಟಣೆಯನ್ನು ನಿಲ್ಲಿಸಿದೆನು. ಜೀವನ ದುರ್ಭರವಾಯಿತು.

ಹಳೇ ಮೈಸೂರಿನಲ್ಲಿ ಕಾಂಗ್ರೆಸ್ಸಿಗಾಗಿ ದುಡಿದ ನಾಲ್ವರು ಮುಸ್ಲಿಮರೂ ಹಾಳಾದರು. ಅವರಲ್ಲಿ ಮೂವರೂ ತೀರಿ ಹೋಗಿ ನಾನೊಬ್ಬ ಉಳಿದಿದ್ದೇನೆ.

ಜೀವನ ನಿರ್ವಹಣೆಗಾಗಿ ನಾನು ಕರ್ನಾಟಕ ತೊರೆದು ಮದ್ರಾಸಿಗೆ ಹೋಗಿ ಚಿತ್ರ ಸಾಹಿತಿಯಾದೆನು. ನನ್ನ ಮೊದಲನೇ ಚಿತ್ರ 'ಸ್ವರ್ಣಗೌರಿ' ಪ್ರಶಸ್ತಿ ಗಳಿಸಿದೆ. 25 ಚಿತ್ರಗಳಿಗೆ ಸಾಹಿತ್ಯ ಒದಗಿಸಿರುವ ನಾನು ಜಾತೀಯತೆಯ ಕಾರಣದಿಂದಾಗಿ ಕ್ಷೇತ್ರದಿಂದ ಹಿಂಜರಿಯಬೇಕಾಯಿತು.

ಸ್ವಾತಂತ್ರ್ಯಕ್ಕಾಗಿ, ಕರ್ನಾಟಕಕ್ಕಾಗಿ, ಸಾಹಿತ್ಯ, ಸಂಸ್ಕೃತಿ, ಕಲೆಗಾಗಿ ಜೀವಮಾನ ಪೂರ್ತಿ ದುಡಿಯುತ್ತ ಬಂದಿರುವ ದುಡಿಯುತ್ತಿರುವ ನಾನು ಅನಿಕೇತನ. ■

ಸಂಪ್ರದಾಯ, ಮೂಢನಂಬಿಕೆ ಮತ್ತು ಸ್ತ್ರೀ

— ಬಿ.ಆರ್. ಉಷಾರಾಣಿ

ಇಲ್ಲಿ ಮೂರು ಬೇರೆ, ಬೇರೆ ಶಬ್ದಗಳಿವೆ.

೧. ಸಂಪ್ರದಾಯ ಎಂದರೆ ಪದ್ದತಿ, ಪರಂಪರೆ. ೨. ಮೂಢನಂಬಿಕೆ ಎಂದರೆ ತಿಳಿವಳಿಕೆ ಇಲ್ಲದೆ ನಂಬುವುದು, ವಿವೇಚನೆ ಇಲ್ಲದೆ ನಂಬುವುದು. ೩. ಸ್ತ್ರೀ ಎಂದರೆ ಹೆಣ್ಣು

ಈ ಮೂರು ಶಬ್ದಗಳನ್ನು ಒಟ್ಟಿಗೆ.ಅರ್ಥೈಸಿದರೆ ಪದ್ದತಿಗಳನ್ನು ತಿಳಿವಳಿಕೆ ಇಲ್ಲದೆ ಅಥವಾ ವಿವೇಚನೆ ಇಲ್ಲದೆ ನಂಬುವುದು ಹೆಣ್ಣು ಎಂದಾಗುತ್ತದೆ. ಯಾವುದೇ ಪದ್ದತಿಯನ್ನು ಹೆಣ್ಣು, ತನ್ನ ಹಾಗೂ ತನ್ನ ಕುಟುಂಬದವರ ರಕ್ಷಣೆಗಾಗಿ, ಒಳಿತಿಗಾಗಿ ಪೂರ್ವಾಪರ ಚಿಂತಿಸದೆ ಆಚರಿಸುವ, ಅದನ್ನು ಮುಂದಿನ ಪೀಳಿಗೆಗಾಗಿ ರವಾನಿಸುವ ಕಾರ್ಯದಲ್ಲಿ ಮೊದಲಿಗಳೆನ್ನಬಹುದು. ಇದಕ್ಕೆ ಕಾರಣ ಹೆಣ್ಣಿನ ಪರಾಧೀನತೆ, ಜ್ಞಾನದ ಕೊರತೆ, ಹಾಗೂ ಹಿರಿಯರು ಹೇಳಿದ್ದನ್ನು ಶ್ರದ್ದೆಯಿಂದ ಕೇಳುವ, ಆಚರಿಸುವುದೇ ಆಗಿದೆ. ಸರಿಯಾದ ವಿದ್ಯಾಭ್ಯಾಸ ಇಲ್ಲದೆ, ಜ್ಞಾನದ ಕೊರತೆ, ಸ್ವಚಿಂತನೆಯ ಅಭಾವ, ವಿವೇಚನಾ ರಹಿತ ಅಂಧಶ್ರದ್ದೆಗಳು, ಸಾಮಾಜಿಕ ಪರಂಪರೆಗಳು ಮೂಢನಂಬಿಕೆಗೆ ಕಾರಣವೆನ್ನಬಹುದು. ಆದಿಮಾನವನ ಕಾಲದಿಂದ ಇಂದಿನ ವೈಜ್ಞಾನಿಕ ಯುಗದವರೆಗೆ, ಪರಿಸರದ ಬದಲಾವಣೆಯೊಂದಿಗೆ ಮಾನವನ ಆಚಾರ-ವಿಚಾರಗಳು ಉನ್ನತ ಸ್ಥಾಯಿ ಮುಟ್ಟಿದ್ದರೂ ಸಹ ಮೂಢನಂಬಿಕೆಗಳು ಅಳಿಯದೆ ಉಳಿದು ಹೆಮ್ಮರವಾರುತ್ತಿರುವುದು ನಿಜಕ್ಕೂ ವಿಷಾದನೀಯ.

ಈಗ ಪದ್ದತಿ ಅಥವಾ ಸಂಪ್ರದಾಯಗಳಿಂದ ಮೂಢನಂಬಿಕೆ ಹೇಗೆ ಉಗಮಗೊಂಡಿತೆನ್ನುವ ಬಗ್ಗೆ ಈ ರೀತಿಯಾಗಿ ಊಹಿಸಬಹುದಾಗಿದೆ.

ಹಿಂದೆ ಮಾನವ ತನ್ನ ಹಾಗೂ ತನ್ನ ಸಮುದಾಯ ಅಥವಾ ಪಂಗಡದ ಒಳಿತಿಗಾಗಿ, ಮಾಡಿಕೊಂಡಂಥ ರೀತಿ ನೀತಿಗಳನ್ನು ಪದ್ದತಿಗಳೆನ್ನಬಹುದಾಗಿದೆ. ಪ್ರಾಚೀನ ಕಾಲದ ಮಾನವರಿಗೆ ಪ್ರಕೃತಿಯ ಕುರಿತಾಗಿ ಏನೇನೂ ತಿಳಿವಳಿಕೆ ಇಲ್ಲದ ಸಮಯದಲ್ಲಿ ನೈಸರ್ಗಿಕ ಅವಘಡಗಳನ್ನು ಕಂಡು ಭಯಭೀತನಾಗಿ ಪ್ರಕೃತಿಯ ವಿಕೋಪಗಳಿಂದ ಉಂಟಾಗುವ ಸಾವು, ನೋವುಗಳು ಯಾವುದೋ ಅತೀತ ಶಕ್ತಿಯಿಂದ ಉಂಟಾಗಬಹುದೆಂಬ ಕಲ್ಪನೆಯಲ್ಲಿ, ಪ್ರಕೃತಿಯ ವಿಕೋಪಗಳಿಗೆ ಕಾರಣಗಳಾದ ಬೆಂಕಿ, ನೀರು, ಗಾಳಿಗಳಿಗೆ ದೇವರೆಂಬ ಹೆಸರಿಟ್ಟು, ಈ ವಿಕೋಪಗಳು ಉಂಟಾಗದಂತೆ ತಡೆಹಿಡಿಯುವ ರೀತಿ ಅರಿಯದ ಸಮಯದಲ್ಲಿ ದೇವರು ಸಿಟ್ಟಾದಾಗ ಈ ರೀತಿಯ ಅನಾಹುತ ಸಂಭವಿಸುವುದೆಂದು ಭಾವಿಸಿ ದೇವರನ್ನು ಒಲೈಸಿದರೆ ಇದರಿಂದ ಪಾರಾಗಬಹುದೆಂಬ ಉಪಾಯದಿಂದ ದೇವರನ್ನು ಪೂಜಿಸುವ ಪದ್ದತಿಯನ್ನು ಶುರು ಮಾಡಿದ ಮಾನವನು ಇತರರು ದೇವರನ್ನು ಆರಾಧಿಸಿ, ಪೂಜಿಸಿದರೆ ಕಷ್ಟಗಳಿಂದ ಪಾರಾಗ ಬಹುದೆಂದು ಪ್ರಚಾರ ಪಡಿಸಿದನು.

ಸಲ್ಲದ ಕಟ್ಟುಕಥೆ

ಜೀವನಕ್ಕೆ ಆಧಾರವಾಗಿದ್ದು, ಆಸರೆಯನ್ನು ನೀಡುತ್ತಿರುವ ಅಗೋಚರ ಶಕ್ತಿಯನ್ನೊಳಗೊಂಡ ಪ್ರಕೃತಿಯನ್ನು ಪೂಜಿಸುವುದು ಮಾನವನು ತನ್ನ ಕೃತಜ್ಞತೆಯನ್ನು ಪ್ರಕೃತಿಗೆ ತೋರುವ ರೀತಿಯದ್ದಾಗಿತ್ತು. ತನ್ನ ಭಾವನೆಗಳಿಗನುಗುಣವಾಗಿ ಗಾಳಿ, ನೀರು, ಬೆಂಕಿಗಳೆಂಬ ದೇವರಿಗೆ ವಿವಿಧ ರೀತಿಯ ಆಕಾರ, ಹೆಸರು ನೀಡುತ್ತಾ ಬಂದನು. ಅತೀತ ಶಕ್ತಿ ಕಣ್ಣಿಗೆ ಕಾಣಸದ ಕಾರಣ ದೇವರಿಗೆ ತನ್ನದೇ ರೀತಿಯ ಆಕಾರ ಕೊಟ್ಟು, ಆಕಾರಕ್ಕೊಂದು ಆಲಯ ನಿರ್ಮಿಸಿ, ಆಲಯದಲ್ಲಿರುವ ದೇವರಿಗೆ ತನ್ನಿಚ್ಛೆಯಂತೆ ಅಲಂಕರಿಸಿ, ಪೂಜೆಯನ್ನು ಆಚರಿಸಿ, ಒಲಿಸಿಕೊಂಡರೆ ಎಲ್ಲಾ ಕಷ್ಟಗಳಿಂದ ಪಾರಾಗಬಹುದೆಂಬ ಭ್ರಮೆಯಿಂದ, ದೇವರ ಕುರಿತು ಸಲ್ಲದ ಕಟ್ಟು ಕಥೆಗಳಿಂದ ಎಲ್ಲರಲ್ಲೂ ಭಯ ಮೂಡುವಂತೆ ಮಾಡುತ್ತಾ ಬಂದನು.

ಹೀಗೆ ಭಯದಿಂದ ನಿರ್ಮಾಣಗೊಂಡ ದೇವರನ್ನು ಆರಾಧಿಸುವ ಪದ್ಧತಿಯನ್ನು ಹುಟ್ಟು ಹಾಕಿದ ನಂತರ, ಪೂಜಾ ಪದ್ಧತಿಗಳು ಹೀಗೇ ಇರಬೇಕೆಂಬ ಕಟ್ಟು ಪಾಡು ವಿಧಿಸುತ್ತಾ ಬಂದನು. ಈ ರೀತಿಯಾಗಿ ಪ್ರಾರಂಭಗೊಂಡ ಪದ್ಧತಿಗಳೇ ಸಂಪ್ರದಾಯಗಳಾದವು ಎನ್ನಬಹುದಾಗಿದೆ.

ಹಿಂದಿನಿಂದಲೂ ಮಾನವ ಸಂಘ ಜೀವಿ. ಗುಂಪು ಗುಂಪಾಗಿ ವಾಸಿಸುತ್ತಿದ್ದ ಮಾನವರ ಒಂದೊಂದು ಗುಂಪಿನ ಆಚಾರಗಳು ಮತ್ತೊಂದು ಗುಂಪಿನ ಆಚಾರಗಳಿಗಿಂತ ಸ್ವಲ್ಪ ಸ್ವಲ್ಪ ಭಿನ್ನವಾಗಿದ್ದು, ಪ್ರತಿ ಗುಂಪೂ ತನ್ನದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಆಯಾ ಗುಂಪಿಗೆ ಅನುಗುಣವಾಗಿ ಕೆಲವೊಂದು ಪದ್ದತಿಗಳನ್ನು ತನ್ನದೇ ಆದ ರೀತಿ ನೀತಿಯಲ್ಲಿ ಅಳವಡಿಸಿಕೊಂಡು ಬಾಳುತ್ತಾ ಬಂದರು. ಹೀಗೆ ಮುಂದುವರಿದ ಮಾನವ ಜನಾಂಗ ಜೀವನದ ಕುರಿತು ತನ್ನದೇ ಆದ ನಂಬಿಕೆಯನ್ನು ಉಳಿಸಿಕೊಳ್ಳುತ್ತಾ ಬಂದರು. ಸಮೂಹದಲ್ಲಿದ್ದ ವ್ಯಕ್ತಿಗತ ನಂಬಿಕೆಗಳು ಪರಿಸರದ, ಕಾಲಮಾನದ ಬದಲಾವಣೆಯಲ್ಲಿ ಸಂಸ್ಕೃತಿಯೂ ಸಹ ಬದಲಾವಣೆಗೆ ಒಳಗಾಗುತ್ತಾ ಬಂದಾಗ ಕೆಲವು ಪ್ರಚಲಿತ ಪದ್ಧತಿಗಳು ಸಾಮಾಜಿಕ ಬದಲಾವಣೆಗಳಿಗನುಗುಣವಾಗಿ ಬದಲಾಗತೊಡಗಿತು. ಇವನ್ನು ಮುಂದುವರಿದ ನಾಗರಿಕ ಮಾನವ ಸ್ವಲ್ಪ ಸ್ವಲ್ಪವಾಗಿ ಒಪ್ಪಿಕೊಳ್ಳತೊಡಗಿದನು. ಕೆಲವು ಪಾರಂಪರಿಕ ಪದ್ದತಿಗಳು ಅರ್ಥಪೂರ್ಣವೂ, ಆರೋಗ್ಯಕರ ವಾತಾರವಣವನ್ನು ಕಾಪಾಡಿಕೊಳ್ಳುವಂಥಹುದು ಹಾಗೂ ಕೌಟುಂಬಿಕ ಜೀವನಕ್ಕೆ ಅನುಕೂಲವಾಗಿರುವಂತಹದ್ದಾಗಿದೆ. ಈ ರೀತಿಯ ಪದ್ಧತಿಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಬಹುದಾಗಿದೆ.

ಅಮಾನವೀಯ ಪದ್ಧತಿ

ಆದರೆ ಹಿಂದಿನಿಂದ ಉಳಿದು ಬಂದಿರುವ ಈಗಲೂ ಕೆಲವು ಪ್ರಚಲಿತವಿರುವ ಕೆಲವು ಪದ್ದತಿಗಳು ಅಮಾನವೀಯವಾಗಿದ್ದು, ಅರ್ಥವಿಹೀನವಾಗಿರು ವಂತಹುದು. ಇಂತಹ ಸಂಪ್ರದಾಯದ ಆಚಾರಗಳನ್ನು ಸರಿಯಾಗಿ ಅರ್ಥೈಸದೇ ಭಯದಿಂದ ಅಥವಾ ಮೌಢ್ಯದಿಂದ ಮುಂದುವರೆಸುವುದು ಅದೂ ಈ ವೈಜ್ಞಾನಿಕ ಯುಗದಲ್ಲಿ ಸರಿಯೇ ಎಂಬ ಪ್ರಶ್ನೆ ಎಲ್ಲರಲ್ಲೂ ಬರಬೇಕಿದೆ. ಮಾನವ ಅಷ್ಟಾಗಿ ಓದಿಲ್ಲದೇ ಯಾವುದೇ ಪದ್ದತಿಯ ಕುರಿತು ಸರಿಯಾದ ತಿಳುವಳಿಕೆ ಇಲ್ಲದ ಕಾಲದಲ್ಲಿ ಕೇವಲ ಕುರುಡು ನಂಬಿಕೆಯ ಆಧಾರದ ಮೇರೆಗೆ ಮುಂದುವರೆಸಿಕೊಂಡು ಹೋಗುತ್ತಿದ್ದ. ಆದರೆ ಈ ೨೧ನೆಯ ಶತಮಾನದಲ್ಲಿ ವೈಜ್ಞಾನಿಕವಾಗಿ ಸಾಕಷ್ಟು ಪ್ರಗತಿ ಪಥದಲ್ಲೇ ನಡೆಯುತ್ತಿರುವ ಈ ಕಾಲದಲ್ಲೂ ಮೂಢ ನಂಬಿಕೆಯನ್ನು ಪೋಷಿಸುತ್ತಿರುವ ನಾಗರಿಕ ಮಾನವರೆಗ ಬದಲಾವಣೆ ಹೊಸ ಗಾಳಿ ಬೀಸಬೇಕಾಗಿದೆ. ಈ ಹಳೆಯ ಸಂಪ್ರದಾಯಗಳಿಗೆ, ಮೂಢನಂಬಿಕೆಗೆ ಗುರಿಯಾಗುತ್ತಿರುವವಳು ಹೆಣ್ಣೇ ಆಗಿದ್ದಾಳೆನ್ನಬಹುದಾಗಿದೆ. ಹಳೆಯ ಪದ್ದತಿಗಳನ್ನು ಉಳಿಸಿ ಬೆಳೆಸುವ ಕಾರ್ಯ ಹೆಣ್ಣಿನಿಂದಲೇ ನಡೆಯುತ್ತಿರುವುದಾದರೂ ಅದರಿಂದ ಶೋಷಣೆಗೆ ಒಳಗಾಗುತ್ತಿರುವವಳು ಹೆಣ್ಣೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಪ್ರತಿಯೊಂದು ಹೆಣ್ಣೂ ಈ ಕುರಿತು ಚಿಂತಿಸಬೇಕಾಗಿದೆ.

ಸಾಮಾನ್ಯವಾಗಿ ಸಂಪ್ರದಾಯದ ಕಟ್ಟುಪಾಡುಗಳು ಹೆಣ್ಣಿಗೆ ಸಂಬಂಧಪಟ್ಟದ್ದಾಗಿದೆ. ಈ ಕಟ್ಟುಪಾಡಿನಲ್ಲಿ ಗಂಡಿಗಿದೆ ಸಾಕಷ್ಟು ರಿಯಾಯಿತಿ. ಏಕೆಂದರೆ ಹೆಣ್ಣು ಮನೆಯಲ್ಲಿದ್ದು ತನ್ನ ಕುಟುಂಬದ ಯೋಗಕ್ಷೇಮ ನೋಡಿಕೊಳ್ಳುವಳು. ಅವಳನ್ನು ಮನೆಯಲ್ಲೇ ಬಂಧಿಯಾಗಿಸುವ ಹಿನ್ನೆಲೆಯಲ್ಲಿ ಅನೇಕ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ವಿಧಿಸಿದರು. ಶಿಲಾಯುಗದ ಕಾಲದಲ್ಲೇ ಹೆಣ್ಣು ಗಂಡಿಗೆ ಸರಿಸಮಾನಳಾಗಿ ದುಡಿಯುತ್ತಿದ್ದಳು. ಆನಂತರ ಅವಳ ಸ್ಥಾನ ಕೆಳಗಿಳಿಯುವಂತೆ ಆಗಿದ್ದು, ಕೇವಲ ಮೂಢನಂಬಿಕೆಗಳಿಂದ ಎನ್ನಬಹುದಾಗಿದೆ.

ಆರ್ಯರ ಕಾಲದಿಂದಲೇ ಸ್ತ್ರೀಗೆ ಗೌರವಯುತ ಸ್ಥಾನ ನೀಡಿ ಪೂಜನೀಯವಾಗಿ ಕಂಡಿದ್ದರು. ಗಂಡಿಗೆ ಸರಿಸಮಾನಳಾಗಿ ಬಾಳುತ್ತಿದ್ದ ಹೆಣ್ಣನ್ನು ನಾಲ್ಕು ಗೋಡೆಗಳ ನಡುವೆ ಬಂಧಿಯನ್ನಾಗಿಸಿ, ಆಕೆಗೆ ಸರಿಯಾದ ವಿದ್ಯಾಭ್ಯಾಸ ಸಿಗದಂತೆ ಮಾಡಿ, ಮನೆಯಲ್ಲಿ ಪರಿಚಾರಕಿಯಾಗಿ, ಗಂಡಿನ ಭೋಗದ ವಸ್ತುವನ್ನಾಗಿ ಮಾಡಿದ್ದು ಕ್ರೂರ ಸಂಪ್ರದಾಯಗಳು. ಈ ಸಂಪ್ರದಾಯದ ಮೂಢನಂಬಿಕೆಗಳನ್ನು ಹೋಗಲಾಡಿಸುವ ಹೊಣೆ ಪ್ರತಿ ಹೆಣ್ಣಿನದಾಗಬೇಕಿದೆ. ಮೂಢನಂಬಿಕೆಗಳ ಕುರಿತು ಇರುವ ತಪ್ಪು ಗ್ರಹಿಕೆಯನ್ನು ದೂರ ತೊಲಗಿಸುವುದರಿಂದ ಸಮಾಜದ ಸಂಸ್ಕೃತಿಯು ಉನ್ನತಿಗೇರುತ್ತದೆ.

ಪ್ರಶ್ನೆ - ವಿಶ್ಲೇಷಣೆ

ಸಂಪ್ರದಾಯವೆಂದು ಹಬ್ಬದಲ್ಲಿ ಕಲ್ಲುನಾಗರಕ್ಕೆ ಹಾಲೆರೆದು, ನಿಜದ ನಾಗರ ಕಂಡಾಗ ಕೊಲ್ಲುವುದೆಷ್ಟು ಸರಿ? ಹಬ್ಬ ಹರಿದಿನಗಳಲ್ಲಿ ಮಕ್ಕಳು ಹಸಿವಿನಿಂದ ಅಳುತ್ತಿದ್ದರೂ, ದೇವರಿಗೆ ನೈವೇದ್ಯವಾಗದೆ ಮಕ್ಕಳಿಗೆ ಏನೇನೂ ಕೊಡದೆ ಇರುವುದೆಷ್ಟು ಸರಿ ?ಮಕ್ಕಳಿಗೆ ಖಾಯಿಲೆ ಬಂದಾಗ ವೈದ್ಯರ ಬಳಿ ಹೋಗದೆ ದೇವರ ಮೇಲಿನ ನಂಬಿಕೆಯಿಂದ, ದೇವರೇ ವಾಸಿ ಮಾಡುತ್ತಾನೆನ್ನುವ ನಂಬಿಕೆ, ಹೊರಗೆ ಹೊರಟಾಗ ಬೆಕ್ಕು ಅಡ್ಡ ಬಂದರೆ ಅಪಶಕುನವೆನ್ನುವ ನಂಬಿಕೆ, ಹಲ್ಲಿ ಶಕುನ, ಜಾತಕಗಳ ಕುರಿತು ನಂಬಿಕೆ, ಘಳಿಗೆ, ದಿನ, ವಾರಗಳ ಕುರಿತು ನಂಬಿಕೆ, ಇನ್ನೂ ಮುಂತಾದ ಮೂಢನಂಬಿಕೆಗಳು ಈ ಶತಮಾನದಿಂದಲೇ ದೂರಾಗಬೇಕಿದೆ. ಪ್ರತಿಯೊಂದು ಸಂಪ್ರದಾಯ ಹಾಗೂ ಮೂಢನಂಬಿಕೆಗಳನ್ನು ಸರಿಯಾಗಿ ವಿಶ್ಲೇಷಿಸುವ ಕೆಲಸ ಪ್ರತಿಯೊಬ್ಬರದಾಗಿರಬೇಕು. ಹೆಣ್ಣು, ಗಂಡೆಂಬ ಭೇದವಿಲ್ಲದೆ, ವಿಶಾಲ ದೃಷ್ಟಿಯಿಂದ, ಸರಿಸಮಾನ ಭಾವದಿಂದ, ಒಳಿತನ್ನು ಅರಿತು ಬೆಳೆಸುವ ಹಂಬಲದಿಂದ, ಸರ್ವರಿಗೂ ಒಳಿತನ್ನು ಆಶಿಸುವ ಬಯಕೆಯಿಂದ ಸತ್ಯದ ಅನ್ವೇಷಣೆ ನಮ್ಮೆಲ್ಲರ ಗುರಿಯಾಗಲೆಂದು ಆಶಿಸೋಣ ವಿಚಾರವಂತರಾಗಿ ನಾವೆಲ್ಲರೂ.

ಶುಭ ಹಾರೈಕೆಗಳೊಡನೆ

ರಾಜಾಜಿನಗರ ವಿಧಾನಸಭಾ ಕ್ಷೇತ್ರ

ಕನ್ನಡ ಸಾಹಿತ್ಯ ಪರಿಷತ್ತು

ಸಂಪರ್ಕ ವಿಳಾಸ

'ಗುರುಕೃಪಾ', ನಂ. ೩೪೫, ೧೯ನೇ 'ಎಫ್' ಮುಖ್ಯರಸ್ತೆ

೧ನೇ 'ಎನ್' ವಿಭಾಗ, ರಾಜಾಜಿನಗರ,

ಬೆಂಗಳೂರು-೫೬೦ ೦೧೦, ದೂರವಾಣಿ:೨೩೩.೨೨೯೦

ಡಾ||ಕೆ.ಎಸ್. ರಾಜು ಅಧ್ಯಕ್ಷರು

ಎಂ. ಮಲ್ಲೇಗೌಡ ಕೋಶಾಧ್ಯಕ್ಷರು

ಎಂ.ಜಿ. ದಯಾನಂದ ಕಟ್ಟೆ,

ಸಿ.ವಿ. ಮುರಳೀಧರ್

ಗೌ||ಕಾರ್ಯದರ್ಶಿಗಳು

ಡಾ||ಎಸ್.ಕೆ. ಕರೀಂಖಾನ್‌ಗೆ 'ಕರ್ನಾಟಕ ರತ್ನ' ಪ್ರಶಸ್ತಿ; ಬಿ. ಶಿವರಾಂ ಒಲವು

ಹಿರಿಯ ಜಾನಪದ ತಜ್ಞ ಸುಪ್ರಸಿದ್ದ ಚಲನಚಿತ್ರ ಸಾಹಿತಿ ಶತಾಯುಷಿ ಡಾ||ಎಸ್.ಕೆ.ಕರೀಂಖಾನ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವಂತೆ ಮುಖ್ಯಮಂತ್ರಿ ಧರ್ಮಸಿಂಗ್ ಅವರಿಗೆ ಮನವಿ ಮಾಡಲಾಗಿದೆ ಎಂದು ರಾಜ್ಯದ ವಾರ್ತಾ ಸಚಿವ ಬಿ. ಶಿವರಾಂ ಅವರು ತಿಳಿಸಿದ್ದಾರೆ.

ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಮಾರ್ಚ್ ೨೯ರಂದು ಬೆಂಗಳೂರಿನ ಹಲಸೂರಿನಲ್ಲಿರುವ ಅವರ ವಾಸ ಗೃಹದಲ್ಲಿ ಸನ್ಮಾನಿಸಿದ ಸಂದರ್ಭ ಮಾತನಾಡಿದ ಸಚಿವರು, ೧೦೨ ವರ್ಷ ವಯಸ್ಸಿನ ಕರೀಂಖಾನ್ ಅವರು ಹಾಸನ ಜಿಲ್ಲೆಯ ಸಕಲೇಶಪುರದವರಾಗಿದ್ದು, ಸ್ವಾತಂತ್ರ್ಯ ಹೋರಾಟಗಾರರಾಗಿ, ಚಲನಚಿತ್ರ ಸಾಹಿತಿಯಾಗಿ, ಜಾನಪದ ಪ್ರಚಾರಕರಾಗಿ ಅವರು ಕರ್ನಾಟಕಕ್ಕೆ ಹಾಗೂ ಕನ್ನಡ ಭಾಷೆಗೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಬೇಕಲ್ಲದೆ ಭಾರತ ಸರಕಾರದಿಂದ 'ಪದ್ಮಶ್ರೀ'ಪ್ರಶಸ್ತಿ ಸಹ ಲಭಿಸುವಂತೆ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

ಈ ಸನ್ಮಾನ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ಎಂ. ಆನಂದ್, ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಚ್.ಬಿ. ರಮೇಶ್, ಮಾಜಿ ಅಧ್ಯಕ್ಷ ಎಚ್.ಬಿ. ಮದರಗೌಡ, ಗೌರವ ಕಾರ್ಯದರ್ಶಿ ಡಾ||ಹಂಪನಹಳ್ಳಿ ತಿಮ್ಮೇಗೌಡ, ಪಿರಿಯಾಳು ಚಂದ್ರೇಗೌಡ, ಎಚ್.ಎಂ. ಜ್ಞಾನೇಶ್ ಬಾಬು, ಕೆ.ಪಿ.ಎಸ್. ಪ್ರಮೋದ್, ಎಸ್.ರಮೇಶ, ಗಿರೀಶ್, ತೌಫಿಕ್ ಅಹಮದ್ ಮೊದಲಾದವರಿದ್ದರು.

ಡಾ||ಎಸ್.ಕೆ. ಕರೀಂಖಾನ್ ಅವರಿಗೆ ಸಚಿವ ಬಿ. ಶಿವರಾಂ ಸನ್ಮಾನಿಸುತ್ತಿರುವುದು. ಚಿತ್ರದಲ್ಲಿ ಎಚ್.ಬಿ. ರಮೇಶ್, ಎಸ್.ಎಂ. ಆನಂದ್ ಮೊದಲಾದವರಿದ್ದಾರೆ.

ಚೂರು ಚೌಕಟ್ಟು

ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ಮಕ್ಕಳ ...

ಡಿ.ಫಾರಂಗೆ ಆಹ್ವಾನ

ಅರ್ಜಿ ಆಹ್ವಾನ

ಕೋಲಾರ ಗಣಿ ಖಾಸಗಿಗೆ ಬೇಡ

ವಿದ್ಯುತ್ ಕಳವು

ಬೈಸಿಕಲ್ ವಿತರಣೆಗೆ ಆಗಸ್ಟ್ 18ರ ಮುಹೂರ್ತ ನಿಗದಿ

ಇದಲ್ಲದೇ ಸಂಪುಟ ಸಭೆ ಕೈಗೊಂಡ ನಿರ್ಧಾರಗಳು ಇಂತಿವೆ.

• ಬೆಲೆ ಕುಸಿತದಿಂದ ರೈತರನ್ನು ರಕ್ಷಿಸಲು ಕೃಷಿ ಹಾಗೂ ತೋಟಗಾರಿಕೆ ...

... 88 ಸಾವಿರ ಮೆಟ್ರಿಕ್ ಟನ್ ಮೆಕ್ಕೆ ಜೋಳಕ್ಕೆ ಶೇ. 50 ರಷ್ಟು ಸಬ್ಸಿಡಿ

ಚುನಾವಣಾ ಆಯುಕ್ತರ ಹುದ್ದೆ ಮೇಲರ್ಜೆಗೆ

ಸಭೆ

ಅಕ್ರಮ ನಿರ್ಮಾಣ ತಡೆಯಲು ಕ್ರಮ

ಕಟ್ಟಡ ತೆರವಿಗೆ ಸೂಚನೆ :

ವೇತನ ಆಯೋಗದಿಂದ ದೊರೆಯದ ಸೂಕ್ತ ಫಲ

ಅಂಕಪಟ್ಟಿ ಕಣ್ಮರೆ: ಆಡಿಟ್ ಆಕ್ಷೇಪ

ದಿಲ್ಲಿಯಲ್ಲಿ ಕರ್ನಾಟಕ ಕೇಂದ್ರ ಸ್ಥಾಪಿಸಿ

ಕನ್ನಡ ಮತ್ತು ಸಂಸ್ಕೃತಿ ಸಮಾವೇಶವನ್ನು ಐ ಎಂ ವಿಠ್ಠಲಮೂರ್ತಿ ಬೆಂಗಳೂರಿನಲ್ಲಿ ಬುಧವಾರ ಉದ್ಘಾಟಿಸಿದರು. ಡಾ ಸಿದ್ದಲಿಂಗಯ್ಯ, ಡಾ ಪುರುಷೋತ್ತಮ ಬಿಳಿಮಲೆ, ಚೆನ್ನೈ ಕನ್ನಡ ಸಂಸ್ಕೃತಿ ಸಂಘದ ಅಟ್ಟಾವರ ರಾಮದಾಸ್, ಕಾ. ತ ಚಿಕ್ಕಣ್ಣ, ಕೆ ಆರ್ ನಿರಂಜನ್ ಭಾಗವಹಿಸಿದ್ದರು

ಉಳಿದ ಬೇಡಿಕೆಗಳೆಂದರೆ-

ಕರಾಳ ದಿನಾಚರಣೆ

ಉಪಯೋಗಿಸಲಾಗುವವು

'ಅಶಕ್ತ ಕಲಾವಿದರ ಬದುಕು ಹಸನಾಗಿಸಿ'

ಕಾರ್ಯಕ್ರಮ

ಭಾಗವಹಿಸಿದವರು

ಸಂಘಟಕರು

ಕನಕ ಪೀಠಾಧೀಶರ ಆಯ್ಕೆ 7ಕ್ಕೆ

ಮಾಜಿ ಸಚಿವ ವಿಶ್ವನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯ

ಆರ್‌ಟಿ ನಗರದಲ್ಲಿ 'ಪೋಸ್ಟಲ್ ಫೈನಾನ್ಸ್ ಮಾರ್ಟ್'ಗೆ ಚಾಲನೆ

'ಕನ್ನಡ ಸೇನೆ-ಕರ್ನಾಟಕ' ...

ಬೈಸಿಕಲ್ ವಿತರಣೆಗೆ ಆಗಸ್ಟ್ 18ರ ಮುಹೂರ್ತ ನಿಗದಿ

ಬೆಂಗಳೂರು, ಆ 2- ರಾಜ್ಯದ ಸರಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳಲ್ಲಿ ಕಲಿಯುತ್ತಿರುವ ... ಮಕ್ಕಳಿಗೆ ಆಗಸ್ಟ್ 18 ...

ಚುನಾವಣಾ ಆಯುಕ್ತರ ಹುದ್ದೆ ಮೇಲ್ದರ್ಜೆಗೆ

ಜಾರು ಚೌಕಟ್ಟು

ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ಮಕ್ಕಳ ...

ಡಿ.ಫಾರಂಗೆ ಆಹ್ವಾನ

ಅರ್ಜಿ ಆಹ್ವಾನ

ಕೋಲಾರ ಗಣಿ ಖಾಸಗಿಗೆ ಬೇಡ

ವಿದ್ಯುತ್ ಕಳವು

ಅಕ್ರಮ ನಿರ್ಮಾಣ ತಡೆಯಲು ಕ್ರಮ

ಬೆಂಗಳೂರು, ಆ 2 - ...

ಕಟ್ಟಡ ತೆರವಿಗೆ ಸೂಚನೆ :

ವೇತನ ಆಯೋಗದಿಂದ ದೊರೆಯದ ಸೂಕ್ತ ಫಲ

ಅಂಕಪಟ್ಟಿ ಕಣ್ಮರೆ: ಆಡಿಟ್ ಆಕ್ಷೇಪ

ಅರವಿಂದ ನಾವಡ

ದಿಲ್ಲಿಯಲ್ಲಿ ಕರ್ನಾಟಕ ಕೇಂದ್ರ ಸ್ಥಾಪಿಸಿ

ಕನ್ನಡ ಮತ್ತು ಸಂಸ್ಕೃತಿ ಸಮಾವೇಶವನ್ನು ಎಂ ಎಂ ವಿದ್ದುಮೂರ್ತಿ ಬೆಂಗಳೂರಿನಲ್ಲಿ ಬುಧವಾರ ಉದ್ಘಾಟಿಸಿದರು ಡಾ ಸಿದ್ದಲಿಂಗಯ್ಯ, ಡಾ ಪುರುಷೋತ್ತಮ ಬಿಳಿಮಲೆ, ಚೆನ್ನೈ ಕನ್ನಡ ಸಂಸ್ಕೃತಿ ಸಂಘದ ಅಟ್ಟಾವರ ರಾಮದಾಸ್, ಶಾ ತ ಚಿಕ್ಕಣ್ಣ, ಕೆ ಆರ್ ನಿರಂಜನ್ ಭಾಗವಹಿಸಿದ್ದರು

ಉಳಿದ ಬೇಡಿಕೆಗಳೆಂದರೆ -

ಕರಾಳ ದಿನಾಚರಣೆ

ಉಪಯೋಗಿಸಲಾಗದವು

‘ಅಶಕ್ತ ಕಲಾವಿದರ ಬದುಕು ಹಸನಾಗಿಸಿ’

ಕನಕ ಪೀಠಾಧೀಶರ ಆಯ್ಕೆ 7ಕ್ಕೆ

ಆರ್‌ಟಿ ನಗರದಲ್ಲಿ ‘ಪೋಸ್ಟಲ್ ಫೈನಾನ್ಸ್ ಮಾರ್ಟ್’ಗೆ ಚಾಲನೆ

‘ಕನ್ನಡ ಸೇನೆ-ಕರ್ನಾಟಕ’ ... ಶ್ರದ್ಧಾಂಜಲಿಯಲ್ಲಿ ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರ ಎಚ್ ಎಸ್ ದೊರೆಸ್ವಾಮಿ, ಡಾಟಿತ ಬರಗೂರು ರಾಮಚಂದ್ರಪ್ಪ, ಸಂಸ್ಥೆಯ ಕೆ ಆರ್ ಕುಮಾರ್ ಪಾಲ್ಗೊಂಡಿದ್ದರು

ಇದೀಗ ಹಾಲಿವುಡ್‌ಗೆ....



● [illegible]

ರೋಮನ್ ಪೋಲನ್‌ಸ್ಕಿ ಚಿತ್ರಗಳೆಂದರೆ ನಮಗೆಲ್ಲ ಮೊದಲಿನಿಂದಲೂ ಕುತೂಹಲ [illegible] ಕತೆ ಹೇಳುತ್ತ, ಅನಿರೀಕ್ಷಿತ ತಿರುವು [illegible] ಗ್ರಹಿಕೆಗೆ ಹಲವಾರು ಸ್ತರಗಳು. [illegible] ಆಶಿರೊ ಕುರೋಸಾವೊ ಥರ [illegible] ಪೋಲನ್‌ಸ್ಕಿ ಚಿತ್ರಗಳಲ್ಲೂ ಇದೆ. ಹೀಗೆ [illegible] ''ರೋಮನ್ ಪೋಲನ್‌ಸ್ಕಿ ಚಿತ್ರಗಳಲ್ಲಿ ತಿರುವುಗಳಿವೆ; ಆದರೆ ಕತೆಯಲ್ಲಿಲ್ಲ, ಪಾತ್ರಗಳಲ್ಲಿ, [illegible] ಸ್ತರಗಳಿರುವ [illegible] ಆಯಾಮಗಳಿವೆ. [illegible] ಪೋಲನ್‌ಸ್ಕಿಯ [illegible] ಚಿತ್ರ BITTER MOON – HONEY MOON ಮಧುಚಂದ್ರದ [illegible]

ಗಂಡ – ಹೆಂಡತಿ ಮತ್ತು [illegible] ಪೋಲನ್‌ಸ್ಕಿ [illegible] ಲೈಂಗಿಕ ದೃಶ್ಯಗಳಿಗೆ ಧಾರಾಳವಾಗಿ [illegible] ಅಂಥ ದೃಶ್ಯಗಳಿಗೆ ಒಂದೂ [illegible] ಶಾರನ್ ಸ್ಟೋನ್‌ರನ್ನು ಆರಿಸಿಕೊಂಡಿದ್ದರೆ ಅವರಿಗೆ ಕೋಟಿ ಡಾಲರ್ ಸುರಿಬೇಕಾಗಿತ್ತು. [illegible] ಪೋಲನ್‌ಸ್ಕಿಗೆ ಹೆಂಡತಿ ಕೋಟಿ ರೂಪಾಯಿ [illegible] ಮತ್ತೇ"

700 ದಶಕದ ಯಶಸ್ವಿ ಚಿತ್ರ 'ಚೈನಾ ಟೌನ್' ನೆನಪಿದೆಯೇ! ಇದರಲ್ಲಿ ರೋಮನ್ ಪೋಲನ್‌ಸ್ಕಿ –ಜಾಕ್ ನಿಕೋಲ್ಸನ್ [illegible] ಹುಡುಗಿಯನ್ನು ಚೇಷ್ಟೆ ಮಾಡಿ! ಆರೋಪ ಹೊತ್ತು ಅಮೇರಿಕಾ ಬಿಟ್ಟೋಡಿ, ಫ್ರಾನ್ಸ್‌ನಲ್ಲಿ ನೆಲೆಸಿದ ಪೋಲನ್‌ಸ್ಕಿ ಮತ್ತೆ ಜಾಕ್ ನಿಕೋಲ್ಸನ್ ಜತೆಗೂಡಿ ಇನ್ನೊಂದು ಚಿತ್ರ ತಯಾರಿಸುತ್ತಿದ್ದಾನಂತೆ. ಇಬ್ಬರೂ ಕೂತು ಮಾತನಾಡಿದ್ದು ಹೊಸ ಚಿತ್ರದ ಕುರಿತೋ ಅಥವಾ ತಮ್ಮ ಹೊಸ ಹುಡುಗಿಯರ ಕುರಿತೋ ಎಂದು ಪತ್ರಿಕೆಗಳು ಗುಲ್ಲೆಬ್ಬಿಸಿದಾಗ ನಿಕೋಲ್ಸನ್ "ಹೊಸ ಹೆಂಡತಿಯರು ಮಾತಿಗೆ ಒಳ್ಳೇ ವಸ್ತು" ಎಂದು ಕುಹಕವಾಡಿದ್ದಾನೆ.

*   *   *

Arnold Schwarzeneggerಗೆ ಈಗ 48ರ ಹರೆಯ, Sylvester Stalloneಗೆ 41 ಅಥವಾ 42. Bruce Willisಗೂ ನಲ್ವತ್ತರ ಸಮೀಪ. ಇವರೆಲ್ಲರನ್ನೂ ಗಂಡೆದೆಯ ಹೀರೋಗಳೆಂದು ಭ್ರಮಿಸಲು ಜನ ನಿರಾಕರಿಸುತ್ತಿರಬೇಕಾದರೆ, ಬೆಲ್ಜಿಯಂನ ಮೂವತ್ನಾಲ್ಕರ ಯುವಕನೊಬ್ಬ ತೆರೆಯ ಮೇಲೆ ವಿಜೃಂಭಿಸತೊಡಗಿದ. ತನ್ನ ಕರಾಟೆ ಕಿಕ್‌ಗಳಿಂದ ಪ್ರೇಕ್ಷಕರ ಎದೆ ನಡುಗಿಸಲಾರಂಭಿಸಿದ. ಆತನ ಚಿತ್ರಗಳು ಹಣ ದೋಚಿದವು.

ಹಾಲಿವುಡ್ ಬೆಟ್ಟದ ಮೇಲೆ ಬಿಸಿ ನೀರು ತುಂಬಿದ ಈಜುಕೊಳ, ಸಕಲ ಸಲಕರಣೆಗಳಿರುವ ಜಿಮ್, ಓಡಾಡಲು ಟೊಯೋಟಾ ಅಥವಾ ಮರ್ಸಿಡಿಸ್, ಸೇದಲು ವಿಶೇಷವಾಗಿ ತಯಾರಿಸಿದ ಕ್ಯೂಬಾ ಸಿಗರೇಟ್‌ಗಳು, ಎಡಗೈ ಮಣಿಕಟ್ಟಿಗೆ ಬಂಗಾರದ ರೋಲೆಕ್ಸ್ ವಾಚ್. ಹೀಗೆ ಚಕ್ರವರ್ತಿಯ ಬದುಕು ಬದುಕುತ್ತಿರುವ ಈ ರಣಧೀರ ವ್ಯಾನ್ ಡ್ಯಾಮ್, ತನ್ನ ಆರಂಭದ ಹೆಸರಾದ Jean-Claude Van Varenberg ಉಚ್ಚಾರಣೆಗೆ ಕ್ಲಿಷ್ಟ ಎಂಬ ಕಾರಣಕ್ಕೆ Van Damme ಎಂದು ಬದಲಾಯಿಸಿಕೊಂಡ ಹುಡುಗ.

ಈತನ ಆರಂಭದ ಚಿತ್ರಗಳೆಲ್ಲ ಕಡಿಮೆ ಬಜೆಟ್‌ನವು. "ಕಿಕ್ ಬಾಕ್ಸರ್", "ಲಯನ್ ಹಾರ್ಟ್" (ಶೇರ್ ದಿಲ್ ಎಂದು ಹಿಂದಿಗೆ ತರ್ಜುಮೆಯಾಗಿದೆ), "ನೋ ವೇರ್ ಟು ರನ್", "ಯೂನಿವರ್ಸಲ್ ಸೋಲ್ಜರ್", "ಹಾರ್ಡ್ ಟಾರ್ಗೆಟ್" ಇವೆಲ್ಲದರಲ್ಲೂ ಈತನ ಮೈಕಟ್ಟು, ಮುಷ್ಟಿ, ಕರಾಟೆ ಪಟ್ಟುಗಳೇ ಪ್ರಾಧಾನ್ಯ. ಯುವಕರಿಗೆ ಹೇಗೋ, ಹಾಗೇ ಹೆಂಗಳೆಯರ ಮನಸೂರೆಗೊಳ್ಳುವಂತೆ ಕಥೆ ನೇಯುತ್ತಿದ್ದ ಕಾರಣ ವ್ಯಾನ್ ಡ್ಯಾಮ್ ಒಂದು ತಲೆಮಾರಿನ ಕಣ್ಮಣಿಯಾದ.

ಈತನ ದಿಗ್ವಿಜಯದ ದಾಖಲೆಗಳು ಕೂಡಾ ಕುತೂಹಲಕಾರಿಯಾಗಿವೆ. ಈತನ ಚಿತ್ರ "ಡಬಲ್ ಇಂಪ್ಯಾಕ್ಟ್" ಭಾರೀ ಯಶಸ್ಸು ಕಾಣುವ ಮೊದಲು ಈತನ ಬೆಲೆ ಚಿತ್ರವೊಂದಕ್ಕೆ [illegible]

[illegible]

ಹಾಲಿವುಡ್ 'ಗಾಸಿಪ್'

[illegible]

ಜೋಗಿ

ಕರೀಂಖಾನ್‌ಗೆ ಜೀಶಂಪ ಪ್ರಶಸ್ತಿ

ಕರ್ಮಯೋಗಿಗೆ ಸಂದ ಅರ್ಹ ಸಮ್ಮಾನ

ಜಾನಪದಕ್ಕಾಗಿ ಜೀವನವನ್ನೇ ಮುಡಿಪಿಟ್ಟು ಇತ್ತೀಚೆಗೆ ನಿಧನರಾದ ಜಾನಪದ ತಜ್ಞ ಜೀಶಂ ಪರಮಶಿವಯ್ಯ (ಜೀಶಂಪ) ಅವರ ಅಭಿಮಾನಿಗಳು ಜೀಶಂಪ ಹೆಸರಿನಲ್ಲಿ ಪ್ರಶಸ್ತಿ ನೀಡಲು ನಿರ್ಧರಿಸಿದರು.

ಜೀಶಂಪ ಹುಟ್ಟಿದ ದಿನವಾದ ನವೆಂಬರ್ 12 ರಂದು ಪ್ರತಿವರ್ಷ ನೀಡಲಾಗುವ ಈ 'ಜೀಶಂಪ ಜಾನಪದ ಪ್ರಶಸ್ತಿ' ಯನ್ನು ಈ ವರ್ಷ ಪಡೆದವರು ಡಾ। ಎಸ್.ಕೆ. ಕರೀಂಖಾನ್.

ಅಗಾಧ ಸ್ವಾಭಿಮಾನ, ಅಪಾರ ಪರಿಶ್ರಮ ಹಾಗೆಯೇ ಅಜ್ಞಾತ ಬದುಕು ಬದುಕುತ್ತಿರುವ ಕರೀಂಖಾನ್ ಅವರು ಇಂದಿನ ಸಾಮಾಜಿಕ ಜೀವನದಲ್ಲಿ ಅಪರೂಪವಾಗಿರುವ ಕರ್ಮಯೋಗಿ.

ಯೋಧನ ಮಗ

ಅಫ್ಘನ್‌ನ ಯೋಧ ಅಬ್ದುಲ್ ರೆಹಮಾನ್‌ಖಾನ್, ಮನೆ ಕಲಹದಿಂದ ದೇಶಾಂತರ ಹೊರಟು ಭಾರತಕ್ಕೆ ಬಂದು ಕರ್ನಾಟಕದಲ್ಲಿ ನೆಲೆಸಿದವರು. ಅರಬ್ ಮೂಲದ ಹೆಂಡತಿಯೊಡನೆ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ನೆಲೆಸಿದ್ದಾಗ ಕರೀಂಖಾನ್ ಹುಟ್ಟಿದರು. ಬಹುಬೇಗನೇ ತಮ್ಮ ತಂದೆಯನ್ನು ಕಳೆದುಕೊಂಡು ಕರೀಂಖಾನ್ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆಯಬೇಕಾಯಿತು. ಓದಿದ್ದು ಬರೀ ಎಂಟನೇ ತರಗತಿಯವರೆಗೆ ಮಾತ್ರ. ಕನ್ನಡ ಮತ್ತು ಸಂಸ್ಕೃತ ಓದನ್ನು ಸ್ವಂತ ಪರಿಶ್ರಮದಿಂದ ಕಲಿತು ಅಪಾರ ಪಾಂಡಿತ್ಯ ಪಡೆದರು. ವ್ಯಾಸ, ವಾಲ್ಮೀಕಿಯ ಮಹಾಭಾರತ ಮತ್ತು ರಾಮಾಯಣಗಳು ಕಂಠಪಾಠವಾದವು. ಜನಪದಕ್ಕೆ ಸಂಬಂಧಿಸಿದ ಅಗಾಧ ಸಾಹಿತ್ಯ ಕಲೆ ಹಾಕಿದರು. ಇದಕ್ಕೆ ಪೂರಕವಾಗಿ ಕರೀಂಖಾನ್‌ಗೆ ದೈವದತ್ತವಾದ ಇಂಪಾದ ಕಂಠವಿತ್ತು. ಜನಮನಕ್ಕೆ ತಮ್ಮ ಗಾಯನದ ಮೂಲಕ ತಂಪೆರೆದ ಕರೀಂಖಾನ್, ತಮಗೆ ಸಂಸ್ಕೃತ ಕಲಿಸಿದ ನಾರಾಯಣ ಶಾಸ್ತ್ರಿಗಳನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ.

ಸ್ವಾತಂತ್ರ್ಯಕ್ಕಾಗಿ ಸೆರೆಮನೆಗೆ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ದೇಶಭಕ್ತಿಯ ಸ್ಫೂರ್ತಿಗೀತೆ ಹಾಡುತ್ತಿದ್ದ ಖಾನ್‌ರನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಸೆರೆಮನೆಗೆ ತಳ್ಳಿತು. ಆದರೆ ಬಿಡುಗಡೆಯಾದ ಕೂಡಲೇ ಮತ್ತೆ ಕರೀಂಖಾನ್‌ರ ಹಾಡು ಹೊರ ಹೊಮ್ಮುತ್ತಿತ್ತು. ಹೀಗೆ ಹಲವು ಬಾರಿ ಜೈಲುವಾಸ ಅನುಭವಿಸಿದರು. ಸ್ವಾತಂತ್ರ್ಯ ಬಂದ ಮೇಲೆ ಏಕೀಕೃತ ಕರ್ನಾಟಕಕ್ಕಾಗಿ ನಡೆದ ಚಳವಳಿಯ ಕಾಲದಲ್ಲಿ ಮತ್ತೊಮ್ಮೆ ಜೈಲುವಾಸ ಅನುಭವಿಸಿದ ಕರೀಂಖಾನ್‌ಗೆ ಆ ಸಮಯದಲ್ಲಿ 50 ವರ್ಷ ಮೀರಿತ್ತು.

ಹೀಗಾಗಿ ಮದುವೆಯಾಗಲೇ ಇಲ್ಲ.

ಕರೀಂಖಾನ್ ತಮ್ಮ ಬದುಕನ್ನು ಜಾನಪದ ಕ್ಷೇತ್ರಕ್ಕೆ ತೊಡಗಿಸಿಕೊಂಡರು. ಹಲವಾರು ಕೃತಿಗಳನ್ನು ಪ್ರಕಟಿಸಿದರು. ಆದರೆ ಕರೀಂಖಾನ್ ತಮ್ಮ ನಿರುಪದ್ರವ ಸ್ವಭಾವದಿಂದಾಗಿ ಅನೇಕರಿಂದ ಶೋಷಣೆಗೊಳಗಾಗಬೇಕಾಯಿತು. ಅವರ ಅನೇಕ ಕೃತಿಗಳು ಬೇರೆಯವರ ಹೆಸರಿನಲ್ಲಿ ಪ್ರಕಟವಾಗಿದ್ದನ್ನು ಕರೀಂಖಾನ್ ವೇದನೆಯಿಂದ ನೆನೆಯುತ್ತಾರೆ.

ಅನ್ನಕ್ಕಾಗಿ ಸಿನಿಮಾ

ಜೀವನ ನಿರ್ವಹಣೆಗಾಗಿ ಮದ್ರಾಸ್ ಸೇರಿದ ಕರೀಂಖಾನ್ ಸಿನಿಮಾಗಳಿಗಾಗಿ ಹಾಡು, ಸಂಭಾಷಣೆ ಬರೆಯಲು ಆರಂಭಿಸಿದರು. ಸಾಹಿತ್ಯ –ಸಂಗೀತಗಳ ಬಗ್ಗೆ ಆಳವಾದ ಪರಿಜ್ಞಾನ ಹೊಂದಿದ್ದ ಅವರ ಕೈಯಿಂದ ಹರಿದದ್ದು ಸಿನಿಮಾ ಗೀತೆಗಳೆಂದು ಕರೆಯಲ್ಪಟ್ಟ ಅತ್ಯುತ್ತಮ ಸಾಹಿತ್ಯಕ ರಚನೆಗಳು! ಅದಕ್ಕೆ ಸಾಕ್ಷಿ ಅವರು ರಚಿಸಿದ "ನಟವರಗಂಗಾಧರ" ಎಂಬ ಗೀತೆ.

ಕರೀಂಖಾನರದು ಸಾಹಿತ್ಯ, ಗೀತೆ ಮತ್ತು ಸಂಭಾಷಣೆ ಇದ್ದ 'ಸ್ವರ್ಣಗೌರಿ' ಚಲನಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ದೊರಕಿತು. 'ಬಾರೆ ಚೆಲುವೆ' ಎಂಬ ರೊಮ್ಯಾಂಟಿಕ್ ಗೀತೆಯಿಂದ ಹಿಡಿದು 'ನಟವರ ಗಂಗಾಧರ' ದಂತಹ ಭಕ್ತಿರಸ ಗೀತೆಯವರೆಗೆ ಕರೀಂಖಾನರ ಸಾಹಿತ್ಯ ಕೃಷಿ ವೈವಿಧ್ಯಮಯವಾದದ್ದು. ಆದರೆ, ಸಿನಿಮಾ ರಂಗದಲ್ಲಿ ಕರೀಂಖಾನರ ಹೆಸರೇ ನಿಲ್ಲಲಿಲ್ಲ. ಅವರಿಗೆ ಸಲ್ಲಬೇಕಾದ ನ್ಯಾಯಯುತ ಸಂಭಾವನೆ ಸಹ [illegible]

ಸಲ್ಲಿಸದೆ ಸತಾಯಿಸಿದವರೇ ಜಾಸ್ತಿ. ಅವರ ಗೀತೆ, ಸಾಹಿತ್ಯ ಕೃತಿಚೌರ್ಯ ಮಾಡಿದವರೂ ಅನೇಕ. ಹೀಗಾಗಿ ರೋಸಿದ ಕರೀಂಖಾನ್ ತಮ್ಮ ಹತ್ತು ವರ್ಷಗಳ ಆ ಬದುಕಿನ ಕಹಿ ನೆನಪುಗಳೊಂದಿಗೆ ಬೆಂಗಳೂರಿಗೆ ಮರಳಿದರು.

ಅಕಾಡೆಮಿ ಅಧ್ಯಕ್ಷರಾಗಿ

ಕರೀಂಖಾನ್‌ರಿಗೆ ಯಾವುದೇ ಒಂದು ರಾಜ್ಯಪ್ರಶಸ್ತಿಗಳಾಗಲಿ; ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾಸಾಶನಗಳಾಗಲಿ ಇಲ್ಲ. ಹಲವಾರು ಸಂಘ -ಸಂಸ್ಥೆಗಳು ಸನ್ಮಾನಿಸಿದೆ. ಕರೀಂಖಾನ್‌ರೊಂದಿಗಿದ್ದ ಒಬ್ಬ ಸುಗಮ ಸಂಗೀತಗಾರ ಅವರಿಗೆ ಸಾಕಷ್ಟು ಅನ್ಯಾಯ ಮಾಡಿದ ಆರೋಪಗಳಿವೆ. ಅವರಿಗೆ ಮನೆ ನೀಡಿದ್ದ ಸರಕಾರ ಸುಮ್ಮನೆ ಕೀಲಿ ಮಾತ್ರ ತೋರಿಸಿದೆ. ನೀಡಿದ್ದ ಆರ್ಥಿಕ ನೆರವು ಹರಿದು ಹಂಚಿ ಹೋಗಿದೆ. ಕೊನೆಗೆ ತಮ್ಮ ಸಹೋದರನ ಮನೆಯಲ್ಲಿ ಆಶ್ರಯ ಪಡೆದಿರುವ ಕರೀಂಖಾನ್ ಇದಕ್ಕೆಲ್ಲದಕ್ಕೂ ಅತ್ಯಂತ ನಿರ್ಲಿಪ್ತರಾಗಿದ್ದಾರೆ; ಮಾಗುವಿನಂತಾಗಿದ್ದಾರೆ. ವಾರದ ಹಿಂದೆ ಬೆಂಗಳೂರಿನಲ್ಲಿ ಅವರನ್ನು ಕಾಣುವ ಸುಯೋಗ ನನಗೆ ಲಭ್ಯವಾಗಿತ್ತು. ಇದೆಲ್ಲವನ್ನು ನೋಡಿದಾಗ ಏನನ್ನಿಸುತ್ತದೆ ಎಂದು ಕೇಳಿದಾಗ ಅದೆಲ್ಲವನ್ನು ಕಟ್ಕೊಂಡು ನನಗೇನಾಗಬೇಕಿದೆ? ಮಾನ-ಅಪಮಾನಗಳೆಲ್ಲ ಶ್ರೀನಿವಾಸನ ದಯೆ. ಅವನ ನಾಮಸ್ಮರಣೆ ನನ್ನನ್ನು ಕಾಪಾಡಿದೆ ಎಂದು ತಾವು ನಂಬಿದ ಶ್ರೀ ಮಂಜುನಾಥೇಶ್ವರನ ಮೇಲೆ ರಚಿಸಿದ ದೊಡ್ಡದಾದ ಗೀತೆಯ ಸಾಲುಗಳನ್ನು ನೆನಪಿನ ಶಕ್ತಿಯಿಂದ ಉದ್ಧರಿಸಿದರು.

'ಅಳಿದ ಮೇಲೆ' ಟ್ರಸ್ಟ್ ಮಾಡುವ, ಗೋರಿ ಕಟ್ಟುವ, ಸ್ಟ್ಯಾಂಪ್ ತರಲು ಪೇಚಾಡುವ ನಾವು, ಇರುವಾಗ ನೋಡಿಕೊಳ್ಳಲು, ಗೌರವಿಸಲು, ಆದರಿಸಲು ಹಿಂದೇಟು ಹಾಕುತ್ತೇವೆ. ಅಥವಾ ಕೆಲವೊಮ್ಮೆ ಇಂಥ ವ್ಯಕ್ತಿಗಳು ಇದ್ದಾರೆಯೇ ಎನಿಸುವುದೂ ಇದೆ. ಮೊದಲ ಕನ್ನಡ ಲೇಖಕಿ ಎನಿಸಿದ ನಂಜನಗೂಡು ತಿರುಮಲಾಂಬ ಇದಕ್ಕೆ ಜ್ವಲಂತ ಉದಾಹರಣೆ. ಈ ಹಿನ್ನೆಲೆಯಲ್ಲಿ [illegible] ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಯವರಿಗೆ ಪತ್ರ ಬರೆದಿದ್ದೇನೆ. ಮಾಜಿ ಸಚಿವ ಎಂ.ಸಿ. ನಾಣಯ್ಯನವರ ಗಮನಕ್ಕೂ ಇದನ್ನು ತಂದಿದ್ದೇನೆ ಕೂಡಾ.

ಇಲ್ಲಿ ಸಮಾಧಾನದ ಅಂಶವೆಂದರೆ, ಇತ್ತೀಚೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಜನಾರ್ಧನ ಪೂಜಾರಿಯವರು ರೂ. 50ಸಾವಿರದ ನೆರವು ನೀಡಿದ್ದಾರೆ. ಕರೀಂಖಾನ್‌ರು ಮಹಾ ಸ್ವಾಭಿಮಾನಿ. ಸ್ವಾತಂತ್ರ್ಯ ಯೋಧರಾಗಿರುವಂತೆಯೇ ಯಾರ ಮುಂದೂ ಕೈ ಚಾಚುವವರಲ್ಲ. ಸಾಕಷ್ಟು ವರ್ಷ ಮನೆ ಮಂದಿಯಿಂದ ಹೊರಗಿದ್ದರೂ ಕೂಡಾ ಈಗ ಸಹೋದರ ಗಫಾರ್‌ಖಾನ್‌ರು ಕೈ ಬಿಟ್ಟಿಲ್ಲ.



ತಮ್ಮ ಮನೆಯಲ್ಲೇ, ತನ್ನ ತುಂಬು ಸಂಸಾರದ ನಡುವೆ ಒಂದು ಕೋಣೆಯಲ್ಲಿ ಕರೀಂಖಾನ್‌ರನ್ನು ಇಟ್ಟುಕೊಂಡಿದ್ದಾರೆ. ಅವರನ್ನು ಕಾಣಲು ಬರುವವರನ್ನು ಆತ್ಮೀಯತೆಯಿಂದ ಕಂಡು, ವಿಷಯ ವಿವರಗಳನ್ನು ಒದಗಿಸುತ್ತಾರೆ. ಅವರಲ್ಲೂ ಕನ್ನಡಕ್ಕಾಗಿ, ಧರ್ಮಕ್ಕಾಗಿ, ದೇಶ-ನಾಡಿಗಾಗಿ ಓಡಾಡಿದ ಅಣ್ಣನನ್ನು ನಾಡು, ಸರ್ಕಾರ ನಿಕೃಷ್ಟವಾಗಿ ಕಂಡ ಬಗ್ಗೆ ನೋವಿದೆ, ಆಕ್ರೋಶವಿದೆ.

ಇನ್ನಾದರೂ ಕರೀಂಖಾನ್ ಸಾಹೇಬರು ನೆಮ್ಮದಿಯ ದಿನಗಳನ್ನು ಕಾಣಬೇಕು. ಇಂತಹ ಒಂದು ಪರಿಸ್ಥಿತಿಯ ನಿರ್ಮಾಣಕ್ಕೆ ಕಾರಣರಾದ ನಮ್ಮ-ನಿಮ್ಮೆಲ್ಲರ ಪ್ರಾಯಶ್ಚಿತವೂ ಇದೇ ಎಂದು ನನ್ನ ಅನಿಸಿಕೆ. ಯಾಕೆಂದರೆ ಇದು ನಾಡು-ನುಡಿಯ ಪ್ರಶ್ನೆ. ನಟರಿಗೆ, ನಟಿಯರಿಗೆ ಕನ್ನಡ 'ಓರಾಟಗಾರರಿಗೆ' ಪದ್ಮ ಪ್ರಶಸ್ತಿಗಳು. ಅವರ ಹೆಸರಲ್ಲಿ ನಗರಗಳು, ರಸ್ತೆಗಳು ಇವೆ. ಅವರಿಗೆ ಹೋಲಿಸಿದಾಗ, ಕರೀಂಖಾನ್‌ರ ಸಾಧನೆ ಕೂಡ ಗಗನಸದೃಶವಾದುವೇ. ಇದನ್ನೆಲ್ಲ ತಿಳಿಯಲು, ತಿಳಿಸಲು ಜನ ಬೇಕು. ತಮಿಳುನಾಡಿನಲ್ಲಿ, ಆಂಧ್ರದಲ್ಲಿ ಅವರು ಅಲ್ಲಿಯವರಲ್ಲದಿದ್ದರೂ ಜನ, ಸರ್ಕಾರ ಗಮನಿಸಿದ್ದಾರೆ, ಆಧರಿಸಿದ್ದಾರೆ. ಪಂಡರೀಬಾಯಿ, ರಜನೀಕಾಂತ್ ಪಟ್ಟಿ ಕೊಡಬಹುದು.

ಕನ್ನಡ ಸಂಘ-ಸಂಸ್ಥೆಗಳು, ಕಲಾವಿದರ ಸಂಘಗಳು, ರಂಗಭೂಮಿ ಸಂಘಟನೆಗಳು, ಚಿತ್ರ ರಂಗದ ಧುರೀಣರು ಸಮಯ ಮೀರುವುದಕ್ಕೂ ಮುನ್ನ ಎಚ್ಚೆತ್ತುಕೊಳ್ಳಲಿ.

ಶ್ರೀ ಕೃಷ್ಣಲೀಲೆ

ಶ್ರೀಕೃಷ್ಣ ಸಂಧಾನ

'ಶ್ರೀಕೃಷ್ಣ ಸಂಧಾನ' ಚಿತ್ರದ ಹಾಡುಗಳ ಧ್ವನಿಮುದ್ರಣ ಸಮಯದಲ್ಲಿ ... ವೆಂಕಟಾದ್ರಿ, ... ಸುರೇಶ್, ವಿ. ಮನೋಹರ್, ಎಸ್.ಗೋಪಾಲರಾವ್

... ಎಂದು ನಿರ್ಮಾಪಕರು ತಿಳಿಸಿದಾರೆ. ... ಪೌರಾಣಿಕ ನಾಟಕ ಅದಕ್ಕೊರಟರೆ ... ಚಿತ್ರದಲ್ಲಿ ರಸವತ್ತಾಗಿ ... ಒಂದು ತಂಡವು ... ಪಾತ್ರಧಾರಿಗಳ ... ಪಂತ ತಲುಪಿದೆ. ದೊಡ್ಡ ಅಚಾತುರ್ಯದ

'ಓ ದೇವರೇ ಕರ್ನಾಟಕದ ಮೇಲೆ ಅಮೃತ ಸುರಿಸು'

ಈ ವಯೋವೃದ್ಧರನ್ನು ...ಯ ಮೇಲೆ ಕುಳ್ಳಿರಿಸಿ ಅನಾಮತ್ತಾಗಿ ಎತ್ತಿ ವೇದಿಕೆಯ ಮೇಲೆ ಕೊಂಡೊಯ್ದ ...

... ಕರಿಂಖಾನ್ ಅವರು ಮಾತಾಡಿದ್ದ... 'ಈ ಸಂಭ್ರಮ, ಸಡಗರವನ್ನು ನೋಡುತ್ತಿದ್ದರೆ ... ಉದಯಶಂಕರ್ ಅವರು ಸಾಹಿತ್ಯ ರಚಿಸಿದ್ದೇ ... ಕಷ್ಟ ಪಡ... ಅವನು. ... ಅನುಭವಿಸುತ್ತಿರುವ ... ಅಂಥಾ ಪ್ರಶಸ್ತಿಯನ್ನು ನೀಡಿ ... ನಾನೀಗ ನೂರೈದು ಸಂವತ್ಸರಗಳನ್ನು

★

... ಕರಿಂಖಾನ್ ಅವರಿಗೆ ...

★

ಅಕಾಡೆಮಿಗೆ ನಿವೇದನ

ವಿಡಿಯೋ ಆಗಲಿರುವ ಆಡಿಯೋ !

ಲವ್‌ಲವಿಕೆ

... ಪ್ರಕಾಶ್ ...

ಸತ್ಯಮೇವ ಜಯತೆ

ಶ್ರೀ ಕೃಷ್ಣಲೀಲೆ

ಜೆ.ಪಿ. [illegible] 'ಶ್ರೀ ಕೃಷ್ಣಲೀಲೆ' ಚಿತ್ರದ ಮಾತಿನ [illegible] ಕಳೆದ ವಾರ [illegible] ಕವಿತಾ ಕೃಷ್ಣಮೂರ್ತಿಯವರೊಂದಿಗೆ [illegible] ಅರವಿಂದ ಸಂಗೀತ [illegible]



[illegible]

ಶ್ರೀಕೃಷ್ಣಸಂಧಾನ

'ಶ್ರೀಕೃಷ್ಣ ಸಂಧಾನ' ಚಿತ್ರದ ಹಾಡುಗಳ ಧ್ವನಿಮುದ್ರಣ ಸಮಯದಲ್ಲಿ
ವೆಂಕಟ್ [illegible], [illegible] ಸುರೇಶ್, ವಿ.ಮನೋಹರ್, ಎಸ್.ಗೋಪಾಲನ್

[illegible] ಒಂದು ಪೌರಾಣಿಕ ನಾಟಕ ಆಡಹೊರಟರೆ ಎಂತಹ [illegible]

'ಓ ದೇವರೇ ಕರ್ನಾಟಕದ ಮೇಲೆ ಅಮೃತ ಸುರಿಸು'

ನೂರ ಐದು [illegible] ಜಾನಪದ ಕಲಾ ತಪಸ್ವಿಗೊಂದು ಮನೆಯಿಲ್ಲ. [illegible] ಹಚಾರಿಯಾದುದರಿಂದ ಹೆಂಡತಿಯಿಲ್ಲ, ಮಕ್ಕಳೂ [illegible] ದೆಯೋ ಇಲ್ಲವೋ ಯಾರಿಗೂ ಗೊತ್ತೀ... ಇಷ್ಟೆಲ್ಲಾ ಇಲ್ಲ'ಪಾಡುಗಳ ನಡುವೆ ಇವರು ದೇವರಲ್ಲಿ ಬೇಡಿಕೊ[illegible]

"[illegible] ಕರ್ನಾಟಕದ ಮೇಲೆ ಅಮೃತ [illegible] ಕನ್ನಡಿಗರೂ [illegible] ಆಶೀರ್ವದಿಸು"

[illegible]

★

[illegible] ದೀರ್ಘಕಾಲ ಒದು[illegible] ಇಲವೇ ಗೊತ್ತಿಲ್ಲ [illegible] ಸಾರ.

★

ಕೆ.ಎಸ್.ಎಲ್.ಸ್ವಾಮಿ [illegible] ಕೊಡುವಂತೆ [illegible] 'ಬೇಗ ಬರೆದರೆ ಬೇಗ [illegible] ತಡವಾಗಿ ಬರೆದರೆ [illegible] ಆಗೋದು ತಡವಾಗುತ್ತದೆ' [illegible]

[illegible]

ಈ [illegible] ಒಂದೂ ಗೊತ್ತಿಲ್ಲ

'[illegible] ಎನ್.ಟಿ'ಯ ಜತೆ ಕಣ್ಣು ಕೂಡಾ ಮಂದ [illegible] ಮೈಕ್ ಮುಂದೆ [illegible] ಮಾತಾಡತೊಡಗಿದ್ದರು. [illegible]

[illegible] ಯಾವ ಅಕ್ಷರವನ್ನು ತೆಗೆದರೂ [illegible] ಗುತ್ತದೆ: ಉದಯಶಂಕರ-[illegible] ಶಂಕರ, ಕರ. . ಹೀಗೆ [illegible] ಇದೆಯಲ್ಲಾ?"

[illegible]

★

ಬಿ.ಸರೋಜಾದೇವಿ [illegible]

★

[illegible]

ಅಕಾಡೆಮಿಗೆ ನಿವೇಶನ

[illegible]

ವಿಡಿಯೋ ಆಗಲಿರುವ ಆಡಿಯೋ !

[illegible]

[illegible]

ಲವ್‌ಲವಿಕೆ

[illegible] ನಿರ್ದೇಶಿಸುತ್ತಿದ್ದಾರೆ. ಗೌರಿಶಂಕರ್ ಛಾಯಾಗ್ರಹಣ, ರಾಜೇಶ್ ರಾಮ[illegible] ಸಂಗೀತ, [illegible] ತಿಶೂಲಿ ಸಾಹಿತ್ಯ

ಸತ್ಯಮೇವ ಜಯತೆ

[illegible]

ಕರೀಮಜ್ಜನಿಗೆ ಕನ್ನಡ ಸಿರಿ ಪ್ರಶಸ್ತಿ ಪ್ರದಾನ

■ 'ಕನ್ನಡಕ್ಕಾಗಿ ಎಲ್ಲರೂ ಒಂದಾಗಲಿ, ಚೂರಿ ಈಚೆಗೆ ಬರದಿರಲಿ' ■

ಬೆಂಗಳೂರು, ನ. 13- ಅದೊಂದು ಪುಟ್ಟ ಸರಳ ಸಮಾರಂಭ.

ಮನೆಯ ಒಳಗಿನ ಮೂಲೆಯಲ್ಲಿ ಮಲಗಿದ್ದ ಹಳೆಯ ಜೀವವನ್ನು ಎತ್ತಿ ಕೆಲವರು ಕುರ್ಚಿಯಲ್ಲಿ ಕುಳ್ಳಿರಿಸಿದರು. ಪಿಳಿಪಿಳಿ ಕಣ್ಣು ರೆಪ್ಪೆ ಬಿಟ್ಟರು. ಮಾತುಗಳು ಮೂಡತೊಡಗಿದವು. ಅಸ್ಪಷ್ಟ ಮಾತುಗಳಿಗೆ ಅರ್ಥದ ಸಾಕ್ಷಾತ್ಕಾರ-'ಕನ್ನಡಿಗರಲ್ಲಿ ಅಭಿಮಾನ. ಪ್ರೀತಿ ಹೆಚ್ಚಾಗಲಿ. ಕನ್ನಡಕ್ಕಾಗಿ ಎಲ್ಲರೂ ಒಂದಾಗಲಿ. ಒಗ್ಗಟ್ಟಿರಲಿ. ಚೂರಿ ಈಚೆಗೆ ಬರದಿರಲಿ'.

ಅವರು ಹೇಳಿದ್ದು ನಾಲ್ಕೇ ಮಾತು. ಅಷ್ಟೇ ಧ್ವನಿಪೂರ್ಣ.

ಹೌದು, ಅವರು ಎಸ್.ಕೆ. ಕರೀಂಖಾನ್. ಕನ್ನಡದ ಮೊದಲ 'ಜಾನಪದಶ್ರೀ' ಪ್ರಶಸ್ತಿ ಪುರಸ್ಕೃತ ವಿದ್ವಾಂಸ. ಜನಪದ ಹಾಡುಗಳ ಗಾರುಡಿಗ. ಅವರಿಗೀಗ 95ರ ಹರಯ. ಇಂದು ಶ್ರೀನಿವಾಸ್‌ರಾವ್ ಮಂಗಳವೇಢೆ ಸ್ಮಾರಕ ಪ್ರತಿಷ್ಠಾನದ 'ಕನ್ನಡ ಸಿರಿ' ಪ್ರಶಸ್ತಿಯನ್ನು ಪ್ರತಿಷ್ಠಾನದ ಅಧ್ಯಕ್ಷ ಡಾ. ಸೂರ್ಯನಾಥ ಕಾಮತ್ ಮತ್ತು ಸದಸ್ಯ ಎಂ.ಎಚ್. ಕೌಜಲಗಿ ಅವರು ಕರೀಮಜ್ಜನಿಗೆ ಪ್ರದಾನ ಮಾಡಿದರು.

'ಇಂದು ದೀಪಾವಳಿ ಮತ್ತು ರಂಜಾನ್‌ನ ಸಂಭ್ರಮ ಜತೆ ಜತೆಗೆ ನಡೆಯುತ್ತಿದೆ. ಕರೀಂಖಾನ್ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಅಂತೆಯೇ ಕನ್ನಡದ ಏಕೀಕರಣದ ಮಹಾಂದೋಲನದಲ್ಲಿ ಪಾಲ್ಗೊಂಡಿದ್ದಾರೆ. ಅಂತಹ ಹಿರಿಯರಿಗೆ ಪ್ರಶಸ್ತಿಯ ಗೌರವ ಸಮರ್ಪಿಸಿದ್ದೇವೆ' ಎಂದು ಕಾಮತ್ ಹೇಳಿದರು.

'ಶ್ರೀನಿವಾಸ ರಾವ್ ಮಂಗಳವೇಢೆಯವರು ಉನ್ನತ ಹುದ್ದೆಯ ಅಭಿಲಾಷೆಯನ್ನು ಕಿತ್ತೊಗೆದು ಸ್ವಾತಂತ್ರ್ಯ ಚಳವಳಿಗೆ ಇಳಿದ ವೀರ. ಅವರು ಮೂರು ಬಾರಿ ಜೈಲು ಸೇರಿದರು. ಅದೇ ರೀತಿ ಕರ್ನಾಟಕದ ಏಕೀಕರಣಕ್ಕಾಗಿ ಅವರು ಬಾಗಲಕೋಟೆ ಬಿಟ್ಟು ಹುಬ್ಬಳ್ಳಿಗೆ ಬಂದರು. 'ಕನ್ನಡಿಗ' ದಿನಪತ್ರಿಕೆ ನಡೆಸಿದರು.

ಶಾಂತಕವಿಗಳು, 'ಉತ್ತರ ಕರ್ನಾಟಕದಲ್ಲಿ ಮಹಾರಾಷ್ಟ್ರದ ಕೀರ್ತಿ, ಮಹಾರಾಷ್ಟ್ರದ ಧರ್ತಿ' ಎಂದು ಹಾಡಿ ವ್ಯಸನ ಪಟ್ಟುಕೊಂಡಾಗ, ಸಗರಕವಿ 'ಎದ್ದರೆ ಕನ್ನಡ, ಕುಳಿತರೆ ಕನ್ನಡ ನುಡಿದರೆ ಕನ್ನಡವು...' ಎಂದು ಹಾಡಿಗೆ ಹಾಡಿನಲ್ಲೇ ಪ್ರತಿಕ್ರಿಯಿಸಿದರು. ಸಗರ ಕವಿಯ ಹಾಡನ್ನು ಪ್ರತಿನಿತ್ಯ 'ಕನ್ನಡಿಗ' ಪತ್ರಿಕೆಯ ಮೂಲಕ ಕನ್ನಡಿಗರ ಹೃನ್ಮನದಲ್ಲಿ ಮೂಡಿಸುವ ಕೆಲಸವನ್ನು ಮಂಗಳವೇಡೆ ಶ್ರೀನಿವಾಸ ರಾಯರು ಮಾಡಿದರು. ನಾಡು-ನುಡಿಗೆ ಸಮರ್ಪಿಸಿಕೊಂಡಿದ್ದ ಮಂಗಳವೇಡೆ ಅವರನ್ನು ಕನ್ನಡಿಗರು ಎಂದಿಗೂ ಮರೆಯಬಾರದು' ಎಂದು ಕಾಮತ್ ಹೇಳಿದರು.

ದೂರದ ದೇವಾಲಯದಲ್ಲೆಲ್ಲೋ ಕೇಳುತ್ತಿದ್ದ 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷ ಸಹಸ್ರಪಾತ್'-ಪುರುಷಸೂಕ್ತದ ಮಂತ್ರಪಠಣ. ಹಗಲಿನಲ್ಲೂ ದೀಪಾವಳಿ ಸುಡುಮದ್ದಿನ 'ದಡ್ ದಡ್ ದಡಣ'. ಆದರೆ ಕರೀಮಜ್ಜನ ಮನಸ್ಸು-ಮನೆ ತುಂಬಾ ಕನ್ನಡದ್ದೇ ವಾತಾವರಣ.

ಹಲಸೂರಿನಲ್ಲಿರುವ ಕರೀಂಖಾನ್ ಅವರ ಮನೆಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಂಗಳವೇಢೆಯವರ ಮಕ್ಕಳಾದ ರಾಘವೇಂದ್ರ ರಾವ್, ವೆಂಕಟಾದ್ರಿ ಭಾಗವಹಿಸಿದ್ದರು. ಹೈದರಾಬಾದ್‌ನ ಶ್ರೀಕಾಂತ್ ದೇಶಪಾಂಡೆ, ರಾಯಚೂರಿನ ಧ್ರುವನಾರಾಯಣ, ಕುಕನೂರಿನ ಅನಿರುದ್ಧ ದೇಸಾಯಿ ಮತ್ತಿತರರು ಪಾಲ್ಗೊಂಡಿದ್ದರು.

ಮಾಜಿ ಮೇಯರ್‌ಗಳಾದ ಅನಂತರಾಮನ್, ಜಿ.ನಾರಾಯಣ, ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ, ಹಾರ‍್ನಹಳ್ಳಿ ರಾಮಸ್ವಾಮಿ, ಶರಣಗೌಡ ಇನಾಂದಾರ, ಕೋ. ಚೆನ್ನಬಸಪ್ಪ, ಹಳವಂದಿ ಶಿವಮೂರ್ತಿ ಸ್ವಾಮೀಜಿ ಅವರಿಗೆ ಪ್ರತಿಷ್ಠಾನದ 'ಕನ್ನಡ ಸಿರಿ' ಪುರಸ್ಕಾರ ಸಂದಿದೆ.

ಬರಬಹುದೇ ಕರ್ನಾಟಕ ರತ್ನ: ಕರೀಂಖಾನ್ ಅವರಿಗೆ ಪ್ರಶಸ್ತಿಗಳಿಗಿಂತ ಅವರನ್ನು ನೆನಪಿಟ್ಟುಕೊಂಡು ಆದರಿಸುತ್ತಿರುವ, ಸನ್ಮಾನಿಸುತ್ತಿರುವ ಕನ್ನಡಿಗರ ಬಗ್ಗೆ ಹೆಚ್ಚಿನ ಪ್ರೀತಿ. ಅದಕ್ಕಾಗಿ ಅವರು ಕೃತಜ್ಞತೆ ಅರ್ಪಿಸುತ್ತಾರೆ. ಅವರ ಕುಟುಂಬದ ವರ್ಗಕ್ಕೆ ಇರುವ ಒಂದೇ ಒಂದು ಪುಟ್ಟ ಆಸೆ ಎಂದರೆ 'ಕರೀಂಖಾನ್ ಅವರಿಗೆ ಕರ್ನಾಟಕ ರತ್ನ ಬರಲಿ'. 'ನಮಗೆ ಆಸ್ತಿ-ಹಣ ಯಾವುದು ಬೇಡ. ಕರ್ನಾಟಕ ರತ್ನದ ಒಂದು ಗೌರವ ಸಿಕ್ಕರೆ ಎಲ್ಲವೂ ಸಿಕ್ಕ ಹಾಗೆ' ಎನ್ನುತ್ತಾರೆ ಕರೀಂಖಾನ್ ಅವರ ಆಪ್ತರು.

ಚಿತ್ರ: ಪುಟ -5

14-11-2004

[illegible]

[illegible] ನನ್ನ ಮನೆ ತುಂಬ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

Janapada Jangama is dead

DH News Service

Bangalore: Freedom fighter, Gandhian and folklorist S K Karim Khan breathed his last on Saturday morning (11.50 am), following a cardiac arrest, at the Bhagavan Mahaveer Jain Hospital. He was 98.

Karim Khan who was kept in the ICU, was on a ventilator for the last 10 days. He was suffering from lung infection and pneumonia, and was bedridden for over a year.

He was buried at 8 p.m. at the Ulsoor graveyard.

As a poet, writer, lyricist, novelist, playwright, orator and editor, a multifaceted Karim Khan went by many names that described him as 'Janapada Jangama', 'walking encyclopedia', 'incredible speaker' and more.

His contribution to the folk arts has been justly identified and his *Janapada Geethegalu* decorate the libraries in many academies. His role during the Independence, the Karnataka Unification, formation of the Bharat Seva Dal and as a strong campaigner of the Congress party, post Independence, gives a glimpse into the life of this bachelor who led a simple life.

Hindu philosophy

Born in 1905 in Sakleshpur, Hassan district, Karim Khan took to Hindu philosophy and started collecting folk literature at an early age. His father Rehman Khan had migrated from Kabul in Afghanistan and set up base in south India.

Having entered the freedom movement, he was imprisoned eight times. He then plunged into politics where his ability as an orator helped the Congress party build a rapport with the masses.

He was recently presented with the Kempe Gowda award that added to his plethora of awards — the Nadoja award presented by the Hampi University, Janapada Shri by the State, Hamsaratna Prashasthi and the G Sham Pa award.

He also received the State award for his dialogues for the film *'Swarna Gowri'* that won the National Award.

Apart from writing dialogues for more than 25 Kannada films, he also penned lyrics for several Kannada movies, particularly mythological films. Mr Khan also served as the Chairman of the Karnataka Janapada and Yakshagana Academy.

Mr Khan who had lived for more than 30 years at the Dwaraka Hotel on Bull Temple Road, Bangalore, was moved to his brother's house in Ulsoor after he broke his femur 10 years ago.

None fulfiled it

Successive governments assured him a house. But none of them fulfiled it. Mr S M Krishna, during his tenure as Chief Minister promised to gift a house in his personal capacity. He handed over the key of a house located in Banashankari II stage. But Mr Khan refused to accept the CM's personal gift.

Recently Home Minister M P Prakash in the Legislative Council had announced that the government would grant a house for Mr Khan. But that too did not materialise with the death Khan.

Governor T N Chaturvedi and Chief Minister H D Kumaraswamy.

2006

ಜಾನಪದ ಗಾರುಡಿಗ ಕರೀಂಖಾನ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನಪದ ಗಾರುಡಿಗ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಚಿತ್ರ ಸಾಹಿತಿ ಡಾ. ಎಸ್.ಕೆ. ಕರೀಂ ಖಾನ್ (98) ಶನಿವಾರ ಬೆಳಿಗ್ಗೆ ಇಲ್ಲಿ ಚಿರನಿದ್ರೆಗೆ ಜಾರಿದರು.

ಜೀವನದ ಸಂಜೆವರೆಗೂ ಏಕಾಂಗಿಯಾಗಿ ಬದುಕಿದ ಖಾನ್ ನಗರದ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಬೆಳಿಗ್ಗೆ 11.50ಕ್ಕೆ ಕೊನೆಯುಸಿರೆಳೆದರು.

ಶ್ವಾಸಕೋಶದ ಸೋಂಕಿನಿಂದ ಉಸಿರಾಟದ ತೊಂದರೆಗೆ ಒಳಗಾಗಿದ್ದ ಅವರು ಕಳೆದ ಮೂರು ತಿಂಗಳಿನಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಶನಿವಾರ ಬೆಳಿಗ್ಗೆ 11.25ರಲ್ಲಿ ಕರೀಂಖಾನ್ ಅವರಿಗೆ ಹೃದಯ ಬಡಿತ ಹಾಗೂ ರಕ್ತದೊತ್ತಡ ಕಡಿಮೆಯಾದ ಪರಿಣಾಮ ತಕ್ಷಣವೇ ವೈದ್ಯರು ಚಿಕಿತ್ಸೆ ನೀಡಲು ಮುಂದಾದರೂ ಫಲಕಾರಿಯಾಗಲಿಲ್ಲ. ಕರೀಂಖಾನ್ ಮೃತಪಟ್ಟಿರುವುದನ್ನು ಅವರನ್ನು ನೋಡಿಕೊಳ್ಳುತ್ತಿದ್ದ ಆಸ್ಪತ್ರೆ ವೈದ್ಯ ಡಾ. ಅಜಂ ದೃಢಪಡಿಸಿದರು.

ಕೆಲವು ವರ್ಷಗಳ ಹಿಂದೆ ಆಕಸ್ಮಿಕವಾಗಿ ಬಿದ್ದು ಮೂಳೆ ಮುರಿದುಕೊಂಡ ಖಾನ್, ನಂತರ ಚೇತರಿಸಿಕೊಳ್ಳಲೇ ಇಲ್ಲ. ಬಹಳ ವರ್ಷಗಳ ಹಿಂದಿನಿಂದ ತಲೆಯಲ್ಲಿ ರಕ್ತ ಹೆಪ್ಪುಗಟ್ಟುತ್ತಿತ್ತಲ್ಲದೆ, ಆಗಾಗ ಹೃದಯ ಬಡಿತ ಕ್ಷೀಣಿಸುವುದು ಮತ್ತು ಕಡಿಮೆ ರಕ್ತದೊತ್ತಡ ಸಮಸ್ಯೆಯಿಂದ ಈ ಹಿರಿಯ ಜೀವ ಬಳಲಿತ್ತು. ಈಚೆಗೆ ಶ್ವಾಸಕೋಶದ ತೊಂದರೆಯಿಂದ ಬಳಲುತ್ತಿದ್ದ ಅವರನ್ನು ಕಳೆದ ಮೇ 15ರಂದು ನಗರದ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಗುಣಮುಖರಾಗದ ಕಾರಣ, ವಸಂತನಗರದಲ್ಲಿರುವ ಜೈನ್ ಖಾಸಗಿ ಆಸ್ಪತ್ರೆಗೆ ಜೂನ್ 9ರಂದು ಸೇರಿಸಲಾಗಿತ್ತು.

ಹತ್ತು ದಿನಗಳಿಂದ ಅವರು ನ್ಯುಮೋನಿಯಾಕ್ಕೂ ಒಳಗಾಗಿದ್ದರು. ದೇಹದಲ್ಲಿ ಸೋಡಿಯಂ ಮತ್ತು ಪೊಟ್ಯಾಷಿಯಂ ಅಂಶ ಕಡಿಮೆ ಆಗಿತ್ತು ಎಂದು ಡಾ. ಅಜಂ 'ಪ್ರಜಾವಾಣಿ'ಗೆ ತಿಳಿಸಿದರು. ಕರೀಂಖಾನ್ ಅವರ ಮೃತದೇಹವನ್ನು ಹಳೇ ಮದ್ರಾಸ್ ರಸ್ತೆಯಲ್ಲಿರುವ ಅವರ ಸೋದರ ಎಸ್.ಕೆ. ಗಫಾರ್ ಖಾನ್ ಅವರ ನಿವಾಸದಲ್ಲಿ ಇರಿಸಲಾಗಿತ್ತು.

ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಮೇಯರ್ ಮಮ್ತಾಜ್ ಬೇಗಂ, ಕೇಂದ್ರ ಯೋಜನಾ ರಾಜ್ಯ ಸಚಿವ ಎಂ.ವಿ.ರಾಜಶೇಖರನ್, ಗೃಹ ಸಚಿವ ಎಂ.ಪಿ.ಪ್ರಕಾಶ್, ಕೊಳದ ಮಠದ ಸ್ವಾಮೀಜಿ ಮೊದಲಾದವರು ಮೃತರ ಅಂತಿಮ ದರ್ಶನ ಪಡೆದರು. ರಾತ್ರಿ 9ಗಂಟೆಗೆ ಹಲಸೂರಿನಲ್ಲಿರುವ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು. ಸಂಜೆ 5.15ರಲ್ಲಿ ರಾಜ್ಯ ಸರ್ಕಾರ ತನ್ನ ಗೌರವ ಸಲ್ಲಿಸಿತು.

ಸೂರು ಸಿಗಲೇ ಇಲ್ಲ: ಜಾನಪದ, ಸಂಗೀತ, ಸಾಹಿತ್ಯ ಕ್ಷೇತ್ರಗಳಲ್ಲಿ ಅನುಪಮ ಸಾಧನೆಗೈದ ಈ ಹಿರಿಯ ಜೀವ ಕೊನೆಯವರೆಗೂ ಸ್ವಂತ ಸೂರಿನಡಿ ಬದುಕಲು ಸಾಧ್ಯವಾಗಲೇ ಇಲ್ಲ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಮನೆಯ ಕೀಲಿಯನ್ನು ಕೊಡಲಾಗಿತ್ತು; ಆದರೆ ಮನೆ ಮಾತ್ರ ಕೈಗೆಟುಕಲೇ ಇಲ್ಲ.

ಚಿರಸ್ಥಾಯಿ: ಕರೀಂ ಖಾನ್ ಅವರ ಹೆಸರನ್ನು ಚಿರಸ್ಥಾಯಿ ಆಗಿ ಉಳಿಸಲು ಸರ್ಕಾರ ಒಂದು ವಾರದೊಳಗೆ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಗೃಹ ಸಚಿವ ಎಂ.ಪಿ.ಪ್ರಕಾಶ್ ತಿಳಿಸಿದರು. ಕರೀಂಖಾನ್ ಅವರ ಅಂತಿಮ ದರ್ಶನ ಪಡೆದ ನಂತರ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

▶ ಕರೀಂಖಾನ್ ವ್ಯಕ್ತಿಚಿತ್ರ : ಪುಟ 7 ನೋಡಿ

ಪ್ರಜಾವಾಣಿ 30-07-06

ಬೆಂಗಳೂರಿನಲ್ಲಿ ಶನಿವಾರ ಜಾನಪದ ವಿದ್ವಾಂಸ ಎಸ್.ಕೆ. ಕರೀಂಖಾನ್ ಅವರಿಗೆ ಶ್ರೀನಿವಾಸ್‌ರಾವ್ ಮಂಗಳವೇಢೆ ಸ್ಮಾರಕ ಪ್ರತಿಷ್ಠಾನದ 'ಕನ್ನಡ ಸಿರಿ' ಪ್ರಶಸ್ತಿಯನ್ನು ಪ್ರತಿಷ್ಠಾನದ ಅಧ್ಯಕ್ಷ ಡಾ. ಸೂರ್ಯನಾಥ ಕಾಮತ್ (ಬಲಬದಿ) ಮತ್ತು ಸದಸ್ಯ ಎಂ.ಎಚ್. ಕೌಜಲಗಿ ಪ್ರದಾನ ಮಾಡಿದರು. ಸದಸ್ಯರಾದ ಎಚ್.ಎಸ್. ಗೋಪಾಲರಾವ್ ಮತ್ತು ಮಂಗಳವೇಢೆ ಅವರ ಪುತ್ರ ರಾಘವೇಂದ್ರ ರಾವ್ ಅವರನ್ನೂ ಚಿತ್ರದಲ್ಲಿ ಕಾಣಬಹುದು.

14.11.2004

K Sunil Prasad

Mayor Mumtaz Begum presents the Kempe Gowda Award to 105-year-old freedom fighter and folklorist Karim Khan at Bowring Hospital on Friday. The government has agreed to bear the expenses arrising from his illness.

N BRIEF

S K Karim Khan

Karim Khan is dead

Gandhian, freedom fighter and folklorist S K Karim Khan died of cardiac arrest on Saturday morning at the Bhagawan Mahaveer Jain Hospital in Bangalore, DHNS reports. He was 98.

Khan was suffering from lung infection and pneumonia and was bedridden for over a year.

He was on a ventilator in the hospital's intensive care unit for the last ten days.

He was buried on Saturday night at a graveyard in Ulsoor.

See Page 5

ಬದುಕು. ಭರಪೂರ ತೊಂಬತ್ತೆಂಟು ವರ್ಷ

ಇಲ್ಲ. ಜಾನಪದಕ್ಕೆ ಮತ್ತು ಚಿತ್ರರಂಗಕ್ಕೆ
ಅವರು ಮಾಡಿದ ಕೆಲಸ ಅವರ ಜೀವನದ

ಆ'ನಿಕೇತನ' ಚೇತನ

ಸಂದೀಪ ನಾಯಕ

آئینے

یس کے کریم خان ۔ جنہیں دوستوں نے فراموش کر دیا

(از : ڈاکٹر محمد فخرالدین)

مسٹر کریم خان کو ملک کی آزادی سے چند دن قبل آزاد میدان چک منگلور میں گرفتار کیا گیا جہاں وہ ایک پرہجوم جلسۂ عام سے خطاب کر رہے تھے چک منگلور میں ہی ان کی ملاقات کے ٹی بھاشیم، ٹی سدلنگیا، ساہوکار چنیا، بنڈی گوڈا، شری چند سوریہ نارائن شٹی کانگریس سکریٹری مادھو راؤ، اے پی رام چند رراؤ، ایچ سدیا اور دوسروں سے ہوئی وہ بتاتے ہیں کہ اُن دنوں میں چک منگلور جیل بھری ہوئی تھی اور ابھی یہ سب جیل میں تھے کہ ملک کی آزادی کا اعلان ہو گیا اور بعد میں یہ سب رہا ہوئے،

مسٹر کریم خان نے ۵۷ تک سیاست میں سرگرم حصہ لیا اور اس سال کے عام انتخابات کے بعد انھوں نے سیاست سے ہمیشہ کے لئے سبکدوشی اختیار کر لی وہ جدوجہد آزادی کے دوران ریاست میں پہلی بار لوک ادب کو رواج دینے کے لئے مشہور رہیں وہ پیدل سفر کرتے اور لوک گیت اکٹھا کرتے تھے اور پھر بڑے جوش و خروش کے ساتھ جلسوں میں گاتے تھے مشہور کنڑی ادیب آ نا ۔ کرشنا راؤ ۔ اے این کرشنا راؤ نے اپنی کتاب "سنا نو نانے کنڈے" (۱۹۴۲ء) میں مسٹر کریم خان کا بڑے اچھے انداز میں تذکرہ کیا ہے

مسٹر کریم خان ایک کنڑی رسالہ کے مدیر بھی رہے اور کئی دوسرے اخبارات کے لئے لکھتے رہے ان کا ایک مضمون میسور یونیورسٹی کے رسالہ "پرابھراکرناٹک" (۴۲ء) میں شائع

ہوا ہے اور ان کا ایک مضمون "میانا سنکارا کراہلا" بی اے سال دوم کی کنڑی نصابی کتاب میں شامل ہے

جدوجہد آزادی سے اپنی لگن اور ادبی سرگرمیوں کے لئے کریم خان بے حد مقبول رہے اور اس وقت کے مہاراجہ میسور نے انہیں ایک بار اپنے محل میں مدعو کیا تھا ان کی کتابیں "نیوارا نہ را" اور "بلیدانی حسین" کنڑی ادب میں ایک شاہکار کی حیثیت رکھتی ہیں انھوں نے آزادی سے قبل دو سو لوک گیت لکھے ہیں۔ انھوں نے ملک کی آزادی کے بعد ابتدائی سیاست کے لئے خود کو ناموزوں خیال کر کے سیاست سے کنارہ کشی اختیار کی۔ برسر اقتدار آنے والوں نے تاریخی جدوجہد آزادی میں ان کے کردار کو تسلیم نہیں کیا کہ ایک مسلمان ایسا کردار ادا کر سکتا ہے ان کی بجائے تحریک آزادی کے مخالف لوگوں پر

نوازشوں کی برسات ہوئی بڑے افسوس اور تعجب کی بات یہ ہے کہ ان کے قریبی دوست جیسے مسٹر کے سی ریڈی (ریاست میسور کے پہلے وزیر اعلیٰ) کے ہنومنتیا اور ٹی سدلنگیا نے بھی وزیر بن جانے کے بعد انہیں فراموش کر دیا۔ دوستوں کے اس سلوک نے کریم خان کے جذبات کو ٹھیس پہنچائی، اور اس لئے انھوں نے ریاست کو ہمیشہ کے لئے خیرباد کہہ دیا۔

۱۹۵۶ء میں کریم خان نے کنڑی فلم انڈسٹری میں قدم رکھا۔ اس وقت کنڑی فلمیں صرف مدراس میں تیار ہوتی تھیں لہٰذا وہ بنگلور سے مدراس چلے گئے، اور ایک فلم کار کی حیثیت سے کام شروع کیا۔ لیکن کنڑی فلموں میں نام کمانے کے لئے انہیں پانچ سال جدوجہد کرنی پڑی، "گنگا گوری"، "ساتی سورانی" "بسٹیو لنگا ساکشی"، اور "سورنا گوری" وہ کامیاب فلمیں ہیں جن کی کہانی کریم خان نے لکھی تھی "سورنا گوری" کے لئے ۱۹۶۳ء میں انہیں ریاستی حکومت نے بہترین کہانی نویس کا انعام بھی دیا تمام بڑے کنڑی فلم سازوں سے ان کی خوب دوستی تھی اس وقت مشہور اداکار ڈاکٹر راج کمار ایک طالب علم تھے اور راج کمار نے کریم خان کے لکھے ہوئے کئی ایک ڈراموں اور چند فلموں میں بھی کام کیا ہے ایک مسلمان کا کسی کنڑی کہانی کے لئے ریاستی انعام جیتنا ان دنوں میں بڑی حیرت کی بات تھی اس انعام سے کریم خان کو نہ صرف نام اور شہرت حاصل ہوئی بلکہ ان کے دشمن بھی پیدا ہو گئے فلم انڈسٹری کے اندر سیاست نے انہیں بھی دل برداشتہ کر دیا اور وہ مدراس سے بنگلور واپس آ گئے مدراس میں ۵۶ سے ۶۶ تک دس سالہ

گذشتہ سے پیوستہ

تمام نے انہیں اپنا فلمی کیریر بنانے میں مدد دی.

اب تک مسٹر کریم خان نے کوئی ۵۰ فلموں کے لئے کہانی مکالمے اور گیت لکھے ہیں ان میں سے کوئی ایک درجن فلموں کی نمائش ہو چکی ہے ان کی حالیہ فلموں میں ایچ ایم کے مورتی کی "ڈو مہار شنا" اور "راجیشوری" شامل ہیں اور یہ دونوں کامیاب رہی ہیں، مسٹر کریم خان کہانی گیت مکالمے اور اسکرین پلے لکھنے کے علاوہ موسیقی سے بھی اچھی طرح واقف ہیں لیکن اب تک انھوں نے کسی فلم میں موسیقی دینے کی کوشش نہیں کی انھوں نے ایک سو سے زیادہ پرائیویٹ کیسٹس کے لئے گیت لکھے ہیں.

آنجہانی ڈی دیوراج ارس کی وزارت اعلیٰ کے دور میں حکومت نے مسٹر کریم خان کے لئے تاحیات ڈھائی سو روپے پنشن ۱۹۷۸-۷۹ء میں منظور کی، لیکن کریم خان نے اسے قبول کرنے سے انکار کر دیا۔ بعد میں گنڈو راؤ حکومت نے ان کے لئے ماہانہ پانچ سو روپے کا وظیفہ منظور کیا جو کنڑی ادب کے لئے ان کی خدمات کا ایک اعزاز تھا وہ کرناٹک جنا پدا اکیڈمی کے ایک رکن ہیں کنڑی فلم انڈسٹری کے بارے میں بات کرتے ہوئے مسٹر کریم خان کہا کہ جن لوگوں نے ۱۹۳۰ میں کنڑی فلم انڈسٹری کی تعمیر کے لئے سخت جدوجہد کی تھی آج وہی لوگ ایک وقت کے کھانے کے لئے جدوجہد کر رہے ہیں انھوں نے بتایا کہ کنڑی فلم انڈسٹری وہ مرغی ہے جو سونے کا انڈا دیتی ہے لہٰذا سب اس کے پیچھے پڑے ہوئے ہیں

مسٹر کریم خان نے خاموش زندگی اختیار کر رکھی ہے وہ اب بھی فلم انڈسٹری میں سرگرم صرف اس لئے ہیں کہ اپنی ضروریات کی تکمیل ہو سکے وہ بالکل مطمئن ہیں اور اپنے ضمیر کی آواز کے مطابق کام کرتے ہیں وہ اب تک کنوارے ہیں اور سادہ زندگی بسر کرتے ہیں ۶۷ سالہ عمر کے باوجود وہ کافی صحت مند، دل سے جوان، ذہنی طور پر بیدار گوناگوں خوبیوں اور اوصاف کے مالک ہیں اور روزانہ کئی میل پیدل چلتے ہیں وہ ایک اعلیٰ درجہ کے شاعر ایک بڑے مفکر شائستہ اور شعلہ نوا مقرر ہیں سب سے بڑھ کر وہ انسانیت نواز ہیں ان جیسی خصوصیات اور اوصاف کے کسی انسان کا ملنا آج مشکل ہی ہے.

٭ ٭ ٭ ٭

بے چارہ

از: چارہ گر

THE DAILY SALAR 1983



ಕರೀಂಖಾನ್‌ಗೆ ಜಾನಪದ ಭೀಷ್ಮ ಜೀಶಂಪ ಪ್ರಶಸ್ತಿ

ಗ್ರಾಮೀಣ ಕಲೆ ಸಾಹಿತ್ಯಕ್ಕೆ ಜೀವಮಾನವನ್ನೇ ಅರ್ಪಿಸಿಕೊಂಡ ಡಾ. ಜೀ.ಶಂ. ಪರಮಶಿವಯ್ಯ ಮಂಡ್ಯ ಜಿಲ್ಲೆ ನಾಗಮಂಗಲದ ಆದಿಚುಂಚನಗಿರಿಯ ತಪ್ಪಲಿನಲ್ಲಿರುವ ಅಂಚಿಲ ಜೀರಹಳ್ಳಿಯ ರೈತ ಕುಟುಂಬದಲ್ಲಿ ಹುಟ್ಟಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ಜಾನಪದ ವಿದ್ವಾಂಸರು.

ಬಾಲ್ಯದಲ್ಲಿಯೇ ಗ್ರಾಮೀಣ ಕಲೆ ಸಾಹಿತ್ಯದ ಬಗ್ಗೆ ಆಸಕ್ತಿ ಕುದುರಿಸಿಕೊಂಡ ಜೀಶಂಪ ಅವರು ಬಿ.ಎ. ಪದವಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದರು. ಗುಮಾಸ್ತರಾಗಿ ಕಾಲೇಜು ಶಿಕ್ಷಕರಾಗಿ, ಕುಲಪತಿಗಳ ಆಪ್ತ ಕಾರ್ಯದರ್ಶಿಗಳಾಗಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿ ದುಡಿದರು. ಜಾನಪದ ತಿಮಿಂಗಿಲ, ಜಾನಪದ ಭೀಷ್ಮ, ಜಾನಪದ ಜಂಪ ಇತ್ಯಾದಿ ಬಿರುದು ಪಡೆದವರು.

ಸೃಜನ ಸಾಹಿತಿಯಾಗಿ, ಜನಪದ ಸಂಗ್ರಹಕರಾಗಿ ಸಂಪಾದಕರಾಗಿ 85 ಕೃತಿಗಳನ್ನು ಪ್ರಕಟಿಸಿದ ಜೀಶಂಪ ವಿದ್ಯಾರ್ಥಿ ದಸೆಯಲ್ಲಿಯೇ '[illegible]' ಎಂಬ ಕವನ ಸಂಕಲನ ಪ್ರಕಟಿಸಿದರು.

ಬುನಾದಿ

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಭದ್ರವಾದ ಬುನಾದಿ ಹಾಕಿದ ಕೀರ್ತಿ ಡಾ. ದೇ. ಜವರೇಗೌಡರಿಗೆ, ಮೈಸೂರು ವಿಶ್ವವಿದ್ಯಾನಿಲಯಕ್ಕೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲಬೇಕು. 1967 ರಲ್ಲಿ ಕನ್ನಡ ಎಂ.ಎ. ತರಗತಿಯ ಪತ್ರದಲ್ಲಿ ಐಚ್ಛಿಕವಾಗಿ ಜಾನಪದ ಪತ್ರಿಕೆ ಸೇರಿಸಿದ್ದು, ಭಾರತದಲ್ಲಿ ಮೊಟ್ಟಮೊದಲ ಬಾರಿಗೆ 1974 ರಲ್ಲಿ ಪೂರ್ಣ ಪ್ರಮಾಣದಲ್ಲಿ ಜಾನಪದ ಎಂ.ಎ. ತರಗತಿಯನ್ನು ಪ್ರಾರಂಭಿಸಲಾಯಿತು. ಜಾನಪದ ಡಿಪ್ಲೊಮೊ ಜೊತೆಗೆ ಜಾನಪದ ಸಂಶೋಧನಾ ವಿಭಾಗದಲ್ಲಿ ಜೀಶಂಪ ಅವರ ಶ್ರದ್ಧೆ, ಕಾರ್ಯ ತತ್ಪರತೆ ಕಾಣಬಹುದಾಗಿದೆ.

ಜಿ.ಶಂ.ಪರಮಶಿವಯ್ಯ

ಕಥೆ, ಪ್ರಬಂಧ, ಕಾದಂಬರಿ, ಜೀವನ ಚಿತ್ರಗಳ ಜೊತೆಗೆ ಮಕ್ಕಳ ಪುಸ್ತಕ ರಚನೆಯಲ್ಲಿಯೂ ಕೈಯಾಡಿಸಿರುವ ಜೀಶಂಪ, ಕಲಾವಿದರ ಒಡನಾಟದಲ್ಲಿ ಮನೆ ಮಠವನ್ನೇ ಮರೆತವರು. ಕಂಸಾಳೆ, ಕಿನ್ನರಿ, ತಂಬೂರಿ ಹಿಡಿದವರ ಹಿಂದೆ ಬಿದ್ದವರು. ಅವರ ಸಾಹಿತ್ಯ ಸಂಗ್ರಹದ ಜೊತೆಗೆ ಕಲಾವಿದರ ಬದುಕು ಹಸನಾಗಲು ಪ್ರಯತ್ನಿಸಿದವರು.

ಡಾ. ಜೀಶಂಪ ಅವರ ಶಿಷ್ಯರು ಅಭಿಮಾನಿಗಳೂ ಜನ್ಮದಿನವಾದ ನವೆಂಬರ್ 12 ರಂದು ಪ್ರತಿವರ್ಷ ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ಮಹನೀಯರಿಗೆ 'ಜೀಶಂಪ ಜಾನಪದ ಪ್ರಶಸ್ತಿ' ನೀಡಲು ಮುಂದಾಗಿರುವುದು ಶ್ಲಾಘನೀಯ.

ನ. 12 ರಂದು ಕರೀಂಖಾನ್ ಅವರಿಗೆ ಪ್ರಶಸ್ತಿ ವಿತರಣೆ

'ಸ್ವಾತಂತ್ರ್ಯ ಹೋರಾಟಗಾರ, ಜಾನಪದ ಸಂಗ್ರಹಕ, ಹಾಡುಗಾರ 95 ವರ್ಷದ ಡಾ. ಎಸ್.ಕೆ. ಕರೀಂಖಾನ್ ಅವರಿಗೆ 'ಡಾ. ಜೀಶಂಪ ಜಾನಪದ ಪ್ರಶಸ್ತಿ' ನೀಡುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಕಥೆ, ಪ್ರಬಂಧ, ಕಾದಂಬರಿ, ಜೀವನ ಚಿತ್ರಗಳ ಜೊತೆಗೆ ಮಕ್ಕಳ ಪುಸ್ತಕ ರಚನೆಯಲ್ಲಿಯೂ ಕೈಯಾಡಿಸಿರುವ ಜೀಶಂಪ, ಕಲಾವಿದರ ಒಡನಾಟದಲ್ಲಿ ಮನೆ ಮಠವನ್ನೇ ಮರೆತವರು. ಕಂಸಾಳೆ, ಕಿನ್ನರಿ, ತಂಬೂರಿ ಹಿಡಿದವರ ಹಿಂದೆ ಬಿದ್ದವರು. ಅವರ ಸಾಹಿತ್ಯಸಂಗ್ರಹದ ಜೊತೆಗೆ ಕಲಾವಿದರ ಬದುಕು ಹಸನಾಗಲು ಪ್ರಯತ್ನಿಸಿದವರು.

ಮೂರನೆಯ ಅಫ್ಘಾನಿಸ್ತಾನದ ಯುದ್ಧದಲ್ಲಿ ಯೋಧರಾಗಿದ್ದ ಅಬ್ದುಲ್ ರೆಹಮಾನ್ ಖಾನ್ ಭಾರತಕ್ಕೆ ಬಂದರು. ಹಾಸನ ಜಿಲ್ಲೆ ಸಕಲೇಶಪುರದ ಪ್ರಕೃತಿಗೆ ಬೆರಗಾಗಿ ನೆಲೆ ನಿಂತರು. ಬಾಲ್ಯದಲ್ಲಿಯೇ ಕರೀಂಖಾನರು ಭಾರತೀಯತೆಯನ್ನು ಮೈಗೂಡಿಸಿಕೊಂಡರು ನಾರಾಯಣ ಶಾಸ್ತ್ರಿಗಳಿಂದ ಸಂಸ್ಕೃತ ಕಲಿತರು. ಉರ್ದು ಹಿಂದಿ ಇಂಗ್ಲಿಷ್ ಕನ್ನಡ ವಿದ್ವಾಂಸರಾದ ಇವರಿಗೆ ಬಾಣಭಟ್ಟನ ಕಾದಂಬರಿ, ವ್ಯಾಸ ವಾಲ್ಮೀಕಿಗಳ ಭಾರತ ರಾಮಾಯಣ ಬಹಳ ಪ್ರಿಯವಾಗಿದ್ದು ಸ್ವಾತಂತ್ರ್ಯ ಪೂರ್ವದಲ್ಲಿ

ಎಸ್.ಕೆ.ಕರೀಂಖಾನ್

ಜನಪದ ಲಾವಣಿ ರಚಿಸಿ ಜನರಿಗೆ ಸ್ವಾತಂತ್ರ್ಯದ ಮಹತ್ವ ತಿಳಿಸಿದರು.

1921 ರಲ್ಲಿ ನಡೆದ ಖಿಲಾಫತ್ ಚಳುವಳಿ ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿಸಿತು. ದೇಶಭಕ್ತಿ ಗೀತೆ ರಚಿಸಿ ಹಾಡಿದಾಗ ಜನ ಸಂತೆ ಸೇರುತ್ತಿದ್ದರು. ಬ್ರಿಟೀಷರ ಕೆಂಗಣ್ಣಿಗೆ ಬಿದ್ದ ಕರೀಂಖಾನರು 7 ಸಲ ಸೆರೆಮನೆ ಸೇರಿದರು. ನಂದಿಬೆಟ್ಟದಲ್ಲಿ ಒಂದು ತಿಂಗಳು ಗಾಂಧೀಜಿ ವಾಸ್ತವ್ಯ ಹೂಡಿದಾಗ ಅವರ ಸಹವಾಸ ಪ್ರೇರಣೆಯಿಂದ ಮತ್ತಷ್ಟು ಹುರುಪು ಬಂತು.

ರಾಷ್ಟ್ರ ಪ್ರಶಸ್ತಿ

ಶಾಸ್ತ್ರೀಯ ಸಂಗೀತವನ್ನು ಬಲ್ಲ ಜನಪದ ಸಾಹಿತ್ಯ ಸಂಗ್ರಹ ಮಾಡಿ ಪ್ರಕಟಿಸಿದ್ದ ಕರೀಂಖಾನರು ಚಿತ್ರ ಜಗತ್ತಿನಲ್ಲಿ ಪಾದ ಬೆಳೆಸಿದರು. 'ಸ್ವರ್ಣಗೌರಿ' ಚಿತ್ರಕ್ಕೆ ಸಾಹಿತ್ಯ ಸಂಭಾಷಣೆ ಗೀತೆ ರಚಿಸಿದರು. ಮೊದಲ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂತು.

ಕರೀಂಖಾನರಿಗೆ ಸರ್ಕಾರ ಮಾಸಿಕ 500 ರೂ. ಗೌರವ ಧನ ಮಂಜೂರು ಮಾಡಿತು. ಗುಲಬರ್ಗಾ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿತು. ಸರ್ಕಾರ ರಾಜ್ಯ ಜಾನಪದ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ಮಾಡಿತು.

ಡಾ. ಎಸ್.ಕೆ. ಕರೀಂಖಾನ್ ಅವರಿಗೆ ಡಾ. ಜೀಶಂಪ ಜಾನಪದ ಪ್ರಶಸ್ತಿ ಬಂದಿರುವುದು ಕನ್ನಡಿಗರಿಗೆಲ್ಲ ಹರ್ಷದಾಯಕ ಸಂಗತಿ ಆಗಿದೆ.

– ಡಾ. ಅರ್ಜುನಪುರಿ ಅಪ್ಪಾಜಿಗೌಡ
ಮದ್ದೂರು

10th Nov 1995 PRAJAVANI

ವರ್ಷದ ಉತ್ತಮನಾಯಕ ವಿಷ್ಣುವರ್ಧನ್‌ರಿಗೆ ರವಿಚಂದ್ರನ್ ಫಲಕ ನೀಡುತ್ತಿದ್ದಾರೆ.

ಅಪೂರ್ವ ಸೇನೆಗಾಗಿ ಕೆ.ಕೆ. ಮೂರ್ತಿ ಪ್ರಶಸ್ತಿ ಪಡೆಯುತ್ತಿರುವ ನಟ ಜಯಶ್ರೀ



ವರ್ಷದ ಉತ್ತಮ ನಾಯಕಿ ಸುಧಾರಾಣಿಯನ್ನು ಬಿ. ಸರೋಜಾದೇವಿ ಗೌರವಿಸುತ್ತಿದ್ದಾರೆ.

ಚಿತ್ರಗಳು: ವಿಶ್ವನಾಥ್ ಸುವರ್ಣ

... ವರದಿ ನೀಡುವಂತೆ ಏಡ್ಸ್ ಸಂಸ್ಥೆಗೆ ಸೂಚಿಸಲಾಗಿದೆ ಎಂದರು.

ತಿಳಿಸಿದರು.

ಇಹದಿಂದ ಮುಕ್ತಿ

(ಒಂದನೇ ಪುಟದಿಂದ)

ಕರೀಂಖಾನ್ ಅವರ ನಿಧನದಿಂದ ರಾಜ್ಯದಲ್ಲಿ ಗಾಂಧಿ ವಾದದ ಕೊಂಡಿಯೊಂದು ಕಳಚಿ ಬಿದ್ದಂತಾಗಿದೆಯಲ್ಲದೆ, ಜಾನಪದ ಲೋಕಕ್ಕೆ ತುಂಬಲಾರದ ನಷ್ಟ ಉಂಟಾಗಿದೆ.

ಇತರರ ಬಗ್ಗೆ ಕೆಡುಕಿನ ಯೋಚನೆ ಮಾಡದಿರುವುದೇ ತನ್ನ ಆರೋಗ್ಯದ ರಹಸ್ಯವೆಂಬುದನ್ನು ಬಲವಾಗಿ ನಂಬಿದ್ದ ಮತ್ತು ಅದನ್ನು ಪ್ರತಿಪಾದಿಸುತ್ತಿದ್ದ ಕರೀಂಖಾನ್‌ರಿಗೆ ದೀರ್ಘಕಾಲೀನ ಅನಾರೋಗ್ಯ ಬೆನ್ನು ಬಿದ್ದು ಕಾಡಿದ್ದು ವಿಷಾದವೆ ಆಗಿದೆ.

ಶರೀಫಜ್ಜರ ನಂತರದ ಶರೀಫಜ್ಜ ಎಂದೇ ಖ್ಯಾತಿಯಾಗಿದ್ದ ಕರೀಂಖಾನ್ ಅವರ ಹುಟ್ಟೂರು ಹಾಸನ ಜಿಲ್ಲೆಯ ಸಕಲೇಶಪುರ. ತಂದೆ ಅಫ್ಘಾನಿಸ್ತಾನದ ಕಾಬೂಲ್‌ನ ವೀರ ಯೋಧ ಅಬ್ದುರ್ರೆಹಮಾನ್ ಖಾನ್, ತಾಯಿ ಅರಬ್ಬಿ ಮೂಲದ ಜೈನಬಿ. ಅವರು ಓದಿದ್ದು ಕೇವಲ ಎಂಟನೆಯ ಇಯತ್ತಿನವರೆಗಾದರೂ ಅವರು ಗಳಿಸಿದ ಅನುಭವ ಪಾಂಡಿತ್ಯ ಅಪಾರ.

ಸಮತವಾದಿ ಆಚಂಗಿ ನಾರಾಯಣ ಶಾಸ್ತ್ರಿಗಳ ಶಿಷ್ಯನಾಗಿ ಕನ್ನಡ, ಸಂಸ್ಕೃತಿ ಪಾಂಡಿತ್ಯವನ್ನು ಸಿದ್ಧಿಸಿಕೊಂಡ ಕರೀಂಖಾನ್, ಕಾಲ್ನಡಿಗೆಯಲ್ಲಿಯೇ ಹಳ್ಳಿ ಹಳ್ಳಿ ತಿರುಗಿ 200ಕ್ಕೂ ಹೆಚ್ಚು ಜಾನಪದ ಗೀತೆಗಳನ್ನು ಸಂಗ್ರಹಿಸುವ ಮೂಲಕ ಜಾನಪದ ಲೋಕದಲ್ಲಿ ತಮ್ಮ ಹೆಸರು ದಾಖಲಿಸಿದರು.

ಅಲ್ಲಿಂದ ಆರಂಭವಾದ ಜಾನಪದ ಸಾಹಿತ್ಯದ ಕೃಷಿ ಅವರ ಹೆಸರನ್ನು ಮೇರು ಎತ್ತರಕ್ಕೆ ಕೊಂಡೊಯ್ಯಿತು. ಈ ನಡುವೆ ಅವರು ಜೀವನೋಪಾಯಕ್ಕಾಗಿ ಎಂಭತ್ತು ಕಂಪನಿ ನಾಟಕಗಳನ್ನು ಬರೆದರು. ಈ ಪೈಕಿ ಅವರ "ಮಧುಮೋಹನ" ನಾಟಕ 300ಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡಿತ್ತು.

ನಾಟಕಗಳು ಮಾತ್ರವಲ್ಲದೆ, ಬಲಿದಾನಿ ಹುಸೇನ್, ಮಾತೃಶಾಪ, ಸಮೀರ, ಮುಹಿರ ಕಾದಂಬರಿಗಳು ಹಾಗೂ ನೀವಾರ ನೀಹಾರ ಕಥಾ ಸಂಕಲನಗಳು ಪ್ರಕಟಗೊಂಡವು. ಅಲ್ಲದೆ ಜಾನಪದ ಅಕಾಡೆಮಿ ಅಧ್ಯಕ್ಷರಾಗಿದ್ದಾಗ 8000 ಕಿಲೋ ಮೀಟರ್ ದೂರ ಬಸ್ಸಿನಲ್ಲಿಯೇ ಪ್ರಯಾಣ ನಡೆಸಿ ಜಾನಪದ ಪ್ರದರ್ಶಕ ಕಲೆಗಳ ಕುರಿತ ಅತ್ಯಮೂಲ್ಯ 240 ಗಂಟೆಗಳ ವಿಡಿಯೋ ಚಿತ್ರೀಕರಣ ನಡೆಸಿ ವಿಶೇಷ ಗಿರಿಜನ ಪ್ರಶಸ್ತಿ ಸ್ಥಾಪಿಸಿ ಗಿರಿಜನ ಅಧ್ಯಯನಕ್ಕೆ ಒತ್ತುಕೊಟ್ಟರು.

ಇಂತಹ ಅತ್ಯಮೂಲ್ಯ ಸಾಧನೆಗಾಗಿ ಕರೀಂಖಾನ್‌ರವರಿಗೆ ಹಲವು ಪ್ರಶಸ್ತಿಗಳು ಹುಡುಕಿಕೊಂಡು ಬಂದವು. 1997ರಲ್ಲಿ ನಾಡೋಜ, 1995ರಲ್ಲಿ ಜಾನಪದಶ್ರೀ, 1989ರಲ್ಲಿ ಗುಲ್ಬರ್ಗಾ ವಿ.ವಿ.ಯ ಗೌರವ ಡಾಕ್ಟರೇಟ್, 1995ರಲ್ಲಿ ಜೀಶಂಪ ಪ್ರಶಸ್ತಿ, 2000ರಲ್ಲಿ ಟಿ. ಉದಯಶಂಕರ್ ಚಿತ್ರ ಸಾಹಿತ್ಯ ಪ್ರಶಸ್ತಿ, 1989ರಲ್ಲಿ ಅಕಾಡೆಮಿಗಳ ಅಭಿನಂದನೆ, 2004ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ಹಂಸರತ್ನ, ಜಾನಪದ ಜಂಗಮ ಹಾಗೂ ಇತ್ತೀಚೆಗೆ ಸಂದ ಚಲನಚಿತ್ರ ರಂಗದ ಜೀವಮಾನ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಜಾನಪದ ಕೇಸರಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

ಧಾರವಾಡದ ಲೋಕಮಿತ್ರ, ಉಡುಪಿಯ ಅಂತರಂಗ ಪತ್ರಿಕೆಗಳ ಸಂಪಾದಕರು ಆಗಿ ಸೇವೆ ಸಲ್ಲಿಸಿದ್ದ ಕರೀಂಖಾನ್ ರಾಯಲ್ ಇಂಡಿಯನ್ ನೇವಿಯಲ್ಲಿ ನೌಕರಿ ಮಾಡಿದ್ದಾರೆ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿ ಅಖಂಡ ಕರ್ನಾಟಕವನ್ನೇ ತನ್ನ ಮನೆಯೆಂದು ಭಾವಿಸಿದ್ದ ಕರೀಂಖಾನ್ ಅವರಿಗೆ ಇಳಿ ವಯಸ್ಸಿನಲ್ಲೂ ಇರಲಿಕ್ಕೆ ಸ್ವಂತ ಮನೆ ಇಲ್ಲದಿರುವುದು ದುರಂತವೇ ಸರಿ.

ಅನುಕ್ಷಣ ಬದುಕುಳಿಕ್ಕೆ ಹೋರಾಟ ನಡೆಸಿದ ಕರೀಂಖಾನ್ ಅವರು ಸ್ವಾತಂತ್ರ್ಯಯೋಧರ ಪಿಂಚಣಿಯನ್ನು ಪಡೆಯಲಿಲ್ಲ. ಒಡನಾಡಿಗಳಾಗಿದ್ದ ಅನೇಕ ಘಟಾನುಘಟಿಗಳೆಲ್ಲಾ ಅಧಿಕಾರದಲ್ಲಿದ್ದಾಗ ಅವರ ಬಳಿ ಸುಳಿಯದೆ ಆತ್ಮಗೌರವದಿಂದ ದೂರ ಉಳಿದ ಕರೀಂಖಾನ್ ಮಾದರಿ ಬದುಕು ನಡೆಸಿದವರು.

ಅಜ್ಞಾತ ಕವಿಗಳ ನೂರಾರು ಹಾಡುಗಳು ಕಳೆದು ಹೋದಾವೆಂದು ಸಂಗ್ರಹಿಸಿ ಪ್ರಕಟಿಸಿದರು. ಅದಕ್ಕಾಗಿ ಅವರ ಸಾಹಸ ಅಷ್ಟಿಷ್ಟಲ್ಲ. ದುರಂತವೆಂದರೆ ಅವರದೇ ನೂರಾರು ಹಸ್ತಪ್ರತಿಗಳು ಪ್ರಕಟವಾಗಲೇ ಇಲ್ಲ. ಅವರ ಅಲೆಮಾರಿ ಬದುಕಿನಲ್ಲಿ ಅವು ಕೊನೆಗೆ ಕಳೆದು ಹೋದವು.

ಎಲ್ಲರೂ ದುಡಿಸಿಕೊಂಡು ದೂರ ವಿಟ್ಟನಂತರ ಗಾಂಧಿಬಜಾರಿನ ದ್ವಾರಕ ಹೋಟೆಲ್‌ನಲ್ಲಿ 28 ವರ್ಷಗಳ ಏಕಾಂತ ಜೀವನ ನಡೆಸಿದ ಧಣವರಿಯದ ಈ ಬ್ರಹ್ಮಚಾರಿಯನ್ನು ಇಲ್ಲಿಯವರೆಗಿನ ಸರ್ಕಾರಗಳು ಸರಿಯಾಗಿ ನಡೆಸಿಕೊಳ್ಳಲೇ ಇಲ್ಲ. ಇಂತಹ ಜಾನಪದ ಗಾರುಡಿಗನ ನಿಧನದಿಂದ ಕನ್ನಡ ಸಾಂಸ್ಕೃತಿಕ ಲೋಕ ಬಡವಾಗಿದೆ.

ರಾಜಕೀಯ

(ಒಂದನೇ ಪುಟದಿಂದ)

ಬಾಲಕೃಷ್ಣಗೌಡ ಹಾಗೂ ಅವರ ಪತ್ನಿ ಕವಿತಾ ಮತ್ತು ರಮೇಶ್ ಅವರು ನಿರ್ದೇಶಕರಾಗಿರುವ ಬಿಎಸ್‌ಕೆ ಕಂಪನಿ 150 ಕೋಟಿ ರೂ. ಮೌಲ್ಯದ ಆದಿರನ್ನು ಅಕ್ರಮವಾಗಿ ಸಂಗ್ರಹಿಸಿದೆ ಎಂದು ಕಾಂಗ್ರೆಸ್ ನಾಯಕರು ಮಾಡಿರುವ ಆರೋಪವನ್ನು ಯಶಸ್ವಿಯಾಗಿ ಕುಮಾರಸ್ವಾಮಿ ಎದುರಿಸುತ್ತಾರೆ ಎಂಬ ವಿಶ್ವಾಸವನ್ನು ಬಿಜೆಪಿ ನಾಯಕರು ವ್ಯಕ್ತಪಡಿಸಿದ್ದಾರೆ.

ವಿಕಿಶಿ ಮಾಡಿರುವ ಆರೋಪದಿಂದ ಕ್ರೋಧಗೊಂಡಿರುವ ಮಾಜಿ ಪ್ರಧಾನಿ ದೇವೇಗೌಡ ಅವರು ತಮ್ಮ ಮಕ್ಕಳನ್ನು ಕರೆಸಿ "ಇದೇನಿದು"? ಎಂದು ಗುಡುಗಿದ್ದಾರೆಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

ಸಾರ್ವಜನಿಕರಿಗೆ ಕ್ರಯದ ಬಗ್ಗೆ ತಿಳುವಳಿಕೆ

ನನ್ನ ಕಕ್ಷಿದಾರರಾದ ಒಂದನೇ ಶ್ರೀ ಆರ್. ಶಿವಪ್ರಕಾಶ್ ಬಿನ್ ರಾಘವನ್, ಎರಡನೇ ಶ್ರೀ ಬಿ.ಕೆ. ಚಂದ್ರಶೇಖರ್ ಬಿನ್ ಲೇಟ್ ಬಿ.ಕೆ. ಗೋಪಾಲಕೃಷ್ಣ, ಮೂರನೇ ಶ್ರೀಮತಿ ಪಾರ್ವತಿ ಬಿನ್ ಮಹದೇವಯ್ಯ ಎಲ್ಲರ ವಾಸ: ನಂ. 50, ಕನಕಪುರ ಮುಖ್ಯರಸ್ತೆ, ಸುಪ್ರಜನಗರ, ಗಣಪತಿಪುರ, ಬೆಂಗಳೂರು-78 ಇವರುಗಳು ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಬನಹಳ್ಳಿ ಗ್ರಾಮದ ಸರ್ವೆ ನಂಬರು 29:3ರಲ್ಲಿರುವ 1 ಎಕರೆ 13 ಗುಂಟೆ ಜಮೀನನ್ನು ಕೊಂಡುಕೊಳ್ಳಲು ಬಿ.ಆರ್. ಪ್ರಸನ್ನಯ್ಯನವರ ಮಗ ಬಿ.ಪಿ. ಸುಬ್ಬಣ್ಣನವರೊಡನೆ ಕ್ರಯದ ಒಪ್ಪಂದ ಮಾಡಿಕೊಂಡಿರುತ್ತಾರೆ ಸದರಿ ಜಮೀನು ಬಿ.ಪಿ. ಸುಬ್ಬಣ್ಣನವರಿಗೆ ಸೇರಿದ್ದಾಗಿದ್ದು, ಯಾರಾದರೂ ಈ ಜಮೀನಿನ ಮೂಲ ಪತ್ರದಲ್ಲಿ ವಿವಾದಗಳಿದ್ದಲ್ಲಿ ದಾಖಲೆ ಸಮೇತ ನನ್ನ ಕಕ್ಷಿದಾರರನ್ನಾಗಲೀ ಅಥವಾ ಈ ಕೆಳಗೆ ಕಾಣಿಸಿರುವ ನನ್ನನ್ನಾಗಲೀ ಕಂಡು ವಿಷದೀಕರಿಸಬಹುದು. ಇಲ್ಲದಿದ್ದಲ್ಲಿ ಇದರ ಬಗ್ಗೆ ಯಾವುದೇ ತಂಟೆ ತಕರಾರುಗಳು ಇರುವುದಿಲ್ಲವೆಂದು ಭಾವಿಸಿ ಕ್ರಯಪತ್ರ ನೊಂದಾವಣೆ ಮಾಡಲಾಗುತ್ತದೆ

ಸಹಿ/- ಹೆಚ್.ಎಸ್. ರೇಣುಕಪ್ರಸಾದ್
ವಕೀಲರು ಮತ್ತು ನೋಟರಿ
ನಂ. 64, 1ನೇ ಮುಖ್ಯರಸ್ತೆ, ಲೋಯರ್ ಪ್ಯಾಲೇಸ್ ಆರ್ಚರ್ಡ್, ಬೆಂಗಳೂರು-3.
ದೂರವಾಣಿ- 23344611.

TeamLease
TeamLease Services Pvt. Ltd.
is hiring for the following position for a leading consumer durable company:
Sales Canvassers (50 nos.)
PUC / ITI (Ref & AC) / Diploma / Graduate with minimum six months experience in door-to-door selling.
Freshers can also attend.
Walk-in interview on
29th and 31st July 2006
between 10 am & 5 pm at
TeamLease Services Pvt. Ltd.,
#85, 4th Floor, "Sheriff House"
Richmond Road,
Bangalore - 560 025.
Tel: 66635101-5
Godrej SMARTCARE
Services for a better living

the name and style of "ADARSHA RHYTHM". Inspite of my legal notice dated 22.05.2006 cancelling such General Power of Attorney, if any, I am hereby informing having withdrawn such General Power of Attorney. The General Public are hereby warned not to deal with my aforesaid property on such representation. Inspite of this, if anybody deals with my property on such representation, they will be doing so at their own cost and risk.

Sd/ M.C. Sathyanarayana Gowda, Door No.59, First Floor, Sunkenahalli Main Road, Bull Temple Road, Hanumanthanagar, Bangalore-19.
Ph: Res: 26612756, Mob: 9845369664

ಕರ್ನಾಟಕ ರಾಜ್ಯ ಮೇಲ್ಮನವಿ ನ್ಯಾಯಾಧಿಕರಣ ಎಂ. ಎಸ್. ಬಿಲ್ಡಿಂಗ್, ಬೆಂಗಳೂರು, ಮೇಲ್ಮನವಿ ಸಂಖ್ಯೆ : 762/2005 (ಕಂದಾಯ)

ಶ್ರೀ ನಾಗರಾಜಪ್ಪ, ಕರೇಕಲ್ಲಹಳ್ಳಿ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು... ಮೇಲ್ಮನವಿದಾರರು
-ವಿರುದ್ಧ - ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ ಮತ್ತು ಇತರರು ... ಪ್ರತಿವಾದಿಗಳು, 2ನೇ ಪ್ರತಿವಾದಿಗೆ - ಶ್ರೀ ಹನುಮಂತರಾವ್ ಬಿನ್ ಜೋಡಿದಾರ್ ರಾಮರಾವ್, ಬೈಲಾಂಜನೇಯ ದೇವಸ್ಥಾನದ ಹತ್ತಿರ, ತುಮಕೂರು.
ಸೂಚನೆ: ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇಲ್ಮನವಿದಾರರು ತಿಳಿಯಪಡಿಸುವುದುದೇನೆಂದರೆ, ನಿಮ್ಮಗಳ ವಿರುದ್ಧ ಮೇಲ್ಕಂಡ ನ್ಯಾಯಾಧಿಕರಣದ ಮುಂದೆ ಮೇಲ್ಮನವಿ ಸಲ್ಲಿಸಲಾಗಿದ್ದು ಅದು ದಿನಾಂಕ: 02 08-2006ರಂದು ವಿಚಾರಣೆಗೆಂದು ಕಾದಿರಿಸಲಾಗಿದೆ. ಆದ ಕಾರಣ 2ನೇ ಪ್ರತಿವಾದಿಯಾದ ನೀವು ಸರ್ವೆ ನಂ. 1 (ಗೌಡನಗುಂಟೆ ಗ್ರಾಮ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲೂಕು)ಗೆ ಸಂಬಂಧಪಟ್ಟಂತೆ ದಾಖಲೆಗಳೊಂದಿಗೆ ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗುವುದು.
ಇಲ್ಲದಿದ್ದ ಪಕ್ಷದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಏಕಪಕ್ಷೀಯ / ಸೂಕ್ತ ಆದೇಶ ನೀಡಲಾಗುವುದು.
ನ್ಯಾಯಾಧಿಕರಣದ ಆದೇಶ ಮತ್ತು ಮುದ್ರೆಯೊಂದಿಗೆ ಈ ದಿನ 26ರಂದು ನೀಡಲಾಯಿತು.
ನ್ಯಾಯಾಲಯದ ಅಪ್ಪಣೆ ಮೇರೆಗೆ, ಸಹಾಯಕ ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು.
ಕೆ. ದೊಡ್ಡೇಗೌಡ, ಬಿ.ಎ., ಎಲ್.ಎಲ್.ಬಿ, ವಕೀಲರು, ನಂ. 5, 3ನೇ ಅಡ್ಡರಸ್ತೆ, ಕಿಲಾರಿ ರಸ್ತೆ ಬೆಂಗಳೂರು-53.

ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ವಿಭಾಗ) ದೊಡ್ಡಬಳ್ಳಾಪುರ ಮೂಲ ದಾವೆ ನಂ. 114/02

ವಾದಿಗಳು - 1. ಶ್ರೀ ಕೆ. ರಾಜಣ್ಣ, ಬಿನ್ ಎಂ. ಕೆಂಪಯ್ಯ, 48 ವರ್ಷಗಳು, 2. ಶ್ರೀ ಕೆ. ರಾಜಗೋಪಾಲ್, ಬಿನ್ ಎಂ. ಕೆಂಪಯ್ಯ, 37 ವರ್ಷಗಳು ವಾಸ, ಮಳೆಕೋಟೆ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು.
-ವಿರುದ್ಧ- ಪ್ರತಿವಾದಿಗಳು : ಕೆ. ಶಂಕರ್ ರಾವ್ ಮತ್ತು ಇತರರು. ಇವರಿಗೆ, ಪ್ರತಿವಾದಿ ನಂ. 7) ಶ್ರೀ ಕೆ. ಸುಬ್ರಮಣ್ಯಂ ನಾಯ್ಡು ಬಿನ್ ಲೇಟ್ ಕೆ. ಪಾಪನಾಯ್ಡು, 60 ವರ್ಷಗಳು, ವಾಸ ನಂ. 1578, ಹೆಚ್. ಕೆ. ಮೇಯಿನ್ ರೋಡ್, 4ನೇ ಬ್ಲಾಕ್, ಜಯನಗರ, ಬೆಂಗಳೂರು

ನೋಟೀಸ್

ಮೇಲ್ಕಂಡ ದಾವೆಯಲ್ಲಿ ವಾದಿಗಳು ನಿಮ್ಮನ್ನು ಪ್ರತಿವಾದಿಯನ್ನಾಗಿ ಸೇರಿಸಬೇಕು ಎಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು ಅದರ ವಿಚಾರಣೆಯನ್ನು ದಿನಾಂಕ 30-8-2006ರಂದು ಬೆಳಿಗ್ಗೆ 11 ಗಂಟೆಗೆ ನಿಗದಿಪಡಿಸಲಾಗಿದೆ. ಆದುದರಿಂದ ತಾವು ಸದರಿ ದಿನಾಂಕದಂದು ಮೇಲ್ಕಂಡ ನ್ಯಾಯಾಲಯದಲ್ಲಿ ನೀವು ಖುದ್ದಾಗಿ ಆಗಲಿ ಅಥವಾ ನಿಮ್ಮಿಂದ ಪೂರ್ಣ ಮಾಹಿತಿಯನ್ನು ಪಡೆದ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ತಕರಾರು ಏನಾದು ಇದ್ದರೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.
ದಿನಾಂಕ 28-7-2006ರಂದು ನನ್ನ ಪದನಾಮೆ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, (ಹಿರಿಯ ವಿಭಾಗ), ದೊಡ್ಡಬಳ್ಳಾಪುರ.
ವಾದಿಪರ ವಕೀಲರು
ಶ್ರೀ ಪಿ. ಶಂಕರಪ್ಪ, ವಕೀಲರು, 4ನೇ ವಾರ್ಡ್, ದೊಡ್ಡಬಳ್ಳಾಪುರ. ತಾ|| 25-7-06

PUBLIC NOTICE

It is brought to the Notice of general public that my client's Smt. Jayalakshmamma W/o Late ... Krishnappa and K. Majundhar S/o Late S.A Krishnappa both ... IInd Main, IInd Cross ... Layout, Bangalore-76 ... into a Sale agreement with Mr. A. Xavier S/o V.S. Anthony with ... the Schedule Property ... to the knowledge ... some miscreants have ... nature's and are represe... order to sell the Schedule Property ... client's have entered int... ment only with Mr. A. X... have not entered into any ... ment with any one else nor executed any document's like G.P.A, Affidavit's, Declaration etc; in favour of any one other than Mr. A. Xavier.

The general public are hereby cautioned not to transact with the said persons, If any person deal/ transact with said persons they will be doing on their own risk & cost & my client's will not be responsible in any manner & whatsoever.

SCHEDULE

All that piece and parcel ... property bearing Site No. 65, Katha No 21/1. Situated at Chinnaiahnapalya ... Division No. 55, of Bangalore ... Corporation, Bangalore. Measuring East to West, 54' ft and North to South 40' ft and bounded on:
East by: Site No. 64
West by: Private Property
North by: Road
South by: Private Property

Sd/- (N. Krupakar)
Advocate, No. 85/3, Next to press, mec engineering, Someshwara Layout, Near Someshwara Temple, Bilekahalli, B.G. Road, Bangalore-560 076. Mob: 9845339928

ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ವಿಭಾಗ) ದೊಡ್ಡಬಳ್ಳಾಪುರ ಮೂಲ ದಾವೆ ನಂ. 129/1999

ವಾದಿಗಳು – 1. ಶ್ರೀ ಹೊನ್ನಗಂಗಯ್ಯ ಬಿನ್ ಹೊನ್ನಪ್ಪ, 70 ವರ್ಷಗಳು, ವಾಸ, ದೊಡ್ಡಹೆಜ್ಜಾಜಿ ಗ್ರಾಮ, ದೊಡ್ಡಬೆಳವಂಗಳ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು
ವಿರುದ್ಧ ಪ್ರತಿವಾದಿಗಳು – ಶ್ರೀ ಹೊನ್ನಪ್ಪ ... ವಾರಸುದಾರರು ಮತ್ತು ಇತರು. ಇವರಿಗೆ ಪ್ರತಿವಾದಿ ನಂ. 1 (ಎಬಿ) ಶ್ರೀ ಆರ್. ಸೋಮಶೇಖರಯ್ಯ ಬಿನ್ ಲೇಟ್ ರುದ್ರಯ್ಯ 28 ವರ್ಷಗಳು ವಾಸ, ನಿಡುವಂದ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು. 1 (ಎಡಿ) ಶ್ರೀಮತಿ ಮಂಗಳ ಬಿನ್ ಲೇಟ್ ..., 31 ವರ್ಷಗಳು, ವಾಸ ಲಕ್ಷ್ಮೀದೇವಿನಗರ, ..., ಬೆಂಗಳೂರು–26

ನೋಟೀಸ್

ಮೇಲ್ಕಂಡ ದಾವೆಯಲ್ಲಿ ವಾದಿಗಳು ಪ್ರತಿವಾದಿಗಳ ವಿರುದ್ಧ ದಾವೆ ಹೂಡಿದ್ದು ಸದರಿ ದಾವೆಯಲ್ಲಿ ಒಂದನೇ ಪ್ರತಿವಾದಿಯು ವಾಸವಾಗಿದ್ದ ಶ್ರೀ ... ಮೃತಿಯಾಗಿದ್ದು ಮೇಲೇ ಹೆಸರಿಸಿದ ನೀವು ಅವರ ವಾರಸುದಾರರು ಮತ್ತು ನಿಮ್ಮನ್ನು ವಾರಸುದಾರರನ್ನಾಗಿ ಸೇರಿಸಬೇಕು ಎಂದು ವಾದಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು ಅದರ ವಿಚಾರಣೆಯನ್ನು ದಿನಾಂಕ 8-9-2006ರಂದು ಬೆಳಿಗ್ಗೆ 11 ಗಂಟೆಗೆ ನಿಗದಿಪಡಿಸಲಾಗಿದೆ. ಆದುದರಿಂದ ತಾವು ಸದರಿ ದಿನಾಂಕದಂದು ಮೇಲ್ಕಂಡ ನ್ಯಾಯಾಲಯದಲ್ಲಿ ನೀವು ಖುದ್ದಾಗಿ ಆಗಲಿ ಅಥವಾ ನಿಮ್ಮಿಂದ ಪೂರ್ಣ ಮಾಹಿತಿಯನ್ನು ಪಡೆದ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ತಕರಾರು ಏನಾದರು ಇದ್ದರೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.
ದಿನಾಂಕ 27-7-2006ರಂದು ನನ್ನ ಪದನಾಮೆ ಮತ್ತು ಮೊಹರಿನೊಂದಿಗೆ ನೀಡಲಾಗಿದ
ನ್ಯಾಯಾಲಯದ ಆದೇಶದ ಮೇರೆಗೆ
ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ವಿಭಾಗ), ದೊಡ್ಡಬಳ್ಳಾಪುರ.
ವಾದಿಪರ ವಕೀಲರು, ಶ್ರೀ ಪಿ. ಶಂಕರಪ್ಪ, ವಕೀಲರು, 4ನೇ ವಾರ್ಡ್, ದೊಡ್ಡಬಳ್ಳಾಪುರ. ತಾ|| 25-7-06

... ರೈಲುಗಳು ಮೈಸೂರಿಗೆ ಆಗಮಿಸಲಿಲ್ಲ.

ಜಾನಪದ ಗಾರುಡಿಗ ಕರೀಂಖಾನ್ ಬದುಕು

‘ಇದು ಬೊಂಬೆಯಾಟವಯ್ಯಾ...’

ಉ.ಮ.ಮಹೇಶ್

ಪ್ರಜಾವಾಣಿ ವಾರ್ತೆ



ನಾಲ್ಕು ದಿನಗಳಿಂದ ಆಸ್ಪತ್ರೆಯಲ್ಲಿರುವ 'ಜಾನಪದ ಗಾರುಡಿಗ' ಎಸ್.ಕೆ. ಕರೀಂ ಖಾನ್ ಅವರಿಗೆ ಇಹದ ಅರಿವಿಲ್ಲ. ರಾಜ್ಯ ಸರ್ಕಾರ ಕೊಡುತ್ತೇನೆಂದು ಭರವಸೆ ನೀಡಿದ್ದ ಮನೆ ಇನ್ನೂ ಸಿಕ್ಕಿಲ್ಲ. ಮನೆ ಮಾತು ಒತ್ತಟ್ಟಿಗಿರಲಿ. ಅವರನ್ನು ನೋಡಿ ಕೊಳ್ಳಲು ನಿಯೋಜಿಸಿದ್ದ ನೌಕರನಿಗೆ 14 ತಿಂಗಳಿಂದ ವೇತನವೂ ಬಿಡುಗಡೆಯಾಗಿಲ್ಲ.

ಬೆಂಗಳೂರು: ಜೀವನದ ಸಂಜೆಯಲ್ಲಿರುವ ಆ ಅಜ್ಜನಿಗೆ ಈಗ ಇಹದ ಅರಿವಿಲ್ಲ. ನಾಲ್ಕು ಗೋಡೆಗಳ ನಡುವೆ ಮಲಗಿರುವ ಅವರು ಆಗೀಗ ಪ್ರಯಾಸದಿಂದ ಉಸಿರೆಳೆಯುತ್ತಾರೆ. ಒಂದು ವರ್ಷದಿಂದ ಹಾಸಿಗೆಯಲ್ಲಿಯೇ ಎಲ್ಲವೂ.

ಆ ಅಜ್ಜನ ಹೆಸರು ಎಸ್.ಕೆ. ಕರೀಂಖಾನ್. ಜಾನಪದ ಗಾರುಡಿಗ. ಚಿತ್ರ ಸಾಹಿತಿ, ಸ್ವಾತಂತ್ರ್ಯ ಹೋರಾಟಗಾರ. ರಾಷ್ಟ್ರಪ್ರಶಸ್ತಿ ಗಳಿಸಿಕೊಟ್ಟ 'ನಟವರ ಗಂಗಾಧರ...' ಸೇರಿದಂತೆ ಅನೇಕ ಜನಪ್ರಿಯ ಗೀತೆಗಳಿಗೆ ಸಾಹಿತ್ಯ ನೀಡಿದ್ದಾರೆ.

ಒಂದೆರಡು ದಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಬಳಿಕ, ಈಗ ಕಳೆದ ನಾಲ್ಕು ದಿನಗಳಿಂದ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಂಬಂಧಿಗಳಿಗೆ ವೈದರು ತಿಳಿಸಿದ ಪ್ರಕಾರ, 'ಮೆದುಳಿನಲ್ಲಿ ಏನೋ ಸಮಸ್ಯೆ ಕಾಣಿಸಿದೆ. ಅವರನ್ನು ಈಗ ನೋಡಿಕೊಳ್ಳುತ್ತಿರುವ ಸಂಬಂಧಿಕರಾದ ರಿಯಾನಾ ಅಖ್ತರ್, ಮುನೀರ್ ಅಹ್ಮದ್, ತನ್ವೀರ್ ಅವರ ಪ್ರಕಾರ, ಬಾಹ್ಯ ಪ್ರಪಂಚದ ಯಾವ ಬೆಳವಣಿಗೆಗಳು ಕರೀಂ ಖಾನ್ ಅವರ ಅರಿವಿಗೆ ಬರುತ್ತಿಲ್ಲ.

ಮನೆ ಸಿಕ್ತಾ ?: ಕರೀಂಖಾನ್ ಹೆಸರು ಕೇಳಿದಾಕ್ಷಣ ಕೇಳಿ ಬರುವ ಪ್ರಶ್ನೆ 'ಸರ್ಕಾರ ಭರವಸೆ ನೀಡಿತ್ತಲ್ಲಾ? ಆ ಪ್ರಕಾರ ಅವರಿಗೆ ಮನೆ ಸಿಕ್ತಾ?'.

ಈ ಪ್ರಶ್ನೆಗೆ ಉತ್ತರ 'ಇಲ್ಲ'. ಮನೆ ಇರಲಿ, ಕರೀಂ ಖಾನ್‌ರನ್ನು ನೋಡಿಕೊಳ್ಳಲು ಸರ್ಕಾರವೇ ನೇಮಿಸಿದ್ದ ವ್ಯಕ್ತಿ ಕಳೆದ ಹಲವು ತಿಂಗಳಿಂದ ಪತ್ತೆ ಇಲ್ಲ. ಕಾರಣ, ಆತನಿಗಾಗಿ ನಿಗದಿ ಪಡಿಸಿದ್ದ ಮಾಸಿಕ 750 ರೂಪಾಯಿ ವೇತನ 14 ತಿಂಗಳಿನಿಂದ ಬಿಡುಗಡೆಯಾಗಿಲ್ಲ.

'ಜಾನಪದ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದ, ಅವಕಾಶವಿದ್ದರೂ ಅಧಿಕಾರ, ಸಂಪತ್ತು ತಿರಸ್ಕರಿಸಿದ ಅವರಿಗೆ ಸರ್ಕಾರ ಹೀಗೇ ಅಪಮಾನಿಸುವುದು ಸರಿಯೇ' ಎಂಬುದು ಈಗ ನೋಡಿಕೊಳ್ಳುತ್ತಿರುವ, ಕರೀಂಖಾನ್‌ರ ಸಹೋದರ ಗಫಾರ್‌ಖಾನ್ ಅವರ ಮಗಳು ರಿಯಾನಾ ಪ್ರಶ್ನೆ.

'ಖಾನ್‌ರನ್ನು ನೋಡಿಕೊಳ್ಳಲು ನೇಮಿಸಿದ್ದ ನೌಕರನಿಗೆ ವೇತನ ಬಿಡುಗಡೆ ಆಗಿದೆಯಾ, ಅವರನ್ನು ಸರಿಯಾಗಿ ನೋಡಿ ಕೊಳ್ಳಲಾಗುತ್ತಿದೆಯಾ? ಎಂದು ತಿಳಿಯುವ ಆಸಕ್ತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ಇದ್ದಂತಿಲ್ಲ' ಎನ್ನುತ್ತಾರೆ.

'ಮನೆ ಕೊಡಿ ಎಂದು ನಾವು (ಸಂಬಂಧಿಕರು) ಕೋರಿಲ್ಲ. ಆದರೆ, ಕರೀಂಖಾನ್‌ಗೆ ಮನೆ ಬೇಕಿಲ್ಲ. ಅವರ ಸಂಬಂಧಿಕರಿಗೆ ಬೇಕಾಗಿದೆ ಎಂದು ಹಿಂದಿನ ಸಚಿವರೊಬ್ಬರು ಹೇಳಿದ್ದರು' ಎಂದು ಬೇಸರದಿಂದ ನೆನಪಿಸಿಕೊಳ್ಳುತ್ತಾರೆ.

'ಅವರಿಗೆ ಯಾವ ಸಂಬಂಧಿಕರು ಕೇಳಿದ್ದರು? ಕರೀಂಖಾನ್ ಅವಿವಾಹಿತರಾಗಿದ್ದು, ಬಹಳ ವರ್ಷ ದ್ವಾರಕಾ ಹೋಟೆಲ್‌ನಲ್ಲಿ ವಾಸವಿದ್ದರು. ಒಮ್ಮೆ ಬಿದ್ದು ಕಾಲಿಗೆ ಪೆಟ್ಟಾದ ಬಳಿಕ ನಮ್ಮ ತಂದೆ (ಗಫಾರ್ ಖಾನ್) ಅವರ ಹಲಸೂರಿನ ಮನೆಯಲ್ಲಿ ವಾಸವಿದ್ದರು. ಗಫಾರ್‌ಖಾನ್ ಎರಡೂವರೆ ವರ್ಷದ ಹಿಂದೆ ತೀರಿಕೊಂಡರು. ತೀರಿಹೋದ ಎರಡು ತಿಂಗಳ ಬಳಿಕ ಆ ಸಚಿವರು ಸಂಬಂಧಿಕರಿಗೆ ಮನೆ ಬೇಕಾಗಿದೆ ಎಂದು ಹೇಳಿಕೆ ನೀಡಿದರು' ಎಂದು ರಿಯಾನಾ ಬೇಸರ ವ್ಯಕ್ತಪಡಿಸುತ್ತಾರೆ.

'ಸ್ವಾತಂತ್ರ್ಯಕ್ಕಾಗಿ ಬಯಸಿದ್ದರೆ ಇವರು ಯಾವ ಸ್ಥಾನವಾದರೂ ಗಳಿಸಬಹುದಿತ್ತು. ಎರಡು ಬಾರಿ ಎಂಎಲ್‌ಸಿ ಆಗುವ ಅವಕಾಶವೂ ಸಿಕ್ಕಿತ್ತು. ಅದನ್ನು ತಿರಸ್ಕರಿಸಿ ನಾಡು-ನುಡಿಗೆ ಬದುಕು ಮೀಸಲಿಟ್ಟರು. ಇವರನ್ನು ಸರ್ಕಾರ ಹೀಗೆ ನಡೆಸಿಕೊಳ್ಳಬಹುದಾ?' ಎಂಬುದು ಮೊಮ್ಮಗ (ರಿಯಾನಾ ಅಖ್ತರ್ ಪುತ್ರ) ಎಂಜಿನಿಯರ್ ಆಗಿರುವ ತನ್ವೀರ್ ಪ್ರಶ್ನೆ.

ಭರವಸೆ ನೀಡಿದ್ದಂತೆ ಸರ್ಕಾರ ಮನೆಯ ಕೀ ಅನ್ನೂ ನೀಡಿತ್ತಲ್ಲ? ಎಂದು ಪ್ರಶ್ನಿಸಿದರೆ, 'ಸಮಾರಂಭದಲ್ಲಿ ಹಾಗೇ ಪ್ರಕಟಿಸಿದ್ದು ನಿಜ. ಅಲ್ಲೆಲ್ಲೋ ಬನಶಂಕರಿಯಲ್ಲಿ ಭೋಗ್ಯಕ್ಕೆ ಮನೆ ಮಾಡಿದ್ದರಂತೆ. ಆ ಮನೆಯನ್ನು ಕರೀಂ ಖಾನ್ ಅಥವಾ ಕುಟುಂಬದ ಸದಸ್ಯರಾದ ನಾವ್ಯಾರೂ ಈವರೆಗೂ ನೋಡಿಲ್ಲ' ಎಂದು ತನ್ವೀರ್ ಸ್ಪಷ್ಟಪಡಿಸುತ್ತಾರೆ.

ಕರೀಂಖಾನ್ ಅವರು ಬದುಕಿನ ಸಂಜೆಯಲ್ಲಿ ಇರುವ ಈ ಹೊತ್ತಿನಲ್ಲಿ ಸರ್ಕಾರ ಭರವಸೆ ನೀಡಿದ ಮನೆ ಸಿಗುತ್ತದೆ ಎಂಬ ಭರವಸೆಯೂ ಮನೆ ಮಂದಿಗೆ ಇಲ್ಲ. ಬದಲಾಗಿ ಬೇಸರವಿದೆ.

5ನೇ ಪುಟ ನೋಡಿ

ಚಿತ್ರ: ಕೆ ಜಿ ಸೋಮಶೇಖರ್

ಡಾ. ಎಸ್ ಕೆ ಕರೀಂಖಾನ್

ಜಾನಪದಕ್ಕೆ ಕನ್ನಡದಲ್ಲಿ ಪರ್ಯಾಯ ಹೆಸರಾಗಿರುವ ಕರೀಂಖಾನ್ ಅವರಿಗೆ ಈಗ ತೊಂಬತ್ತೈದರ ಪ್ರಾಯ. ಖಾನ್ ಅವರ ಹಿರಿಯರು ಭಾರತದವರಲ್ಲ. ಅಫ್ಘಾನಿಸ್ತಾನ್ ಮೂಲದವರು. ತಂದೆ ಅಬ್ದುಲ್ ರೆಹಮಾನ್ ಖಾನ್ ವೃತ್ತಿಯಲ್ಲಿ ಯೋಧ. ಭಾರತಕ್ಕೆ ವಲಸೆ ಬಂದ ರೆಹಮಾನ್ ಖಾನ್ ನೆಲಸಿದ್ದು ಹಾಸನದ ಸಕಲೇಶಪುರದಲ್ಲಿ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡ ಕರೀಂಖಾನ್ ಬೆಳೆದದ್ದು ಹಿರಿಯಣ್ಣನ ಆಶ್ರಯದಲ್ಲಿ.

ಎಂಟನೆಯ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ ಕರೀಂಖಾನ್, ಅಚ್ಚಂಗಿ ನಾರಾಯಣ ಶಾಸ್ತ್ರೀಗಳ ಪರಮ ಶಿಷ್ಯ. ಕನ್ನಡ-ಸಂಸ್ಕೃತ ಅಧ್ಯಯನ ಮಾಡಿ ಪಡೆದದ್ದು 'ಹಿಂದೂ'ಗಳನ್ನು ಮೀರಿಸುವ ಪಾಂಡಿತ್ಯ. ಎಲ್ಲಕ್ಕಿಂತ ಹೆಚ್ಚಾಗಿ ಮೈಗೂಡಿಸಿಕೊಂಡದ್ದು ದೇಶಾಭಿಮಾನ. ಫಲವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯ ಪಾಲು. ಜನರನ್ನು ಎಚ್ಚರಿಸುವ ಸಲುವಾಗಿ ಹಳ್ಳಿ ಹಳ್ಳಿಗಳಲ್ಲೂ ತಿರುಗಾಟ ಜೊತೆಯಲ್ಲಿ 'ಜಾನಪದ ಗೀತೆ'ಗಳನ್ನು ಸಂಗ್ರಹಿಸುವ ಹವ್ಯಾಸ. ಮಧುರ ಕಂಠ ದೈವದತ್ತವಾಗಿ ಬಂದ ವರ. ಜಾನಪದ ಗೀತೆ, ದೇಶಭಕ್ತಿ ಗೀತೆ ಹಾಡಿ ಜನರನ್ನು ಮೋಡಿ ಮಾಡುವ ಪರಿ ಬೇರೆ.

ಸ್ವಾತಂತ್ರ್ಯ ಹೋರಾಟ ಧುರೀಣರಾದ ಕೆ ಟಿ ಭಾಷ್ಯಂ, ಟಿ ಸುಬ್ರಹ್ಮಣ್ಯಂ, ಎ ಜಿ ರಾಮಚಂದ್ರರಾವ್, ಟಿ ಸಿದ್ದಲಿಂಗಯ್ಯ, ಮಾಧವರಾವ್ ಮುಂತಾದ ಹಿರಿಯರ ಒಡನಾಟದಲ್ಲಿ ಖಾನ್ ಜೈಲುಶಿಕ್ಷೆ ಅನುಭವಿಸಿದ್ದು ಏಳುಬಾರಿ. ಚಳವಳಿಯಲ್ಲಿ ಭಾಗವಹಿಸಿದ್ದ ನೆಪವೊಡ್ಡಿ ಬ್ರಿಟಿಷ್ ಅಧಿಕಾರಿಯೊಬ್ಬ ಖಾನ್ ಅವರ ಅಣ್ಣ ನಡೆಸುತ್ತಿದ್ದ ಜವಳಿ ಅಂಗಡಿ ಲೈಸನ್ಸ್ ರದ್ದುಪಡಿಸಿದ್ದ. ತನ್ನಿಂದ ಮನೆಯವರಿಗೆ ತೊಂದರೆಯಾಗಬಾರದೆಂದು ನಿಶ್ಚಯಿಸಿದ ಖಾನ್, ಅಲ್ಲಿಂದ ಮುಂದೆ ಒಡಹುಟ್ಟಿದವರಿಂದ ದೂರ ಸರಿದರು.

ಉಡುಪಿಯಲ್ಲಿ ಪ್ರಕಟವಾಗುತ್ತಿದ್ದ ಫಣಿಯಾಡಿ ಅವರ 'ಅಂತರಂಗ'ದ ಮೂಲಕ ಪತ್ರಿಕಾಲೋಕ ಪ್ರವೇಶಿಸಿದ ಖಾನ್, ಧಾರವಾಡದ 'ಲೋಕಮಿತ್ರ' ಪತ್ರಿಕೆಯ ಸಂಪಾದಕರಾಗಿ ಕೆಲಕಾಲ ಕಾರ್ಯ ನಿರ್ವಹಣೆ. ಅವರ ಮುಂದಿನ ಕ್ಯಾಂಪ್ ಸುಬ್ಬಯ್ಯನಾಯ್ಡು ಅವರ ನಾಟಕ ಕಂಪನಿಯಲ್ಲಿ. 'ನಿರ್ದೋಷಿ' ನಾಟಕದೊಂದಿಗೆ ಹಲವಾರು ನಾಟಕಗಳ ಸಂಭಾಷಣೆ ರಚನೆ. ಕೆಲವು ಸಮಯದ ಬಳಿಕ ಮತ್ತೆ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆಗೆ ಸೇರ್ಪಡೆ. ಜೈಲಿನಲ್ಲಿದ್ದಾಗಲೇ 'ಕಾಂಗ್ರೆಸ್ ಸೇವಾದಳ', 'ಭಾರತೀಯ ಸೇವಾದಳ' ಸಂಘಟನಾ ಕಾರ್ಯದಲ್ಲಿ ಮುಖ್ಯ. ನಡುನಡುವೆ 'ಜಾನಪದ ಗೀತೆ' ಸಂಗ್ರಹ—ಪ್ರಕಟಣೆ.

ಸ್ವಾತಂತ್ರ್ಯ ಬಂದ ಮೇಲೆ 'ಕರ್ನಾಟಕ ಏಕೀಕರಣ ಚಳವಳಿ'ಯಲ್ಲೂ ಖಾನ್ ಅವರದು ಪ್ರಮುಖ ಪಾತ್ರ. ನಮ್ಮವರ ಆಡಳಿತದಲ್ಲೂ ಮತ್ತೆ ಜೈಲುವಾಸ! ನಾಡು-ನುಡಿ ಏಳಿಗೆಗಾಗಿ ಬದುಕಿನುದ್ದಕ್ಕೂ ಹೋರಾಡುತ್ತ ಬಂದ ಖಾನ್ ಹೋರಾಟಕ್ಕೆ ಮಂಗಳ ಹಾಡುವ ಹೊತ್ತಿಗೆ ವಯಸ್ಸು ಐವತ್ತು ದಾಟಿತ್ತು. ಸಂಸಾರಿಯಾಗುವ ಕಾಲ ಮೀರಿತ್ತು.

ಜೀವನ ನಿರ್ವಹಣೆ ಕಷ್ಟದ ದಿನಗಳಲ್ಲಿ ಅವರನ್ನು ಸೆಳೆದದ್ದು ಸಿನಿಮಾ ರಂಗ. ಅದಕ್ಕಾಗಿ ಮದರಾಸಿನತ್ತ ಪ್ರಯಾಣ. 'ಭಕ್ತ ಕನಕದಾಸ'ದ ಚಿತ್ರಕಥೆ, ಸಂಭಾಷಣೆ ರಚನೆಯಲ್ಲಿ ವೈ ಆರ್ ಸ್ವಾಮಿ ಜೊತೆ ಸಹಭಾಗಿ. ವೆಂಕಟರಾಜು ಜೊತೆಗೂಡಿ ಸಂಗೀತ ನಿರ್ದೇಶನದಲ್ಲೂ ಮಹತ್ವದ ಪಾತ್ರ. 'ಸ್ವರ್ಣಗೌರಿ' ಖಾನ್‌ರಿಗೆ ಕೀರ್ತಿ ತಂದ ಚಿತ್ರ. ಸಾಹಿತ್ಯ-ಗೀತೆ-ಸಂಭಾಷಣೆ ರಚಿಸಿದ ಈ ಚಿತ್ರ ಅವರಿಗೆ ಪ್ರಶಸ್ತಿ-ಗೌರವ ತಂದಿತು. ('ನಟವರ ಗಂಗಾಧರ', 'ಬಾರೇ ನೀ ಚೆಲುವೆ' -ಈ ಹಾಡುಗಳು ನಿತ್ಯ ನೂತನ). ಸಿನಿಮಾ ರಂಗದ ವ್ಯವಹಾರಗಳಿಗೆ ಬೇಸತ್ತು ಹತ್ತು ವರುಷದ ಬಳಿಕ ಬೆಂಗಳೂರಿಗೆ ಮರು ಪ್ರಯಾಣ. ಆದರೂ ಬಿಡಿಸಿಕೊಳ್ಳಲಾಗದ ಸಿನಿಮಾದ ನಂಟು. ಸಂಭಾಷಣೆ- ಗೀತೆ ಬರೆಸಿಕೊಂಡರೂ ಸಂಭಾವನೆ ನೀಡದವರೆಷ್ಟೋ ಮಂದಿ. ಸಂಗ್ರಹಿಸಿದ್ದ ಜಾನಪದ ಗೀತೆಗಳನ್ನು ಖಾನ್ ಪ್ರಕಟಣೆಗೆಂದು ಕೊಟ್ಟಲ್ಲಿ, ತಮ್ಮ ಹೆಸರಿನಲ್ಲಿ ಪ್ರಕಟಿಸಿಕೊಂಡವರು ಇನ್ನೆಷ್ಟೋ ಮಂದಿ. 'ಯಾರು ಹಿತವರು?', 'ಪತಿತ ಪಾವನೆ', '499 ಸೂಪರ್ ನೋವಾ' ಖಾನ್ ಕಾರ್ಯ ನಿರ್ವಹಿಸಿದ ಕೆಲವು ಚಿತ್ರಗಳು.

ಮುಖ್ಯಮಂತ್ರಿ ಗುಂಡೂರಾವ್, ಖಾನ್ ಅವರಿಗೆ ಮಾಸಾಶನ ದೊರೆಯುವಂತೆ ಮಾಡಿದರು. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ-ಯಾಗಿದ್ದಾಗ ಖಾನರನ್ನು ಜಾನಪದ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿದರು. 'ತಾಮ್ರಪತ್ರ,' ಮತ್ತಿತರ ದಾಖಲೆ ನೀಡದ ಕಾರಣ, ಸ್ವಾತಂತ್ರ್ಯ ಯೋಧರಿಗೆ ದೊರೆಯಬಹುದಾಗಿದ್ದ 'ಗೌರವ ಧನ' ಖಾನ್ ಅವರಿಗೆ ದಕ್ಕಲಿಲ್ಲ. ದಾಖಲೆಗಳನ್ನು ಒದಗಿಸಲು ಅಡ್ಡಿಯಾದದ್ದು ಅವರ ಸ್ವಾಭಿಮಾನ. 'ದೇಹಿ' ಪದ ಅರಿಯದ ಜಾಯಮಾನ.

ಕರ್ನಾಟಕ ಸರ್ಕಾರ ಖಾನ್ ಅವರಿಗೆ 'ಜಾನಪದ ಶ್ರೀ' ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಗುಲ್ಬರ್ಗಾ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಅಪಘಾತಕ್ಕೆ ಒಳಗಾಗಿ 'ವಾಕರ್' ಸಹಾಯದಿಂದ ಕುಂಟುತ್ತಾ ಸಾಗುವ ಖಾನ್‌ರಿಗೆ ಸರ್ಕಾರ ನೀಡುತ್ತಿರುವ ಮಾಸಾಶನ ಸಾವಿರದೈನೂರು ರೂ ಮಾತ್ರ ಜೀವನಾಧಾರ. ಬೆಂಗಳೂರಿನಲ್ಲಿರುವ ಸಹೋದರ ಗಫಾರ್ ಖಾನ್ ಮನೆಯಲ್ಲಿ ಈಗ ಅವರ ವಾಸ. ಆಸ್ತಿ-ಮನೆಯಿಲ್ಲದ, ನಾಡು-ನುಡಿಗಾಗಿ ಬದುಕನ್ನೇ ಸಮರ್ಪಿಸಿದ ಈ ಹಿರಿಯರಿಗೆ ಈಗ 'ಸ್ವಂತ ಮನೆಯೊಂದಿದ್ದಿದ್ದರೆ' ಎಂಬುದು ಇಳಿಗಾಲದ ಬಯಕೆ. ಸರ್ಕಾರ ಖಾನ್‌ರಿಗೆ ಒಂದು ಮನೆ ನೀಡಿದರೆ ಸಹಾಯ ಮಾತ್ರವಲ್ಲ, ಸಾರ್ಥಕವೂ ಹೌದು ಎಂಬುದು ಅವರ ಅಭಿಮಾನಿಗಳ ಅನಿಸಿಕೆ, ಬಹು ವರ್ಷಗಳ ನಿರೀಕ್ಷೆ. ರಾಜ್ಯ ಸರ್ಕಾರ ಆ ಕಾರ್ಯ ಮಾಡಿದಲ್ಲಿ ಸಂಭ್ರಮದಿಂದ ಆಚರಿಸುತ್ತಿರುವ 'ಸ್ವಾತಂತ್ರ್ಯ ಸುವರ್ಣಮಹೋತ್ಸವ' ಹೆಚ್ಚು ಅರ್ಥಪೂರ್ಣವೂ ಆದೀತು.

-ಶಶಾಂಕ

ಎಸ್ ಕೆ ಕರೀಂಖಾನ್ ಹಸ್ತಾಕ್ಷರ ಮತ್ತು ಸಹಿ



ಕರೀಂಖಾನ್

ಇತ್ತೀಚೆಗೆ ನಿಧನರಾದ ಕರೀಂಖಾನ್ ಅವರು ಕನ್ನಡ ಚಿತ್ರರಂಗಕ್ಕೆ ನೀಡಿದ ನಾದಮಾಧುರ್ಯದ ಹಾಡುಗಳ ಮೆಲುಕು....

ಕರೀಂಖಾನ್ ಎಂಬ ಭಾವೈಕ್ಯ ನಿಧಿ

ನಟವರ ಗಂಗಾಧರಾ.. ಉಮಾಶಂಕರಾ.. ಈ ಲೀಲಾ.. ವಿನೋದಾ.. ವಿಹಾರಾ..
ಜನನ ಮರಣವೊಂದು ಚದುರಂಗವಾಗಿ.. ಜನರೇ ಕಾಯಾಗಿ..

ಎಂ. ಬಾಲಮುರಳಿ ಕೃಷ್ಣ ಅವರ ಸುಶ್ರಾವ್ಯ ಕಂಠಸಿರಿಯ ಈ ಹಾಡಿಗೆ ಮನಸೋಲದವರು ಯಾರಿದ್ದಾರೆ? ಕೇಳುತ್ತಿದ್ದರೆ ಮತ್ತೆ ಮತ್ತೆ ಕೇಳಬೇಕು ಎನಿಸುವ ನಾದ ಮಾಧುರ್ಯ. ನಶ್ವರ ಬದುಕಿನ ಸತ್ಯವನ್ನು ಕೆಲವೇ ಸಾಲುಗಳಲ್ಲಿ ತೆರೆದಿಟ್ಟ ಈ ಹಾಡಿನ ಪ್ರತಿ ಶಬ್ದವೂ ಅರ್ಥಗರ್ಭಿತ.

ಇದೊಂದೇ ಅಲ್ಲ. ವಿಷ್ಣು ಮತ್ತು ಈಶ್ವರನನ್ನು ದ್ವಿಪ್ರಾಸದಲ್ಲಿ ಸ್ತುತಿಸುವ–

ವನಮಾಲೀ ವೈಕುಂಠಪತೆ..
ಘನಶೂಲಿ ಕೈಲಾಸಪತೆ..
ಚಂದನ ಲೇಪಿತ ಕೌಸ್ತುಭ ಧಾರಿ..
ಭಸ್ಮ ವಿಭೂಷಿತ ಯೋಗ ವಿಹಾರಿ..

ಎಂಬ ಹಾಡು ಇರಬಹುದು ಇಲ್ಲವೇ..

ನುಡಿಮನ ಶಿವಗುಣ ಸಂಕೀರ್ತನಾ..
ನಿಜಪದ ಪಾವನ ಹಾದಿ ಹಾಡುವೆನಾ.

ಯಾರೇ ನೀ ಚೆಲುವೆ..
ನಿನ್ನಂದ ಚಂದ ಮಕರಂದ..

ಎಂಬಂಥ ಮಧುರ ಗೀತೆಗಳೆಲ್ಲ ಕನ್ನಡ ಚಿತ್ರಗಳಲ್ಲಿವೆ. ಇವರ ಸಾಹಿತ್ಯ ರಚನೆಕಾರ ಬೇರಾರೂ ಅಲ್ಲ. ಇತ್ತೀಚೆಗೆ ನಮ್ಮನ್ನಗಲಿದ ಸಕಲೇಶಪುರ ಖಾನ್ ಕರೀಂಖಾನ್ (ಎಸ್.ಕೆ. ಕರೀಂಖಾನ್). ಕೋಮು ಸೌಹಾರ್ದ-ಭಾವೈಕ್ಯಕ್ಕೊಂದು ಆದರ್ಶ ಉದಾಹರಣೆ.

ಎಲ್ಲವನ್ನೂ ಸಂಕುಚಿತ ದೃಷ್ಟಿಯಿಂದ. ಜಾತಿ - ಧರ್ಮದ ಕನ್ನಡಕದಿಂದಲೇ ನೋಡುವ ಇಂದಿನ ದಿನಗಳಿಗೆ ಹೋಲಿಸಿದರೆ ಭಿನ್ನವಾಗಿ ನಿಲ್ಲುವ ಕರೀಂ ಖಾನ್ ಸಾಹೇಬರು ಈ ನಾಡಿನ ಕಲೆ. ಸಂಸ್ಕೃತಿ. ಧರ್ಮ ಸಹಿಷ್ಣುತೆಯನ್ನು ಮೈಗೂಡಿಸಿಕೊಂಡ ಮೇರು ವ್ಯಕ್ತಿ. ಎಲೆಮರೆಯ ಕಾಯಿಯಂಥ ಬದುಕು.

ತಂದೆ ಅಫ್ಘಾನಿಸ್ತಾನದ ಕಾಬೂಲ್‌ನ ಅಬ್ದುರ್ ರಹಮಾನ್. ತಾಯಿ ಸೌದಿ ಅರೇಬಿಯದ ಜೈನಾಬಿ. ಇವರ ಮಗನಾಗಿ ಕರೀಂಖಾನ್ ಜನಿಸಿದ್ದು. ಬೆಳೆದದ್ದು ಹೇಮಾವತಿ ತೀರದ ಸಕಲೇಶಪುರದಲ್ಲಿ.

ಓದಿದ್ದು ಬರಿ 8ನೇ ತರಗತಿಯಾದರೂ ಕನ್ನಡ ಮತ್ತು ಸಂಸ್ಕೃತದಲ್ಲಿ ಅವರದು ಪ್ರಕಾಂಡ ಪಾಂಡಿತ್ಯ. ಅಜಂಗಿ ನಾರಾಯಣಶಾಸ್ತ್ರಿಗಳ ಗರಡಿಯಲ್ಲಿ ಸಂಸ್ಕೃತ ಜ್ಞಾನ ಸಂಪಾದಿಸಿದ ಕರೀಂಖಾನ್ ಮೇಲೆ ರಾಮಾಯಣದ ಪ್ರಭಾವ ಅಪಾರ. ಅವರು ಸಿನಿಮಾಕ್ಕೆ ಬರೆದ ಗೀತೆಗಳಲ್ಲಿ ಇದನ್ನು ಗುರುತಿಸಬಹುದು. ಅವರು ಬರೆದ ಚಿತ್ರಗೀತೆಗಳ ಸಂಖ್ಯೆ ಎಷ್ಟು ಎನ್ನುವುದು ಸ್ವತಃ ಅವರಿಗೇ ಗೊತ್ತಿರಲಿಲ್ಲ. ಚಿತ್ರರಂಗವನ್ನು ಹತ್ತಿರದಿಂದ ಬಲ್ಲವರ ಮಾತು ನಂಬುವುದಾದರೆ ಈ ಸಂಖ್ಯೆ ಸುಮಾರು 40 ರಿಂದ 200ರವರೆಗೆ ಇರಬಹುದು. ಯಾಕೆಂದರೆ ಒಬ್ಬೊಬ್ಬರದು ಒಂದೊಂದು ಲೆಕ್ಕ.



ಬಡತನದಲ್ಲಿದ್ದ. ಭೋಳೆ ಸ್ವಭಾವದ ಖಾನ್ ಸಾಹೇಬರಿಗೆ ಎಷ್ಟೋ 'ಚಾಲಾಕಿಗಳು' ಬರಿ ಒಂದು ಹೊತ್ತು ಊಟ ಕೊಟ್ಟು ಹಾಡು ಬರೆಸಿ ತಮ್ಮ ಹೆಸರು ಹಾಕಿಕೊಂಡು ಜನಪ್ರಿಯತೆ ಸಂಪಾದಿಸಿದರು ಎನ್ನುವ ಮಾತು ಕನ್ನಡ ಚಿತ್ರರಂಗದಲ್ಲಿ ಇವತ್ತೂ ಕೇಳಿ ಬರುತ್ತಲೇ ಇದೆ.

ಅದೇ ರೀತಿ ಕರೀಂಖಾನ್‌ರಿಂದ ಪ್ರೇರಿತರಾದ ಅನೇಕ ಗೀತ ರಚನೆಕಾರರಿದ್ದಾರೆ. ಅವರ ಗೀತೆ. ಶಬ್ದ. ಶೈಲಿಯಲ್ಲಿಯೇ ಅದನ್ನು ಸುಲಭವಾಗಿ ಗುರುತಿಸಬಹುದು.

1960ರ ಸುಮಾರಿನಲ್ಲಿ ಕರೀಂಖಾನ್ ಚಿತ್ರವೊಂದಕ್ಕೆ ಗೀತೆ ರಚಿಸಿದ್ದರಾದರೂ ಅದು ಹೊರ ಬರಲೇ ಇಲ್ಲ. ಆದರೆ ಅವರಿಗೆ ಭಾರಿ ಖ್ಯಾತಿ ತಂದುಕೊಟ್ಟಿದ್ದು ವೈ.ಆರ್. ಸ್ವಾಮಿ ನಿರ್ದೇಶನ. ಡಾ. ರಾಜ್ ಅಭಿನಯದ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರ ಸ್ವರ್ಣಗೌರಿ(1962)ಯ 'ನಟವರ ಗಂಗಾಧರಾ' ಹಾಡು. ಅಲ್ಲಿಯವರೆಗೂ ಶಾಸ್ತ್ರೀಯ ಸಂಗೀತದಲ್ಲಿ ಮಾತ್ರ ಹೆಸರು ಮಾಡಿದ್ದ ಬಾಲಮುರಳೀ ಕೃಷ್ಣ ಈ ಹಾಡಿನಿಂದ ಸಿನಿಮಾ ಗಾಯನ ಲೋಕಕ್ಕೂ ಕಾಲಿಡುವಂತೆ ಆಯಿತು.

'ಜೀವನ ತರಂಗ'. 'ದೊಂಬರ ಕೃಷ್ಣ'. 'ಸೂಪರ್ ನೋವಾ' ಮುಂತಾದ ಚಿತ್ರಗಳಿಗೂ ಕರೀಂಖಾನ್ ಹಾಡುಗಳನ್ನು ಬರೆದು ಕೊಟ್ಟಿದ್ದಾರೆ. ಆದರೂ ಸಿನಿಮಾ ಲೋಕಕ್ಕಿಂತ ಜನಪದ ಕ್ಷೇತ್ರದಲ್ಲಿ ಅವರು ಎದ್ದು ಕಾಣುವಂತ ಸೇವೆ. ಸಾಧನೆ ಮಾಡಿದ್ದಾರೆ. ಹೀಗಾಗಿಯೇ ಅವರಿಗೆ ಜಾನಪದ ಜಂಗಮ. ಜಾನಪದ ಗಾರುಡಿಗ ಎಂದೇ ಹೆಸರು.

ಆರಂಭದ ದಿನಗಳಲ್ಲಿ ಅವರು ಜೀವನೋಪಾಯಕ್ಕೆ ಸುಮಾರು 80 ಕಂಪನಿ ನಾಟಕಗಳನ್ನೂ ಬರೆದಿದ್ದರು. ಸುಬ್ಬಯ್ಯ ನಾಯ್ಡು ಕಂಪನಿಯವರು ಆಡಿದ್ದ ಅವರ ನಾಟಕ ನಿರ್ದೋಷಿಯಲ್ಲಿ ವರನಟ ಡಿ. ರಾಜ್ ಕುಮಾರ್ ಅಭಿನಯಿಸಿದ್ದರು.

ಇದರ ಹೊರತಾಗಿ ಎಷ್ಟೋ ಚಿತ್ರಗಳಿಗೆ ಚಿತ್ರಕತೆ. ಸಂಭಾಷಣೆ ಬರೆದುಕೊಟ್ಟಿದ್ದಾರೆ. ಇಷ್ಟೆಲ್ಲ ಚಿತ್ರ ಸರಸ್ವತಿಯ ಸೇವೆ ಮಾಡಿದರೂ ಸದಾ ಚಿತ್ರರಂಗದ ಪಾಲಿಗೆ ಹೊರಗಿನವರಾಗಿಯೇ ಉಳಿದರು. ಸಿನಿಮಾ ರಂಗದಲ್ಲಿ ಅವರ ದುಡಿತಕ್ಕಾಗಿ ಅವರಿಗೆ ಸಿಕ್ಕ ದೊಡ್ಡ ಮನ್ನಣೆ ಎಂದರೆ ರಾಜ್ಯ ಸರ್ಕಾರದಿಂದ 2004ರಲ್ಲಿ ಜೀವಮಾನ ಸಾಧನೆ ಪ್ರಶಸ್ತಿ.

ಶತಮಾನಗಳ ಹಿಂದೆ ಶಿಶುನಾಳ ಶರೀಫರು ಕೂಡ ಅಧ್ಯಾತ್ಮಕ್ಕೆ ಮನಸೋತು ತತ್ತ್ವಪದಗಳನ್ನು ರಚಿಸಿದರು. ಕರೀಂಖಾನ್ ಸಾಹೇಬರು ತುಳಿದದ್ದು ಸದಾ ಅದೇ ಹಾದಿ.

[illegible]
[illegible]

1975-76



ಶ್ರೀರಾಮಕೃಷ್ಣ ವಿದ್ಯಾಲಯ - ಶಕ್ತಿ ನಗರ - ಬನಶಂಕರಿ ೨ನೇ ಹಂತ, ಬೆಂಗಳೂರು - 560070 ಇಲ್ಲಿ
[illegible] ಶ್ರೀ [illegible] [illegible] ಶ್ರೀ [illegible] [illegible] - [illegible] [illegible] [illegible]
[illegible] [illegible], ಶ್ರೀ [illegible], [illegible] ಅಯ್ಯರ್ [illegible] [illegible]

ಕೆಳಗಿನ ಚಿತ್ರ - ಶ್ರೀರಾಮಕೃಷ್ಣ ವಿದ್ಯಾಲಯದ [illegible] ಶ್ರೀ [illegible] [illegible]
ಕಾರ್ಯಕರ್ತರ [illegible] ಜೊತೆಗೆ ಶ್ರೀ [illegible]


STEREO
ಸರಗಮ
SARAGAMA
ಶ್ರೀಮತಿ. ಕಸ್ತೂರಿಶಂಕರ್
ಕು॥ನಳಿನಿ
ಬೆಳ್ಳಿರಥ
ಭಕ್ತಿ ಗೀತೆಗಳು
ಶ್ರೀ.ಎಸ್.ಕೆ. ಕರೀಂಖಾನ್
ಶ್ರೀ. ಪರಮೇಶ್ವರ ಹೆಗಡೆ
ಶ್ರೀ.ಇಸ್ಮಾಯಿಲ್ ಗೋನಾಳ್
ಸಾಹಿತ್ಯ ಶ್ರೀ ಎಸ್.ಕೆ. ಕರೀಂಖಾನ್
ಸಂಗೀತ ಶ್ರೀ ಇಸ್ಮಾಯಿಲ್ ಗೋನಾಳ್
ಸರಗಮ
SARAGAMA
© SARAGAMA ENTERPRISES
℗ SARAGAMA ENTERPRISES
1985
95/4th CROSS,
HANUMANTHA NAGAR
BANGALORE-19
All rights of the producer manufacture & of the record work reserved unauthorised Public Performance broadcasting & copying of this cassette is prohibited.
ಬೆಳ್ಳಿರಥ

ಮಾಗಡಿ
ಕೆಂಪೇಗೌಡ
ಲಾವಣಿ
Chitranjan
LIVE CASSETTES
Magadi Kempegowda
LAVANI
Marketed By
Chitranjan
LIVE CASSETTES
104
STEREO
G. Gangaswamaiah

Side-A	Side-B
1. ಗಜಾನನಂ ಶ್ಲೋಕ —ಶ್ರೀಮತಿ ಕಸ್ತೂರಿ ಶಂಕರ್	1. ಬೆಳ್ಳಿರಥ —ಶ್ರೀಮತಿ ಕಸ್ತೂರಿ ಶಂಕರ್
2. ಬೆಂಗಳೂರಿನ ಬಸವನಗುಡಿಯ —ಶ್ರೀಮತಿ ಕಸ್ತೂರಿ ಶಂಕರ್	2. ಹಿರಿಯರ ವಚನ —ಕುಮಾರಿ ನಳಿನಿ
3. ತಾಯಿ ಶ್ರೀ ಮುಕಾಂಬಿಕೆ —ಶ್ರೀಮತಿ ಕಸ್ತೂರಿ ಶಂಕರ್, ಸಂಗಡಿಗರು	3. ಸ್ವಾಮಿ ಬಾಹುಬಲಿ — ಶ್ರೀಮತಿ ಕಸ್ತೂರಿ ಶಂಕರ್
4. ಬಿಡು ಬಿಡು ನಿನ್ನ ರಾಮ ಸಂಕೀರ್ತನ —ಶ್ರೀ ಪರಮೇಶ್ವರ ಹೆಗಡೆ	4. ಕಂಡೆನು ಗೋವಿಂದ ಪಾದ —ಶ್ರೀ ಪರಮೇಶ್ವರ ಹೆಗಡೆ
5. ವಾದ್ಯ ಸಂಗೀತ	

ಸಾಹಿತ್ಯ—ಶ್ರೀ ಎಸ್. ಕೆ. ಕರೀಂಖಾನ್

ಸಂಗೀತ ಮತ್ತು ರಾಗ ಸಂಯೋಜನೆ—ಶ್ರೀ ಇಸ್ಮಾಯಿಲ್ ಗೋನಾಳ್

ಸಂಗೀತ ನಿರ್ವಹಣೆ—ಶ್ರೀ ಸುಂದರ ಮೂರ್ತಿ

ಧ್ವನಿಮುದ್ರಣ ಹಾಗೂ ಸಂಕಲನ—ಶ್ರೀ ಅರವಿಂದ ಕಿಗ್ಗಾಲ್

ಸಾಹಿತ್ಯ :
ಎಸ್.ಕೆ.ಕರೀಂಖಾನ್

Chitranjan
LIVE CASSETTES



ಸಂಗೀತ :
ಆರ್. ದಾಮೋದರ್

ಹಾಡಿದವರು :

1. ಜಯಪಾಲ್
2. ಇಂದೂ ವಿಶ್ವನಾಥ್
3. ಉಷಾ ಗಣೇಶ್
4. ಮಲ್ಲೇಶ್
5. ಜಯೊ ಸೆಬ್ಯಾಸ್ಟಿಯನ್
6. ಆರ್. ವಿನೂತ
7. ಉಮಾ ಶಂಕರನಾರಾಯಣ

ಕಾರ್ಯದರ್ಶಿ :
ಜಿ. ಗಂಗಸ್ವಾಮಯ್ಯ

ಚಿತ್ರರಂಜನ್
ಲೈವ್ ಕ್ಯಾಸೆಟ್ಸ್

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ
ಪ್ರಚಾರ ಸಮಿತಿ
- ಸಂಖ್ಯೆ 61, ಕಬ್ಬನ್ ಪೇಟೆ ಮುಖ್ಯ ರಸ್ತೆ
27ನೇ ಅಡ್ಡ ರಸ್ತೆ, ಬೆಂಗಳೂರು-೫೬೦ ೦೦೨

ಆಲದಮರ
ಚಿತ್ರದ ಧ್ವನಿ
ಮುದ್ರಣ
ಶ್ರೀ[illegible]
ಸ್ಟುಡಿಯೋ ಬೆಂಗಳೂರು
ಕಾಲ
1975-76

ಡಾ|| ಎಸ್.ಕೆ.
ಕರೀಂಖಾನ್ ರೊಂದಿಗೆ
ಕಾಲ
ಆಲದಮರ ಚಿತ್ರದ
ಹಾಡುಗಳ ರೆಕಾರ್ಡಿಂಗ್
ಸಂದರ್ಭದಲ್ಲಿ
1975-76



ಡಾ|| ನಟರಾಜ-ರಾಮಕೃಷ್ಣ
ಇವರ ಯೋಜನೆಯ ಮೇರೆ ರೆಕಾರ್ಡಿಂಗ್
ಸ್ವರಮಾಲಿಕೆ [illegible]
ಕು|| ಶಂಕರಿ, ಅನುರಾಧ
ಕೆ. ಶಂಕರ್ ಮೊದಲಾದವರೊಡನೆ
ಕಾಲ (ಶ್ರೀ.ಟಿ.ರಾಮಕೃಷ್ಣ)
1979